ARS. 15. APP. 90

సంవ్స్రము 1896, 1897, 1898
బళాళ బుద్ధిరాయల్లుడ కారణ
హా ష్టై లిఖిత్రలకంటలు సాధ్యవాగల్ల

ಸ್ಥಾಪನೆ : ೧೮೭೫ 1877 ಸಂಸ್ಥಾಪಕರು

ಜೀವನ ಶಿಕ್ಷಣ ಪತ್ರಿಕೆಯ
ಶತಮಾನೋತ್ತರ ಬೆಳ್ಳಿ ಹಬ್ಬದ
ಪುಸ್ತಕ ಪ್ರದರ್ಶನ ೧೯೮೯



ಶತಮಾನೋತ್ತರ ಬೆಳ್ಳಿ ಹಬ್ಬ
(ಏಪ್ರಿಲ್ ೧೯೮೭-೮೮)
ವರ್ಗ / ೮೭೭

ಡೆ. ಚೆನ್ನಬಸಪ್ಪನವರ
(೧೮೩೩-೧೮೮೧)
ನೆನಪು ಸಂಪುಟ

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ
ಡೆಪ್ಯೂಟಿ ಚೆನ್ನಬಸಪ್ಪ ವೃತ್ತ, ರಾಯಪ್ಪರಸ್ತೆ, ಧಾರವಾಡ

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು

೧. ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು
ಡಿಶಂಬರ ತಿಂಗಳ ೨ ನೇ ತಾ|| ಗುರುವಾರ ೧೧ಕ್ಕೆ ಘಂಟೆಗೆ ಸರಿಯಾಗಿ
ಭವಾಗುವದು. ಎಲ್ಲ ಉಮೇದವಾರರು ಆ ದಿವಸ ಟ್ರೇನಿಂಗ ಕಾಲೇಜದಲ್ಲಿ
ಕ್ಷೆಗೆ ಹಾಜರ ಆಗಬೇಕು. ಉಮೇದವಾರರ ಹೆಸರು ಹಚ್ಚಿಕೊಳ್ಳುವ ಕೆ
ದಶಂಬರ ೧ ನೇ ತಾರೀಖು ಬುಧವಾರ ೧೧ಕ್ಕೆ ಘಂಟೆಗೆ ಪ್ರಾರಂಭವಾಗುವ
ಸಮಯಕ್ಕೆ ಉಮೇದವಾರರು ಕೆಳಗೆ ಕಾಣಿಸಿದ ಮೂರು ಕಾಗದಗಳನ್ನು
ಹಚ್ಚಿಕೊಳ್ಳುವವರ ಕಡೆಗೆ ಕೊಡಲಿಕ್ಕೆ ಬೇಕು:—

(೧) ಮುಲ್ಕೀ ಅಥವಾ ವ್ಹರ್ನ್ಯಾಕ್ಯುಲರ ಫಾಯನಲ್ ಪರೀಕ್ಷೆಯ
ಫಿಕೀಟು.

(೨) ಒಳ್ಳೇ ನಡತೆಯ ಬಗ್ಗೆ ಮತ್ತು ತಾವು ಯಾವ ಜಿಲ್ಹೆಗೆ ಹೆಸ
ಚ್ಚಿಸತಕ್ಕವರೋ ಆ ಜಿಲ್ಹೆಯಲ್ಲಿ ಕಾಯಂ ಇರುವವರೆಂಬ ಬಗ್ಗೆ
ನೋಟೀಸಿನ ಕೊನೆಯಲ್ಲಿ ಕೊಟ್ಟ ನಮೂನೆಯಂತೆ) ತಾವು
ಶಾಲೆಯ ಹೆಡ್ಡಮಾಸ್ತರರ ಸರ್ಟಿಫಿಕೀಟು.

(೩) ಜಾಮೀನಪತ್ರ— ಈ ನೋಟೀಸಿನ ಕಡೆಗೆ ಕೊಟ್ಟ ನಮೂನೆ
ಸಾದಾ ಕಾಗಗದ ಮೇಲೆ ಬರಿಸಿ ಜಾಮೀನದಾರರ ಸಹಿ
ಅದರ ಕಡೆಯಲ್ಲಿ ಕೊಟ್ಟಿರುವ ಗ್ರಾಮಸ್ಥರ ದಾಖಲೆ ಸಹಿತ
ಮಾಡಿದ್ದು.

ಮೇಲ್ಕಾಣಿಸಿದ ಮೂರು ದಾಖಲೆಗಳನ್ನು ಹಾಜರ ಮಾಡದ
ಹೊರ್ತು ಹೆಸರು ಹಚ್ಚಿಕೊಳ್ಳಲಿಕ್ಕಿಲ್ಲ.

೨. ಈ ಪರೀಕ್ಷೆಯು ವ್ಹರ್ನ್ಯಾಕ್ಯೂಲರ ಫಾಯನಲ್, ಅಂದರೆ ದೇ
ಯ ೭ ನೇ ಇಯತ್ತೆಯ (ಡ್ರಾಯಿಂಗ ಸಹಿತ) ಎಲ್ಲ ವಿಷಯಗಳಲ್ಲಿ ಆಗ
ಕೆಟ್ಟ ಅಕ್ಷರ, ಅಶುದ್ಧ ಬರಹ, ವಿರಾಮ ಚಿಹ್ನಗಳ ಉಪಯೋ
ಸರಿಯಾಗಿ ಮಾಡದೆ ಇರೋಣ, ಅಚ್ಚುಕಟ್ಟುತನವಿಲ್ಲದೆ ಇರೋಣ ಈ ಕುಂ
ಕಂಡು ಬರುವ ಉಮೇದವಾರರನ್ನು ಕಾಲೇಜದಲ್ಲಿ ತೆಗೆದುಕೊಳ್ಳಲಿಕ್ಕಿಲ್ಲ.

೩. ಉಮೇದವಾರರು ದಿಶಂಬರ ೧ ನೇ ತಾರೀಖಿಗೆ ೧೭ ವರ್ಷ
ರ್ಣ ಆದವರೂ ೨೨ ವರ್ಷ ಮಿಕ್ಕದವರೂ ಇರಲಿಕ್ಕೆ ಬೇಕು.

ವಿಶೇಷ ಸೂಚನೆ:— ಧಾರವಾಡ ಊರಲ್ಲಿ ಅಥವಾ ಕಾಲೇಜದಲ್ಲಿ
ಬೇನೆಯ ಸಂಸರ್ಗದ ಲಕ್ಷಣಗಳು ತೋರಲಾಗಿ ಕಾಲೇಜದ ವಿದ್ಯಾರ್ಥಿಗಳ
ಗದ ವ್ಹಲಿಯನ್ನು ಚುಚ್ಚಿಸಿಕೊಳ್ಳಬೇಕೆಂದು ಕಾಲೇಜದ ದಾಕ್ತರರಾದ

[illegible]

KANARESE
SCHOOL PAPER.

ಪುಸ್ತಕ ೩೩। ಜಾನ್ಯುವರಿ ೧೮೯೮. [ಸಂಖ್ಯೆ ೧.

ಅನುಕ್ರಮಣಿಕೆ.

ಪುಟ
೧. ವಿದ್ಯಾಖಾತೆಗೆ ಸಂಬಂಧಪಟ್ಟ ವೃತ್ತಾಂತಗಳು ... ೧
೨. ಅಲಂಕಾರಗಳು ೮
೩. ಶಿಕ್ಷಾಕ್ರಮವು ೧೧
೪. ಕನ್ನಡ ಗೆಝೇಟಿಯರಿನಿಂದ ಅವತರಣಗಳು ... ೧೯
೫. ನೋಟೀಸುಗಳು ೨೨

CONTENTS.

1. Educational Intelligence and Useful Notes...
2. Alankaras 8
3. [illegible] 11
4. Selections from the Karnatic Gazetteer. ... 19
5. Departmental Notices 22

DHARWAR:

PRINTED AT THE KARNATIC BOOK DEPOT PRESS,

1898.

ಬೆಲ] ಶಾಲಾನಿಬಂಧಮಾಲೆ ಸ್ತಿ [೧೨ ಆಣೆ.

ಮೈಸೂರ ವಿದ್ಯಾಖಾತೆಯ ಒಪ್ಪಿಗೆಯನ್ನು ಪಡೆದ ೨೪೬ ಪುಟಗ ಳ್ಳ ಈ ಪುಸ್ತಕದಲ್ಲಿ ಎಪ್ಪತ್ತು ವಿಷಯಗಳ ಪೂರ್ಣವಿವೇಚನವೂ, ನೇಕ ವಿಷಯಗಳ ಮುದ್ದೆಗಳೂ ಬಹು ಸರಸಾಗಿ ವಿವರಿಸಿವೆ. ಷ್ಟೋ ಪ್ರತಿಗಳು ಮಾರಾಟಾಗಿ ಸ್ವಲ್ಪಮಾತ್ರ ಉಳದವೆ. ಈ ಸಂಧಿ ಯನ್ನು ಹೋಗಲಾಡಿಸುವವರು ಅಭಾಗ್ಯರೆಂದರೂ ಸರಿಯೇ. ಹೆಚ್ಚಿ ಕೊಚ್ಚಿಕೊಳ್ಳುವದು ಹುಚ್ಚುತನವೇ.

ನಮ್ಮಲ್ಲಿ ಶಿಗುವ ಪುಸ್ತಕಪಟ್ಟಿಯನ್ನು ಬೇಡಿದರೆ ಕಳುಹುವೆವು.

ಶ್ರೀನಿವಾಸ ವಾಸುದೇವ ಹುಯಿಲಗೋಳ, ಬೆಳಗಾವ.

ನ್ನಡ ಶಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ **೧೫ ಆ.**
ಂದು ಸಂಚಿಕೆಗೆ ... ... ೨ ಆ.

ಪ್ರಕಟನೆಗಳನ್ನು ಛಾಪಿಸುವ ದರಗಳು.

ಮ್ಮೆ ಇಟ್ಟರೆ	೬ ಪಂಕ್ತಿಗಳವರೆಗೆ	೧ ರೂ.
ಮೂರುಸಾರೆ ಇಟ್ಟರೆ	೯ ,,	೧ ರೂ.
ರುಸಾರೆ ಇಟ್ಟರೆ	೧೨ ,,	[illegible] ರೂ.

ಸೂಚನೆಗಳು.

ಶಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.

ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರ್ಣ ಪಂಕ್ತಿಯ ಹಾಸಲು ಬೀಳುವದು.

ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇಮ್ಮಡಿ ಫೀ ಬೀಳುವದು.

ಪ್ರಕಟನೆಯ ಕೂಡ ಹಣ ಕಳುಹಲಿಕ್ಕೆ ಬೇಕು.

ಟಿಕೀಟು ಇಟ್ಟ ಹೊರ್ತು ಉತ್ತರ ಶಿಗಲಾರದು.

Raoji B Karandikar
ಮ್ಯಾನೇಜರ ಕ. ಶಾಲಾಪತ್ರಕ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ॥
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತುಪ್ರಬೋಧಮಾರ್ಗಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೇಶದಶಿಷ್ಟರೆಲ್ಲಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೩೩.] ಜಾನ್ಯುಅರಿ ೧೮೯೯. [ಸಂಚಿಕೆ ೧.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮದ್ರಾಸ ಇಲಾಖೆಯ ಗವ್ಹರ್ನರರಾದ ನಾಮದಾರ ಹ್ಯಾವಲಾಕ್ ದೊರೆಗಳು ನಂದ್ಯಾಲಕ್ಕೆ ಹೋದ ಕಾಲಕ್ಕೆ ಅಲ್ಲಿಯ ಜನರು ಅವರಿಗೆ ಒಂದು ಮಾನಪತ್ರವನ್ನು ಅರ್ಪಿಸಿದರು. ನಾಮದಾರರವರು ಆ ಮಾನಪತ್ರಕ್ಕೆ ಉತ್ತರ ಕೊಡುವಾಗ್ಗೆ ಔದ್ಯೋಗಿಕ ಶಿಕ್ಷಣದ ಬಗ್ಗೆ ಮಾಡಿದ ಭಾಷಣವು ಮಹತ್ವದ್ದಿರುವದರಿಂದ ಅದನ್ನು ಕೆಳಗೆ ಕೊಡುವೆವು:—

"ಸದ್ಯಕ್ಕೆ ಸರಕಾರದವರು ಔದ್ಯೋಗಿಕ ಶಿಕ್ಷಣದ ಬಗ್ಗೆ ವಿಚಾರ ನಡಿಸಿರುವರು. ಈ ಔದ್ಯೋಗಿಕ ಶಿಕ್ಷಣವನ್ನು ಈಗಿನ ಶಿಕ್ಷಣಪದ್ಧತಿಯಲ್ಲಿ ಪ್ರಾರಂಭದಿಂದ ಎಲ್ಲ ಕಡೆಯಲ್ಲಿಯೂ ಶೇರಿಸಬೇಕೆಂದು ನಮ್ಮ ವಿಚಾರ ಉಂಟು. ಔದ್ಯೋಗಿಕ ಶಿಕ್ಷಣವು ಪ್ರಾಥಮಿಕ ಶಿಕ್ಷಣವನ್ನು, ಮಧ್ಯಮ ಮತ್ತು ಉಚ್ಚ ಪ್ರತಿಯ ಶಿಕ್ಷಣಗಳನ್ನು ವ್ಯಾಪಿಸುವದು. ಈ ಶಿಕ್ಷಣದಲ್ಲಿ ವಿದ್ಯಾರ್ಥಿಗಳು ಉತ್ತೀರ್ಣರಾಗುತ್ತ ನಡೆದಂತೆ ಉಚ್ಚಪ್ರತಿಯ ಔದ್ಯೋಗಿಕ ಶಿಕ್ಷಣವನ್ನು ಕೊಡುವ ಬಗ್ಗೆ ಮೇಲ್ತರದ ಔದ್ಯೋಗಿಕ ಶಾಲೆಗಳು ಸ್ಥಾಪಿಸಲ್ಪಡುವವು. ಆದರೆ ಶಿಕ್ಷಣದ ಎಲ್ಲ ಮೆಟ್ಟುಗಳಲ್ಲಿಯೂ ಸಾಧಾರಣ ತರದ ಔದ್ಯೋಗಿಕ ಶಿಕ್ಷಣವನ್ನು ಸಮಾವೇಶಮಾಡಬೇಕೆಂದು ಸರಕಾರದವರ ಉದ್ದೇಶವಿರುವದು."

ಕಳೆದ ಜೂನ ತಿಂಗಳ ೩ ನೇ ತಾರೀಖಿಗೆ ಮದ್ರಾಸ ಗವ
ರ್ನರರ ಕೌನ್ಸಿಲ್‌ದ ಸಭಿಕರಾದ ನಾಮದಾರ ವಿ. ಜೇಮ್
ಗ್ರೌಸ ಎಂಬವರು ಉದಕಮಂಡಲದಲ್ಲಿ ಮರಣ ಹೊಂದಿ
ದರು. ಇವರು ಲೋಕಪ್ರಿಯರೂ ಚತುರರೂ ಆದ್ದರಿಂ
ಇವರ ಸ್ಮಾರಕವನ್ನು ಮಾಡುವ ಎತ್ತುಗಡೆಯನ್ನು ಅವ
ಸ್ನೇಹಿತರಾದ ಕಲೇಕ್ಟರರೂ ಅಸಿಸ್ಟಂಟ ಕಲೇಕ್ಟರರೂ
ಮಾಡಿದರು. ಈ ಕೆಲಸಕ್ಕಾಗಿ ಕೂಡಿಸಿದ ಫಂಡು ೬೬
ರೂಪಾಯಿ ಆದ ಬಳಿಕ ಫಂಡಿನ ವ್ಯವಸ್ಥಾಪಕರು ಆ ಫಂ
ನ್ನು ಸರಕಾರದವರು ತಮ್ಮ ಸ್ವಾಧೀನಕ್ಕೆ ತಕ್ಕೊಂಡ
ಅದರ ಅರ್ಧದಷ್ಟು ಹಣವನ್ನು ಸರಕಾರದಿಂದ ಸೇರಿಸಿ
ಬಿಟ್ಟು ಫಂಡಿನ ಷಿ ಬಡ್ಡಿಯಿಂದ ಪ್ರತಿವರ್ಷ ಮದ್ರಾಸ ಮೆ
ಕಲ್ ಕಾಲೇಜದ ೧ನೇ ವರ್ಷದ ವರ್ಗದಲ್ಲಿ ಉತ್ಕೃಷ್ಟ ರೀ
ತಿಯಿಂದ ಉತ್ತೀರ್ಣನಾದ ವಿದ್ಯಾರ್ಥಿನಿಗೆ "ಗ್ರೌಸ ಮೆಮೋ
ರಿಯಲ್ ಪ್ರಾಯಿಝು" ಎಂಬದೊಂದು ಇನಾಮನ್ನು ಕೊ
ಬೇಕೆಂದು ಬಿನ್ನವಿಸಿದರು. ಸರಕಾರದವರು ಆ ಮಾತಿ
ಒಪ್ಪಿಕೊಂಡು ಅವರ ವಿಜ್ಞಾಪನೆಯಂತೆ ಅರ್ಧದಷ್ಟು ಹಣ
ಕೊಡುವದನ್ನು ಮಂಜೂರು ಮಾಡಿ ಪ್ರತಿ ವರ್ಷ ಮೆ. ಡೈರ
ಕ್ಟರ ಮತ್ತು ಮೆಡಿಕಲ್ ಕಾಲೇಜದ ಪ್ರಿನ್ಸಿಪಾಲರ ಮುಖಾಂ
ತರವಾಗಿ ಪ್ರಾಯಿಝು ಕೊಡಲ್ಪಡುವದೆಂದು ಗೊತ್ತು ಮಾಡಿ
ರುತ್ತಾರೆ.

ಸಾರ್ವಜನಿಕ ಕೆಲಸಕ್ಕೆ ವಿನಿಯೋಗಿಸಲ್ಪಡುವ ಫಂಡಿ
ಸರಕಾರದಿಂದ ಸಹಾಯ ಸಿಗುತ್ತದೆಂಬ ಸಂಗತಿಯನ್ನು ತಿ
ಸಲಿಕ್ಕೆ ನಾವು ಆನಂದ ಪಡುತ್ತೇವೆ.

* * *

ಲಂಡನ ಶಹರದ ಮುಖ್ಯ ಬಿಷಪ್ ಅಂದರೆ ಧರ್ಮಾಧ್ಯಕ್ಷ
ರು ರೆ. ಕ್ರೀಟನರೆಂಬ ಗೃಹಸ್ಥರಿರುವರು. ಇವರು ವೃದ್ಧ
ರೂ ಅನುಭವಿಕರೂ ಇದ್ದಾರೆ. ಇವರು ಶಿಕ್ಷಣಸಂಬಂಧದ
ಸಂಗತಿಗಳನ್ನು ಕುರಿತು ಚೆನ್ನಾಗಿ ವಿಚಾರ ಮಾಡಿರುತ್ತಾರೆ
ಇವರು ಒಮ್ಮೆ ತಮ್ಮ ಉಪನ್ಯಾಸದಲ್ಲಿ ಪ್ರಾಥಮಿಕ ಶಿಕ್ಷಣ
ಸಂಬಂಧದ ಕೆಲವು ಸಂಗತಿಗಳನ್ನು ಹೇಳಿದರು. ಅವರ

ಹೇಳಿದ್ದು ಮಹತ್ವದ್ದೂ ಲಕ್ಷ್ಯದಲ್ಲಿ ಇಡತಕ್ಕಂಥಾದ್ದೂ ಇರುವದರಿಂದ ಅದನ್ನು ನಮ್ಮ ವಾಚಕರಿಗಾಗಿ ಸಂಗ್ರಹಿಸಿರುವೆವು.

“ವಾಚನ ಲೇಖನ ಮತ್ತು ತುಸು ಗಣಿತ ಇಷ್ಟು ವಿಷಯಗಳು ಹೊರತಾಗಿ ಬೇರೆ ಯಾವ ವಿಷಯಗಳನ್ನೂ ಹುಡುಗರಿಗೆ ಕಲಿಸುವದು ಯೋಗ್ಯವಲ್ಲ. ಅವರಿಗೆ ಬೇರೆ ಯಾವ ವಿಷಯಗಳನ್ನು ಕಲಿಸುವ ಅವಶ್ಯಕತೆಯೂ ಇಲ್ಲ. ಉಳಿದ ವಿಷಯಗಳು ಚಿಕ್ಕ ವಿದ್ಯಾರ್ಥಿಗಳಿಗೆ ಚನ್ನಾಗಿ ಕಲಿಸಲ್ಪಡುವದೂ ಇಲ್ಲ, ಅದರಿಂದ ಅವರ ಕೋಮಲವಾದ ಮನಸ್ಸಿನ ಮೇಲೆ ಬರೇ ಭಾರ ಬೀಳುವದಲ್ಲದೆ ಅದರಿಂದ ಅವರಿಗೆ ಏನೂ ಪ್ರಯೋಜನವಾಗುವದಿಲ್ಲ. ಅವರ ಸುತ್ತುಮುತ್ತು ಕಾಣುತ್ತಿರುವ ಪದಾರ್ಥಗಳ ಜ್ಞಾನವನ್ನು ಅವರ ಯೋಗ್ಯತಾನುಸಾರವಾಗಿ ಅವರಿಗೆ ತಿಳಿಯುವಂತೆ ಮಾಡಿಕೊಡುವದು ಲೇಸು. ಬಾಯಪಾಠ ಮಾಡಿಸುವದರಿಂದ ಎಷ್ಟೋ ಕೆಲಸಕ್ಕೆ ಬಾರದ ಪದಾರ್ಥಗಳನ್ನು ಅವರು ನೆನಪಿನಲ್ಲಿಡಬಹುದು. ಆದರೆ ಅವು ಹೊತ್ತಿಗೆ ಕೆಲಸಕ್ಕೆ ಬರಲಾರವು, ವಿದ್ಯಾಭಿರುಚಿಯೂ ಬೆಳೆಯಲಾರದು. ಅವರ ಸುತ್ತಲೂ ವರ್ತಿಸುವ ಸಂಗತಿಗಳನ್ನು ಕುರಿತು ತುಸು ತುಸು ಹೇಳುತ್ತ ಹೋದರೆ ಅದರಿಂದ ಕೆಲಸವೂ ಜ್ಞಾನಾಭಿವೃದ್ಧಿಯೂ ಆಗಬಹುದು. ಅದ್ದರಿಂದ ಇಂಥ ವಿಷಯಗಳ ಜ್ಞಾನವನ್ನು ವಾಚನಪುಸ್ತಕಗಳ ದ್ವಾರದಿಂದಲೂ ಕಥೆಗಳ ದ್ವಾರದಿಂದಲೂ ಮಾಡಿಕೊಡುವದು ವಿಹಿತವು. ಇದರಂತೆ ಅವರನ್ನು ಆಧುನಿಕ ಕ್ರಮದಂತೆ ಈಗಿನ ಪುಸ್ತಕಗಳ ಮುಖಾಂತರವಾಗಿ ಭೂಗೋಲ ಇತಿಹಾಸ ಮುಂತಾದ ವಿಷಯಗಳ ತೊಂದರೆಯಲ್ಲಿ ಹಾಕದೆ ಈ ವಿಷಯಗಳ ಸಂಬಂಧದ ಮಾಹಿತಿಯನ್ನು ಮನರಂಜನವಾಗುವಂತೆ ಕಥೆಗಳ ರೂಪದಿಂದ ಹೇಳಬೇಕು. ಭೂಗೋಲದಲ್ಲಿಯ ಪ್ರಖ್ಯಾತ ಸ್ಥಳಗಳ ವರ್ಣನೆಗಳನ್ನೂ ಐತಿಹಾಸಿಕ ಪುರುಷರ ಚರಿತ್ರಗಳನ್ನೂ ಈ ರೀತಿಯಿಂದ ಅವರಿಗೆ ಹೇಳಲಾಗಿ ಅವು ಅವರ ಧ್ಯಾನದಲ್ಲಿ ಸ್ಥಿರವಾಗಿ ನಿಲ್ಲುವದಲ್ಲದೆ ಅವರ ಮನರಂಜನವಾಗಿ ಅವರು ಅಂಥ ಸಂಗತಿಗಳನ್ನು ಹೆಚ್ಚೆಚ್ಚು ತಿಳಕೊಳ್ಳಲಿಕ್ಕೆ ಹವಣಿಸುವರು. ಪಟ್ಟಣದಲ್ಲಿ ವಾಸಿಸು

ವ ಹುಡುಗರಿಗೆ ಮನೆಗಳ ಸುತ್ತಲಿನ ಕಸಕಡ್ಡಿಗಳನ್ನು ಯಾರು ತೆಗೆಯುವರು? ಓಣಿಗಳಲ್ಲಿ ದೀಪಗಳನ್ನು ಯಾರು ಹಚ್ಚುವರು? ಕಳ್ಳರನ್ನು ಯಾರು ಶಿಕ್ಷಿಸುವರು? ಕರೇ ಡಗಲಿಯ ಜನರು ಯಾರು? ಅವರು ಮಾಡತಕ್ಕ ಕೆಲಸಗಳೇನು? ಮುಂತಾದ ಪ್ರಶ್ನಗಳನ್ನು ಮಾಡಿ ಮ್ಯುನಿಸಿಪಾಲಿಟಿ ಮತ್ತು ಪೋಲೀಸರು ಇವುಗಳ ದ್ವಾರದಿಂದ ಸರಕಾರ ಮತ್ತು ರಾಜ್ಯಪದ್ಧತಿಗಳ ಮಾಹಿತಿಯನ್ನು ಸುಲಭವಾಗಿ ಮಾಡಿಕೊಡಬಹುದು. ಈ ತರದಿಂದ ಕೊಟ್ಟ ಮಾಹಿತಿಯನ್ನು ಹುಡುಗರು ಎಂದೂ ಮರೆಯುವದಿಲ್ಲ ಮತ್ತು ಇಂಥ ಮಾಹಿತಿಯು ಉಪಯುಕ್ತವಾದದ್ದು ಇರುತ್ತದೆ. ಅದೇ ಮೇರೆಗೆ ವಿದ್ಯಾರ್ಥಿಗಳಿಂದ ನದಿ, ಪರ್ವತ, ಸರೋವರ ಶಹರ ಮುಂತಾದವುಗಳ ಹೆಸರುಗಳನ್ನು ರೂ ಹಾಕಿಸಿ ಬಾಯಿಪಾಠ ಮಾಡಿಸುವದಕ್ಕಿಂತಲೂ ನದಿಯೆಂದರೇನು? ಮಳೆಯು ಹ್ಯಾಗೆ ಬೀಳುತ್ತದೆ. ಮೇಘಗರ್ಜನೆಯ ಕಾರಣವೇನು? ಸೂರ್ಯ ಚಂದ್ರಾದಿಗಳು ಏನಿರುವವು? ಸೂರ್ಯನು ರಾತ್ರಿಯಲ್ಲಿ ಎಲ್ಲಿ ಹೋಗುವನು? ಮುಂಜಾವಿನಲ್ಲಿ ಎಲ್ಲಿಂದ ಬರುವನು? ಚಂದ್ರನು ಕೆಲವು ದಿವಸ ಗಿರ್ದ, ಅರ್ಧ, ಪೂರ್ಣದೆಶೆಯಲ್ಲಿ ಇರುವ ಕಾರಣವೇನು? ಮತ್ತು ಅವನು ಕೆಲವು ದಿವಸ ಪೂರ್ವರಾತ್ರಿಯಲ್ಲಿಯೂ ಕೆಲವು ದಿವಸ ಅಪರ ರಾತ್ರಿಯಲ್ಲಿಯೂ ಮೂಡುವ ಕಾರಣವೇನು? ಗಾಳಿಯು ಹ್ಯಾಗೆ ಬೀಸುತ್ತದೆ? ಸಮುದ್ರದ ನೀರಿನ ಏರಿಳಿತಗಳ ಕಾರಣವೇನು? ಮುಂತಾದ ಸಂಗತಿಗಳ ಮಾಹಿತಿಯನ್ನು ಸುಲಭ ಶಬ್ದಗಳಿಂದ ಹುಡುಗರಿಗೆ ತಿಳಿಯುವಂತೆ ಹೇಳಿದರೆ ಅದರಿಂದ ಅವರಿಗೆ ಆನಂದವಾಗಿ ಅವರು ಚಿಕಿತ್ಸಕರೂ, 'ತಿಳುವಳಿಕೆಯುಳ್ಳವರೂ ಆಗುವರು. ಅವರ ಕುತೂಹಲವು ಬೆಳೆದು ಮನಸ್ಸಿನಲ್ಲಿ ಜ್ಞಾನಸಂಪಾದನದ ಅಭಿರುಚಿಯು ನೆಲೆಗೊಳ್ಳುವದು. ಹೀಗಾಗುವದರಿಂದ ಶಾಲೆಗೆ ಹೋಗುವದು ಒಂದು ಆನಂದದ ಕಾರ್ಯವೆಂಬ ಭಾವನೆಯು ಅವರಲ್ಲಿ ತಲೆದೋರುವದು. ಈ ಸಂಗತಿಗಳನ್ನು ಕಲಿಸುವಾಗ ಶಿಕ್ಷಕರು ವಿದ್ಯಾರ್ಥಿಗಳ ಪ್ರಶ್ನೆ ಮಾಡುವ ಆತುರವನ್ನು ಕಾಯ್ದುಕೊಂಡು ಅವನ್ನು [illegible]

ಅವರ ಪ್ರಶ್ನಗಳಿಗೆ ಅವರಿಂದಲೇ ಉತ್ತರ ಹೊರಡುವಂತೆ ಸಹಾಯ ಮಾಡಿ ಉತ್ತರವನ್ನು ಹೊರಡಿಸುತ್ತ ಸಾಗಿದರೆ ಶಿಕ್ಷಕರ ಶ್ರಮದ ಸಾಫಲ್ಯವು ಅಷ್ಟಿಷ್ಟಾದೀತೆಂದು ಹೇಳಕೂಡದು. ಈ ರೀತಿಯಿಂದ ಸಾಗಲಾಗಿ ವಿದ್ಯಾರ್ಥಿಗಳಿಗೆ ಜ್ಞಾನ ಸಂಪಾದನವೂ ಮಾಸ್ತರರಿಗೆ ಕೀರ್ತಿಯೂ ತಪ್ಪವು.''

ಈ ಸಂಗತಿಗಳು ಕೇವಲ ಹೊಸವೆಂಬಂತಿಲ್ಲ. ಎಷ್ಟೋ ಜನ ಅನುಭವಿಕರಾದ ಪ್ರಖ್ಯಾತ ಶಿಕ್ಷಕರ ಅಭಿಪ್ರಾಯವಾದರೂ ಇದೇ ಪ್ರಕಾರ ಉಂಟು. ಆದರೆ ಈ ಪ್ರಕಾರದಿಂದ ಶಿಕ್ಷಣ ಕೊಡುವ ಕೆಲಸವು ಕೇವಲ ಪಗಾರದ ಮೇಲೆ ಲಕ್ಷ್ಯ ಕೊಡುವ ಶಿಕ್ಷಕರಿಂದ ಎಂದೂ ಚೆನ್ನಾಗಿ ಆಗದು. ಮೇಲಾಗಿ ತಾಯಿತಂದೆಗಳ ಸಹಾಯವೂ ಅವಶ್ಯವಾಗಿ ಬೇಕು; ಮತ್ತು ಕೇವಲ ನಿರಪೇಕ್ಷ ಬುದ್ಧಿಯಿಂದ ಲೋಕ ಶಿಕ್ಷಣದ ಕೆಲಸವನ್ನು ಕೈಕೊಳ್ಳಲಿಕ್ಕೆ ಸಿದ್ಧರಾದ ಶಿಕ್ಷಣಾಭಿಲಾಷಿಗಳು ಉತ್ಪನ್ನರಾಗಬೇಕು. ಹೀಗಲ್ಲದೆ ಕೇವಲ ಇಯತ್ತೆ, ನಿಯಮ, ವರಿಷ್ಠಾಧಿಕಾರಿಗಳ ಹುಕುಮಿನಿಂದ ಈ ಕೆಲಸವು ಎಂದೂ ಆಗಲಾರದು.

ಲಂಡನದ ಬಿಷಪ್‌ರು ಹೇಳಿದಂತೆ ಶಿಕ್ಷಣವು ಸಾಗಬೇಕಾದರೆ ತ್ರಿಕರಣಪೂರ್ವಕ ಶಿಕ್ಷಣದ ಕೆಲಸವನ್ನು ವಹಿಸಿದ ಶಿಕ್ಷಕ ಜನರು ಬೇಕು. ಇಂಥವರು ಶಿಗುವದು ಅಸಾಧ್ಯವಲ್ಲದಿದ್ದರೂ ಸುಸಾಧ್ಯವಲ್ಲ. ಶಿಕ್ಷಕರಿಗೆ ಹೊಟ್ಟೆತುಂಬ ಪಗಾರ ಶಿಗುವಂತಿದ್ದರೆ ಪ್ರಾಮಾಣಿಕ ರೀತಿಯಿಂದ ಕೆಲಸ ಮಾಡುವ ಜನರು ಈ ಧೋರಣೆಯನ್ನು ಕೈಕೊಳ್ಳಬಹುದು. ಇತ್ತಲಾಗಿ ಮುನಸಿಪಾಲಿಟಿ, ಲೋಕಲ್‌ಬೋರ್ಡುಗಳ ಲಕ್ಷ್ಯವು ಈ ಮಾತಿನ ಕಡೆಗೆ ಹತ್ತುತ್ತಲಿದೆ. ಆದರೆ ಸದ್ಯಕ್ಕೆ ವಸ್ತುಸ್ಥಿತಿಯು ಅಸಮಾಧಾನಕರವಾಗಿರುತ್ತದೆ. ಹೋದ ವರ್ಷದ ವಾಯುವ್ಯಪ್ರಾಂತದ ಶಾಲಾಖಾತೆಯ ರಿಪೋರ್ಟು ಹೊರಬಿದ್ದದೆ. ಅದರಲ್ಲಿ ಮಾಸ್ತರ ಜನರ ಪಗಾರವು ೨ ರಿಂದ ೫ ರ ವರೆಗೆ ಇರುತ್ತದೆಂದು ಬರೆಯಲ್ಪಟ್ಟದೆ. ಇಂಥ ಜನರು ತಮ್ಮ ಕೆಲಸವನ್ನು ಮಾಡುವದು ಹ್ಯಾಗೆ? ಹೊಟ್ಟೇ ಹೊರ

ಕೊಳ್ಳುವದು ಹ್ಯಾಗೆ? ಇಂಥ ಮಾಸ್ತರರ ಕೈಯಲ್ಲಿರುವ ಶಾಲೆಗಳಲ್ಲಿ ವ್ಯವಸ್ಥೆಯೂ ನೀತಿಯೂ ವಿದ್ಯಾಭಿವೃದ್ಧಿಯೂ ಆಗುವ ಬಗೆಯೇನು? ಆ ಪ್ರಾಂತದ ಡೈರೆಕ್ಟರರು ಈ ಶಾಲೆಗಳಲ್ಲಿಯ ಕೆಲವು ದೋಷಗಳನ್ನು ಸೂಚಿಸುತ್ತಾರೆ. ಅವು ಯಾವವೆಂದರೆ:—

(೧) ವಿದ್ಯಾರ್ಥಿಗಳಿಗೆ ಶಿಕ್ಷಕರು ಕೇಳುವ ಪ್ರಶ್ನಗಳನ್ನೇ ಮಾಡಿದರೆ ತಪ್ಪದೇ ಉತ್ತರ ಕೊಡುತ್ತಾರೆ. ಆದರೆ ಅವುಗಳಲ್ಲಿ ತುಸು ಹೆಚ್ಚು ಕಡಿಮೆ ಮಾಡಿದರೆ ಉತ್ತರವೇ ಹೊರಡುವದಿಲ್ಲ. ಇದರಿಂದ ವಿಷಯಗಳು ಪ್ರಶ್ನೋತ್ತರದ ಪುಸ್ತಕಗಳಿಂದ ಇದ್ದಕ್ಕಿದ್ದ ಹಾಗೆ ಕಲಿಸಲ್ಪಡುತ್ತವೆಂದು ತೋರುವದಲ್ಲದೆ ಶಿಕ್ಷಕರು ಅವನ್ನು ತಿಳಿಸಿಕೊಟ್ಟಂತೆ ತೋರುವದಿಲ್ಲ.

(೨) ಕವಿತೆಗಳ ಭಾವಾರ್ಥವನ್ನು ವಿದ್ಯಾರ್ಥಿಗಳು ಸರಳವಾಗಿ ಹೇಳುತ್ತಾರೆ. ಆದರೆ ನಡುನಡುವೆ ಪ್ರಶ್ನಮಾಡಿದರೆ ಗಾದು ಹೊಗಿಸಿದಂತೆ ಆಗಿ ಸರಿಯಾದ ಉತ್ತರಗಳೇ ಹೊರಡುವದಿಲ್ಲ

(೩) ಇತಿಹಾಸ ಭೂಗೋಲ ಆರೋಗ್ಯವಿದ್ಯಗಳಂತೂ ಹಾಗೂ ಹೀಗೂ ಕಲಿಸಲ್ಪಟ್ಟಂತೆ ತೋರುತ್ತದೆ. ಗೋಸ್ತನ ಕ್ರಿಯೆಯು ಪ್ರಚುರಗೊಂಡು ಎಷ್ಟು ವರ್ಷಗಳಾದವೆಂದು ಕೇಳಲಾಗಿ ಸನ್ ೧೮೩೬ ರಲ್ಲಿ ಛಾಪಿಸಿದ ಅವರ ಪುಸ್ತಕದಲ್ಲಿ ಹೇಳಿದಂತೆ ೮೦ ವರ್ಷವಾಯಿತೆಂದು ಹೇಳುತ್ತಾರೆ ಎಂದು ಪ್ರಚುರವಾಯಿತೆಂದು ಕೇಳಿದರೆ ೧೩೯೮ರಲ್ಲಿ ಎಂದು ಹೇಳುವರು.

ಈ ಮಾದರಿಯ ದೋಷಗಳು ಇಂಥ ಶಾಲೆಗಳಲ್ಲಿ ಕಂಡುಬಂದರೆ ಆಶ್ಚರ್ಯವೇನು. ಈ ದುಸ್ಥಿತಿಗೆ ಕಡಿಮೆ ಪಗಾರದ ಶಿಕ್ಷಕರೇ ಕಾರಣವೆಂದು ತೋರಬಹುದು. ಆದರೆ ಕೇವಲ ಅವರೇ ಅಲ್ಲ. ಟಿಪ್ಪಣಿ ಪುಸ್ತಕಗಳನ್ನು ಬರೆಯುವವರೂ ಸಾಲೆಯಲ್ಲಿ ತಮ್ಮ ಮಕ್ಕಳ ಅಭ್ಯಾಸವನ್ನು ನೋಡದಿರುವ ತಂದೆತಾಯಿಗಳೂ ಪಾಲುಗಾರರಾಗಿರುತ್ತಾರೆ.

ಮೇಲೆ ವಿವರಿಸಿದ ದುಸ್ಥಿತಿಯನ್ನು ದೂರ ಮಾಡುವ ಯತ್ನವನ್ನು ಆ ಪ್ರಾಂತದ ಡೈರೆಕ್ಟರ ಸಾಹೇಬರವರು ಜೋರಿನಿಂದ ನಡಿಸಿರುವರೆಂತಲೂ ಸರಕಾರದವರು ಸಹಾಯ ಮಾಡು

ಹೆವೆಂದು ಅಭಿವಚನ ಕೊಟ್ಟಿರುವರೆಂತಲೂ ತಿಳಿಸಲಿಕ್ಕೆ ನಾವು ಸಂತೋಷಪಡುತ್ತೇವೆ. ಮೇಲಾಗಿ ವಾಯುವ್ಯಪ್ರಾಂತದ ಸರಕಾರದವರು ಪರೀಕ್ಷಾ ವಿಷಯಗಳನ್ನು ಕಡಿಮೆ ಮಾಡಬೇಕೆಂತಲೂ ಪರೀಕ್ಷೆಗಳನ್ನು ಸರಿಯಾಗಿ ತೆಗೆದುಕೊಳ್ಳಬೇಕೆಂತಲೂ ಆ ಪ್ರಾಂತದ ಡೈರೆಕ್ಟರರಿಗೆ ಸೂಚಿಸಿರುತ್ತಾರೆ. ಮೇಲೆ ಕಾಣಿಸಿದ ದೋಷಗಳು ನಮ್ಮ ಇಲಾಖೆಯಲ್ಲಿ ಕಡಿಮೆ; ಇಲ್ಲೆಂದರೂ ಸಲ್ಲುವದು. ಹೊಸದಾಗಿ ಆದ ಶಾಲಾಮಾಸ್ತರರ ಕೋಡಿನಲ್ಲಿ ಶಿಕ್ಷಕಜನರ ಪಗಾರದ ಮೆಟ್ಟುಗಳು ಗೊತ್ತು ಮಾಡಲ್ಪಟ್ಟಿರುತ್ತವೆ. ವಿದ್ಯಾಖಾತೆಗೆ ಅಸಮ್ಮತವಾದ ಟಿಪ್ಪಣಿ ಮುಂತಾದ ಪುಸ್ತಕಗಳನ್ನು ಶಾಲೆಗಳಲ್ಲಿ ಉಪಯೋಗಿಸಕೂಡದೆಂದು ಸರಕ್ಯೂಲರಗಳು ಕೊಡಲ್ಪಟ್ಟಿರುತ್ತವೆ. ಟ್ರೇನಿಂಗ ಕಾಲೇಜದ ವ್ಯವಸ್ಥೆಯು ಸರಿಯಾಗಿ ಮಾಡಲ್ಪಟ್ಟಿದೆ. ಒಟ್ಟಿಗೆ ತಟಸ್ಥರಿಂದಾಗತಕ್ಕ ಕೆಲಸಗಳೆಲ್ಲ ಆಗಿರುತ್ತವೆ. ಶಿಕ್ಷಕರು ತಮ್ಮ ಕೆಲಸವನ್ನು ಒಳಿತಾಗಿ ಮಾಡಿ ದೇಶಸೇವೆಯನ್ನು ಮಾಡಿದ ಗೌರವವನ್ನೂ ಕೀರ್ತಿಯನ್ನೂ ಪಡೆಯಬೇಕೆಂತಲೂ ಶಿಕ್ಷಕ ಜನರೆಲ್ಲರು ಒಟ್ಟಾಗಿ ಒಂದು ಸಭೆಯನ್ನು ಸೇರಿ ಪರಸ್ಪರಾನುಭವವನ್ನು ತಿಳಕೊಳ್ಳಲಿಕ್ಕೂ ಪರಸ್ಪರ ಸಹಾಯವನ್ನು ದೊರಕಿಸಲಿಕ್ಕೂ ಎತ್ತುಗಡೆ ಮಾಡಬೇಕೆಂತಲೂ ನಾವು ಸೂಚಿಸುತ್ತೇವೆ,

ಅಟಲಾಂಟಿಕ ಮಹಾಸಾಗರದ ಒಂದು ಟನ್ನು ನೀರನ್ನು ಕಾಸಿದರೆ ೮೧ ಪೌಂಡು ಉಪ್ಪು ಹೊರಡುತ್ತದೆ. ಪಾಸಿಫಿಕ್ ಮಹಾಸಾಗರದ ನೀರಿನಿಂದ ೭೯ ಪೌಂಡು, ಉತ್ತರ ದಕ್ಷಿಣ ಮಹಾಸಾಗರಗಳ ನೀರಿನಿಂದ ೮೫ ಪೌಂಡು ಮತ್ತು ಮೃತ ಸಮುದ್ರದ ನೀರಿನಿಂದ ೧೮೭ ಪೌಂಡು ಉಪ್ಪು ಹೊರಡುತ್ತದೆ.

ಟಾಕುಗಳು ಇತ್ತಿತ್ತಲಾಗಿ ಬಹಳ ಪ್ರಚಾರದಲ್ಲಿ ಬಂದಿರುತ್ತವೆ. ಬಹುತರ ಯಾವತ್ತು ಜನರು ಟಾಕುಗಳನ್ನು ಉಪಯೋಗಿಸುತ್ತಾರೆಂದು ಹೇಳಬಹುದು. ಆದರೆ ಈ ಟಾಕುಗಳು ಬಹಳ ತೀವ್ರ ಕೆಟ್ಟು ಹೊಸ ಟಾಕುಗಳನ್ನು ತೆಗೆದು

ಕೊಳ್ಳುವ ಪ್ರಸಂಗವು ಆಗಾಗ್ಗೆ ಬರುತ್ತದೆ. ಈ ತೊಂದರೆಯನ್ನು ತಪ್ಪಿಸುವದಕ್ಕಾಗಿ ಒಂದು ಕಾಲು ಮಿನಿಟಿನವರೆಗೆ ಟಾಕನ್ನು ಬೆಂಕಿಯ ಮೇಲಾಗಲಿ, ದೀಪದ ಮೇಲಾಗಲಿ ಹಿಡಿಯಬೇಕು. ತರುವಾಯ ಅದನ್ನು ನೀರಿನಲ್ಲಿ ಎದ್ದಬೇಕು. ಅಂದರೆ ಟಾಕು ಮೆತ್ತಗಾಗಿ ಪುನಃ ಸರಸಾಗಿ ಉಪಯೋಗ ಮಾಡಲಿಕ್ಕೆ ಬರುತ್ತದೆಂದು ಒಬ್ಬ ಶೋಧಕನು ತಿಳಿಸುತ್ತಾನೆ.

ಅಲಂಕಾರಗಳು.

(೨೩೬ ನೇ ಪುಟದಿಂದ ಮುಂದೆ ಸಾಗಿದ್ದು.)

ನಿದರ್ಶನಾಲಂಕಾರ; ಲಕ್ಷಣ—ಸದೃಶವಾದ ಎರಡು ವಾಕ್ಯಗಳಲ್ಲಿ ಐಕ್ಯವನ್ನು ಹೇಳಿದರೆ (ಉಪಮೇಯ ವಾಕ್ಯದಲ್ಲಿ ಉಪಮಾನ ವಾಕ್ಯದ ಅಭೇದವನ್ನಾರೋಪಿಸಿದರೆ) ಈ ಅಲಂಕಾರವಾಗುವದು. ಈ ಅಲಂಕಾರದಲ್ಲಿ ಉಪಮಾನಪದವು ಕ್ವಚಿತ್ತಾಗಿ ಒಂದೇ ಇದ್ದರೂ ಇರುತ್ತದೆ. ಬಹಳ ಪದಗಳಂತೂ ಇದ್ದೇ ಇರುತ್ತವೆ.

ಉ—ಶುದ್ಧಕಾಮದಾವೃತ್ತ.

ವನದೆ ರೋದನಂ । ಮೂರ್ಖಸೇವನಂ
ಪೆಣಕೆ ಭೂಷಣಂ । ಕಾಣದರ್ಪಣಂ
ಧನದ ಲೋಭಿಯೊಳ್ । ದೀನಯಾಚನೆ
ಶುನಕಪುಚ್ಛದಾ । ನಮ್ರನಿಷ್ಫಲಂ

ಅರ್ಥ—ಅಡವಿಯಲ್ಲಿ ಕೂತು ಅಳೋಣ, ಹೆಣಕ್ಕೆ ಶೃಂಗರಿಸೋಣ, ಕುರುಡನ ಕೈಯಲ್ಲಿ ಕನ್ನಡಿ ಕೊಡೋಣ, ದುಡ್ಡಿನಲ್ಲಿ ಲೋಭಿಯಾದವನಲ್ಲಿ ದುಡ್ಡು ಬೇಡೋಣ, ನಾಯಿ ಬಾಲವನ್ನು ನೆಟ್ಟಗೆ ಮಾಡೋಣ, ಮೂರ್ಖ ಮನುಷ್ಯನನ್ನು ಸೇವಿಸೋಣ, ಇವೆಲ್ಲ ಒಂದೇ ಅಂದರೆ ನಿಷ್ಫಲವಾಗುವವು. ಇಲ್ಲಿ “ ಮೂರ್ಖನ ಸೇವೆ ” ಎಂಬದೇ ಉಪಮೇಯ ಉಳಿದವೆಲ್ಲ ಉಪಮಾನ ವಾಕ್ಯಗಳು. ಮೂರ್ಖನ ಸೇವೆ ಎಂಬದಕ್ಕೆ ನಿಷ್ಫಲತ್ವ ಧರ್ಮದಿಂದ, ಅರ್ಥ್ಯಾರೋಪದ ಬೋಧಕಾದ ಉಪಮಾನ ವಾಕ್ಯಗಳಿಂದ ಐಕ್ಯ ಹೇಳಿದೆ.

ಅ) ಈ ಅಲಂಕಾರದಲ್ಲಿ ೨ ಭೇದಗಳಿವೆ. ಅವೆಂತೆಂದ ಪದಾರ್ಥವೃತ್ತಿನಿದರ್ಶನಾ, ವಾಕ್ಯಾರ್ಥವೃತ್ತಿನಿದರ್ಶನಾ.

ಪದಾರ್ಥವೃತ್ತಿನಿದರ್ಶನಾ-ಉಪಮೇಯ ಪದದಲ್ಲಿ ಉಪಮಾನಪದದ ಧರ್ಮವನ್ನಾಗಲಿ ಇಲ್ಲವೆ ಉಪಮಾನದಲ್ಲಿ ಉಪಮೇಯದ್ದಾಗಲಿ ಧರ್ಮಾರೋಪಣ ಮಾಡಿದರೆ ಈ ಅಲಂಕಾರವಾಗುವದು. ಉ—ಆರ್ಯಾರ್ಧ.

ಇಂದೀವರಗಳ ಶೋಭೆಯ ।
ಸುಂದರಿ ನೇತ್ರಂಗಳೈದೆ ಪಡೆಯುವವು ॥

ಇಲ್ಲಿ ಎಲೈ ಸುಂದರಿಯೇ ನಿನ್ನ ಕಣ್ಣುಗಳು ನೀಲಕಮಲಗಳ ಶೋಭೆಯನ್ನು ಹೊಂದುವವೆಂದು, ಉಪಮಾನವಾದ ನೀಲಕಮಲ ಕಾಂತಿಯನ್ನು ಉಪಮೇಯಗಳಾದ ಕಣ್ಣುಗಳಲ್ಲಿ ಹೇಳಿದೆ. ಇನ್ನೊಂದುದಾಹರಣೆ—ಆರ್ಯಾ.

ತೋರುವದೈ ಬಿಳುಪದು ಖ ।
ರ್ಜೂರಿಯಮಂಜರಿಯಧೂಳಿಯೊಳ್ ನಿತ್ಯಂ ॥
ನಾರಿಯ ಗಂಡದ್ವಯದಮ ।
ನೋರಮವಲ್ಲಭವಿಯೋಗ ಕಾತರೆಯ ॥ ೧ ॥

ಇಲ್ಲಿ ಉಪಮಾನವಾದ ಖರ್ಜೂರಿಮಂಜರಿಯ ಬಿಳುಪು, ಪ್ರಿಯಪುರುಷನ ವಿಯೋಗದಿಂದ ಚಿಂತೆಯುಳ್ಳ ತರುಣಿಯ ಗಲ್ಲದ ಬಿಳುಪಿನಂತೆ ತೋರುವದು. ಇಲ್ಲಿ ಉಪಮೇಯವಾದ ಗಲ್ಲದ ಬಿಳುಪು, ಉಪಮಾನವಾದ ಖರ್ಜೂರಿಮಂಜರಿಯ ಧೂಳಿಯಲ್ಲಿ, ಹೇಳಿದೆ; ಇದಕ್ಕೆ ಜಯದೇವನು ಲಲಿತೋಪಮೆ ಎಂದೆನ್ನುವನು. ಮೇಲೆ ಬರೆದ ಪದ್ಯವು ವಾಕ್ಯಾರ್ಥವೃತ್ತಿಯಾಗುವದೆಂದು ಪೂರ್ವಿಕರು ಅನ್ನುವರು. ಆದರೆ ಇತ್ತಲಾಗಿನ ಪ್ರಸಿದ್ಧ ಅಲಂಕಾರಜ್ಞರ ಮತದಂತೆ, ಉಪಮಾನೋಪಮೇಯ ಪದಗಳ ಧರ್ಮಗಳನ್ನು ಒಂದರೊಳಗೊಂಡು ಆರೋಪಿಸುವದೇ ಪದಾರ್ಥವೃತ್ತಿಯೆಂದು ನಾವು ಹೇಳಿದ್ದೇವೆ.

ವಾಕ್ಯಾರ್ಥವೃತ್ತಿನಿದರ್ಶನಾ-ಲಕ್ಷಣ— ಬಿಂಬ ಪ್ರತಿಬಿಂಬ ಭಾವವುಳ್ಳ ಉಪಮಾನೋಪಮೇಯ ವಾಕ್ಯಾರ್ಥಗಳ ಧರ್ಮಗಳಲ್ಲಿ ಐಕ್ಯವನ್ನಾರೋಪಿಸಿ ಹೇಳಿದರೆ ಈ ಅಲಂಕಾರವಾಗುವದು.

ಉ—ಜಲಧರಮಾಲಾವೃತ್ತ.

ಸರ್ವೇಷ್ಟಾರ್ಥಂಗೊಡುವನಿವಂ ನಾವೆಲ್ಲರ್ ।
ಶರ್ವಂದೇವೇಶನಿರಲು ಮತ್ತೊಬ್ಬರ್ಗೆ ॥
ಬೀರ್ವರ್ದೈನ್ಯೋಕ್ತಿಯತೆರದಿಂಸ್ವರ್ಧೇನುಂ ।
ಗರ್ವಾಕ್ರಾಂತಕ್ಕೆ ಕರಭಕೆಲ್ಲಂ ಬೇಡ್ವರ್ ॥ ೧ ॥

ಅರ್ಥ—ಸಮಸ್ತವಾದ ಇಷ್ಟಾರ್ಥಗಳನ್ನು ಕೊಡುವಂಥ ಶಿವನು ಇರುತ್ತಿರಲಿಕ್ಕೆ ಅನ್ಯರಿಗೆ ದೈನ್ಯೋಕ್ತಿಯಿಂದ ಬೇಡಿಕೊಳ್ಳುವ ನಾವೆಲ್ಲರು ಕಾಮಧೇನುವಿರುತ್ತಿರಲಿಕ್ಕೆ ಗರ್ವಿಷ್ಟವಾದ ಕರಭಕ್ಕೆ (ಒಂಟೆಯ ಮರಿಗೆ) ಇಷ್ಟವನ್ನು ಪ್ರಾರ್ಥಿಸುವವರಂತೆ ಇರುವೆವು. ಅಂದರೆ ವಿವೇಕಶೂನ್ಯತ್ವವೆಂಬ ಸಾಮಾನ್ಯಧರ್ಮದಿಂದ ನಮ್ಮಿಬ್ಬರಲ್ಲಿ ಐಕ್ಯತೋರುವದು. ಇಲ್ಲಿ ಉಪಮೇಯಗಳಾದ ಶಿವ, ಅನ್ಯರು, ಬೇಡುವ ನಾವು, ಎಂಬ ಪದಗಳಿಗೆ ಕ್ರಮವಾಗಿ ಉಪಮಾನಗಳಾದ ಕಾಮಧೇನು, ಕರಭ, ಬೇಡುವವರು ಎಂಬ ಪದಗಳು ಪ್ರತಿಬಿಂಬಗಳಾಗಿವೆ. ಮತ್ತು ವಾಕ್ಯಾರ್ಥಗಳಿಂದ ಧರ್ಮಗಳು ಐಕ್ಯವಾಗುತ್ತವೆ. ಇದಕ್ಕೆ ಇನ್ನೊಂದು ಉದಾಹರಣೆ—

ಕಂದ॥ ಅಂಬುಧಿಯ ನಿನ್ನ ದಾಟುವ ।
ನಿಂಬಾಡಿತೋಳ್ಗಳಿಂದ ಗುಣಮಂ ಸ್ತುವಿಪಂ ॥

ಇಲ್ಲಿ ಒಂದೇ ವಾಕ್ಯವಿದ್ದರೂ, ವಿಸ್ತಾರವಾದ ಬಾಹುಗಳಿಂದ ಸಮುದ್ರ ದಾಟುವವನು ನಿನ್ನ ಗುಣವನ್ನು ಹೊಗಳುವನು ಎಂಬಲ್ಲಿ ಅಭಾವವೆಂಬ ಸಾಮಾನ್ಯಧರ್ಮದಿಂದ ವಾಕ್ಯದೊಳಗಿನ ಪದಾರ್ಥಗಳು ಐಕ್ಯವಾಗುತ್ತವೆ. ಇಲ್ಲಿ ಗುಣ, ಸಮುದ್ರಗಳಲ್ಲಿ ಬಿಂಬ ಪ್ರತಿಬಿಂಬ ಭಾವವಿದೆ.

ಇನ್ನೊಂದು ಉದಾಹರಣೆ—

ಆರ್ಯಾ ॥ ರಾಜನ ಸೇವೆಯು ಘನಮೃಗ ।
ರಾಜನ ಸಂಬಂಧವಖಿಲ ಮನುಜರ್ಗೇ ॥
ತೇಜಿತರಿಷ್ಟ್ಯವಲೇಹಂ ।
ಸೂಜಿಯ ಮುಖ ಚುಂಬನಂ ಮಹಾತ್ಮರ್ಗೆ ॥

ಅರ್ಥ—ರಾಜನ ಸೇವೆಯು, ದೊಡ್ಡ ಸಿಂಹನ ಆಲಿಂಗನವು, ಮಸಿದ ಕತ್ತಿಯ ನೆಕ್ಕೋಣವು, ಸೂಜಿಯ ಮಾರಿಗೆ

ಬದ್ದು ಜೋಡೋಣವು, ಇವೆಲ್ಲ ಅನಿಷ್ಟ ಜನಕತ್ವವೆಂಬ ಸಾಮಾನ್ಯಧರ್ಮದಿಂದ ಐಕ್ಯವಾಗುತ್ತವೆ. ಮತ್ತು ಉಪಮೇಯವಾದ ರಾಜನ ಸೇವೆ, ಎಂಬದಕ್ಕೂ ಉಪಮಾನವಾದ ಳಿದ ಪದಗಳಿಗೂ ಬೇರೆಬೇರೆಯಾಗಿ ಬಿಂಬ ಪ್ರತಿಬಿಂಬವುಂಟು.

MANUAL OF METHOD.

ಶಿಕ್ಷಾಕ್ರಮ.

(೨೫೧ ನೇ ಪುಟದಿಂದ ಮುಂದೆ ಸಾಗಿದ್ದು.)

ಬಾಕುಗಳು ಸದ್ಯಕ್ಕೆ ಎಲ್ಲ ಶಾಲೆಗಳಿಗೆ ಪೂರೈಸಲ್ಪಟ್ಟಿರುವದಿಲ್ಲ. ಅದರಿಂದ ಆ ಸಂಬಂಧದ ನೇಮಗಳನ್ನು ವಿಸ್ತಾರವಾಗಿ ಹೇಳುವ ಅವಶ್ಯವಿಲ್ಲ.

ಅವಾಂತರ ನಿಯಮಗಳು

೧. ವಿದ್ಯಾರ್ಥಿಗಳನ್ನು ಮೈಮುದುಡಿಕೊಂಡು ಕೂಡ್ರಗೊಡಬಾರದು. ಅವರು ನೀಟಾಗಿ ಕೂಡ್ರಲಿಕ್ಕೆ ಬೇಕು.

೨ ಅವರ ಹೆಗಲುಗಳಲ್ಲಿ ಒಂದು ಎತ್ತರವೂ ಮತ್ತೊಂದು ತಗ್ಗೂ ಆಗುವಂತೆ ಕೂಡ್ರಗೊಡಬಾರದು. ಎರಡೂ ಸಮವಾಗಿರಬೇಕು.

೩. ಬೆನ್ನಾಸರ—ಹುಡುಗರಿಗೆ ಆತುಕೊಂಡು ಕೂಡ್ರಲಿಕ್ಕೆ ನಾದರೂ ಬೆನಾಸರವಿರಲಿಕ್ಕೆ ಬೇಕು· ಅಶಕ್ತ ಹುಡುಗರಿಗಂತೂ ಬೆನ್ನಾಸರವು ಅವಶ್ಯವಾಗಿ ಬೇಕು.

೪. ಗೋಡೆಗಳು ಝುಳಝುಳವಾಗಿರಬೇಕು, ಬಣ್ಣ ಕೊಟ್ಟ ಬಾದಾಮಿ ಬಣ್ಣವನ್ನಾಗಲಿ ಬೂದಿಬಣ್ಣವನ್ನಾಗಲಿ ಕೊಡಬೇಕು.

೫. ಗೋಡೆಗಳ ಕೆಳಭಾಗವು ಮಣ್ಣು ಉದರದಂತೆಯೂ ಬಣ್ಣ ಹೋಗದಂತೆಯೂ (ಪಕ್ಕಾಬಣ್ಣ ಉಳ್ಳದ್ದು) ಇರಬೇಕು

೬. ಕಿಡಿಕೆಗಳು ಅಂದವಾದವು ದೊಡ್ಡವು ಸಾಕಷ್ಟು ಇರಬೇಕು. ಅವುಗಳಿಗೆ ವರ್ಷಕ್ಕೊಂದುಸಾರೆಯಾದರೂ ಬಣ್ಣಹಚ್ಚುವದು ವಿಹಿತವು.

೭. ಅನ್ಯದೇಶದ ಚಿತ್ರಗಳಿಂದ ಆನಂದವಾಗುವದಲ್ಲದೆ ಜ್ಞಾನವು ಬೆಳೆಯುತ್ತದೆ ಆದ್ದರಿಂದ ಆಫ್ರಿಕಾ, ಎಸ್ಕಿಮೋ ಮುಂತಾದ ಕಾಡುಜಾತಿಯ ಜನರ ಬಳಕೆ ಬಾಳವೆಯ ಚಿತ್ರ

ಗಳನ್ನು ಸಾಲೆಯಲ್ಲಿ ಅಲ್ಲಲ್ಲಿಗೆ ತೂಗ ಹಾಕುವದು ಶ್ರೇಯಸ್ಕರವು. ಸ್ವದೇಶದ ಸೃಷ್ಟಿ. ಸೌಂದರ್ಯದ ವ್ಯವಹಾರದ ಮೇಲಾದ ಚಿತ್ರಗಳನ್ನಾದರೂ ನಡುನಡುವೆ ತೂಗಹಾಕತಕ್ಕದ್ದು. ಐತಿಹಾಸಿಕ ಚಿತ್ರಗಳಿಂದ ವಿದ್ಯಾರ್ಥಿಗಳ ಮನರಂಜನವಾಗುತ್ತದೆ. ಬಣ್ಣದ ಚಿತ್ರಗಳಿದ್ದರಂತೂ ನೋಡಲಿಕ್ಕೆ ಅವರು ಮುಗಿಬೀಳುತ್ತಾರೆ. ಬಣ್ಣದ ಯಂತ್ರದ ಚಿತ್ರಗಳು, ಕಾರಖಾನೆಯ ಚಿತ್ರಗಳು, ವ್ಯವಹಾರದ ಚಿತ್ರಗಳು, ಹುಡುಗರ ಕಣ್ಣಿಗೆ ಆಗಾಗ್ಗೆ ಬೀಳುವಂತೆ ಮಾಡುವದರಿಂದ ಅವರ ಮನೋರಂಜನವಾಗುವದಲ್ಲದೆ ಜ್ಞಾನಾಭಿವೃದ್ಧಿಯೂ ಆಗುವದು. ಪೌರಾಣಿಕ ಚಿತ್ರಗಳನ್ನೂ ಧರ್ಮಸಂಸ್ಕಾರದ ಚಿತ್ರಗಳನ್ನೂ ದೊರಕಿಸಿ ತೂಗಗಟ್ಟುವದು ಉಚಿತವಾದದ್ದು.

೮. ನಕಾಶೆಗಳು—ಬಣ್ಣದ ನಕಾಶೆಗಳನ್ನು ಅಲ್ಲಲ್ಲಿಗೆ ತೂಗಹಾಕಿ ಸಾಲೆ ಬಂದಾದಕೂಡಲೇ ಸುತ್ತಿಡಬೇಕು. ಬಣ್ಣ ಮಾಸಿದ ನಕಾಶೆಗಳನ್ನೂ ಹರಕು ನಕಾಶೆಗಳನ್ನೂ ತೂಗಹಾಕುವದು ಸರಿಯಲ್ಲ. ಅದರಿಂದ ವಿದ್ಯಾರ್ಥಿಗಳಿಗೆ ಪ್ರಯೋಜನವಿಲ್ಲ ಇಷ್ಟೇ ಅಲ್ಲ, ಕೆಟ್ಟ ನಡತೆಗೆ ಸಹಾಯವಾಗುತ್ತದೆ. ಈ ಮಾತನ್ನು ಶಿಕ್ಷಕರು ಮರಿಯಲಾಗದು. ಬರೇ ದೇಶದ ಮರ್ಯಾದಾರೇಖೆಗಳನ್ನು ತೋರಿಸುವಂಥ ನಕಾಶೆಗಳನ್ನು ಹಚ್ಚುವದೂ ಆಗಾಗ್ಗೆ ಶಿಕ್ಷಣದಲ್ಲಿ ಕೆಲಸಕ್ಕೆ ತೆಗಿದುಕೊಳ್ಳುವದೂ ವಿಹಿತವಾದದ್ದು.

೯. ಚಿತ್ರಪಟಗಳು—ಭೂಗೋಲದ ವ್ಯಾಖ್ಯೆಗಳನ್ನು ಕಲಿಸುವಾಗ್ಗೆ ವ್ಯಾಖ್ಯೆಯ ಚಿತ್ರಪಟದಿಂದ ಬಹಳ ಸಹಾಯವಾಗುತ್ತದೆ. ಅದೇ ಮೇರಿಗೆ ಸೂರ್ಯ ಚಂದ್ರ ನಕ್ಷತ್ರಾದಿಗಳ ಮಾಹಿತಿಯನ್ನು ಕೊಡಲಿಕ್ಕೆ ಜೋತಿಷ ಶಾಸ್ತ್ರದ ಪಟಗಳು ಕೆಲಸಕ್ಕೆ ಬರುತ್ತವೆ. ವನಸ್ಪತಿಯ ಚಿತ್ರಪಟಗಳು, ಯಾಂತ್ರಿಕಪಟಗಳು, ಪ್ರಾಣಿಪಟಗಳು ಆಯಾ ವಿಷಯಗಳನ್ನು ತಿಳಿಸಲಿಕ್ಕೆ ಅನುಕೂಲಿಸುತ್ತವೆ. ಆದಕಾರಣ ಪಾಠಕ್ಕೆ ಪ್ರಯೋಜನಕರವಾದಂಥ ವಿದ್ಯಾರ್ಥಿಗಳಿಗೆ ಕೆಲಸಕ್ಕೆ ಬರುವಂಥ ಮೇಲಾದಂಥ ಚಿತ್ರಪಟಗಳನ್ನು ಮಾಸ್ತರರು ದೊರಕಿಸಿ ಸಾಲೆಗಳಲ್ಲಿ ತೂಗಹಾಕತಕ್ಕದ್ದು.

೧೦. ಪ್ರಶಂಸಾಪಟ—ಇದನ್ನು ಸಾಲೆಯಲ್ಲಿ ಎದ್ದು ಕಾಣಿ

ಸುವಂಥ ಸ್ಥಳದಲ್ಲಿ ತೂಗಹಾಕತಕ್ಕದ್ದು. ಇದರ ಮೇಲೆ ಮೇಲಾದ ಪರೀಕ್ಷೆಗಳಲ್ಲಿ ಉತ್ಕೃಷ್ಟರೀತಿಯಿಂದ ಉತ್ತೀರ್ಣವಾದಂಥ, ಸಾಲೆಗೆ ಭೂಷಣವಾದಂಥ ವಿದ್ಯಾರ್ಥಿಗಳ ಹೆಸರುಗಳನ್ನು ಆಗಾಗ್ಗೆ ಬರೆಯುತ್ತಿರಬೇಕು.

ಮೊದಲನೇ ಪ್ರಕರಣದ ಸಂಬಂಧದ ಪರೀಕ್ಷಾ ಪ್ರಶ್ನೆಗಳು.

೧. ಶಾಲಾಗ್ರಹದ ಬೆಳಕು ಹವೆಗಳ ಸಂಬಂಧದಿಂದ ಲಕ್ಷ್ಯದಲ್ಲಿಡತಕ್ಕಂಥ ಮುಖ್ಯ ಸಂಗತಿಗಳು ಯಾವವು?

೨. ಶಾಲಾಗೃಹವನ್ನು ಪ್ರತಿದಿನ, ವಾ[illegible]ಕ್ಕೊಮ್ಮೆ, ಅದಕ್ಕೂ ಹೆಚ್ಚು ಅವಧಿಯಿಂದ ಸ್ವಚ್ಛಮಾಡುವ ಸಂಬಂಧದಿಂದ ನೇಮುಗಳು ಯಾವವು?

೩ ಕವಾಯತಿನ ಉದ್ದೇಶಗಳು ಯಾವವು? ಅದರಿಂದ ಶಾಲೆಯ ವೇಳೆಯು ಹೊರ್ತು ಉಳಿದ ವೇಳೆಯಲ್ಲಿ ವಿದ್ಯಾರ್ಥಿಗಳ ನಡತೆಯ ಮೇಲೆಯೂ ಸ್ವಭಾವದ ಮೇಲೆಯೂ ಸುಪರಿಣಾಮವಾಗುತ್ತದೆಂಬುದಕ್ಕೆ ಆಧಾರವೇನು?

೪. ಆಟದ ಸ್ಥಳದ ಪ್ರಯೋಜನವೇನು? ಅದರಿಂದ ಸಾಲೆಯ ಶಿಸ್ತಿಗೆ ಅಂದರೆ ತಿದ್ದುವಿಕೆಗೆ ಸಹಾಯವೇನು? ಹುಡುಗರ ಆಟದಲ್ಲಿ ನೀವು ಸ್ವತಃ ಎಷ್ಟರಮಟ್ಟಿಗೆ ಶೇರುವಿರಿ?

೫- ಶಾಲಾಕೌತುಕ ಸಂಗ್ರಹದಲ್ಲಿ ಯಾವ್ಯಾವ ವಸ್ತುಗಳನ್ನು ನೀವು ಸಂಗ್ರಹಿಸುವಿರಿ. ಆ ವಸ್ತುಗಳ ವರ್ಗೀಕರಣ ಹ್ಯಾಗೆ ಮಾಡುವಿರಿ? ಅವುಗಳನ್ನು ಯಾವ ಯಾವ ಕೆಲಸಕ್ಕೆ ಉಪಯೋಗಿಸುವಿರಿ?

೬. ಸಂಪೂರ್ಣವಾಗಿ ಸಾಹಿತ್ಯಗಳನ್ನು ಒದಗಿಸಿ ಕೊಟ್ಟಂಥ ಸಾಲೆಯಲ್ಲಿ ಇರತಕ್ಕಂಥ ನಕಾಶ, ಚಿತ್ರಪಟ, ಮುಂತಾದ ಯಾವತ್ತೂ ಉಪಕರಣಗಳನ್ನು ವಿವರಿಸರಿ.

೭. ವಿದ್ಯಾರ್ಥಿಗಳನ್ನು ಆನಂದಗೊಳಿಸುವಂಥ ಹುರಿದುಂಬಿಸುವಂಥ ಸಂಗತಿಗಳು ಯಾವವು?

೮. ಸಾಲೆಯ ಮನೆಯು ಸ್ವಚ್ಛವೂ ಸುಖಕರವೂ ಆಗಬೇಕಾದರೆ ಶಿಕ್ಷಕನು ಅನುಸರಿಸತಕ್ಕ ನೇಮುಗಳು ಯಾವವು.

೯. ಚಿಕ್ಕ ಹುಡುಗರಿಗೆ ಸಾಲೆಯಲ್ಲಿಯೂ ಆಟದ ಸ್ಥಳದಲ್ಲಿಯೂ ಕಲಿಸತಕ್ಕ ಕವಾಯತು, ಸಾಧಕಗಳು ಯಾವವು ಮತ್ತು ಅದಕ್ಕೆ ಅವಶ್ಯ ಉಪಕರಣಗಳು ಯಾವವು.

೧೦ ಶರೀರವರ್ಧನಕ್ಕೂ ಆರೋಗ್ಯಕ್ಕೂ ಅನುಕೂಲಿಸುವಂಥ ಕವಾಯತಿನ ಕೃತ್ಯಗಳು ಯಾವವು. ಮತ್ತು ಅವನ್ನು ಕುರಿತು ನೇಮಗಳು ಯಾವವು.

೩ನೇ ಪ್ರಕರಣ

ತಿದ್ದುವಿಕೆ, ಶಾಲಾವ್ಯವಸ್ಥೆ ಅಥವಾ ಸಾಲೆಯ ಶಿಸ್ತು.

೧. ಸ್ವರೂಪವು—ಹೂವಿನ ಗಿಡಗಳ ರಚನೆ. ಬೆಳವಣಿಗೆ, ಗಂಧದಿಂದ ಹೂದೋಟದಸ್ವರೂಪವು ಗೊತ್ತಾದಂತೆ ಶಾಲಾವ್ಯವಸ್ಥೆಯ ಲಕ್ಷಣವು ವಿದ್ಯಾರ್ಥಿಗಳ ನಡತೆಯಿಂದ ಆಗಲೇ ಗೊತ್ತಾಗುತ್ತದೆ. ಆ ನಡತೆಯು ಒಳ್ಳೇದೂ ಕೆಟ್ಟದ್ದೂ ಇದ್ದ ಮೇರೆಗೆ ಶಾಲಾ ಶಿಸ್ತು ಒಳ್ಳೇದೆಂತಲೂ ಕೆಟ್ಟದ್ದೆಂತಲೂ ಎನಿಸುವದು.

ಅ ಶಾಲಾಶಿಸ್ತು ಸೃಷ್ಟಿಯ ನಿಯಮಕ್ಕೆ ಅನುವಾದಕವಾಗಿರಬೇಕು. ಚಟುವಟಿಕೆ, ಕುತೂಹಲ ಮುಂತಾದ ಪ್ರವೃತ್ತಿಗಳು ವಿದ್ಯಾರ್ಥಿಗಳಲ್ಲಿ ಸಹಜವಾದವು. ಇವುಗಳ ಮೂಲಕವಾಗಿ ವಿದ್ಯಾರ್ಥಿಗಳು ಒಮ್ಮೊಮ್ಮೆ ಕೆಟ್ಟ ಕೆಲಸವನ್ನು ಮಾಡುವರು. ಆದರೆ ಈ ಕೆಟ್ಟ ಕೆಲಸಗಳನ್ನು ಅವರು ಬುದ್ಧಿಪೂರ್ವಕವಾಗಿ ಮಾಡುವದಿಲ್ಲ; ಬುದ್ಧಿ ಸಾಲದ್ದಕ್ಕಾಗಿ ಮಾಡುತ್ತಾರೆ. ಕಾರ್ಯಕಾರಣ ಭಾವವನ್ನು ತಿಳಿಯುವಷ್ಟು ಬುದ್ಧಿ ಪ್ರಾಗಲ್ಭ್ಯವು ಅವರಲ್ಲಿರುವದಿಲ್ಲ; ಆದರಿಂದ ಈ ತರದ ಕೆಟ್ಟ ಕೆಲಸಗಳು ಅವರಿಂದ ಸಂದಿಸುತ್ತವೆ. ಈ ಸಂಗತಿಯನ್ನು ಲಕ್ಷದಲ್ಲಿಟ್ಟು ಪ್ರವೃತ್ತಿಯನ್ನು ಕೈಯಲ್ಲಿ ತಕ್ಕೊಂಡು ಅವುಗಳನ್ನು ಸೃಷ್ಟಿ ನಿಯಮಕ್ಕೆ ಅನುಗುಣವಾಗಿ ತಿದ್ದುತ್ತ ಹೋದರೆ ವಿದ್ಯಾರ್ಥಿಗಳ ನಡೆನುಡಿ, ಆಹಾರವಿಹಾರ, ಆಟನೋಟ, ಆಚಾರ ವಿಚಾರಗಳಲ್ಲಿ ತಕ್ಕ ಸುಧಾರಣೆಯಾಗುವದು. ಅಂದರೆ ಶಾಲಾಶಿಸ್ತು ನೆಲೆಗೊಳ್ಳುವದು. ಸ್ವಭಾವವು ವಯಸ್ಸಾದಂತೆ ಪರಿಪಕ್ವವಾಗುತ್ತದೆ. ಆದರೆ ಅದನ್ನು ಯಥಾಕಾಲ,

ಯಥಾಕ್ರಮ, ಯಥೋಚಿತವಾಗಿ ತಿದ್ದಿದರೆ ಅವು ಸನ್ಮಾರ್ಗವನ್ನು ಹಿಡಿಯುತ್ತದೆ. ಸಾರಾಂಶ ಶಾಲಾನಿಯಮಾವಳಿಯು ಸೃಷ್ಟಿ ನಿಯಮಕ್ಕನುಸರಿಸಿ ವಿದ್ಯಾರ್ಥಿಗಳ ಪ್ರವೃತ್ತಿಗಳನ್ನು ತಿದ್ದುತ್ತ ಹೋದರೆ ವಿದ್ಯಾರ್ಥಿಗಳ ಸ್ವಭಾವವು ಪರಿಪಕ್ವದಶೆಯನ್ನೈದಿ ಅವರು ಸನ್ಮಾರ್ಗದಿಂದ ನಡೆಯುವರು.

೩ ಶಾಲಾ ಶಿಸ್ತಿನ ಉದ್ದೇಶಗಳು ಪ್ರಶಂಸನೀಯವಾಗಿರಬೇಕು. ಕೆಲವು ಶಾಲೆಯಲ್ಲಿ ವಿದ್ಯಾರ್ಥಿಗಳು ಪ್ರಶ್ನೆ ಕೇಳಲಿಕ್ಕೆ ನಾಚುತ್ತಾರೆ. ಕಲಿಯುವದರಲ್ಲಿ ಉತ್ಸುಕತೆಯನ್ನು ತೋರಿಸುವದಿಲ್ಲ. ತಮ್ಮ ಕೆಲಸವನ್ನು ಆಸ್ಥೆಯಿಂದ ಮಾಡುವದಿಲ್ಲ. ತಮ್ಮ ಕೆಲಸವನ್ನು ಆರಿಸಿಕೊಂಡು ಅದನ್ನು ಪ್ರೇಮಪೂರ್ವಕವಾಗಿ ಕೊನೆಗಾಣಿಸುವದಿಲ್ಲ. ಮನಬಂದಂತೆ ಸೂತ್ರಾಸೂತ್ರವನ್ನು ನೋಡದೆ ನಡೆಯುತ್ತಾರೆ. ಶಾಲಾ ನಿಯಮಗಳಿಗೆ ಕೇವಲ ಭೀತಿಯಿಂದ ಅನುಸರಿಸಿ ನಡೆಯುತ್ತಾರೆ. ಶಿಕ್ಷಕರಾದರೂ ವಿದ್ಯಾರ್ಥಿಗಳ ಸ್ವಭಾವವನ್ನು ತಿಳಿಕೊಳ್ಳದೆ ಒತ್ತಾಯದಿಂದ ಹಾಗೂ ಹೀಗೂ ತಮ್ಮ ಕೆಲಸವನ್ನು ಮಾಡುತ್ತಾರೆ. ಪ್ರೇಮದ ಲೇಶವಾದರೂ ಅವರಲ್ಲಿರುವದಿಲ್ಲ. ವಿದ್ಯಾರ್ಥಿಗಳಲ್ಲಿಯೂ ಶಿಕ್ಷಕರಲ್ಲಿಯೂ ಆತ್ಮಸಂಯಮನದ ಗಂಧವಾದರೂ ಕೆಲವೆಡೆಯಲ್ಲಿ ತೋರುವದಿಲ್ಲ. ಈ ದುರ್ನಡತೆಗಳನ್ನು ಹೋಗಲಾಡಿಸುವ ಉದ್ದೇಶದಿಂದ ತಿದ್ದುವಿಕೆಯನ್ನು ಕಾಯ್ದುಕೊಳ್ಳತಕ್ಕದ್ದು. ಸರಿಯಾದ ತಿದ್ದುವಿಕೆಯಿಂದ ಈ ದುರ್ನಡತೆಗಳು ಹೋಗುವದಲ್ಲದೆ ವಿದ್ಯಾರ್ಥಿಗಳಿಗೆ ತಮ್ಮ ಕೆಲಸವನ್ನು ಸುವ್ಯವಸ್ಥಿತವಾಗಿ ಮಾಡುವ ಚಟವು ಹತ್ತುವದು.

೪. ಸಾಧನಗಳು— ತಿದ್ದುವಿಕೆಯನ್ನು ಸದ್ಗುಣಗಳ ವರ್ಚಸ್ಸಿನಿಂದಾಗಲಿ ಶಾಸನದ ಅಂಜಿಕೆಯಿಂದಾಗಲಿ ನೆಲೆಗೊಳಿಸಬಹುದು. ನೆಲೆಗೊಳಿಸದೆ ಇರುವದಕ್ಕಿಂತ ಭೀತಿಯಿಂದಾದರೂ ತಿದ್ದುವಿಕೆಯನ್ನು ನೆಲೆಗೊಳಿಸುವದು ವಿಹಿತವು. ಆದರೆ ಭೀತಿಯಿಂದ ನೆಲೆಗೊಳಿಸಿದ ತಿದ್ದುವಿಕೆಯಿಂದ ತಕ್ಕಷ್ಟು ಪ್ರಯೋಜನವಾಗಲಾರದು. ಸರಿಯಾದ ಪ್ರಯೋಜನವಾಗಬೇಕಾದರೆ ತಿದ್ದುವಿಕೆಯನ್ನು ಸದ್ಗುಣದ ವರ್ಚಸ್ಸಿನಿಂದ ಸಾಧಿಸುವದೇ ವಿಹಿತವು.

೧. ಪ್ರತ್ಯಕ್ಷ ಅಥವಾ ವಸ್ತುಗತ ಸಾಧನಗಳು:—

(ಅ) ಸಾಮಾನುಗಳಿಲ್ಲದಂಥ, ಕತ್ತಲೆಯುಳ್ಳಂಥ, ಹೊಲಸಾದಂಥ, ಮನಸಿಗೆ ಸೊಗಸಾಗದಂಥ ಸಾಲೆ ಮನೆಗಳು, ಸಂಕುಚಿತವಾದ ಆಟದ ಸ್ಥಳಗಳು, ಗಿಡ್ಡ ಅಂದಗೆಟ್ಟ ಬಾಗಿಲುಗಳು, ಮುಂತಾದ ಅಸಹ್ಯವಾದ ಸಂಗತಿಗಳಿಂದ ತಿದ್ದುವಿಕೆಗೆ ಸಹಾಯವಾಗಲರಿಯದು. ಚೆಲೋ ಬೆಳಕುಳ್ಳ ಮನೆಗಳು, ಪ್ರಯೋಜನಕರವಾದಂಥ ಮೇಲಾದ ಸಾಮಾನುಗಳು, ನಕಾಶೆಗಳು ಇವುಗಳಿಂದ ಮನಸ್ಸಿಗೆ ಸೊಗಸಾಗುವದಲ್ಲದೆ ತಿದ್ದುವಿಕೆಯನ್ನು ಕಾಯ್ದುಕೊಳ್ಳುವದಕ್ಕೆ ಅನುಕೂಲವಾಗುವದು.

(ಬ) ಶಿಕ್ಷಕನ ಉಡಿಗೆ ತೊಡಿಗೆ, ಹಾವಭಾವ, ಮುಖಲಕ್ಷಣ, ಧ್ವನಿ, ಮಾತುಕಥೆ, ಆಟನೋಟ, ಮುಂತಾದ ನಡತೆಗಳು ಲೋಕಮಾನ್ಯವೂ ಅನುಕರಣೀಯವೂ ಆಗಿರಬೇಕು.

(ಕ) ಶಿಕ್ಷಕರು ವಿದ್ಯಾರ್ಥಿಗಳ ಕೂಡ ನಡೆಯುವಾಗ ತಮ್ಮ ಗೌರವವನ್ನು ಇಟ್ಟುಕೊಳ್ಳಬೇಕಲ್ಲದೆ ಒಂದು ಪ್ರಕಾರದ ಶಿಸ್ತು ಕಾಯ್ದುಕೊಳ್ಳತಕ್ಕದ್ದು. ಇದರಿಂದ ಭೀತಿಯುಕ್ತ ಪ್ರೇಮವು ಬೆಳೆದು ಶಿಕ್ಷಕರ ವರ್ಚಸ್ಸು ಕಾಯ್ದುಕೊಳ್ಳಲ್ಪಡುತ್ತದೆ.

(ಡ) ಹುಡುಗರ ಕೆಲಸದಲ್ಲಿ ಆಗಾಗ್ಗೆ ತಕ್ಕ ಬದಲಾವಣೆಗಳಾಗುತ್ತಿರಬೇಕು; ಮತ್ತು ಕ್ಲಿಪ್ತ ಅವಧಿಗೆ ಕೆಲಸವು ತೀರ ಕಟ್ಟಾಗುತ್ತಿರಬೇಕು.

೨. ಅಪ್ರತ್ಯಕ್ಷ ಅಥವಾ ಚಿತ್ತಗತ ಸಾಧನಗಳು:—

(ಅ) ವಿದ್ಯಾರ್ಥಿಗಳು ಮಾಡತಕ್ಕಂಥ ಕೆಲಸಗಳನ್ನೂ ಮಾಡಲಾಗದಂಥ ಕೆಲಸಗಳನ್ನೂ ಸ್ಪಷ್ಟವಾಗಿಯೂ ಅಸಂದಿಗ್ಧವಾಗಿಯೂ ತಿಳಿಸಬೇಕು. ಈ ಸಂಬಂಧದ ನೇಮಗಳು ಸ್ವಲ್ಪವಿದ್ದಷ್ಟು ಒಳ್ಳೇದು. ಆದರೆ ಅವುಗಳನ್ನು ಕುರಿತು ಭ್ರಾಂತಿಯೂ ಮೋಹಗಮತ್ವವೂ ಎಳ್ಳಷ್ಟು ಇರಕೂಡದು.

(ಬ) ಅಪರಾಧಗಳನ್ನು ತಾರತಮ್ಯಭಾವದಿಂದ ವಿಚಾರಿಸಿ ಅವುಗಳಿಗೆ ತಕ್ಕಂತೆ ಶಿಕ್ಷೆಗಳನ್ನು ವಿಧಿಸಬೇಕು.

(ಕ) ಘಟನೆ, ವರ್ಗೀಕರಣ, ಮೇಲ್ವಿಚಾರಣೆ ಮುಂತಾದ ವ್ಯವಸ್ಥೆಗಳು ಪೂರ್ಣವಾದಂಥವೂ ಅಚ್ಚುಕಟ್ಟಾದಂಥವೂ ಇರಬೇಕು.

(ಇ) ಶಾಲಾವ್ಯವಸ್ಥೆಯ ಪ್ರತಿಯೊಂದು ನಿಯಮದ ಕಾರಣವನ್ನು ವಿದ್ಯಾರ್ಥಿಗಳಿಗೆ ಎಚ್ಚರದಿಂದ ತಿಳಿಸಬೇಕು. ಈ ತಿಳುವಳಿಕೆಯಿಂದ ವಿಶ್ವಾಸವು ಹುಟ್ಟಿ ಅದರಿಂದ ವಿಧೇಯತ್ವವು ಫಲಿಸುತ್ತದೆ.

(ಈ) ಶಿಕ್ಷಣದ ಪದ್ಧತಿಗಳನ್ನು ವಿಚಾರದಿಂದಲೂ ಜಾಗರೂಕತನದಿಂದಲೂ ಗೊತ್ತು ಮಾಡಿಡಬೇಕು. ಒಟ್ಟಿಗೆ ಅಲ್ಪಶ್ರಮದಿಂದ ಬಹು ಫಲವಾಗುವಂತೆ ಶಿಕ್ಷಣಪದ್ಧತಿಯು ರಚಿತವಾಗಿರಬೇಕು.

೨. ನೈತಿಕ ಸಾಧನಗಳು—

(ಅ) ಶಿಕ್ಷೆ—ಶಿಕ್ಷೆಯನ್ನು ತಕ್ಕ ರೀತಿಯಿಂದ ವಿಧಿಸುವದರಿಂದ ಬಹಳ ಲಾಭವಾಗುತ್ತದೆ. ತಪ್ಪನ್ನು ಪೂರ್ಣವಾಗಿ ವಿಚಾರಿಸದೆ ಅವಸರದಿಂದ ಶಿಕ್ಷೆ ಮಾಡುವದು ಸರಿಯಲ್ಲ. ಅದನ್ನು ಪೂರ್ಣವಾಗಿ ವಿಚಾರಿಸಿ ನಿರುಪಾಯದಿಂದ ಶಿಕ್ಷೆಯನ್ನು ಮಾಡಬೇಕಾಗಿದೆ ಎಂಬ ಭಾವವನ್ನು ಹುಟ್ಟಿಸುವಂತೆ ಸೌಮ್ಯರೀತಿಯಿಂದ ಶಿಕ್ಷೆ ಮಾಡತಕ್ಕದ್ದು. ಮಾನಖಂಡನೆ ಮಾಡುವದಕ್ಕಿಂತ ವಿದ್ಯಾರ್ಥಿಗಳನ್ನು ಉತ್ತೇಜನ ಕೊಟ್ಟು ದುರ್ಮಾರ್ಗದಿಂದ ಸನ್ಮಾರ್ಗಕ್ಕೆ ಹಚ್ಚುವದೇ ವಿಹಿತವು. ನಿರ್ಬಂಧಗಳನ್ನು ಅವಶ್ಯವಿದ್ದಷ್ಟೇ ಗೊತ್ತುಮಾಡಿ ಅವುಗಳನ್ನು ಕಾಯುವ ಜವಾಬದಾರಿಯು ತಮ್ಮದಾಗಿರುತ್ತದೆಂಬ ಭಾವವನ್ನು ವಿದ್ಯಾರ್ಥಿಗಳಲ್ಲಿ ಹುಟ್ಟಿಸತಕ್ಕದ್ದು. ಈ ಜವಾಬದಾರಿಯ ಭಾವವು ಸಣ್ಣ ಹುಡುಗರಲ್ಲಿ ಹುಟ್ಟುವದು ಸಾಧ್ಯವಾಗಿರುವದೆಂದು ನಾವು ಹೇಳದಿದ್ದರೂ ದೊಡ್ಡ ಹುಡುಗರಲ್ಲಿ ಹುಟ್ಟಿಸುವದು ಶಾಲಾವ್ಯವಸ್ಥೆಯ ಲಕ್ಷಣವೆಂದು ನಾವು ದಿಟವಾಗಿ ಹೇಳುತ್ತೇವೆ. ಮುಖ್ಯವಾಗಿ ವಿದ್ಯಾರ್ಥಿಗಳನ್ನು ಯುಕ್ತಿಯಿಂದ ಸನ್ಮಾರ್ಗಕ್ಕೆ ಹಚ್ಚುವದು ಜಾಣ ಮಾಸ್ತರನ ಲಕ್ಷಣವು. ಶಾಲೆಯಲ್ಲಿ ನೆಲೆಗೊಂಡ ವ್ಯವಸ್ಥೆಯಿಂದ ಮಾಸ್ತರನ ಯೋಜಕತ್ವವು[*] ಗೊತ್ತಾಗುವದು.

---

[*] ಸುತ್ತಲೆ ನಡೆಯುವಂಥ ಸಂಗತಿಗಳನ್ನು ಲಕ್ಷ್ಯವಿಟ್ಟು ನೋಡಿ ಮರ್ಮವನ್ನು ತಿಳುಕೊಂಡು ಅದನ್ನು ಯಥೋಚಿತವಾಗಿ ಕೈಕೊಂಡು ಶಾಲಾವ್ಯವಸ್ಥೆಯನ್ನು ನೆಲೆಗೊಳಿಸುವ ನೈಪುಣ್ಯವೇ ಯೋಜಕತ್ವವು.

(इ) ದರ್ಪ (ಭೀತಿಯುಕ್ತ ಪ್ರೇಮ)—ವಿದ್ಯಾರ್ಥಿಗಳನ್ನು ನಡಿಸಿಕೊಳ್ಳುವ ವಿಷಯದಲ್ಲಿ ಮಿತಿಮೀರಿದ ನಿಯಂತೃತ್ವವು ಸರಿಯಲ್ಲ. ಅಚ್ಛೆಯಿಂದ ಅಂದರೆ ನಿಯಮನಾಭಾವದಿಂದ ಕೇಡು ಆದಷ್ಟೇ ಅತಿ ನಿಯಮನದಿಂದಾದರೂ ಆಗುತ್ತದೆ. ನಿಯಮನವು ವಿದ್ಯಾರ್ಥಿಗಳ ಹಿತಕ್ಕಾಗಿ ಮಾಡತಕ್ಕದ್ದೇ ಹೊರ್ತು ನಿಯಂತೃಗಳ ಶ್ರೇಷ್ಠತ್ವವನ್ನು ಸ್ಥಾಪಿಸುವದಕ್ಕಾಗಿರುವದಿಲ್ಲ. ಆದಕಾರಣ ತಾವಾಗಿಯೇ ವಿದ್ಯಾರ್ಥಿಗಳು ಸನ್ಮಾರ್ಗಕ್ಕೆ ಹತ್ತುವಂತೆ ಮಾಡುವದು ವಿಹಿತವು. ವಿದ್ಯಾರ್ಥಿಗಳು ಒಳ್ಳೇ ನಡತೆಯನ್ನು ಹಿಡಿಯುವಂತೆಯೂ ಕೆಟ್ಟ ನಡತೆಯನ್ನು ನಿರಾಕರಿಸುವಂತೆಯೂ ತಮ್ಮ ವರ್ಗದೊಳಗೆ ಯಾವನಾದರೂ ಕೆಟ್ಟವನಾದರೆ ಅವನನ್ನು ಪರಿಪರಿಯಿಂದ ಕುಕ್ಕಿ ಸನ್ಮಾರ್ಗಕ್ಕೆ ಹಚ್ಚುವಷ್ಟು ಸಾಲೆಯ ಅಭಿಮಾನ ಪಡುವಂತೆಯೂ ಸುವ್ಯವಸ್ಥೆಯಿಂದ ಸಾಲೆಯನ್ನು ನಡಿಸುವದೇ ಮೇಲಾದ ಶಿಕ್ಷಕನ ಕರ್ತವ್ಯವು,

೪. ಪ್ರಬುದ್ಧ ವಿದ್ಯಾರ್ಥಿಗಳ ಸಾಧನ.

(अ) ಉದಾಹರಣ—ಅತ್ತೆಯಂತೆ ಸೊಸೆ, ಎಂಬ ಗಾದೆಯು ಚಿಕ್ಕವರಲ್ಲಿ ಅನುಕರಣವೃತ್ತಿಯ ಪ್ರಾಬಲ್ಯವನ್ನು ಹೇಳುತ್ತದೆ. ಚಿಕ್ಕ ವಿದ್ಯಾರ್ಥಿಗಳು ಪ್ರಬುದ್ಧ ವಿದ್ಯಾರ್ಥಿಗಳಂತೆ ನಡೆಯಲು ಯಾವಾಗಲೂ ಹವಣಿಸುತ್ತಾರೆ ಆದದರಿಂದ ಪ್ರಬುದ್ಧ ವಿದ್ಯಾರ್ಥಿಗಳು ಉತ್ತಮ ನಡತೆಯವರಿರಲಾಗಿ ಶಾಲಾವ್ಯವಸ್ಥೆಯ ಕೆಲಸವು ಹಗುರೆನಿಸುವದು. ಮತ್ತೊಂದೇನಂದರೆ ಚಿಕ್ಕ ವಿದ್ಯಾರ್ಥಿಗಳಲ್ಲಿ ಪ್ರಬುದ್ಧ ವಿದ್ಯಾರ್ಥಿಗಳ ಸಂಬಂಧದಿಂದ ಭಕ್ತಿಯೂ ಆದರವೂ ಇರುತ್ತವೆ. ಅದರಿಂದ ಪ್ರಬುದ್ಧ ವಿದ್ಯಾರ್ಥಿಗಳು ಚಿಕ್ಕ ವಿದ್ಯಾರ್ಥಿಗಳನ್ನು ಪ್ರೇಮದಿಂದ ಮಾತಾಡಿಸಿದರೆ ಸಾಕು, ಅವರು ಉಲ್ಲಾಸಭರಿತರಾಗಿ ಅವರು ಹಾಕಿಕೊಟ್ಟ ಮಾರ್ಗದಿಂದ ನಡಿಯುತ್ತಾರೆ.

(इ) ಮೇಲ್ವಿಚಾರ—ಚಿಕ್ಕ ವಿದ್ಯಾರ್ಥಿಗಳು ಪ್ರಬು ವಿದ್ಯಾರ್ಥಿಗಳ ಕೂಡ ಆದರದಿಂದಲೂ ಭಕ್ತಿಯಿಂದಲೂ ನ ಕೊಳ್ಳುತ್ತಾರೆ. ಅದರಿಂದ ಪ್ರಬುದ್ಧ ವಿದ್ಯಾರ್ಥಿಗಳು ಚಿ ವರನ್ನು, ತಪ್ಪಿ ತಪ್ಪಿದಾಗ ಎಚ್ಚರಿಸಿ ಸನ್ಮಾರ್ಗಕ್ಕೆ ಹಚ್ಚು-

ದುಸ್ತರವಲ್ಲ. ಆಟದಲ್ಲಿಯೂ ಶಾಲೆಯಲ್ಲಿಯೂ ಅವರೊಳಗೆ ಕೂಡಿಕೊಂಡು ಅವರ ಇಚ್ಛೆಗಳನ್ನೂ ಕೃತಿಗಳನ್ನೂ ಲಕ್ಷವಿಟ್ಟು ನೋಡಿ ತಿಳಕೊಂಡು ಕೆಟ್ಟವುಗಳನ್ನು ತಿದ್ದಲಿಕ್ಕೂ ಸರಿಯಾದವುಗಳನ್ನು ಪ್ರೋತ್ಸಾಹಗೊಳಿಸಲಿಕ್ಕೂ ಅವರಿಗೆ ಅನುಕೂಲವಿರುತ್ತದೆ. ಈ ಮೇರೆಗೆ ಅವರನ್ನು ಕೆಲಸಕ್ಕೆ ಹಚ್ಚುವದು ಸತ್‌ಶಿಕ್ಷಕರಿಗೆ ಸುಸಾಧ್ಯವಾಗಿರುತ್ತದೆ.

(೫) ರಕ್ಷಣೆ—ಶಾಲೆಯ ಸಾಮಾನುಗಳನ್ನು ಕಾಯುವಲ್ಲಿಯೂ ಶಾಲಾವಿದ್ಯಾರ್ಥಿಗಳಿಗೆ ಶಾರೀರ ಅಪಾಯವಾಗದಂತೆ ಎಚ್ಚರ ಪಡುವಲ್ಲಿಯೂ ಶಾಲೆಯ ಗೌರವಕ್ಕೂ ಮರ್ಯಾದೆಗೂ ಭಂಗ ಬರದಂತೆ ವ್ಯವಸ್ಥೆಯನ್ನು ಕಾಯ್ದುಕೊಳ್ಳುವಲ್ಲಿಯೂ ಪ್ರಬುದ್ಧ ಹುಡುಗರು ಶಿಕ್ಷಕರಿಗೆ ನೆರವಾಗುವದುಂಟು.

SELECTIONS FROM THE KARNATIK GAZETTEER

ಕನ್ನಡ ಗಝೇಟಿಯರದಿಂದ ಅವತರಣಗಳು.

(೨೩೮ ನೇ ಪುಟದಿಂದ ಮುಂದೆ ಸಾಗಿದ್ದು.)

ಅಂಜದೀವ—ಉತ್ತರ ಅಕ್ಷಾಂಶ ೧೪°, ೪೪′, ಪೂರ್ವ ರೇಖಾಂಶ ೭೪°, ೧೦′, ಜ. ಸ. (೧೮೭೨) ೩೨೭. ನಿವಾಸಿಗಳೆಲ್ಲ ಕ್ರಿಸ್ತೀ ಜನರು. ಈ ದ್ವೀಪವು ಕಾರವಾಡದ ಆಗ್ನೇಯಕ್ಕೆ ೫ ಮೈಲಿನಮೇಲೆ ಸಮುದ್ರದೊಳಗೆ ಪೋರ್ತುಗೀಸರ ವಶದಲ್ಲಿ ಇರುತ್ತದೆ ಈ ದ್ವೀಪವು ಸುಮಾರು ಒಂದು ಮೈಲು ಉದ್ದ, ೯೦೦ ಫೂಟು ಅಗಲು ಇರುತ್ತದೆ. ಪಶ್ಚಿಮದಂಡೆಯಲ್ಲಿ ಗರಸಿನ ಭೂಮಿ ಇರುತ್ತದೆ; ಪೂರ್ವದಂಡೆಯಲ್ಲಿ ಮಾತ್ರ ತೆಂಗು, ಹಲಸು ಮುಂತಾದ ಫಲವೃಕ್ಷಗಳ ಬನಗಳಿವೆ; ಬತ್ತದ ಭೂಮಿ ಇಲ್ಲ. ಹವೆಯು ರೋಗಕಾರಕ, ಜ್ವರೋಪದ್ರವ ಬಹಳ. ದ್ವೀಪದ ಮಧ್ಯಭಾಗದಲ್ಲಿ ಅತ್ಯುತ್ತಮವಾದ ಸೀ ನೀರಿನ ಕುಂಡವಿರುತ್ತದೆ. ಈ ನೀರಿನ ಸಲುವಾಗಿ ಅರಬಸ್ತಾನ, ಗ್ರೀಸ ಮುಂತಾದ ಪರನಾಡುಗಳಿಂದ ಬುನಾಯಲ್ಲಿ ಬರುತ್ತಿದ್ದ ಹಡಗುಗಳು ಅಂಜದೀವದಲ್ಲಿ ನಿಲ್ಲುತ್ತಿದ

ವು. ಸದ್ಯಕ್ಕೆ ಜನರ ವಸ್ತಿಯು ಪೂರ್ವದಂಡೆಯಲ್ಲಿ ಮಾತ್ರ ಇರುತ್ತದೆ. ಈ ಜನರು ವಾಡಿಕೆಯಾಗಿ ಮೀನು ಹಿಡಿದು ಜೀವಿಸುವರು ಪೋರ್ತುಗೀಸರು ಇಲ್ಲಿ ಒಂದು ಕೋಟೆಯನ್ನು ಕಟ್ಟಿದ್ದಾರೆ.

ಅಂಜದೀವೆಂಬ ಹೆಸರು ಆದ್ಯ ದ್ವೀಪ, ಅಜ್ಯ ದ್ವೀಪ, ಅಂಜೆ (ಪಂಜ) ದ್ವೀಪ, ಅಂಜನೀ ದ್ವೀಪ, ಈ ಬಗೆಯ ಕೆಲವೊಂದು ಬುನಾದಿಯ ಹೆಸರಿನಿಂದ ಹುಟ್ಟಿರುತ್ತದೆಂಬ ಬಗೆ ಬೇರೆ ಬೇರೆ ಕಥೆಗಳಿರುತ್ತವೆ. ಇಜಿಪ್ತದ ತಾಲೆಮಿಯೆಂಬವನು ತನ್ನ ಗ್ರಂಥದಲ್ಲಿ (ಸನ್ ೧೫೦) ಈ ದ್ವೀಪವನ್ನು ಉಲ್ಲೇಖಿಸಿದ್ದಾನೆ. ಗ್ರೀಸ ದೇಶದ ಆರ್ಯನ್ನನೆಂಬವನು ತನ ಪೆರಿಪ್ಲಸವೆಂಬ ಗ್ರಂಥದಲ್ಲಿ (ಸನ್ ೨೪೭) ಇದನ್ನು ಉಲ್ಲೇಖಿಸಿದ್ದಾನೆ. ಆದ್ದರಿಂದ ಕ್ರಿಸ್ತೀ ಶಕದ ಪೂರ್ವಕಾಲದಿಂದ ಪಾಶ್ಚಿಮಾತ್ಯರು ಅಂಜದೀವದ ಮಾರ್ಗವಾಗಿ ಹಿಂದುಸ್ಥಾನದ ಪಶ್ಚಿಮ ದಂಡೆಗೆ ಬರುತ್ತಿದ್ದರೆಂದು ಸಿದ್ಧವಾಗುತ್ತದೆ. ಸನ್ ೧೩೪೨ ರಲ್ಲಿ ಇಬನ್‌ಬತೂತನೆಂಬ ಆಫ್ರಿಕದ ಮುಸಲ್ಮಾನನು ಈ ದ್ವೀಪಕ್ಕೆ ಹೋಗಿದ್ದನು. ಆಗ ಇಲ್ಲಿ ಒಂದು ಗುಡಿಯೂ ತೆಂಗಿನ ಬನವೂ ಇತ್ತು. ಗುಡಿಯಲ್ಲಿ ಎರಡು ಮೂರ್ತಿಗಳ ನಡುವ ಒಬ್ಬ ಜೋಗಿಯು ಗೋಡೆಗೆ ಆತುಕೊಂಡು ನಿಂತಿದ್ದನು. ಬತೂತನು ಅವನನ್ನು ಮಾತಾಡಿಸಿದರೆ ಅವನು ಮಾತಾಡಲಿಲ್ಲ. ಅವನು ಏನು ತಿನ್ನುತ್ತಿರುತ್ತಾನೆಂದು ಬತೂತನು ಸುತ್ತುಮುತ್ತು ನೋಡುವಷ್ಟರಲ್ಲಿ ಜೋಗಿಯು ಹೂಕರಿಸಲಾಗಿ ತೆಂಗಿನ ಮರದಿಂದ ಅವನ ಮೈಮೇಲೆ ಒಂದು ಕಾಯಿ ಬಿತ್ತು! ಅದನ್ನು ನೋಡಿ ಬತೂತನಿಗೆ ಬಹು ಕೌತುಕವಾಯಿತು. ಬತೂತನು ಜೋಗಿಗೆ ಹಣ ಕೊಡಹೋಗಲಾಗಿ ಜೋಗಿಯು ಅದನ್ನು ತಕ್ಕೊಳ್ಳದೆ, ಬತೂತನ ಮುಂದೆ ಹತ್ತು ದೀನಾರವೆಂಬ ನಾಣ್ಯಗಳನ್ನು ಚೆಲ್ಲಿದನು. ಬತೂತನು ನೀನು ಯಾವ ದೇವರಿಗೆ ನಡಕೊಳ್ಳುತ್ತೀ ಎಂದು ಸನ್ನೆಯಿಂದ ಕೇಳಿದಕ್ಕೆ ಜೋಗಿಯು ಆಕಾಶವನ್ನೂ ಪಶ್ಚಿಮ ದಿಕ್ಕನ್ನೂ ತೋರಿಸಿದನು. ಅದರಿಂದ ಅಲ್ಲಾನಿಗೂ ಮಕ್ಕಾ ಪಟ್ಟಣದ ಮಶೀದಿಗೂ ಇವನು ನಡಕೊಳ್ಳುತ್ತಾನೆಂದು

ಕೇಳಿದು ಬತೂತನು ಬಹು ಸಂತೋಷ ಪಟ್ಟನು. ಆದರೆ ಜೋಗಿಯ ಅಭಿಪ್ರಾಯವು ಸೂರ್ಯನಿಗೂ ಸಮುದ್ರಕ್ಕೂ ಕಾನು ನಡಕೊಳ್ಳುತ್ತಾನೆಂದು ಇತ್ತೆಂದು ತೋರುತ್ತದೆ.

ವಿಜಯನಗರದ ರಾಜ್ಯವು ಪ್ರಬಲವಾದ ಬಳಿಕ ಅಂಜದೀವವು ಆ ರಾಜ್ಯಕ್ಕೆ ಕೆಲವು ದಿವಸ ಸೇರಿತ್ತು. ಆದರೆ ಅರಬಸ್ತಾನದಿಂದ ಬರುತ್ತಿದ್ದ ವ್ಯಾಪಾರಸ್ಥರು ಈ ದ್ವೀಪದಲ್ಲಿ ಇಳಿದು ನಿವಾಸಿಗಳನ್ನು ಬಹಳ ಪೀಡಿಸಿದ್ದರಿಂದ ನಿವಾಸಿಗಳು ಹೊರಟುಹೋಗಿ ದ್ವೀಪವು ಹಾಳು ಬಿತ್ತು. ಮುಂದೆ ಪೋರ್ತುಗಾಲದ ವಾಸ್ಕೋಡಿಗಾಮನು ಕಾಲಿಕತ್ತದಿಂದ ಯುರೋಪಕ್ಕೆ ತಿರಿಗಿ ಹೋಗುವಾಗ ಅಂಜದೀವದಲ್ಲಿ ಕೆಲವು ದಿವಸ ನಿಂತಿದ್ದನು. ಅಂದಿನಿಂದ ದ್ವೀಪವು ಪೋರ್ತುಗೀಸರ ವಶದಲ್ಲಿ ಇರುತ್ತದೆ. ಗೋವೆಯಿಂದಲೂ ದಿವ್ರಾ ದ್ವೀಪದಿಂದಲೂ ಪೋರ್ತುಗೀಜ ಅಧಿಕಾರಿಗಳು ಗುನ್ಹೇಗಾರರನ್ನು ಅಂಜದೀವಕ್ಕೆ ಕಳಿಸುವರು. ಈಗಿರುವ ನಿವಾಸಿಗಳು ಅವರ ವಂಶದವರೆಂದು ತೋರುತ್ತದೆ.

ಬಿಣಗೆ—ಕಾರವಾಡದ ದಕ್ಷಿಣಕ್ಕೆ ೩ ಮೈಲಿನಮೇಲೆ, ಜ. ಸ. (೮೧) ೧೪೯೬. ಇಲ್ಲಿ ಬೇಕಾದಂಥ ದೊಡ್ಡ ಹಡಗಗಳು ನಿಲ್ಲಲಿಕ್ಕೆ ಅನುಕೂಲವಾದ ಬಂದರವಿರುತ್ತದೆ. ಇರಾಣೀ ಅರಬೀ ಜನರ ಹಡಗಗಳು ಈ ಬಂದರಕ್ಕೆ ಬರುತ್ತವೆ. ಸರಕಾರೀ ಕಸ್ಟಮ್ ಕಚೇರಿಯುಂಟು.

ಚೆಂಡಿಯೆ—ಕಾರವಾಡದ ದಕ್ಷಿಣಕ್ಕೆ ೫ ಮೈಲಿನ ಮೇಲೆ ದೊಡ್ಡ ಗ್ರಾಮವು. ಸಮುದ್ರ ಮಾರ್ಗದ ವ್ಯಾಪಾರವು ಬಳಿಕಾಗಿ ನಡಿಯುತ್ತದೆ.

ಗುಡ್ಡೇಹಳ್ಳಿಯಗುಡ್ಡ—ಕಾರವಾಡದ ಆಗ್ನೇಯಕ್ಕೆ ಮೂರು ಮೈಲಿನಮೇಲೆ ೧೮೦೦ ಫೂಟು ಎತ್ತರವಾದ ಶಿಖರವು. ಇದರ ನೆತ್ತಿಯವರೆಗೆ ದಟ್ಟಾದ ಅಡವಿಯು ಹಬ್ಬಿರುತ್ತದೆ. ಒಬ್ಬ ಸಾಹೇಬನು ಈ ಗುಡ್ಡದಮೇಲೆ ಮನೆ ಕಟ್ಟಿದ್ದಾನೆ.

ಕೋಡಿಬಾಗ— ಕಾರವಾಡದ ಉತ್ತರಕ್ಕೆ ೨ ಮೈಲಿನ ಮೇಲೆ. ಇಲ್ಲಿ ಸರಕಾರೀ ತೊಲೆಗಳ ಕೋಠಿಯುಂಟು. ಉದ್ದವಾದ ತೊಲೆಗಳನ್ನು ಆನೆಗಳು ಕ್ರಮಪಡಿಸಿ ಇಡುತ್ತ

ವೆ. ಒಂದು ಆನೆಯು ಗಡುತರವಾದದ್ದೊಂದು ಹಗ್ಗವನ್ನು ಸೊಂಡೆಯಲ್ಲಿ ತಕ್ಕೊಂಡು ಹೋಗಿ ತೊಲೆಗಳ ಬಳಿಯಲ್ಲಿ ನಿಂತ ಮನುಷ್ಯನ ಮುಂದೆ ಹಗ್ಗವನ್ನು ಚಲ್ಲುತ್ತದೆ. ಅವನು ಹಗ್ಗದ ನಡುಭಾಗವನ್ನು ತೊಲೆಗೆ ಕಟ್ಟಿ ಬಿಡುತ್ತಾನೆ. ಬಳಿಕ ಎರಡು ಆನೆಗಳು ಆ ಹಗ್ಗದ ಎರಡು ತುದಿಗಳನ್ನು ಬಾಯೊಳಗೆ ಹಿಡಿದುಕೊಂಡು ಸಣ್ಣದೊಂದು ಕಟ್ಟಿಗೆಯನ್ನು ಎಳೆದೊಯಿದಂತೆ ತೊಲೆಯನ್ನು ಎಳೆದುಕೊಂಡು ಹೋಗಿ ಹೇಳಿದಲ್ಲಿ ಚಲ್ಲಿಬಿಡುತ್ತವೆ.

(ಸಕ್ಷೇಪ)

DEPARTMENTAL NOTICES.

ನೋಟೀಸುಗಳು.

ಪಬ್ಲಿಕ್ ಸರ್ವೀಸ ಸರಟೀಫಿಕೇಟ ಪರೀಕ್ಷೆಗಳು.

ದಕ್ಷಿಣಭಾಗ,

ಸನ್ ೧೮೮೮ ನೇ ಇಸವಿಯ ಎಪ್ರಿಲ ತಿಂಗಳ ೨೬ ನೇ ತಾರೀಖಿನ ಸರಕಾರಿ ಗ್ಯಾಝೀಟಿನಲ್ಲಿ ಪ್ರಸಿದ್ಧಿಸಲ್ಪಟ್ಟ ನೇಮಗಳಿಗನುಸರಿಸಿ ೧೮೯೯ ನೇ ಇಸವಿಯಲ್ಲಿ ದಕ್ಷಿಣಭಾಗದಲ್ಲಿ (ಬೆಳಗಾವ, ಧಾರವಾಡ, ವಿಜಾಪೂರ, ಕಾರವಾರ, ರತ್ನಾಗಿರಿ ಕುಲಾಬಾ, ಕೊಲ್ಹಾಪೂರ ಮತ್ತು ಬೇರೆ ಸಂಸ್ಥಾನಗಳು ಆಗುವ ೧ ನೇ ಮತ್ತು ೨ ನೇ ಗ್ರೇಡ ಪಬ್ಲಿಕ್ ಸರ್ವೀಸ ಸರಟೀಫಿಕೇಟ ಪರೀಕ್ಷೆಗಳಿಗೆ ಕೆಳಗೆ ಬರೆದ ಪುಸ್ತಕಗಳು ಗೊತ್ತುಪಡಿಸಲ್ಪಟ್ಟಿರುತ್ತವೆ.

೧. ಪರೀಕ್ಷೆಯು ಬೆಳಗಾವ, ಕಾರವಾರ ಸೆಂಟರುಗಳಲ್ಲಿ ಮರಾಠಿ ಮತ್ತು ಕನ್ನಡ ಭಾಷೆಗಳ ಮುಖಾಂತರವಾಗಿಯೂ ಧಾರವಾಡ, ವಿಜಾಪುರ ಸೆಂಟರುಗಳಲ್ಲಿ ಕನ್ನಡ ಭಾಷೆಯ ಮುಖಾಂತರವಾಗಿಯೂ ರತ್ನಾಗಿರಿ, ಕುಲಾಬಾ ಮತ್ತು ಕೊಲ್ಹಾಪೂರ ಸೆಂಟರುಗಳಲ್ಲಿ ಮರಾಠಿಬಾಷೆಯ ಮುಖಾಂತರವಾಗಿಯೂ ತೆಗಿದುಕೊಳ್ಳಲ್ಪಡುವದು.

೨. ಧಾರವಾಡ, ವಿಜಾಪುರ ಜಿಲ್ಲೆಗಳಲ್ಲಿ ವಾಸವಾಗಿದ್ದು ಮರಾಠಿಯಲ್ಲಿ ಪರೀಕ್ಷೆ ಕೊಡಲಪೇಕ್ಷಿಸುವ ಉಮೇದವಾ

ರು ಬೆಳಗಾವ, ಕಾರವಾರ, ಸೊಲ್ಲಾಪೂರ ಮತ್ತು ಸಾತಾರಾ ಸೆಂಟರುಗಳಲ್ಲಿ ತಮಗೆ ಸಮೀಪವಾಗಿರುವ ಯಾವದೊಂದು ಸೆಂಟರಿನಲ್ಲಿ ದಕ್ಷಿಣಭಾಗದ ಎಜ್ಯುಕೇಶನಲ್ ಇನ್ಸಪೇಕ್ಟರರ ಪರವಾನಗಿ ಪಡಕೊಂಡು ಪರೀಕ್ಷೆಗೆ ಕೂಡ್ರಬಹುದು.

೨ ನೇ ಗ್ರೇಡ ಸರ್ಟಿಫಿಕೇಟ-ಶೆಡ್ಯೂಲ ಎ. ೨.

(೧) ಇಂಗ್ಲಿಷ—ಚೆಂಬರ್ಸ ಷಾರ್ಟ ಸ್ಟೋರೀಜ, ೩ನೇ ಸಿರಿಜದ ಮೊದಲಿನ ೩೦ ಪುಟಗಳು, ಇಲ್ಲವೆ ಟೇಲ್ಸಫ್ರಾಮ ಶೇಕ್ಸಪೀಯರ (ದಿ ಮರಚಂಟ ಆಫ ವ್ಹೇನಿಸ, ದಿ ಕಾಮೆಡಿ ಆಫ ಎರರ್ಸ, ಟಿಮನ್ ಆಫ ಅಥೆನ್ಸ, ರೊಮಿಯೊ ಅಂಡ ಜುಲಿಯಟ ಮತ್ತು ಕಿಂಗಲಿಯರ) ಗೋಲ್ಡಸ್ಮಿಥನ ಡೆಝರ್ಟೆಡ್ ವ್ಹಿಲೇಜದ ಮೊದಲಿನ ೪೦೦ ಪಙ್ಕ್ತಿಗಳು ಇಲ್ಲವೆ ಪೋಪ್ಸ ಹೋಮರ್ಸ ಇಲಿಯಡ ೨ ನೇ ಬುಕ್ಕು.

(೨) ಮರಾಠಿ—ಮಿ. ಚಿಪಳೂಣಕರಕೃತ ಅನೇಕ ವಿದ್ಯಾಮೂಲತತ್ವಸಂಗ್ರಹ.

(೩) ಕನ್ನಡ—ಸರಕಾರೀ ೬ನೇ ಪುಸ್ತಕದ ಪೂರ್ವಾರ್ಧ.

(೪) ಉರ್ದು—ಗುಲ್‌ದಸ್ತಾಯಿ ತಹಜೀಬ.

೩ ನೇ ಗ್ರೇಡ ಸರ್ಟಿಫಿಕೇಟ—ಶೆಡ್ಯೂಲ ಬಿ. ೨.

(೧) ಅಂಕಗಣಿತ ಸಂಪೂರ್ಣ, ಜಮಾಖರ್ಚು, ಯುಕ್ಲಿಡನ ಸಿದ್ಧಾಂತದ ೧ ನೇ ಪುಸ್ತಕ.

(೨) ಮರಾಠಿ—ವಾಚನಪುಸ್ತಕ-ಸರಕಾರೀ ೬ ನೇ ಪುಸ್ತಕ ಸಂಪೂರ್ಣ.

ಕವಿತೆ—ಮರಾಠಿ ಸರಕಾರೀ ೬ನೇ ಪುಸ್ತಕದೊಳಗಿನ ಮೊದಲಿನ ೩೦೦ ಪಙ್ಕ್ತಿಗಳನ್ನು ಬಾಯಪಾಠ ಅನ್ನುವದು. ಮತ್ತು ಅರ್ಥ ಹೇಳುವದು.

ಕನ್ನಡ ವಾಚನ ಪುಸ್ತಕ— ಸರಕಾರೀ ೬ನೇ ಪುಸ್ತಕ ಸಂಪೂರ್ಣ.

ಕವಿತೆ—ಸರಕಾರಿ ಕವಿತೆಯ ೨ ನೇ ಪುಸ್ತಕದ ೧೯-೨೦ ಮತ್ತು ೨೨ರಿಂದ ೨೬ ಪಾಠಗಳು ಸಂಪೂರ್ಣ ಬಾಯಪಾಠ ಅನ್ನುವದೂ ಅರ್ಥ ಹೇಳುವದೂ.

ಉರ್ದು—ಗುಲ್‌ದಸ್ತಾಯಿ, ತಹಜೀಬ.

ಟೀಪು—೧ ನೇ ಮತ್ತು ೨ ನೇ ಸದರುಗಳಲ್ಲಿಯ ವಿಷಯಗಳ ಗುಣಗಳು ಕೆಳಗೆ ಬರೆದಂತೆ.

೧ ನೇ ಸದರು—	(ಅ) ಅಂಕಗಣಿತ ...	೪೧
	(ಬ) ಯುಕ್ಲಿಡ್ (ಭೂಮಿತಿ)	೩೦
	(ಕ) ಜಮಾಖರ್ಚು ...	೩೦
	ಅಂತು	೧೨೦
೨ ನೇ ಸದರು—	(ಅ) ವಾಚನ ಕವಿತೆ ಮತ್ತು ವ್ಯಾಕರಣ	೭೫
	(ಬ) ಸ್ವೈಲು ಓದುವದು...	೨೫
		೧೦೦

ಧಾರವಾಡ
ತಾ. ೨೭-೧೦-೧೮೯೮. } B. R. Sahasrabudhe,
ಎ. ಇ. ದಕ್ಷಿಣಭಾಗ.

II

ರಾ|| ಕ್ಯುರೇಟರ ಗವ್ಹರ್ನಮೆಂಟ ಸೆಂಟ್ರಲ್ ಬುಕ್‌ಡಿಪೋ ಮುಂಬಯಿ ಇವರಿಂದ ತಿಳಿಸಲ್ಪಡುವದೇನಂದರೆ :—

ಸನ್ ೧೮೯೮ ನೇ ಇಸವಿಯ ನವಂಬರ ತಿಂಗಳ ಕೊನೆಗೆ ಕೆಳಗೆ ಬರೆದ ಪುಸ್ತಕಗಳು ಛಾಪಿಸಿ ಮಾರಾಟಕ್ಕೆ ಸಿದ್ಧವಾಗಿರುತ್ತವೆ.

ಕನ್ನಡ	ಬೆಲೆ
ಭೂಗೋಲ ಭಾಗ ೨	೦—೨—೦
ಭೂಗೋಲ ಭಾಗ ೩	೦—೪—೦
ಆರೋಗ್ಯಶಾಸ್ತ್ರ ಭಾಗ ೨	೧—೮—೦
ಸಂಸ್ಕೃತ.	
ಬಾಲಕಾಂಡ ರಾಮಾಯಣ	೦—೧೪—೦
ಭಟ್ಟಿಕಾವ್ಯ ೨ ನೇ ವ್ಹಾಲ್ಯುಮ	೬—೦—೦

ಮುಂಬಯಿ
ತಾ. ೨-೧೨-೯೮. } J. C. Dubash,
ಕ್ಯೂರೇಟರ ಗವರ್ನಮೆಂಟ ಸೆಂಟ್ರಲ್
ಬುಕ್‌ಡಿಪೋ ಮುಂಬಯಿ.

ಗ್ರಂಥ ವಾಚನ ಮಂದಿರ.
ಜಿ. ಧಾರವಾಡ.

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ॥
ಬಯಸುತ್ತಂ ಪ್ರತಿಮಾಸದಾದಿಗೊಳವಿಂದೀಪತ್ರಮಂ ಮುದ್ರಿಸಿ
ನಯದಿಂದಿತ್ತಪೆವೊಂದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ
ದಯೆಯಿಂದೋಷವತಿದ್ದುವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೩೫.] ಫೆಬ್ರುಅರಿ ೧೮೯೯. [ಸಂಚಿಕೆ ೨.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ದಕ್ಷಿಣ ಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ರಾ. ಸಹಸ್ರಬುದ್ಧೆ ಸಾಹೇಬರವರು ಎರಡೂವರೆ ತಿಂಗಳ ಹಕ್ಕಿನ ರಜೆಯನ್ನು ತೆಗೆದುಕೊಂಡದ್ದರಿಂದ ಅವರ ಸ್ಥಳಕ್ಕೆ ನೇಮಿಸಲ್ಪಟ್ಟ ರಾ. ಸಾ. ಕರಂದೀಕರ ಪ್ರಿನ್ಸಿಪಾಲ್ ಟ್ರೇನಿಂಗ ಕಾಲೇಜ ಇವರೂ, ಇವರ ಸ್ಥಳಕ್ಕೆ ನೇಮಿಸಲ್ಪಟ್ಟ ರಾ. ಸಾ. ರೊದ್ದ ಇವರೂ ತಮ್ಮ ಹೊಸ ಚಾರ್ಜುಗಳನ್ನು ಕಳೆದ ತಿಂಗಳ ೯ ನೇ ತಾರೀಖಿಗೆ ವಹಿಸಿಕೊಂಡರು.

ಕಳೆದ ದಿಶಂಬರ ತಿಂಗಳ ಸಂಚಿಕೆಯಲ್ಲಿ ಮಿ. ಜಮಸೇಟಜಿ ಎನ್. ಟಾಟಾ ಎಂಬ ಮುಂಬಯಿಯ ಧನಿಕರಾದ ಪಾರ್ಸೀ ಗೃಹಸ್ಥರು ನಮ್ಮಲ್ಲಿ ಬಿ. ಎ. ಎಮ್. ಎ. ಮೊದಲಾದ ಪದವಿಗಳನ್ನು ಹೊಂದಿದ ತರುಣರಿಗೆ ಅನೇಕ ಶಾಸ್ತ್ರಗಳ ಅಭ್ಯಾಸವನ್ನು ಇನ್ನೂ ಮುಂದೆ ಸಾಗಿಸುವದಕ್ಕೆ ಅನುಕೂಲವಾಗಬೇಕೆಂದು ಶಿಕ್ಷಣವನ್ನು ಕೊಡುವಂಥ ಹೊಸದೊಂದು ವಿದ್ಯಾಪೀಠದ ಸ್ಥಾಪನೆಗಾಗಿ ೩೦ ಲಕ್ಷ ರೂಪಾಯಿ ಬೆಲೆಯುಳ್ಳ ಆಸ್ತಿಯನ್ನು ಕೊಡಲುದ್ಯುಕ್ತರಾಗಿರುವ ಸಂಗತಿಯನ್ನು ತಿಳಿಸಿದ್ದೇವಷ್ಟೇ. ಈ ಹೊಸ ವಿದ್ಯಾಪೀಠದ ಸ್ಥಾಪನೆಯ ಕೆಲಸವನ್ನು ಕೊನೆಗಾಣಿಸುವದಕ್ಕಾಗಿ ನೇಮಿಸಲ್ಪಟ್ಟಂಥ

ಕಮಿಟಿಯು ತರ್ಫೆನಿಂದ ದಿ. ಆನರೆಬಲ್ ಮಿಸ್ತರ ಜಸ್ಟಿಸ ಕ್ಯಾಂಡಿ, ರೆವ್ಹ. ಡಾಕ್ಟರ ಮ್ಯಾಕೀಕನ್, ನಾಮದಾರ ಡಾಕ್ಟರ ಭಾಲಚಂದ್ರ ಇವರೇ ಮೊದಲಾದ ಪ್ರಮುಖ ಗೃಹಸ್ಥರು ಹೊಸದಾಗಿ ಹಿಂದುಸ್ಥಾನದ ಗವ್ಹರ್ನರ ಜನರಲ್‌ರಾಗಿ ನೇಮಿಸಲ್ಪಟ್ಟಂಥ ಲಾರ್ಡ ಕರ್ಝನ್ ದೊರೆಗಳು ಸ್ವಲ್ಪ ದಿವಸಗಳ ಹಿಂದೆ ಮುಂಬಯಿಯಲ್ಲಿ ಬಂದು ಇಳಿದಾಗ್ಗೆ ಅವರ ಸನ್ನಿಧಿಯಲ್ಲಿ ತಮ್ಮ ಆಲೋಚನೆಯನ್ನು ಅರಿಕೆ ಮಾಡಿಕೊಳ್ಳುವದಕ್ಕೆ ಹೋಗಿದ್ದರು. ಆಗ ಲಾರ್ಡ ಕರ್ಝನ್ ದೊರೆಗಳು ಅವರ ಆಲೋಚನೆಯನ್ನು ಕೇಳಿಕೊಂಡು, ಮಿ. ಟಾಟಾ ಇವರ ಔದಾರ್ಯವನ್ನು ಹೊಗಳಿ ಕೆಳಗೆ ಬರೆದ ಆಶಯದ ಸಂಭಾಷಣೆಯನ್ನು ಮಾಡಿದರು:—

“ ನೀವು ಮಾಡಿದ ಆಲೋಚನೆಗೆ ನಾನು ಈಗಲೇ ಕೊನೆಯ ಉತ್ತರವನ್ನು ಕೊಡಲಾರೆನಾದರೂ ನಿಮ್ಮ ಉದ್ದೇಶವನ್ನು ನಾನು ಮನಃಪೂರ್ವಕವಾಗಿ ಪ್ರೀತಿಸುತ್ತೇನೆ. ನೀವು ನಿವೇದಿಸಿದ ವಿಷಯವು ನನಗೆ ಸಂಪೂರ್ಣವಾಗಿ ಅವಗತವಾಗಿರುತ್ತದೆಂದು ಹೇಳಲಾರೆನಾದರೂ, ನಾನು ಅನೇಕ ವರ್ಷ ಹಿಂದುಸ್ಥಾನಕ್ಕೆ ಸಂಬಂಧಿಸಿದ ಪ್ರಶ್ನೆಗಳನ್ನು ವಿಮರ್ಶಿಸುತ್ತಿರುವವರಿಂದ ನನಗೆ ಈ ದೇಶದೊಳಗಿನ ವಿದ್ಯಾಪದ್ಧತಿಯ ಎರಡೂ ತುದಿಗಳಲ್ಲಿ ಕಿಂಡಿಗಳುಂಟೆಂಬದು ಮನವರಿಕೆಯಾಗಿರುತ್ತದೆ. ಇವುಗಳಲ್ಲಿ ಮೇಲ್ದುದಿಯ ಕಿಂಡಿಯನ್ನು ಮಿ. ಟಾಟಾ ಇವರು ತಮ್ಮ ಉದಾತತ್ವದಿಂದ ಮುಚ್ಚುವ ಅವಲವಿಕೆಯುಳ್ಳವರಾಗಿದ್ದಾರೆ. ನಿಮ್ಮ ಉದ್ದೇಶವನ್ನು ನಾನು ಅಂತಃಕರಣಪೂರ್ವಕವಾಗಿ ಪ್ರೀತಿಸುತ್ತೇನೆ.”

ಸನ್ ೧೮೯೭–೯೮ ನೇ ಸಾಲಿನ ವಿದ್ಯಾಖಾತೆಯ ಡೈರೇಕ್ಟರ ರಿಪೋರ್ಟು ಪ್ರಸಿದ್ಧವಾಗಿರುತ್ತದೆ. ಆದರಿಂದ ಅವತರಣಗಳನ್ನು ವಾಡಿಕೆಯ ಪ್ರಕಾರ ಮುಂದಿನ ಸಂಚಿಕೆಯಲ್ಲಿ ಕೊಡುವೆವು.

ಶಾಲೆಯ ಪಂಚರ (ಸ್ಕೂಲ ಕಮಿಟಿಯ) ಸಂಬಂಧದಿಂದ ಅದರೊಳಗೆ ಇರುವ ವಿವರವನ್ನು ಸಣ್ಣದಾದ್ದರಿಂದ ಇಲ್ಲಿ ಕೊಡುತ್ತೇವೆ.

“ ಈ ಕಮಿಟಿಗಳು ಮೊದಲು ೧೮೫೯ ನೇ ಇಸವಿಯಲ್ಲಿ ಸ್ಥಾಪಿ

ಸಲ್ಪಟ್ಟವು. ಅಂದರೆ ಇವತ್ತಿಗೆ ಇವು ಸ್ಥಾಪಿತವಾಗಿ ೨೦ ವರ್ಷಗಳಾದವು. ಆದರೂ ಇವುಗಳನ್ನು ಕುರಿತು ಐಕಮತ್ಯವಿರುವದಿಲ್ಲ. ಕೆಲವರು ಇನಸ್ಪೆಕ್ಟರರು ಅವುಗಳಿಂದೆ ಸಾಲೆಗೆ ಸಹಾಯವಾಗುತ್ತದೆಂದು ತಿಳಿಸುತ್ತಾರೆ. ಕೆಲವರು ಅವುಗಳಿಂದ ಯಾವ ಬಗೆಯ ಸಹಾಯವಾಗುವದಿಲ್ಲೆಂದು ಹೇಳುತ್ತಾರೆ. ಧಾರವಾಡದ ಡಿಪುಟಿ ಇನ್‌ಸ್ಪೇಕ್ಟರರು ಅವುಗಳನ್ನು ಕುರಿತು ಬರೆಯುವದೇನಂದರೆ— ಬೇರೆ ಬೇರೆ ಬಣಗಳ ಪಂಚರಿದ್ದರೆ ಅವರು ಸಾಲೆಗೆ ಹೋಗುವದೇ ಇಲ್ಲ. ಅಂಥ ಸ್ಥಳದಲ್ಲಿ ಗೌಡ ಕುಲಕರ್ಣಿಯರು ಸಹ ಸಾಲೆಗೆ ಹೋಗಿ ತಿಂಗಳಿಗೊಮ್ಮೆ ಬರೆಯತಕ್ಕ ಶರಾಗಳನ್ನು ಸಹ ಬರೆಯುವದಿಲ್ಲ. ಸಣ್ಣ ಹಳ್ಳಿಗಳಲ್ಲಿ ಗ್ರಾಮಸ್ಥರ ಮಕ್ಕಳು ಸಾಲೆಗೆ ಹೋಗುವವರೆಗೆ ಅವರು ಸಾಲೆಯ ಮಾಸ್ತರರಿಗೆ ಎಲ್ಲ ತರದಿಂದ ಸಹಾಯ ಮಾಡುತ್ತಾರೆ. ಅವರ ಮಕ್ಕಳು ಸಾಲೆಗೆ ಹೋಗುವಂಥವರಿರದಿದ್ದರೆ ಅವರು ಸಹಾಯ ಮಾಡುವದಿಲ್ಲ. ಕೇವಲ ನಿಯಮಕ್ಕನುಸರಿಸಿ ತಿಂಗಳಿಗೊಮ್ಮೆ ಸಾಲೆಗೆ ಹೋಗುತ್ತಾರಲ್ಲದೆ ಆ ನಿಯಮದ ಉದ್ದೇಶವನ್ನು ಕೊನೆಗಾಣಿಸುವದಿಲ್ಲ. ಅವರಲ್ಲಿ ಕೆಲವರು ತಾವು ಮಾಸ್ತರರ ಪರಿಷ್ಕಾಧಿಕಾರಿಗಳೆಂದು ತಿಳಿದು ಅವರನ್ನು ಒಂದು ಬಗೆಯಿಂದ ಗೋಳಾಡಿಸುತ್ತಾರೆ. ಕಲಘಟಗಿ ತಾಲೂಕಿನಲ್ಲಿ ಗ್ರಾಮಸ್ಥರು ವಾಡಿಕೆಯಾಗಿ ಸರಕಾರದಿಂದ ನೇಮಿಸಲ್ಪಟ್ಟವರಿದ್ದು ಬಹಳ ಮಾಡಿ ಆ ತಾಲೂಕಿನೊಳಗಿನ ದೊಡ್ಡ ಗ್ರಾಮಗಳಲ್ಲಿ ವಾಸ ಮಾಡುತ್ತಿರುವರು. ಅವರ ಮಕ್ಕಳು ಅವರ ಊರಲಿಯೇ ಇರುತ್ತಿರುವದರಿಂದ ಅವರು ಸಾಲೆಯ ಸಂಖ್ಯೆಯನ್ನೂ ಸ್ಥಿತಿಯನ್ನೂ ಸುಧಾರಿಸುವದಕ್ಕೆ ತಾವು ಕೆಲಸ ಮಾಡುವ ಊರ ಮಾಸ್ತರರಿಗೆ ಎಳ್ಳಷ್ಟಾದರೂ ಸಹಾಯ ಮಾಡುವದಿಲ್ಲ. ಆ ತಾಲೂಕಿನಲ್ಲಿಯ ಸಾಲೆಗಳಲ್ಲಿಯ ಸಂಖ್ಯೆಯು ಕಡಿಮೆ ಇರುವದಕ್ಕೆ ಇದೊಂದು ಮುಖ್ಯ ಕಾರಣವಾಗಿರುತ್ತದೆ. ಬೇರೆ ಬೇರೆ ಬಣಗಳಿದ್ದ ಊರುಗಳಲ್ಲಿ ಪ್ರತಿಯೊಂದು ಬಣದವರು ಮಾಸ್ತರರು ತಮ್ಮ ವಿರುದ್ಧ ಬಣದಲ್ಲಿ ಸೇರಿರುವರೆಂಬ ಸಂಶಯದಿಂದ ಆ ಮಾಸ್ತರನನ್ನು ತಮ್ಮಲ್ಲಿಂದ ವರ್ಗ ಮಾಡಿಸಬೇಕೆಂದು ಪ್ರಯತ್ನಿಸಿ ತಮ್ಮ ಮಕ್ಕಳನ್ನು ಸಾಲೆ ಬಿಡಿಸಿ ಮನೆಯಲ್ಲಿಟ್ಟುಕೊಳ್ಳುವರು. ಇದೇ ತಾಲೂ

ಕಿನ ಒಂದು ಹಳ್ಳಿಯೊಳಗಿನ ಒಬ್ಬ ಧನಿಕನಾದ ಗೌಡನ ಮಗನನ್ನು ನೇಮದಂತೆ ಸಾಲೆಗೆ ಬಾರದ್ದಕ್ಕಾಗಿಯೂ ಅಭ್ಯಾಸ ಮಾಡದೆ ಇದ್ದದ್ದಕ್ಕಾಗಿಯೂ ಮಾಸ್ತರನು ಶಿಕ್ಷಿಸಬೇಕಾಯಿತು. ಗೌಡನಿಗೆ ಈ ಸಂಗತಿ ತಿಳಿದ ಕೂಡಲೆ ಅವನು ಸಿಟ್ಟಿನಿಂದ ಸಾಲೆಗೆ ಹೋಗಿ ವಿದ್ಯಾರ್ಥಿಗಳ ಎದುರಿನಲ್ಲಿ ಮಾಸ್ತರನನ್ನು ಬಡೆದನು. ಮುಂದೆ ಫಿರ್ಯಾದಿಯಾಗಲು ಮಾಜಿಸ್ಟ್ರೇಟರು ಸಖ್ತ ತಾಕೀದ ಮಾಡಿದ ನಂತರ ರಾಜಿಯಾಯಿತು.”

ಸಾರಾಂಶ, ಸ್ಕೂಲ ಕಮಿಟಿಯಿಂದ ತಕ್ಕಷ್ಟು ಲಾಭವಿಲ್ಲೆಂದು ಬಹುಮತವಿದ್ದಂತೆ ತೋರುತ್ತದೆ. ಆದರೆ ಪಂಚರ ಸಹಾಯವನ್ನು ಪಡೆಯುವದು ಕೆಲವಂಶದಿಂದ ಮಾಸ್ತರನನ್ನು ಅವಲಂಬಿಸಿರುತ್ತದೆ. ತನ್ನ ಕೆಲಸವನ್ನು ಮನಃಪೂರ್ವಕವಾಗಿ ಉತ್ತಮ ರೀತಿಯಿಂದ ಮಾಡುವ ಮಾಸ್ತರನಿಗೆ ಸಹಾಯವು ತಪ್ಪದೇ ಸಿಗುವದು. ಅದನ್ನು ಕುರಿತು ಪೇಚಾಡುವ ಪ್ರಸಂಗವು ಅವನಿಗೆ ಬರಲಾರದು. ಕಾರಣ ಎಲ್ಲ ಮಾಸ್ತರರು ಯೋಗ್ಯ ರೀತಿಯಿಂದ ನಡೆದು ಸ್ಕೂಲ ಕಮಿಟಿಯವರಿಂದ ಸಹಾಯ ದೊರಕಿಸಿ ಮೇಲೆ ಬರದಂಥ ದೂರುಗಳಿಗೆ ಆಸ್ಪದ ಕೊಡಲಿಕ್ಕಿಲ್ಲೆಂದು ಆಶಿಸುತ್ತೇವೆ.

ಅಹಮ್ಮದನಗರದ ಔದ್ಯೋಗಿಕಶಾಲಾಗೃಹಪ್ರವೇಶ ಸಮಾರಂಭದ ಕಾಲದಲ್ಲಿ ಮಿ. ಡಾಯರೆಕ್ಟರ ಸಾಹೇಬರು ಮಾಡಿದ ಭಾಷಣವನ್ನು ಹೋದ ಸಂಚಿಕೆಯಲ್ಲಿ ಕೊಟ್ಟಿರುತ್ತೇವೆ. ಪ್ರಸ್ತುತದಲ್ಲಿ ನಡೆದಿರುವ ಶಿಕ್ಷಣಕ್ರಮದಲ್ಲಿ ತುಸು ಹೆಚ್ಚು ಕಡಿಮೆಯನ್ನು ಮಾಡಿ, ಔದ್ಯೋಗಿಕ ಶಿಕ್ಷಣಕ್ಕೆ ಅವಕಾಶವನ್ನು ಕೊಡುವದು ಅತ್ಯವಶ್ಯವಾದ ಸಂಗತಿಯೆಂದು ಅವರು ತಮ್ಮ ಭಾಷಣದಲ್ಲಿ ಸೂಚಿಸಿರುತ್ತಾರೆ. ಔದ್ಯೋಗಿಕ ಶಿಕ್ಷಣಕ್ಕೆ ಉಚ್ಚಶಿಕ್ಷಣವು ಬೇಡೆಂತಲ್ಲ; ಅದು ಇದ್ದಷ್ಟು ಒಳ್ಳೇದೇ ಸರಿ. ಆದರೆ ಎಲ್ಲರೂ ಒಂದೇ ಹಾದಿಯನ್ನು ಹಿಡಿದು, ಒಂದೇ ಬಗೆಯ ಹೋರೆಯನ್ನು ಕೈಕೊಳ್ಳುವದರಿಂದ ದೇಶದ ಉನ್ನತಾವಸ್ಥೆಗೆ ಅನುಕೂಲವಾಗದು. ಬೇರೆ ಬೇರೆ ಜನರು ತಮತಮಗೆ ಸಾಧ್ಯವಾಗುವಂಥ ಹೋರೆಗಳ

ನ್ನಾರಿಸಿಕೊಂಡು, ದೃಢನಿಶ್ಚಯದಿಂದ ಅವುಗಳನ್ನು ಹಿಂಬಾಲಿಸಬೇಕು. ಈ ತತ್ವವನ್ನು ಮನದಲ್ಲಿ ತಂದು ಟ್ರೇನಿಂಗಕಾಲೇಜದ ವಿದ್ಯಾರ್ಥಿಗಳಿಗೆ ಶಾಸ್ತ್ರಗಳ ಜ್ಞಾನವನ್ನು ತಕ್ಕಷ್ಟಾದರೂ ಮಾಡಿಕೊಡಬೇಕೆಂದು ಆಲೋಚಿಸಿ, ಅವರ ಅಭ್ಯಾಸಕ್ರಮದಲ್ಲಿ ರಸಾಯನಶಾಸ್ತ್ರವನ್ನೂ ಸೃಷ್ಟಪದಾರ್ಥವಿಜ್ಞಾನಶಾಸ್ತ್ರವನ್ನೂ ಸೇರಿಸಿರುತ್ತಾರೆ; ಯಾಕೆಂದರೆ, ಈ ಅಧ್ಯಾಪಕರ ಶಿಕ್ಷಣದಿಂದಲೇ ಜನರಲ್ಲಿ ಶಾಸ್ತ್ರಜ್ಞಾನದ ಅಭಿರುಚಿಯು ಬೆಳೆಯತಕ್ಕದ್ದುಂಟು. ಈ ಶಾಸ್ತ್ರಜ್ಞಾನದ ಅಭಿರುಚಿಯೇ ಔದ್ಯೋಗಿಕ ಶಿಕ್ಷಣಕ್ಕೆ ಮೂಲಾಧಾರವಾಗಿರುವದು. ಸೃಷ್ಟಪದಾರ್ಥವಿಜ್ಞಾನಶಾಸ್ತ್ರವು ಈ ಮೊದಲೇ ಕನ್ನಡಿಸಿ, ಅಚ್ಚು ಹಾಕಲ್ಪಟ್ಟಿರುತ್ತದೆ. ಆದರೆ ಈಗ ಮಿ. ರಾಸ್ಕೊ ಎಂಬವರು ರಚಿಸಿದ ರಸಾಯನಶಾಸ್ತ್ರದ ಚಿಕ್ಕ ಪುಸ್ತಕದ ಭಾಷಾಂತರವನ್ನು ಮಾತ್ರ ಇದರಡಿಯಲ್ಲಿ ಬರೆಯತೊಡಗುವೆವು.

ರಸಾಯನಶಾಸ್ತ್ರ.

ಬೆಂಕಿ, ಹವೆ, ನೀರು, ನೆಲ.

೧-ಈ ನಾಲ್ಕು ಪದಾರ್ಥಗಳನ್ನು ನಾವೆಲ್ಲರೂ ಬಲ್ಲೆವು. ಇವುಗಳ ವಿಷಯವಾಗಿ ರಸಾಯನಶಾಸ್ತ್ರವು ಏನು ಹೆಚ್ಚು ಹೇಳುತ್ತದೆ ನೋಡುವ:-

ಬೆಂಕಿ ಉರಿಯುವಾಗ ನಡೆಯುವ ಕಾರ್ಯಗಳನ್ನು ಗೊತ್ತು ಹಚ್ಚಿ ಹೇಳುವದೂ, ಹವೆಯು, ಉರಿಗೂ, ಸಸಿಗಳ ಬೆಳವಣಿಗೆಗೂ ಅನುಕೂಲಿಸುವ ಬಗೆಯನ್ನು ವಿವರಿಸುವದೂ, ನೀರಿನ ಘಟಕಗಳನ್ನು ಹೇಳುವದೂ, ಭೂಮಿಯನ್ನು ಅಗಿಅಗಿದಹಾಗೆ ಹೊರಡುವ ಒಡವೆಗಳನ್ನು ತಿಳಿಸುವದೂ ರಸಾಯನಶಾಸ್ತ್ರದ ಮುಖ್ಯೋದ್ದೇಶವಾಗಿರುತ್ತದೆ.

ಈ ಪದಾರ್ಥಗಳ ಅಧ್ಯಯನವು ಒಂದು ಬಗೆಯಿಂದ ಸೃಷ್ಟ್ಯಧ್ಯಯನವೆನಿಸುವದು; ಯಾಕೆಂದರೆ, ಈ ಪದಾರ್ಥಗಳು ನಮ್ಮ ಸುತ್ತಲು ಕಂಗೊಳಿಸುವ ಜಗತ್ತಿನಲ್ಲಿ ಅಂದರೆ ಸೃಷ್ಟಿಯಲ್ಲಿಯೇ ವರ್ತಿಸುತ್ತವೆ; ಇವುಗಳ ಸಂಬಂಧದಿಂದ ಸಾಮಾನ್ಯ ಜ್ಞಾನವಾದರೂ ಸೃಷ್ಟಿಯಲ್ಲಿಯೇ ಆಗುತ್ತದೆ. ಇವುಗಳನ್ನು ಕಣ್ಣಾರೆ ಕಂಡು, ತಕ್ಕೊಂಡು ದಿಟ್ಟಿಸಿ ನೋಡಿ

ಪರೀಕ್ಷಿಸಿ ಹೆಚ್ಚಿನ ಜ್ಞಾನವನ್ನಾದರೂ ಸೃಷ್ಟಿಯಲ್ಲಿಯೇ ಮಾಡಿಕೊಳ್ಳತಕ್ಕದ್ದು. ಈ ಸೃಷ್ಟಪದಾರ್ಥಗಳನ್ನು ಕಂಡು ತಕ್ಕೊಂಡು ದಿಟ್ಟಿಸಿ ನೋಡಿ ಪರೀಕ್ಷಿಸುವದಕ್ಕೆ ಪ್ರಯೋಗನೆಂಬ ಹೆಸರು. ಈ ಪ್ರಯೋಗಾವಲೋಕನಗಳೇ ನಮ್ಮ ಸುತ್ತು ವರ್ತಿಸುವ ಯಾವತ್ತು ಸಂಗತಿಗಳ ಜ್ಞಾನದ ಮೂಲಾಧಾರಗಳಾಗಿರುತ್ತವೆ. ಈ ಮಾರ್ಗಗಳಿಂದಲೇ ನಾವು ರಸಾಯನಶಾಸ್ತ್ರದ ಜ್ಞಾನ ಮಾಡಿಕೊಳ್ಳಬೇಕಾಗಿದೆ.

ನೀರಿನ ಘಟಕಗಳು ಯಾವವು? ಭೂಮಿಯನ್ನು ಅಗಿಯುತ್ತ ಹೋದಂತೆ ಸಿಕ್ಕುವ ಹೊಸ ಹೊಸ ಒಡಿವೆಗಳು ಯಾವವು? ಈ ಮುಂತಾದ ಸಂಗತಿಗಳನ್ನು ಸಮರ್ಪಕವಾಗಿ ಮನಗಾಣಿಸಿಕೊಡುವದೇ ರಸಾಯನಶಾಸ್ತ್ರದ ಉದ್ದೇಶವು.

ಇನ್ನು ಈ ಮನೋರಂಜಕವಾದ ಸಂಗತಿಗಳನ್ನು ತಕ್ಕಮಟ್ಟಿಗಾದರೂ ತಿಳುಕೊಳ್ಳಲಿಕ್ಕೆ ಯತ್ನಿಸುವಾ. ನಾವಿರುವ ಭೂಮಿಯು ಘನವಾಗಿರುತ್ತದೆ. ಅದರ ಪೃಷ್ಠಭಾಗದಲ್ಲಿ ಪರಿದಾಡುವ ನೀರು ಪ್ರವಾಹಿಯಾಗಿರುತ್ತದೆ. ಭೂಮಿಯನ್ನು ಸುತ್ತುಗಟ್ಟಿದ ಹವೆಯು ವಾಯುರೂಪಿಯಾಗಿರುತ್ತದೆ. ಈ ನೆಲ, ನೀರು, ಹವೆಗಳ ಸಾಮಾನ್ಯ ಧರ್ಮಗಳನ್ನು ನೀವು ತಕ್ಕಮಟ್ಟಿಗೆ ಬಲ್ಲಿರಿ. ಇವುಗಳ ಘಟಕಗಳನ್ನೂ ಘಟಕಪ್ರಮಾಣಗಳನ್ನೂ ಅರಿತುಕೊಂಡು ಹೆಚ್ಚಿನ ಜ್ಞಾನವನ್ನು ಸಂಪಾದಿಸುವದು ಪ್ರಸ್ತುತ ಕಾರ್ಯವಾಗಿರುವದು. ಈ ನಾಲ್ಕು ಒಡವೆಗಳಲ್ಲಿ ಒಳಿತಾಗಿ ಸೋಜಿಗಗೊಳಿಸುವ ಬೆಂಕಿಯನ್ನು ಕುರಿತು ಮೊದಲಿಗೆ ಆಲೋಚಿಸುವಾ.

ಬೆಂಕಿ.

(೧) ಮೇಣಬತ್ತಿಯು (ದೀಪವು) ಉರಿಯುತ್ತಿರುವಾಗ ನಡೆಯುವ ಕಾರ್ಯಗಳನ್ನು ನೋಡುವಾ.

ಮೇಣಬತ್ತಿಯು ಉರಿಯುತ್ತ ನಡೆದಂತೆ ಮೇಣವೂ ಬತ್ತಿಯೂ ತೀರುತ್ತ ಹೋಗಿ, ಕಡೆಯಲ್ಲಿ ತೀರ ಇಲ್ಲದಂತಾಗುತ್ತವೆಂಬದನ್ನು ನೀವು ಬಲ್ಲಿರಿ. ಆದರೆ ಅವು ಏನಾದವು? ಅವು ಕಾಣದಂತಾದವು ಅವು ಇಲ್ಲದಂತಾದವೋ? ನಮ್ಮ ಕಣ್ಣಿಗಂತೂ ಕಾಣದಂತಾದವು. ಆದರೆ ಅವು ನಿಜವಾಗಿ

ಸತ್ಯವಾದವೆಂದು ಹೇಳಕೂಡದು. ಕಡಲ ದಂಡೆಯಲ್ಲಿ ಕು ತಾಗ ದಂಡೆಯಿಂದ ಹೊರಟ ಹಡಗಗಳು ಕೆಲಹೊತ್ತಿನ ನಮ್ಮ ಕಣ್ಣುಮರೆಯಾಗುವವು. ಆದರೆ ಅವೆಲ್ಲ ನಾಶ ಹೊ ದಿದವೆಂದು ಬಗೆಯುತ್ತೀರೋ? ನೀರೊಳಗೆ ತುಸು ಸಕ್ಕ ಯನ್ನು ಚೆಲ್ಲಿದರೆ ಅದು ಕೂಡಲೆ ಕರಗಿ ಕಾಣದಂತಾದರ ಆ ನೀರನ್ನು ಕುಡಿಯಲು ನಾಲಿಗೆಯು ಅದರಲ್ಲಿ ಸಕ್ಕರೆಯು ಟೆಂಬುದನ್ನು ತಿಳಿಸುತ್ತದೆ. ಅಂದಬಳಿಕ ಮೊದಲಿಗೆ ಕಾ ದಂತಾದ ಸಕ್ಕರೆಯು ನಷ್ಟವಾಗಿಲ್ಲೆಂಬ ಸಂಗತಿಯು ನಿಜ ಲ್ಲವೋ? ಅದರಂತೆ ಈ ಉರಿದುಹೋದ ಮೇಣ, ಬತ್ತಿಗ ಇರವಾದರೂ ನಿಜವೆಂದು ತಿಳಿಯಬೇಕು. ಆದರೆ ಇದನ್ನ ಮನಗಾಣುವ ಬಗೆಯು ಮಾತ್ರ ಬೇರೆಯುಂಟು. ಕಳಕೊ ಡಲ್ಲಿ ಹುಡುಕಬೇಕೆಂಬ ನಾಣ್ಣುಡಿಯುಂಟಷ್ಟೇ. ನಮ್ಮ ಬ ವೆಗಳಾದ ಮೇಣ, ಬತ್ತಿಗಳು ಸೃಷ್ಟಿಯಲ್ಲಿಯೇ ಕಾ ದಂತಾಗಿವೆ. ಆದ್ದರಿಂದ ಆ ನಮ್ಮ ಬಡವೆಗಳೇನಾದವೆ ದು ಆ ಸೃಷ್ಟಿಯನ್ನೇ ಕೇಳೋಣ. ಸೃಷ್ಟಿಯು ಸಯುಕ್ತಿಕ ವಾದ ಪ್ರಶ್ನಕ್ಕೆ ತಪ್ಪದೆ ಸಮರ್ಪಕವಾದ ಉತ್ತರವನ್ನು ಕೊ ಡುತ್ತದೆ. ಆದರೆ ಅದಕ್ಕೆ ಬಾಯಿಯಿಲ್ಲ. ಆದ್ದರಿಂದ ಇಗೋ ಇದೊಂದು ಪ್ರಯೋಗವನ್ನು ಮಾಡುತ್ತೇನೆ. ಅದರಿಂದ ಏನು ಫಲಿತವಾಗುತ್ತದೆ ನೋಡಿರಿ. ಅದೇ ಸೃಷ್ಟಿಯ ಉತ್ತರವು.

ಪ್ರಯೋಗ—ಇವೆರಡು ಕಿರಿದಾದ (ಹತ್ತಿಯದಾದ) ಬಾಯುಳ್ಳ ದೊಡ್ಡ ಸೀಸೆಗಳುಂಟು. ಇವುಗಳನ್ನು ತೊಳೆದು ಜಳಜಳ ಮಾಡಿದ್ದೇನೆ. ಒಂದರೊಳಗೆ ಈ ಉರಿಯುವ ಮೇಣಬತ್ತಿಯನ್ನು ಹಿಡಿಯುತ್ತೇನೆ. ಇಗೋ ಮೊದಲು ತುಸು ಹೊತ್ತು ನಿಚ್ಚಳಾಗಿ ಉರಿಯುತ್ತಿದ್ದ ದೀಪವು ಬರಬರುತ್ತ ಮಂದವಾಗಹತ್ತಿದೆ. ಈಗಂತೂ ನಂದಿ ಹೋಯಿತು ಇದನ್ನು ನೀವು ಕಣ್ಣಾರೆ ನೋಡಿದಿರಿ. ಇನ್ನು ಈ ದೀಪವು ಯಾಕೆ ಆರಬೇಕೆಂಬುದನ್ನು ಅರಿತುಕೊಳ್ಳುವದು ಎರಡನೆಯ ಸಂಗತಿಯು. ಸೀಸೆಯಲ್ಲಂತು ಹವೆಯ ಹೊರ್ತು ಮತ್ತೊಂದಿಲ್ಲ. ಅದೇ ಹವೆಯು ಮೊದಲು ದೀಪ ಉರಿಯಲಿಕ್ಕೆ ನೆರ

ವಾಗ, ಹುಂಡುಗಡ ಅದನ್ನು ನಂದಿಸಲಿಕ್ಕೆ ಕಾರಣವೇನು? ಮೊದಲು ಅದರಲ್ಲಿದ್ದ ರಕ್ಷಕ ಗುಣಕ್ಕೆ ಬದಲಾಗಿ ಭಕ್ಷಕ ಗುಣವು ಹ್ಯಾಗೆ ಬಂತು? ಮೊದಲಿದ್ದ ಹವೆಯಿಂದ ಬೇರೆ ತರದ ಹವೆಯು ಅದರಲ್ಲಿರುವದೆಂಬುದು ನಿರ್ವಿವಾದವು. ಆದರೆ ಇದನ್ನು ಮನಗಾಣುವ ಬಗೆ ಯಾವದು? ಇಗೋ ನನ್ನ ಬಳಿಯಲ್ಲಿ ಈ ಸುಣ್ಣದ ತಿಳಿನೀರುಂಟು. ಇದನ್ನು ಈ ಮೊದಲನೆಯ ಸೀಸೆಯಲ್ಲಿಯೂ, ಎರಡನೆಯ ಸೀಸೆಯಲ್ಲಿಯೂ ಸುರುವುತ್ತೇನೆ. ನೋಡಿರಿ, ಎರಡನೆಯ ಸೀಸೆಯಲ್ಲಿಯ ನೀರು ಮೊದಲಿದ್ದಂತೆ ಇರುತ್ತವೆ. ಆದರೆ ಮೊದಲಿನ ಸೀಸೆಯೊಳಗಿನ ನೀರು ಕೂಡಲೆ ಹಾಲಿನಂತೆ ಬೆಳ್ಳಗಾಗಿರುತ್ತದೆ. ಇದರಿಂದ ಜ್ವಲನಕ್ರಿಯೆಯಿಂದ ಹವೆಯಲ್ಲಿ ಹೆಚ್ಚು ಕಡಿಮೆಯಾಯಿತೆಂಬುದು ಮೇಲೇ ಕಾಣುತ್ತದೆ. ಈ ತೋರುವ ಬಿಳುಪು ಖಡುವಿನದಲ್ಲದೆ ಮತ್ತೊಂದಲ್ಲ. ಖಡುವು ಸುಣ್ಣಕ್ಕೆ ಕಾರ್ಬಾನಿಕ್ ಆಸಿಡ್ ಗ್ಯಾಸಿನ ಸಂಯೋಗವಾಗಿ ಉಂಟಾಗಿರುತ್ತದೆ. ಕಾರ್ಬಾನಿಕ್ ಆಸಿಡ್ ಗ್ಯಾಸವು (ಅಂಗಾರಾಮ್ಲ ವಾಯುವು) ಹವೆಯಂತೆ ವರ್ಣಹೀನವಾದ ಅದೃಶ್ಯ ಪದಾರ್ಥವು. ಆದ್ದರಿಂದ ಇದನ್ನು ನಾವು ಕಣ್ಣಿನಿಂದ ನೋಡಲಾರೆವು. ಆದರೂ ಸುಣ್ಣದ ತಿಳಿನೀರು ಬೆಳ್ಳಗಾದದ್ದರಿಂದಲೂ, ದೀಪವು ಶಾಂತವಾದದ್ದರಿಂದಲೂ ಇದರ ಇರವನ್ನು ನಿಶ್ಚೈಸ ಸಮರ್ಥರಾಗಿದ್ದೇವೆ. ಮೇಣದ ಸ್ವಲ್ಪಭಾಗವು ಸುಟ್ಟು ಕಾರ್ಬಾನಿಕ್ ಆಸಿಡ್‌ಗ್ಯಾಸಿನ ರೂಪವನ್ನು ಧರಿಸಿತು. ಈ ಅದೃಶ್ಯವಾದ ವಾಯುವಿನಲ್ಲಿ ನಾವು ಕಾರ್ಬೊನ್ನವನ್ನು ಕಂಡುಕೊಳ್ಳಬಹುದು. ಕಾರ್ಬೊನ್ನಿನ ಕೆಲವು ಭಾಗವು ನಮಗೆ ಕಾಣದೆ ಹೊಗೆಯ ರೂಪದಿಂದ ಹಾರಿ ಹೋಗಿರುತ್ತದೆ ನೀವು ಒಂದು ಬಿಳೇ ಕಾಗದವನ್ನು ದೀಪದ ಕುಡಿಯಮೇಲೆ ಜಳ ತಾಕದಂತೆ ಹಿಡಿಯಿರಿ. ಅಂದರೆ ತುಸು ಹೊತ್ತಿನಲ್ಲಿ ಆ ಕಾಗದಕ್ಕೆ ವರ್ತುಲಾಕಾರವಾಗಿ ಹತ್ತಿದ ಕಾಡಿಗೆಯನ್ನು ಕಾಣುವಿರಿ. ಅದೇ ಕಾರ್ಬೊನ್ನು.

MANUAL OF METHOD.

ಶಿಕ್ಷಾಕ್ರಮ.

(೧೯ ನೇ ಪುಟದಿಂದ ಮುಂದೆ ಸಾಗಿದ್ದು.)

ಕಟ್ಟು—ಇದು ಶಿಕ್ಷಣಕ್ರಮದ ಮೂಲಾಧಾರವು; ಜೀವಕಳೆ ಎಂದರೂ ಸಲುವದು. ಇದು ಸೃಷ್ಟಿರಚನೆಯ ವ್ಯಾಪಾರಗಳಲ್ಲಿ ತಲೆದೋರುವ ಮೊದಲನೇ ತತ್ವವು. ನಮ್ಮ ಶಿಕ್ಷಣವಾದರೂ ಸೃಷ್ಟಿಶಿಕ್ಷಣಕ್ಕೆ ಅನುಗುಣವಾಗಿರುವದರಿಂದ ಇದನ್ನು ಶಾಲೆಯಲ್ಲಿಯೂ ಶಾಲೆಯ ಹೊರಗೂ ಅವಶ್ಯವಾಗಿ ಸಾಧಿಸಲಿಕ್ಕೆ ಬೇಕು. ಇದಿರದಿದ್ದರೆ ಸುಶಿಕ್ಷಣವು ಅಸಾಧ್ಯವು. ಕಾಲಶ್ರಮಗಳ ಅಪವ್ಯಯವಾಗದಂತೆ ಕೆಲಸ ಸಾಗಿಸಬೇಕಾದರೆ ಪ್ರತಿಯೊಂದು ಒಡವೆಯನ್ನು ಇಡುವ ಸ್ಥಳವನ್ನು ಗೊತ್ತುಮಾಡಿ ಆಯಾ ಸ್ಥಳದಲ್ಲಿ ಅದನ್ನು ಇಡಲೇಬೇಕು. ಅದೇ ಮೇರೆಗೆ ಆಯಾ ಕೆಲಸವನ್ನು ತಕ್ಕ ಕಾಲಕ್ಕೆ ಮಾಡಲಿಕ್ಕೇ ಬೇಕು. ಸಾರಾಂಶ, ಅಲ್ಪಶ್ರಮದಿಂದ ಅಲ್ಪಕಾಲದಲ್ಲಿ ಕಾರ್ಯ ಸಾಧ್ಯವಾಗಬೇಕಾದರೆ ಅಚ್ಚುಕಟ್ಟುತನವೂ ನಿರಾಲಸ್ಯವೃತ್ತಿಯೂ ಬೇಕು. ಈ ನಿಯಮಕ್ಕೆ ಕಟ್ಟೆಂಬ ಹೆಸರು. ಈ ಶಬ್ದದಿಂದ ತಕ್ಕ ಮನುಷ್ಯನು ತಕ್ಕ ಕೆಲಸವನ್ನು ತಕ್ಕ ಸ್ಥಳದಲ್ಲಿ ತಕ್ಕ ಕಾಲಕ್ಕೆ ತಕ್ಕ ರೀತಿಯಿಂದ ಮಾಡಬೇಕೆಂಬ ಮಾತು ಸೂಚಿತವಾಗುತ್ತದೆ.

ಈ ಗುಣವನ್ನು ಸಾಧಿಸುವ ಉಪಾಯ— ಶಿಕ್ಷಕನು ಕಟ್ಟುಗಳನ್ನು ಗೊತ್ತುಪಡಿಸಿ ಅದಕ್ಕೆ ಅನುರೂಪವಾಗಿ ವಿದ್ಯಾರ್ಥಿಗಳು ನಡೆಯುವಂತೆ ಎಚ್ಚರಪಡಬೇಕು. ಮೂಲತಃ ತಾನೇ ಕಟ್ಟಿನಂತೆ ನಡೆದು ಇಡೀ ಸಾಲೆಯನ್ನು ಕಟ್ಟುಗಳಂತೆ ನಡಿಸಲಿಕ್ಕೆ ಬೇಕು. ಶಾಂತವಾದ ನಡತೆಯವನೂ ಮಿತಮೃದು ಭಾಷಿಯೂ ಆಗಿ ತಾತ್ಸರ ಮಾಡದೆ ವಿದ್ಯಾರ್ಥಿಗಳನ್ನು ಕೈಕೆಳಗೆ ನಡಿಸಿಕೊಳ್ಳತಕ್ಕದ್ದು. ಅವನ ನಡಾವಳಿಯಲ್ಲಿಯೂ ಉಡಿಗೆತೊಡಿಗೆಗಳಲ್ಲಿಯೂ ಶಾಲಾವ್ಯವಸ್ಥೆಯಲ್ಲಿಯೂ ಎಲ್ಲಿ ನೋಡಿದಲ್ಲಿ ಈ ಗುಣವು ಸ್ಪಷ್ಟವಾಗಿ ಕಾಣುವಂತೆ ಇರಬೇಕು. ಅವನ ದೃಷ್ಟಿಯೂ ಶ್ರುತಿಯೂ ಚುರುಕಾಗಿರಬೇಕಲ್ಲದೆ ಅವನು ಜಾಣತನದಿಂದ ಈ ಗುಣವು

ವಿದ್ಯಾರ್ಥಿಗಳಲ್ಲಿ ಹುಟ್ಟುವಂತೆ ಮಾಡತಕ್ಕದ್ದು. ಬರೇ ಒತ್ತಾಯದಿಂದ ಈ ಗುಣವನ್ನು ಹುಟ್ಟಿಸಿದರೆ ತಕ್ಕಷ್ಟು ಪ್ರಯೋಜನವಾಗಲಾರದು. ಆದರೆ ವಿದ್ಯಾರ್ಥಿಗಳ ಮನೋವೃತ್ತಿಯನ್ನರಿತು ಅವುಗಳ ದ್ವಾರದಿಂದ ಅವರ ವಿಧೇಯತ್ವವನ್ನು ಕಾಯ್ದುಕೊಳ್ಳಲಿಕ್ಕೆ ಬೇಕು. ಅವನು ನಿಜವಾಗಿ ವಿದ್ಯಾರ್ಥಿಗಳ ಹಿತಚಿಂತಕನೆನಿಸಿ ಆಟದಲ್ಲಿಯೂ ಅಭ್ಯಾಸದಲ್ಲಿಯೂ ಅವರಿಗೆ ನೆರವಾಗುತ್ತ ಅವರ ಅಡಚಣಿಗಳನ್ನು ದೂರಮಾಡುತ್ತ ಕೆಟ್ಟ ನಡತೆಗಳನ್ನು ಬಿಡಿಸುತ್ತ, ಒಳ್ಳೇ ನಡತೆಗಳಿಗೆ ಪ್ರೋತ್ಸಾಹ ಕೊಡುತ್ತ ಅವರ ಪ್ರೀತಿಯ ಗಳಿಯನಾಗಿ ನಡಿಯತಕ್ಕದ್ದು. ವಿದ್ಯಾರ್ಥಿಗಳಿಗೆ ತಿಳಿಯುವಂಥ, ಪ್ರಯೋಜನವಾದಂಥ ನ್ಯಾಯವಾದ ನಿಯಮಗಳನ್ನು ಮಾಡಿ ಭೇದ ಬುದ್ಧಿ ಇಲ್ಲದೆ ಎಲ್ಲರೂ ಆ ನೇಮಗಳಿಗನುಸಾರವಾಗಿ ನಡೆಯುವಂತೆ ಮಾಡತಕ್ಕದ್ದು. ಈ ನಿಯಮಗಳನ್ನು ಆದಷ್ಟು ಪ್ರೀತಿಯಿಂದಲೇ ನಡಿಸಬೇಕಲ್ಲದೆ ಬಲುಮೆಯಿಂದ ನಡಿಸಕೂಡದು. ಬಲುಮೆಯಿಂದ ಕಾಲಹಾನಿಯೂ ಮನಸ್ತಾಪವೂ ಹುಟ್ಟುವದಲ್ಲದೆ ಕಾರ್ಯವಾಗುವದು ಅಪರೂಪ.

ಸಾಲೆಯ ಕೆಲಸಗಳಲ್ಲಿ ನಿಯಮಿತತನವೂ ತಕ್ಕಷ್ಟು ಸರೂಪತೆಯೂ ಬೇಕು. ಉದ್ಯೋಗಿತೆಯನ್ನು ಎಚ್ಚರದಿಂದ ಕಾಯ್ದುಕೊಳ್ಳಬೇಕು. ಮತ್ತು ವಿದ್ಯಾರ್ಥಿಗಳಿಗೆ ತಮ್ಮ ಕೆಲಸವನ್ನು ಶಾಂತರೀತಿಯಿಂದ ಮಾಡಲಿಕ್ಕೆ ಹಚ್ಚಬೇಕೇ ಹೊರ್ತು ಗದ್ದಲವಾಗಗೊಡಬಾರದು. ಶಾಲೆಯಲ್ಲಿ ತೀರ ಸದ್ದು ಇಲ್ಲದಂತಾಗುವದು ಅಸಾಧ್ಯವು; ಎಲ್ಲ ಹುಡುಗರು ತಮ್ಮ ತಮ್ಮ ಕೆಲಸವನ್ನು ಉತ್ಸಾಹದಿಂದ ಹೊತ್ತುಗಳೆಯದೆ ಮಾಡಹತ್ತಿದರೆ ಅಲ್ಪಸ್ವಲ್ಪ ಗುಣಗುಣ ಶಬ್ದವಾಗುವದು ಸ್ವಾಭಾವಿಕವು. ಈ ಶಬ್ದದಿಂದ ಶಾಲೆಗೆ ಭೂಷಣ ಉಂಟು. ಆದರೆ ಕೇವಲ ನಿಶ್ಶಬ್ದವಾದ ಶಾಲೆಯಲ್ಲಿ ಪ್ರೀತಿಗಿಂತ ಭೀತಿಯ ಅವಲಂಬನವನ್ನು ಶಿಕ್ಷಕನು ಹೆಚ್ಚಾಗಿ ಮಾಡುತ್ತಾನೆಂದು ನಿಃಶಂಕವಾಗಿ ಊಹಿಸಬಹುದು. ಕೆಲಸ ಮಾಡುವ ಸರಿಯಾದ ಮಾರ್ಗಗಳನ್ನು ಅಂದರೆ ಹದವನ್ನು ಹುಡುಗರಿಗೆ ತಿಳಿಸಿ ಆ ಮಾರ್ಗದಿಂದ ಅವರು ಹೋಗುವಂತೆ ಆಗ್ರಹಪೂರ್ವಕವಾಗಿ ಯತ್ನಿಸಬೇಕು. ವಿದ್ಯಾರ್ಥಿಗಳ ಕಾಗದ ಪಾಟಿಗಳು

ಚಂದವಾಗಿಯೂ ಸ್ವಚ್ಛವಾಗಿಯೂ ಮಾಟವಾಗಿಯೂ ಇದ್ದು ಅವುಗಳ ಮೇಲೆ ಮಾಡಿದ ಕೆಲಸವು ಸುವಾಚ್ಯವಾದದ್ದೂ ಅಚ್ಚುಕಟ್ಟಾದದ್ದೂ ಇರಲಿಕ್ಕೆಬೇಕು. ವಿದ್ಯಾರ್ಥಿಗಳನ್ನು ಕ್ರಮಗೊಳಿಸಿ ವರ್ಗದಲ್ಲಿ ಕೂಡಿಸಬೇಕು, ಮತ್ತು ಹಿರೇಮಣಿಗಳನ್ನು ನೇಮಿಸಿ ವ್ಯವಸ್ಥೆಯನ್ನು ಕಾಯ್ದುಕೊಳ್ಳಲಿಕ್ಕೆಬೇಕು. ವೇಳಾಪತ್ರಕವನ್ನು ನೇಮಕ್ಕೆ ಅನುಸಾರವಾಗಿ ರಚಿಸಿದರೆ ಅದರಿಂದಲೂ ಸಹಾಯವಾಗಬಹುದು. ಸಾರಾಂಶ, ವ್ಯವಸ್ಥಿತವಾದ ರಚನೆ, ವರ್ಗೀಕರಣ, ಮೇಲ್ವಿಚಾರಣೆ, ಶಾಲಾಸುಸ್ಥಿತಿ, ಹವೆ, ಬೆಳಕು, ಸಾಮಾನುಗಳ ಪೂರ್ತನೆ ಈ ಮೊದಲಾದ ಸಾಧನಗಳಿಂದ ಕಟ್ಟೆಂಬ ಗುಣವನ್ನು ಸಾಧಿಸಬಹುದು.

ತಂದೆ ತಾಯಿಗಳ ಸಹಾಯವು— ಈ ಸಹಾಯವು ಶಿಕ್ಕಷ್ಟ ಶಾಲಾಸುಸ್ಥಿತಿಗೆ ಪ್ರಯೋಜನವಾಗುವದು. ಅದ್ದರಿಂದ ಶಿಕ್ಷಕನು ವಿದ್ಯಾರ್ಥಿಗಳ ತಾಯಿತಂದೆಗಳ ಗುರ್ತನ್ನು ಅವಶ್ಯ ಮಾಡಿಕೊಳ್ಳತಕ್ಕದ್ದು. ಈ ಸಂಬಂಧದಿಂದ ಖಂಡಿತವಾದ ನೇಮಗಳನ್ನು ಹೇಳುವದು ದುಸ್ಸಾಧ್ಯವು. ತಮತಮಗೆ ಅನುಕೂಲವಿದ್ದಂತೆ ಹೊತ್ತು ಸಾಧಿಸಿ ಶಿಕ್ಷಕರು ಈ ಸಹಾಯವನ್ನು ಪಡೆಯತಕ್ಕದ್ದು. ಆದರೂ ಕೆಲವು ನಿಯಮಗಳನ್ನು ಇದರಡಿಯಲ್ಲಿ ಬರೆಯುತ್ತೇವೆ. ಅವುಗಳಿಂದ ಎಲ್ಲರಿಗೂ ಒಂದೇ ಸಮನೇ ಪ್ರಯೋಜನವಾದೀತೆಂದು ಹೇಳಲಾರೆವು. ಶಿಕ್ಷಕರು ಅವುಗಳನ್ನು ಅನುಕೂಲತೆಯ ಮೇರೆಗೆ ಕೈಕೊಂಡು ಕಾರ್ಯ ಸಾಧಿಸತಕ್ಕದ್ದು. ಆ ನಿಯಮಗಳು ಯಾವವೆಂದರೆ:—

(೧) ಪತ್ರವ್ಯವಹಾರ— ಈ ಸಾಧನವನ್ನು ಸಾರ್ವತ್ರಿಕವಾಗಿ ಕೈಕೊಳ್ಳಲಿಕ್ಕೆ ಮಾರ್ಗವಿಲ್ಲ. ಅಷ್ಟು ಖರ್ಚ ಮಾಡಲಿಕ್ಕೂ ಅಷ್ಟು ಹೊತ್ತು ಕಳೆಯಲಿಕ್ಕೂ ಹಣವೂ ಸಹಾಯಕರೂ ದೊರೆಯುವದು ಕಷ್ಟ. ಆದರೆ ಪ್ರಸಂಗೋಪಾತ್ತಾಗಿ ವಿಚಾರದಿಂದ ಈ ಸಾಧನವನ್ನು ಕೈಕೊಂಡರೆ ಬಹಳ ಪ್ರಯೋಜನವಾಗಬಹುದು.

(೨) ಸಂದರ್ಶನ—ಶಿಕ್ಷಕರು ಸ್ವತಃ ಹೋಗಿ ವಿದ್ಯಾರ್ಥಿ

ಗಳ ತಾಯಿತಂದೆಗಳಿಗೆ ಭೆಟ್ಟಿಯಾಗುವದರಿಂದಲೂ ಅವರನ್ನು ಭೆಟ್ಟಿಗೆ ಬರಗೊಡುವದರಿಂದಲೂ ಬಹಳ ಪ್ರಯೋಜನವಾಗುವದು ಸರಿ. ಆದರೆ ಇದಕ್ಕೂ ಕಾಲಮರ್ಯಾದೆಯುಂಟು.

(೩) ಶಾಲೋತ್ಸವಗಳು— ಇಷ್ಟಕಾರ್ಯಸಿದ್ಧಿಗೆ ಈ ಉತ್ಸವಗಳಿಂದ ಬಹಳ ಸಹಾಯವಾಗುವದು; ಸಂವಾದ, ಸಂಭೋಜನ, ಬಕ್ಷೀಸ ಸಮಾರಂಭ ಮುಂತಾದ ಉತ್ಸವಗಳು ಇಷ್ಟಕಾರ್ಯಕ್ಕೆ ಬಹಳವಾಗಿ ಅನುಕೂಲಿಸುತ್ತವೆ. ಇಂಥ ಸಮಾರಂಭಗಳಿಗೆ ತಾಯಿತಂದೆಗಳು ಆದರದಿಂದ ಹೋಗುವರು; ಮತ್ತು ಆ ಪ್ರಸಂಗದಲ್ಲಿ ಶಿಕ್ಷಕರಿಗೆ ಅವರ ಗುರ್ತು ಸಹಜವಾಗಿ ಆಗುವದು. ಆ ಜನರಿಗಾದರೂ ಶಿಕ್ಷಕನ ಸೌಜನ್ಯವೂ ಗೃಹಸ್ಥತನದ ರೀತಿಯೂ ಒಳಿತಾಗಿ ಗೊತ್ತಾಗಿ ಪ್ರೇಮದ ಬಳಿಕೆಯು ತಲೆದೋರುವದು. ಈ ಸಾಧನವು ಶ್ರೇಷ್ಠವಾದದ್ದೆಂದು ಅನುಭವದಿಂದ ಗೊತ್ತಾಗಿದೆ. ಇದನ್ನು ಶಿಕ್ಷಕರು ಕೂಡಿದಷ್ಟು ಕೈಕೊಳ್ಳತಕ್ಕದ್ದು. ಇದರಿಂದ ಶಾಲಾವ್ಯವಸ್ಥೆಯು ಸುಲಭತರವೂ ತಾಯಿತಂದೆಗಳ ಸಹಾಯವು ದೃಢತರವೂ ವಿದ್ಯಾರ್ಥಿಗಳ ಪ್ರೇಮವು ಬಲವತ್ತರವೂ ಆಗುವದು.

(೪) ವಾಸ್ತವ್ಯ—ತಮ್ಮ ಸಾಲೆಗೆ ಬರುವ ಹುಡುಗರ ಮಧ್ಯದಲ್ಲಿ ಹೋಗಿ ಮನೆ ಮಾಡಿಕೊಂಡಿರುವದರಿಂದ ಆ ಹುಡುಗರ ತಂದೆತಾಯಿಗಳ ಗುರ್ತಾಗಲಿಕ್ಕೆ ಒಂದು ಶ್ರೇಯಸ್ಕರವಾದ ಮಾರ್ಗವಿರುತ್ತದೆ. ಹಳ್ಳಿಗಳಲ್ಲಿ ಈ ರೀತಿ ಮಾಡುವದು ಕಷ್ಟವಲ್ಲ. ಆದರೆ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಈ ಸಾಧನವು ಎಲ್ಲರಿಗೂ ಸಾಧ್ಯವಾಗಲಾರದು.

(೫) ಸ್ಥಾನಿಕ ವ್ಯವಹಾರಗಳು—ಶಿಕ್ಷಕನು ತಾನಿದ್ದ ಊರಲ್ಲಿ ನಡೆಯುವ ಕೆಲಸಗಳಲ್ಲಿ ಮನಸ್ಸು ಹಾಕಲಾಗಿ ಆ ಊರ ಜನರ ಪರಿಚಯವು ಸಹಜವಾಗಿ ಆಗುತ್ತದೆ. ಈ ಹಿತಸಂಬಂಧದ ಕೆಲಸಗಳಲ್ಲಿ ಮನಸ್ಸು ಹಾಕಿ ಯೋಗ್ಯವಾದ ಉಪಾಯಗಳನ್ನು ತೋರಿಸಲಾಗಿ ಶಿಕ್ಷಕನ ಬಗ್ಗೆ ಪ್ರೇಮವು ಹುಟ್ಟುವದು ದುಸ್ತರವಲ್ಲ. ಇದರಿಂದ ಶಿಕ್ಷಕನ ಬಗ್ಗೆ ಇದ್ದ ಮಿಥ್ಯಾ

ಕಲ್ಪನೆಗಳು ಪೂರವಾಗುವವಲ್ಲದೆ, ಯಥಾರ್ಥಭಾವವು ನೆಲೆಗೊಂಡು ಜನರು ಅವನ ಕೂಡ ಪ್ರೀತಿಯಿಂದ ನಡೆಯುವದಲ್ಲದೆ ಅವನನ್ನು ಯಥೋಚಿತವಾಗಿ ಮನ್ನಿಸುವರು. ಆಯಾ ಊರಲ್ಲಿರುವ ಸಮಾಜಗಳಿಂದ ಈ ಕೆಲಸವನ್ನು ಶಿಕ್ಷಕರು ಸಾಧಿಸಬಹುದು. ಜನಹಿತ ಸಾಧಿಸುವ ಪ್ರಸಂಗಗಳನ್ನು ನಿರಪೇಕ್ಷ ಬುದ್ಧಿಯಿಂದ ಕೈಕೊಳ್ಳಲು ಸ್ನೇಹಿತರ ಸಂಖ್ಯೆಯು ಬೆಳೆದು ಶಿಕ್ಷಕನ ಅಧಿಕಾರವೂ ಯೋಗ್ಯತೆಯೂ ಬೆಳೆಯುವದು.

(೬) ಸ್ಥಾನಿಕ ವರ್ತಮಾನಪತ್ರಗಳು—ಈ ವರ್ತಮಾನ ಪತ್ರಗಳನ್ನು ಊರ ಜನರು ಅಂಪರೆ ವಿದ್ಯಾರ್ಥಿಗಳ ತಾಯಿತಂದೆಗಳಲ್ಲಿ ಎಷ್ಟೋ ಜನರು ಓದುತ್ತಾರೆ. ಅವುಗಳನ್ನು ಸ್ವಾಧೀನ ಮಾಡಿಕೊಂಡು ತನ್ನ ಶಾಲೆಯ ಸುಸ್ಥಿತಿಯನ್ನೂ ನೆರೆಯುವ ಸಭೆಗಳನ್ನೂ ಪ್ರಬುದ್ಧ ವಿದ್ಯಾರ್ಥಿಗಳಿಂದ ಆದ ಸಂಗತಿಗಳನ್ನೂ ಛಾಪಿಸುತ್ತ ಹೋದರೆ ಸದಭಿಪ್ರಾಯವು ಸಹಜವಾಗಿ ಹುಟ್ಟುವದು. ಪ್ರೇಮದ ಬಳಿಕೆಯು ಬೆಳೆಯುವದು, ಮತ್ತು ಪ್ರಸಂಗವಿಶೇಷಗಳಲ್ಲಿ ಜನಸಹಾಯವೂ ಶಿಕ್ಕುವದು

ತಿದ್ದುವಿಕೆಯ ಅವಾಂತರ ಸಾಧನಗಳು—ಸಾಲೆಯ ಹೊತ್ತಿನಲ್ಲಿಯಲ್ಲದೆ ಉಳಿದ ವೇಳೆಯಲ್ಲಿಯೂ ಹುಡುಗರ ನಡತೆಯನ್ನು ಲಕ್ಷವಿಟ್ಟು ನೋಡಿ ತಿದ್ದಿ ಅವರನ್ನು ಹಾದಿಗೆ ತರುವ ಯತ್ನವನ್ನು ಮಾಡುವದು ಮೇಲ್ತರದ ಶಾಲೆಯ ಲಕ್ಷಣವು. ಈ ತರದ ಸುಧಾರಣೆಯನ್ನು ಮೇಲಾದ ಶಿಕ್ಷಕರು ಬಗೆಬಗೆಯ ಉಪಾಯಗಳಿಂದ ಸಾಧಿಸಬಹುದು. ಅವುಗಳಲ್ಲಿ ಮುಖ್ಯವಾದವುಗಳು ಯಾವವೆಂದರೆ :—

(೧) ರಂಜನ -- ಇತ್ತಿತ್ತಲಾಗಿ ಕೆಲವರು ಮಾಸ್ತರರು ತಮ್ಮ ವಿದ್ಯಾರ್ಥಿಗಳನ್ನು ಹೊರಗೆ ಒಯ್ದು ಚೆಂಡು ಮುಂತಾದ ಆಟಗಳನ್ನು ಆಡಿಸುತ್ತಾರೆ. ಕೆಲವು ಸಾಲೆಯ ಮಾಸ್ತರರು ಇದಕ್ಕೂ ಹೆಚ್ಚು ವ್ಯವಸ್ಥೆಯನ್ನು ಮಾಡಿರುವರು. ಕೆಲವರು ಕ್ರಿಕೆಟ್ ಫೂಟ್‌ಬಾಲ ಮುಂತಾದ ಆಟಗಳನ್ನೂ ಆ ಸಂಬಂಧದ ಸಮಾಜಗಳನ್ನೂ ಸ್ಥಾಪಿಸಿರುವರು. ಕೆಲವರಂತೂ

ಸಂಚಾರಕ ಸಮಾಜವೆಂಬ ಸಂಸ್ಥೆಯನ್ನು ನಿರ್ಮಿಸಿ ವಾರಕ್ಕೊಮ್ಮೆ ವಿದ್ಯಾರ್ಥಿಗಳ ಸಂಗಡ ಅಡವಿಯಲ್ಲಿ ತಿರಗಲಿಕ್ಕೆ ಹೋಗಿ ವನಸ್ಪತಿಗಳನ್ನೂ ಮೃಗಪಕ್ಷಿಗಳನ್ನೂ ಅವುಗಳ ಗುಣಧರ್ಮಾದಿಗಳನ್ನೂ ತಿಳಿಸಿಕೊಡುವರು. ಈ ಆಟಗಳನ್ನು ಸರಿಯಾಗಿ ಆಡಿಸಲಾಗಿ ಇವುಗಳಿಂದ ಶರೀರಸುಧಾರಣೆಯಾಗುವದಲ್ಲದೆ ನೀತಿಸುಧಾರಣೆಯಾದರೂ ಆಗುವದು. ಹೆಚ್ಚಿನ ಪ್ರತಿಯು ಕೆಲವು ಶಾಲೆಗಳಲ್ಲಿ ವಿದ್ಯಾರ್ಥಿಗಳ ಮನಸ್ಸುಧಾರಣೆಗಾಗಿ ಒಂದು ಪುಸ್ತಕಾಲಯವನ್ನು ಸ್ಥಾಪಿಸುವರು; ಅದರಿಂದ ವಾಚನಪ್ರೀತಿಯು ಬೆಳೆದು ಬುದ್ಧಿಶಿಕ್ಷಣಕ್ಕೆ ಒಳ್ಳೇ ಸಹಾಯವಾಗುವದು.

(೨) ಸಹಾಯ—ಶಿಕ್ಷಕರು ಯಾವಾಗಲೂ ತಮ್ಮ ವಿದ್ಯಾರ್ಥಿಗಳ ಹಿತವನ್ನು ಚಿಂತಿಸಿ ಅನುಕೂಲವಿದ್ದಾಗ ಅವರಿಗೆ ಕೆಲಸವನ್ನು ಕೊಡಿಸಿ ಅಥವಾ ದ್ರವ್ಯಸಹಾಯವನ್ನು ದೊರಕಿಸಿಕೊಟ್ಟು ಅಥವಾ ಬೇರೆ ರೀತಿಯಿಂದ ಅವರ ಕಲ್ಯಾಣವನ್ನು ಮಾಡಲಾಗಿ ವಿದ್ಯಾರ್ಥಿಗಳು ಅವರಲ್ಲಿ ದೃಢಭಕ್ತಿಯುಳ್ಳವರಾಗಿ ಅವನು ಹಾಕಿಕೊಟ್ಟ ಮಾರ್ಗದಿಂದ ನಡೆಯುವರು. ದೊಡ್ಡ ಊರುಗಳಲ್ಲಿ ಕೆಲ ವಿದ್ಯಾರ್ಥಿಗಳಿಗೆ ಊಟದ ವಾರಗಳ ಸಹಾಯವನ್ನೂ ಅರಿವಿಅಂಚಡಿಗಳ ಸಹಾಯವನ್ನೂ ಕೆಲವರಿಗೆ ಪುಸ್ತಕಗಳ ಸಹಾಯವನ್ನೂ ಬಿಟ್ಟಿಗೆ ದೊರಕಿಸಿಕೊಟ್ಟು ಅವರ ಇಹಪರ ಕಲ್ಯಾಣವನ್ನು ಸಾಧಿಸುವದು ಅಸಾಧ್ಯವಲ್ಲ. ಅನುಕೂಲವಿದ್ದಲ್ಲಿ ಬ್ಯಾಂಕುಗಳನ್ನು ಸ್ಥಾಪಿಸಿ ಮಿತವ್ಯಯದ ಚಟವನ್ನು ಬೆಳಸತಕ್ಕದ್ದು. ಕೆಲವು ಸಾವುಕಾರರ ಸ್ನೇಹವನ್ನು ಸಂಪಾದಿಸಿ, ತಮ್ಮಲ್ಲಿ ಕಲಿತ ವಿದ್ಯಾರ್ಥಿಗಳಿಗೆ ಚಾಕರಿಗಳನ್ನು ಕೊಡಿಸಬೇಕು.

ಶಿಕ್ಷೆ—(ಅ) ಅದರ ಮೆಟ್ಟುಗಳು— ಈ ವಿಷಯವು ಬಹಳ ಗಹನವಾದದ್ದೂ ತೊಡಕುಳ್ಳದ್ದೂ ಇರುತ್ತದೆ. ಇದನ್ನು ಕುರಿತು ಮತಭೇದವಾದರೂ ಉಂಟು ಇದರಿಂದ ಮನಸ್ತಾಪವಾಗುತ್ತದೆ ಕಾರಣ ಇದನ್ನು ಅವಶ್ಯವಿದ್ದಾಗ ಮಾತ್ರ ಕೊಡತಕ್ಕದ್ದು. ಇದನ್ನು ಇಷ್ಟಹೇತು ಸಾಧನಕ್ಕಾಗಿ ನಿರ್ವಾಹವಿಲ್ಲದಕ್ಕೆ ಕೊಡಬೇಕಾದ್ದರಿಂದ ಮತ್ತನ್ನ ಶಿಕ್ಷೆಗಳು ತೀರ ನಿಷ್ಪ್ರಯೋಜನವಾದಂಥವು. ವಿದ್ಯಾರ್ಥಿಗಳನ್ನು ತಪ್ಪು ಘಟಿ

ದ ಕೂಡಲೆ ಶಿಕ್ಷಿಸಕೂಡದು. ಅದೇಮೇರೆಗೆ ವಿದ್ಯಾರ್ಥಿಗಳಿಗೆ ಶಿಕ್ಷೆಯಾಗಲಿಕ್ಕಿಲ್ಲವೆಂಬ ಭರವಸವಿದ್ದಾಗ ಅಂದರೆ ತಮ್ಮಿಂದ ತಪ್ಪಾಗಿಲ್ಲವೆಂದು ಅವರಿಗೆ ತೋರುತ್ತಿರುವಾಗ ಶಿಕ್ಷೆ ಮಾಡಕೂಡದು. ದೊಡ್ಡ ಅಪರಾಧಗಳಿಗೆ ಮಾತ್ರ ಶಿಕ್ಷೆಯನ್ನು ಏಕಾಂತದಲ್ಲಿ ಮಾಡಬೇಕು. ಯಾವಾಗಲೂ ತಪ್ಪಿನ ಕಾರಣವನ್ನು ತಿಳಿಕೊಂಡು ಆ ಕಾರಣವು ಕೆಟ್ಟದಿದ್ದಾಗ ಮಾತ್ರ ಶಿಕ್ಷೆಯನ್ನು ಮಾಡತಕ್ಕದ್ದು. ಇಷ್ಟಾರ್ಥ ಸಿದ್ಧಿಯಾಗುವಂತೆ ವಿಚಾರದಿಂದ ಶಿಕ್ಷೆಯನ್ನು ಮಾಡಬೇಕಾದರೆ ಅನುಭವವು ಬೇಕು. ಹೊಸ ಮಾಸ್ತರರಿಗೆ ಈ ಅನುಭವವು ಕಡಿಮೆ ಇರುವದರಿಂದ ಅವರು ದೊಡ್ಡ ಶಿಕ್ಷೆಗಳ ಗೋಜಿಗೆ ಹೋಗಲೇಬಾರದು. ನಿಷ್ಕಾರಣವಾಗಿ ಕೊಟ್ಟ ಶಿಕ್ಷೆಗಳಿಂದ ಬಹಳ ಅಪಾಯವಾಗುತ್ತದೆ. ಅದರಿಂದ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ವೈಮನಸ್ಸು ಹುಟ್ಟುತ್ತದೆ. ಹುಡುಗರ ಚಟುವಟಿಕೆಯೂ ಉಲ್ಲಾಸವೂ ಕಡಿಮೆಯಾಗುತ್ತದೆ. ಎಲ್ಲ ತರದ ಶಿಕ್ಷಣಕ್ಕೆ ಅಡ್ಡಿಯಾಗುತ್ತದೆ. ಒಟ್ಟಿಗೆ ಮಾಸ್ತರರಿಗೂ ವಿದ್ಯಾರ್ಥಿಗಳಿಗೂ ಸುಖವಿಲ್ಲದಂತಾಗುವದು. ಸಾರಾಂಶ, ಶಿಕ್ಷೆಗಳನ್ನು ಆದಷ್ಟು ಕಡಿಮೆ ಅನಿವಾರ್ಯಪಕ್ಷದಲ್ಲಿ ಮಾತ್ರ ಕೊಡತಕ್ಕದ್ದು.

(೫)—ಶಿಕ್ಷೆ ಕೊಡಕೂಡದಂಥ ಸಂಗತಿಗಳು—ಬೆಂಥ್ಯಾಮನೆಂಬ ಪ್ರಸಿದ್ಧ ಗ್ರಂಥಕರ್ತನು ಕೆಳಗೆ ವಿವರಿಸಿದ ಕೆಲವು ಪ್ರಸಕ್ತಿಗಳಲ್ಲಿ ಶಿಕ್ಷೆಮಾಡಕೂಡದೆಂದು ಖಂಡಿತವಾಗಿ ತಿಳಿಸುತ್ತಾನೆ. ಅವು ಯಾವವೆಂದರೆ :—

(೧) ಶಿಕ್ಷೆಗೆ ಕಾರಣವಿಲ್ಲದಾಗ. (೨) ಶಿಕ್ಷೆ ಮಾಡಿದರೂ ಮಾಡದಿದ್ದರೂ ಫಲ ಒಂದೇ ಆಗುವ ಸಂಭವವಿದ್ದಾಗ. (೩) ಪ್ರಯೋಜನವಿಲ್ಲದಾಗ. (೪) ಅವಶ್ಯವಿಲ್ಲದಾಗ.

SELECTIONS FROM THE KARNATIK GAZETTEER.

ಕನ್ನಡ ಗೆಝೇಟಿಯರದಿಂದ ಅವತರಣಗಳು.

(೨೨ನೇ ಪುಟದಿಂದ ಮುಂದೆ ಸಾಗಿದ್ದು.)

ಸದಾಶಿವಗಡ— ಕಾರವಾರದ ಉತ್ತರಕ್ಕೆ ೩ ಮೈಲಿನ

ಮೇಲೆ, ಜ. ಸ. (೮೧) ೪೯೪೯. ಈ ಬಂದರವು ಕಾಳೀನದಿಯ ಮುಖದ ದಂಡೆಯಲ್ಲಿ ಇರುತ್ತದೆ. ಇದರ ಪಶ್ಚಿಮಕ್ಕೆ ಸಮುದ್ರದೊಳಗೆ ಸಣ್ಣ ಸಣ್ಣ ಗುಡ್ಡಗಳಂಥ ನಡುಗಡ್ಡೆಗಳಿರುತ್ತವೆ; ಅವುಗಳಲ್ಲಿ ದೇವಗಡ, ಕೂರ್ಮಗಡ, ಇವೆರಡು ಮುಖ್ಯ. ಈ ಊರಲ್ಲಿ ಮದ್ರಾಸ ಸರಕಾರದವರು ಮೊದಲು ಮಹಾಲ ಕಚೇರಿಯನ್ನೂ ದಂಡಿನ ಒಂದು ಕಂಪನಿಯನ್ನೂ ಇಟ್ಟಿದ್ದರು. ಕೆಲವು ಮನೆಗಳು ಎರಡಂತಸ್ತಿನವಿರುತ್ತವೆ. ಸರ್ ೧೮೮೧-೮೨ರ ಹಿಂದಿನ ೮ ವರ್ಷಗಳಲ್ಲಿ ಸರಾಸರಿಯಿಂದ ಪ್ರತಿ ವರ್ಷ ೯,೯೪,೩೬೦ ರೂಪಾಯಿಯ ಮಾಲು ಈ ಬಂದರದಿಂದ ಹೊರಗೆ ಹೋಯಿತು, ೧೨೪೬೦ ರೂಪಾಯಿಯ ಮಾಲು ಹೊರಗಿನಿಂದ ಬಂತು

ಈ ಊರಿನ ಬಳಿಯಲ್ಲಿ ಎರಡು ಗುಡ್ಡಗಳ ಮೇಲೆ ಕೋಟೆಗಳಿರುತ್ತವೆ. ಪಶ್ಚಿಮದ ಹೆಚ್ಚು ಎತ್ತರವಾದ (೨೦೦ ಫೂಟು) ಗುಡ್ಡದ ಮೇಲಿನ ಕೋಟೆಗೆ ಸದಾಶಿವಗಡವೆನ್ನುವರು. ಈ ಕೋಟೆಯ ಗೋಡೆಯನ್ನು ಕಲ್ಲು ಗಚ್ಚಿನಿಂದ ೨೦ ಫೂಟು ಎತ್ತರವಾಗಿಯೂ ೬ ಫೂಟು ದಪ್ಪಾಗಿಯೂ ಕಟ್ಟಿದ್ದಾರೆ. ಕೋಟೆಯ ಸುತ್ತು ಮುತ್ತು ಕಂದಕವೂ ಅಲ್ಲಲ್ಲಿಗೆ ಕೊತ್ತಳಗಳೂ ಇರುತ್ತವೆ; ಒಳಗಿನ ಕ್ಷೇತ್ರವು ಸುಮಾರು ೧೦ ಎಕರು ಆಗುವದು. ಇದಕ್ಕೆ ಬಾಲೇಕಿಲ್ಲೆಯೆನ್ನುವರು ಇದರ ಹೊರಗೆ ಆಯಕಟ್ಟಿನ ಸ್ಥಳದಲ್ಲಿ ಮೂರು ಸುತ್ತು ಗೋಡೆಗಳಿರುತ್ತವೆ. ಎಲ್ಲಕ್ಕೂ ಹೊರಗಿನ ಗೋಡೆಯು ನೀರೊಳಗೆ ಇರುತ್ತದೆ. ಕೋಟೆಯ ಮೇಲೆ ಹಲ ಕೆಲವು ತೋಫುಗಳಿರುತ್ತವೆ. ಆದರೆ ಅವಕ್ಕೆಲ್ಲ ಜಂಗು ಹತ್ತಿರುತ್ತದೆ ಕೋಟೆಯು ಬಹಳವಾಗಿ ಕೆಟ್ಟಿಲ್ಲ. ಕೋಟೆಯೊಳಗೆ ಮೇಲಾದ ನೀರಿನ ದೊಡ್ಡ ಬಾವಿಯುಂಟು. ಈ ಕೋಟೆಯನ್ನು ಸೋಂದೆಯ ಸದಾಶಿವನಾಯಕನೆಂಬ ಅರಸು ಕಟ್ಟಿಸಿದನೆಂದು ಕೆಲವರು ಹೇಳುತ್ತಾರೆ; ಬೇರೆ ಕೆಲವರು ಅವನ ಮಗ ಬಸವಲಿಂಗರಾಯನು ಕಟ್ಟಿಸಿದನೆಂದು ಹೇಳುತ್ತಾರೆ. ಈ ಕೋಟೆಗೂ ಎರಡನೇ ಸಣ್ಣ ಕೋಟೆಗೂ ನಡುವೆ ಒಬ್ಬ ಪೀರನ ಗೋರಿಯುಂಟು. ಆದರಿಂದ ಪೋರ್ತುಗೀಸರು ಇದಕ್ಕೆ ಪೀರನ ಕೋಟೆಯೆಂದೆನ್ನುವರು.

ಸದಾಶಿವಗಡವು ಮೊದಲಿನಿಂದ ಸ್ವಾದೆಯ ರಾಜ್ಯಕ್ಕೆ ಸೇರಿತ್ತು. ಸನ್ ೧೭೫೨ ರಲ್ಲಿ ಪೋರ್ತುಗೀಸರು ಇದನ್ನು ತಕ್ಕೊಂಡು ಭದ್ರ ಪಡಿಸಿದರು; ಆದರೆ ಮುಂದೆ ಎರಡು ವರ್ಷದ ಮೇಲೆ ಸ್ವಾದೆಯ ಅರಸನಿಗೆ ತಿರಿಗಿ ಕೊಟ್ಟರು. ಸನ್ ೧೭೬೩ರಲ್ಲಿ ಹೈದರನ ಸರದಾರನೊಬ್ಬನು ಇದನ್ನು ತಕ್ಕೊಂಡನು.

ಶಿವೆಗೀಗುಡ್ಡ—ಕಾರವಾಡದ ಈಶಾನ್ಯಕ್ಕೆ ೧೦ ಮೈಲಿನ ಮೇಲೆ, ೧೫೦ ಫೂಟು ಯೆತ್ತರವಾದ ಗುಡ್ಡವು. ಇದರ ಮೇಲೆ ಬಸವಣ್ಣನ ಗುಡಿಯೂ ಶೀ ನೀರಿನ ಕುಂಡವೂ ಉಂಟು. ಈ ಬಸವಣ್ಣನ ಜಾತ್ರೆಯಲ್ಲಿ ವೊಕ್ಕಲಿಗರು ಸೀಚ್ಚಣಿಕೆಯನ್ನು ಹಚ್ಚಿ ಗುಡ್ಡದ ಮೇಲೆ ಏರಿ ಹೋಗುವರು. ನೀರಿನ ಹೊಂಡದ ಬಳಿಯಲ್ಲಿ ಒಂದು ಬಂಡೆಯೊಳಗೆ ಎಣ್ಣೆಗೊಂಡವನ್ನು ಮಾಡಿದ್ದಾರೆ. ಜಾತ್ರೆಯಲ್ಲಿ ಅದರೊಳಗೆ ಎಣ್ಣೆಯು ತುಂಬಿ ಅದರೊಳಗೆ ಒಂದು ಹೊಸ ಹಚ್ಚಡದ ಹೋಳನ್ನು ಬತ್ತಿಯ ಹಾಗೆ ಹೊಸಿದು ಹಾಕಿ ಒಂದು ತುದಿಯನ್ನು ಅಂಚಿನ ಮೇಲೆ ಇಟ್ಟು ಅದಕ್ಕೆ ಉರಿ ಹಚ್ಚುವರು. ಈ ಕಕ್ಕಡವು ಬೆಳತನಕ ಉರಿಯುತ್ತದೆ.

ಶಿವೇಶ್ವರ — ಸದಾಶಿವಗಡದ ಉತ್ತರಕ್ಕೆ ೪ ಮೈಲಿನ ಮೇಲೆ ಇಲ್ಲಿ ಕೆಲವು ಈಶ್ವರನ ಗುಡಿಗಳೂ ಒಂದು ಸರಕಾರೀ ಶಾಲೆಯೂ ಉಂಟು. ಊರಿನ ಉತ್ತರಕ್ಕೆ ಗುಡ್ಡದ ಮೇಲೆ ಕೋಟೆ ಇತ್ತು. ಈ ಕೋಟೆಯನ್ನು ಸ್ವಾದೆಯ ಸದಾಶಿವ ನಾಯಕನ ಕೈಯಿಂದ ಹೈದರನು ಕಸುಕೊಂಡ ಬಳಿಕ ಮಹಾರಾಷ್ಟ್ರರಿಗೂ ಹೈದರನ ದಂಡಿನವರಿಗೂ ಇದರಲ್ಲಿ ಯುದ್ಧಗಳಾದವು ಇಂಗ್ಲಿಷ ಸರಕಾರದ ದಂಡಿನವರು ಸನ್ ೧೭೮೩ ರಲ್ಲಿ ಈ ಕೋಟೆಯನ್ನು ಕೆಡಹಿಸಿದರು. ಈಗ ಗೋಡೆ ಕಂದಕಗಳ ಗುರ್ತುಗಳು ಮಾತ್ರ ಉಳಿದವೆ

ಸಿದ್ದಾಪುರ—ಕಾರವಾಡದ ಪೂರ್ವಕ್ಕೆ ೩ ಮೈಲಿನ ಮೇಲೆ. ಇಲ್ಲಿ ಪೂರ್ವದಲ್ಲಿ ಒಬ್ಬ ಹಬ್ಬೂ ಜಾತಿಯ ಜಮೇದಾರನು ಇರುತ್ತಿದ್ದನೆಂದು ಹೇಳುತ್ತಾರೆ. ಈ ಊರಿನ ಬಳಿಯಲ್ಲಿ ಹಳೆ ಕೋಟೆಯೆಂತಲೂ, ಲಕಡೀ ಕೋಟೆಯೆಂತಲೂ ಎರ

ಮೇಲೆ, ಜ. ಸ. (೮೧) ೩೯೩೯. ಈ ಬಂದರವು ಕಾಳೀ ನದಿಯ ಮುಖದ ದಂಡೆಯಲ್ಲಿ ಇರುತ್ತದೆ. ಇದರ ಪಶ್ಚಿಮಕ್ಕೆ ಸಮುದ್ರದೊಳಗೆ ಸಣ್ಣ ಸಣ್ಣ ಗುಡ್ಡಗಳಂಥ ನಡುಗಡ್ಡೆಗಳಿರುತ್ತವೆ; ಅವುಗಳಲ್ಲಿ ದೇವಗಡ, ಕೂರ್ಮಗಡ, ಇವೆರಡು ಮುಖ್ಯ. ಈ ಊರಲ್ಲಿ ಮದ್ರಾಸ ಸರಕಾರದವರು ಮೊದಲು ಮಹಾಲ ಕಚೇರಿಯನ್ನೂ ದಂಡಿನ ಒಂದು ಕಂಪನಿಯನ್ನೂ ಇಟ್ಟಿದ್ದರು. ಕೆಲವು ಮನೆಗಳು ಎರಡಂತಸ್ತಿನವಿರುತ್ತವೆ. ಸನ್ ೧೮೮೧-೮೨ರ ಹಿಂದಿನ ೮ ವರ್ಷಗಳಲ್ಲಿ ಸರಾಸರಿಯಿಂದ ಪ್ರತಿ ವರ್ಷ ೯,೯೪,೫೬೦ ರೂಪಾಯಿಯ ಮಾಲು ಈ ಬಂದರದಿಂದ ಹೊರಗೆ ಹೋಯಿತು, ೧೨೪೬೦ ರೂಪಾಯಿಯ ಮಾಲು ಹೊರಗಿನಿಂದ ಬಂತು.

ಈ ಊರಿನ ಬಳಿಯಲ್ಲಿ ಎರಡು ಗುಡ್ಡಗಳ ಮೇಲೆ ಕೋಟೆಗಳಿರುತ್ತವೆ. ಪಶ್ಚಿಮದ ಹೆಚ್ಚು ಎತ್ತರವಾದ (೨೨೦ ಫೂಟು) ಗುಡ್ಡದ ಮೇಲಿನ ಕೋಟೆಗೆ ಸದಾಶಿವಗಡವೆನ್ನುವರು. ಈ ಕೋಟೆಯ ಗೋಡೆಯನ್ನು ಕಲ್ಲು ಗಚ್ಚಿನಿಂದ ೨೦ ಫೂಟು ಎತ್ತರವಾಗಿಯೂ ೬ ಫೂಟು ದಪ್ಪಾಗಿಯೂ ಕಟ್ಟಿದ್ದಾರೆ. ಕೋಟೆಯ ಸುತ್ತು ಮುತ್ತು ಕಂದಕವೂ ಅಲ್ಲಲ್ಲಿಗೆ ಕೊತ್ತಳಗಳೂ ಇರುತ್ತವೆ; ಒಳಗಿನ ಕ್ಷೇತ್ರವು ಸುಮಾರು ೧೦ ಎಕರು ಆಗುವದು. ಇದಕ್ಕೆ ಬಾಲೇಕಿಲ್ಲೆಯೆನ್ನುವರು. ಇದರ ಹೊರಗೆ ಆಯುಕಟ್ಟಿನ ಸ್ಥಳದಲ್ಲಿ ಮೂರು ಸುತ್ತು ಗೋಡೆಗಳಿರುತ್ತವೆ. ಎಲ್ಲಕ್ಕೂ ಹೊರಗಿನ ಗೋಡೆಯು ನೀರೊಳಗೆ ಇರುತ್ತದೆ. ಕೋಟೆಯ ಮೇಲೆ ಹಲ ಕೆಲವು ತೋಪುಗಳಿರುತ್ತವೆ. ಆದರೆ ಅವಕ್ಕೆಲ್ಲ ಜಂಗು ಹತ್ತಿರುತ್ತದೆ ಕೋಟೆಯು ಬಹಳವಾಗಿ ಕೆಟ್ಟಿಲ್ಲ. ಕೋಟೆಯೊಳಗೆ ಮೇಲಾದ ಶೀ ನೀರಿನ ದೊಡ್ಡ ಬಾವಿಯುಂಟು. ಈ ಕೋಟೆಯನ್ನು ಸ್ವಾದೆಯ ಸದಾಶಿವನಾಯಕನೆಂಬ ಅರಸು ಕಟ್ಟಿಸಿದನೆಂದು ಕೆಲವರು ಹೇಳುತ್ತಾರೆ; ಬೇರೆ ಕೆಲವರು ಅವನ ಮಗ ಬಸವಲಿಂಗರಾಯನು ಕಟ್ಟಿಸಿದನೆಂದು ಹೇಳುತ್ತಾರೆ. ಈ ಕೋಟೆಗೂ ಎರಡನೇ ಸಣ್ಣ ಕೋಟೆಗೂ ನಡುವೆ ಒಬ್ಬ ಪೀರನ ಗೋರಿಯುಂಟು. ಅದರಿಂದ ಪೋರ್ತುಗೀಸರು ಇದಕ್ಕೆ ಪೀರನ ಕೋಟೆಯೆಂದೆನ್ನುವರು.

ಸದಾಶಿವಗಡವು ಮೊದಲಿನಿಂದ ಸ್ವಾದೆಯ ರಾಜ್ಯಕ್ಕೆ ಸೇರಿತ್ತು. ಸನ್ ೧೭೫೦ ರಲ್ಲಿ ಪೋರ್ತುಗೀಸರು ಇದನ್ನು ತಕ್ಕೊಂಡು ಭದ್ರ ಪಡಿಸಿದರು; ಆದರೆ ಮುಂದೆ ಎರಡು ವರ್ಷದ ಮೇಲೆ ಸ್ವಾದೆಯ ಅರಸನಿಗೆ ತಿರಿಗಿ ಕೊಟ್ಟರು. ಸನ್ ೧೭೬೩ರಲ್ಲಿ ಹೈದರನ ಸರದಾರನೊಬ್ಬನು ಇದನ್ನು ತಕ್ಕೊಂಡನು.

ಶಿರ್ವೇಗುಡ್ಡ—ಕಾರವಾಡದ ಈಶಾನ್ಯಕ್ಕೆ ೧೦ ಮೈಲಿನ ಮೇಲೆ, ೧೫೦ ಫೂಟು ಯೆತ್ತರವಾದ ಗುಡ್ಡವು. ಇದರ ಮೇಲೆ ಬಸವಣ್ಣನ ಗುಡಿಯೂ ಶೀ ನೀರಿನ ಕುಂಡವೂ ಉಂಟು. ಈ ಬಸವಣ್ಣನ ಜಾತ್ರೆಯಲ್ಲಿ ವೊಕ್ಕಲಿಗರು ನಿಚ್ಚಣಿಕೆಯನ್ನು ಹಚ್ಚಿ ಗುಡ್ಡದ ಮೇಲೆ ಏರಿ ಹೋಗುವರು. ನೀರಿನ ಹೊಂಡದ ಬಳಿಯಲ್ಲಿ ಒಂದು ಬಂಡೆಯೊಳಗೆ ಎಣ್ಣೆಗೊಂಡವನ್ನು ಮಾಡಿದ್ದಾರೆ. ಜಾತ್ರೆಯಲ್ಲಿ ಅದರೊಳಗೆ ಎಣ್ಣೆಯು ತುಂಬಿ ಅದರೊಳಗೆ ಒಂದು ಹೊಸ ಹಚ್ಚಡದ ಹೋಳನ್ನು ಬತ್ತಿಯ ಹಾಗೆ ಹೊಸಿದು ಹಾಕಿ ಒಂದು ತುದಿಯನ್ನು ಅಂಚಿನ ಮೇಲೆ ಇಟ್ಟು ಅದಕ್ಕೆ ಉರಿ ಹಚ್ಚುವರು. ಈ ಕಕ್ಕಡವು ಬೆಳತನಕ ಉರಿಯುತ್ತದೆ.

ಶಿವೇಶ್ವರ—ಸದಾಶಿವಗಡದ ಉತ್ತರಕ್ಕೆ ೪ ಮೈಲಿನ ಮೇಲೆ ಇಲ್ಲಿ ಕೆಲವು ಈಶ್ವರನ ಗುಡಿಗಳೂ ಒಂದು ಸರಕಾರೀ ಶಾಲೆಯೂ ಉಂಟು. ಊರಿನ ಉತ್ತರಕ್ಕೆ ಗುಡ್ಡದ ಮೇಲೆ ಕೋಟೆ ಇತ್ತು. ಈ ಕೋಟೆಯನ್ನು ಸ್ವಾದೆಯ ಸದಾಶಿವ ನಾಯಕನ ಕೈಯಿಂದ ಹೈದರನು ಕಸುಕೊಂಡ ಬಳಿಕ ಮಹಾರಾಷ್ಟ್ರರಿಗೂ ಹೈದರನ ದಂಡಿನವರಿಗೂ ಇದರಲ್ಲಿ ಯುದ್ಧಗಳಾದವು ಇಂಗ್ಲಿಷ ಸರಕಾರದ ದಂಡಿನವರು ಸನ್ ೧೭೮೩ರಲ್ಲಿ ಈ ಕೋಟೆಯನ್ನು ಕೆಡಹಿಸಿದರು. ಈಗ ಗೋಡೆ ಕಂದಕಗಳ ಗುರ್ತುಗಳು ಮಾತ್ರ ಉಳಿದವೆ

ಸಿದ್ದಾಪುರ—ಕಾರವಾಡದ ಪೂರ್ವಕ್ಕೆ ೩ ಮೈಲಿನ ಮೇಲೆ. ಇಲ್ಲಿ ಪೂರ್ವದಲ್ಲಿ ಒಬ್ಬ ಹಬ್ಬೂ ಜಾತಿಯ ಜಮೀದಾರನು ಇರುತ್ತಿದ್ದನೆಂದು ಹೇಳುತ್ತಾರೆ. ಈ ಊರಿನ ಬಳಿಯಲ್ಲಿ ಪಳೆ ಕೋಟೆಯೆಂತಲೂ, ಲಕಡೀ ಕೋಟೆಯೆಂತಲೂ ಎರ

ಷು ಹಾಳು ಕೋಟೆಗಳಿವೆ. ಈ ಊರಿನ ಬಳಿಯಲ್ಲಿ ಕಾಳೀ ನದಿಯೊಳಗೆ ಮೊಸಳೆಗಳು ಬಹಳ.

(ಸಶೇಷ)

DEPARTMENTAL NOTICES.

ನೋಟೀಸುಗಳು.

ಸನ್ ೧೮೭೧ ನೇ ಇಸವಿಯ ಅಕ್ಟೋಬರ ತಿಂಗಳ ಕನ್ನಡ ಶಾಲಾಪತ್ರಕದ ೧೪ರಿಂದ ೧೬ನೇ ಪುಟಗಳಲ್ಲಿ ಛಾಪಿಸಿರುವ ನಿಯಮಗಳಂತೆ "ವರ್ಫಪ್ರೈಝು" ಎಂಬ ಇನಾಮುಗಳ ಸಲುವಾಗಿ ಪರೀಕ್ಷೆಯು ಕನ್ನಡದಲ್ಲಿ ಧಾರವಾಡ ಟ್ರೇನಿಂಗ ಕಾಲೇಜದೊಳಗೆ ತಾ॥ ೧೧ ನೇ ಡಿಸೆಂಬರ ಸನ್ ೧೮೯೯ನೇ ಇಸವಿಯ ದಿವಸ ಕೆಳಗೆ ಸಹಿ ಮಾಡಿದವರಿಂದ ತೆಗೆದುಕೊಳ್ಳಲ್ಪಡುವದು. ೪೦ ರೂಪಾಯಿಗಳ ಇನಾಮು ಒಂದು ಮತ್ತು ೨೦ ರೂಪಾಯಿಗಳ ಇನಾಮು ಒಂದು ಈ ಪ್ರಕಾರ ಎರಡು ಇನಾಮುಗಳು ಇರುವವು. ಈ ಪರೀಕ್ಷೆಗೆ ಕೂಡ್ರಲಿಚ್ಛಿಸುವ ಉಮೇದವಾರರು ತಾ॥ ೧ ನೇ ಡಿಸೆಂಬರ ಸನ್ ೧೮೯೯ ನೇ ಇಸವಿಯೊಳಗಾಗಿ ತಮ್ಮ ಅರ್ಜಿಗಳನ್ನು ಕೆಳಗೆ ಸಹಿ ಮಾಡಿದವರ ಕಡೆಗೆ ಕಳುಹಿಸಬೇಕು. ಪರೀಕ್ಷೆಯು ಮುಂಜಾನೆಯ ೧೧ ಗಂಟೆ (ಮದ್ರಾಸ ವೇಳೆ) ಗೆ ಸರಿಯಾಗಿ ಪ್ರಾರಂಭವಾಗುವದು.

ಧಾರವಾಡ } B. R. Sahasrabudhe,
ತಾ. ೭-೧-೧೮೯೯. } ಎ. ಇ. ದಕ್ಷಿಣಭಾಗ.

II

ಸರ್ಕ್ಯುಲರ ನಂಬರು ೨೪೯೬.

ಅಜಂ ಧಾರವಾಡ; ಜಿಲ್ಲೆಯೊಳಗಿನ ಯಾವತ್ತು ಸ್ಕೂಲ ಮಾಸ್ತರರಿಗೆ—ತಿಳಿಯಪಡಿಸುವದೇನಂದರೆ:—ಮಾಸ್ತರರಾಗಲಿ ಅಸಿಷ್ಟಂಟ ಮಾಸ್ತರರಾಗಲಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವರ್ಗಾಗಿ ಹೋದರೆ, ಅವರು ಚಾರ್ಜ ತೆಗೆದುಕೊಂಡ ಬಗ್ಗೆ ನಮ್ಮ ಕಡೆಗೆ ಮಾಡುವ ರಿಪೋರ್ಟಿನ ಕೂಡ ಅಡಿಯಲ್ಲಿ ಕೊಟ್ಟ ನಮೂನೆಯಂತೆ ಪತ್ರಿಕೆ ಮಾತ್ರಿ ಮಾಹಿತಿಯನ್ನು ತುಂಬಿ ಕಳುಹಬೇಕು, ತಪ್ಪಬಾರದು.

ನಂಬರು.	ಹೆಸರು.	ಮೊದಲಿನ ನೇಮಣೂಕು.	ಸಂಬಳ ರೂಪಾಯಿ.	ಈಗಿನ ನೇಮಣೂಕು.	ಸಂಬಳ ರೂಪಾಯಿ	ತಾರೀಖು ಮತ್ತು ವೇಳೆ.		ಎರಡು ಸ್ಥಳಗಳ ನಡುವಿನ ಅಂತರ (ಮೈಲು)		ಷರಾ. ಕಮೀಟದಾರರ ಸಹಿ.
						ಚಾರ್ಜ ಕೊಟ್ಟದ್ದು.	ಚಾರ್ಜ ತೆಗದು ಕೊಂಡದ್ದು.	ಲೋಹ ಮಾರ್ಗದಿಂದ.	ಕಾಲ ಮಾರ್ಗದಿಂದ.	

ಅಣ್ಣಿಗೇರಿ.
ತಾ॥ ೨೯ನೇ ನವಂಬರ ೧೮೯೮ ಇ.

S. K. Rodda.
ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೆಕ್ಟರ,
ಧಾರವಾಡ ಸಬ್ ಡಿವಿಜನ್.

ಜಾಹಿರಾತು.

ಜನರಲ್ ಡಿಪಾರ್ಟಮೆಂಟ,
ಮುಂಬಯಿಕೋಟೆ. ೫ನೇ ಡಿಸೆಂಬರ ೧೮೯೮.
ನಂಬರ ೬೬೪೬.

ಹಿಂದುಸ್ಥಾನ ಸರಕಾರಕ್ಕೆ ಕಳುಹಿಸಲ್ಪಟ್ಟ ಸ್ಟೇಟಸೆಕ್ರೆಟರಿಯವರ ಪತ್ರ ಸಾರ್ವಜನಿಕಖಾತೆ ನಂಬರ ೧೪೪ ತಾ॥

[illegible]ನೇ ಅಕ್ಟೋಬರ ೧೮೯೮ ನೇದು ಎಲ್ಲ ಜನರಿಗೆ ತಿಳಿಯುವದಕ್ಕಾಗಿ ಇದರಡಿಯಲ್ಲಿ ಕೊಟ್ಟಿರುತ್ತದೆ.

ಪಂಜಾಬದ ಫಿನಾನ್ಶಿಯಲ್ ಕಮಿಶನರರಾದ ಮಿಸ್ಟರ ಥಾರಬರ್ನ ಇವರು ಜೂನ ೨೮ ನೇ ತಾರೀಖಿನ ದಿವಸ ಸಿಮ್ಲಾದಲ್ಲಿ ಮಾಡಿದ ಸಂಭಾಷಣೆಗೆ ಸಂಬಂಧಿಸಿದ ನಿಮ್ಮ ೧೪ನೇ ಜುಲಾಯಿಯ ಪತ್ರವು ಫೋಟು ಕಾಗದಗಳ ಸಹಿತ ನನಗೆ ಬಂದು ಮುಟ್ಟಿದೆ.

೨. ಯುನಾಯಿಟೆಡ್ ಸರ್ವ್ಹೀಸ ಇನ್‌ಸ್ಟಿಟ್ಯೂಶನ್ ಎಂಬ ಸಂಘದ ಆಶ್ರಯದಿಂದ ಟೀರಾ ದೌಡಿನ ವಿಷಯವಾಗಿ ಆ ದಿವಸ ಓದಲ್ಪಟ್ಟ ನಿಬಂಧವನ್ನು ಕುರಿತು ಚರ್ಚೆ ನಡೆದಾಗ ಸರಕಾರದ ರಾಜನೀತಿ ಹಾಗೂ ರಾಜ್ಯಕಾರ್ಯಕ್ರಮ ಇವುಗಳನ್ನು ಕುರಿತು ಬುದ್ಧಿಪುರಸ್ಸರವಾದಂಥ, ತೀಕ್ಷ್ಣವಾದಂಥ ದೋಷಾರೋಪಣೆಗಳಿಂದ ಯುಕ್ತವಾದ ಭಾಷಣವನ್ನು ಮಿ ಥಾರಬರ್ನ ಇವರು ಈ ಪ್ರಸಂಗದಲ್ಲಿ ಮಾಡಿದರೆಂದು ಗೊತ್ತಾಗುತ್ತದೆ

೩. ಮಿ ಥಾರಬರ್ನ ಇವರ ಈ ಪ್ರಕಾರದ ಆಚರಣೆಯು ಅವರ ಮೇಲಧಿಕಾರಿಗಳ ಲಕ್ಷಕ್ಕೆ ತತ್‌ಕ್ಷಣಕ್ಕೆ ಪೂರ್ಣವಾಗಿ ಬಂತೆಂಬದರಲ್ಲಿಯೂ ಸಂಭಾಷಣೆಗೈದ ಎಂಟು ದಿವಸಗಳಲ್ಲಿ ಈ ಅವರ ನಡಾವಳಿಗಾಗಿ ಅವರು ತಮಗೆ ಉಂಟಾದ ಅತ್ಯಂತ ಪಶ್ಚಾತ್ತಾಪವನ್ನು ತೋರಿಸುವ ಅಗತ್ಯವು ಅವರಿಗೆ ಬಿತ್ತೆಂಬದರಲ್ಲಿಯೂ (ಏನೂ) ಆಶ್ಚರ್ಯವಿಲ್ಲ. ಈ ಬಿನ್ನಹವನ್ನು ಮನ್ನಿಸುವದು ನಿಮ್ಮ ಸರಕಾರಕ್ಕೆ ಯೋಗ್ಯವಾಗಿ ತೋರಿ ಪಂಜಾಬ ಸರಕಾರದ ದ್ವಾರಾ ಜುಲೈ ತಿಂಗಳ ೧೨ನೇ ತಾರೀಖಿನ ಪತ್ರದ ಮುಖಾಂತರವಾಗಿ ಕ್ಷಮಾಬಿನ್ನಹವನ್ನು ಅಂಗೀಕರಿಸಿದ ಬಗ್ಗೆ ಅವರಿಗೆ ತಿಳಿಸೋಣವಾದಂತ ಕಂಡುಬರುತ್ತದೆ.

೪. ಹೀಗಿರಲು ಮಿ ಥಾರಬರ್ನ ಇವರಿಗೆ ವ್ಯಕ್ತಿಮಾತ್ರ ಸಂಬಂಧವಾಗಿ ತಾಗುವಂತೆ ಈ ವಿಶೇಷ ಸಂಗತಿಯ ಬಗ್ಗೆ ಟೀಕೆಯನ್ನು ಮಾಡುವ ಉದ್ದೇಶವು ನನ್ನದಿಲ್ಲ. ಪ್ರತಿಯೊಬ್ಬ ಅಧಿಕಾರಿಗೆ ಸಾರ್ವಜನಿಕ ವಿಷಯಗಳ ಸಂಬಂಧವಾಗಿ ತನಗೆ ಸರಿಕಂಡ ಅಭಿಪ್ರಾಯ ಪಡಲಿಕ್ಕೂ ಆ ಅಭಿಪ್ರಾಯ

ಂತೆ ನಡಿಯಲಿಕ್ಕೂ ಸ್ವಾತಂತ್ರ್ಯ ಉಂಟೆಂಬ ತತ್ವವನ್ನು ನು ಪೂರ್ಣವಾಗಿ ಒಪ್ಪಿಕೊಂಡಾಗ್ಯೂ ಹಿಂದುಸ್ಥಾನದೊ ಗಿನ ಸರಕಾರೀ ನೌಕರರ ನಡಾವಳಿಯನ್ನು ಕುರಿತು ಸ ಕ್ಯಾರ್ವರ್ಥ ಯಂಗ ದೊರೆಗಳು ಉಲ್ಲೇಖಿಸಿದ ನೇಮಕ್ಕೆ ನ್ನ ಪೂರ್ಣ ಅನುಮತಿಯುಂಟೆಂಬದನ್ನು ಖಂಡಿತವಾಗಿ ಳಿಸುವದು ಯೋಗ್ಯವೆಂದು ನಾನು ತಿಳಿಯುತ್ತೇನೆ.

ಉಲ್ಲೇಖವು ಹ್ಯಾಗಂದರೆ :—

“ ಸರಕಾರದವರಿಂದ ವಿಚಾರಪೂರ್ವಕವಾಗಿ ಸಮ್ಮತಿಸಲ್ಪಟ್ಟ ರಾಜನೀತಿ ಅಥವಾ ರಾಜ್ಯಕಾರ್ಯಕ್ರಮವು ಇಂಥಾದ್ದೇ ಎಂದು ತಿಳಿದಿದ್ದು, ಅಥವಾ ನಂಬಿ; ಅದರ ವಿಷಯವಾಗಿ ದೋಷಾರೋಪಣೆಯನ್ನು ಮಾಡಲಿಕ್ಕೆ ಸರಕಾರೀ ನೌಕರಿಯಲ್ಲಿರುವ ಯಾವನಿಗಾದರೂ ಸ್ವತಂತ್ರತೆಯು ಇಲ್ಲವೆಂಬದು ಸ್ಪಷ್ಟವಾಗಿ ತಿಳಿಯಲ್ಪಡಬೇಕು. ಹಾಗೂ ತನ್ನ ಮನಸ್ಸಾಕ್ಷಿಯು ಪ್ರೇರಣೆಯೋ ಆಗಲಿ ಅಥವಾ ತನ್ನ ಅಭಿಪ್ರಾಯವು ನಿಜವಾದದ್ದೆಂಬ ಪೂರ್ಣ ನಂಬಿಗೆಯೋ ಆಗಲಿ ಇಂಥ ದೋಷಾರೋಪಣೆಯನ್ನು ಮಾಡಲಿಕ್ಕೆ ಸರಿಯಾದ ಕಾರಣವಾಗಲಾರದು.” ಇದಕ್ಕೂ ಹೆಚ್ಚಾಗಿ ನಾನು ತಿಳಿಸುವದೇನಂದರೆ, ಯಾವ ರಾಜನೀತಿಯ ಸಂಬಂಧವಾದ ವಿಷಯಗಳು ಸಾರ್ವಜನಿಕವಾದ ವಿವಾದಕ್ಕೆ ಒಳಗಾಗುವಂಥವಾಗಲಿ, ಒಳಗಾಗುವ ಸಂಭವವಿರುವಂಥವಾಗಲಿ ಇರುವವೋ ಅವುಗಳ ವಿಷಯವಾಗಿ ಬರಹದಿಂದಾಗಲಿ, ಸಂಭಾಷಣೆಯಿಂದಾಗಲಿ ಅಥವಾ ಬೇರೆ ಯಾವದೊಂದು ರೀತಿಯಿಂದಾಗಲಿ ತನ್ನ ಅಭಿಪ್ರಾಯವನ್ನು ಸರಕಾರೀ ನೌಕರನು ಸರ್ವ ಜನರಿಗೆ ತಿಳಿಸುವದು ಅಯೋಗ್ಯವಾದ ಸಂಗತಿಯು. ಸರಕಾರದವರು ಮಾಡಿದ ಕಟ್ಟಳೆಗಳು ಅವನ್ನು ಅಮಲು ಜಾರಿಯಲ್ಲಿ ತರುವಂಥ ಅಧಿಕಾರಿಗಳ ಮನಸ್ಸಿಗೆ ಬಾರದಿರುವಂಥ ಪ್ರಸಕ್ತಿಗಳು ಕೆಲಕೆಲವು ಸಾರೆ ಉಂಟಾಗುವದು ಅಪರಿಹಾರ್ಯವಾಗಿವೆ. ಇಂಥ ಪ್ರಸಂಗದಲ್ಲಿ ಮೇಲೆ ಹೇಳಿದ ಅಧಿಕಾರಿಗಳು ತಮ್ಮ ಮೇಲಧಿಕಾರಿಗಳಿಗೆ ತಮ್ಮ ಅಂಬೋಣವನ್ನು ಯೋಗ್ಯರೀತಿಯಿಂದ ತಿಳಿಸಿದ ತರುವಾಯ ಅವರು ಅನುಸರಿಸತ

ಕ್ಕೆ ಮಾರ್ಗಗಳು ಎರಡೇ ಇರುತ್ತವೆ. ಅವು ಯಾವವೆಂ
ರೆ:—ಜವಾಬದಾರರಾದ ಅಧಿಕಾರಿಗಳ ತೀರ್ಪುಗಳಿಗೆ ರಾ
ನಿಷ್ಠೆಯಿಂದಲೂ ಮೌನದಿಂದಲೂ ಒಪ್ಪಿಕೊಳ್ಳಬೇಕು. ಇ
ಲ್ಲದೆ ತಮ್ಮ ನೌಕರಿಗೆ ರಾಜೀನಾಮೆಯನ್ನು ಕೊಟ್ಟು ಬಿ
ಡಬೇಕು.

೨೪. ಇಂಡಿಯನ್ ಸಿವ್ಹಿಲ್ ಸರ್ವ್ಹಿಸ ಎಂಬ ಮುಲ್ಕೀಖಾ
ಯು ಕಾಮದಾರರು ತಮ್ಮ ತಮ್ಮ ಕೆಲಸಗಳನ್ನು ಬಹ
ರಾಜನಿಷ್ಠೆಯಿಂದಲೂ ಆಸಕ್ತಿಯಿಂದಲೂ ಮಾಡುತ್ತಾರೆಂ
ಬಗ್ಗೆ ನನ್ನಲ್ಲಿ ಉಂಟಾದ ಉತ್ತಮ ಅಭಿಪ್ರಾಯವನ್ನು ಬಹಿ
ರಂಗವಾಗಿ ಹೇಳುವಂಥ ಒಂದಕ್ಕಿಂತ ಹೆಚ್ಚು ಪ್ರಸಂಗಗಳ
ನನಗೆ ಇತ್ತಲಾಗಿ ಪ್ರಾಪ್ತವಾದದ್ದಕ್ಕಾಗಿ ನಾನು ಆನಂ
ಪಡುತ್ತೇನೆ. ಕಠಿಣವಾದಂಥ, ಚಿಂತಾಯುಕ್ತವಾದಂಥ ಪ್ರವ
ವುಳ್ಳ ಇತ್ತಲಾಗಿನ ಕೆಲವು ವರ್ಷಗಳಲ್ಲಿ ಅವರ ಈ ಗುಣ
ಗಳು ಸ್ಪಷ್ಟವಾಗಿ ಕಂಡು ಬಂದದ್ದಕ್ಕಿಂತ ಹೆಚ್ಚು ಸ್ಪಷ್ಟವಾ
ಗಿ ಎಂದೆಂದೂ ಕಂಡು ಬಂದಿದ್ದಿಲ್ಲ. ನಾನು ಮೇಲೆ ತೋ
ಸಿದ ಕಟ್ಟಳೆಗಳು ಅಸ್ತಿತ್ವದಲ್ಲಿ ಇರುತ್ತವೆಂಬದೂ ಅವುಗಳ
ಸಕ್ತಿಯಿಂದ ಅಮಲಿನಲ್ಲಿ ತರಲ್ಪಡುವವೆಂಬದೂ ಸ್ಪಷ್ಟವಾ
ತಿಳಿದಿರುವದರಿಂದ ಖಾತೆಯು ಕಾರ್ಯ ಸಾಮರ್ಥ್ಯವು ಬೆ
ಯುವದಕ್ಕೇ ಸಹಾಯವಾಗುವದು ನನ್ನ ಅಭಿಪ್ರಾಯ
ನ್ನು ಸರ್ವಸಾಧಾರಣವಾಗಿ ಎಲ್ಲ ಜನರಿಗೆ ತಿಳಿಯುವಂ
ಮಾಡಲಿಕ್ಕೂ ಈ ಸಾರೆ ಕ್ಷಮೆ ಮಾಡಲಿಕ್ಕೆ ಯೋಗ್ಯವೆಂದ
ತಾವು ತಿಳಿದಂಥ ತರದ ಅನುಚಿತವಾದ ಸಂಗತಿಗಳು ಮು
ದೆ ಪುನಃ ಎಂದೂ ಸಂಭವಿಸದಂತೆ ಮಾಡಲಿಕ್ಕೂ ತಕ್ಕ
ಉಪಾಯಗಳನ್ನು ತಾವು ಕೈಕೊಳ್ಳಬೇಕೆಂದು ನಾನು ಮಹ
ನುಭಾವರಾದ ತಮಗೆ ಬಿನ್ನವಿಸುತ್ತೇನೆ.

ಮೇಲೆ ಬರೆದ ಸರಕಾರದ ಠರಾವಿನ ಭಾಷಾಂತರವನ್
ಎಲ್ಲ ಶಿಕ್ಷಕರ ತಿಳುವಳಿಕೆ ಮತ್ತು ನಡಾವಳಿಗಾಗಿ ಪ್ರಕಟಿ
ರುತ್ತೇವೆ.

ಧಾರವಾಡ } B. R Sahasrabudhe,
ತಾ. ೧-೧-೧೮೯೯. } ಎ. ಇ. ದಕ್ಷಿಣಭಾಗ.

DHARWAR TRAINING COLLEGE ERTIFICATE EXAMINATION.–1897.

ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

೨ ನೇ ವರ್ಷದ ವರ್ಗ.—

ಭಾಷಾವಿಷಯ–ಕನ್ನಡ ಗದ್ಯಪದ್ಯ.

೧. "ಕನ್ನಡ ಜೈಮಿನಿ ಭಾರತದ" ಕರ್ತನು ಯಾರು? ವನು ಇದ್ದ ಕಾಲ, ಸ್ಥಳ, ಅವನ ಜಾತಿ, ಮತ ಇವುಗಳ ಷಯದಲ್ಲಿ ಕೂಡಿದ ಮಟ್ಟಿಗೆ ಜೈಮಿನಿಯೊಳಗಿನ ಆಧಾರ ಳನ್ನು ಕೊಟ್ಟು ಬರೆಯಿರಿ.

೨. ಕೆಳಗೆ ಬರಿದ ಶಬ್ದಗಳ ಅರ್ಥಗಳನ್ನು ಬರೆಯಿರಿ.

ತಳತಂತ್ರಂ, ನೋಂಪ್ರ, ಪ್ರೋಕ್ಷ, ಕೇಂದ್ರೋದ್ಗಮಗುಣ, ಏಕಸಮಯಾವಚ್ಛೇದದಿಂದ, ಪ್ರಸ್ತರೀಭೂತಶಿಲೆ, ರೆಷೇವಡೆಯು, ತೆಗೆಬಗೆಯಾಗು, ಅಕ್ಷಯ ಬತ್ತಳಿಕೆ, ವೃಷಳೀರಮಣ.

೩. ಕಾಮನಬಿಲ್ಲು, ಅರೋರಾಬೋರಿಯಾಲಿಸ (ಉತ್ತರತೇಜ), ನ್ಯಸ್ತಾವಶೇಷಗಳು, ಪ್ರತಿಮಾಕೇಂದ್ರ, ಕೇಂದ್ರ ಇವುಗಳ ವಿಷಯದಲ್ಲಿ ನಿಮಗೆ ಗೊತ್ತಿದ್ದದ್ದನ್ನು ಸ್ವಲ್ಪದರಲ್ಲಿ ಬರೆಯಿರಿ.

೪. ಜಲಶಿಲೆಗಳ ಜ್ಞಾನದಿಂದ ತಿಳಿಯುವ ಭೂಮಿಯ ಇತಿಹಾಸವನ್ನು ಬರೆಯಿರಿ.

೫. ಗ್ರಹಗಳ ಮೇಲೆ ಪ್ರಾಣಿಗಳೂ ವನಸ್ಪತಿಗಳೂ ಉಂಟೋ ಇಲ್ಲವೋ ಎಂಬ ಬಗ್ಗೆ ಸಾಧಕ ಬಾಧಕ ಪ್ರಮಾಣಗಳನ್ನೂ ಈಗಿನ ಜ್ಯೋತಿಷಜ್ಞರ ನಿರ್ಣಯವನ್ನೂ ಬರೆಯಿರಿ.

೬. ಕೆಳಗೆ ಬರೆದ ವಾಕ್ಯಗಳ ಮತ್ತು ವಾಕ್ಯಾಂಶಗಳ ರ್ಥವನ್ನೂ ಅವುಗಳಲ್ಲಿ ಕೆಳಗೆ ಗೆರೆ ಹಾಕಿದ ಭಾಗಗಳಲ್ಲಿ ರುವ ಅಲಂಕಾರಗಳ ಹೆಸರುಗಳನ್ನೂ ಲಕ್ಷಣಗಳನ್ನೂ ಬರೆಯಿರಿ.

(೧) ಸಾಗರದ ಮಧ್ಯದಿಂದೆದ್ದುದೋಷಮತ್ತೊಂದು

ಸಾಗರಂ ಪೋಳಿಂಬೊಲಖಿಳ, ಯಾದವ ಕಟಕ
ಸಾಗರಂ ಪೊರಮಟ್ಟು ನಡೆಗೊಂಡುದು.

(೭) ಪೊಳವಮಿಂಚುಗಳ್ಪೆಸೆತೇಜೆಗಳಿವಲ್ಲ ಕೆಂಗೋಳಿಪ
ಕಾರ್ಮುಗಿಲ್ಪೆಸೆಕೃಷ್ಣನಲ್ಲೆಂಬ ಪೋಲ್ಕಳುಗುಳಕೆ
ಮೈದೋರೆಕಂಡು ಕಲಿಸಿಂಹದಂತಿದಿರಾದನನು ಸಾ
ಲ್ವನು.

(೮) ಕರವೀರವರ್ಗಮಂ ಬಾಗಿಸಿದರಥಟರಂತೆ ಪಾ
ರಿಯು ನರಸಿ ಪಿಡಿದುರವಣಿಸಿದರ್ನಗರ ಶೋಧನೆ
ಯು ತಳವಾರರಂತೆ ಬಸದೋಳ್ಪೆಣ್ಗಳು.

೨. ಕೆಳಗೆ ಬರೆದ ಪದ್ಯಗಳ ಅರ್ಥವನ್ನು ಪದಲೋಪ
ಮಾಡದೆ ಬರೆಯಿರಿ.

ರಂಜಿಸುವ ಪಶ್ಚಿಮಾಚಲಕಿರಾತಂ ತೊಟ್ಟ ।
ಗುಂಜಾಭರಣಮೊ ಪೇಳ್ಗಗನಾಂಬುಧಿಯ ತಡಿಯ ।
ಮಂಜುವಿದ್ರುಮ ಲತೆಯೊ ಬಗೆಗಪರದಿಗ್ವಧುವಿನಂ
ಗಕುಂಕುಮಲೇಪನವೊ ।
ಅಂಜನೇಭದ ಸಿಂಧುರವೊ ಶಿವನ ಕೇಶಗಳ ।
ಕೆಂಜೆಡೆಯೊ ವಿಷ್ಣುಪದ ಪಂಕರುಹದರುಣತೆಯೋ ।
ಸಂಜೆವೆಣ್ಣುಟ್ಟ ರಕ್ತಾಂಬರವೊ ಪೇಳೆನಲ್ಕಾರ್ಬೈಗು ಕೆಂ
ಪೆಸೆದುದು ॥ ೪೬ ।

ಪೆಳಲುಡಿಯ ಮಳಲಿಡಿಯಲಿತ್ತಡಿಯ ತಳಗಡಿಯ ।
ಪೊಳನೆರೆಯಲುರೆ ಪೊರೆಯ ಲೊಳ್ದೊರೆಯ ಬೆಳ್ನೊರೆಯ
ತೊಳಸೆಳೆಯ ಮಿಾನ್ಪೊಳೆಯಲಿರದಿಳಿಯ ಲೆಡೆಸೆಳೆಯ
ತುಂತುರಿನ ತನಿಗೆದರಿನ ।

ಸುಳಿಸುಳಿಯ ಸವ್ವಳಿಯ ಬೊಬ್ಬುಳಿಯ ಕಡುಲುಳಿಯ ।
ಜಳಚರದ ಥರ ಥರದ ಸೀಕರದ ಭೀಕರದ ।
ತುಳಗಂಗೆ ಸುತರಂಗೆ ನೋಳ್ಪಂಗೆ ಸಲೆಕಣ್ಗೆ ಸೆದಳಂದ
ದಿವಿಜಸಿಂಧು ।

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ॥
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೩೩.] ಮಾರ್ಚ ೧೮೯೯. [ಸಂಚಿಕೆ ೩.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಂಬೈ ಇಲಾಖೆಯ ಹೋದ ವರ್ಷದ (೧೮೯೭-೯೮) ವಿದ್ಯಾಖಾತೆಯ ರಿಪೋರ್ಟನಿಂದ ತಿಳಿಯುವ ಮುಖ್ಯ ಮುಖ್ಯ ಸಂಗತಿಗಳು ಯಾವವೆಂದರೆ :—

ನಮ್ಮ ಇಲಾಖೆಯೊಳಗಿನ ಶಾಲೆಗಳಲ್ಲಿ ಅಭ್ಯಾಸಮಾಡುವ ಗಂಡು ಹುಡುಗರ ಸಂಖ್ಯೆಯು ಹೋದ ವರ್ಷ ೫೩೦೮೭೩ ಇತ್ತು; ಈ ವರ್ಷ ೫೦೬,೪೬೩ ಆಗಿರುತ್ತದೆ; ಹೆಣ್ಣು ಮಕ್ಕಳ ಸಂಖ್ಯೆಯು ಹಿಂದಿನ ವರ್ಷ ೭೧,೦೫೩ ಇತ್ತು; ಈ ವರ್ಷ ೭೬,೩೯೨ ಆಗಿರುತ್ತದೆ. ಈ ಇಲಾಖೆಯಲ್ಲಿ ಯಾವತ್ತೂ ಪ್ರಕಾರದ ಸರಕಾರೀ ಖಾಸಗೀ ಶಾಲೆಗಳು ಕೂಡಿ ಹಿಂದಿನ ವರ್ಷ ೧೨೯೭೪ ಇದ್ದವು; ಈ ವರ್ಷ ೧೨೬೭೯ ಆಗಿರುತ್ತವೆ. ಸರಕಾರೀ ಶಾಲೆಗಳು ಹಿಂದಿನ ವರ್ಷ ೧೦೧೦೨, ಖಾಸಗೀ ಶಾಲೆಗಳು ೨೮೭೨ ಇದ್ದವು; ಈ ವರ್ಷ ಸರಕಾರೀ ಶಾಲೆಗಳು ೯೯೧೭ ಖಾಸಗೀ ಶಾಲೆಗಳು ೨೭೬೨ ಆಗಿರುತ್ತವೆ. ಹಿಂದಿನ ವರ್ಷ ಕನಿಷ್ಠ ಪ್ರತಿಯ ದೇಶಭಾಷೆಯ ಸರಕಾರೀ ಶಾಲೆಗಳು ೯೫೭೨ ವಿದ್ಯಾರ್ಥಿಗಳು ೫೬೧,೧೬೦ ಇದ್ದರು. ಈ ವರ್ಷ ಅನುಕ್ರಮವಾಗಿ ೯,೩೯೦ ಮತ್ತು ೫೩೩,೫೭೭ ಇದ್ದಾರೆ.

ಈ ಇಲಾಖೆಯ ದಕ್ಷಿಣಭಾಗದಲ್ಲಿ ಜನಸಂಖ್ಯೆಯು ೬೯೨೦೫೧೭ ಇರುತ್ತದೆ. ಮತ್ತು ಯಾವತ್ತೂ ಪ್ರಕಾರದ ಶಾಲೆಗಳು ೨೫೯೭ ವಿದ್ಯಾರ್ಥಿಗಳು ೧೪೭೨೮೪ ಇರುವರು.

ಕನಿಷ್ಠಪ್ರತಿಯ ಗಂಡು ಹುಡುಗರ ಶಾಲೆಗಳು ೨೩೨೩ ಮತ್ತು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಕೂಡಿ ೧೩೧೧೯೪ ಇದ್ದಾರೆ. ಹೆಣ್ಣುಮಕ್ಕಳ ಶಾಲೆಗಳು ೧೫೮ ವಿದ್ಯಾರ್ಥಿನಿಯರು ೮೫೬೮ ಇರುವರು. ಗಂಡು ಹುಡುಗರ ಶಾಲೆಗೆ ಹೋಗುವ ಹೆಣ್ಣುಮಕ್ಕಳ ಸಂಖೆಯು ೮೦೫೩ ಇರುವದು. ಈ ವರ್ಷ ನಮ್ಮ ದಕ್ಷಿಣಭಾಗದಲ್ಲಿ ಕ್ಷಾಮ ಮತ್ತು ಪಿಡುಗಿನ ಮೂಲಕವಾಗಿ ೩೨ ಗಂಡು ಹುಡುಗರ ಶಾಲೆಗಳೂ ೧೨೪೨೩ ವಿದ್ಯಾರ್ಥಿಗಳೂ ಕಡಿಮೆಯಾಗಿರುವರು. ಹೆಣ್ಣು ಹುಡಿಗೆಯರ ಶಾಲೆಗಳು ೮ ಹೆಚ್ಚಾದಾಗ್ಯೂ ೫೭೩ ವಿದ್ಯಾರ್ಥಿನಿಯರು ಕಡಿಮೆಯುಂಟು. ಆದರೆ ಗಂಡು ಹುಡುಗರ ಶಾಲೆಗೆ ಹೋಗುವ ಹೆಣ್ಣು ಮಕ್ಕಳ ಸಂಖ್ಯೆಯು ಮಾತ್ರ ೨೪೫ ರಿಂದ ಹೆಚ್ಚಾಗಿರುವದು.

ಮುಂಬೈ *ಇಲಾಖೆಯೊಳಗಿನ ವಿದ್ಯಾಖಾತೆಯು ಒಟ್ಟು ಖರ್ಚು ೩೩೩೬೬೮೬ ರೂಪಾಯಿ ಆಗಿರುತ್ತದೆ. ಈ ರಕಮಿನೊಳಗಿಂದ ಫೀ ಹಣ ೧೪,೬೧೨೨೩ ರೂಪಾಯಿ ಮತ್ತು ವರ್ಗಣಿ ಮುಂತಾದ ಬಾಬುಗಳಿಂದ ಆದ ಉತ್ಪನ್ನ ೭೪.೮೮,೮೬೯ ರೂಪಾಯಿ ವಜಾ ಹೋಗಲಾಗಿ ಉಳಿದ ಖರ್ಚಿನಲ್ಲಿ ಸರಕಾರಕ್ಕೆ ೨೦,೪೫,೫೨೯ ರೂಪಾಯಿ ಲೋಕಲಫಂಡಿಗೆ ೯,೩೯೧೧೦ ರೂಪಾಯಿ ಮ್ಯುನಿಸಿಪಾಲಿಟಿಗಳಿಗೆ ೪,೦೧೪೫೧ ರೂಪಾಯಿ ಬಿತ್ತು. ಕನಿಷ್ಠಪ್ರತಿಯ ಶಿಕ್ಷಣಕ್ಕಾಗಿ ಒಟ್ಟು ೩೩.೬೯,೯೨೯ ರೂಪಾಯಿ ಖರ್ಚು ಆಯಿತು ಇದರೊಳಗೆ ಫೀ ಉತ್ಪನ್ನ ೩,೩೮೩೩೨ ರೂಪಾಯಿ ಮತ್ತು ಇತರ ಬಾಬುಗಳಿಂದ ಆದ ಉತ್ಪನ್ನ ೭೦,೩೧೮೮೮ ರೂಪಾಯಿ ವಜಾ ಹೋಗಲಾಗಿ ಉಳಿದದ್ದು

---

* ಸರಕಾರದ ಖರ್ಚಿನಿಂದಲೇ ನಡೆಯುವ ಶಾಲೆಗಳ ಬಗ್ಗೆ ೯,೯೩೨೩ ರೂಪಾಯಿ ಲೋಕಲಬೋರ್ಡ ಶಾಲೆಗಳ ಬಗ್ಗೆ ೫,೪೮೨೮೧ ರೂಪಾಯಿ ಮ್ಯುನಿಸಿಪಲ್ ಬೋರ್ಡ ಶಾಲೆಗಳ ಬಗ್ಗೆ ೩,೨೫೯೩೪ ರೂಪಾಯಿ ಸಂಸ್ಥಾನದೊಳಗಿನ ಶಾಲೆಗಳ ಬಗ್ಗೆ ೫,೮೮೦೪೯ ರೂಪಾಯಿ ಗ್ರಾಂಟ ಇನ ಏಡ್ ಶಾಲೆಗಳ ಬಗ್ಗೆ ೩೯೨೩೨೩ ರೂಪಾಯಿ ಅನ್ ಏಡೆಡ್ ಶಾಲೆಗಳ ಬಗ್ಗೆ ೧,೯೬೬೯೨ ರೂಪಾಯಿ ಮತ್ತು ಇತರ ೬೪೧೫೭೬ ರೂಪಾಯಿ ಅಂತು ೩೩೩೬೬೮೬ ರೂಪಾಯಿ.

ತಲ್ಲಿ ಸರಕಾರಕ್ಕೆ ೮,೨೬೦೮೪ ರೂಪಾಯಿ, ಲೋಕಲಫಂಡಿಗೆ ೮,೧೪೬೫೨ ರೂಪಾಯಿ ಮ್ಯುನಿಸಿಪಾಲಿಟಿಗಳಿಗೆ ೩೧೮೯೭೩ ರೂಪಾಯಿ ಖರ್ಚು ಬಿತ್ತು.

ಕಳೆದ ವರ್ಷ ಮುಂಬೈ ಇಲಾಖೆಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯು ೬೦೧೯೨೬ ಇತ್ತು; ಈ ವರ್ಷ ಅದು ೫೯೦,೮೫೫ ಆಗಿರುತ್ತದೆ. ಇದರಲ್ಲಿ ಯುರೋಪಿಯನ್ ಮತ್ತು ಯುರೇಜಿಯನ್ ಜಾತಿಯ ವಿದ್ಯಾರ್ಥಿಗಳು ೪೨೨೧ ಪೋರ್ತಗೀಜ ಮತ್ತು ನೇಟಿವ್ಹ ಕ್ರಿಶ್ಚಿಯನ್ನರು ೯.೮೦೫; ಯಹೂದಿ ೧೬೯೮, ಪಾರಸಿ ೧೩೪೭೮, ಮುಸಲ್ಮಾನರು ೯೯೦೦೫, ಹಿಂದು ಜನರು ೪೪೩,೮೩೪ ಗುಡ್ಡಗಾಡ ಜಾತಿಯ ಜನರು ೮,೭೦೩ ಮತ್ತು ಇತರ ಜಾತಿಯ ವಿದ್ಯಾರ್ಥಿಗಳು ೧೦೩ ಇರುವರು.

ಮೇಲೆ ಕೊಟ್ಟ ಅಂಕಿಗಳನ್ನು ನೋಡಲಾಗಿ ಮೊದಲಿನ ನಾಲ್ಕು ಜಾತಿಯ ವಿದ್ಯಾರ್ಥಿಗಳ ಸಂಖ್ಯೆಯು ಕಳೆದ ವರ್ಷಕ್ಕಿಂತ ಹೆಚ್ಚಾದದ್ದು ಕಂಡುಬರುವದು. ಆದರೆ ಪ್ರತಿ ಒಂದು ಜಾತಿಯ ವಿದ್ಯಾರ್ಥಿಗಳ ಸಂಖ್ಯೆಯು ೧೮೯೫।೯೬ನೇ ಇಸವಿಗಿಂತ ಬಹಳ ಕಡಿಮೆ ಇರುವದು. ಹಿಂದೂ ಮತ್ತು ಮುಸಲ್ಮಾನ ಜಾತಿಯವರ ಸಂಖ್ಯೆಯು ಕಳೆದ (೧೮೯೬-೯೭) ವರುಷಕ್ಕಿಂತ ಸಹ ಬಹಳ ಕಡಿಮೆಯಾಗಿರುವದು.

ಮುಂದೆ ಕೊಟ್ಟ ಕೋಷ್ಟಕದಿಂದ ಪ್ಲೇಗದಿಂದ ಆದ ಹಾನಿಯು ತಿಳಿಯುವದು. ಮುಂಬೈ ಇಲಾಖೆಯ ಎಲ್ಲ ಭಾಗಗಳಲ್ಲಿಯೂ ಪಿಡುಗು ಹಬ್ಬಿಕೊಂಡಿರುವದರಿಂದ ಎಲ್ಲ ಕಡೆಯಲ್ಲಿಯೂ ಇದರಿಂದ ಹಾನಿಯಾಗಿರುವದು ಕಳೆದ ವರ್ಷ ಮುಂಬೈಯಲ್ಲಿ ಬಂದಾಗಿದ್ದ ಶಾಲೆಗಳು ಈ ವರ್ಷ ಚಾಲು ಇರುವದರಿಂದಲೂ ಈ ವರ್ಷ ಮುಂಬೈಯ ಜನಸಂಖ್ಯೆಯು ಕಾಯಂವಾಗಿ ಉಳಿದದ್ದರಿಂದಲೂ ಅಲ್ಲಿ ಮಾತ್ರ ಸ್ವಲ್ಪ ಸುಧಾರಣೆಯು ಕಂಡುಬರುವದು. ಮಧ್ಯಭಾಗ ಮತ್ತು ದಕ್ಷಿಣಭಾಗಗಳಲ್ಲಿ ಇದು ತನ್ನ ಪೂರ್ಣ ಅಮಲು ನಡಿಸಿದ್ದರಿಂದ ಅಲ್ಲಿಯ ಸಂಖ್ಯೆಯು ಬಹಳ ಕಡಿಮೆಯಾಗಿರುವದು. ಸಿಂಧ ಪ್ರಾಂತದಲ್ಲಿ ಕರಾಚಿ ಒಂದೇ ಮಾತ್ರ ಪಿಡಗಿನಿಂದ ವ್ಯಾಪ್ತವಾದ್ದರಿಂದ ಸಂಖ್ಯೆಯಲ್ಲಿ ಕೆಲಮಟ್ಟಿಗೆ ಸುಧಾರಣೆಯು ತೋರಬರುವದು.

ಮುಂಬೈ ಇಲಾಖೆಯಲ್ಲಿ ೪ ಭಾಗಗಳು ಇರುತ್ತವೆ; ಆಯಾ ಭಾಗಗಳಿಗೆ ಸೇರಿದಂಥ ಶಾಲೆಗಳ ಮತ್ತು ವಿದ್ಯಾರ್ಥಿಗಳ ಪಟ್ಟಿಯನ್ನು ಕೆಳಗೆ ಕೊಟ್ಟಿರುತ್ತೇವೆ. ಇದರಿಂದ ಆಯಾ ಭಾಗದೊಳಗೆ ವಿದ್ಯಾಪ್ರಸಾರವು ಹ್ಯಾಗೆ ಆಗಿರುತ್ತದೆಂಬದು ಸ್ಪಷ್ಟವಾಗಿ ತಿಳಿಯುವದು.

ಭಾಗ.	ಕ್ಷೇತ್ರಫಲ ಮೈಲು.	†ಜನಸಂಖ್ಯೆ.	ಸರಕಾರೀ ಮತ್ತು ಏಡೇಡ್ ಶಾಲೆಗಳು.	ವಿದ್ಯಾರ್ಥಿಗಳು.	ಅನ್‌ರೆಕಗ್ನೈಜ್ಡ ಶಾಲೆಗಳು.	ವಿದ್ಯಾರ್ಥಿಗಳು.	ಶಾಲೆಗೆ ಹೋಗಲಿಕ್ಕೆ ತಕ್ಕವರಾದ ಹು. ಜ. ಸಂ ಶೇ. ೧೫ರಂತೆ	ಶಾ. ಹೋಗತಕ್ಕ ಹಾಗೂ ಹೋಗ ತ್ತಿರುವ ಹು. ಪ್ರ
ಮಧ್ಯಭಾಗ.								
ಮುಂಬಯಿ.	೨೨	೮೨೧೭೬೪	೨೫೮	೨೨೨೦೪	೧೬೮	೬೦೬೪	೧೨೩೨೬೪.೬	೮.
ಇತರಜಿಲ್ಲೆಗಳು (೬)	೩೮೩೯೦	೬೨೩೭೬೬೬	೨೧೦೬	೧೦೮೬೬೩	೩೦೯	೫೮೧೪	೯೩೫೬೪೯.೯	೮.
ಸಂಸ್ಥಾನಗಳು (೫)	೩೮೫೩	೪೦೮೨೯೦	೧೩೦	೫೫೭೧	೧೨	೨೭೦	೬೧೨೪೩.೫	೪.
ಉತ್ತರಭಾಗ.								
*ಜಿಲ್ಲೆಗಳು (೬)	೧೩೮೦೮	೩೯೪೪೦೫೯	೧೫೬೩	೧೨೪೯೧೦	೩೬೧	೧೨೨೭೫	೫೯೧೬೦೮ ೮೫	೨೪.
ಸಂಸ್ಥಾನಗಳು (೯)	೫೧೦೪೯	೫೫೯೫೧೮೦	೧೬೬೫	೧೦೭೫೪೦	೫೦೪	೧೯೩೦೦	೮೩೯೨೭೭.	೧೫
ದಕ್ಷಿಣಭಾಗ:								
ಜಿಲ್ಲೆಗಳು (೬)	೨೫೦೬೧	೪೯೯೬೬೨೬	೧೮೭೩	೧೦೭೭೪೬	೫೮೯	೧೦೩೨೮	೭೪೯೪೯೩.೯	೧೭
ಸಂಸ್ಥಾನಗಳು (೬)	೮೦೩೪	೧೯೨೩೮೯೧	೭೨೪	೩೯೫೩೮	೨೧	೪೮೪೮	೨೮೮೫೮೩.೬೫	೧೭.
ಸಿಂಧಪ್ರಾಂತ:								
ಜಿಲ್ಲೆಗಳು (೫)	೪೬೭೫೮	೨೮೭೧೭೭೪	೧೪೪೬	೫೮೯೮೦	೬೦೦	೮೮೮೨	೪೩೦೭೬೬.೧	೧೪.
ಒಟ್ಟು:	೧೮೮೦೦೬	೨೬೭೯೯೨೫೦	೯೭೯೫	೫೭೫೧೬೨	೨೨೬೨	೬೨೨೮೬	೪೦೧೯೮೮೭.೫	೧೪.

ಡೀಸಾ, ಅಬೂ, ಬಡೋದಾ ಕ್ಯಾಂಪ ಸಹಿತ. † ಜನಸಂಖ್ಯೆಯು ಶೇಕಡಾ ೧೫ ರಂತೆ ಶಾಲೆಗೆ ಹೋಗುವ ಮನುಷ್ಯ

ಹುಡುಗರಿರುತ್ತಾರೆಂದು ಬಲ್ಲವರ ಅಭಿಪ್ರಾಯವುಂಟು

ಮುಂಬೈ ಇಲಾಖೆಯೊಳಗಿನ ಆಯಾ ಭಾಗದಲ್ಲಿ ಪ್ರಾಥಮಿಕ ಶಾಲೆಗಳ ಸ್ಥಿತಿಯು ಹ್ಯಾಗಿರುತ್ತದೆಂಬದನ್ನು ತಿಳಿಸುವ ಬಗ್ಗೆ ಕೆಳಗೆ ಪಟ್ಟಿಯನ್ನು ಕೊಟ್ಟಿರುತ್ತೇವೆ.

ಭಾಗ	ಶಾಲೆಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ	೫ನೇ ೬ನೇ ಇಯತ್ತೆ ಕಲಿಯುವವರು.			೩ನೇ ೪ನೇ ಇಯತ್ತೆ ಕಲಿಯುವವರು,			೨ನೇ ಇಯತ್ತೆಯ ವರೆಗೆ ಕಲಿಯುವವರು.			ಅಂತೂ		
			ಗಂಡು	ಹೆಣ್ಣು	ಅಂತೂ	ಗಂಡು	ಹೆಣ್ಣು	ಅಂತೂ.	ಗಂಡು	ಹೆಣ್ಣು.	ಅಂತೂ	ಗಂಡು	ಹೆಣ್ಣು	ಅಂ
ಉ. ಭಾಗ	೨೩೮೪	೧೧೨೭೬೬	೩೩೪೮೦	೨೨೨೦	೩೫೭೨೦	೩೧೨೪೬	೬೫೩೬	೩೭೭೨೨	೩೮೦೩೮	೪೧೪೧	೪೩೧೯೦	೧೦೨೨೩೧	೧೩೮೪೨	೧೧
ಮ. ಭಾಗ	೨೦೬೦	೧೪೯೦೮೬	೪೨೮೩೬	೩೪೩೬	೪೬೩೨೨	೫೬೫೬೨	೬೬೨೪	೫೩೨೪೧	೩೬೫೭೨	೧೦೮೦೦	೪೭೪೭೩	೧೨೬೦೭೬	೨೧೦೧೦	೧೪
ದ ಭಾಗ	೨೪೭೫	೧೩೮೨೬೨	೪೬೮೩೨	೧೯೧೪	೪೯೨೪೬	೪೭೪೪೮	೫೬೫೨	೩೪೧೦೧	೨೬೨೫೬	೮೧೩೮	೩೬೮೧೫	೧೨೩೧೩೨	೧೬೬೨೫	೧೩
ಸಿಂಧ.	೧೫೧೦	೫೯೪೮೦	೧೦೫೪೭	೮೯೫	೧೧೪೨೨	೨೫೬೭೪	೫೪೦೬	೨೧೦೮೦	೧೨೨೭೨	೨೪೭೪	೧೫೭೬೨	೪೯೬೧೫	೮೯೨೫	೫೫

ಬೇರೆ ಬೇರೆ ದೇಶಗಳಲ್ಲಿ ಆಗುವ ಗುಡುಗಿನ ಅಬ್ಬರವು:- ಇಡೀ ಪೃಥ್ವಿಯ ಮೇಲೆ ಜಾವಾದ್ವೀಪದಲ್ಲಿ ಗುಡುಗು ಬಹಳ ಆಗುತ್ತದೆಂದು ತಿಳಿದದೆ. ಅಲ್ಲಿ ವರ್ಷದಲ್ಲಿ ೯೭ ದಿವಸ ಗುಡುಗುವದು; ಅದರ ತರುವಾಯ ಸುಮಾತ್ರಾದ್ವೀಪವು, ಅಲ್ಲಿ ೮೬ ದಿವಸ ಗುಡುಗುವದು. ಹಿಂದುಸ್ತಾನದಲ್ಲಿ ೫೬ ದಿವಸ, ಬೋರ್ನಿಯೋದಲ್ಲಿ ೫೪, ಆಫ್ರಿಕಾದಲ್ಲಿಯ ಗೋಲ್ಡ ಕೋಷ್ಟ ಭಾಗದಲ್ಲಿ ೫೨ ದಿವಸ, ಮತ್ತು ರಿಯೊಡಿಜೆನೆರಿಯೋದಲ್ಲಿ ೫೧ ದಿವಸ ಗುಡುಗುವದು. ಯುರೋಪಖಂಡದಲ್ಲಿ ಇತಲಿದೇಶದಲ್ಲಿ ಉಳಿದ ದೇಶಗಳಿಗಿಂತ ಹೆಚ್ಚು ಗುಡುಗುವದು. ಅಲ್ಲಿ ವರ್ಷದಲ್ಲಿ ೩೮ ಸಾರೆ ಗುಡುಗು ಕೇಳಿಸುವದು. ಫ್ರಾನ್ಸ ಮತ್ತು ದಕ್ಷಿಣ ರಶಿಯಾದಲ್ಲಿ ೧೬, ಗ್ರೇಟಬ್ರಿಟನ್ನ ಮತ್ತು ಸ್ವಿತ್ಸರ್ಲಂಡದಲ್ಲಿ ೭ ದಿವಸ, ಮತ್ತು ನಾರ್ವೆದಲ್ಲಿ ೪ ದಿವಸ ಗುಡುಗುವದು. ಕೈರೋ ಪಟ್ಟಣದಲ್ಲಿ ಗುಡುಗು ತೀರ ಕ್ವಚಿತವಾಗಿ ಅಂದರೆ ವರ್ಷದಲ್ಲಿ ೩ ಸಾರೆ ಮಾತ್ರ ಕೇಳಿಸುವದು. ಧ್ರುವಪ್ರದೇಶ ಮತ್ತು ಉತ್ತರತುರ್ಕಸ್ಥಾನ ತಾರ್ತರಿಯಲ್ಲಿ ಗುಡುಗುವದು ತೀರ ಅಪರೂಪ.

ನಾವು ಕಳೆದ ಅಕ್ಟೋಬರ ಸಂಚಿಕೆಯಲ್ಲಿ ಮಿ. ತ್ರಿಭುವನದಾಸ ಕಲ್ಯಾಣದಾಸ ಗಜ್ಜರ ಎಮ್. ಎ. ಬಿ. ಎಸ್. ಸಿ. ಇವರು ತಮ್ಮ ಉದ್ಯೋಗದಿಂದಲೂ ಜಾಣತನದಿಂದಲೂ ಹೆಸರುವಾಸಿಯಾಗಿ ಹಿಂದೂಜನರ ಕಲ್ಪಕತನ ಮತ್ತು ಚಾತುರ್ಯಗಳು ಇನ್ನೂ ನಷ್ಟವಾಗಿಲ್ಲವೆಂಬ ಸಂಗತಿಯನ್ನು ಸ್ಥಿರಪಡಿಸಿದ್ದನ್ನು ತಿಳಿಸಿರುತ್ತೇವಷ್ಟೇ. ಪ್ರೊಫೇಸರ ಕಾಶೀನಾಥಪಂತ ಛತ್ರೆ ಎಂಬ ಕುದುರೆ ಸರಕಸ ಕಂಪನಿಯ ಮಾಲಕರು ತಮ್ಮಲ್ಲಿರುವ ಕುಶಲತೆ, ಜಾಗರೂಕತನ, ಧೈರ್ಯ, ದೃಢನಿಶ್ಚಯಗಳಿಂದ ಮೇಲೆ ಹೇಳಿದ್ದನ್ನು ಹೆಚ್ಚಿಗೆ ದೃಢಪಡಿಸಿದರು. ಇವರು ಕಳೆದ ತಿಂಗಳ ೩ನೇ ತಾರೀಖಿನ ದಿವಸ ಮುಂಬೈಯಲ್ಲಿ ಮಾಡಿತೋರಿಸಿದ ತಮ್ಮ ಸರಕಸಿನ ಆಟದಿಂದ ಬರೇ ಹಿಂದೂಜನರಲ್ಲಿಯೇ ಅಲ್ಲ, ದೊಡ್ಡ ದೊಡ್ಡ ಯುರೋಪಿಯನ್ ಜನರ ಮನಸ್ಸಿನಲ್ಲಿ ಸಹ ಹಿಂದೂಜನರು ಸಾಹಸಿಗಳೂ ಚತುರ

ರರೂ ಭಟ್ಟರೂ, ಇರುವರೆಂಬ ನಂಬಿಕೆಯನ್ನು ಪೂರ್ಣವಾಗಿ ನೆಲೆಗೊಳಿಸಿದರು. ಈ ಆಟಕ್ಕೆ ನಾಮದಾರ ಗವ್ಹರ್ನರ ಸಾಹೇಬರವರು ಸಹ ಬಂದಿದ್ದರು ಆ ಕಾಲಕ್ಕೆ ಪ್ರೊಫೆಸರ ಛತ್ರೆ ಇವರ ಸರಕಸಿನ ಮಂಡಳಿಯವರು ಮಾಡಿತೋರಿಸಿದ ಟ್ರಾಪಿಜದ ಮೇಲಿನ ಮನೋಹರವಾದ ಕೆಲಸ, ಛತ್ರೇ ಇವರ ಅಶ್ವಕುಶಲತೆ, ವಿದೂಷಕರ ಅಪ್ರತಿಮನಟನೆ, ಸ್ತ್ರೀಯರೂ ಬಾಲಕರೂ ಮಾಡಿದ ಅನೇಕ ಚಾತುರ್ಯದ ಕೆಲಸಗಳು, ಹುಲಿ, ಸಿಂಹ, ಆನೆ, ಮಂಗ ಮುಂತಾದವುಗಳ ಅವರ್ಣನೀಯವಾದ ಕೆಲಸಗಳು ಪ್ರೇಕ್ಷಕರನ್ನು ಆನಂದಾಶ್ಚರ್ಯಗಳಿಂದ ಯುಕ್ತರನ್ನಾಗಿ ಮಾಡಿದವು. ಆ ಕಾಲಕ್ಕೆ ಡಾ. ಭಾಲಚಂದ್ರ ಇವರು ಪ್ರಸ್ತುತಕ್ಕನುಸರಿಸಿ ಭಾಷಣಮಾಡಿ ಕಾಶೀನಾಥಪಂತ ಛತ್ರೇ ಮತ್ತು ಅವರ ಅಣ್ಣಂದಿರಾದ ವಿಷ್ಣುಪಂತ ಛತ್ರೇ ಇವರನ್ನು ಯೋಗ್ಯವಾಗಿ ಸ್ತುತಿಸಿದರು. ಮುಂಬೈಜನರ ವತಿಯಿಂದ ಸರಜಿಮಶೆಟಜಿ ಜಿಜಿಭಾಯಿ ಬ್ಯಾರೋನೇಟ ಇವರ ಕೈಯಿಂದ ಒಂದು ಸುವರ್ಣಪದಕವನ್ನು ಪ್ರೊಫೆಸರ ಕಾಶೀನಾಥಪಂತರಿಗೆ ಕೊಡಿಸಿದರು ಅದೇ ಕಾಲಕ್ಕೆ ಇವರ ಸರಕಸಿನಲ್ಲಿಯ ಒಬ್ಬ ಚಿಕ್ಕ ಮತ್ತು ಕುಶಲನಾದ ಹುಡುಗನಿಗೆ ಒಂದು ಭಂಗಾರದ ಉಂಗುರವು ಕೊಡಲ್ಪಟ್ಟಿತು; ಮತ್ತು ಬೇರೆ ಕೆಲವರು ಪ್ರೊ. ಛತ್ರೇ ಇವರಿಗೆ, ಮುಂಡಾಸ, ಶಾಲು, ಜರದ ವಸ್ತ್ರ ಮುಂತಾದ ಉಡುಗರೆಗಳನ್ನು ಕೊಟ್ಟು ಮಾನ ಮಾಡಿದರು. ಪ್ರೊ. ಛತ್ರೆ ಇವರು ಅವರೆಲ್ಲರು ಮಾಡಿದ ಮರ್ಯಾದೆಯನ್ನು ವಿನಯಪೂರ್ವಕವಾಗಿ ಸ್ವೀಕರಿಸಿ ಯೋಗ್ಯ ಆಶ್ರಯ ದೊರತರೆ ಡಾ. ಭಾಲಚಂದ್ರ ಇವರು ಸೂಚಿಸಿದಂತೆ ತಾವು ದೇಶಾಂತರಕ್ಕೂ ಖಂಡಾಂತರಕ್ಕೂ ಹೋಗಲಿಕ್ಕೆ ಸಿದ್ಧರಿರುವೆವೆಂದು ತಿಳಿಸಿದರು.

ಪ್ರೊ. ಛತ್ರೇ ಇವರ ಆಟದಲ್ಲಿರುವ ಯುರೋಪಿಯನ್ ತರದ ವ್ಯವಸ್ಥೆ, ದೃಢನಿಶ್ಚಯ, ಕೈಕೆಳಗಿನ ಜನರನ್ನು ಉತ್ಸಾಹಗೊಳಿಸಿ ಕೆಲಸ ಮಾಡಿಸುವ ಶೈಲಿ ಮುಂತಾದವುಗಳು ಅವರ್ಣನೀಯವಾಗಿರುವವು

ಬೇರೆ ಬೇರೆ ದೇಶಗಳಲ್ಲಿ ಆಗುವ ಗುಡುಗಿನ ಅಬ್ರತವು:
ಇಡೀ ಪೃಥ್ವಿಯ ಮೇಲೆ ಜಾವಾದ್ವೀಪದಲ್ಲಿ ಗುಡುಗು ಬಹ
ಆಗುತ್ತದೆಂದು ತಿಳಿದದೆ. ಅಲ್ಲಿ ವರ್ಷದಲ್ಲಿ ೯೭ ದಿವಸ ಗುಡು
ಗುವದು; ಅದರ ತರುವಾಯ ಸುಮಾತ್ರಾ ದ್ವೀಪವು, ಅಲ್ಲಿ ೮೬
ದಿವಸ ಗುಡುಗುವದು. ಹಿಂದುಸ್ಥಾನದಲ್ಲಿ ೫೬ ದಿವಸ, ಬೋ
ರ್ನಿಯೋದಲ್ಲಿ ೫೪, ಆಫ್ರಿಕಾದಲ್ಲಿಯ ಗೋಲ್ಡ ಕೋಷ್ಟ ಭಾಗ
ದಲ್ಲಿ ೫೦ ದಿವಸ, ಮತ್ತು ರಿಯೊಡಿಜೆನೆರಿಯೋನಲ್ಲಿ ೫೧ ದಿವಸ
ಗುಡುಗುವದು. ಯುರೋಪಖಂಡದಲ್ಲಿ ಇತಲಿದೇಶದಲ್ಲಿ ಉಳ
ದ ದೇಶಗಳಿಗಿಂತ ಹೆಚ್ಚು ಗುಡುಗುವದು. ಅಲ್ಲಿ ವರ್ಷದಲ್ಲಿ
೩೮ ಸಾರೆ ಗುಡುಗು ಕೇಳಿಸುವದು. ಫ್ರಾನ್ಸ ಮತ್ತು ದಕ್ಷಿ
ರಶಿಯಾದಲ್ಲಿ ೧೬, ಗ್ರೇಟಬ್ರಿಟನ್ನ ಮತ್ತು ಸ್ವಿತ್ಸರ್ಲಂಡದಲ್ಲಿ
೭ ದಿವಸ, ಮತ್ತು ನಾರ್ವೆದಲ್ಲಿ ೪ ದಿವಸ ಗುಡುಗುವದು.
ಕೇರೋ ಪಟ್ಟಣದಲ್ಲಿ ಗುಡುಗು ತೀರ ಕ್ವಚಿತವಾಗಿ ಅಂದರೆ
ವರ್ಷದಲ್ಲಿ ೩ ಸಾರೆ ಮಾತ್ರ ಕೇಳಿಸುವದು. ಮ್ರಸಪ್ರದೇ
ಮತ್ತು ಉತ್ತರ ತುರ್ಕಸ್ಥಾನ ತಾರ್ತರಿಯಲ್ಲಿ ಗುಡುಗುವದು
ತೀರ ಅಪರೂಪ.

ನಾವು ಕಳೆದ ಅಕ್ಟೋಬರ ಸಂಚಿಕೆಯಲ್ಲಿ ಮಿ. ತ್ರಿಭುವನ
ದಾಸ ಕಲ್ಯಾಣದಾಸ ಗಜ್ಜರ ಎಮ್.ಎ. ಬಿ. ಎಸ್. ಸಿ. ಇವರು
ತಮ್ಮ ಉದ್ಯೋಗದಿಂದಲೂ ಜಾಣತನದಿಂದಲೂ ಹೆಸರು
ವಾಸಿಯಾಗಿ ಹಿಂದೂಜನರ ಕಲ್ಪಕತನ ಮತ್ತು ಚಾತುರ್ಯ
ಗಳು ಇನ್ನೂ ನಷ್ಟವಾಗಿಲ್ಲವೆಂಬ ಸಂಗತಿಯನ್ನು ಸ್ಥಿರಪಡಿ
ಸಿದ್ದನ್ನು ತಿಳಿಸಿರುತ್ತೇವಷ್ಟೇ. ಪ್ರೊಫೇಸರ ಕಾಶೀನಾಥಪಂತ
ಛತ್ರೆ ಎಂಬ ಕುದುರೆ ಸರಕಸ ಕಂಪನಿಯ ಮಾಲಕರು
ತಮ್ಮಲ್ಲಿರುವ ಕುಶಲತೆ, ಜಾಗರೂಕತನ, ಧೈರ್ಯ, ದೃಢನಿ
ಶ್ಚಯಗಳಿಂದ ಮೇಲೆ ಹೇಳಿದ್ದನ್ನು ಹೆಚ್ಚಿಗೆ ದೃಢಪಡಿಸಿದರು
ಇವರು ಕಳೆದ ತಿಂಗಳ ೩ನೇ ತಾರೀಖಿನ ದಿವಸ ಮುಂಬೈ
ಯಲ್ಲಿ ಮಾಡಿತೋರಿಸಿದ ತಮ್ಮ ಸರಕಸಿನ ಆಟದಿಂದ ಬರೇ
ಹಿಂದೂಜನರಲ್ಲಿಯೇ ಅಲ್ಲ, ದೊಡ್ಡ ದೊಡ್ಡ ಯುರೋಪಿಯ
ಜನರ ಮನಸ್ಸಿನಲ್ಲಿ ಸಹ ಹಿಂದೂಜನರು ಸಾಹಸಿಗಳೂ ಚತು

ರರೂ ಧಿಟ್ಟರೂ, ಇರುವರೆಂಬ ನಂಬಿಕೆಯನ್ನು ಪೂರ್ಣವಾಗಿ ನೆಲೆಗೊಳಿಸಿದರು. ಈ ಆಟಕ್ಕೆ ನಾಮದಾರ ಗವ್ಹರ್ನರ ಸಾಹೇಬರವರು ಸಹ ಬಂದಿದ್ದರು ಆ ಕಾಲಕ್ಕೆ ಪ್ರೊಫೆಸರ ಛತ್ರೆ ಇವರ ಸರಕಸಿನ ಮಂಡಳಿಯವರು ಮಾಡಿತೋರಿಸಿದ ಟ್ರಾಪಿಜದ ಮೇಲಿನ ಮನೋಹರವಾದ ಕೆಲಸ, ಛತ್ರೇ ಇವರ ಅಶ್ವಕುಶಲತೆ, ವಿದೂಷಕರ ಅಪ್ರತಿಮನಟನೆ, ಸ್ತ್ರೀಯರೂ ಬಾಲಕರೂ ಮಾಡಿದ ಅನೇಕ ಚಾತುರ್ಯದ ಕೆಲಸಗಳು, ಹುಲಿ, ಸಿಂಹ, ಆನೆ, ಮಂಗ ಮುಂತಾದವುಗಳ ಅವರ್ಣನೀಯವಾದ ಕೆಲಸಗಳು ಪ್ರೇಕ್ಷಕರನ್ನು ಆನಂದಾಶ್ಚರ್ಯಗಳಿಂದ ಯುಕ್ತರನ್ನಾಗಿ ಮಾಡಿದವು. ಆ ಕಾಲಕ್ಕೆ ಡಾ. ಭಾಲಚಂದ್ರ ಇವರು ಪ್ರಸ್ತುತಕ್ಕನುಸರಿಸಿ ಭಾಷಣಮಾಡಿ ಕಾಶೀನಾಥಪಂತ ಛತ್ರೇ ಮತ್ತು ಅವರ ಅಣ್ಣಂದಿರಾದ ವಿಷ್ಣುಪಂತ ಛತ್ರೇ ಇವರನ್ನು ಯೋಗ್ಯವಾಗಿ ಸ್ತುತಿಸಿದರು. ಮುಂಬೈಜನರ ಪತಿಯಿಂದ ಸರಜೆಮಶೆಟಜಿ ಜೆಜೆಭಾಯಿ ಬ್ಯಾರೋನೇಟ ಇವರ ಕೈಯಿಂದ ಒಂದು ಸುವರ್ಣಪದಕವನ್ನು ಪ್ರೊಫೆಸರ ಕಾಶೀನಾಥಪಂತರಿಗೆ ಕೊಡಿಸಿದರು ಅದೇ ಕಾಲಕ್ಕೆ ಇವರ ಸರಕಸಿನಲ್ಲಿಯ ಒಬ್ಬ ಚಿಕ್ಕ ಮತ್ತು ಕುಶಲನಾದ ಹುಡುಗನಿಗೆ ಒಂದು ಭಂಗಾರದ ಉಂಗುರವು ಕೊಡಲ್ಪಟ್ಟಿತು; ಮತ್ತು ಬೇರೆ ಕೆಲವರು ಪ್ರೊ. ಛತ್ರೇ ಇವರಿಗೆ, ಮುಂಡಾಸ, ಶಾಲು, ಜರದ ವಸ್ತ್ರ ಮುಂತಾದ ಉಡುಗರೆಗಳನ್ನು ಕೊಟ್ಟು ಮಾನ ಮಾಡಿದರು. ಪ್ರೊ. ಛತ್ರೆ ಇವರು ಅವರೆಲ್ಲರು ಮಾಡಿದ ಮರ್ಯಾದೆಯನ್ನು ವಿನಯಪೂರ್ವಕವಾಗಿ ಸ್ವೀಕರಿಸಿ ಯೋಗ್ಯ ಆಶ್ರಯ ದೊರತರೆ ಡಾ. ಭಾಲಚಂದ್ರ ಇವರುಸೂಚಿಸಿದಂತೆ ತಾವು ದೇಶಾಂತರಕ್ಕೂ ಖಂಡಾಂತರಕ್ಕೂ ಹೋಗಲಿಕ್ಕೆ ಸಿದ್ಧರಿರುವೆವೆಂದು ತಿಳಿಸಿದರು.

ಪ್ರೊ. ಛತ್ರೇ ಇವರ ಆಟದಲ್ಲಿರುವ ಯುರೋಪಿಯನ್ ತರದ ವ್ಯವಸ್ಥೆ, ದೃಢನಿಶ್ಚಯ, ಕೈಕೆಳಗಿನ ಜನರನ್ನು ಉತ್ಸಾಹಗೊಳಿಸಿ ಕೆಲಸ ಮಾಡಿಸುವ ಶೈಲಿ ಮುಂತಾದವುಗಳು ಅವರ್ಣನೀಯವಾಗಿರುವವು

ಬೇರೆ ಬೇರೆ ದೇಶಗಳಲ್ಲಿ ಆಗುವ ಗುಡುಗಿನ ಅಬ್ಬರವು:- ಇಡೀ ಪೃಥ್ವಿಯ ಮೇಲೆ ಜಾವಾದ್ವೀಪದಲ್ಲಿ ಗುಡುಗು ಬಹಳ ಆಗುತ್ತದೆಂದು ತಿಳಿದದೆ. ಅಲ್ಲಿ ವರ್ಷದಲ್ಲಿ ೯೭ ದಿವಸ ಗುಡುಗುವದು; ಅದರ ತರುವಾಯ ಸುಮಾತ್ರಾದ್ವೀಪವು, ಅಲ್ಲಿ ೮೬ ದಿವಸ ಗುಡುಗುವದು. ಹಿಂದುಸ್ಥಾನದಲ್ಲಿ ೫೬ ದಿವಸ, ಬೋರ್ನಿಯೋದಲ್ಲಿ ೫೪, ಆಫ್ರಿಕಾದಲ್ಲಿಯ ಗೋಲ್ಡ ಕೋಸ್ಟ ಭಾಗದಲ್ಲಿ ೫೦ ದಿವಸ, ಮತ್ತು ರಿಯೊಡಿಜೆನೆರಿಯೋನಲ್ಲಿ ೫೧ ದಿವಸ ಗುಡುಗುವದು. ಯುರೋಪಖಂಡದಲ್ಲಿ ಇತಲಿದೇಶದಲ್ಲಿ ಉಳಿದ ದೇಶಗಳಿಗಿಂತ ಹೆಚ್ಚು ಗುಡುಗುವದು, ಅಲ್ಲಿ ವರ್ಷದಲ್ಲಿ ೩೮ ಸಾರೆ ಗುಡುಗು ಕೇಳಿಸುವದು. ಫ್ರಾನ್ಸ ಮತ್ತು ದಕ್ಷಿಣ ರಶಿಯಾನಲ್ಲಿ ೧೬, ಗ್ರೇಟಬ್ರಿಟನ್ನ ಮತ್ತು ಸ್ವಿತ್ಸರ್ಲಂಡದಲ್ಲಿ ೭ ದಿವಸ, ಮತ್ತು ನಾರ್ವೆದಲ್ಲಿ ೪ ದಿವಸ ಗುಡುಗುವದು. ಕೇರೋ ಪಟ್ಟಣದಲ್ಲಿ ಗುಡುಗು ತೀರ ಕ್ವಚಿತವಾಗಿ ಅಂದರೆ ವರ್ಷದಲ್ಲಿ ೩ ಸಾರೆ ಮಾತ್ರ ಕೇಳಿಸುವದು. ಮ್ರುಸಪ್ರದೇಶ ಮತ್ತು ಉತ್ತರ ತುರ್ಕಸ್ಥಾನ ತಾರ್ತರಿಯಲ್ಲಿ ಗುಡುಗುವದು ತೀರ ಅಪರೂಪ.

ನಾವು ಕಳೆದ ಅಕ್ಟೋಬರ ಸಂಚಿಕೆಯಲ್ಲಿ ಮಿ. ತ್ರಿಭುವನದಾಸ ಕಲ್ಯಾಣದಾಸ ಗಜ್ಜರ ಎಮ್. ಎ. ಬಿ. ಎಸ್. ಸಿ. ಇವರು ತಮ್ಮ ಉದ್ಯೋಗದಿಂದಲೂ ಜಾಣತನದಿಂದಲೂ ಹೆಸರುವಾಸಿಯಾಗಿ ಹಿಂದೂಜನರ ಕಲ್ಪಕತನ ಮತ್ತು ಚಾತುರ್ಯಗಳು ಇನ್ನೂ ನಷ್ಟವಾಗಿಲ್ಲವೆಂಬ ಸಂಗತಿಯನ್ನು ಸ್ಥಿರಪಡಿಸಿದ್ದನ್ನು ತಿಳಿಸಿರುತ್ತೇವಷ್ಟೇ. ಪ್ರೊಫೇಸರ ಕಾಶೀನಾಥಪಂತ ಛತ್ರೆ ಎಂಬ ಕುದುರೆ ಸರಕಸ ಕಂಪನಿಯ ಮಾಲಕರು ತಮ್ಮಲ್ಲಿರುವ ಕುಶಲತೆ, ಜಾಗರೂಕತನ, ಧೈರ್ಯ, ದೃಢನಿಶ್ಚಯಗಳಿಂದ ಮೇಲೆ ಹೇಳಿದ್ದನ್ನು ಕೃತಿಗೆ ದೃಢಪಡಿಸಿದರು. ಇವರು ಕಳೆದ ತಿಂಗಳ ೩ನೇ ತಾರೀಖಿನ ದಿವಸ ಮುಂಬೈಯಲ್ಲಿ ಮಾಡಿತೋರಿಸಿದ ತಮ್ಮ ಸರಕಸಿನ ಆಟದಿಂದ ಬರೇ ಹಿಂದೂಜನರಲ್ಲಿಯೇ ಅಲ್ಲ, ದೊಡ್ಡ ದೊಡ್ಡ ಯುರೋಪಿಯನ್ ಜನರ ಮನಸ್ಸಿನಲ್ಲಿ ಸಹ ಹಿಂದೂಜನರು ಸಾಹಸಿಗಳೂ ಚತು

ರರೂ ಧಿಟ್ಟರೂ, ಇರುವರೆಂಬ ನಂಬಿಕೆಯನ್ನು ಪೂರ್ಣವಾಗಿ ನೆಲೆಗೊಳಿಸಿದರು. ಈ ಆಟಕ್ಕೆ ನಾಮದಾರ ಗವ್ಹರ್ನರ ಸಾಹೇಬರವರು ಸಹ ಬಂದಿದ್ದರು ಆ ಕಾಲಕ್ಕೆ ಪ್ರೊಫೆಸರ ಛತ್ರೆ ಇವರ ಸರಕಸಿನ ಮಂಡಳಿಯವರು ಮಾಡಿತೋರಿಸಿದ ಟ್ರಾಪಿಜದ ಮೇಲಿನ ಮನೋಹರವಾದ ಕೆಲಸ, ಛತ್ರೇ ಇವರ ಅಶ್ವಕುಶಲತೆ, ವಿದೂಷಕರ ಅಪ್ರತಿಮನಟನೆ, ಸ್ತ್ರೀಯರೂ ಬಾಲಕರೂ ಮಾಡಿದ ಅನೇಕ ಚಾತುರ್ಯದ ಕೆಲಸಗಳು, ಹುಲಿ, ಸಿಂಹ, ಆನೆ, ಮಂಗ ಮುಂತಾದವುಗಳ ಅವರ್ಣನೀಯವಾದ ಕೆಲಸಗಳು ಪ್ರೇಕ್ಷಕರನ್ನು ಆನಂದಾಶ್ಚರ್ಯಗಳಿಂದ ಯುಕ್ತರನ್ನಾಗಿ ಮಾಡಿದವು. ಆ ಕಾಲಕ್ಕೆ ಡಾ. ಭಾಲಚಂದ್ರ ಇವರು ಪ್ರಸ್ತುತಕ್ಕನುಸರಿಸಿ ಭಾಷಣಮಾಡಿ ಕಾಶೀನಾಥಪಂತ ಛತ್ರೇ ಮತ್ತು ಅವರ ಅಣ್ಣಂದಿರಾದ ವಿಷ್ಣುಪಂತ ಛತ್ರೇ ಇವರನ್ನು ಯೋಗ್ಯವಾಗಿ ಸ್ತುತಿಸಿದರು. ಮುಂಬೈಜನರ ವತಿಯಿಂದ ಸರಜೆಮಶೆಟಜಿ ಜಿಜಿಭಾಯಿ ಬ್ಯಾರೋನೇಟ ಇವರ ಕೈಯಿಂದ ಒಂದು ಸುವರ್ಣಪದಕವನ್ನು ಪ್ರೊಫೆಸರ ಕಾಶೀನಾಥಪಂತರಿಗೆ ಕೊಡಿಸಿದರು ಅದೇ ಕಾಲಕ್ಕೆ ಇವರ ಸರಕಸಿನಲ್ಲಿಯ ಒಬ್ಬ ಚಿಕ್ಕ ಮತ್ತು ಕುಶಲನಾದ ಹುಡುಗನಿಗೆ ಒಂದು ಭಂಗಾರದ ಉಂಗುರವು ಕೊಡಲ್ಪಟ್ಟಿತು; ಮತ್ತು ಬೇರೆ ಕೆಲವರು ಪ್ರೊ. ಛತ್ರೇ ಇವರಿಗೆ, ಮುಂಡಾಸ, ಶಾಲು, ಜರದ ವಸ್ತ್ರ ಮುಂತಾದ ಉಡುಗರೆಗಳನ್ನು ಕೊಟ್ಟು ಮಾನ ಮಾಡಿದರು. ಪ್ರೊ. ಛತ್ರೆ ಇವರು ಅವರೆಲ್ಲರು ಮಾಡಿದ ಮರ್ಯಾದೆಯನ್ನು ವಿನಯಪೂರ್ವಕವಾಗಿ ಸ್ವೀಕರಿಸಿ ಯೋಗ್ಯ ಆಶ್ರಯ ದೊರತರೆ ಡಾ. ಭಾಲಚಂದ್ರ ಇವರುಸೂಚಿಸಿದಂತೆ ತಾವು ದೇಶಾಂತರಕ್ಕೂ ಖಂಡಾಂತರಕ್ಕೂ ಹೋಗಲಿಕ್ಕೆ ಸಿದ್ಧರಿರುವೆವೆಂದು ತಿಳಿಸಿದರು.

ಪ್ರೊ. ಛತ್ರೇ ಇವರ ಆಟದಲ್ಲಿರುವ ಯುರೋಪಿಯನ್ ತರದ ವ್ಯವಸ್ಥೆ, ದೃಢನಿಶ್ಚಯ, ಕೈಕೆಳಗಿನ ಜನರನ್ನು ಉತ್ಸಾಹಗೊಳಿಸಿ ಕೆಲಸ ಮಾಡಿಸುವ ಶೈಲಿ ಮುಂತಾದವುಗಳು ಅವರ್ಣನೀಯವಾಗಿರುವವು

ರಸಾಯನಶಾಸ್ತ್ರ.

(೩೦ನೇ ಪುಟದಿಂದ ಮುಂದೆ ಸಾಗಿದ್ದು.)

(೩) ಮೇಣಬತ್ತಿಯು ಉರಿಯುವದರಿಂದ ಕಾರ್ಬಾನಿಕ್ ಆಸಿಡ್‌ಗ್ಯಾಸ ಒಂದೇ ಅಲ್ಲ, ಮತ್ತೊಂದು ಪದಾರ್ಥವು ಹುಟ್ಟುತ್ತದೆ; ಅದು ನೀರು.

ದೀಪದ ಉರಿಯಿಂದ ನೀರು ಹುಟ್ಟುತ್ತದೆಂದು ಕೇಳಿ ನಿಮಗೆ ಅರಿದಾಗಬಹುದು. ಆದರೆ ಒಂದು ಸುಲಭ ಪ್ರಯೋಗದಿಂದ ಈ ಮಾತು ನಿಜವೆಂದು ಮನಗಾಣುವಿರಿ. ದೀಪದಿಂದ ಹುಟ್ಟುವ ನೀರು ಉಷ್ಣವಾಗಿದ್ದು ಉಗಿಯ ರೂಪದಿಂದ ಹೊರಬೀಳುತ್ತಿರುತ್ತದೆ. ಅದರಿಂದ ಅದು ನಮ್ಮ ಕಣ್ಣಿಗೆ ಕಾಣಿಸುವದಿಲ್ಲ. ಕುದಿಯುವ ನೀರಿನ ಮೇಲೆ ಕಾಣಿಸುವ ಹೊಗೆಯಂಥ ಪದಾರ್ಥಕ್ಕೆ ವಾಡಿಕೆಯಾಗಿ ನಾವು ಉಗಿಯೆನ್ನುತ್ತೇವೆ. ಆದರೆ ಅದು ಉಗಿಯಲ್ಲ. ಉಗಿಯು ಕುದಿಯುವ ನೀರನ್ನು ಬಿಟ್ಟು ಮೇಲಕ್ಕೆ ಬಂದ ಕೂಡಲೆ ತಂಗಾಳಿಯ ಸಂಪರ್ಕದಿಂದ ಘನವಾಗಿ ಹೊಗೆಯಂಥ ರೂಪದಿಂದ ಕಾಣಿಸುತ್ತದೆ. ಆದರೆ ಅದು ಅತಿ ಸೂಕ್ಷ್ಮ ಜಲಕಣ ಸಮುದಾಯವೆಂತಲೇ ತಿಳಕೊಳ್ಳಲಿಕ್ಕೆ ಬೇಕು. ನಿಜವಾದ ಉಗಿಯು ಹವೆ, ಕಾರ್ಬಾನಿಕ್ ಆಸಿಡ್ ಗ್ಯಾಸಗಳಂತೆ ಅದೃಶ್ಯ ಪದಾರ್ಥವೇ ಇರುತ್ತದೆ. ಕುದಿಯುವ ನೀರಿನಿಂದ ಹೊರಡುವ ಉಗಿಯು ತಂಪಾಗಿ ಸೂಕ್ಷ್ಮ ಜಲಕಣಗಳ ರೂಪದಿಂದ ಕಾಣಿಸುವಂತೆ ದೀಪದ ಉರಿಯಿಂದ ಹುಟ್ಟುವ ಉಗಿಯಾದರೂ ಘನವಾಗಿ ನಮಗೆ ಗೋಚರವಾಗಲಿಕ್ಕೇ ಬೇಕು. ಇದಕ್ಕಾಗಿ ಈ ಕೆಳಗಿನ ಪ್ರಯೋಗವನ್ನು ಮಾಡಿ ನೋಡುವಾ:—

೧. ಪ್ರಯೋಗ—ಒಂದು ತಕ್ಕಷ್ಟು ಹರವು ಬಾಯಿಯ ಕಾಜಿನ ಪಾತ್ರೆಯನ್ನು (ಗ್ಲಾಸನ್ನು) ತಕ್ಕೊಂಡು ಅದನ್ನು ತಣ್ಣೀರಿನಿಂದ ತೊಳೆದು ಜಳಜಳ ಒರಿಸು. ಬಳಿಕ ಅದನ್ನು ಒಂದು ಮೇಣಬತ್ತಿಯ ದೀಪದ ಮೇಲೆ ಡಬ್ಬು ಹಿಡಿ. ಥಳಥಳ ಹೊಳೆಯುತ್ತಿದ್ದ ಆ ಪಾತ್ರೆಯ ಒಳಮೈಯು ಕೆಲಹೊತ್ತಿನಲ್ಲಿ ಮಬಾಳವಾಗುವದು. ಕೂಡಲೆ ನೀವು ಎಚ್ಚರದಿಂದ

ಸನ್ನು ತಿರಿವಿ ಹಿಡಿದು ನೋಡಿದರೆ ಅದರ ಒಳಮೈಗೆ ಅಸಂ ಸೂಕ್ಷ್ಮ ಜಲಕಣಗಳು ಅಂಟಿಕೊಂಡಿದ್ದದ್ದು ಕಣ್ಣಿಗೆ ಳುವದು. ನಾವು ಆ ಪಾತ್ರೆಯು ಕಾಯುವಂತೆಯೂ, ಳಗೆ ಜಮೆಯಾದ ನೀರು ಬತ್ತಿಟ್ಟಿಗೆ ಕೂಡ ಬೀಳುವಂತೆ ಯೂ ಒಂದು ಹಂಚಿಕೆಯನ್ನು ಮಾಡಿದರೆ ಒಂದು ಮೇಣಬ ಯು ಉರಿಯಿಂದ ತುಸು ಹೊತ್ತಿನಲ್ಲಿ ಸುಮಾರು ೫ ತೊಲಿ ರನ್ನು ಸಂಗ್ರಹಿಸಬಹುದು. ಈ ನೀರು ಉಳಿದ ನೀರಿನಂ ಶುದ್ಧವೂ ಸ್ವಚ್ಛವೂ ಆಗಿರುವದು. ಕುಡಿದರೆ ಮಾತ್ರ ಹೊಗೆಸುತ್ತಿನ ನೀರಿನಂತೆ ಹತ್ತುವದು. ಇದು ಹೊರ್ತಾಗಿ ದ್ಧ ನೀರಿಗೂ ಈ ನೀರಿಗೂ ಏನೂ ವೈಲಕ್ಷಣ್ಯವಿಲ್ಲ.

ಈ ಸ್ಥಳದಲ್ಲಿ ನಾವು ಸಿಂಹಾವಲೋಕನವನ್ನು ಮಾಡುವ ದು ಅವಶ್ಯವು. ಅದರಿಂದ ನಮ್ಮ ಜ್ಞಾನವು ಗತಿಮುಂ[illegible] ಗ್ಯೂ ಸ್ಥಿರವೂ ಪ್ರಯೋಜನಕರವೂ ಆಗುವದು ಪ್ರಯೋಗವನ್ನು ಮಾಡುವ ಮೊದಲು ಅದರಿಂದ ಸ್ಥಾಪಿಸತಕ್ಕ ಸಂಗತಿಗಳನ್ನು ಗೊತ್ತು ಮಾಡುವದೂ ಪ್ರಯೋಗವು ಮುಗಿದ ಬಳಿಕ ಗೊತ್ತಾದ ಸಂಗತಿಗಳನ್ನು ನಿಷ್ಕರ್ಷಿಸುವದೂ ಜ್ಞಾನಾಭಿವೃದ್ಧಿಗೆ ಅನುಕೂಲವಾಗಿರುತ್ತವೆ. ಈ ನಿಯಮಕ್ಕನುಸರಿಸಿ, ಮೇಣಬತ್ತಿಯ ಪ್ರಯೋಗದಿಂದ ಯಾವ ಸಂಗತಿಗಳು ಬೈಲಿಗೆ ಬಂದವೆಂಬದನ್ನು ಆಲೋಚಿಸುವಾ.

ಗೊತ್ತಾದ ಸಂಗತಿಗಳು.

೧. ಮೇಣಬತ್ತಿಯನ್ನು ಹಚ್ಚಿ ಒಂದು ಹವೆಯುಳ್ಳ ಸೀಸೆಯಲ್ಲಿ ಹಿಡಿಯಲು ಅದು ಕೆಲಹೊತ್ತು ಉರಿದು ಬಳಿಕ ನಂದಿ ಹೋಗುತ್ತದೆ.

೨. ಮೇಣಬತ್ತಿಯು ಉರಿಯಿಂದ ಆ ಶೀಸೆಯಲ್ಲಿ ಕಾರ್ಬಾನಿಕ್ ಆಸಿಡ್ ಗ್ಯಾಸವೆಂಬ ಅದೃಶ್ಯ ವಾಯುವು ಹುಟ್ಟಿ ನಿಲ್ಲುತ್ತದೆ.

೩. ಈ ಗ್ಯಾಸವು ಮೇಣಬತ್ತಿಯ ನೆಣದಿಂದಲೂ, ಬತ್ತಿಯಿಂದಲೂ ಹುಟ್ಟುತ್ತದೆ.

೪. ಮೇಣಬತ್ತಿಯ ಉರಿಯಿಂದ ನೀರಾದರೂ ಹುಟ್ಟುತ್ತದೆ.

ಈ ನಾಲ್ಕು ಸಂಗತಿಗಳಿಂದ ಮೇಣಬತ್ತಿಯ ನೆಣವು ನಷ್ಟವಾಗಲಿಲ್ಲೆಂದು ಸ್ಪಷ್ಟವಾಗುತ್ತದೆ. ಆದರೂ ಅದು ತನ್ನ ಮೊದಲಿನ ರೂಪವನ್ನು ತೀರ ಬದಲಿಸಿ, ಕಾರ್ಬಾನಿಕ್ ಆಸಿಡ್ ಗ್ಯಾಸ ಮತ್ತು ನೀರು ಎಂಬ ಎರಡು ತರದ ರೂಪವನ್ನು ಹೊಂದಿತು. ಈ ರೀತಿಯಿಂದ ಪದಾರ್ಥಗಳು ತೀರ ತಮ್ಮ ಮೂಲ ರೂಪವನ್ನು ಬಿಟ್ಟು ಬೇರೆ ರೂಪವನ್ನು ಧರಿಸುವದು ರಸಾಯನ ರೂಪಾಂತರವೆಂದು ಹೇಳಬಹುದು. ಮೇಣಬತ್ತಿಯ ನೆಣವು ಈ ಬಗೆಯಾಗಿ ಬೇರೆ ರೂಪವನ್ನು ಹೊಂದುವದೆಂದು ಯಾರ ಕನಸುಮನಸುಗಳಲ್ಲಿ ಸಹ ಬಾರದು. ಆದರೆ ನಾವು ಮಾಡಿದ ಪ್ರಯೋಗಗಳಿಂದ ಈ ಮಾತು ನಿಜವೆನ್ನಲಿಕ್ಕೆ ಅಡ್ಡಿಯಿಲ್ಲ. ಅದರಿಂದಲೇ ರಸಾಯನ ಶಾಸ್ತ್ರಕ್ಕೆ ಪ್ರಯೋಗ ಶಾಸ್ತ್ರವೆಂತಲೂ, ಅನುಭವಸಿದ್ಧಶಾಸ್ತ್ರವೆಂತಲೂ ಅನ್ನುತ್ತಾರೆ.

೨ ನೇ ಪಾಠ.

೪. ಮೇಣಬತ್ತಿಯು ಉರಿಯುವದರಿಂದ ಏನೂ (ಯಾವ ತತ್ವವೂ) ನಷ್ಟವಾಗುವದಿಲ್ಲ.

ಎಲ್ಲರು ದಿನಾಲು ಸಂಜೆ ಮುಂಜಾನೆ ತಮ್ಮ ತಮ್ಮ ಮನೆಗಳಲ್ಲಿ ನೀರು ಅಡಿಗೆಗಳಿಗಾಗಿ ತೆಕ್ಕೆಗಟ್ಟಲೆಯಿಂದ ಕುಳ್ಳು ಕಟ್ಟಿಗೆ ಮುಂತಾದ ಉರವಲುಗಳನ್ನು ಸುಡುತ್ತಾರೆ. ಮರು ದಿವಸ ಚಿಕ್ಕ ಬುಟ್ಟಿ ತುಂಬ ಬೂದಿಯನ್ನು ಮಾತ್ರ ಹೊರಗೆ ಚೆಲ್ಲುತ್ತಾರೆ. ಆದರೆ ಇಷ್ಟು ಉರುವಲುಗಳಿಗೆ ಇಷ್ಟೇ ಬೂದಿಯೇನು? ಕುಳ್ಳು ಕಟ್ಟಿಗೆಗಳೆಲ್ಲ ಏನಾದವು? ಎಂದು ಯಾರಾದರೂ ಕೇಳಿದರೆ ಕೂಡಲೆ ಅವರು ಅವು ಸುಟ್ಟುಹೋದವೆಂಬ ಉತ್ತರವನ್ನು ಕೊಡುತ್ತಾರೆ. ಆದರೆ ಇದು ಸಮರ್ಪಕ ಉತ್ತರವಲ್ಲ. ಮೇಣಬತ್ತಿಯ ಪ್ರಯೋಗದಿಂದ ಈ ಪ್ರಶ್ನಕ್ಕೆ ಸರಿಯಾದ ಉತ್ತರವನ್ನು ಕೊಡಬಲ್ಲೆವೆಂದು ನೀವು ಉಬ್ಬಿರಬಹುದು. ನೀವಾದರೂ ಕುಳ್ಳು ಕಟ್ಟಿಗೆಗಳೆಲ್ಲ ಕಾರ್ಬಾನಿಕ್ ಆಸಿಡ್ ಗ್ಯಾಸಿನ ರೂಪದಿಂದ ಜೇರಗಿಂಡಿಯಲ್ಲಿ ಹಾಯಿದು, ಹವೆಯಲ್ಲಿ ಕೂಡಿಕೊಂಡವೆಂದು ಉತ್ತರ ಹೇಳುವಿರಲ್ಲವೇ? ಇದಾಗ್ಯೂ ಅಪೂರ್ಣ ಉತ್ತರವೇ

ಜೇರಗಿಂಡಿಯಿಂದ ಹೊರಬಿದ್ದ ಕಾರ್ಬಾನಿಕ್ ಆಸಿಡ್ ಗ್ಯಾಸದೊಳಗಿನ ಕಾರ್ಬೋನನ್ನು ಏನಾಯಿತೆಂದು ಹೇಳಿದರೆ ಮಾತ್ರ ಉತ್ತರವು ಪೂರ್ಣವಾಗುವದು. ಆದ್ದರಿಂದ ನಾವು ನೆಣ, ಕುಳ್ಳು, ಕಟ್ಟಿಗೆಗಳು ಸುಡುವದರಿಂದ ಹುಟ್ಟಿ, ಜೇರಗಿಂಡಿಯಿಂದ ಪಾರಾಗಿ ಹೋಗುವ ಕಾರ್ಬೋನ್ನಿನ ಗತಿ ಏನಾಗುತ್ತದೆಂಬದನ್ನು ತಿಳುಕೊಳ್ಳುವದಕ್ಕಾಗಿ ಈ ಕೆಳಗಿನ ಪ್ರಯೋಗವನ್ನು ಮಾಡಿ ನೋಡುವಾ.

(ಸಶೇಷ)

ಅಲಂಕಾರಗಳು.

(೧೧ನೇ ಪುಟದಿಂದ ಮುಂದೆ ಸಾಗಿದ್ದು.)

ನಿದರ್ಶನಾಲಂಕಾರಕ್ಕೂ ರೂಪಕಕ್ಕೂ ಭೇದ—ರೂಪಕದಲ್ಲಿ, ಬಿಂಬ ಪ್ರತಿಬಿಂಬ ಭಾವವಿಲ್ಲದ ಪದಗಳಲ್ಲಿ ಐಕ್ಯಾರೋಪವಿರುತ್ತದೆ. ನಿದರ್ಶನೆಯಲ್ಲಿ ಹಾಗಲ್ಲ.

ಉ—ಆರ್ಯಾ.

ಬಲಿನಿಗ್ರಹ ಕಾಲದ ಬಾಂ ।
ದಳದೊಳ್ ಚಾಚಿದ ಮುರಾರಿ ಪದ್ದಂಡಂ ॥
ಫಲಮಂ ಕುಡುಗೆಮಗನಿಶಂ ।
ಜಲಜಾತನ ಪದ್ಮನಾಳದಂಡವದ್ದೈ ॥ ೧ ॥

ಅರ್ಥ—ಇಲ್ಲಿ ಬಲಿದೈತ್ಯನ ಮಥನಕಾಲದಲ್ಲಿ ಗಗನದಲ್ಲಿ ಚಾಚಿದ ಹರಿಯು ಪಾದದಂಡವು ನಮಗೆ ಫಲಕೊಡಲಿ. ಬ್ರಹ್ಮನ ಆಸನರೂಪವಾದ ಕಮಲನಾಳದಂಡವಾದ ಹರಿಯ ಪಾದದಂಡವೆಂಬಲ್ಲಿ ಬಿಂಬ ಪ್ರತಿಬಿಂಬಭಾವವಿಲ್ಲ.

ಇದೇ ಅಲಂಕಾರದಲ್ಲಿ, ಒಂದು ವಸ್ತುವು ತನ್ನ ಕ್ರಿಯೆಯಿಂದ ಎರಡನೆಯವರಿಗೆ ಸದಸದರ್ಥಗಳನ್ನು ಬೋಧಿಸುವ ಸಂಬಂಧವಾಗಿ ೨ ಪ್ರಕಾರಗಳುಂಟು, ಅವೆಂತೆಂದರೆ ಸದರ್ಥನಿದರ್ಶನಾ, ಅಸದರ್ಥನಿದರ್ಶನಾ.

ಉ—ಕಂದ ಸದರ್ಥನಿದರ್ಶನಾ.

ಜನರಿಗೆ ಮಿತ್ರರನುಗ್ರಹ ।
ಘನಸಂಪತ್ ಹೇತುವೆಂದು ಪೇಳ್ವನ ತೆರದಿಂ ॥

ದಿನಮಣಿಯು ಪುಟ್ಟೆ ಶೋಭೆಯಂ ।
ಸನವರತದಿ ಕಮಲಗಳ್ಗೆ ನೀಡುವನಾಗಳ್ ॥ ೨ ॥

ಅರ್ಥ—ಸೂರ್ಯನು ತನ್ನ ಜನನದಿಂದ, ಕಮಲಗಳ್ಗೆ ಶೋಭೆಯನ್ನುಂಟು ಮಾಡುವವನಾಗಿ ಎರಡನೆಯವರನ್ನು ಕುರಿತು, ಮಿತ್ರರನುಗ್ರಹವು ದೊಡ್ಡ ಸಂಪತ್ತಿಗೆ ಕಾರಣವು ಎಂಬ ಶ್ರೇಯಸ್ಕರವಾದ ಅರ್ಥವನ್ನು ತಿಳಿಸುವನು; ಆದದರಿಂದ ಇದು ಸದರ್ಥನಿದರ್ಶನಾ,

ಉ—ಅಸದರ್ಥನಿದರ್ಶನಾ.

ರಾಜವಿರೋಧಿಯು ಕೆಡುವ ।
ನೀಜಗದೆಂಬ್ಬದೆ ಬೋಧಿಪನ ತೆರದಿಂ ॥
ರಾಜನು ಪುಟ್ಟಲ್ಕೆ ತಮಂ ।
ತೇಜವ ಕಳಕೊಂಡು ಹೋಹುದ್ಯತ್ವರಿತಂ ॥ ೩ ॥

ಅರ್ಥ—ರಾಜನ ಕೂಡ ಹಗೆತನವಿಟ್ಟವನು ಕೆಡುವನೆಂಬುದನ್ನು ತಿಳಿಸುವದಕ್ಕಾಗಿ, ರಾಜನು (ಚಂದ್ರನು) ಹುಟ್ಟಿದ ಕೂಡಲೆ ಕತ್ತಲೆಯು ಓಡಿಹೋಗುವದು ಎಂದು ನಾಶರೂಪಾರ್ಥವನ್ನು ತಿಳಿಸಿದ್ದರಿಂದ ಅಸದರ್ಥನಿದರ್ಶನೆಯಾಯಿತು.

ಇನ್ನೊಂದುದಾಹರಣೆ— ಅಸದರ್ಥನಿದರ್ಶನಾ.

ಆರ್ಯಾ.

ಮತಿಯಿಲ್ಲದ ಮನುಜನಿವಂ ।
ಪತನವ ಪಡೆವಂ ಮಹಾಪದಂಪೊಂದಿ ॥
ಧುತವಾಗಿ ವಾಯುವಿಂ ಗಿರಿ ।
ಗತಜಲಕಣ ಬೀಳ್ವುದ್ಯಧರಾತಲದೆ ॥ ೪ ॥

ಅರ್ಥ—ಬುದ್ಧಿಯಿಲ್ಲದ ಮನುಷ್ಯನು ದೊಡ್ಡ ಪದವಿಯನ್ನು ಪಡೆದರೆ ಕೆಳಗೆ ಬೀಳುವನು. ಗಿರಿಯ ತುದಿಯಲ್ಲಿದ್ದ ನೀರಿನ ಕಣವು ಮಂದ ಗಾಳಿ ಬಿಟ್ಟಕೂಡಲೆ ಕೆಳಗೆ ಬೀಳುವದು. ಇಲ್ಲಿ ಸಣ್ಣ ಮನುಷ್ಯನಿಗೆ ದೊಡ್ಡ ಪದಪ್ರಾಪ್ತಿಯು ಪತನಕ್ಕೆ ಕಾರಣವೆಂದು ಅನಿಷ್ಟಾರ್ಥವನ್ನು ತಿಳಿಸಿದ್ದರಿಂದ ಈ ಅಲಂಕಾರವಾಯಿತು

ಇನ್ನೊಂದುದಾಹರಣೆ—ಸದರ್ಥನಿದರ್ಶನಾ.

ಆರ್ಯಾ.

ಶಿರದೊಳ್ ಧರಿಪುದು ಪೂರ್ವದ ।

ಗಿರಿ ರವಿಯಂ ಮಾನವಮಂ ಮಹಾತ್ಮರ್ಗೆ ॥
ಚರಿಪುದು ಗೃಹಮೇಧಿಗಳೊಳ ।
ಗರುಪುವವೋಲ್ ನಿತ್ಯವಾಗಿ ತಾನೆಂದುಂ ॥ ೩೯ ॥

ಅರ್ಥ—ಮನೆಗೆ ಬಂದ ದೊಡ್ಡ ಗೃಹಸ್ಥರಿಗೆ ಆದರಸತ್ಕಾರಗಳನ್ನು ಅವಶ್ಯವಾಗಿ ಮಾಡಲೇಬೇಕೆಂದು ಎಲ್ಲ ಗೃಹಸ್ಥರಿಗೆ ಬೋಧಿಸುವನ ಹಾಗೆ ಪೂರ್ವಾಚಲವು, ಉದಯಕಾಲದ ಸೂರ್ಯನನ್ನು ತಲೆಯಲ್ಲಿ ಧರಿಸಿರುವದು. ಇಲ್ಲಿ ಮನೆಗೆ ಬಂದವರಿಗೆ ಮಾನಗಳನ್ನು ಕೊಡಬೇಕೆಂದು ಸದರ್ಥವನ್ನು ಹೇಳಿದ್ದರಿಂದ ಈ ಅಲಂಕಾರವಾಯಿತು.

ಈ ಅಲಂಕಾರದಲ್ಲಿ ಕೆಲವರು, ವಾಕ್ಯಾರ್ಥವೃತ್ತಿನಿದರ್ಶನಾ ಮತ್ತು ಪದಾರ್ಥವೃತ್ತಿನಿದರ್ಶನಾ ಇವೆರಡುಗಳಲ್ಲಿ ಆಗದಿರುವ ವಸ್ತುಸಂಬಂಧವು ಹೇಳಲ್ಪಟ್ಟಿದೆ, ೩ ನೇದಾದ ಸದಸದರ್ಥನಿದರ್ಶನೆಯಲ್ಲಿ ಆಗತಕ್ಕ ವಸ್ತುಸಂಬಂಧವು ಹೇಳಲ್ಪಟ್ಟಿದೆ ಹೀಗೆ ಅನ್ನುತ್ತಾರೆ ಇದರಂತೆ ಮೊದಲನೆ ನಿದರ್ಶನೆಯಲ್ಲಿ ವಾಕ್ಯಾರ್ಥಗಳಲ್ಲಿ ಐಕ್ಯವಾಗದಿದ್ದರೂ ಸಾಮ್ಯವು ತೋರುತ್ತದೆ

ಎರಡನೇ ನಿದರ್ಶನೆಯಲ್ಲಿ ಒಂದರ ಧರ್ಮವು ಮತ್ತೊಂದರಲ್ಲಿ ಕೂಡದಿದ್ದರೂ ಧರ್ಮಿಪದಗಳಲ್ಲಿ ಸಾಮ್ಯ ತೋರುವದು.

೩ ನೇ ನಿದರ್ಶನೆಯಲ್ಲಿ ಸ್ವಂತ ಕ್ರಿಯೆಯಿಂದ ಎರಡನೆಯವರಿಗೆ ಸದಸದರ್ಥಗಳ ಬೋಧಿಸೋಣವು ಆಗುವ ಸಾಮ್ಯವನ್ನು ತೋರಿಸುತ್ತದೆ.

ಕುಳ್ಳಿನಿಂದಾದ ಬೆಂಕಿಯು ಶೀತಕಾಲದಲ್ಲಿ ಪ್ರಾತಃಕಾಲಕ್ಕೆ ವಿದ್ಯಾರ್ಥಿಗಳ ಶೀತವನ್ನು ನಾಶಮಾಡಿ ಅವರನ್ನು ಅಧ್ಯಯನಸಮರ್ಥರನ್ನು ಮಾಡುತ್ತದೆ. ಇದರಂತೆ ಪರ್ವತವಾದರೂ ತಲೆಯಲ್ಲಿ ರವಿಯನ್ನು ಧರಿಸಿ, ಗೃಹಮೇಧಿಗಳೊಳಗೆ ಬಂದವರಿಗೆ ಮಾನಮರ್ಯಾದೆಗಳನ್ನು ಮಾಡಬೇಕೆಂದು ಹೇಳುತ್ತದೆ. ಇಲ್ಲಿ ಹೇಳುವ ಸಂಬಂಧವು ನೆಟ್ಟಗೆ ಕೂಡುತ್ತದೆ.

MANUAL OF METHOD.

ಶಿಕ್ಷಾಕ್ರಮ.

(೪೯ ನೇ ಪುಟದಿಂದ ಮುಂದೆ ಸಾಗಿದ್ದು.)

ಶಿಕ್ಷೆ ಮಾಡುವದಕ್ಕೆ ಕಾರಣವಿಲ್ಲದಂಥ ಪ್ರಸಂಗಗಳು (अ ತಪ್ಪು ತೀರ ಕ್ಷುಲ್ಲಕವಾಗಿರುವಾಗ (ब) ಮಾಡಿದ ತಪ್ಪಿನ ಕೆಲಸದಿಂದ ಲುಕಸಾನಕ್ಕಿಂತ ಹೆಚ್ಚು ಲಾಭವಾಗುತ್ತಿರುವಾಗ ಈ ಪ್ರಸಂಗಗಳಲ್ಲಿ ಶಿಕ್ಷೆ ಮಾಡಬಾರದು.

ಶಿಕ್ಷೆಯು ನಿಷ್ಫಲವಾಗುವಂಥ ಪ್ರಸಂಗಗಳು—(अ) ತಾವು ಮಾಡುವ ಕೆಲಸ ಕೆಟ್ಟದ್ದು ಅದಕ್ಕೆ ಶಾಸನವಾಗುವದೆಂಬ ಬುದ್ಧಿ ಇಲ್ಲದಾಗ. (ब) ತಾನು ಮಾಡುವ ತಪ್ಪಿನ ಕೆಲಸದಿಂದ ಆಗುವ ಲಾಭಾಲಾಭಗಳನ್ನು ತಿಳಿಯುವಷ್ಟು ಸಾಮರ್ಥ್ಯವಿಲ್ಲದಾಗ, (क) ಬುದ್ಧಿ ಸಾಲದೆ ಕೇವಲ ಎರಡನೇಯವರ ಇಚ್ಛೆಗೆ ಅಧೀನವಾಗಿ ತಪ್ಪು ಮಾಡಿದಾಗ. ಈ ಪ್ರಸಂಗಗಳಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷೆ ಮಾಡಿದರೂ ಮಾಡದಿದ್ದರೂ ಅಷ್ಟೇ. ಕಾರಣ ಶಿಕ್ಷೆ ಮಾಡದೆ ಇರುವದೇ ವಿಹಿತವು.

ಶಿಕ್ಷೆಯಿಂದ ಪ್ರಯೋಜನವಾಗದಂಥ ಪ್ರಸಂಗಗಳು—ಕೆಲವು ಶಿಕ್ಷಕರು ತಪ್ಪು ಮಾಡಿದವರಿಗೆ ಮಿತಿಮೀರಿ ಲತ್ತೀ ಹಾಕಲಿಕ್ಕೆ ಕೆಟ್ಟು ಬಿದ್ದ ಕೂಡಲೇ ಹುಡುಗರ ಕೂಡ ಅಳಲಿಕ್ಕೆ ಹೇಸುವದಿಲ್ಲ. ಇಂಥ ಹಂಗ್ಳಿನ ಶಿಕ್ಷಕರು ಮಾಡಿದ ಶಿಕ್ಷೆಯಿಂದ ಪ್ರಯೋಜನವೇನು. ಅದೇ ಮೇರಿಗೆ ಕೆಲವರು ಶಿಕ್ಷಕರು ತಪ್ಪಿಗೆ ಶಿಕ್ಷೆ ಮಾಡುವದೊಂದೇ ಬಲ್ಲರು. ಅವರ ಶಿಕ್ಷೆಯಿಂದ ಆಗುವ ದುಷ್ಪರಿಣಾಮಗಳು ಒಮ್ಮೊಮ್ಮೆ ತಪ್ಪಿನ ದುಷ್ಪರಿಣಾಮಗಳಿಗಿಂತ ಭಯಂಕರವಾಗಿರುವವು. ಇಂಥವರು ಮಾಡಿದ ಶಿಕ್ಷೆಯಿಂದಲೂ ಪ್ರಯೋಜನವಿಲ್ಲ. ಶಿಕ್ಷೆಯು ದುಷ್ಪರಿಣಾಮಗಳು ಯಾವವೆಂದರೆ:—(अ) ಒತ್ತಾಯ ಅಥವಾ ಪ್ರತಿಬಂಧ (ब) ಶಿಕ್ಷೆಯ ಮಿತಿಮೀರಿದ ಭೀತಿ. (क) ಶಿಕ್ಷೆಯಿಂದ ಆದ ಪ್ರತ್ಯಕ್ಷ ನೋವು (ड) ಶಿಕ್ಷೆಪಟ್ಟವನನ್ನು ನೋಡಿ ಬೇರೆಯವರಿಗೆ ಆಗುವ ವ್ಯಸನ.

ಶಿಕ್ಷೆಯು ಅವಶ್ಯವಿಲ್ಲದಂಥ ಪ್ರಸಂಗಗಳು:—ಹುಡುಗರು ಚೀರುತ್ತಾರೆ, ಗೊಂದಲಹಾಕುತ್ತಾರೆ ಕ್ರಮಬಿಟ್ಟು ನಡೆಯು

ತ್ತಾರೆ, ಈ ಮುಂತಾದ ತಪ್ಪುಗಳನ್ನು ಮನಸ್ಸನ್ನು ಒಲಿಸುವದರಿಂದಲೂ, ತಪ್ಪು ತಿಳಿಸುವದರಿಂದಲೂ: ಬೋಧಿಸುವದರಿಂದಲೂ ತಿದ್ದಿ ಹುಡುಗರನ್ನು ಸನ್ಮಾರ್ಗಕ್ಕೆ ಹಚ್ಚಬಹುದು. ಆದ್ದರಿಂದ ಇಂಥ ಪ್ರಸಂಗಗಳಲ್ಲಿ ಶಿಕ್ಷೆಯನ್ನು ಕೊಡುವ ಅವಶ್ಯವಿಲ್ಲ.

೩ ಶಿಕ್ಷೆಯ ಪರಿಮಿತಿ:—ಶಿಕ್ಷೆಯನ್ನು ಇಷ್ಟೇ ಕೊಡಲಿಕ್ಕೆ ಬೇಕೆಂದು ಹೇಳುವದು ಸಾಧ್ಯವಲ್ಲ. ಆದರೆ ತಪ್ಪು ಮಾಡಿದವನ ಕಡೆಯಿಂದ ಪುನಃ ಅಂಥ ತಪ್ಪು ಆಗದಂತೆ ಎಚ್ಚರಿಕೆ ಹುಟ್ಟುವಷ್ಟು ಶಿಕ್ಷೆಯನ್ನು ಕೊಡಲಿಕ್ಕೆ ಬೇಕೆಂದು ಹೇಳಬಹುದು. ಕೆಲವು ತಪ್ಪುಗಳು ಕ್ಷುಲ್ಲಕವಾಗಿರುವವು. ಕೆಲವು ಮಹತ್ವದವಿರುವವು. ಆದ್ದರಿಂದ ಆಯಾ ತಪ್ಪುಗಳಿಗೆ ಸರಿಯಾಗಿ ಶಿಕ್ಷೆಯನ್ನು ಮಾಡಲಿಕ್ಕೆ ಬೇಕು ಎಲ್ಲ ತಪ್ಪುಗಳಿಗೂ ಒಂದೇ ಶಿಕ್ಷೆಯಿಂದ ಫಲವಾಗಲಾರದು. ಉಲುಕೋಚಿತನ, ಮತ್ತು ಸುಳ್ಳು ಹಟಗಳಿಂದ ಕೂಡಿಕೊಂಡ ಕಿಡಿಗೇಡಿತನ ಈ ತಪ್ಪುಗಳಿಗೆ ಒಂದೇ ಪ್ರಕಾರದ ಶಿಕ್ಷೆಯಿಂದ ಕೆಲಸವಾಗದು. ಉಲುಕೋಚಿತನಕ್ಕೆ ಸ್ವಲ್ಪ ಶಿಕ್ಷೆ ಸಾಕು. ಆದರೆ ಎರಡನೇ ತಪ್ಪಿಗೆ ಎಚ್ಚರಿಕೆ ಹುಟ್ಟುವಂಥ ಶಿಕ್ಷೆಯೇ ಅವಶ್ಯವು. ಒಂದೇ ಅಪರಾಧಕ್ಕಾದರೂ ಒಂದೇ ತರದ ಶಿಕ್ಷೆ ಮಾಡುವದರಿಂದ ಅನ್ಯಾಯವು ಘಟಿಸುತ್ತದೆ. ಹುಡುಗರ ಮನಸ್ಸು, ಪ್ರವೃತ್ತಿ, ಬುದ್ಧಿ, ಸ್ವಭಾವ, ಶೀಲಗಳನ್ನು ಅನುಲಕ್ಷಿಸಿ ಶಿಕ್ಷೆಯನ್ನು ಕೊಡಲಿಕ್ಕೆ ಬೇಕು. ಶಿಕ್ಷೆಯನ್ನು ಅಪರೂಪವಾಗಿಯೂ ನಿರ್ವಾಹವಿಲ್ಲದ್ದಕ್ಕಾಗಿಯೂ ಕೊಡುತ್ತಿದ್ದರೆ ಕಟುತರವಾದ ಶಿಕ್ಷೆಗಳನ್ನು ಮಾಡುವದೇ ವಿಹಿತವು. ಇಂಥ ಪ್ರಸಂಗದಲ್ಲಿ ಲಘುಶಿಕ್ಷೆಗಳಿಂದ ಇಷ್ಟಾರ್ಥವು ಸಿದ್ಧವಾಗುವದಿಲ್ಲ. ಶಾಲೆಯಿಂದ ಹೊರಗೆ ಹಾಕೋಣ, ಕೆಲಸದಿಂದ ತೆಗೆದು ಹಾಕೋಣ, ಮುಂತಾದ ಶಿಕ್ಷೆಗಳು ವಿಕದಿ ಶಿಡುವಾಗಿರುತ್ತವೆ ಈ ಶಿಕ್ಷೆಗಳನ್ನು ನೈತಿಕ ಅಪರಾಧಗಳಿಗೆ ನಿರ್ವಾಹವಿಲ್ಲದಾಗ ವಿಧಿಸಬಹುದು. ಒಮ್ಮೊಮ್ಮೆ ಇವು ತಪ್ಪಿನ ಮಾನದಿಂದ ಹೆಚ್ಚೆಂದು ತೋರಬಹುದು. ಆದರೂ ಇವನ್ನು ಅಪರೂಪವಾಗಿ ಕೊಡಲಿಕ್ಕೆ ಬಾಧವಿಲ್ಲ. ಶಿಕ್ಷೆಯಿಂದ ಹಿತಕ್ಕಿಂತ ಹಾನಿಯೇ

MANUAL OF METHOD.

ಶಿಕ್ಷಾಕ್ರಮ.

(೫೯ ನೇ ಪುಟದಿಂದ ಮುಂದೆ ಸಾಗಿದ್ದು.)

ಶಿಕ್ಷೆ ಮಾಡುವದಕ್ಕೆ ಕಾರಣವಿಲ್ಲದಂಥ ಪ್ರಸಂಗಗಳು (अ) ತಪ್ಪು ತೀರ ಕ್ಷುಲ್ಲಕವಾಗಿರುವಾಗ (ब) ಮಾಡಿದ ತಪ್ಪಿನ ಕೆಲಸದಿಂದ ಲುಕಸಾನಕ್ಕಿಂತ ಹೆಚ್ಚು ಲಾಭವಾಗುತ್ತಿರುವಾಗ ಈ ಪ್ರಸಂಗಗಳಲ್ಲಿ ಶಿಕ್ಷೆ ಮಾಡಬಾರದು.

ಶಿಕ್ಷೆಯು ನಿಷ್ಫಲವಾಗುವಂಥ ಪ್ರಸಂಗಗಳು—(अ) ತಾವು ಮಾಡುವ ಕೆಲಸ ಕೆಟ್ಟದ್ದು ಅದಕ್ಕೆ ಶಾಸನವಾಗುವದೆಂಬ ಬುದ್ಧಿ ಇಲ್ಲದಾಗ. (ब) ತಾವು ಮಾಡುವ ತಪ್ಪಿನ ಕೆಲಸದಿಂದ ಆಗುವ ಲಾಭಾ ಲಾಭಗಳನ್ನು ತಿಳಿಯುವಷ್ಟು ಸಾಮರ್ಥ್ಯವಿಲ್ಲದಾಗ. (क) ಬುದ್ಧಿ ಸಾಲದೆ ಕೇವಲ ಎರಡನೇಯವರ ಇಚ್ಛೆಗೆ ಅಧೀನವಾಗಿ ತಪ್ಪು ಮಾಡಿದಾಗ. ಈ ಪ್ರಸಂಗಗಳಲ್ಲಿ ವಿದ್ಯಾರ್ಥಿಗಳಿಗೆ ಶಿಕ್ಷೆ ಮಾಡಿದರೂ ಮಾಡದಿದ್ದರೂ ಅಷ್ಟೇ, ಕಾರಣ ಶಿಕ್ಷೆ ಮಾಡದೆ ಇರುವದೇ ವಿಹಿತವು.

ಶಿಕ್ಷೆಯಿಂದ ಪ್ರಯೋಜನವಾಗದಂಥ ಪ್ರಸಂಗಗಳು—ಕೆಲವು ಶಿಕ್ಷಕರು ತಪ್ಪು ಮಾಡಿದವರಿಗೆ ಮಿತಿಮೀರಿ ಲತ್ತೀ ಹಾಕಲಿಕ್ಕೆ ಸಿಟ್ಟು ಬಿದ್ದ ಕೂಡಲೇ ಹುಡುಗರ ಕೂಡ ಅಳಲಿಕ್ಕೆ ಹೇಸುವದಿಲ್ಲ. ಇಂಥ ಹಂಗಳಿನ ಶಿಕ್ಷಕರು ಮಾಡಿದ ಶಿಕ್ಷೆಯಿಂದ ಪ್ರಯೋಜನವೇನು. ಅದೇ ಮೇರಿಗೆ ಕೆಲವರು ಶಿಕ್ಷಕರು ತಪ್ಪಿಗೆ ಶಿಕ್ಷೆ ಮಾಡುವದೊಂದೇ ಬಲ್ಲರು. ಅವರ ಶಿಕ್ಷೆಯಿಂದ ಆಗುವ ದುಷ್ಪರಿಣಾಮಗಳು ಒಮ್ಮೊಮ್ಮೆ ತಪ್ಪಿನ ದುಷ್ಪರಿಣಾಮಗಳಿಗಿಂತ ಭಯಂಕರವಾಗಿರುವವು. ಇಂಥವರು ಮಾಡಿದ ಶಿಕ್ಷೆಯಿಂದಲೂ ಪ್ರಯೋಜನವಿಲ್ಲ. ಶಿಕ್ಷೆಯ ದುಷ್ಪರಿಣಾಮಗಳು ಯಾವವೆಂದರೆ:—(अ) ಒತ್ತಾಯ ಅಥವಾ ಪ್ರತಿಬಂಧ (ब) ಶಿಕ್ಷೆಯ ಮಿತಿಮೀರಿದ ಭೀತಿ. (क) ಶಿಕ್ಷೆಯಿಂದ ಆದ ಪ್ರತ್ಯಕ್ಷ ನೋವು (ड) ಶಿಕ್ಷೆಪಟ್ಟವನನ್ನು ನೋಡಿ ಬೇರೆಯವರಿಗೆ ಆಗುವ ವ್ಯಸನ.

ಶಿಕ್ಷೆಯು ಅವಶ್ಯವಿಲ್ಲದಂಥ ಪ್ರಸಂಗಗಳು:—ಹುಡುಗರು ಚೀರುತ್ತಾರೆ, ಗೊಂದಲಹಾಕುತ್ತಾರೆ ಕ್ರಮಬಿಟ್ಟು ನಡಿಯು

ತ್ತಾರೆ, ಈ ಮುಂತಾದ ತಪ್ಪುಗಳನ್ನು ಮನಸ್ಸನ್ನು ಒಲಿಸುವದರಿಂದಲೂ, ತಪ್ಪು ತಿಳಿಸುವದರಿಂದಲೂ: ಬೋಧಿಸುವದರಿಂದಲೂ ತಿದ್ದಿ ಹುಡುಗರನ್ನು ಸನ್ಮಾರ್ಗಕ್ಕೆ ಹಚ್ಚಬಹುದು. ಆದ್ದರಿಂದ ಇಂಥ ಪ್ರಸಂಗಗಳಲ್ಲಿ ಶಿಕ್ಷೆಯನ್ನು ಕೊಡುವ ಅವಶ್ಯವಿಲ್ಲ.

೩ ಶಿಕ್ಷೆಯ ಪರಿಮಿತಿ:—ಶಿಕ್ಷೆಯನ್ನು ಇಷ್ಟೇ ಕೊಡಲಿಕ್ಕೆ ಬೇಕೆಂದು ಹೇಳುವದು ಸಾಧ್ಯವಲ್ಲ. ಆದರೆ ತಪ್ಪು ಮಾಡಿದವನ ಕಡೆಯಿಂದ ಪುನಃ ಅಂಥ ತಪ್ಪು ಆಗದಂತೆ ಎಚ್ಚರಿಕೆ ಹುಟ್ಟುವಷ್ಟು ಶಿಕ್ಷೆಯನ್ನು ಕೊಡಲಿಕ್ಕೆ ಬೇಕೆಂದು ಹೇಳಬಹುದು. ಕೆಲವು ತಪ್ಪುಗಳು ಕ್ಷುಲ್ಲಕವಾಗಿರುವವು. ಕೆಲವು ಮಹತ್ವದವಿರುವವು. ಆದ್ದರಿಂದ ಆಯಾ ತಪ್ಪುಗಳಿಗೆ ಸರಿಯಾಗಿ ಶಿಕ್ಷೆಯನ್ನು ಮಾಡಲಿಕ್ಕೆ ಬೇಕು ಎಲ್ಲ ತಪ್ಪುಗಳಿಗೂ ಒಂದೇ ಶಿಕ್ಷೆಯಿಂದ ಫಲವಾಗಲಾರದು. ಉಲುಕೋಚಿತನ, ಮತ್ತು ಸುಳ್ಳು ಹಟಗಳಿಂದ ಕೂಡಿಕೊಂಡ ಕಿಡಿಗೇಡಿತನ ಈ ತಪ್ಪುಗಳಿಗೆ ಒಂದೇ ಪ್ರಕಾರದ ಶಿಕ್ಷೆಯಿಂದ ಕೆಲಸವಾಗದು. ಉಲುಕೋಚಿತನಕ್ಕೆ ಸ್ವಲ್ಪ ಶಿಕ್ಷೆ ಸಾಕು. ಆದರೆ ಎರಡನೇ ತಪ್ಪಿಗೆ ಎಚ್ಚರಿಕೆ ಹುಟ್ಟುವಂಥ ಶಿಕ್ಷೆಯೇ ಅವಶ್ಯವು. ಒಂದೇ ಅಪರಾಧಕ್ಕಾದರೂ ಒಂದೇ ತರದ ಶಿಕ್ಷೆ ಮಾಡುವದರಿಂದ ಅನ್ಯಾಯವು ಘಟಿಸುತ್ತದೆ. ಹುಡುಗರ ಮನಸ್ಸು, ಪ್ರಕೃತಿ, ಬುದ್ಧಿ, ಸ್ವಭಾವ, ಶೀಲಗಳನ್ನು ಅನುಲಕ್ಷಿಸಿ ಶಿಕ್ಷೆಯನ್ನು ಕೊಡಲಿಕ್ಕೆ ಬೇಕು. ಶಿಕ್ಷೆಯನ್ನು ಅಪರೂಪವಾಗಿಯೂ ನಿರ್ವಾಹವಿಲ್ಲದ್ದಕ್ಕಾಗಿಯೂ ಕೊಡುತ್ತಿದ್ದರೆ ಕಡುತರವಾದ ಶಿಕ್ಷೆಗಳನ್ನು ಮಾಡುವದೇ ವಿಹಿತವು. ಇಂಥ ಪ್ರಸಂಗದಲ್ಲಿ ಲಘುಶಿಕ್ಷೆಗಳಿಂದ ಇಷ್ಟಾರ್ಥವು ಸಿದ್ಧವಾಗುವದಿಲ್ಲ. ಶಾಲೆಯಿಂದ ಹೊರಗೆ ಹಾಕೋಣ, ಕೆಲಸದಿಂದ ತೆಗೆದು ಹಾಕೋಣ, ಮುಂತಾದ ಶಿಕ್ಷೆಗಳು ನಿಕದೆ ಶಿಡಿವಾಗಿರುತ್ತವೆ ಈ ಶಿಕ್ಷೆಗಳನ್ನು ನೈತಿಕ ಅಪರಾಧಗಳಿಗೆ ನಿರ್ವಾಹವಿಲ್ಲದಾಗ ವಿಧಿಸಬಹುದು. ಒಮ್ಮೊಮ್ಮೆ ಇವು ತಪ್ಪಿನ ಮಾನದಿಂದ ಹೆಚ್ಚೆಂದು ತೋರಬಹುದು. ಆದರೂ ಇವನ್ನು ಅಪರೂಪವಾಗಿ ಕೊಡಲಿಕ್ಕೆ ಬಾಧವಿಲ್ಲ. ಶಿಕ್ಷೆಯಿಂದ ಒಳಿತಕ್ಕಿಂತ ಹಾನಿಯೇ

ಹೆಚ್ಚಾಗುವ ಸಂಭವವಿದ್ದರೆ ಅದನ್ನು ಕೊಡದಿರುವದೇ ಲೇಸು,

೪ ಶಿಕ್ಷೆಯ ತಾರತಮ್ಯ ವಿಚಾರ:—ತಪ್ಪಿಗೆ ಅನುಗುಣವಾದ ಶಿಕ್ಷೆಯನ್ನು ಆರಿಸಿ ಅದನ್ನು ವಿಧಿಸುವದು ಮಾಸ್ತರ ಕರ್ತವ್ಯವು. ಬೇರೆ ಬೇರೆ ತಪ್ಪುಗಳಿಗೆ ಅವುಗಳ ಮಾನದಿಂದ ಹೆಚ್ಚು ಕಡಿಮೆ ಶಿಕ್ಷೆಯನ್ನು ಮಾಡುತ್ತ ಹೋದರೆ ಅದನ್ನು ಕಂಡು ವಿದ್ಯಾರ್ಥಿಗಳಿಗೆ ತಪ್ಪುಗಳ ತಾರತಮ್ಯ[illegible] ಗೊತ್ತಾಗುತ್ತದೆ. ತಪ್ಪುಗಳಿಗೆ ಅನುಗುಣವಾದ ಶಿಕ್ಷೆಯನ್ನು ಆರಿಸಿ ಅದನ್ನು ಮಹತ್ತ್ವವಾದ ಲಾಭವಾಗುವಂ[illegible]ಯೋಗಿಸಿದರೆ ಅದರಿಂದ ವಿದ್ಯಾರ್ಥಿಗಳಲ್ಲಿ ಒಂದು ಪ್ರಕಾ[illegible]ಚ್ಚರಿಕೆಯು ಹುಟ್ಟುತ್ತದೆ ಶಿಕ್ಷೆಗಳನ್ನು ಆರಿಸುವಾಗ ಚಲೋ ಪ್ರವೃತ್ತಿಗಳನ್ನು ಎಚ್ಚರಿಸಿ ಮೋಹದ ಪ್ರವೃತ್ತಿಗಳನ್ನು ಕುಗ್ಗಿಸಿ ಇಷ್ಟವಾದ ತಿದ್ದುಪಾಟನ್ನು ಹುಟ್ಟಿಸುವಂಥವುಗಳನ್ನೇ ಆರಿಸಬೇಕು. ಯಾವದಾದರೊಂದು ಶಾಲೆಯ ಪದಾರ್ಥವನ್ನು ಕೆಡಿಸಿದರೆ, ಪಾಠವನ್ನು ಮಾಡದೇ ಇದ್ದರೆ, ಅದನ್ನು ಭರತಿ ಮಾಡಿಕೊಳ್ಳುವಂಥ ಶಿಕ್ಷೆಯನ್ನು ವಿಧಿಸಬೇಕು; ಅಂದರೆ ಕೆಡಿಸಿದ ಪದಾರ್ಥದ ಕಿಮ್ಮತ್ತನ್ನು ಅವರ ಕಡಿಯಿಂದ ತೆಗಿದು ಕೊಳ್ಳಬೇಕು. ಪಾಠವನ್ನು ಸಿದ್ಧ ಮಾಡದಿದ್ದರೆ ಅದನ್ನು ಅವರ ಕಡಿಯಿಂದ ಸಿದ್ಧ ಮಾಡಿಸಬೇಕು.

ದೇಹದಂಡ, ಶಾಲೆಯಲ್ಲಿ ಒತ್ತಟ್ಟಿಗೆ ಕೂಡಿಸೋಣ, ಮುಂತಾದ ಶಿಕ್ಷೆಗಳು ಕೆಲಸದವಲ್ಲ. ಯಾಕಂದರೆ ನಿಷ್ಕಾರಣ ಶಿಕ್ಷೆಯಾಗಿದೆ ಎಂಬ ಮಾತು ನಿದರ್ಶನಕ್ಕೆ ಬಂದರೆ ಮಾಡಿ ಶಿಕ್ಷೆಯನ್ನು ಮಾಫ ಮಾಡಲಿಕ್ಕೆ ಮಾರ್ಗ ಉಳಿಯುವದಿಲ್ಲ ಆದರೆ ಗುಣಗಳನ್ನು ಕಡಕೊಳ್ಳುವದು ಅಧಿಕಾರವನ್ನು ಕಸ ಕೊಳ್ಳುವದು ಈ ಮಾದರಿಯ ಶಿಕ್ಷೆಗಳನ್ನು ಕೊಡಬಹುದು ಶಿಕ್ಷೆಯು ಹುಡುಗರಿಗೆ ತಿಳಿಯುವಂಥಾದ್ದೂ ಶಾಲೆಯ ಎ ವಿದ್ಯಾರ್ಥಿಗಳಿಗೆ ಮಾನ್ಯವಾದಂಥಾದ್ದೂ ಇರಬೇಕು. ಇ ದಿದ್ದರೆ ಅದು ನಿಷ್ಪ್ರಯೋಜನವಾದದ್ದೆಂದು ಹೇಳಬಹುದು.

೫ ಶಿಕ್ಷೆಯ ಪ್ರಕಾರಗಳು—(೧) ಶಿಟ್ಟು ಮಾಡುವದು ಈ ಶಿಕ್ಷೆಯ ಅವಾಂತರ ಪ್ರಕಾರಗಳು ಹಲವುಂಟು ಅವುಗಳಲ್ಲಿ ಯೋಗ್ಯ ಕಂಡಂಥಾದ್ದನ್ನು ಶಿಕ್ಷಕನು ಕೈಕೊಳ್ಳಬಹು

ವು. ಆದರೆ ಈ ಶಿಕ್ಷೆಗಳನ್ನು ಅಪರೂಪವಾಗಿ ಕೊಟ್ಟಷ್ಟು ಳ್ಳೇದು. ಪರರು ಕೆಟ್ಟ ಕೆಲಸ ಮಾಡಿದ್ದರಿಂದ ಹುಟ್ಟುವ ಕ್ಷೇಪವನ್ನು ಸ್ವಾಧೀನದಲ್ಲಿಟ್ಟು, ಅದನ್ನು ಪ್ರಸಂಗೋಪಾತ್ತಾ ತೋರಿಸಿದರೆ ಬಹಳ ಲಾಭವಾಗುತ್ತದೆ.

(೨) ನಾಚಿಸೋಣ—ಕೆಟ್ಟ ಕೆಲಸ ಮಾಡಿದ ಹುಡುಗರ ಲ್ಲಿ ಕೆಲವರು ತಪ್ಪಿಂದಾದ ಕೆಲಸಕ್ಕಾಗಿ ವಿಷಾದಿಸುತ್ತಾರೆ. ಇಂಥವರ ನಾಚಿಕೆಯ ಪ್ರವೃತ್ತಿಗಳನ್ನು ಜಾಗೃತಪಡಿಸಿ ಅವುಗಳ ದ್ವಾರದಿಂದ ಅವರನ್ನು ತಿದ್ದಬಹುದು. ಆದರೆ ಕೆಲವರ ಲ್ಲಿ ಈ ನಾಚಿಕೆಯ ಪ್ರವೃತ್ತಿಗಳು ತೀರ ಸೂಕ್ಷ್ಮವಿರುತ್ತವೆ. ಇಂಥವರಿಗೆ ಇದರಿಂದ ಪ್ರಯೋಜನವಾಗುವದು ಕಠಿಣ. ಈ ಪ್ರಕಾರದ ಶಿಕ್ಷೆಗಳಿಂದ ಫಲವಾಗಬೇಕಾದರೆ ಹುಡುಗ ನು ಮಾನಿಯೂ ಅವನ ಜತೆಗಾರರು ಸತ್ಪಕ್ಷಪಾತಿಗಳೂ ಇ ರಲಿಕ್ಕೆಬೇಕು. ದೊಡ್ಡ ಅಪರಾಧಗಳಿಗೆ ಈ ಶಿಕ್ಷೆಯು ತಕ್ಕ ದ್ದಲ್ಲ. ಇದನ್ನು ಕೇವಲ ಆರಂಭದ ತಪ್ಪುಗಾರರಿಗೆ ಕೊಡ ಬಹುದು. ಈ ಶಿಕ್ಷೆಯನ್ನು ಮೇಲಿಂದಮೇಲೆ ಕೊಡುವದ ಂದ ಇದರ ಸಾಮರ್ಥ್ಯವು ಕುಂದುತ್ತದೆ.

(೩) ಪ್ರತಿಬಂಧ—ಆಟಕ್ಕೆ ಹೋಗಗೊಡಿಸದೇ ಇರೋ ಣ, ಶಾಲೆ ಬಿಟ್ಟಮೇಲೆ ಶಾಲೆಯಲ್ಲಿ ಕೂಡ್ರಿಸೋಣ ಮುಂತಾ ದ ಪ್ರತಿಬಂಧದ ಸಂಗತಿಗಳಿಗೆ ಹುಡುಗರು ಮೆಚ್ಚುವದಿಲ್ಲ. ತಡಮಾಡಿ ಬರುವ ಹುಡುಗರಿಗೂ ಗೊಂದಲ ಹಾಕುವ ಹುಡುಗರಿಗೂ ಕೆಟ್ಟ ನಡತೆಯ ಹುಡುಗರಿಗೂ ಈ ಶಿಕ್ಷೆಯನ್ನು ಕೊಡಬಹುದು. ಬೇನ ಮುಂತಾದ ಕೆಲವು ಸಭ್ಯಗೃಹಸ್ಥರು ಈ ಶಿಕ್ಷೆಯ ಬಗ್ಗೆ ಮೂಗು ಮುರಿಯುತ್ತಾರೆ.

(೪) ಸುಖಭಂಗ—ಮನಸ್ಸನ್ನು ಸೊಗಸುಗೊಳಿಸುವಂಥ ಸಂಗತಿಯನ್ನು ಕೊಡದೇ ಇರುವದರಿಂದ ಹುಡುಗರನ್ನು ಸ ನ್ಮಾರ್ಗಕ್ಕೆ ತರಬಹುದು. ಕೆಲವರು ವಿದ್ವಾಂಸರು ಇದಕ್ಕೆ ವಿಪರೀತವಾಗಿ, ಯಾವ ಸುಖದ ಸಂಗತಿಯಿಂದ ತಪ್ಪು ಮಾ ಡಲ್ಪಟ್ಟಿರುವದೋ ಆ ಸುಖದ ಸಂಗತಿಗಳನ್ನು ವಿಪುಲವಾಗಿ ಪೂರೈಸಿ ತಪ್ಪುಗಳನ್ನು ತಿದ್ದುವರು.

(೫) ಮನೆಯಲಿ ಕೆಲಸ ಮಾಡಿ ತರ ಹೇಳುವದು—ಬೇ

ಸರವೇ ಈ ಶಿಕ್ಷೆಯು ಮರ್ವವು. ಒತ್ತಟ್ಟಿಗೆ ಒಬ್ಬನೇ ಕೂ
ಡ್ರ ಬೇಕಾಗುವದರಿಂದ ಆಗುವ ಅಸಮಾಧಾನವು ಕೆಲವಂ
ದಿಂದ ಈ ಶಿಕ್ಷೆಯು ಉದ್ದೇಶವನ್ನು ಕೊನೆಗಾಣಿಸುತ್ತದೆ.
ಸಮಯಕ್ಕೆ ಕೆಲಸ ಮಾಡದೇ ಇರುವದು, ಹೇಳಿದಂತೆ ನಡ
ಯದೇ ಇರುವದು, ಪಾಠವನ್ನು ತಪ್ಪಿಸುವದು ಮುಂತಾ
ಅಪರಾಧಗಳಿಗೆ ಈ ಶಿಕ್ಷೆಯನ್ನು ಕೊಡಬಹುದು. ಈ ಶಿಕ್ಷೆ
ಯ ಸಂಬಂಧದಿಂದ ಮತಭೇದ ಉಂಟು. ಕೆಲವರು ಈ
ಶಿಕ್ಷೆಯಿಂದ ವಿದ್ಯಾರ್ಥಿಗಳಲ್ಲಿ ಸಾಲೆಯ ಬಗ್ಗೆ ಅಪ್ರೀತಿ ಹು
ಟ್ಟುವದೆಂದು ವಾದಿಸುತ್ತಾರೆ. ಕೆಲವರಂತೂ ಈ ಶಿಕ್ಷೆಯು
ಕಾಡು ಜನರಿಗೆ ಮಾತ್ರ ತಕ್ಕದ್ದೆಂದು ಸಾರುತ್ತಾರೆ.

(೬) ಉಲ್ಲೇಖ— ದೋಷಗಳ ಉಲ್ಲೇಖದಿಂದ ಒಮ್ಮೊಮ್ಮೆ ಲಾಭವಾಗುತ್ತದೆ ಈ ದೋಷಗಳನ್ನು ವಿದ್ಯಾರ್ಥಿಗಳ ಮುಂದಿನ ಚಲೋ ನಡತೆಯಿಂದ ತೆಗೆದುಹಾಕಲಿಕ್ಕೆ ಮಾರ್ಗವಿದ್ದರಂತೂ ಬಹಳೇ ಒಳ್ಳೇದು.

(೭) ದೇಹದಂಡನ.

(೮) ಸಾಲೆಯಿಂದ ಹೊರಗೆ ಹಾಕುವದು— ಇದು ಕಡೆಯ ಉಪಾಯವು. ಎಲ್ಲ ಉಪಾಯಗಳು ನಿಷ್ಪ್ರಯೋಜನವಾದರೆ ಮಾತ್ರ ಈ ಶಿಕ್ಷೆಯನ್ನು ಕೊಡತಕ್ಕದ್ದು. ಪ್ರಾಥಮಿಕ ಶಾಲೆಗಳಲ್ಲಿ ಈ ಉಪಾಯವನ್ನು ಕೈಕೊಳ್ಳುವದು ಪ್ರಶಸ್ತವಲ್ಲ.

೬. ಕೆಲವು ಅಗ್ರಾಹ್ಯವಾದ ಶಿಕ್ಷೆಗಳು— ಕಿವಿ ಹಿಂಡುವದು, ಕಪಾಳಕ್ಕೆ ಹೊಡೆಯುವದು, ಕೂದಲು ಹಿಡಿದು ಜಗ್ಗುವದು, ಮೂಲದಂತೆಗೆ ನಿರಿಸುವದು ಒಂದು ಕಾಲಿನ ಮೇಲೆ ನಿಲ್ಲಿಸುವದು, ಹೆಬ್ಬೆಟ್ಟು ಹಿಡಿದು ನಿಲ್ಲಿಸುವದು, ಖುರ್ಚಿ ಕೂಡ್ರಿಸುವದು ಮುಂತಾದ ಶಿಕ್ಷೆಗಳು ಎಷ್ಟು ಮಾತ್ರವೂ ಸರಿಯಾದವುಗಳಲ್ಲ. ಕತ್ತಲೆ ಕೋಣೆಯಲ್ಲಿ ಹಾಕುವದು ಪೆಟ್ಟಿಗೆಯಲ್ಲಿ ಹಾಕುವದು ಮುಂತಾದ ಶಿಕ್ಷೆಗಳು ಕ್ರೂರವೂ ಭಯಂಕರವೂ ಆಗಿರುತ್ತವೆ.

ಮೂರ್ಖನು, ಕಳ್ಳನು ಮುಂತಾದ ಬಿರುದಾವಳಿಗಳನ್ನು ಬರೆದು ಹಣಿಗೆ ಹಚ್ಚಿ ವಿದ್ಯಾರ್ಥಿಯನ್ನು ಮೆರಿಸುವದು ತೀರ ಅಪ್ರಶಸ್ತವು; ಇದರಿಂದ ಹುಡುಗರ ಮರ್ಯಾದೆಗೆ ಕೊರತೆ

ಬರುವವಲ್ಲದೆ ಅವನ ಮನಸ್ಸಿನ ಕೋಮಲತ್ವವು ನಷ್ಟವಾಗುತ್ತದೆ.

೩. ದೇಹದಂಡ:—ಈ ಸಂಬಂಧದಿಂದ ಬಹಳ ಮತಭೇದ ಉಂಟು. ಇದನ್ನು ಕುರಿತು ಯಾವದೊಂದು ಸರ್ವಸಮ್ಮತವಾದ ಅಭಿಪ್ರಾಯವನ್ನು ಹೇಳುವದು ದುಸ್ಸಾಧ್ಯವು. ದೇಹದಂಡವನ್ನು ಮಾಡುವ ಕೆಲವು ಪ್ರಸಂಗಗಳು ಬರುತ್ತವೆಂತಲೂ ಆ ಪ್ರಸಂಗಗಳಲ್ಲಿ ದೇಹದಂಡವನ್ನು ಮಾಡದಿರುವದರಿಂದ ಹಾನಿಯು ತಪ್ಪದೆಂತಲೂ ಬಹು ಜನರ ಅಭಿಪ್ರಾಯವು ಉಂಟು.

* * *

SELECTIONS FROM THE KARNATIK GAZETTEER.

ಕನ್ನಡ ಗೆಝೇಟಿಯರದಿಂದ ಅವತರಣಗಳು.

(೪೦ ನೇ ಪುಟದಿಂದ ಮುಂದೆ ಸಾಗಿದ್ದು.)

ಕುಮಟಾ ತಾಲೂಕು.

ಕ್ಷೇತ್ರ—ಸಮುದ್ರದಂಡೆಯಲ್ಲಿ ಅಂಕೋಲಾ ತಾಲೂಕಿನ ದಕ್ಷಿಣಕ್ಕೆ. ಸರಕಾರೀ ಹಳ್ಳಿಗಳು ೧೨೦. ಕ್ಷೇತ್ರ ೨೩೦ ಚ. ಮೈಲು, ಜನಸಂಖ್ಯೆ ೫೮೫೩೮, ಭೂಮಿಯ ಕಂದಾಯ ೧೨೧೨೨೦ ರೂಪಾಯಿ.

ಸ್ವರೂಪ, ಭೂಮಿ—ಎತ್ತರವಾದ ತಪ್ಪಲ ಭೂಮಿಗಳೂ ಗುಡ್ಡಗಳೂ ಸಮುದ್ರ ದಂಡೆಯ ವರೆಗೆ ಹಬ್ಬಿರುತ್ತವೆ; ಪ್ರಾತ್ಯಗಳೂ ಕೆಲವುಂಟು. ಆದರೆ ಸಮುದ್ರದಂಡೆಯಲ್ಲಿ ತೆಂಗಿನ ಬನಗಳೂ ಅವುಗಳ ಹಿಂದೆ ಬತ್ತದ ಗದ್ದೆಗಳೂ, ಮಧ್ಯಪ್ರದೇಶದಲ್ಲಿ ಹಲಕೆಲವು ತೋಟಗಳೂ ಉಂಟು. ತಾಲೂಕಿನ ಮಧ್ಯದಲ್ಲಿ ಸಹ ಕಿರಿ ಅಡವಿಯನ್ನು ಕಾಣಬಹುದು; ಅದು ಪೂರ್ವಕ್ಕೆ ಹೋದಹಾಗೆ ದಟ್ಟಾಗಿಯೂ ಎತ್ತರವಾಗಿಯೂ ಬೆಳೆದದ್ದು ಕಾಣಿಸುವದು. ಸಹ್ಯಾದ್ರಿಯ ಬುಡದಲ್ಲಿ ರಾಗಿ ಭೂಮಿಗಳು ವಿಶೇಷ. ಭೂಮಿ ಕೆಂಪು; ಸಮುದ್ರದ ಬಳಿಯಲ್ಲಿ ಉಸುಬು ಕೂಡಿದ್ದು.

ಹವೆ, ಮಳೆ, ನೀರು—ಸಮುದ್ರ ದಂಡೆಯ ಹವೆಯು ಆರೋಗ್ಯದ್ದು. ಚಳಿಗಾಲದಲ್ಲಿ ಚಳಿ ಇಲ್ಲ. ಅದಕ್ಕೆ ಬದಲಾ

ಗಿ ಪ್ರತಿ ದಿವಸ ಸಾಯಂಕಾಲಕ್ಕೆ ಸಮುದ್ರದ ಮೇಲಿಂದ ತಂಗಾಳಿ ಬರುತ್ತದೆ. ಆದರೆ ಪೂರ್ವ ಭಾಗದಲ್ಲಿ ಅಡವಿಯ ನೆರೆಯಲ್ಲಿ ಚಳಿ ಜ್ವರದ ಉಪದ್ರವವಾಗುತ್ತದ. ಕುಮಟೆಯಲ್ಲಿ ಮಳೆಯು ೯೬ ಇಂಚಿನಿಂದ ೨೦೧ ಇಂಚಿನ ವರೆಗೆ, ಸರಾಸರೀ ೧೩೨ ಇಂಚು. ನೀರಿಗೆ ಕೊರತೆ ಇಲ್ಲ. ಸಮುದ್ರ ದಂಡೆಯ ಬಾವಿಗಳು ಬಹಳ ಆರೋಗ್ಯಕರ; ಒಳ ಸೀಮೆಯಲ್ಲಿ ಬಾವಿಯ ನೀರು ಶೀತ, ಸರವುಗಳ ನೀರು ಸಾಳು.

ಜನರು—ಒಟ್ಟು ಜನಸಂಖ್ಯದಲ್ಲಿ ಶೇಕಡಾ ೯೩·೫೫ ಹಿಂದೂ ಜನರು, ೩·೪೫ ಮುಸಲ್ಮಾನರು, ೨·೬೦ ಕ್ರಿಸ್ತಿಗಳು. ಹಿಂದೂ ಜನರಲ್ಲಿ ಬ್ರಾಹ್ಮಣರು ೧೧೩೨೫, ಹಾಲಕ್ಕೀ ಒಕ್ಕಲಿಗರು ೮೯೮೩, ಗಾವ ಒಕ್ಕಲಿಗರು ೪೧೪೦, ನಾಡೋರು ೧೬೪೪, ಸೋನಾರರು ೧೯೨೮, ಹಳೆ ಪೈಕರು ೬೫೮೬, ಭಂಡಾರಿಗಳು ೧೯೬೩, ಹಕಾರಾಂತರು ೧೫೧೨, ಬಂದಿಗಳು ೧೦೬೬, ಮುಕ್ರಿಗಳು ೨೨೮೮, ಇತ್ಯಾದಿ.

ದೊಡ್ಡ ಊರುಗಳು

ಕುಮಟಾ—ಹೊನ್ನಾವರದ ಉತ್ತರಕ್ಕೆ ೧೦ ಮೈಲಿನಮೇಲೆ, ಜ. ಸ. (೮೧) ೧೦೬೨೯, ತಾಲೂಕಿನ ಮುಖ್ಯ ಗ್ರಾಮ, ಕಾನಡಾ ಜಿಲ್ಲೆಯ ಎರಡು ಮುಖ್ಯ ಬಂದರಗಳಲ್ಲಿ ಒಂದು. ದಕ್ಷಿಣ ಮಹಾರಾಷ್ಟ್ರ, ಬಳ್ಳಾರಿ ಸೀಮೆಗಳ ಅರಳೆಯು ಕುಮಟೆಯ ಬಂದರಕ್ಕೆ ಹೋಗಿ ಅಲ್ಲಿಂದ ಮುಂಬಯಿಗೆ ರವಾನೆಯಾಗುತ್ತದೆ. ಕುಮಟೆಯು ಸಣ್ಣದೊಂದು ಪ್ರೊತ್ತಿನ ದಂಡೆಯಲ್ಲಿ ಇರುತ್ತದೆ ದೊಡ್ಡ ಹಡಗಗಳು ಈ ಪ್ರೊತ್ತಿನ ಮುಖದ ಹೊರಗೆ ಸುಮಾರು ಅರ್ಧ ಮೈಲಿನ ಅಂತರದಲ್ಲಿ ನಿಲ್ಲುತ್ತವೆ. ಒತ್ತಿನ ಮುಖದಲ್ಲಿ ನೀರು ಕಿರಿದು ಇದ್ದದರಿಂದ ದೊಡ್ಡ ಹಡಗಗಳಿಗೆ ಒತ್ತಿನೊಳಗೆ ಬರಲಿಕ್ಕೆ ಅಡ್ಡಿಯಾಗುತ್ತದೆ. ಬಂದರದಿಂದ ಯಾವತ್ತು ಮಾಲು ದೋಣಿಗಳಲ್ಲಿ ಹೇರಿಕೊಂಡು ಹಡಗ ನಿಂತಲ್ಲಿಗೆ ತಕ್ಕೊಂಡು ಹೋಗುತ್ತಾರೆ.

ಒತ್ತಿನ ಹೊರಗೆ ಉತ್ತರಕ್ಕೆ ಸಮುದ್ರದ ಮೇಲಕ್ಕೆ ಬಂದ ಗುಡ್ಡದಂಥಾದೊಂದು ನಡುಗಡ್ಡೆಯಲ್ಲಿ ದೀಪಸ್ತಂಭವಿರುತ್ತದೆ. ಆ ನಡುಗಡ್ಡೆಯ ಸುತ್ತುಮುತ್ತು ಪೂರ್ವಕಾಲದಲ್ಲಿ ಕಟ್ಟಿದ ಕೋಟೆಯ ಕುರುಹುಗಳಿರುತ್ತವೆ. ಕುಮಟೆಯ

ಊರು ಒಂದು ಗುಡ್ಡದ ಇಳಕಲಿನ ಮೇಲೆ ಇರುತ್ತದೆ. ಮನೆಗಳ ಸುತ್ತುಮುತ್ತು ಕೊಂಕಣದ ಪದ್ಧತಿಯಂತೆ ಕಿರಿದಾದ ಅವಾರದ ಗೋಡೆಗಳೂ ಉನ್ನತವಾದ ಫಲವೃಕ್ಷಗಳೂ ಇರುತ್ತವೆ. ಆದ್ದರಿಂದ ಮನೆಗಳು ಒಳಿತಾಗಿ ತಂಪಾಗಿರುತ್ತವೆ. ಮನೆಗಳ ಮೇಲೆ ವಾಡಿಕೆಯಾಗಿ ಹುಲ್ಲಿನ ಚಪ್ಪರಿರುವದು. ಆದರೆ ಹಂಚಿನ ಮನೆಗಳೂ ಎರಡು ಮೂರು ಅಂತಸ್ತುಗಳುಳ್ಳ ಮನೆಗಳೂ ಬಾಜಾರಿನಲ್ಲಿಯೂ ಬೇರೆ ಕಡೆಯಲ್ಲಿಯೂ ಇರುತ್ತವೆ. ಊರಿನ ಸುತ್ತುಮುತ್ತು ದಟ್ಟವಾದ ತೆಂಗಿನ ಬನಗಳೂ ಬತ್ತದ ಗದ್ದೆಗಳೂ ಇರುವದರಿಂದ ಸಮುದ್ರದಲ್ಲಿ ಊರು ಕಾಣಿಸುವದಿಲ್ಲ. ಊರಿನ ಕ್ಷೇತ್ರವು ೪೩೦೫ ಎಕರು ಇರುತ್ತದೆ. ಆದ್ದರಿಂದ ಸರಾಸರೀ ಎಕರಿಗೆ ಇಬ್ಬರಂತೆ ಜನ ವಸ್ತಿಯಾಗುತ್ತದೆ.

ಸನ್ ೧೮೮೧—೮೨ ರ ಹಿಂದಿನ ೮ ವರ್ಷಗಳಲ್ಲಿ ಸರಾಸರೀ ಮಾನದಿಂದ ಪ್ರತಿವರ್ಷ ೨೫೪೨೩೧೦ ರೂಪಾಯಿಗಳ ಮಾಲು ಹೊರಗಿಂದ ಕುಮಟೆಯ ಬಂದರಕ್ಕೆ ಬಂತು, ೫೧೬೫೦೯೦ ರೂಪಾಯಿಯ ಮಾಲು ಕುಮಟೆಯಿಂದ ಹೊರಗೆ ಹೋಯಿತು. ಹೊರಗೆ ಹೋಗುವ ಮಾಲಿನಲ್ಲಿ ಅರಳೆಯೇ ಮುಖ್ಯ. ಹೊಗೆ ಹಡಗಗಳು ಮಳೆಗಾಲ ಹೊರ್ತಾಗಿ ೮ ತಿಂಗಳು ಕುಮಟೆಯ ಬಂದರಕ್ಕೆ ಹೋಗುತ್ತವೆ. ಅಕ್ಟೋಬರದಿಂದ ಮೇ ವರೆಗೆ ಅರಬಸ್ತಾನದ ಹಡಗಗಳು ಉತ್ತತ್ತಿ, ದಾಳಿಂಬ, ನಾನಾ ಪ್ರಕಾರದ ಅಂಟುಗಳು, ಮುಂತಾದ ಸರಕುಗಳನ್ನು ತಕ್ಕೊಂಡು ಕುಮಟೆಗೆ ಬರುತ್ತವೆ; ಕುಮಟೆಯಿಂದ ಅಕ್ಕಿಯನ್ನು ಹೇರಿಕೊಂಡು ಹೋಗುತ್ತವೆ.

ಕುಮಟೆಯಲ್ಲಿ ತಾಲೂಕ ಕಚೇರಿ, ಫೌಜದಾರ ಕಚೇರಿಗಳಲ್ಲದೆ ಮುನಸೀಫ ಕಚೇರಿ, ಕಸ್ಟಮ್ ಕಚೇರಿ, ಟಪಾಲ ಕಚೇರಿ, ತಂತಿಟಪಾಲು, ಆಸಪತ್ರಿ, ಮ್ಯುನಿಸಿಪಾಲಿಟಿ, ಇಂಗ್ಲಿಷ ಶಾಲೆ, ಉತ್ತಮಪ್ರತಿಯ ಮುಶಾಫರೀ ಬಂಗಲೆ, ನಾಲ್ಕು ಧರ್ಮಶಾಲೆಗಳು ಇರುತ್ತವೆ. ಮ್ಯುನಿಸಿಪಾಲಿಟಿಯ ಆದಾಯವು ಸನ್ ೧೮೮೧—೮೨ ರಲ್ಲಿ ೧೦೦೩೦ ರೂಪಾಯಿ ಇತ್ತು. ಗುಡ್ಡದ ಮೇಲೆ ಹಳೆದೊಂದು ಕೋಟೆಯುಂಟು.

ಇತಿಹಾಸ—ಕುಮಟೆಯಲ್ಲಿ ಒಬ್ಬ ಜೈನ ಅಧಿಕಾರಿಯು

ಇರುತ್ತಿದ್ದನೆಂದು ಹೇಳುತ್ತಾರೆ. ಸನ್ ೧೫೩೦ ರಲ್ಲಿ ಪೋರ್ತುಗೀಸರು ಕುಮಟೆಯ ನಿವಾಸಿಗಳ ಮೇಲೆ ೨೦೦ ಮೂಡಿ ಅಕ್ಕಿಯ ಕಪ್ಪವನ್ನು ಕೂಡ್ರಿಸಿದರೆಂದು ತಿಳಿದದೆ. ಸನ್ ೧೭೫೮ ರಲ್ಲಿ ಕುಮಟೆಯಲ್ಲಿ ಪೋರ್ತುಗೀಸರ ಚರ್ಚವಿತ್ತು, ಆಗ ಈ ಊರು ಬೇದನೂರಿನ ರಾಜ್ಯಕ್ಕೆ ಕೇರಿತ್ತು. ಟೀಪೂಸ ದಂಡಿನವರು ಕುಮಟೆಯನ್ನು ಎರಡು ಸಾರಿ ಸುಟ್ಟರು.

(ಸಕ್ಷೇ.)

CORRESPONDENCE.

ಪತ್ರವ್ಯವಹಾರ.

ರಾವಸಾಹೇಬ ಶಾಲಾಪತ್ರಕದ ಎಡಿಟರ ಮಹಾರಾಜರ
ಚರಣ ಸನ್ನಿಧಾನಕ್ಕೆ.

ಕೃಷ್ಣಾಜಿ ಬಾಪುರಾವ ಕುರುಂದವಾಡ ೧ನೇ ಅ. ಮಾಸ್ತರ ಬಂಕಾಪೂರ ಈತನ ಶಿರಸಾಷ್ಟಾಂಗ ನಮಸ್ಕಾರ ವಿ. ಪ

ಮಾನವ ಪ್ರಾಣಿಗಳು ಕೈಕೊಂಡ ಬೇರೆ ಬೇರೆ ಉದ್ಯೋಗಗಳಲ್ಲಿ ಶಿಕ್ಷಕೋದ್ಯೋಗವು ಬಹು ಗೌರವವಾದದ್ದಿರುವದು. ಇವನ ಉದ್ಯೋಗವು ಅಬಾಧಿತವಾಗಿ ನಡೆಯುವ ಸಾಧನಗಳಲ್ಲಿ ವಿದ್ಯಾರ್ಥಿಗಳು ನಿಯಮಿತವಾಗಿ ಶಾಲೆಗೆ ಬರೋಣವು ಮುಖ್ಯವಾಗಿರುವದು ವಿದ್ಯಾರ್ಥಿಗಳ ಅನಿಯಮಿತತ್ವದಿಂದ ಮಾಸ್ತರನಿಗೆ ಎಷ್ಟು ತೊಂದರೆಯಾಗುವದೆಂಬದು ಉದ್ಯೋಗಬಾಂಧವರಾದ ನನ್ನ ಮಿತ್ರರಿಗೆ ಪ್ರತಿದಿವಸ ಅನುಭವಕ್ಕೆ ಬರುವ ಮಾತೇ ಇರುವದು. ಅದರಿಂದ ತದ್ದೋಷ ಪರಿಹಾರ್ಥವಾಗಿ ನನ್ನ ಅನುಭವಕ್ಕೆ ಬಂದ ಸಂಗತಿಗಳನ್ನು ತಮ್ಮ ಚರಣಾರವಿಂದಕ್ಕೆ ಒಪ್ಪಿಸಿದ್ದೇನೆ. ಇದರ ಅನುಭವವು ಎಲ್ಲರಿಗೂ ಆಗುವದಕ್ಕೆ ತಮ್ಮ ಜಗಮಾನ್ಯ ಶಾಲಾಪತ್ರಕದಲ್ಲಿ ಪ್ರಸಿದ್ಧಿಸಲ್ಪಡಬೇಕೆಂದು ಬೇಡಿಕೊಳ್ಳುವೆನು.

ವಿದ್ಯಾರ್ಥಿಗಳು ಶಾಲೆಯನ್ನು ತಪ್ಪಿಸುವ ಕಾರಣಗಳೂ.
ನಿವಾರಣೋಪಾಯಗಳೂ.

೧. ಹಬ್ಬಹುಣ್ಣಿವೆಗಳ ಮೂಲಕವಾಗಿಯೂ, ಕಾರ್ಯಾಸಕ್ತತೆಯಿಂದಲೂ ತಂದೆ ತಾಯಿಗಳು ಮಕ್ಕಳಿಗೆ ಶಾಲೆಗೆ ಹೋಗಬೇಡಿರೆಂದು ಹೇಳುತ್ತಾರೆ.

೨. ಬೇನೆ ಬರುವದರಿಂದ ವಿದ್ಯಾರ್ಥಿಗಳು ನಿರುಪಾಯದಿಂದ ಶಾಲೆ ತಪ್ಪಿಸಬೇಕಾಗುವದು.

೩. ಆಟಕ್ಕೆ ಮೆಚ್ಚಿದವರಾಗಿ ಹುಡುಗರು ಶಾಲೆಯನ್ನು ತಪ್ಪಿಸಲೆತ್ನಿಸುವರು.

೪. ಗುರುಗಳು ಹೇಳಿದ್ದು ತಿಳಿಯದ್ದರಿಂದ ಅಭ್ಯಾಸಕ್ಕೆ ನೆಚ್ಚದವರಾಗಿ.

೫. ದೇಹದಂಡನೆಯೆಂಬ ಪ್ರಚಂಡ ಶಿಕ್ಷೆಗೆ ಬೆದರಿ ಬಾಲಕರು ಶಾಲೆಗೆ ಜರಕೊಳ್ಳುವರು.

(೧) ತಂದೆ ತಾಯಿಗಳು ಸುಶಿಕ್ಷಿತರಿದ್ದರೆ ಮಕ್ಕಳನ್ನು ಎಂದೂ ಮನೆಯಲ್ಲಿಟ್ಟುಕೊಳ್ಳರು. ಅಶಿಕ್ಷಿತರಿದ್ದರೆ ಮಾತ್ರ ಇಂಥ ಪ್ರಸಂಗದಲ್ಲಿ ಮಕ್ಕಳಿಗೆ ಬೇಡವೆಂದು ಹೇಳುವದುಂಟು. ಇದಕ್ಕೆ ಆ ತಂದೆ ತಾಯಿಗಳನ್ನು ತಮ್ಮ ಹತ್ತರ ಕರಿಸಿಕೊಂಡು ಇಲ್ಲವೆ ತಾವೇ ಅವರ ಹತ್ತರ ಹೋಗಿ ಶಾಲಾಮಹತ್ವ, ನಿಯಮಿತತನದ ಉಪಯೋಗ, ಶಾಲೆಯನ್ನು ತಪ್ಪಿಸುವದರಿಂದಾಗುವ ಹಾನಿ ಮೊದಲಾದ್ದನ್ನು ಕುರಿತು ಅಂತಃಕರಣದಲ್ಲಿ ಬಿಂಬಿಸುವಂತೆ ಉಪದೇಶಿಸುತ್ತಿರಬೇಕು.

(೨) ಋತು ಬದಲಾಗುವಾಗ ಮತ್ತು ಚಳಿಗಾಲದಲ್ಲಿ ಹುಡುಗರು ಬೇನೆ ಬೀಳುವ ಸಂಭವ ವಿಶೇಷವುಂಟು. ಆದರಿಂದ ಈ ದಿವಸಗಳಲ್ಲಿ ವಿದ್ಯಾರ್ಥಿಗಳ ಆಹಾರ ಪ್ರಾವರಣಗಳ ವಿಷಯಕ್ಕೆ ಎಚ್ಚರಗೊಳ್ಳುತ್ತಿರಬೇಕು. ಮತ್ತು ಮಾಸ್ತರನು ಸಾಧಾರಣ ಬೇನೆಗಳ ಚಿಕಿತ್ಸೆ ಬಲ್ಲವನಾಗಿ ಬೇನೆ ಬಿದ್ದ ಹುಡುಗರ ಮನೆಗೆ ಹೋಗಿ ತಂದೆ ತಾಯಿಗಳಿಂದ ಅವರಿಗೆ ಚನ್ನಾಗಿ ಉಪಚಾರ ಮಾಡಿಸಬೇಕು. ಅಂದರೆ ವಿದ್ಯಾರ್ಥಿಯು ಬೇಗನೆ ಆರೋಗ್ಯಪ್ರಾಪ್ತನಾಗಿ ತನ್ನ ಕೆಲಸಕ್ಕೆ ನೆರವಾಗುವನು. ಇದರಿಂದ ವಿದ್ಯಾರ್ಥಿಗಳ ಮತ್ತು ಅವರ ತಾಯಿತಂದೆಗಳ ಪೂಜ್ಯಬುದ್ಧಿಯು ಮಾಸ್ತರನ ಮೇಲೆ ಉಂಟಾಗಿ ಅದರಿಂದ ಅನಿರ್ವಾಚ್ಯ ಲಾಭವಾಗುವದು.

(೩) ಈಗಿನ ಪ್ರಾಥಮಿಕ ಶಾಲೆಗಳ ವಿದ್ಯಾರ್ಥಿಗಳು ಬಹುತರ ಹದಿನಾರು ವರ್ಷಗಳ ಒಳಗಿನವರಿರುವರು. ಆದರಿಂದ ಅವರಲ್ಲಿ ವಿಚಾರವು ಪಕ್ವವಿಲ್ಲದೆ ವೃತ್ತಿಪ್ರಬಲವಾಗಿ

ರುವದು. ಎಂಥ ವಯೋವೃದ್ಧರಲ್ಲಿ ಸಹ ವೃತ್ತಿಯು ಪ್ರಬ ವಾಗಿರುವದನ್ನು ನೋಡುತ್ತೇವೆ. ಆದರೆ ಚಿಕ್ಕ ಬಾಲಕ ಲ್ಲಿರುವದು ಏನು ಆಶ್ಚರ್ಯವು? ಬಂಧನವಾಗದೆ ಸ್ವೇಚ್ಛೆಯಿಂದಿರಬೇಕೆಂಬದು ಪ್ರಾಣಿಗಳ ಸ್ವಭಾವವು. ಕಾರಣ ಚಿಕ್ಕ ಮಕ್ಕಳು ಅಭ್ಯಾಸದ ಪ್ರತಿಬಂಧಕ್ಕೆ ಸೇರದೆ ಆಟ ಉತ್ಸವಕ್ಕೆ ಮೆಚ್ಚಿ ಶಾಲೆಯನ್ನು ತಪ್ಪಿಸುತ್ತಾರೆ. ಈ ಕಾ ಣ ನಿವಾರಣಾರ್ಥವಾಗಿಯೂ ವಿದ್ಯಾರ್ಥಿಗಳು ಸದೃಢರಾಗ ಬೇಕೆಂದು ಶಾಲೆಯಲ್ಲಿ ಕೆಲ ಹೊತ್ತಾದರೂ ತಾಲೀಮು ನಡ ಯಬೇಕೆಂದು ನಮ್ಮ ದಯಾಳು ಸರಕಾರದವರು ಗೊತ್ತು ಮಾಡಿದ್ದಾರೆ. ಈ ಕೆಲಸವನ್ನು ನಾವು ಮನಃಪೂರ್ವಕವಾಗ ನಡಿಸತಕ್ಕದ್ದು. ಆದರೆ ಕೆಲವು ತರುಣ ಶಿಕ್ಷಕರು ವಿದ್ಯಾರ್ಥಿಗಳಿಗೆ ಮೊದಲೇ ಹಾರಿಝಾಂಟಲ್, ಪ್ಯಾರಲಲ್‌ಬಾರ, ಮಲಕಂಬ ಮುಂತಾದವುಗಳನ್ನು ಮಾಡಿಸಲೆತ್ನಿಸುವರು. ಈ ಕೆಲಸವು ಸ್ವಲ್ಪ ಶ್ರಮದ್ದಿರುವದರಿಂದಲೂ ವಿದ್ಯಾರ್ಥಿಗಳು ಬಹುದಿವಸ ಊರೊಳಗಿನ ರೂಢೀ ಆಟಗಳಿಗೆ ಮೆಚ್ಚಿದವರಾದದ್ದರಿಂದಲೂ ಒಮ್ಮೆಲೆ ಈ ತಾಲೀಮಿಗೆ ಸೇರುವದಿಲ್ಲ ಆದರಿಂದ ಎಲ್ಲಕ್ಕೂ ಮೊದಲು ವಿದ್ಯಾರ್ಥಿಗಳಿಗೆ ಸೇರುವಂಥ ಚಂವರೆ ತಿಳ್ಳಿ, ಖೊ, ಚಕ್ರ, ಫೂಟ್‌ಚೆಂಡು ಮೊದಲಾದ ಆಟಗಳನ್ನು ಆಡಿಸಬೇಕು. ಆದರೆ ಕೆಲವು ಮಾಸ್ತರರು ತಮಗ ಬೇಸರವಾದ ಕೂಡಲೆ ಆಡಲಿಕ್ಕೆ ಹೋಗಿರೆಂದು ಹೇಳಿ ಬಿಡುವರು. ಇದರಿಂದೇನೂ ಉಪಯೋಗವಾಗದೇ ತಿರಿಗಿ ತಮಗೇ ತ್ರಾಸವಾಗುವದು. ಆದರಿಂದ ಆಟದ ವೇಳೆಯಿಂದ ಒಂದು ಯೋಗ್ಯವಾದ ಹೊತ್ತು ಗೊತ್ತು ಮಾಡಬೇಕು. ಪ್ರತಿದಿವಸ ಅದೇ ಹೊತ್ತಿಗೆ ತನ್ನ ವರ್ಗವನ್ನು ಹವಾಶೀರ ಮೈದಾನಕ್ಕೆ ಕರಕೊಂಡು ಹೋಗಿ ವಿದ್ಯಾರ್ಥಿಗಳನ್ನು ವ್ಯವಸ್ಥೆಗೊಳಿಸಿ ಯಾವದೊಂದು ಆಟಕ್ಕೆ ಹಚ್ಚಬೇಕು. ಆಟದಲ್ಲಿ ಗೆದ್ದವರಿಗೆ ಉತ್ತೇಜನ ಬರುವಂತೆ ಏನಾದರೂ ಏರ್ಪಾಡು ಮಾಡಿರಬೇಕು. ಅದರಿಂದ ವಿದ್ಯಾರ್ಥಿಗಳು ಉಲ್ಲಾಸಗೊಂಡು ಬಹುತರ ಶಾಲೆಯನ್ನು ತಪ್ಪಿಸಲಿಕ್ಕಿಲ್ಲ. ಅವರಲ್ಲಿ ವಿಶೇಷ ಕೂಡಿ ಆಡುವದರಿಂದ ಮಾಸ್ತರನಿಗೆ ವಿದ್ಯಾರ್ಥಿಗಳ ಸ್ವಭಾವವು ತಿಳಿಯುವದು. (ಸಂಕ್ಷೇಪ)

ಸಿದ್ಧನಾಥ ನಾಚನ [illegible]

ಶಾ[illegible]ಪತ್ರ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಿಂ ಸಚ್ಛಿಕ್ಷಕೋತ್ಕರ್ಷಮಂ ॥
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪ್ಪೋದುವರ್ಗೆಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂಪೋಷವತಿದ್ದವೇಳ್ಕುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೩೨.] ಏಪ್ರಿಲ ೧೮೯೯. [ಸಂಚಿಕೆ ೪.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಟ್ರೇನಿಂಗ ಕಾಲೇಜದ ಕೋರ್ಡಿನಲ್ಲಿ ಕೆಲವು ಹೆಚ್ಚು ಕಡಿಮೆಗಳು ಆಗಿರುತ್ತವೆ. ಕನ್ನಡಿಸಿದ ಕೋರ್ಡು ಅಚ್ಚು ಹಾಕಲ್ಪಟ್ಟು ವಾಚಕರಿಗೆ ಕ್ಷಿಪ್ರದಲ್ಲಿಯೇ ಸಿಗುವದು; ಅದರಲ್ಲಿ ಗೊತ್ತಾದ ಅಭ್ಯಾಸ ಕ್ರಮವನ್ನು ವಿದ್ಯಾರ್ಥಿಗಳ ತಿಳುವಳಿಕೆಗಾಗಿ ಇದೇ ಸಂಚಿಕೆಯಲ್ಲಿ ಕೊಟ್ಟಿರುತ್ತೇವೆ. ಅದೇ ಮೇರೆಗೆ ೧೮೯೯-೧೯೦೦ ನೇ ಇಸ್ವಿಯಲ್ಲಿ ಆಗುವ ಟ್ರೇನಿಂಗ ಕಾಲೇಜದ ಸರ್ಟಿಫಿಕೇಟ ಪರೀಕ್ಷೆಗಳಿಗಾಗಿ ನೇಮಿಸಿದ ಪುಸ್ತಕಗಳು ಸಹ ಸ್ವತಂತ್ರನೋಟೀಸಿನ ಮುಖಾಂತರವಾಗಿ ಇದೇ ಸಂಚಿಕೆಯಲ್ಲಿ ಕೊಡಲ್ಪಟ್ಟಿರುತ್ತವೆ; ಅವಶ್ಯಕರು ಅದನ್ನು ನೋಡಿಕೊಳ್ಳಬಹುದು. ಗಣಿತ, ಭಾಷಾವಿಷಯ, ಸಂಸ್ಕೃತ ಅಥವಾ ಫಾರಸಿ, ಶಿಕ್ಷಣ ಈ ವಿಷಯಗಳಲ್ಲಿ ಏನೂ ಹೆಚ್ಚು ಕಡಿಮೆಯಾಗಿಲ್ಲ. ಇತಿಹಾಸ ಭೂಗೋಲ ಶಾಸ್ತ್ರೀಯ ವಿಷಯಗಳಲ್ಲಿ ಅಲ್ಪಸ್ವಲ್ಪ ಹೆಚ್ಚು ಕಡಿಮೆಯಾಗಿರುತ್ತದೆ. ಡ್ರಾಯಿಂಗ ವಿಷಯವು ಆವಶ್ಯಕವಿಷಯಗಳಲ್ಲಿ ಸೇರಿಸಲ್ಪಟ್ಟಿದೆ. ಐಚ್ಛಿಕ ವಿಷಯವಾದ ಡ್ರಾಯಿಂಗದಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಾಡಿರುತ್ತದೆ. ಉಳಿದ ಐಚ್ಛಿಕ ವಿಷಯಗಳು ಮೊದಲಿನಂತೆಯೇ ಇರುತ್ತವೆ.

ಬ್ರಿಟಿಶ್ ರಾಜ್ಯಕ್ಕೆ ಸೇರಿದ ಹಿಂದುಸ್ತಾನದ ಯಾವತ್ತು ಭಾಗಗಳೊಳಗಿನ ವಿದ್ಯಾಖಾತೆಯ ರಿಪೋರ್ಟುಗಳನ್ನು ಒಟ್ಟುಗೂಡಿಸಿ ತಮ್ಮ ಅಭಿಪ್ರಾಯ ಸಹಿತವಾಗಿ ಇಂಡಿಯಾ ಸ ಕಾರದವರು ಛಾಪಿಸಿದ ರಿಪೋರ್ಟ ತಾರೀಖು ೨೨ನೇ ಫೆಬ್ರುವರಿ ಸರ್ ೧೮೯೯ ನೇ ಇಸವೀದು ಹೊರಬಿದ್ದದೆ. ಅದರಿಂ ತಿಳಿಯುವ ಸಂಗತಿಗಳು ಯಾವವೆಂದರೆ:—

ಬ್ರಿಟಿಶ ಇಂಡಿಯದೊಳಗಿನ ಯಾವತ್ತು ಪ್ರಕಾರದ ವಿದ್ಯಾಲಯಗಳ ಮತ್ತು ವಿದ್ಯಾರ್ಥಿಗಳ ವಿವರ.

ವಿದ್ಯಾಲಯಗಳ ಪ್ರಕಾರಗಳು.	ವಿದ್ಯಾಲಯಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ
	೧೮೯೭–೧೮೯೮	೧೮೯೭–೧೮೯೮
* ಸರಕಾರೀ ಶಾಲೆಗಳು ಗಂಡು	೧೦೦,೨೫೮	೩,೩೩೮,೨೮೮
ಹೆಣ್ಣು	೬,೨೦೪	೩೬೦,೮೧೮
ಅಂತು	೧೦೬೪೬೨	೩೬೯೯೧೦೬
+ ಖಾಸಗಿ ಗಂಡು	೪೧೦೮೩	೫೩೬೫೨೧
ಹೆಂಣು	೧೨೮೪	೩೮೬೪೮
ಅಂತು	೪೨೩೬೭	೫೭೫೧೬೯
ಒಟ್ಟು!	೧೪೮೮೨೯	೪೨೭೪೨೭೫
ಸರಕಾರಿ ಶಾಲೆಗಳ ವಿವರ		
ಆರ್ಟ್ಸ ಕಾಲೇಜ	೧೨೪	೧೪೮೪೨
ಪ್ರೊಫೆಶನಲ್ ಕಾಲೇಜ	೪೦	೪೪೬೮
ಮಧ್ಯಮಪ್ರತಿಯಸಾಲೆಗಳು	೫೫೩೩	೫೫೧೧೪೧
ಕನಿಷ್ಠ ಪ್ರತಿಯ ಶಾಲೆಗಳು	೧೦೦೫೦೭	೩೧೦೪೫೮೩
ಟ್ರೇನಿಂಗ ಸ್ಕೂಲುಗಳು	೧೩೬	೫೪,೯
ವಿಶೇಷ ಪ್ರತಿಯ ಶಾಲೆಗಳು	೨೮೨	೧೮೬೬೩

---

* ಸರಕಾರೀ ಶಾಲೆಗಳೊಳಗೆ, ಸರಕಾರದವರು ತಮ್ಮ ಖರ್ಚಿನಿಂದ ನಡಿಸುವ ಸಾಲೆಗಳೂ, ಲೋಕಲ್‌ಬೋರ್ಡ ಮತ್ತು ಮುನಿಸಿಪಲ್ ಬೋರ್ಡುಗಳಿಂದ ನಡಿಸಲ್ಪಡುವ ಶಾಲೆಗಳೂ, ಸರಕಾರ

ಬ್ರಿಟಿಶ ಇಂಡಿಯದೊಳಗೆ ೧೧,೮೨,೬೬,೦೦೯ ಜನ ಗಂಡಸರೂ, ೧೧,೪೨,೨೩,೮೧೩ ಜನ ಹೆಂಗಸರೂ ಕೂಡಿ ಒಟ್ಟಿಗೆ ೨೩,೨೪,೯೦,೧೨೨ ಜನಸಂಖ್ಯೆಯುಂಟು. ಇನ್ನು ಜನಸಂಖ್ಯೆಯು ೧೦೦ ಇದ್ದರೆ ಅದರಲ್ಲಿ ಸಾಧಾರಣವಾಗಿ ೧೫ ಮಂದಿ ಸಾಲೆಗೆ ಹೋಗುವ ವಯಸ್ಸಿನ ಹುಡುಗರಿರುತ್ತಾರೆಂದು ಗೊತ್ತು ಮಾಡಲ್ಪಟ್ಟಿದೆ. ಈ ಲೆಖ್ಖದಿಂದ ನೋಡಿದರೆ ಸಾಲೆಗೆ ಹೋಗುವ ವಯಸ್ಸಿನ ಒಟ್ಟು ಗಂಡು ಹುಡುಗರಲ್ಲಿ ೧೦೦ಕ್ಕೆ ೨೧.೯ ಹುಡುಗರು ಸಾಲೆಯಲ್ಲಿ ಅಭ್ಯಾಸ ಮಾಡುತ್ತಾರೆಂದು ತಿಳಿಯುತ್ತದೆ. ಹೆಣ್ಣು ಹುಡುಗರ ಸಂಬಂಧದಿಂದ ಈ ಪ್ರಮಾಣವು ೧೦೦ಕ್ಕೆ ೨.೩ ಮಾತ್ರ ಹೊರಡುತ್ತದೆ. ಇದರಿಂದ ಸ್ತ್ರೀ ಶಿಕ್ಷಣವು ನಮ್ಮ ದೇಶದಲ್ಲಿ ಎಷ್ಟು ಹಿಂದಿರುತ್ತದೆಂಬದು ವ್ಯಕ್ತವಾಗುತ್ತದೆ. ಗಂಡು ಹೆಣ್ಣು ಹುಡುಗರ ಸಂಖ್ಯೆಗಳನ್ನು ಕೂಡಿಸಿ ಒಟ್ಟಿಗೆ ಸರಾಸರಿ ತೆಗೆದರೆ ಈ ಪ್ರಮಾಣವು ೧೦೦ಕ್ಕೆ ೧೨.೩ ಹೊರಡುತ್ತದೆ. ಇದರಿಂದ ೧೦೦೦ ಹುಡುಗರಲ್ಲಿ ೧೨೩ ಹುಡುಗರೇ ಓದು ಬರಹ ಕಲಿಯುವರು; ೮೭೭ ಹುಡುಗರು ಅಕ್ಷರಶೂನ್ಯರು ಎಂಬದು ಸ್ಪಷ್ಟವಾಗುತ್ತದೆ.

ನಮ್ಮ ದೇಶದೊಳಗೆ ಶಾಲೆಗೆ ಹೋಗುವ ಒಟ್ಟು ವಿದ್ಯಾರ್ಥಿಗಳ ಜಾತಿಧರ್ಮವನ್ನು ಅನುಲಕ್ಷಿಸಿ ವರ್ಗೀಕರಣ ಮಾಡಿದರೆ ಹಿಂದೂ ಜಾತಿಯ ವಿದ್ಯಾರ್ಥಿಗಳು ೨೮,೮೬,೨೩೯, ಮುಸಲ್ಮಾನರು ೯,೨೨,೫೬೬, ಯುರೋಪಿಯನ್ನರೂ ಯುರೇಜಿಯನ್ನರೂ ೨೯,೮೫೫, ನೇಟಿವ್ಹ ಕ್ರಿಶ್ಚನ್ನರು

ದಿಂದ ಗ್ರಾಂಟ ಇನ್ ಏಡ್‌ವನ್ನು ಪಡೆಯುವ ಸಾಲೆಗಳೂ, ಸರಕಾರೀ ಇಯತ್ತೆಗಳಂತೆ ಅಭ್ಯಾಸವನ್ನು ನಡಿಸುವ ಖಾನಗೀ ಸಾಲೆಗಳೂ ಬರುತ್ತವೆ

+ ಖಾಸಗೀ ಸಾಲೆಗಳೊಳಗೆ ಅರಬಿ, ಫಾರ್ಸಿ, ಸಂಸ್ಕೃತ ಮುಂತಾದ ಪ್ರಾಚೀನ ಭಾಷೆಗಳನ್ನು ಕಲಿಸುವ ಸಾಲೆಗಳೂ, ಹಳೆ ಪದ್ಧತಿಯಂತೆ ಪ್ರಾಥಮಿಕ ಶಿಕ್ಷಣವನ್ನು ಕೊಡುವ ಸಾಲೆಗಳೂ, ಕುರಾನವನ್ನು ಕಲಿಸುವ ಸಾಲೆಗಳೂ ಬರುತ್ತವೆ.

೧,೧೩,೬೫೭ ಇತರ ಧರ್ಮದವರು ೩,೧೩,೯೧೩ ಇರುತ್ತಾರೆ.

ಇದರಿಂದ ಯುರೋಪಿಯನ್ ಯುರೇಜಿಯನ್ನ ಮತ್ತು ನೇಟೀವ ಕ್ರಿಶ್ಚಿಯನ್ನರು ವಿದ್ಯದಲ್ಲಿ ಮುಂದರಿಸಿರುತ್ತಾರೆಂತಲೂ, ಅವರ ತರುವಾಯ ಇತರ ಜಾತಿಯವರ ಸಂಖ್ಯೆಯು ಹೆಚ್ಚಿರುತ್ತದೆಂತಲೂ, ಉಳಿದ ಹಿಂದೂ ಮುಂತಾದ ಜಾತಿಯವರು ವಿದ್ಯದ ಕೆಲಸದಲ್ಲಿ ಜನಸಂಖ್ಯೆಯ ಮಾನದಿಂದ ಹಿಂದೆ ಇರುತ್ತಾರೆಂತಲೂ ಸ್ಪಷ್ಟವಾಗಿ ತೋರುತ್ತದೆ.

ಬ್ರಿಟಿಶ ಇಂಡಿಯದೊಳಗಿನ ವಿದ್ಯಾಖಾತೆಯ ಒಟ್ಟು ಖರ್ಚಿನ ವಿವರ—

ಹೆಸರು	೧೮೯೬—೧೮೯೭	೧೮೯೭—೧೮೯೮
ಪ್ರತ್ಯಕ್ಷ ವಿದ್ಯಾಭ್ಯಾಸಕ್ಕೆ...	೨೭೭೩೮೭೩೭	೨೮೨೧೬೩೮೯
ಪ್ರೊಫೆಶನಲ್ ಕಾಲೇಜಗಳಿಗೆ	...	೮೯೭೨೧೦
ಆರ್ಟ್ಸ ಕಾಲೇಜಗಳಿಗೆ ...	...	೨೪೫೦೫೦೦
ಮಧ್ಯಮಪ್ರತಿಯ ಶಾಲೆಗಳಿಗೆ	...	೧೧೬೬೮೨೦೨
ಕನಿಷ್ಟ ಪ್ರತಿಯ ಶಾಲೆಗಳಿಗೆ	...	೧೧೧೮೩೧೩೯
ಟ್ರೇನಿಂಗ ಸ್ಕೂಲುಗಳಿಗೆ...	...	೭೩೫೯೮೪
ವಿಶೇಷ ಪ್ರತಿಯ ಶಾಲೆಗಳಿಗೆ	...	೧೨೮೧೩೫೪
ಇತರಖರ್ಚು ...	೭೫೦೬೧೬೩	೭೩೨೩೮೭೩
ಒಟ್ಟು.	...	೩೫೫೪೦೨೬೨

ಮೇಲಿನ ಕೋಷ್ಟಕದೊಳಗೆ ತೋರಿಸಿದಂತೆ ಹಿಂದುಸ್ಥಾನದಲ್ಲಿ ವಿದ್ಯಾಖಾತೆಯ ಒಟ್ಟು ಖರ್ಚು ೩,೫೫,೪೦,೨೬೨

ರೂಪಾಯಿ ಇರುತ್ತದೆ. ಇವರೊಳಗೆ ಖುದ್ದ ಸರಕಾರಕ್ಕೆ ೯೩,೦೪,೭೪೫ ರೂಪಾಯಿ ಮಾತ್ರ ಖರ್ಚು ಬೀಳುತ್ತದೆ. ಸರಕಾರದ ಕಂದಾಯ ಸುಮಾರು ೯೩ ಕೋಟಿ ರೂಪಾಯಿಯುಂಟು ಅಂದರೆ ಅಜಮಾಸ ಕಂದಾಯದ ೧/೧೦೪ ನೇ ಭಾಗವನ್ನು ಮಾತ್ರ ವಿದ್ಯಾಪ್ರಸಾರಕ್ಕಾಗಿ ಖರ್ಚು ಮಾಡುತ್ತಾರೆಂದು ವ್ಯಕ್ತವಾಗುತ್ತದೆ. ಇಂಗ್ಲಂಡದಲ್ಲಿ ವಿದ್ಯಾಪ್ರಸಾರಕ್ಕೆ ಕಂದಾಯದ ೯ನೇ ಪಾಲು ಖರ್ಚು ಆಗುತ್ತದೆ.

ವಿದ್ಯಾಖಾತೆಯ ಯಾವತ್ತು ಖರ್ಚಿನೊಳಗಿಂದ ಫೀ ಹಣ ೧೦೫೮೬೧೪೫ ರೂಪಾಯಿ, ವರ್ಗಣಿ ಮುಂತಾದ ಬಾಬುಗಳಿಂದ ಆದ ಉತ್ಪನ್ನ ೮೫೧೬೫೪೯ ರೂಪಾಯಿ, ಸರಕಾರದವರು ಕೊಟ್ಟ ೯೩೦೪೭೪೫ ರೂಪಾಯಿ ವಜಾ ಹೋಗಲಾಗಿ ಲೋಕಲ್‌ಫಂಡಿಗೆ ೫೭೩೧೬೦೪ ರೂಪಾಯಿ ಮುನಸಿಪಾಲ್ಟಿಗೆ ೧೪೭೯೩೧೯ ರೂಪಾಯಿ ಖರ್ಚು ಬಿದ್ದಿರುತ್ತದೆ. ಈ ವರ್ಷ ಸರಕಾರದ ಹಣ ಫೀ ಉತ್ಪನ್ನ ಮುನಸಿಪಾಲಟಿಗೆ ಖರ್ಚು ಮುಂತಾದ ಎಲ್ಲ ಬಾಬುಗಳಿಂದ ಆದ ಖರ್ಚಿನ ರಕಮು ಕಡಿಮೆಯಾಗಿರುವದು ಆದರೆ ವರ್ಗಣಿ ಮುಂತಾದ ಬಾಬುಗಳಿಂದಾದ ಉತ್ಪನ್ನವು ಬಹಳ ಹೆಚ್ಚಾಗಿರುವದು.

* * *

ನಮ್ಮ ಇಲಾಖೆಯ ವಾರ್ಷಿಕ ರಿಪೋರ್ಟಿನಿಂದ ಕೆಲವು ಸಂಗತಿಗಳನ್ನು ಈ ಮೊದಲು ತಿಳಿಸಿರುತ್ತೇವೆ. ಈ ಸಂಚಿಕೆಯಲ್ಲಿ ವಾಚನ ಪುಸ್ತಕಗಳನ್ನೂ ಶಿಕ್ಷಕ ಜನರನ್ನೂ ಕುರಿತು ಬರೆದ ಸಂಗತಿಗಳನ್ನು ತಿಳಿಸುತ್ತೇವೆ. ೯೭ರಲ್ಲಿ ಆದ ಪರಿಷತ್ತುಗಳಲ್ಲಿ ಸರಕಾರದ ಪುಸ್ತಕಗಳೇ ಗ್ರಾಹ್ಯವಿರುತ್ತವೆಂದು ಗೊತ್ತಾಗಿದೆ. ಅವುಗಳಲ್ಲಿ ಮಾಡತಕ್ಕ ಸುಧಾರಣೆಗಳು ಕೆಲವು ಮಾಡಲ್ಪಟ್ಟಿವೆ. ಕೆಲವು ಆಗುತ್ತಲಿವೆ. ಈ ಪುಸ್ತಕಗಳಲ್ಲದೆ ಇವುಗಳಷ್ಟು ಗ್ರಾಹ್ಯವಾದ ಹೊಸ ಪುಸ್ತಕಗಳು ಸ್ವೀಕರಿಸಲ್ಪಡುವವು. ಈ ಮೇರೆಗೆ ಒಂದೆರಡು ಪುಸ್ತಕಗಳು ಈ ವರ್ಷ ಸ್ವೀಕರಿಸಲ್ಪಟ್ಟಿರುತ್ತವೆ. ಒಟ್ಟಿಗೆ ಸರ್ವಮಾನ್ಯವಾದಂಥ ಹೊಸ ಪುಸ್ತಕಗಳನ್ನು ಬರೆದರೆ ಅವುಗಳಿಗೆ ತಕ್ಕ ಪ್ರೋತ್ಸಾಹನವು ಸಿಗುವದು. ಶಿಕ್ಷಕರ ಬಗ್ಗೆ ಕೆಳಗಿನ ಕೋಷ್ಟಕವನ್ನು ನೋಡತಕ್ಕದ್ದು.

೧,೧೩,೬೫೪ ಇತರ ಧರ್ಮದವರು ೩,೧೩,೯೧೩ ಇರುತ್ತಾರೆ.

ಇವರಿಂದ ಯುರೋಪಿಯನ್ ಯುರೇಜಿಯನ್ನ ಮತ್ತು ನೇಟೀವ ಕ್ರಿಶ್ಚಿಯನ್ನರು ವಿದ್ಯದಲ್ಲಿ ಮುಂದರಿಸಿರುತ್ತಾರೆಂತಲೂ, ಅವರ ತರುವಾಯ ಇತರ ಜಾತಿಯವರ ಸಂಖ್ಯೆಯು ಹೆಚ್ಚಿರುತ್ತದೆಂತಲೂ, ಉಳಿದ ಹಿಂದೂ ಮುಂತಾದ ಜಾತಿಯವರು ವಿದ್ಯದ ಕೆಲಸದಲ್ಲಿ ಜನಸಂಖ್ಯೆಯ ಮಾನದಿಂದ ಹಿಂದೆ ಇರುತ್ತಾರೆಂತಲೂ ಸ್ಪಷ್ಟವಾಗಿ ತೋರುತ್ತದೆ.

ಬ್ರಿಟಿಶ ಇಂಡಿಯದೊಳಗಿನ ವಿದ್ಯಾಖಾತೆಯ ಒಟ್ಟು ಖರ್ಚಿನ ವಿವರ—

ಹೆಸರು	೧೮೯೬-೧೮೯೭	೧೮೯೭-೧೮೯೮
ಪ್ರತ್ಯಕ್ಷ ವಿದ್ಯಾಭ್ಯಾಸಕ್ಕೆ...	೨೭೭೩೮೭೩೭	೨೮೨೧೬೩೮೯
ಪ್ರೊಫೆಶನಲ್ ಕಾಲೇಜಗಳಿಗೆ	...	೮೯೭೨೧೦
ಆರ್ಟ್ಸ ಕಾಲೇಜಗಳಿಗೆ ...	...	೨೪೫೦೫೦೦
ಮಧ್ಯಮಪ್ರತಿಯಶಾಲೆಗಳಿಗೆ	...	೧೧೬೬೮೨೦೨
ಕನಿಷ್ಠ ಪ್ರತಿಯ ಶಾಲೆಗಳಿಗೆ	...	೧೧೧೮೩೧೩೯
ಟ್ರೇನಿಂಗ ಸ್ಕೂಲುಗಳಿಗೆ...	...	೨೩೫೯೮೪
ವಿಶೇಷ ಪ್ರತಿಯ ಶಾಲೆಗಳಿಗೆ	...	೧೭೮೧೩೫೪
ಇತರಖರ್ಚು ...	೭೫೦೬೧೬೩	೭೩೨೩೮೭೩
ಒಟ್ಟು.	...	೩೫೫೪೦೨೬೨

ಮೇಲಿನ ಕೋಷ್ಟಕದೊಳಗೆ ತೋರಿಸಿದಂತೆ ಹಿಂದುಸ್ಥಾನದಲ್ಲಿ ವಿದ್ಯಾಖಾತೆಯ ಒಟ್ಟು ಖರ್ಚು ೩,೫೫,೪೦,೨೬೨

ರೂಪಾಯಿ ಇರುತ್ತದೆ. ಇದರೊಳಗೆ ಖುದ್ದ ಸರಕಾರಕ್ಕೆ ೩,೦೪,೬೪೫ ರೂಪಾಯಿ ಮಾತ್ರ ಖರ್ಚು ಬೀಳುತ್ತದೆ. ಸರಕಾರದ ಕಂದಾಯ ಸುಮಾರು ೯೩ ಕೋಟಿ ರೂಪಾಯಿಯುಂಟು ಅಂದರೆ ಅಜಮಾಸ ಕಂದಾಯದ ೧/೩೦೪ ನೇ ಭಾಗವನ್ನು ಮಾತ್ರ ವಿದ್ಯಾಪ್ರಸಾರಕ್ಕಾಗಿ ಖರ್ಚು ಮಾಡುತ್ತಾರೆಂದು ವ್ಯಕ್ತವಾಗುತ್ತದೆ. ಇಂಗ್ಲಂಡದಲ್ಲಿ ವಿದ್ಯಾಪ್ರಸಾರಕ್ಕೆ ಕಂದಾಯದ ೯ನೇ ಪಾಲು ಖರ್ಚು ಆಗುತ್ತದೆ.

ವಿದ್ಯಾಖಾತೆಯ ಯಾವತ್ತು ಖರ್ಚಿನೊಳಗಿಂದ ಫೀ ಹಣ ೦೫೮೭೧೪೫ ರೂಪಾಯಿ, ವರ್ಗಣಿ ಮುಂತಾದ ಬಾಬುಗಳಿಂದ ಆದ ಉತ್ಪನ್ನ ೮೫೧೭೫೪೯ ರೂಪಾಯಿ, ಸರಕಾರದವರು ಕೊಟ್ಟ ೯೩೧೪೬೪೫ ರೂಪಾಯಿ ವಜಾ ಹೋಗಲಾಗಿ ಲೋಕಲ್‌ಫಂಡಿಗೆ ೫೬೩೧೭೧೪ ರೂಪಾಯಿ ಮುನಸೀಪಾಲ್ಟಿಗೆ ೧೪೬೯೩೧೯ ರೂಪಾಯಿ ಖರ್ಚು ಬಿದ್ದಿರುತ್ತದೆ. ಈ ವರ್ಷ ಸರಕಾರದ ಹಣ ಫೀ ಉತ್ಪನ್ನ ಮುನಸಿಪಾಲಟಿಗೆ ಖರ್ಚು ಮುಂತಾದ ಎಲ್ಲ ಬಾಬುಗಳಿಂದ ಆದ ಖರ್ಚಿನ ರಕಮು ಕಡಿಮೆಯಾಗಿರುವದು ಆದರೆ ವರ್ಗಣಿ ಮುಂತಾದ ಬಾಬುಗಳಿಂದಾದ ಉತ್ಪನ್ನವು ಬಹಳ ಹೆಚ್ಚಿರುವದು.

ನಮ್ಮ ಇಲಾಖೆಯ ವಾರ್ಷಿಕ ರಿಪೋರ್ಟಿನಿಂದ ಕೆಲವು ಸಂಗತಿಗಳನ್ನು ಈ ಮೊದಲು ತಿಳಿಸಿರುತ್ತೇವೆ. ಈ ಸಂಚಿಕೆಯಲ್ಲಿ ವಾಚನ ಪುಸ್ತಕಗಳನ್ನೂ ಶಿಕ್ಷಕ ಜನರನ್ನೂ ಕುರಿತು ಬರೆದ ಸಂಗತಿಗಳನ್ನು ತಿಳಿಸುತ್ತೇವೆ. ೬ರಲ್ಲಿ ಆದ ಪರಿಷತ್ತುಗಳಲ್ಲಿ ಸರಕಾರದ ಪುಸ್ತಕಗಳೇ ಗ್ರಾಹ್ಯವಿರುತ್ತವೆಂದು ಗೊತ್ತಾಗಿದೆ. ಅವುಗಳಲ್ಲಿ ಮಾಡತಕ್ಕ ಸುಧಾರಣೆಗಳು ಕೆಲವು ಮಾಡಲ್ಪಟ್ಟಿವೆ. ಕೆಲವು ಆಗುತ್ತಲಿವೆ. ಈ ಪುಸ್ತಕಗಳಲ್ಲದೆ ಇವುಗಳಷ್ಟು ಗ್ರಾಹ್ಯವಾದ ಹೊಸ ಪುಸ್ತಕಗಳು ಸ್ವೀಕರಿಸಲ್ಪಡುವವು. ಈ ಮೇರೆಗೆ ಒಂದೆರಡು ಪುಸ್ತಕಗಳು ಈ ವರ್ಷ ಸ್ವೀಕರಿಸಲ್ಪಟ್ಟಿರುತ್ತವೆ. ಒಟ್ಟಿಗೆ ಸರ್ವಮಾನ್ಯವಾದಂಥ ಹೊಸ ಪುಸ್ತಕಗಳನ್ನು ಬರೆದರೆ ಅವುಗಳಿಗೆ ತಕ್ಕ ಪ್ರೋತ್ಸಾಹನವು ಸಿಗುವದು. ಶಿಕ್ಷಕರ ಬಗ್ಗೆ ಕೆಳಗಿನ ಕೋಷ್ಟಕವನ್ನು ನೋಡತಕ್ಕದ್ದು.

ಸನ್ ೧೮೯೭-೯೮ ನೇ ಇಸವಿಯಲ್ಲಿ ಮುಂಬೈ ಇಲಾಖೆಯಲ್ಲಿಯ ಪ್ರಾಥಮಿಕ ಶಾಲೆಗಳಲ್ಲಿಯ ಶಿಕ್ಷಕರ ಸಂಖ್ಯೆಯೂ ಅವರ ಯೋಗ್ಯತೆಯೂ ಕೆಳಗೆ ಬರೆದಂತೆ ಇರುವವು.

		ಟ್ರೇಂಡ ಹೆಡ್ಡ ಮಾಸ್ತರರ ಸಂಖ್ಯೆ.	ಅಂಟ್ರೇಂಡ ಹೆಡ್ಡ ಮಾಸ್ತರರ ಸಂಖ್ಯೆ	ಟ್ರೇಂಡ ಆಸಿಸ್ಟಂಟ ಮಾಸ್ತರರ ಸಂಖ್ಯೆ	ಅಂಟ್ರೇಂಡ ಅಂದರೆ ಪಬ್ಲಿಕ ಸರ್ವ್ಹೀಸ ಪ. ಪಾಸಾದ ಆಸಿಸ್ಟಂಟರ ಸಂಖ್ಯೆ.	ಪಬ್ಲಿಕ ಸರ್ವ್ಹಿಸ ಪರೀಕ್ಷೆಯಲ್ಲಿ ಪಾಸಾಗದ ಆಸಿಸ್ಟಂಟರ ಸಂಖ್ಯೆ.	ಒಟ್ಟು ಶಿಕ್ಷಕರ ಸಂಖ್ಯೆ.
	ಪುರುಷ ಶಿಕ್ಷಕರು,						
ಮುಖ್ಯಭಾಗ.	ಲೋಕಲಬೋರ್ಡ	೮೬೨	೪೯೮	೨೪೧	೪೪೮	೪೧೯	೨೪೬೮
	ಮುಂಬೈ ಶಹರ	೨೩	೨೮	೪೭	೬೨	೪೦	೨೦೦
	ಬೇರೆ ಸ್ಥಳಗಳಲ್ಲಿಯ ಮ್ಯುನಿಸಿಪಾಲಿಟಿಗಳು	೧೪೨	೬೭	೧೮೦	೨೧೯	೨೮೦	೮೮೮
	ಸಂಸ್ಥಾನಗಳು	೫	೧೧೫	೩	೨೭	೩೩	೧೮೩
	ಒಟ್ಟು	೧೦೩೨	೭೦೮	೪೭೧	೭೫೬	೭೭೨	೩೭೩೯
ಸಿಂಧಭಾಗ.	ಲೋಕಲಬೋರ್ಡ	೭೭೨	೩೪೧	೮೬	೯೪೧	೧೫೧	೨೨೯೧
	ಮ್ಯುನಿಸಿಪಾಲಿಟಿಗಳು	೧೨೪	೨೬	೧೪೮	೪೧೪	೧೭೦	೮೮೨
	ಸಂಸ್ಥಾನಗಳು	೨೦೮	೨೯೯	೨೬	೧೯೧	೨೭೬	೧೦೦೦
	ಒಟ್ಟು	೧೧೦೪	೬೬೬	೨೬೦	೧೫೪೬	೫೯೭	೪೧೭೩

ಸಹಾಯಪ್ತ	ಕಾಠೇವಾಡ ಏಜನ್ಸಿ ...	೫೪೩	೩೩೦	೧೦೫	೨	೧೩೬೨	೨೩೪೨
	ಲೋಕಲಬೋರ್ಡ ...	೯೧೭	೨೪೦	೨೭೦	೬೦೭	೩೩೮	೨೩೭೨
	ಮುನಿಸಿಪಾಲಿಟಿಗಳು ...	೧೦೪	೪೯	೮೮	೨೦೭	೧೫೫	೬೦೩
	ಸಂಸ್ಥಾನಗಳು	೧೪೭	೪೦೭	೭೦	೨೪೭	೩೩೬	೧೨೦೭
	ಒಟ್ಟು ...	೧೧೬೮	೬೯೬	೪೨೮	೧೦೬೧	೮೨೯	೪೧೮೨
	ಲೋಕಲಬೋರ್ಡ ...	೨೬೫	೬೭	೫೨	೧೨೭	೧೦೫	೬೧೬
	ಮುನಿಸಿಪಾಲಿಟಿಗಳು ...	೩೭	೧೧	೬೯	೪೫	೩೦	೧೯೨
	ಒಟ್ಟು ...	೩೦೨	೭೮	೧೨೧	೧೭೨	೧೩೫	೮೦೮
	ಇಲಾಖೆಯ ಒಟ್ಟು ...	೪೧೪೯	೨೪೭೮	೧೩೮೫	೩೫೩೭	೩೬೯೫	೧೫೨೪೪
	ಸ್ತ್ರೀ ಶಿಕ್ಷಕರು						
	ಮಧ್ಯಭಾಗ	೩೯	೧೦	೮	೧	೪೨	೧೦೦
	ಉತ್ತರಭಾಗ	೭೭	೧೩	೬	೪	೭೩	೧೨೩
	ಕಾಠೇವಾಡ	೪೫	೬	೧೨	೦	೭೩	೧೩೬
	ದಕ್ಷಿಣಭಾಗ	೧೫	೧೨	೧೨	೫	೫೭	೧೦೧
	ಸಿಂಧ	೧೪	೮	೧೧	೧	೬	೪೦
	ಒಟ್ಟು ...	೧೯೦	೪೯	೪೯	೧೧	೨೫೧	೫೫೦

ಮೇಲಿನ ಕೋಷ್ಟಕವನ್ನು ನೋಡಲಾಗಿ ತಿಳಿಯುವದೇನೆಂದರೆ, ಗಂಡು ಹುಡುಗರ ಪ್ರಾಥಮಿಕ ಶಾಲೆಗಳಲ್ಲಿ ೬೬೨೩ ಜನ ಹೆಡ್ಡ ಮಾಸ್ತರರಿದ್ದು ಅವರಲ್ಲಿ ೨೪೩೮ ಜನ ಅಂದರೆ ಒಟ್ಟು ಮಾಸ್ತರರ ಒಂದುಮೂರಾಂಶಕ್ಕಿಂತಲೂ ಹೆಚ್ಚು ಅಂಟ್ರೇಂಡ ಜನರಿರುವರು. ಸನ್ ೧೮೯೫—೯೬ ಸಾಲಿನಲ್ಲಿ ನಮ್ಮ ಇಲಾಖೆಯಲ್ಲಿ ೪೦೨೩ ಜನ ಟ್ರೇಂಡ ಹೆಡ್ಡ ಮಾಸ್ತರರೂ ೨೬೦೪ ಜನ ಅಂಟ್ರೇಂಡ ಹೆಡ್ಡ ಮಾಸ್ತರರೂ ಇದ್ದರು. ಈವರ್ಷ ೪೧೪೯ ಜನ ಟ್ರೇಂಡರೂ ೨೪೩೮ ಜನ ಅಂಟ್ರೇಂಡರೂ ಇರುವರು. ಹೀಗೆ ಅಂಟ್ರೇಂಡ ಜನರಲ್ಲಿ ೧೬೬ ಜನ ಕಡಿಮೆಯಾಗಿದ್ದು ಅಷ್ಟೇ ಟ್ರೇಂಡರ ಸಂಖ್ಯೆಯಲ್ಲಿ ಹೆಚ್ಚಾಗಿದ್ದರಿಂದ ಒಟ್ಟು ಮಾಸ್ತರರ ಸಂಖ್ಯೆಯಲ್ಲಿ ಏನೂ ಹೆಚ್ಚುಕಡಿಮೆಯಾಗಿಲ್ಲ. ಸನ್ ೧೮೯೫—೯೬ನೇ ಸಾಲಿನಲ್ಲಿ ನಮ್ಮ ಇಲಾಖೆಯು ಲೋಕಲಬೋರ್ಡ ಶಾಲೆಗಳಲ್ಲಿ ಒಟ್ಟು ೪೦೨೬ ಹೆಡ್ಡ ಮಾಸ್ತರರಿದ್ದು ಅವರಲ್ಲಿ ೨೩೪೦ ಜನ ಟ್ರೇಂಡರೂ ೧೬೮೬ ಜನ ಅಂಟ್ರೇಂಡರ ಇದ್ದರು. ಈ ವರ್ಷ ಒಟ್ಟು ಹೆಡ್ಡ ಮಾಸ್ತರರ ಸಂಖ್ಯೆಯು ೪೮೩೫ ಆಗಿದ್ದು ಅವರಲ್ಲಿ ೩೩೫೯ ಜನ ಟ್ರೇಂಡರೂ ೧೪೭೬ ಜನ ಅಂಟ್ರೇಂಡರೂ ಇರುವರು ಹೆಣ್ಣುಮಕ್ಕಳ ಸಾಲೆಗಳಲ್ಲಿರುವ ಹೆಡ್ಡ ಮಿಸ್ಟ್ರೇಸುಗಳಲ್ಲಿ ಸುಮಾರು ಒಂದುಐದಾಂಶದಷ್ಟು ಜನರು ಅಂಟ್ರೇಂಡರಿರುವರು. ಸನ್ ೧೮೯೫—೯೬ ಸಾಲಿನಲ್ಲಿ ೧೫೮ ಮಂದಿ ಮಾತ್ರ ಟ್ರೇಂಡ ಮಿಸ್ಟ್ರೇಸುಗಳಿದ್ದರು ಈ ವರ್ಷ ಆ ಸಂಖ್ಯೆಯು ೪೨ರಿಂದ ಹೆಚ್ಚಾಗಿರುತ್ತದೆ. ಒಟ್ಟು ೧೫೨೪೪ ಜನ ಪುರುಷಶಿಕ್ಷಕರಲ್ಲಿ ೮೦೧೨ ಜನ ಅಂದರೆ ಸುಮಾರು ಅರ್ಧಕ್ಕಿಂತಲು ಸ್ವಲ್ಪ ಹೆಚ್ಚು ಜನ ಟ್ರೇಂಡ ಶಿಕ್ಷಕರಿರುವರು. ಕಳೆದ ವರ್ಷ (೧೮೯೬—೯೭ ಸಾಲಿನಲ್ಲಿ) ನಮ್ಮ ಇಲಾಖೆಯಲ್ಲಿಯು ಒಟ್ಟು ಟ್ರೇಂಡ ಮಾಸ್ತರರ ಸಂಖ್ಯೆಯು ೪೦೨೯ ಇತ್ತು ಅದು ಈ ವರ್ಷ ೪೧೪೯ ಆಗಿರುತ್ತದೆ. ಟ್ರೇಂಡ ಹೆಡ್ಡ ಮಿಸ್ಟ್ರೆಸುಗಳ ಸಂಖ್ಯೆಯು ಕಳೆದ ವರ್ಷ ೧೨೯ ಇತ್ತು ಈ ವರ್ಷ ೨೦೦ ಆಗಿರುತ್ತದೆ. ಈ ಜನರ ಸಂಖ್ಯೆಯು ದಿನದಿನಕ್ಕೆ ಹೆಚ್ಚಾಗುತ್ತ ನಡೆದಿರುತ್ತದೆಂಬ ಮಾತು ಸಮಾಧಾನಕರವಾಗಿರುತ್ತದೆ. ಟ್ರೇಂಡ ಅಸಿಸ್ಟಂಟರ ಸಂಖ್ಯೆಯು ಕಳೆದ ವರ್ಷ ೧೩೧೬ ಇತ್ತು ಈ

ವರ್ಷ ೧೩೭೫ ಆಗಿರುತ್ತದೆ. ಅದರಂತೆ ಟ್ರೇಂಡ ಸ್ತ್ರೀಶಿಕ್ಷಕರ ಸಂಖ್ಯೆಯು ಸಹ ಈ ವರ್ಷ ೩೪೪೯ ಆಗಿರುತ್ತದೆ. ಈ ಪ್ರಕಾರ ನಮ್ಮ ಇಲಾಖೆಯ ದಕ್ಷಿಣ ಭಾಗದ ಪ್ರಾಥಮಿಕ ಸಾಲೆಗಳಲ್ಲಿ ಸುಮಾರು ೧೩೫ ಜನ ಟ್ರೇಂಡ ಜನರು ಹೆಚ್ಚಾಗಿರುವರು. ಒಟ್ಟು ೭೬೧೩ ಜನ ಅಸಿಸ್ಟಂಟರಲ್ಲಿ ೧೩೭೫ ಜನ ಅಂದರೆ ಒಟ್ಟಿನ ಒಂದಾರಾಂಶದಷ್ಟು ಜನರು ಟ್ರೇಂಡರಿರುವರು. ಪಬ್ಲಿಕ ಸರ್ವಿಸ ಪರೀಕ್ಷೆಯಲ್ಲಿ ಪಾಸಾದ ಅಂಟ್ರೇಂಡ ಅಸಿಸ್ಟಂಟರ ಸಂಖ್ಯೆಯು ಕಳೆದ ವರ್ಷ ೩೪೪೫ ಇತ್ತು, ಈ ವರ್ಷ ೩೫೪೭ ಆಗಿರುತ್ತದೆ. ಮಧ್ಯ ಭಾಗದ ಲೋಕಲಬೋರ್ಡ ಸಾಲೆಗಳಲ್ಲಿ ೨೪೧ ಜನ ದಕ್ಷಿಣಭಾಗದ ಲೋಕಲಬೋರ್ಡ ಸಾಲೆಗಳಲ್ಲಿ ೨೩೦ ಟ್ರೇಂಡ ಅಸಿಸ್ಟಂಟರಿರುವರು ಆದರೆ ಉತ್ತರಭಾಗದ ಲೋಕಲ ಬೋರ್ಡ ಸಾಲೆಗಳಲ್ಲಿ ೭೬ ಜನ ಮಾತ್ರ ಟ್ರೇಂಡ ಅಸಿಸ್ಟಂಟರಿರುವರು. ಈ ಭಾಗದಲ್ಲಿಯ ಅಂಟ್ರೇಂಡ ಅಸಿಸ್ಟಂಟರ ಸಂಖ್ಯೆಯು ಉಳಿದ ಎಲ್ಲ ಭಾಗಗಳಿಗಿಂತಲೂ ಬಹಳ ಹೆಚ್ಚಿಗಿರುವದು. ಹುಡಗಿಯರ ಸಾಲೆಗಳಲ್ಲಿರುವ ೩೧೧ ಅಸಿಸ್ಟಂಟರಲ್ಲಿ ೪೯ ಮಂದಿ ಮಾತ್ರ ಟ್ರೇಂಡ ಅಸಿಸ್ಟಂಟರಿರುವರು. ಉಳಿದವರಲ್ಲಿ ೨೫೧ ಜನರು ಅಂದರೆ ಒಟ್ಟಿನ ಐದುಆರಾಂಶದಷ್ಟು ಜನರು ಆರನೇ ಇಯತ್ತೆಯಲ್ಲಿ ಸಹ ಪಾಸಾಗದವರಿರುವರು.

ಟ್ರೇಂಡ ಹೆಡ್ಡ ಮಾಸ್ತರರ ಪ್ರತಿತಿಂಗಳ ಸರಾಸರಿ
ಪಗಾರವು ಕೆಳಗೆ ಬರೆದಂತೆ ಇರುವದು,

	ಲೋಕಲ ಬೋರ್ಡ ಸಾಲೆಗಳಲ್ಲಿ.	ಮುನಿಸಿಪಲ್ ಸಾಲೆಗಳಲ್ಲಿ	ಸಂಸ್ಥಾನದ ಸಾಲೆಗಳಲ್ಲಿ.
ಮಧ್ಯಭಾಗ.			
ಮುಂಬೈ ಶಹರ.	...	೩೪ ೯-೯	...
ಉಳಿದ ಸ್ಥಳಗಳು.	೧೩-೯-೧೧	೨೨-೧೦-೪	೧೫-೦-೦
ಉತ್ತರ ಭಾಗ.	೧೯-೨-೩	೨೭-೧೫ ೧೦	೧೭-೧-೨
ಕಾಠೆವಾಡ.	...	...	೧೭-೫-೧೧
ದಕ್ಷಿಣಭಾಗ.	೧೩-೬-೩	೨೩-೧-೧	೧೬-೫-೩
ಸಿಂಧ.	೨೩-೧೩-೧	೩೬-೬ ೯	...

ಟ್ರೇಂಡ ಹೆಡ್ಡ ಮಾಸ್ತರರ ಸರಾಸರಿ ಪಗಾರವು ಉಳಿದ ಭಾಗಗಳಿಗಿಂತಲೂ ಸಿಂಧದಲ್ಲಿ ಹೆಚ್ಚಿರುವದು. ಅದರಂತೆ ಅಲ್ಲಿಯ ಮ್ಯುನಿಸಿಪಾಲಿಟಿಯ ಶಾಲೆಗಳ ಪಗಾರವಾದರೂ ಉಳಿದ ಕಡೆಗಿಂತ ಹೆಚ್ಚಿರುವದು. ಉತ್ತರ ಭಾಗದಲ್ಲಿಯ ಮಾಸ್ತರಜನರ ಸರಾಸರಿ ಪಗಾರವು ಸಿಂಧಕ್ಕಿಂತಲೂ ಕಡಿಮೆ ಯಾದಾಗ್ಯೂ ಸಾಧಾರಣ ಸಮಾಧಾನಕರವಾಗಿರುವದು. ಮಧ್ಯದಕ್ಷಿಣ ಭಾಗಗಳಲ್ಲಿಯ ಈ ಸರಾಸರಿಯು ತೀರ ಕಡಿಮೆಯುಂಟು.

MANUAL OF METHOD.

ಶಿಕ್ಷಾಕ್ರಮ.

(೬೩ ನೇ ಪುಟದಿಂದ ಮುಂದೆ ಸಾಗಿದ್ದು.)

ದೇಹದಂಡದ ದೋಷಗಳು ಅಥವಾ ದೇಹದಂಡ ಮಾಡಬಾರದೆಂಬ ಬಗ್ಗೆ ಪ್ರಮಾಣಗಳು:— ದೇಹದಂಡ ಮಾಡುವದು ಸರಿಯಾದದ್ದಲ್ಲವೆಂಬ ಬಗ್ಗೆ ಜಾವಲಾಕನು ಪ್ರತಿಪಾದಿಸುವದು ಹ್ಯಾಗಂದರೆ—

(೧) ತಾತ್ಕಾಲಿಕವಾದಂಥ, ವಿಷಯ ವಿಶಿಷ್ಟವಾದಂಥ ಸುಖವನ್ನು ಹುಡುಗರು ಸ್ವಾಭಾವಿಕವಾಗಿ ಬಯಸುತ್ತಾರೆ. ಈ ಪ್ರವೃತ್ತಿಯನ್ನು ನಿರ್ಮೂಲ ಮಾಡುವದು ಉಚಿತವು— ಆದರೆ ದೇಹದಂಡದ ಭೀತಿಯಿಂದ ಇದನ್ನು ನಿರಾಕರಿಸಲು ಅದು ಮತ್ತಿಷ್ಟು ಪ್ರಬಲಗೊಳ್ಳುತ್ತದೆ.

(೨) ಯಾವದೊಂದು ಚಲೋ ಕೆಲಸವನ್ನು ಮಾಡದ್ದಕ್ಕಾಗಿ ಹುಡುಗರನ್ನು ನಾವು ದಂಡಿಸಿದರೆ ತಪ್ಪು ದಂಡನೆಗಳ ಸಾಹಚರ್ಯವು ಮನಸ್ಸಿನಲ್ಲಿ ನೆಲೆಗೊಳ್ಳುವದಕ್ಕೆ ಬದಲಾಗಿ ಆ ಕೆಲಸ ಮತ್ತು ದಂಡನೆ ಇವುಗಳ ಸಾಹಚರ್ಯವು ನೆಲೆಗೊಂಡು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಆ ಕೆಲಸದ ವಿಷಯವಾಗಿ ಅಪ್ರೀತಿಯು ಹುಟ್ಟುತ್ತದೆ. ಅಂದರೆ ದೇಹದಂಡದಿಂದ ವಿಪರೀತ ಪರಿಣಾಮವು ಘಟಿಸುತ್ತದೆ.

(೩) ದೇಹದಂಡದ ಸಾಧನದಿಂದ ಹುಟ್ಟಿಸಿದ ತಿದ್ದುವಿಕೆ

ಯು ವಿಶ್ವಾಸಾರ್ಹವಲ್ಲ. ಈ ಸಾಧನದಿಂದ ತಿದ್ದಲ್ಪಟ್ಟ ವಿದ್ಯಾರ್ಥಿಗಳು ಮೋಸಗಾರರೂ ಕಪಟಿಗಳೂ ಆಗುವರು.

(೪) ದೇಹದಂಡದಿಂದ ಅವ್ಯವಸ್ಥೆಯು ತಪ್ಪುವದು, ಆದರೆ ಅದಕ್ಕೆ ಬದಲು ಮತ್ತೊಂದು ಘೋರತರವಾದ ದುಷ್ಪರಿಣಾಮವು ಫಲಿಸುತ್ತದೆ. ದೇಹದಂಡದ ಸಾಧನದಿಂದ ತಿದ್ದಲ್ಪಟ್ಟ ಮನುಷ್ಯನು ಸ್ವತಂತ್ರ ವಿಚಾರದವನಾಗಲಾರನು. ಅವನ ಮನಸ್ಸಿನಸ್ಥೈರ್ಯವೂ ಸ್ವಾತಂತ್ರ್ಯವೂ ಕಡಿಮೆಯಾಗಿ ಅವನನು ಚಂಚಲನೂ ಪರಾವಲಂಬಿಯೂ ಆಗುವನು.

೮. ತರುಣ ಶಿಕ್ಷಕರೂ ದೇಹದಂಡವೂ:—ತರುಣ ಶಿಕ್ಷಕರಿಗೆ ಸಾಧಿಸಿದ ಮಟ್ಟಿಗೆ ದೇಹದಂಡವನ್ನು ಮಾಡುವ ಸ್ವಾತಂತ್ರ್ಯವನ್ನು ಕೊಡಕೂಡದು. ಅದರಿಂದ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಹಿತ ಉಂಟು.

ವಿದ್ಯಾರ್ಥಿಗಳ ಹಿತವು.

(೧)ದೇಹದಂಡವು ಬಹಳ ಬಿಗಿಯಾದಂಥ, ಜಬಾಬದಾರಿಯುಳ್ಳಂಥ ಸಂಗತಿಯು; ಅದರಲ್ಲಿ ಸ್ವಲ್ಪ ತಪ್ಪಾದರೆ ವೈಷಮ್ಯ ಹುಟ್ಟಿ ದುಷ್ಪರಿಣಾಮಗಳು ಸಂಭವಿಸುವವು, ಆದ್ದರಿಂದ ಈ ಸೂಕ್ಷ್ಮವಾದಂಥ ಕೆಲಸವನ್ನು ಮಾಡಲಿಕ್ಕೆ ತಕ್ಕ ಮನುಷ್ಯನಿಗೆ ನೇಮಿಸುವದೇ ಉಚಿತವು. ತರುಣ ಜನರು ಈ ಕೆಲಸಕ್ಕೆ ತಕ್ಕವರಲ್ಲ.

(೨) ವಯೋವೃದ್ಧನೂ ಅನುಭವಿಕನೂ ಆದ ಶಿಕ್ಷಕನಿಂದ ಹೊಂದಿದ ಶಿಕ್ಷೆಗೆ ವಿದ್ಯಾರ್ಥಿಗಳು ಒಪ್ಪಿಕೊಳ್ಳುತ್ತಾರೆ. ಆ ಸಂಬಂಧದಿಂದ ಅವರ ಮನಸ್ಸಿನಲ್ಲಿ ಯಾವತರದ ವೈಷಮ್ಯವೂ ಉಳಿಯುವದಿಲ್ಲ. ಅದೇ ತರುಣ ಶಿಕ್ಷಕನು ಶಿಕ್ಷಿಸಲಾಗಿ ವಿದ್ಯಾರ್ಥಿಗಳು ತಮಗೆ ಅನ್ಯಾಯವಾಯಿತೆಂದು ದೂರಿಕೊಳ್ಳುವರು.

(೩) ತರುಣ ಶಿಕ್ಷಕರಲ್ಲಿ ತಾರತಮ್ಯಕ್ಕಿಂತ ಆತುರವು ಹೆಚ್ಚಿಗಿರುತ್ತದೆ. ವಿಚಾರಕ್ಕಿಂತ ಕಾರ್ಯಪ್ರೀತಿಯು ಪ್ರಬಲವಾಗಿರುತ್ತದೆ. ಸಹಾನುಭೂತಿಗಿಂತ ಉತ್ಸಾಹಾತಿರೇಕವು ವಿಶೇಷವಾಗಿರುತ್ತದೆ. ಇವುಗಳ ಮೂಲಕವಾಗಿ ಅನ್ಯಾಯವಾಗುವ ಸಂಭವವು ವಿಶೇಷಉಂಟು.

(೪) ದೇಹದಂಡನದಿಂದ ವಿದ್ಯಾರ್ಥಿಗಳು ನಾಚಿಕೆಗೇಡಿಗಳಾಗುತ್ತಾರೆ. ಅವರ ಮನಸ್ಸಿನ ಕೋಮಲತ್ವವು ನಷ್ಟವಾಗುತ್ತದೆ.

(೫) ದೇಹದಂಡನದಿಂದ ಮನಸ್ಸಿನ ಪ್ರವೃತ್ತಿಗಳಿಗೆ ಪ್ರತಿಬಂಧವಾಗುವದಷ್ಟೇ ಹೊರ್ತು ಸಂಸ್ಕಾರವಾಗುವದಿಲ್ಲ.

SELECTIONS FROM THE KARNATIK GAZETTEER.

ಕನ್ನಡ ಗಝೇಟಿಯರದಿಂದ ಅವತರಣಗಳು.

(೩೦ ನೇ ಪುಟದಿಂದ ಮುಂದೆ ಸಾಗಿದ್ದು.)

ಚಂದಾವರ—ಕುಮಟೆಯ ಆಗ್ನೇಯಕ್ಕೆ ೫ ಮೈಲಿನ ಮೇಲೆ. ಇಲ್ಲಿ ವಿಜಾಪುರದವರ ಶೆರಿಫ ಉಲ್‌ಮುಲ್ಕನೆಂಬ ಸರದಾರನಿರುವಾಗ ಊರು ತುಂಬಿತ್ತು; ಈಗ ಹಾಳಾಗಿದೆ. ಇಕ್ಕೇರಿಯ ವೆಂಕಟನಾಯಕನು ಚಂದಾವರವನ್ನು ತಕ್ಕೊಂಡು ವಿಜಾಪುರದವರನ್ನು ದಕ್ಷಿಣಕ್ಕೆ ಹೋಗಗೊಡಲಿಲ್ಲ. ಇಲ್ಲಿ ರೋಮನ್ ಕ್ಯಾಥಲಿಕ್ ಮತದವರ ದೊಡ್ಡ ಚರ್ಚವಿರುತ್ತದೆ.

ಧಾರೇಶ್ವರ— ಕುಮಟೆಯ ಆಗ್ನೇಯಕ್ಕೆ ೫ ಮೈಲಿನ ಮೇಲೆ. ಇಲ್ಲಿಯ ಧಾರೇಶ್ವರನ ಸುಂದರವಾದ ಗುಡಿಯನ್ನು ೮೦೦ ವರ್ಷಗಳ ಹಿಂದೆ ರುದ್ರೋಜಿ ಪಂಡಿತನೆಂಬವನು ಕಟ್ಟಿಸಿದನೆಂದು ಹೇಳುತ್ತಾರೆ. ಈ ಈಶ್ವರನಿಗೆ ಸರಕಾರದಿಂದ ೧೪೪೦ ರೂಪಾಯಿಯ ನೇಮಣೂಕು ನಡಿಯುತ್ತದೆ. ಮಕರ ಸಂಕ್ರಾಂತಿಯಲ್ಲಿ ಜಾತ್ರೆಯಾಗಿ ರಥೋತ್ಸವವಾಗುತ್ತದೆ.

ಗೋಕರ್ಣ—ಕುಮಟೆಯ ಉತ್ತರಕ್ಕೆ ೧೦ ಮೈಲಿನ ಮೇಲೆ ಪ್ರಖ್ಯಾತವಾದ ಕ್ಷೇತ್ರವು, ಜ. ಸ. (೮೧) ೪೨೦೩. ಇಲ್ಲಿ ಪೋಲೀಸಠಾಕಿ, ಒಂದು ಕನ್ನಡ ಶಾಲೆ, ಮುಸಾಫರೀ ಬಂಗಲೆ, ಮೂರು ತಿಂಗಳಿನ ಪೂರ್ತಿ ಮ್ಯುನಿಸಿಪಾಲಿಟಿ ಉಂಟು. ಈ ಊರು ಸಮುದ್ರ ದಂಡೆಯಲ್ಲಿ ಇದ್ದು, ಉಳಿದ ಮೂರು ದಿಕ್ಕುಗಳಲ್ಲಿ ಕಿರಿ ಗುಡ್ಡಗಳಿರುತ್ತವೆ. ಸಮುದ್ರ ತೀರದಲ್ಲಿ

ಗೋಕರ್ಣದ ಬೈಲು ಉದ್ದಕ್ಕೆ ಆಕಳ ಕಿವಿಯ ಹಾಗೆ ಇರುವ ಕಾರಣ ಇದಕ್ಕೆ ಗೋಕರ್ಣವೆಂಬ ಹೆಸರು ಬಂದದೆ ಎಂದು ತೋರುತ್ತದೆ. ಈ ಊರಿನ ಬಾಜಾರು ತಕ್ಕಮಟ್ಟಿಗೆ ದೊಡ್ಡದಿರುತ್ತದೆ; ಆದರೆ ಅದು ಜಾತ್ರೆಯಲ್ಲಿ ಮಾತ್ರ ತುಂಬುತ್ತದೆ.

ಗೋಕರ್ಣದಲ್ಲಿ ಮಹಾಬಳೇಶ್ವರನ ಗುಡಿಯು ಮುಖ್ಯಸ್ಥಾನವಿರುತ್ತದೆ. ಗರ್ಭಾಗಾರವು ೩೦ ಫೂಟು ಚಚ್ಚೌಕ ಇರುವದು. ಇದರ ಛಾವಣಿಯು ಕಂಸಾಕಾರವಾಗಿದ್ದು, ಅದರ ಮೇಲೆ ತಾಮ್ರದ ಕಳಸವಿರುತ್ತದೆ. ಸಭಾಮಂಟಪವು ೬೦ ಫೂಟು ಉದ್ದ, ೩೦ ಫೂಟು ಅಗಲ ಇರುವದು. ಸಭಾಮಂಟಪದ ಮುಂಭಾಗದಲ್ಲಿ ಚಂದ್ರಶಾಲೆ ಇರುವದು. ಗರ್ಭಾಗಾರವನ್ನೂ ಸಭಾಮಂಟಪವನ್ನೂ ಕಣಶಿಲೆಯಿಂದ ಕಟ್ಟಿದ್ದಾರೆ; ಚಂದ್ರಶಾಲೆಯನ್ನು ಜಂಬೂರಿ ಇಟ್ಟಂಗಿಗಳಿಂದ ಕಟ್ಟಿದ್ದಾರೆ. ಗರ್ಭಾಗಾರವನ್ನು ವಿಶ್ವಕರ್ಮ ಕಟ್ಟಿದನೆಂತಲೂ, ಸಭಾಮಂಟಪ ಚಂದ್ರಶಾಲೆಗಳನ್ನು ಕುಂದಾಪುರದವನೊಬ್ಬ ಬ್ರಾಹ್ಮಣನು ಕಟ್ಟಿಸಿದನೆಂತಲೂ ಹೇಳುತ್ತಾರೆ. ಮಹಾಬಳೇಶ್ವರನ ಲಿಂಗವು ನೆಲದ ಮೇಲೆ ಎರಡು ಇಂಚಿಗಿಂತ ಹೆಚ್ಚು ಎತ್ತರವಿಲ್ಲ. ಈ ಲಿಂಗವನ್ನು ಶಿವನು ತನ್ನ ಆತ್ಮದಿಂದ ಮಾಡಿದ್ದಾನೆಂದು ಹೇಳುತ್ತಾರೆ. ಇದರ ಬೇರುಗಳು ಪಾತಾಳಕ್ಕೆ ಇಳಿದವಂತೆ. ಸಭಾಮಂಟಪದಲ್ಲಿ ಪಾರ್ವತಿ ಗಣಪತಿಗಳ ಮೂರ್ತಿಗಳೂ ಮಧ್ಯಭಾಗದಲ್ಲಿ ನಂದಿಯೂ ಉಂಟು. ದೇವರ ಮುಂದೆ ನೂರಕ್ಕಿಂತ ಹೆಚ್ಚು ದೀಪಗಳು ಯಾವಾಗಲೂ ಉರಿಯುತ್ತಿರುತ್ತವೆ. ಪ್ರತಿ ನಿತ್ಯದಲ್ಲಿ ದೇವರಿಗೆ ಪಂಚಾಮೃತ ಅಭಿಷೇಕವಾಗಿ ೬೦ ಶೇರು ಅಕ್ಕಿಯ ಅನ್ನದ ನೈವೇದ್ಯವಾಗುತ್ತದೆ. ಈ ಅನ್ನವನ್ನು ಗುಡಿಯ ಪರಿಚಾರಕರು ಉಣ್ಣುವರು. ಯಾತ್ರಿಕರು ದೇವರಿಗೆ ಪಂಚಾಮೃತ ಅಭಿಷೇಕ ಮಾಡಿಸಲಿಕ್ಕೆ ೧-೨ ಆಣೆ, ಏಕಾದಶರುದ್ರದ ಅಭಿಷೇಕ ಮಾಡಿಸಲಿಕ್ಕೆ ೧ ರೂಪಾಯಿ, ಲಘುರುದ್ರದ ಅಭಿಷೇಕಕ್ಕೆ ೪ ರೂಪಾಯಿ, ಮಹಾರುದ್ರದ ಅಭಿಷೇಕಕ್ಕೆ ೬೦ ರೂಪಾಯಿ ಪೂಜಾರಿಗೆ ಕೊಡಬೇಕಾಗುತ್ತದೆ. ಅರವತ್ತು ವರ್ಷ

ಕ್ಕೊಮ್ಮೆ ದೇವರ ಸುತ್ತು ಮುತ್ತಲಿನ ನೆಲವನ್ನು ಅಗಿದು ಅದರೊಳಗೆ ಮುತ್ತು ರತ್ನಗಳ ಪುಡಿಗಳನ್ನು ಹಾಕಿ ಮುಚ್ಚುವರು. ಈ ವಿಧಾನಕ್ಕೆ ಅಷ್ಟಬಂಧನವೆನ್ನುವರು.

ಈ ದೇವಸ್ಥಾನಕ್ಕೆ ಸರಕಾರದಿಂದ ನಗದು ೭೯೧ ರೂಪಾಯಿ ಸಲ್ಲುವದಲ್ಲದೆ ೧೦೦೦ ರೂಪಾಯಿಯ ಭೂಮಿಯು ನಡಿಯುತ್ತದೆ. ವರ್ಷಕ್ಕೆ ದೇವರ ಆದಾಯವು ಎಲ್ಲ ಕೂಡಿ ಸುಮಾರು ೪೦೦ ರೂಪಾಯಿಯಾಗುತ್ತದೆ ಈ ಹಣದ ವ್ಯವಸ್ಥೆಯನ್ನು ಸರಕಾರದಿಂದ ನೇಮಿಸಲ್ಪಟ್ಟ ಕಮಿಟಿಯವರು ಮಾಡುತ್ತಾರೆ. ಮಹಾಶಿವರಾತ್ರಿಯಲ್ಲಿ ಮಾಘವದ್ಯ ದಶಮಿಯಿಂದ ಫಾಲ್ಗುಣಶುದ್ಧ ದ್ವಿತೀಯದ ವರೆಗೆ ಜಾತ್ರೆಯಾಗುತ್ತದೆ. ಈ ಜಾತ್ರೆಯಲ್ಲಿ ಸುಮಾರು ೧೫ ರಿಂದ ೨೦ ಸಾವಿರದ ವರೆಗೆ ಜನ ಕೂಡಿ, ೧ ಲಕ್ಷ ರೂಪಾಯಿಯ ವರೆಗೆ ವ್ಯಾಪಾರವಾಗುತ್ತದೆ. ಫಾಲ್ಗುಣ ಶುದ್ಧ ಪ್ರತಿಪದೆಯಲ್ಲಿ ರಥೋತ್ಸವವಾಗುತ್ತದೆ. ದೇವರ ರಥವು ತಕ್ಕಮಟ್ಟಿಗೆ ಸುಶೋಭಿತವಾದದ್ದಿರುತ್ತದೆ.

(ಸಕ್ಷೇಪ.)

CORRESPONDENCE.

ಪತ್ರವ್ಯವಹಾರ.

(೭೨ನೇ ಪುಟದಿಂದ ಮುಂದೆ ಸಾಗಿದ್ದು.)

(೪) ಇದು ಬಹು ಗೌರವ ಉಳ್ಳದ್ದೂ ಸಾರ್ವತ್ರಿಕವಾದದ್ದೂ ಇರುತ್ತದೆ. ಇದೊಂದು ಸಾಧಿಸಿದರೆ ಉಳಿದವುಗಳು ಬಹುತರ ಇದರ ಉದರದಲ್ಲಿ ಬರಲಿಕ್ಕೆ ಸಂದೇಹವಿಲ್ಲ. ಅದರಿಂದ ಇದು ಬಹಳ ಕಠಿಣವಾಗಿರುವದು. ಇದೇ ಶಿಕ್ಷಣವ ಮುಖ್ಯ ಗುಟ್ಟು. ಅದರಿಂದ ಇದರ ವಿಷಯಕ್ಕೆ ಬರಹವು ಬೇಕಾದಷ್ಟು ವಿಸ್ತಾರವಾಗುವಂತಿದೆ, ಅಂದರೆ ಲೇಖಕರ ಯೋಗ್ಯತೆಯ ಪ್ರಮಾಣದಿಂದಿರುವದು. ಆದರೂ ನನ್ನ ಯೋಗ್ಯತೆ ಇದ್ದಷ್ಟು ಸ್ವಲ್ಪವೇ ಬರೆಯಲೆತ್ನಿಸುವೆನು.

ಉತ್ತಮ ಶಿಕ್ಷಣವೆಂದರೆ ಮೊದಲು ಕಲಿಸುವ ವಿಷಯವನ್ನು ಚನ್ನಾಗಿ ಸ್ವತಃ ಓದಲಿಕ್ಕೆ ಬೇಕು. ಇದಕ್ಕೆ ಮಾಸ್ತರನಲ್ಲಿ ಆಸ್ಥೆ, ಸಮಾಧಾನ, ಚಟುವಟಿಕೆಗಳು ಬೇಕಾಗುವವು. ಬಳಿಕ ತಿಳುಕೊಂಡದ್ದನ್ನು ತಿಳಿಸುವ ಪದ್ಧತಿಯನ್ನು ಶೋಧಿಸಬೇಕು. ಅದು ಸುಲಭವಾದದ್ದೂ ಮೋಹಕವಾದದ್ದೂ ಇರಬೇಕು. ಆ ಮೇಲೆ ಶಿಕ್ಷಣಕ್ಕೆ ಆರಂಭ ಮಾಡಿ ಕೇವಲ ಪ್ರಶ್ನಪದ್ಧತಿಯಿಂದೇ ಕಲಿಸತಕ್ಕದ್ದು. ಈ ಪ್ರಶ್ನಗಳು ಸಣ್ಣವೂ, ಸುಲಭ ಭಾಷೆಯುಳ್ಳವೂ, ವಿಚಾರವರ್ಧಕಗಳೂ ಇರತಕ್ಕದ್ದು. ಮತ್ತು ಶಿಕ್ಷಣಕ್ಕೆ ಮನೋಧರ್ಮಜ್ಞಾನವು ಅವಶ್ಯವಾಗಿ ಬೇಕಾಗುತ್ತದೆ. ಅಂದರೆ ಯಾರಿಗೆ ತಿಳಿಯಿತು ಯಾರಿಗೆ ತಿಳಿಯಲಿಲ್ಲ ಎಂಬದನ್ನು ಧೂರ್ತತ್ವದಿಂದ ತಿಳುಕೊಂಡು ಕೂಡಲೇ ಪ್ರಶ್ನಮಾಡಿ ತಿಳಿಯದವರಿಂದ ಉತ್ತರ ಹೊರಡಿಸಬೇಕು. ಮಂದ ಬುದ್ಧಿಯವರಿಗೆ ತೀವ್ರ ತಿಳಿಯುವದಿಲ್ಲ. ಅಂಥಲ್ಲಿ ಅದಕ್ಕೂ ಸುಲಭವಾದ ಪದ್ಧತಿಯನ್ನು ಆಲೋಚಿಸಿ ತಿಳಿಯುವ ತನಕ ಬೇಸರಿಯದೇ ಹೇಳಬೇಕು. ಬೇಸರಿಯದೆ ಹೇಳಬೇಕೆಂಬದು ಬರಿಯುವದಕ್ಕೆ ಅತಿ ಸುಲಭವಾದದ್ದು. ಆದರೆ ಕೃತಿಗೆ ಬಹಳ ಕಠಿಣವಾದದ್ದೇ ಸರಿ. ಈ ಗುಣ ಉಳ್ಳವರಿಗೇ ಸಚ್ಛಿಕ್ಷಕರೆಂಬ ಹೆಸರು ಒಪ್ಪುವದು. ಮಂದಬುದ್ಧಿಯವರಿಗೆ ಪುನಃ ಪುನಃ ಹೇಳತಕ್ಕ ಪ್ರಸಂಗ ಬಂದಲ್ಲಿ ಮಾಸ್ತರನು ಒಂದು ಮಾರ್ಗ ಸ್ವೀಕರಿಸಿದರೆ ಸುಲಭವಾಗುತ್ತದೆ. ಅದೇನಂದರೆ, ವಿದ್ಯಾರ್ಥಿಯ ಉತ್ತರದ ಉಗಮವನ್ನು ಶೋಧಿಸುವದು ಅಂದರೆ ಉತ್ತರ ಹೊರಡುವಾಗ ವಿದ್ಯಾರ್ಥಿಯ ಮನಸ್ಸಿನ ಸ್ಥಿತಿ ಹ್ಯಾಗಿತ್ತು? ಅವನ ಲಕ್ಷವು ಪ್ರಕೃತ ವಿಷಯದ ಕಡೆಗೆ ಇತ್ತೋ ಇಲ್ಲವೋ? ಮುಂತಾದ ಈ ಪ್ರಕಾರದ ಶಿಕ್ಷಣ ಸಾಗಿಸಿದರೆ ವಿದ್ಯಾರ್ಥಿಗಳಲ್ಲಿ ವಿದ್ಯಾಭಿರುಚಿಯುತ್ಪನ್ನವಾಗಿ ಆಸ್ಥೆಯಿಂದ ಶಾಲೆಗೆ ಬರುವರು. ಈ ನಾಲ್ಕನೇ ಭಾಗದಲ್ಲಿ ವಿವರಿಸಿದಂತೆ ವರ್ತಿಸದವನ ಕಾರ್ಯಸ್ಥಿತಿಯನ್ನು ಸ್ವಲ್ಪವೇ ವಿಚಾರಿಸುವಾ—

ಇಂಥವರು ಮೊದಲು ಕಲಿಸುವ ವಿಷಯವನ್ನು ತಾವೇ ಓದುವದಿಲ್ಲ. ಮತ್ತು ಕಲಿಸುವ ಪದ್ಧತಿಯ ಸಂಬಂಧ ಆ

ಲೋಚನೆಯನ್ನು ಮನಸ್ಸಿನಲ್ಲಿ ಸಹ ತರುವದಿಲ್ಲ. ಇದರಿಂದ ವಿಷಯವು ಹ್ಯಾಗೆ ಸುಬೋಧವಾಗುವದು ! ಇವರಲ್ಲಿ ಬೇಸರವು ಪೂರ್ಣವಾಗಿ ಬೇರೂರಿರುವದು. ವಿದ್ಯಾರ್ಥಿಗಳ ಬಲವನ್ನರಿಯುವದಂತೂ ಸ್ವಪ್ನದಲ್ಲಿ ಸಹ ಇರುವದಿಲ್ಲ. ಇದರಿಂದ ಮುಂದ ವಿದ್ಯಾರ್ಥಿಗಳ ಪರಿಣಾಮ ಹ್ಯಾಗೆ. ವೈಚಿತ್ರ್ಯವಿಕ್ಷಣ ಔದಾಸೀನ್ಯ ಇವುಗಳಿಂದಲೂ ವಿದ್ಯಾರ್ಥಿಗಳಿಗೆ ತಿಳಿಯದ್ದರಿಂದಲೂ ಆ ಪಂತೋಜಿಯ ಮನದಲ್ಲಿ ಸಂತಾಪವು ಉದ್ಭವಿಸುವದು. ಪರೀಕ್ಷೆ ಸಮೀಪಿಸಿದ್ದರಿಂದಂತೂ ; ಅಂತಸ್ತಾಪದ ಹಬ್ಬುಗೆಯಿಂದ ಕೋಪವು ಇವನನ್ನು ವಿಕಾರಿ ಮುಖದಲ್ಲಿ ಗೋಚರವಾಗುವದು. ಆಗ ಕರವು ಹೊಣ್ಣೆಯನ್ನು ಹುಡುಕ ಹತ್ತುವದು. ಈ ಶಿಟ್ಟಿನ ಭರದಲ್ಲಿ ಅದೂ ಒಂದು ಅನುಕೂಲವಾದರೆ ವಿದ್ಯಾರ್ಥಿಗಳ ಪರಿಣಾಮವು ಕೇಳುವದೇನದೆ. ಸಾರಾಂಶ, ವಿದ್ಯಾರ್ಥಿಗಳಿಗೆ ವಿದ್ಯಾಭಿರುಚಿಯು ತಪ್ಪುವದು. ಇದರಿಂದ ಶಾಲೆಗೆ ಬರುವ ಉದ್ದೇಶವೇ ಇಲ್ಲದಂತಾಗಿ ವಿದ್ಯಾರ್ಥಿಗಳು ಕೆಟ್ಟು ಹೋಗುವರು.

(೨೭) ೪ನೇ ಭಾಗದಲ್ಲಿ ವಿವರಿಸಿದ ಪ್ರಕಾರ ಮಾಸ್ತರರು ಮಾನಸಿಕ ಸ್ಥಿತಿಯು ಅಸ್ವಸ್ಥತೆಯಿಂದ ದೇಹದಂಡನೋದ್ಯೋಗಿಕರಾಗುವರು. ದೇಹದಂಡನೆ ಮಾಡುವದು ಅಯೋಗ್ಯವಲ್ಲ. ಆದರೆ ಅದು ವಿಚಾರಪೂರ್ವಕವಾಗಿ ಉಪಯೋಗಿಸಲ್ಪಟ್ಟರೆ ಒಳ್ಳೇದು. ವಿದ್ಯಾರ್ಥಿಗೆ ಕಲಿಸುವ ವಿಷಯವು ತಿಳಿಯದಿದ್ದರೆ ಅದು ತನ್ನದೇ ತಪ್ಪೆಂದು ಮಾಸ್ತರನು ತಿಳಿಯತಕ್ಕದ್ದು. ಅದರಿಂದ ಕಲಿಸುವ ವಿಷಯದಲ್ಲಿ ದೇಹದಂಡನೆಯನ್ನು ಮಾಡಲಿಕ್ಕೇ ಬಾರದು. ಉಳಿದ ಪ್ರಸಂಗದಲ್ಲಾದರೂ ಮೇಲಿಂದ ಮೇಲೆ ದೇಹದಂಡನೆಯನ್ನು ಮಾಡಬಾರದು. ಯಾಕಂದರೆ ಹೊಡತವನ್ನು ತಾಳಲಾರದೆ ವಿದ್ಯಾರ್ಥಿಗಳು ಶಾಲೆಯನ್ನು ತಪ್ಪಿಸ ಹತ್ತುತ್ತಾರೆ. ವಿದ್ಯಾರ್ಥಿಯು ಅನೀತಿಯಿಂದ ನಡೆದರೆ ಒಂದೆರಡು ಸಾರೆ ಸುಧಾರಿಸುವ ಇತರೋಪಾಯಗಳನ್ನು ಮಾಡಬೇಕು. ಯಾವದಕ್ಕೂ ಹಣಿಯದಿದ್ದರೆ ಮಾತ್ರ ಅವನಿಗೆ ದೇಹದಂಡನೆಯನ್ನು ಮಾಡಬಹುದು. ದೇಹದಂಡನೆಯೆಂಬ ಪ್ರಬಲ ಶಿಕ್ಷಾಧಿಕಾರವು

ಮಾಸ್ತರನಲ್ಲಿರುವದೆಂಬ ಭಾವವು ವಿದ್ಯಾರ್ಥಿಗಳಲ್ಲಿ ಇರುವದೇ ಮಹತ್ವವು. ಇದರ ಉಪಯೋಗವನ್ನು ಶಿಕ್ಷಕನು ಕ್ಷ್ವಚಿತ್ತಾಗಿಯೂ ವಿಚಾರಪೂರ್ವಕವಾಗಿಯೂ ಮಾಡಿಕೊಳ್ಳತಕ್ಕದ್ದು.

ಎಡಿಟರ ಮಹಾರಾಯರೇ, ಪತ್ರವಿಸ್ತಾರಕ್ಕೆ ತಮಗೆ ಕ್ಷಮೆ ಬೇಡಿಕೊಂಡು ಈ ಲೇಖವನ್ನು ಮುಗಿಸುತ್ತೇನೆ.

ತಾ॥ ೧೩-೨-೧೮೯೯. } ಕೃ. ಬಾ. ಕುರಂದವಾಡ,
೧ ನಂಬರ ಆಸಿ. ಮಾಸ್ತರ ಬಂಕಾಪೂರ.

DEPARTMENTAL NOTICES.

ನೋಟೀಸುಗಳು.

೧೮೯೯-೧೯೦೦ನೇ ಇಸವಿಯಲ್ಲಿ ಆಗತಕ್ಕ ಧಾರವಾಡ ಟ್ರೇನಿಂಗ ಕಾಲೇಜದ ೧ನೇ ೨ನೇ ವರ್ಷಗಳ ಸರ್ಟಿಫಿಕೇಟ ಪರೀಕ್ಷೆಗಳಿಗಾಗಿ ಕೆಳಗೆ ಕಾಣಿಸಿದ ಕನ್ನಡ ಮತ್ತು ಸಂಸ್ಕೃತ ವಿಷಯಗಳು ನೇಮಿಸಲ್ಪಟ್ಟಿರುತ್ತವೆ. ಹೊರಗಿನಿಂದ ಪರೀಕ್ಷೆಗೆ ಬರುವವರು ಸಹ ಇವುಗಳನ್ನೇ ಓದಿಕೊಂಡು ಬರಬೇಕು.

೨ನೇ ವರ್ಷ.

ಕನ್ನಡ—(ಕ) ರಾಜಶೇಖರ ೩ನೇ ಆಶ್ವಾಸದಿಂದ ೧೦೦ ಶ್ಲೋಕಗಳು.
(ಖ) ನಾಗವರ್ಮನ ಕಾದಂಬರಿ ಮೊದಲಿನ ೧೦೦ ಶ್ಲೋಕಗಳು.
(ಗ) ಜೈಮಿನಿ ೨೧ನೇ ಸಂಧಿಯಿಂದ ೧೦೦ ಶ್ಲೋಕಗಳು.
(ಘ) ಮುದ್ರಾಮಂಜೂಷ.
(ಙ) ಕನ್ನಡ ವ್ಯಾಕರಣ ಪೂರಾ; ಶಬ್ದಮಣಿದರ್ಪಣ ೧ನೇ ವರ್ಷದ ಅಭ್ಯಾಸವಲ್ಲದೆ ನಾಮಪ್ರಕರಣ ಮತ್ತು ೪೮, ೬೬, ೭೮,

೧೬೪, ೧೬೫, ೧೬೮, ೨೧೭, ೨೫೮, ೨೬೦, ೨೮೯ ಮುಂತಾದ ೧೦ ಸೂತ್ರಗಳು.

(क) ನಿಬಂಧ; ಶಬ್ದೋತ್ಪತ್ತಿ; ಛಂದಸ್ಸಾರ.

ಸಂಸ್ಕೃತ—(अ) ೨ನೇ ಪುಸ್ತಕ ಕಾಯಿದೆಯಲ್ಲಿ ಹೇಳಿದಷ್ಟು.

(ब) ಶಾಕುಂತಲ ನಾಟಕ ಮೊದಲಿನ ನಾಲ್ಕು ಅಂಕಗಳು ಸಂಪೂರ್ಣ.

೨ನೇ ವರ್ಷ.

ಕನ್ನಡ—(अ) ಕನ್ನಡ ೬ನೇ ಪುಸ್ತಕ.

(ब) ಜೈಮಿನಿ ೭, ೮, ೯ ಸಂಧಿಗಳು.

(क) ಕನ್ನಡ ವ್ಯಾಕರಣ ಪೂರಾ; ಶಬ್ದಮಣಿದರ್ಪಣ ಆಖ್ಯಾತ ಪ್ರಕರಣ ಮತ್ತು ೩, ೪, ೬, ೭, ೮, ೯, ೧೧, ೧೩, ೧೪, ೧೫, ೧೬, ೩೦, ೩೧, ೪೨, ೪೫, ೪೯, ೫೦, ೫೨, ೫೩, ೫೫, ೫೬, ೬೫, ೬೯, ೭೬, ೭೮, ೮೦, ೮೨, ೮೩, ೮೪, ೯೩, ೯೪, ೧೦೬, ೧೨೬, ೧೬೪, ೧೬೫, ೧೬೭, ೧೬೮, ೨೫೩, ೨೫೪, ೨೫೫ ಮುಂತಾದ ೪೦ ಸೂತ್ರಗಳು; ಶಬ್ದೋತ್ಪತ್ತಿ; ಛಂದಸ್ಸಾರ.

(ड) ನಿಬಂಧ-ಕಿತ್ತೆ ಹಾಕುವದು.

ಸಂಸ್ಕೃತ—(अ) ೨ನೇ ಪುಸ್ತಕ ಕಾಯಿದೆಯಲ್ಲಿ ಹೇಳಿದಷ್ಟು.

(ब) ಹಿತೋಪದೇಶ ಸಂಧಿ, ಮಿತ್ರಲಾಭ ಈ ಎರಡು ಭಾಗಗಳೊಳಗಿನ ೫೦ ಪೃಷ್ಠಗಳು.

ಧಾರವಾಡ ಟ್ರೇ. ಕಾಲೇಜ,
ತಾ॥ ೩೦-೩-೧೮೯೯ ಇ.

Raoji B. Karandikar,
ಪ್ರಿನ್ಸಿಪಾಲ.

ಧಾರವಾಡ ಟ್ರೇನಿಂಗ ಕಾಲೇಜದ ಅಭ್ಯಾಸ ಕ್ರಮಪತ್ರಿಕೆಯು.

ಆವಶ್ಯಕ ವಿಷಯಗಳು.

ವಿಷಯ.	೧ ನೆಯ ವರ್ಷ.	೨ ನೆಯ ವರ್ಷ.	೩ ನೆಯ ವರ್ಷ.
೧. ಶಾಲಾ ವ್ಯವಸ್ಥೆ.	(ಅ) ಬುದ್ಧಿಯನ್ನು ಬೆಳೆಸಲಿಕ್ಕೆ ಯೋಗ್ಯವಾದ ಶಿಕ್ಷಣದ ಸಾಮಾನ್ಯ ಮೂಲತತ್ವಗಳು, ಶಾಲಾವ್ಯವಸ್ಥೆ ಶಿಕ್ಷಣಗಳ ಪ್ರತ್ಯಕ್ಷ ಜ್ಞಾನ. (ಬ) ದೇಶಭಾಷಾ ಶಾಲಾಧ್ಯಾಪಕರ ಕಾಯದೆಯೂ, ಸರಕಾರದ ಕಾಗದ ಪತ್ರಗಳೂ ಪತ್ರಿಕೆಗಳೂ.	(ಅ) ಮೊದಲನೆಯ ವರ್ಷದ ವಿಷಯಗಳ ವಿಶೇಷ ಜ್ಞಾನವು. (ಬ) ಇಂದ್ರಿಯಗಳನ್ನು ಸ್ಮರಣಶಕ್ತಿಯನ್ನು ತಿದ್ದುವದೂ, ಬಾಲಕರ ಜ್ಞಾನೇಂದ್ರಿಯಗಳು ಬೆಳೆಯು ಕ್ರಮವೂ.	(ಅ) ಶಿಕ್ಷಣ ಶಾಸ್ತ್ರ ಪದ್ಧತಿಗಳ ಪೂರ್ಣ ಜ್ಞಾನವು. (ಬ) ಶಾಲಾವ್ಯವಸ್ಥೆ ಸಂಬಂಧದ ವಿಶೇಷ ಜ್ಞಾನವು. (ಕ) ನೀತಿಶಿಕ್ಷಣದ ತತ್ವಗಳೂ, ನಡೆನುಡಿಗಳ ಆಗುವ ಕ್ರಮದ ಜ್ಞಾನವೂ.
೨. ಕನ್ನಡ.	(ಅ) ಗದ್ಯ—ಕನ್ನಡ ಕ್ರಮಿಕ ಪುಸ್ತಕಗಳು ೧-೫ ಪೂರ್ಣ (ಬ) ಪದ್ಯ—ಕನ್ನಡ ಕವಿತೆಯ ೧ನೇ ೨ನೇ ಪುಸ್ತಕಗಳು (ವಿಷಯ ಜ್ಞಾನವೂ, ಶಬ್ದವಾಕ್ಯಗಳ ಅರ್ಥ ಸಂಬಂಧಗಳೂ ಸಹಿತ) ಕವಿತೆಯ ೩೦೦ ವಳಿಗಳನ್ನು ಬಾಯಪಾಠ ಅನ್ನುವದು.	(ಅ) ಪದ್ಯ—ಜೈಮಿನಿ ಭಾರತದ ಅಥವಾ ಅಷ್ಟೇ ಕಠಿಣವಾದ ಬೇರೆ ಗ್ರಂಥದ ೧೫೦ ಶ್ಲೋಕಗಳು. (ವಿಷಯ ಜ್ಞಾನವೂ ಶಬ್ದವಾಕ್ಯಗಳ ಅರ್ಥ ಸಂಬಂಧವೂ ಸಹಿತ) ೩೦೦ ವಳಿಗಳನ್ನು ಬಾಯಪಾಠ ಅನ್ನುವದು. (ಬ) ಗದ್ಯ—ಕನ್ನಡ ೬ನೇ ಪುಸ್ತ	(ಅ) ಪದ್ಯ— ಷಡಕ್ಷರ ಕವಿಯ ಯಾವದೊಂದು ಗ್ರಂಥದೊಳಗಿನ ೧೦೦ ಶ್ಲೋಕಗಳು. ಜಯಮಿನಿ ಭಾರತದ ಇಲ್ಲವೆ ಚನ್ನಬಸವಪುರಾಣದ ಇಲ್ಲವೆ ನಾಗವರ್ಮನ ಕಾದಂಬರಿಯ ೧೦೦ ಶ್ಲೋಕಗಳು. ರಾಮಾಯಣ, ಕಬಿಗರಕಾವ

(ಕ) ಸಾಧಾರಣವಾದ ವ್ಯಾಕರಣ ಜ್ಞಾನವೂ ಶಬ್ದೋತ್ಪತ್ತಿಯೂ (ಚಿಂತಾಮಣಿ ಪೀಠಕರರ) ಕನ್ನಡ ಧಾತುಗಳು.

(ಡ) ನಿಬಂಧ.

(ಇ) ಬರಹವೂ ಚಿತ್ರೆ ಹಾಕುವದೂ.

(ಪ) ಸ್ಥೈಲ ವಾಚನವು

ಅಥವಾ ಉರ್ದು.

(ಅ) ಮುಜ್ಮುಯಿ ಸಖುನದ ಮೊದಲನೇಯ ಭಾಗದ ೩೫೦ ದ್ವಿಪದಗಳೂ, ಮೊದಲನೇ ೪ ಉರ್ದು ವಾಚನ ಪುಸ್ತಕಗಳು ಖುತುತ್ರ ಅಹಮ್ಮದಿ ಪೂರ್ವಾರ್ಧ ೨೦೦ ಸಾಲುಗಳನ್ನು ಬಾಯುಪಾಠ ಅನ್ನುವದು.

(ಬ) ವ್ಯಾಕರಣ - ಹೊಲರಾಯುಡನ ಕವಾಯಿದೆ ಉರ್ದು ವಾಕ್ಯ

ಕವು (ವಿಷಯ ಜ್ಞಾನ ಸಹಿತವಾಗಿ)

(ಕ) ಪ್ರೌಢ ವ್ಯಾಕರಣವೂ ಶಬ್ದೋತ್ಪತ್ತಿಯೂ (ಚಿಂತಾಮಣಿ ಪೀಠಕರರ ಪುಸ್ತಕ ಪೂರಾ) ಛಂದಸ್ಸಾರವೂ.

(ಡ) ನಿಬಂಧವು.

(ಇ) ಬರಹವೂ ಚಿತ್ರೇ ಹಾಕೋಣವೂ.

ಅಥವಾ ಉರ್ದು.

(ಅ) ಮುಜ್ಮುಯಿ ಸಖುನದ ೧ನೇ ಭಾಗದ ೫೦೦ ದ್ವಿಪದಿಗಳು ೩೦೦ ಸಾಲುಗಳನ್ನು ಬಾಯುಪಾಠ ಅನ್ನುವದು.

(ಬ) ಉರ್ದು ೫ನೇ ಪುಸ್ತಕವೂ ಅಖಿಲಾಕೆ ಕಾಷಿಯೂ.

(ಕ) ಹೊಲರಾಯುಡನ ಕವಾಯಿದೆ ಉರ್ದುಸಂಪೂರ್ಣ ಮೊದಲನೇ ಮತ್ತು ಎರಡನೇ ವರ್ಷಗಳಲ್ಲಿ ಕಲಿತ ಕವಿತೆಗಳ ಛಂದಸ್ಸಿನ ಲಕ್ಷಣವೂ.

ಮತ್ತು ಜಗನ್ನಾಥ ವಿಜಯ ಇವುಗಳಲ್ಲಿ ಯಾವದಾದರೊಂದರೊಳಗಿನ ೧೦೦ ಶ್ಲೋಕಗಳು.

(ಬ) ಗದ್ಯ— ಮುದ್ರಾಮಂಜುಷ ಅಥವಾ ಅಷ್ಟೇ ಕಠಿಣವಾದ ಬೇರೆ ಯಾವದೊಂದು ಪುಸ್ತಕವು.

(ಕ) ವ್ಯಾಕರಣ, ಶಬ್ದೋತ್ಪತ್ತಿ, ಛಂದಶ್ಶಾಸ್ತ್ರಗಳಲ್ಲಿ ಪ್ರವೀಣತೆಯು.

(ಡ) ನಿಬಂಧವು, ಮೇಲಾದ ಕೈಬರಹವು.

ಅಥವಾ ಉರ್ದು.

(ಅ) ಮುಜ್ಮುಯಿ ಸಖುನದ ೨ನೇ ಭಾಗದ ೫೦೦ ದ್ವಿಪದಿಗಳು.

(ಬ) ಜಾಮೆ-ಉಲ್ ಅಖಿಲಾಖಿದ ಪೂರ್ವಾರ್ಧ ಅಥವಾ ಅಂಥಾದ್ದೇ ಬೇರೆ ಯಾವದೊಂದು ಪುಸ್ತಕ.

(ಕ) ವಾಯುವ್ಯ ಪ್ರಾಂತದ ಕ್ರಮಿಕ ಪುಸ್ತಕಗಳಲ್ಲಿಯ ಕವಾಯಿ

	ಖಂಡದ ಹೊರ್ತು ಉಳಿದಭಾಗವೆಲ್ಲ (ಕ) ನಿಬಂಧ. (ಡ) ಬರಹವೂ ಕಿತ್ತೆ ಹಾಕೋಣವೂ. (ಇ) ಪೈಲು ವಾಚನ.	(ಡ) ನಿಬಂಧ. (ಇ) ಬರಹವೂ ಕಿತ್ತೆ ಹಾಕೋಣವೂ.	ಜಿ. ಉರ್ದು ೩ನೇ ಭಾಗ; ಛಂದಸ್ಸೂ. (ಡ) ನಿಬಂಧ.
೩. ಸಂಸ್ಕೃತ ಅಥವಾ ಫಾರ್ಸಿ	ಸಂಸ್ಕೃತ. ಸಂಸ್ಕೃತ ಮೊದಲನೇ ಪುಸ್ತಕ ಸಂಪೂರ್ಣ. ಫಾರ್ಸಿ. ಹೊಲರಾಯಡಸ ೧ನೇ ಪುಸ್ತಕವೂ ಅಮದನನಾಮವೂ.	ಸಂಸ್ಕೃತ ರಾಮಾಯಣದ ೨೦೦ ಶ್ಲೋಕಗಳೂ ಅಥವಾ ಟೀಕೆಯುಳ್ಳ ಹಿತೋಪದೇಶದ ೫೦ ಪುಟಗಳು; ಮತ್ತು ಸಂಸ್ಕೃತ ೨ನೇ ಪುಸ್ತಕದ ಮೊದಲಿನ ೧೨ ಪಾಠಗಳು. ಫಾರ್ಸಿ. ಬೋಸ್ತಾನದ ೧ನೇ ಅಧ್ಯಾಯದ ೫೦೦ ಶ್ಲೋಕಗಳೂ. ಗುಲಿಸ್ತಾನದ ಮೊದಲನೇ ಅಧ್ಯಾಯವೂ ನಿಸಾರ ಅಲಿಯ ಕವಾಯಿದೆ ಫಾರ್ಸಿ ಮೊದಲಿನ ೧೮ ಪುಟಗಳು.	ಸಂಸ್ಕೃತ. ರಘುವಂಶದ ೩. ಸರ್ಗಗಳು ಅಥವಾ ಅಷ್ಟೇ [illegible] ಯಾ [illegible] ಗ್ರಂಥದ ಅಷ್ಟೇ ಶ್ಲೋಕಗಳು. ಮತ್ತು ಸಂಸ್ಕೃತ ೨ನೇ ಪುಸ್ತಕದ ೨೧ ಪಾಠಗಳು. ಫಾರ್ಸಿ. (ಅ) ಸಿಕಂದರನಾಮಾದ ೫೦೦ ಶ್ಲೋಕಗಳು. (ಬ) ಅನವಾರಿ ಸಹೇಲಿಯ ೧ನೇ ಅಧ್ಯಾಯ. (ಕ) ನಿಸಾರಲಿಯು ಕವಾಯಿದೆ ಫಾರ್ಸಿ ೧ನೇ ೨ನೇ ಅಧ್ಯಾಯಗಳು.

			(ಡ) ಸುಲಭ ವಾಕ್ಯಗಳನ್ನು ಫಾರ್ಸಿಯಲ್ಲಿ ಭಾಷಾಂತರಿಸುವದು.
೭ ಗಣಿತ.	(ಅ) ಅಂಕಗಣಿತದ ನಿಯಮುಗಳ ಉತ್ಪತ್ತಿ ಸ್ಪಷ್ಟೀಕರಣಗಳೂ (ಶೇವ್ರ, ಏಮ, ಮೂಲ, ಘಾತ, ಗಣಿತಶ್ರೇಢಿ, ಭೂಮಿತಿಶ್ರೇಢಿ ಇವುಗಳ ಹೊರ್ತು.) (ಬ) ಬೀಜಗಣಿತ–ಮೊದಲಿನ ನಾಲ್ಕು ಕಾರ್ಯಗಳು. (ಕ) ಜಮಾಖರ್ಚಿನ ಪದ್ಧತಿಯು (ಡ) ಯುಕ್ಲಿಡ್‌ನ ಸಿದ್ಧಾಂತದ ೧ನೇ ಪುಸ್ತಕ. (ಇ) ರೇಖಾ ಕ್ಷೇತ್ರಗಳ ಸಾಧಾರಣವಾದ ಮಾಪನ (ಫ) ಬಾಯಿಲೆಕ್ಕ.	(ಅ) ನಿಯಮುಗಳ ಉತ್ಪತ್ತಿ ಸ್ಪಷ್ಟೀಕರಣಗಳ ಸಹಿತವಾಗಿ ಅಂಕಗಣಿತ ಪೂರಾ. (ಬ) ಬೀಜಗಣಿತ– ಅಪೂರ್ಣಾಂಕವೂ ಏಕವರ್ಣ ಅನೇಕವರ್ಣ ಸಮೀಕರಣಗಳೂ ಸುಲಭವಾದ ಉದಾಹರಣಿಗಳೂ (ಕ) ಯುಕ್ಲಿಡ್‌ನ ಸಿದ್ಧಾಂತದ ೧ನೇ ೨ನೇ ಪುಸ್ತಕಗಳು. (ಡ) ಘನಫಲವು.	(ಅ) ಅಂಕಗಣಿತ ಸಂಪೂರ್ಣ. (ಬ) ಬೀಜಗಣಿತ—ವರ್ಗ ಸಮೀಕರಣ ಪೂರಾ. (ಕ) ಯುಕ್ಲಿಡ್‌ನ ಸಿದ್ಧಾಂತದ (ಸುಲಭ ಪ್ರಶ್ನೆಗಳು ಸಹಿತವಾದ) ೧ನೇ ೨ನೇ ೩ನೇ ಪುಸ್ತಕಗಳೂ ೪ನೇ ಪುಸ್ತಕದ ೨೦ ಸಿದ್ಧಾಂತಗಳೂ. (ಡ) ಕ್ಷೇತ್ರಫಲ ಘನಫಲ ಪೂರಾ.
೮. ಇತಿಹಾಸ ಭೂಗೋಲ.	(ಅ) ಹಿಂದುಸ್ಥಾನದ ಇತಿಹಾಸವು. (ಬ) ಪೃಥ್ವಿಯ ಸಾಧಾರಣ ವರ್ಣನೆಯೂ ಹಿಂದುಸ್ಥಾನದ ವಿಶೇ	(ಅ) ಇಂಗ್ಲಂಡ ದೇಶದ ಇತಿಹಾಸದ ಸಾಧಾರಣ ಜ್ಞಾನವೂ ಹಿಂದುಸ್ಥಾನಕ್ಕೆ ಸಂಬಂಧಿಸಿದ ಮಟ್ಟಿಗೆ ವಿಶೇಷ ಜ್ಞಾನವೂ;	(ಅ) ಇಂಗ್ಲಂಡ ಹಿಂದುಸ್ಥಾನಗಳ ಇತಿಹಾಸಗಳೂ ಈ ದೇಶಗಳ ಪರಸ್ಪರ ಸಂಬಂಧದ ವಿಶೇಷ ಮಾಹಿತಿಯೂ.

	ಷ ವರ್ಣನೆಯು. (ಕ) ಮುಂಬೈ ಇಲಾಖೆಯ ನಕಾಶೆ ತೆಗಿಯುವದು.	(ಬ) ಇಂಗ್ಲಂಡ ದೇಶದ ಇತಿಹಾಸಕ್ಕೆ ಸಂಬಂಧಿಸಿದಷ್ಟು ಗ್ರೇಟಬ್ರಿಟನ ಅಯರ್ಲಂಡ ದೇಶಗಳ ವರ್ಣನೆಯು. (ಕ) ಗ್ರೇಟಬ್ರಿಟನ ಆಯರ್ಲಂಡ ಮತ್ತು ಹಿಂದುಸ್ಥಾನ ಇವುಗಳ ನಕಾಶ ತೆಗಿಯುವದು.	(ಬ) ಪೃಥ್ವಿಯ ಭೂಗೋಲವು ಏಸಿಯಾ, ಯುರೋಪ ಖಂಡಗಳೊಳಗಿನ ಮುಖ್ಯ ದೇಶಗಳ ನಕಾಶ ತೆಗಿಯೋಣವು.
ಶಾಸ್ತ್ರೀಯ ವಿಷಯ.	(ಅ) ಸೃಷ್ಟ ಪದಾರ್ಥ ಶಾಸ್ತ್ರದ ಮೂಲತತ್ವಗಳು ಬಾಲ್ಫೋರ ಸ್ಟುವರ್ಟನ ಪ್ರಾಯಮರದ ಭಾಷಾಂತರವು. (ಬ) ವ್ಯವಹಾರದೊಳಗಿನ ಪದಾರ್ಥಗಳ ಸಾಧಾರಣ ಜ್ಞಾನವು (ಕ) ಆರೋಗ್ಯ ವಿದ್ಯೆವು.	(ಅ) ಪದಾರ್ಥ ವಿಜ್ಞಾನ ಶಾಸ್ತ್ರದ ಮೂಲಕ ಸಾಧಾರಣ ಜ್ಞಾನ (ಬ) ಪ್ರಾಕೃತಿಕ ಭೂಗೋಲವು. (ಕ) ಭೂಗೋಲದ ಉಪಯೋಗದಬಗ್ಗೆ ಮಾಹಿತಿಯು.	(ಅ) ರಸಾಯನಶಾಸ್ತ್ರ—ರಾಸ್ಕೋ ಸಾಹೇಬರ ಚಿಕ್ಕಪುಸ್ತಕದಲ್ಲಿದ್ದಂತೆ (ಬ) ಕುಕ್ ಸಾಹೇಬರ ಇಲ್ಲವೆ ಬೇರೆಯವರ ಪುಸ್ತಕದಲ್ಲಿದ್ದಷ್ಟು ಜ್ಯೋತಿಷ ಶಾಸ್ತ್ರವು.
೭. ಅರ್ಥಶಾಸ್ತ್ರ.			ಮಿಸೆಸ್ ಫಾಸೆಟ್ಟಳು ಬರೆದ ಪುಸ್ತಕವು.
೮. ಚಿತ್ರಕಲೆ.	೧ನೇ ಗ್ರೇಡದ ಫ್ರೀ ಹ್ಯಾಂಡ ಕರೆಪಲಿಗೆಯ ಮೇಲೆ ಚಿತ್ರ ತೆಗಿಯುವದೂ.	(ಅ) ೧ನೇ ಗ್ರೇಡದ ವಿಷಯಗಳು ಪೂರಾ. (ಬ) ಪಾಠಗಳನ್ನು ತಿಳಿಸುವದಕ್ಕಾಗಿ ಬೇಕಾಗುವ ನಕಾಶ ಆಕೃ	೨ ನೇ ವರ್ಷಕೆ, ಹೇಳಿದಷ್ಟು.

		ತಿ ಮುಂತಾದವುಗಳನ್ನು ಕಠೀ ಪಲಿಗೆಯು ಮೇಲೆ ತೆಗೆಯುವದು.	
೯. ಕಸರತ್ತು.	ಲೋಡು ಮಲಕಂಭಗಳ ಸಾಧಾರಣ ಉಪಯೋಗವು; ಸಾಮೂ ಜಿಗಿಯುವದೂ ಹಾರುವದೂ ಓಡುವದೂ ಸಾಲೆಯು ಕವಾಯತು.	ಮೊದಲನೇ ವರ್ಷದ ಅಭ್ಯಾಸದಹೊರತು ಪ್ಯಾರಲಲ್‌ಬಾರ್, ಹಾರಿಝಂಟಲ್ ಬಾರಗಳ ಮೇಲಿನ ಕಸರತ್ತು ಮತ್ತು ಡ್ರಿಲ್ಲು.	ಎಲ್ಲ ತರದ ಕಸರತ್ತುಗಳೂ ಸಾಲೆಯು ಕವಾಯತೂ
	ಐಚ್ಛಿಕ ವಿಷಯುಗಳು.		
೧. ಡ್ರಾಯಿಂಗ.	ಗ್ರಾಂಟ ಇನ ಏಡ ಕೋಡಿನ ೧ ನೇ ಪರಿಶಿಷ್ಟದಲ್ಲಿ ಹೇಳಿದಂತೆ ೨ ನೇ ಗ್ರೇಡ ಚಿತ್ರಕಲೆಯ ವಿಷಯುಗಳು.		
೨. ಬೇಸಾಯ ವಿಷಯುಗಳು.	ಗ್ರಾಂಟ ಇನ ಏಡಕೋಡಿನ ಡ ಪರಿಶಿಷ್ಟದಲ್ಲಿ ಹೇಳಿದಂತೆ ಬೇಸಾಯದ ಕ್ಲಾಸುಗಳ ವಿಷಯುಗಳು.		
೩. ಔದ್ಯೋಗಿಕ ಶಿಕ್ಷಣ.	ಡಾಕ್ಟರ ಥಾಮರ್ಸ ಇವರ ವ್ಯಾನುಯಲ್ ಟ್ರೇನಿಂಗ ಫಾರ ಇಂಡಿಯನ ಸ್ಕೂಲ್ಸ ಎಂಬ ಪುಸ್ತಕದ ೨ ರಿಂದ ೬ ಪಾಠಗಳು.	ಡಾಕ್ಟರ ಥಾಮಸನ್ ಇವರ ವ್ಯಾನುಯಲ್ ಟ್ರೇನಿಂಗ ಫಾರ ಇಂಡಿಯನ್ ಸ್ಕೂಲ ಎಂಬ ಪುಸ್ತಕದ ೭ರಿಂದ ೧೬ ಪಾಠಗಳು.	ಡಾಕ್ಟರ ಥಾಮಸನ್ ಇವರ ವ್ಯಾನುಯಲ್ ಟ್ರೇನಿಂಗ ಫಾರ ಇಂಡಿಯನ ಸ್ಕೂಲ್ಸ ಎಂಬ ಪುಸ್ತಕವ ಬಡಿಗತನದ ೧೭ರಿಂದ ೨೪ ಪಾಠಗಳು (ಬ) ಉಡ್‌ವರ್ಡ ಸಾಹೇಬರ ವ್ಯಾನುಯಲ್ ಟ್ರೇನಿಂಗದಲ್ಲಿಯ ಕಂಬಾರಿಕೆಯು ೬೯ರಿಂದ ೭೯ ಆಕೃತಿಗಳು ಪೂರ್ಣ.
೪. ಮರಾಠಿ.	ಕವಿತೆಯು ಹೊರ್ತಾಗಿ ಮರಾಠಿ ಪ್ರಾಥಮಿಕ ಶಾಲೆಗಳ ೪, ೫, ೬ ಇಯತ್ತೆಗಳ ೨ ನೇ ಸದರು.		

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಿಂ ಸಚ್ಛಿಕ್ಷಣೋತ್ಕರ್ಷಮಂ ॥
ಬಯಸುತ್ತುಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೩೫.]　　ಮೇ ೧೮೯೯.　　[ಸಂಚಿಕೆ ೫.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಚಿಕ್ಕ ಬಾಲಕರ ಮನಸ್ಸಿನ ಏಕಾಗ್ರತೆಯ ಬಗ್ಗೆ ಒಬ್ಬ ಶಾಸ್ತ್ರಜ್ಞನಾದ ಪತ್ರಕಾರನು ಬರೆಯುವದೇನಂದರೆ :—

ಆರು ವರುಷದ ವಯಸ್ಸಿನಲ್ಲಿ ಚಿಕ್ಕ ಹುಡುಗರ ಮನಸ್ಸು ೭ ಮಿನಿಟುಗಳಿಗಿಂತಲೂ ಹೆಚ್ಚು ವೇಳೆ ಒಂದೇ ವಿಷಯದಲ್ಲಿ ಸ್ಥಿರವಾಗಿರುವದಿಲ್ಲ. ಹುಡುಗರು ಎಂಟು ವರುಷದವರಾದರೆಂದರೆ ಅದು ೧೦ ಮಿನಿಟುಗಳವರೆಗೆ ಮಾತ್ರ ಸ್ಥಿರವಾಗಿರುವದು. ೧೨ ವರ್ಷದ ವಯಸ್ಸಿನಲ್ಲಿ ಹುಡುಗರ ಮನಸ್ಸನ್ನು ೧೭ ಮಿನಿಟುಗಳಿಗಿಂತಲೂ ಹೆಚ್ಚಿಗೆ ಹೊತ್ತು ಒಂದೇ ವಿಷಯದಲ್ಲಿ ತೊಡಗಿಸಲಿಕ್ಕೆ ಬರುವದಿಲ್ಲ. ಮನಸ್ಸನ್ನು ಈ ಪ್ರಕಾರ ಗೊತ್ತಾದ ವೇಳೆಗಿಂತಲೂ ಹೆಚ್ಚಿಗೆಹೊತ್ತು ಕೆಲಸಕ್ಕೆ ಹಚ್ಚಿದರೆ ಅದು ದಣಿದು ದುರ್ಬಲವಾಗುತ್ತದೆ. ಸುಮಾರು ೧೪।೧೫ ವರ್ಷದ ವಯಸ್ಸಿನಲ್ಲಿ ಹುಡುಗರ ಮಿದುಳು ಕೆಲವಂಶದಿಂದ ಆಕುಂಚಿತವಾಗಿ ಎರಡು ವರ್ಷಗಳ ಪೂರ್ವದಲ್ಲಿ ಇದ್ದದ್ದಕ್ಕಿಂತಲೂ ಹಗುರಾಗುತ್ತದೆ. ಈ ಕಾರಣದಿಂದಲೇ ಬಹಳಮಾಡಿ ಆ ವಯಸ್ಸಿನಲ್ಲಿ ಹುಡುಗರು ಆಸ್ಥೆಯಿಲ್ಲದವರೂ, ಆಲಸ್ಯವೃತ್ತಿಯವರೂ, ಕೆಲಸಕ್ಕೆ ಬಾರದಂಥವರೂ

ಆಗುತ್ತಾರೆ. ಚಿಕ್ಕ ಹುಡುಗರ ಮಿದುಳು ಪ್ರಾತಃಕಾಲದ ೭॥ ಘಂಟೆಯಿಂದ ೧೧॥ ಘಂಟೆಯವರೆಗೆ ಯಾವಾಗಲೂ ಚುರುಕಾಗಿರುವದು. ವಿಚಾರಶಕ್ತಿಯನ್ನು ಉಪಯೋಗ ಮಾಡಬೇಕಾದಂಥ ಎಲ್ಲ ವಿಷಯಗಳನ್ನು ಈ ವೇಳೆಯಲ್ಲಿ ಸಾಗಿಸುವದು ವಿಹಿತವು. ಶಿಕ್ಷಕರು ತಮ್ಮ ಸಾಲೆಗಳ ವೇಳಾಪತ್ರಿಕೆಗಳನ್ನು ಸಿದ್ಧಪಡಿಸುವಾಗ ಈ ಸಂಗತಿಯನ್ನು ಲಕ್ಷದಲ್ಲಿಡಬೇಕು.

ಧಾರವಾಡ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟುಗಳನ್ನೂ, ಪ್ರ್ಯಾಕ್ಟಿಸಿಂಗಸ್ಕೂಲ ವಿದ್ಯಾರ್ಥಿಗಳಿಗೆ ಬಕ್ಷೀಸುಗಳನ್ನೂ ಕೊಡುವ ಸಮಾರಂಭವೂ, ಕಾಲೇಜದಲ್ಲಿ ಹೊಸದಾಗಿ ಕಟ್ಟಲ್ಪಟ್ಟ ಉದ್ಯೋಗಶಾಲೆಯ (ವರ್ಕಶಾಪದ) ಪ್ರವೇಶ ಸಮಾರಂಭವೂ ಕಳೆದ ತಿಂಗಳ ೨೨ನೇ ತಾರೀಖು ಶನಿವಾರ ದಿವಸ ಸಾಯಂಕಾಲದ ೫॥ ಘಂಟೆಗೆ ಒಳ್ಳೇ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟವು. ಈ ಸಮಾರಂಭಕ್ಕಾಗಿ ಹೊಸದಾಗಿ ಕಟ್ಟಲ್ಪಟ್ಟ ಇಮಾರತಿಯ ಮುಂದೆ ಒಂದು ಪ್ರಶಸ್ತವಾದ ಮಂಟಪವು ಹಾಕಲ್ಪಟ್ಟಿತ್ತು. ಕಾಲೇಜದ ಎಲ್ಲ ಭಾಗಗಳಲ್ಲಿಯೂ ನಿಲ್ಲಿಸಿದ ಪತಾಕೆಗಳಿಂದಲೂ ಕಟ್ಟಿದ ತಳಿರು ತೋರಣಗಳಿಂದಲೂ ಅಲ್ಲಲ್ಲಿಗೆ ಕೊರೆದು ಹಚ್ಚಿದ ಸ್ವಾಗತಾಕ್ಷರಗಳಿಂದಲೂ ಕಾಲೇಜಕ್ಕೆ ಆ ಸಾಯಂಕಾಲದ ಸಮಯದಲ್ಲಿ ಒಂದು ಬಗೆಯ ರಮಣೀಯತ್ವವು ಪ್ರಾಪ್ತವಾಗಿತ್ತು. ಗೊತ್ತಾದ ವೇಳೆಗೆ ಸರಿಯಾಗಿ ಮೊದಲೇ ನಿಮಂತ್ರಿಸಲ್ಪಟ್ಟ ಎಲ್ಲ ಯುರೋಪಿಯನ್ ಮತ್ತು ನೇಟಿವ್ಹ ಉದ್ಯೋಗಸ್ಥರೂ ಸಭ್ಯ ಗೃಹಸ್ಥರೂ ಮೇಲ್ಕಾಣಿಸಿದ ಮಂಟಪದಲ್ಲಿ ನೆರೆದ ನಂತರ ಧಾರವಾಡ ಜಿಲ್ಲೆಯ ಮಾಜಿ ಕಲೇಕ್ಟರರೂ ಸದ್ಯಕ್ಕೆ ದಕ್ಷಿಣ ಭಾಗದ ಅಕ್ಟಿಂಗ ಕಮಿಶನರರೂ ಆದ ಮಿ. ಕ್ಯಾಕೆಲ ದೊರೆಗಳು ಮಿ ಮ್ಯಾಕ್‌ನೀಲ ಸಾಹೇಬ ಕಲೇಕ್ಟರರನ್ನೊಡಗೊಂಡು ಬಾಲಕರಿಂದ ಮಾಡಲ್ಪಟ್ಟ ಜಯಘೋಷದೊಂದಿಗೆ ಒಂದು ಅಗ್ರಾಸನವನ್ನು ಸ್ವೀಕರಿಸಿದರು. ತರುವಾಯ ಕಾಲೇಜದ ಕೆಲವು ವಿದ್ಯಾರ್ಥಿಗಳು

ಕನ್ನಡ, ಸಂಸ್ಕೃತ, ಹಿಂದುಸ್ಥಾನಿ ಭಾಷೆಗಳಲ್ಲಿ ಹಾರಮೋನಿಯಮ್ಮದೊಂದಿಗೆ ಸುಸ್ವರದಿಂದ ಸ್ವಾಗತ ಪದಗಳನ್ನು ಹೇಳಿ ಪದಗಳನ್ನು ಹಾಡಿ ಸಾಹೇಬ ಬಹದ್ದೂರರವರನ್ನೂ ಉಳಿದ ಸಭ್ಯ ಗೃಹಸ್ಥರನ್ನೂ ಆದರಗೊಳಿಸಿದರು. ತರುವಾಯ ಕಾಲೇಜದ ವಿದ್ಯಾರ್ಥಿಗಳಲ್ಲಿ ಮೂರನೇ ವರ್ಷದ ವಿದ್ಯಾರ್ಥಿಯಾದ ಕೇ. ನರೇಂದ್ರ ಇವರು ಬ್ರಿಟಿಶ ಸಾಮ್ರಾಜ್ಯದ ಪಾತವನ್ನೂ ಕಾಲವಾದ ಇವರು ಪತ್ರಿಯು ಬಡವೇ ಪಾತವನ್ನೂ ಕಲಿಸಿ ತೋರಿಸಿದರು. ಬಳಿಕ ಕಾಲೇಜದ ಪ್ರಿನ್ಸಿಪಾಲರಾದ ರಾವಸಾಹೇಬ ಕರಂದೀಕರ ಇವರು ಒಂದು ರಿಪೋರ್ಟನ್ನು ಓದಿ ಕಾಲೇಜದ ಸ್ಥಿತಿಗತಿಯನ್ನು ಎಲ್ಲರಿಗೂ ವಿದಿತ ಪಡಿಸಿದರು. ಅದರ ಮುಖ್ಯಾಂಶಗಳನ್ನು ನಾವು ನಮ್ಮ ವಾಚಕರಿಗಾಗಿ ಕೊಡುತ್ತೇವೆ.

“ ಪ್ರೆಸಿಡೆಂಟರೇ, ದೊರೆಸಾನಿಯವರೇ ಸಭ್ಯಗೃಹಸ್ಥರೇ, ತಾವೆಲ್ಲರೂ ನನ್ನ ಆಮಂತ್ರಣಕ್ಕೆ ಮಾನ ಮಾಡಿ ಇಲ್ಲಿಗೆ ಬಂದು ಈ ದಿವಸ ಈ ಸಭೆಯನ್ನಲಂಕರಿಸಿದ್ದಕ್ಕಾಗಿ ನಾನು ತಮಗೆ ಪೂರಾ ಆಭಾರಿಯಾಗಿದ್ದೇನೆ. ಟ್ರೇನಿಂಗ ಕಾಲೇಜವು ಮುಖ್ಯವಾದ ಮೇಲ್ತರದ ವಿದ್ಯಾಲಯಗಳಲ್ಲಿ ಒಂದಾಗಿದೆ; ಇಲ್ಲಿಂದ ತಯಾರಾಗಿ ಹೋಗುವ ಮಾಸ್ತರರು “ ಶಿಕ್ಷಕನಂತೆ ಶಾಲೆ” ಎಂಬ ಗಾದೆಗನುಸಾರವಾಗಿ ನಿಜವಾದ ಶಿಕ್ಷಣವನ್ನು ಕೊಡುವದಕ್ಕೆ ಹೊಣೆಗಾರರಾಗಿರುವರು. ಇಂಥ ವಿದ್ಯಾಲಯವನ್ನು ನಿಮ್ಮೆಲ್ಲರ ದಯಾಸಹಾಯಗಳಿಲ್ಲದೆ ಸರಿಯಾಗಿ ಸಾಗಿಸುವದು ದುಸ್ತರವು. ತಾವೆಲ್ಲರೂ ಶ್ರಮಬಟ್ಟು ಈ ದಿವಸ ಇಲ್ಲಿಯವರೆಗೆ ಬಂದದ್ದರಿಂದ ತಮ್ಮಲ್ಲಿ ದಯವಿರುತ್ತದೆಂತಲೂ ತಾವೆಲ್ಲರೂ ಪೂರ್ಣವಾಗಿ ಸಹಾಯ ಮಾಡಲಿಕ್ಕೆ ಸಿದ್ಧರಿರುತ್ತೀರೆಂತಲೂ ನಾನು ನಂಬುತ್ತೇನೆ. ತಮ್ಮ ಸಹಾಯಕ್ಕೆ ನಾವು ಪಾತ್ರರಿರುತ್ತೇವೆಂದು ತಾವು ಮನಗಾಣುವದು ಅವಶ್ಯವು. ಆದಕಾರಣ ಹೋದ ವರ್ಷ ನಾನೂ ನನ್ನ ಸಹಕಾರಿಗಳೂ ಕಾಲೇಜದಲ್ಲಿ ಮಾಡಿದ ಕೆಲಸವನ್ನು ತಮಗೆ ತಿಳಿಸುವದು ತಕ್ಕದ್ದಾಗಿರುತ್ತದೆ.

ಕಳೆದ ವರ್ಷ ಸಪ್ಟಂಬರ ತಿಂಗಳಲ್ಲಿ ಧಾರವಾಡ ಶಹರ

ವನ್ನು ಸುತ್ತಿಕೊಂಡ ಪ್ಲೇಗದ ಹಾವಳಿಗೆ ನಮ್ಮ ಕಾಲೇಜದ ಇಬ್ಬರು ವ್ಯವಸಾಯ ಬಂಧುಗಳೂ ಒಬ್ಬ ನೌಕರನೂ ಆಹುತಿಯಾಗಿ ಬಿದ್ದ ನಂತರ ಕಲೆಕ್ಟರ ಸಾಹೇಬರವರ ಸಮ್ಮತಿಯಿಂದ ಕಾಲೇಜವು ಬಂದು ಮಾಡಲ್ಪಟ್ಟಿತು. ಕಾಲೇಜದ ಕನ್ನಡ ಪಂಡಿತರಾದ ಮಿ. ಮುಳಬಾಗಲ ಮತ್ತು ಕಂಬಾರ ಮಾಸ್ತರನಾದ ಕರೀಮಖಾನ ಇವರ ಮರಣದಿಂದ ಕಾಲೇಜಕ್ಕೆ ಬಹಳ ಹಾನಿಯುಂಟಾಯಿತು. ಇವರ ಸ್ಥಳಗಳನ್ನು ತುಂಬಲಿಕ್ಕೆ ತಕ್ಕ ಜನರು ಸಿಗುವದು ದುಸ್ತರವಾಗಿರುತ್ತದೆ. ಇವರ ಮರಣಕ್ಕಾಗಿ ನಾನು ತುಂಬಾ ವ್ಯಸನಪಡುತ್ತೇನೆ. ಕಾಲೇಜದ ವಿದ್ಯಾರ್ಥಿಗಳಲ್ಲಿ ಒಬ್ಬನು ಮಾತ್ರ ತನ್ನ ಊರಲ್ಲಿಯೇ ಇದಕ್ಕೆ ಬಲಿಯಾದನು. ಇಂಥ ಕಷ್ಟಕಾಲದಲ್ಲಿ ನಮ್ಮನ್ನು ಕಾಯ್ದು ಈ ಸುದಿನವನ್ನು ತೋರಿಸಿದ್ದಕ್ಕಾಗಿ ನಾವು ದೇವರನ್ನು ಅನನ್ಯಭಾವದಿಂದ ಭಜಿಸತಕ್ಕದ್ದು ಸರಿಯಾಗಿರುತ್ತದೆ.

ನಾನು ಇನಸ್ಪೆಕ್ಟರರ ಸ್ಥಳಕ್ಕೆ ಬದಲಿಯಾಗಿ ಹೋದ ೨ ತಿಂಗಳುಗಳು ಹೊರತಾಗಿ ಉಳಿದ ಎಲ್ಲ ದಿವಸಗಳಲ್ಲಿ ಕಾಲೇಜವು ನನ್ನ ಕೈಯಲ್ಲಿಯೇ ಇತ್ತು. ಆ ಕಾಲಕ್ಕೆ ಮಿ. ರೊದ್ದ ಇವರು ನನ್ನ ಸ್ಥಳದಲ್ಲಿಯೂ ಮಿ. ದೇಶಪಾಂಡೆಯವರು ಮಿ. ರೊದ್ದ ಇವರ ಸ್ಥಳದಲ್ಲಿಯೂ ಮಿ. ಸವದಿ ಇವರು ಮಿ. ದೇಶಪಾಂಡೆಯವರ ಸ್ಥಳದಲ್ಲಿಯೂ ಕೆಲಸ ಮಾಡುತ್ತಿದ್ದರು.

ಟ್ರೇನಿಂಗ ಕಾಲೇಜದ ಸರ್ಟಿಫಿಕೇಟ ಪರೀಕ್ಷೆಗಳು ಕಳೆದ ಅಕ್ಟೋಬರ ತಿಂಗಳ ೧೨ನೇ ತಾರೀಖಿಗೆ ನೇಮಿಸಲ್ಪಟ್ಟಿದ್ದವು. ಆದರೆ ಪ್ಲೇಗದ ಮೂಲಕವಾಗಿ ಪರೀಕ್ಷೆಗಳು ಮುಂದೆ ಬಿದ್ದು ಕಳೆದ ಮಾರ್ಚ ತಿಂಗಳಲ್ಲಿ ತೆಗೆದುಕೊಳ್ಳಲ್ಪಟ್ಟವು. ಪರೀಕ್ಷೆಗೆ ನಿಂತ ೯೨ ವಿದ್ಯಾರ್ಥಿಗಳಲ್ಲಿ ೯೦ ಜನರು ಪಾಸಾದರು. ಕಾಲೇಜದ ಅಭ್ಯಾಸ-ಮರ್ಯಾದೆಯು ಮೂರು ವರ್ಷದ್ದಿರುತ್ತದೆ. ಈ ವರ್ಷ ಮೂರನೇ ವರ್ಷದ ವರ್ಗದಲ್ಲಿ ಪರೀಕ್ಷೆಗೆ ಕೂತ ೧೦ ಜನ ವಿದ್ಯಾರ್ಥಿಗಳಲ್ಲಿ ೮ ಜನರು

೧ನೇ ವರ್ಗದಲ್ಲಿಯೂ ಇಬ್ಬರು ಎರಡನೇ ವರ್ಗದಲ್ಲಿಯೂ ಪಾಸಾದರು. ಎರಡನೇ ವರ್ಷದವರಲ್ಲಿ ಪರೀಕ್ಷೆಗೆ ಕೂತ ೨೨ ಮಂದಿಯಲ್ಲಿ ೧೮ ಮಂದಿ ೧ನೇ ವರ್ಗದಲ್ಲಿಯೂ ನಾಲ್ವರು ೨ನೇ ವರ್ಗದಲ್ಲಿಯೂ ಪಾಸಾಗಿರುವರು. ಮೊದಲನೇ ವರ್ಷದ ೬೦ ಮಂದಿಯಲ್ಲಿ ೫೮ ಮಂದಿ ಪರೀಕ್ಷೆಯಲ್ಲಿ ಪಾಸಾದರು. ಈ ಪ್ರಕಾರ ಪಾಸಾದ ವಿದ್ಯಾರ್ಥಿಗಳಲ್ಲಿ ೨ನೇ ವರ್ಷದ ಹದಿನಾಲ್ಕು ಮಂದಿಯನ್ನೂ ಮೊದಲನೇ ವರ್ಷದ ೪೧ ಮಂದಿಯನ್ನೂ ಅನುಕ್ರಮವಾಗಿ ೩ನೇ ಮತ್ತು ೨ನೇ ವರ್ಷದ ಅಭ್ಯಾಸಕ್ಕಾಗಿ ಕಾಲೇಜದಲ್ಲಿ ಇಟ್ಟುಕೊಂಡಿರುತ್ತದೆ. ಕಾಲೇಜದ ಪ್ರವೇಶ ಪರೀಕ್ಷೆಯು ವಾಡಿಕೆಯಾಗಿ ನವಂಬರ ತಿಂಗಳಲ್ಲಿಯೇ ಆಗತಕ್ಕದ್ದು. ಆದರೆ ಪ್ಲೇಗದ ಮೂಲಕವಾಗಿ ಕಾಲೇಜವು ಬಂದ ಇದ್ದದ್ದರಿಂದ ಪರೀಕ್ಷೆಯು ಇನ್ನೂ ಆಗಿಲ್ಲ.

ದಕ್ಷಿಣ ಭಾಗದಲ್ಲಿಯ ೪ ಕನ್ನಡ ಜಿಲ್ಲೆಗಳಿಗಾಗಿ ಈ ಕಾಲೇಜವು ಸ್ಥಾಪಿಸಲ್ಪಟ್ಟಿರುವದು. ಈ ನಾಲ್ಕೂ ಜಿಲ್ಲೆಗಳಲ್ಲಿ ಪ್ರತಿವರ್ಷ ಸರಾಸರಿ ಮಾನದಿಂದ ೨೮ ಸ್ಥಳಗಳು ತೆರವಾಗುತ್ತವೆ; ಮತ್ತು ಬಹುಶಃ ೭ ಜನ ಅಂಟ್ರೇಂಡರನ್ನು ತೆಗಿದು ಟ್ರೇಂಡರು ನೇಮಿಸಲ್ಪಡುತ್ತಾರೆ. ಅಂವರೆ ಒಟ್ಟಿಗೆ ೩೫ ಜಾಗಾಗಳು ಟ್ರೇಂಡರಿಗಾಗಿ ಸಿಗುತ್ತವೆ. ಈ ವರ್ಷ ಕೆಲಸದ ಮೇಲೆ ಕಳಿಸಲ್ಪಡುವ ೩೬ ಜನರಲ್ಲಿ ೨೦ ಮಂದಿ ಬ್ರಾಹ್ಮಣರು, ೧೧ ಲಿಂಗಾಯತರು, ೧ ರಡ್ಡಿ, ೧ ನಾಡೋರ, ೨ ಮುಸಲ್ಮಾನರು ೧ ವಾಣಿಯು ಇರುತ್ತಾರೆ. ಬ್ರಾಹ್ಮಣೇತರ ಜನರಿಗೆ ಕೂಡಿದಷ್ಟು ಉತ್ತೇಜನವು ಕೊಡಲ್ಪಡುತ್ತದೆ. ಆದರೂ ಆ ಜಾತಿಯ ತಕ್ಕಷ್ಟು ವಿದ್ಯಾರ್ಥಿಗಳು ಕಾಲೇಜಕ್ಕೆ ಬರುವದಿಲ್ಲ.

ಕಳೆದ ವರ್ಷ ಕಾಲೇಜದ ರಜಿಸ್ಟರಕ್ಕೆ ೯೨ ವಿದ್ಯಾರ್ಥಿಗಳಿದ್ದು ಅವರ ಸರಾಸರಿ ಹಾಜರಿಯು ೯೧.೨ ಇರುವದು. ಕಾಲೇಜದ ವಿದ್ಯಾರ್ಥಿಗಳ ಬಗ್ಗೆ ಪೂರ್ಣ ಲಕ್ಷ್ಯ ಕೊಟ್ಟು ಅವರ ಆರೋಗ್ಯತೆಯನ್ನು ಕಾಯ್ದದ್ದಕ್ಕಾಗಿ ನಾನು ಡಾಕ್ಟರ

ಡೆವ್ಹಿಡ್‌ಸನ್ನ ಮತ್ತು ಕಾರಕರಿ ಇವರಿಗೆ ಬಹಳ ಆಭಾರಿಯಾಗಿದ್ದೇನೆ. ಗರಡೀಸಾಧಕವು ಅವಶ್ಯ ವಿಷಯವಾಗಿದ್ದು ಅದಕ್ಕೆ ತಕ್ಕಷ್ಟು ಲಕ್ಷವು ಕೊಡಲ್ಪಡುತ್ತದೆ. ವಿದ್ಯಾರ್ಥಿಗಳಿಗೆ ಪ್ರತಿದಿವಸ ಕುಡಿಯಲಿಕ್ಕೆ ತಕ್ಕಷ್ಟು ಹಾಲು ಸಿಗುವಂತೆ ವ್ಯವಸ್ಥೆಯುಂಟು. ತಮ್ಮ ಮುಂದೆ ಇಟ್ಟ ರಜಿಷ್ಟರದಿಂದ ಅವರ ಪ್ರತಿ ತಿಂಗಳ ತೂಕದಲ್ಲಿ ಆದ ಹೆಚ್ಚು ಕಡಿಮೆಯು ವಿದಿತವಾಗುತ್ತದೆ. ನಾನೂ ನನ್ನ ಅಸಿಸ್ಟಂಟರಾದ ಮಿ. ಸವದಿ ಇವರೂ ಕಾಲೇಜನಲ್ಲಿಯೇ ಇದ್ದು, ಶಾಲೆಯ ವೇಳೆಯಲ್ಲಿಯೂ ಇತರ ವೇಳೆಯಲ್ಲಿಯೂ ವಿದ್ಯಾರ್ಥಿಗಳ ನಡೆನುಡಿಗಳನ್ನು ಲಕ್ಷ ಕೊಟ್ಟು ನೋಡುತ್ತಿರುವೆವು. ವಿದ್ಯಾರ್ಥಿಗಳು ಆಜ್ಞಾಧಾರಕರೂ ನಿಯಮಿತತನದಿಂದಲೂ ಉತ್ಸುಕತೆಯಿಂದಲೂ ಕೆಲಸ ಮಾಡುವವರೂ ಇರುವರೆಂದು ಅಭಿಮಾನದಿಂದ ತಿಳಿಸುತ್ತೇನೆ. ಪ್ಲೇಗದ ಮೂಲಕವಾಗಿ ಬೋರ್ಡಿಂಗದ ನೌಕರರು ಬಿಟ್ಟು ಹೋದರು. ಆದರೆ ಇವರು ಕೈಮುಚ್ಚಿಕೊಂಡು ಸುಮ್ಮನೆ ಕೂಡ್ರದೆ ತಮ್ಮ ಅಡಿಗೆ ನೀರಿನ ವ್ಯವಸ್ಥೆಯನ್ನು ತಾವೇ ಬೇಸರಿಯದೆ ಮಾಡಿಕೊಂಡದ್ದರಿಂದ ಅವರ ಸ್ವಾವಲಂಬನವು ವ್ಯಕ್ತವಾಗುತ್ತದೆ. ಇಂಥ ಜನರ ಕೂಡ ಕೆಲಸ ಮಾಡಲಿಕ್ಕೆ ನಾನು ಬಹು ಸಂತೋಷಬಡುತ್ತೇನೆ.

ಕಾಲೇಜಕ್ಕೆ ಜೋಡಿಸಲ್ಪಟ್ಟ ಪ್ರಾಕ್ಟಿಸಿಂಗಸ್ಕೂಲು ಚೆನ್ನಾಗಿ ನಡೆವದೆ ಈ ಸಾಲೆಯಿಂದ ಮುಲ್ಕೀ ಪರೀಕ್ಷೆಗೆ ಕಳುಹಿಸಲ್ಪಟ್ಟ ೧೬ ವಿದ್ಯಾರ್ಥಿಯರಲ್ಲಿ ೯ ಮಂದಿ ಪಾಸಾಗಿರುವರು. ಈ ಸಾಲೆಯಲ್ಲಿ ಸದ್ಯಕ್ಕೆ ೧೪೪ ಜನ ವಿದ್ಯಾರ್ಥಿಗಳಿರುವರು. ಪ್ಲೇಗಕ್ಕಿಂತ ಮೊದಲು ೨೭೪ ಜನರಿದ್ದರು.

ಶಿಕ್ಷಣವನ್ನು ಸಾಂಗವಾಗಿಯೂ ಸರಸಾಗಿಯೂ ಸಾಗಿಸಬೇಕಾದರೆ ಅನೇಕ ಜನರ ಸಹಾಯವು ಅವಶ್ಯವಾಗಿರುತ್ತದೆ. ಈ ಕೆಲಸದಲ್ಲಿ ನೆರವಾದ ಎಲ್ಲರಿಗೂ ನಾನು ಆಭಾರಿಯಾಗಿದ್ದೇನೆ ಕಾಲೇಜದ ಈ ತರದ ಭವ್ಯವಾದ ಇಮಾರತುಗಳನ್ನು ಒದಗಿಸಿಕೊಟ್ಟದ್ದಕ್ಕಾಗಿ ನಮ್ಮ ಜಿಲ್ಲೆಯ ಮಾಜಿ ಕಲೇಕ್ಟರರಾದ ಮಿ. ರಾಬರ್ಟಸನ್ ಸಾಹೇಬರವರ

ನ್ನೂ ವಿದ್ಯಾಖಾತೆಯ ಡೈರೆಕ್ಟರರಾದ ಮಿ. ಚಾಟಫೀಲ್ಡ ಮತ್ತು ಜಾಯಿಲ್ಸ ಸಾಹೇಬರವರನ್ನೂ ಎಜ್ಯುಕೇಶನಲ್ ಇನ್ಸಪೇಕ್ಟರ ರಾ. ಬ ಪಟವರ್ಧನ ಮತ್ತು ರಾ. ಬ ಸಹಸ್ರಬುದ್ಧೆಯವರನ್ನೂ ನಾವು ಮನಃಪೂರ್ವಕವಾಗಿ ಹರಿಸುತ್ತೇವೆ. ಕಾಲೇಜದಮೇಲೆ ಪ್ರೀತಿಯಿಟ್ಟು ವೇಳೆವೇಳೆಗೆ ತಕ್ಕ ಸೂಚನೆಗಳನ್ನು ಮಾಡುತ್ತಿರುವದಕ್ಕಾಗಿ ನಾನು ರಾ. ಬ ಸಹಸ್ರಬುದ್ಧೆಯವರಿಗೆ ಋಣಿಯಾಗಿರುತ್ತೇನೆ. ಮಿ. ರಾಬರ್ಟಸನ್ ಸಾಹೇಬರಿಂದ ಮುಂದೆ ಬಂದ ಪ್ರತಿಯೊಬ್ಬ ಕಲೆಕ್ಟರನು ಕಾಲೇಜದ ಮೇಲೆ ಮಮತೆ ಇಟ್ಟು ಅದರ ಏಳ್ಗೆಯನ್ನು ಬಯಸಿದ್ದಕ್ಕಾಗಿ ನಾವು ಅವರೆಲ್ಲರನ್ನು ನೆನಿಸುವದು ತಕ್ಕದ್ದಾಗಿರುತ್ತದೆ. ನಮ್ಮ ಪ್ರೆಸಿಡೆಂಟರಾದ ಮಿ. ಕ್ಯಾನೆಲ ಸಾಹೇಬರವರು ಪ್ಲೇಗದ ಬಗ್ಗೆ ಕೈಕೊಂಡ ಉಪಾಯಗಳಿಗಾಗಿ ಈ ಜಿಲ್ಲೆಯು ಅವರಿಗೆ ಆಭಾರಿಯಾಗಿರುತ್ತದೆ. ಇವರ ಬುದ್ಧಿಚಾತುರ್ಯ, ಕಾರ್ಯಪ್ರೀತಿ, ತಾಳ್ಮೆ, ಮಮತೆ ಇವು ಹೊಗಳತಕ್ಕಂಥವಿರುತ್ತವೆ. ಈಗಿನ ಕಲೆಕ್ಟರರಾದ ಮಿ. ಮ್ಯಾಕ್ಸೀಲ ಸಾಹೇಬರವರು ಸಹ ವಿದ್ಯಾಖಾತೆಯ ಮೇಲೆ ಪೂರ್ಣ ಮಮತೆ ಮಾಡುತ್ತಿರುವರು. ಇವರು ಬಂಕಾಪೂರ ಸಾಲೆಯ ಮಾಸ್ತರರಾದ ಹ. ಕೃ ದೇಶಪಾಂಡೆ ಇವರಿಗೆ ಅವರು ಬಂಕಾಪೂರದಲ್ಲಿ ಮಾಡಿದ ಪ್ಲೇಗದ ಕೆಲಸವನ್ನೂ ವಿದ್ಯಾಖಾತೆಯಲ್ಲಿ ಮಾಡಿದ ಉತ್ತಮ ಕೆಲಸವನ್ನೂ ನೋಡಿ ಮುಲ್ಕೀ ಖಾತೆಯಲ್ಲಿ ಕಾರಕೂನನ ಕೆಲಸಕ್ಕೆ ನೇಮಿಸಿರುವರು.

ಬರೇ ಓದುಬರಹದಿಂದಲೂ ನೀತಿಶಿಕ್ಷಣದಿಂದಲೂ ಶಿಕ್ಷಣದ ಕೆಲಸವು ಪೂರ್ಣವಾಗಲಾರದು. ಇದರಿಂದ ಮಿದುಳಿಗೂ ವಿಚಾರಶಕ್ತಿಗೂ ಮಾತ್ರ ಕೆಲಸ ದೊರಿದು ಉಳಿದ ಅವಯವಗಳಿಗೆ ಕೆಲಸವಿಲ್ಲದಂತೆ ಆಗುವದು. ಈ ನ್ಯೂನತೆಯನ್ನು ನೋಡಿ ನಮ್ಮ ಮಾಜಿ ಕಲೇಕ್ಟರರಾದ ಮಿ. ವಿಂಟರ ಸಾಹೇಬರು ಕೈಗಾರಿಕೆಯ ಶಿಕ್ಷಣದ ಅವಶ್ಯಕತೆಯನ್ನು ಸರಕಾರದ ಮುಂದೆ ಇಟ್ಟರು. ಮುಂದೆ ಕೆಲಸ ನಡೆದು ಈ ಕಾಲೇಜಕ್ಕೆ ಕೈಗಾರಿಕೆಯ ಶಾಖೆಯು ಜೋಡಿಸಲ್ಪಟ್ಟಿತು.

ಇದಕ್ಕಾಗಿ ನಾವು ಲಾರ್ಡ ರೇ. ಮಿ. ವಿಂಟರ ಮತ್ತು ರಾವಸಾಹೇಬ ಕಟ್ಟಿ ಇವರ ಉಪಕಾರವನ್ನು ನೆನಿಸತಕ್ಕದ್ದು. ಅದೇಮೇರಿಗೆ ಮೆ. ಕ್ರಾಲಿಬೋವ್ಹೀ ಸಾಹೇಬರವರೂ ಧಾರವಾಡದ ಡಿಸ್ಟ್ರಿಕ್ಟ ಲೋಕಲ್‌ಬೋರ್ಡಿನವರೂ ಈ ಸಂಸ್ಥೆಯನ್ನು ನೋಡಿ ಸಂತೋಷ ಪಟ್ಟು, ಇದರ ಉತ್ತೇಜನಕ್ಕಾಗಿ ಪ್ರತಿವರ್ಷ ೩೦೦ ರೂಪಾಯಿಯ ಗ್ರಾಂಟನ್ನು ಗೊತ್ತುಪಡಿಸಿದ್ದಕ್ಕಾಗಿ ನಾವು ಅವರೆಲ್ಲರಿಗೂ ಉಪಕೃತರಾಗಿರುತ್ತೇವೆ. ಈ ಶಾಲೆಯಲ್ಲಿ ಕಂಬಾರಿಕೆ, ಬಡಿಗತನ, ಚಿತ್ರಕಲೆ ಈ ಪ್ರಕಾರ ಮೂರು ಶಾಖೆಗಳಿರುತ್ತವೆ. ಚಿತ್ರಕಲೆಯು ಇತ್ತಲಾಗಿ ಅವಶ್ಯಕವಿಷಯವಾಗಿ ಮಾಡಲ್ಪಟ್ಟಿದೆ. ಉಳಿದವೆರಡು ಐಚ್ಛಿಕವಿಷಯಗಳಾಗಿರುತ್ತವೆ. ಕಳೆದ ವರುಷ ೧ ನೇ ಗ್ರೇಡ ಚಿತ್ರಕಲೆಯ ಎಲ್ಲ ವಿಷಯಗಳಲ್ಲಿ ಪರೀಕ್ಷೆಗೆ ಕೂತ ೩೯ ವಿದ್ಯಾರ್ಥಿಗಳಲ್ಲಿ ೩೦ ಜನರು ಪಾಸಾಗಿ ಸರ್ಟಿಫಿಕೇಟು ಪಡೆದಿರುವರು. ಕೆಲವು ವಿಷಯಗಳಲ್ಲಿ ಮಾತ್ರ ಪರೀಕ್ಷೆಗೆ ಕೂತ ೬೩ ಜನರಲ್ಲಿ ೬೧ ಜನರು ಪಾಸಾಗಿರುವರು.

ಈ ಪೂರ್ವದಲ್ಲಿ ಬಡಗಿತನದ ಮತ್ತು ಕಂಬಾರಿಕೆಯ ಕೆಲಸಕ್ಕೆ ತಕ್ಕ ಸ್ಥಳವಿಲ್ಲದ್ದರಿಂದ ಮೇಲಿಂದಮೇಲೆ ಕೆಲಸಕ್ಕೆ ಅಡ್ಡಿಯಾಗುತ್ತಿತ್ತು. ಆದರೆ ಈಗ ನಾವು ನೋಡುತ್ತಿರುವ ಈ ಭವ್ಯವಾದ ಇಮಾರತು ಬಡಿಗತನದ ಕ್ಲಾಸಕ್ಕಾಗಿ ಕಟ್ಟಲ್ಪಟ್ಟಿದೆ. ಇದರ ಹತ್ತರವಲ್ಲಿ ಹಾಕಲ್ಪಟ್ಟ ಚಪ್ಪರದಲ್ಲಿ ಕಂಬಾರಿಕೆಯ ವರ್ಗವು ಕೂಡುವದು. ಈ ಇಮಾರತು ನಾಲ್ವರು ಎ. ಇಂಜನಿಯರರ ಅಪ್ಪಣೆಯಂತೆ ಮಿ. ಎಸ್. ಸಿಕ್ವೆರಾ ಇವರಿಂದ ಕಟ್ಟಲ್ಪಟ್ಟಿರುವದು. ಇಂಥ ಇಮಾರತಿಯ ಪ್ರವೇಶವು ಈ ದಿವಸ ಆಗತಕ್ಕದ್ದಿರುತ್ತದೆ. ಇದನ್ನು ತೆರಿಯುವದಕ್ಕಾಗಿ ನಮ್ಮಲ್ಲಿ ಉತ್ತಮ ಕೆಲಸ ಮಾಡಿ ಕೀರ್ತಿ ಪಡೆವಂಥ ನಮ್ಮ ಪ್ರೆಸಿಡೆಂಟರಾದ ಮಿ. ಕ್ಯಾಸೆಲ ಸಾಹೇಬರವರಿಗೆ ನಾನು ಮನ್ನಣೆಯಿಂದ ವಿನಂತೆ ಮಾಡಿಕೊಳ್ಳುತ್ತೇನೆ.

ಈ ಪ್ರಕಾರ ರಾ. ಸಾ. ಕರಂದೀಕರವರ ಭಾಷಣವಾದ ಮೇಲೆ ಮಿ. ಸವದಿ ಇವರು ಒಂದು ಚಿಕ್ಕ ಭಾಷಣವನ್ನು ಮಾಡಿ ಅದರಿಂದ ಶಾಸ್ತ್ರೀಯ ವಿಷಯಗಳ ಮಹತ್ವವನ್ನು ಎಲ್ಲರಿಗೂ ತಿಳಿಸಿದರು. ಆಮೇಲೆ ಪ್ರೆಸಿಡೆಂಟರು ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟುಗಳನ್ನೂ ಇನಾಮುಗಳನ್ನೂ ಕೊಟ್ಟು ಸಮಯಕ್ಕನುಸರಿಸಿ ಭಾಷಣ ಮಾಡಿದರು ಅದರ ಸಾರಾಂಶವೇನಂದರೆ :—

ಸಭ್ಯಗೃಹಸ್ಥರೇ,— ಇಂಥ ಸಮಾರಂಭ ಕಾಲದಲ್ಲಿ ಪ್ರೆಸಿಡೆಂಟನಾಗಿ ಭಾಷಣ ಮಾಡುವ ಸಮಯವು ಒದಗಿದ್ದಕ್ಕಾಗಿ ನಾನು ತುಂಬಾ ಸಂತೋಷಪಡುತ್ತೇನೆ ಇಷ್ಟೊತ್ತಿನವರೆಗೆ ನೀವೆಲ್ಲರು ನೋಡಿದ ಸಂಗತಿಗಳಿಂದ ರಾ. ಸಾ. ಕರಂದೀಕರರು ವಿದ್ಯದ ಕೆಲಸದಲ್ಲಿ ತೆಗೆದುಕೊಳ್ಳುವ ಪರಿಶ್ರಮವು ನಿಮ್ಮೆಲ್ಲರಿಗೂ ಕಂಡುಬಂದಿರುವದು. ಇವರು ಯಾವಾಗಲೂ ಇಂಥ ಲೋಕಹಿತದ ಕೆಲಸಗಳನ್ನು ಮಾಡುತ್ತಿರುತ್ತಾರೆಂದು ತಿಳಿಸಲಿಕ್ಕೆ ನಾನು ಬಹು ಸಂತೋಷಪಡುತ್ತೇನೆ. ಆಚೇ ವರ್ಷ ಆದ ಜುಬಿಲೀ ಉತ್ಸವದಲ್ಲಿ ಇವರು ಶ್ರಮಪಟ್ಟು ಕಾಲೇಜದಲ್ಲಿ ಮಾಡಿದ ಶಾಸ್ತ್ರೀಯ ಪ್ರದರ್ಶನವು ಹೊಗಳತಕ್ಕಂಥಾದ್ದಿರುವದು. ಇಂಥವರಿಗೆ ಇವರ ವಿದ್ಯಾರ್ಥಿಗಳು ಯಾವಾಗಲೂ ಅನುಕೂಲಗಾಗಿ ನಡೆಯುತ್ತಾರೆಂಬದು ಅರಿದಾದ ಮಾತಲ್ಲ. ಕಳೆದ ವರ್ಷ ಪ್ಲೇಗದಲ್ಲಿ ಮರಣಪಟ್ಟ ಕಾಲೇಜದ ಪಂಡಿತರಾದ ಮಿ. ಮುಳಬಾಗಲ ಮತ್ತು ಕಂಬಾರಶಿಕ್ಷಕ ಕರೀಮಖಾನ ಇವರಿಗಾಗಿ ನಾನು ತುಂಬಾ ವಿಷಾದಿಸುತ್ತೇನೆ. ರಾ॥ ಬ॥ ಸಹಸ್ರಬುದ್ಧೆ, ಮೆಸರ್ಸ ಕರಂದೀಕರ, ರೊದ್ದ ಮತ್ತು ದೇಶಪಾಂಡೆ ಇವರು ವಿದ್ಯಾಖಾತೆಯಲ್ಲಿ ಮಾಡುತ್ತಿರುವ ಮೇಲ್ತರದ ಕೆಲಸಗಳಿಗಾಗಿ ನಾನು ಅವರೆಲ್ಲರಿಗೆ ಆಭಾರಿಯಾಗಿದ್ದೇನೆ. ಇವರ ವಿದ್ಯಾರ್ಥಿಗಳಲ್ಲಿರುವ ಕುಶಲತೆ, ಚುರುಕುತನ, ಉತ್ಸುಕತೆ ಮುಂತಾದವುಗಳು ಲಕ್ಷ್ಯಕೊಡತಕ್ಕಂಥವಿರುವವು. ಅದರಂತೆ ಇವರ ಆಚರಣೆಗಳೂ ನೀತಿಯೂ ಪೂರ್ಣವಾಗಿ ಸುಧಾರಿಸಲ್ಪಟ್ಟಿರುವವು. ಇವರು ಮುಂದೆ ಮಾಸ್ತರರಾಗಿ ಹೋದನಂತರ ಮೇ

ಲ್ತರದ ಕೆಲಸ ಮಾಡುವರೆಂಬದಕ್ಕೆ ಸಂದೇಹವಿಲ್ಲ. ಕಾಲೇಜದಲ್ಲಿ ಅವರಿಗೆ ಶಿಗುವ ಹಸ್ತಶಿಕ್ಷಣದ ಉಪಯೋಗವನ್ನು ಎಷ್ಟೋ ಜನ ಮ್ಯುನಿಸಿಪಲ್ ಮತ್ತು ಲೋಕಲ್‌ಬೋರ್ಡ ಶಾಲೆಗಳ ಮಾಸ್ತರ ಜನರು ಮಾಡಹತ್ತಿರುತ್ತಾರೆ ಎಂದು ತಿಳಿಸಲಿಕ್ಕೆ ನನಗೆ ಸಂತೋಷವಾಗುತ್ತದೆ. ನಾನು ಈಗ ರಾ॥ ಸಾ॥ ಕರಂದೀಕರವರ ವಿನಂತಿಯಂತೆ ಹೊಸದಾಗಿ ಕಟ್ಟಲ್ಪಟ್ಟ ಈ ಸುಂದರವಾದ ಇಮಾರತಿಯ ಬಾಗಿಲನ್ನು ತೆರೆದು ಈ ಸಂಸ್ಥೆಯು ದಿನದಿನಕ್ಕೆ ಊರ್ಜಸ್ಥಿತಿಯನ್ನು ಹೊಂದಲೆಂದು ಮನಃಪೂರ್ವಕವಾಗಿ ಬಯಸುತ್ತೇನೆ.”

ಈ ಪ್ರಕಾರ ಭಾಷಣವಾದ ಮೇಲೆ, ಸಾಂಪ್ರದಾಯದಂತೆ ಹಾರ, ತುರಾಯಿ, ಅತ್ತರ, ಗುಲಾಬ, ತಾಂಬೂಲಗಳಾದ ನಂತರ ನೆರೆದವರೆಲ್ಲರೂ ಆನಂದಚಿತ್ತರಾಗಿ ತಮ್ಮ ತಮ್ಮ ಸ್ಥಳಕ್ಕೆ ತೆರಳಿದರು.

ರಸಾಯನಶಾಸ್ತ್ರ.

(೫೯ ನೇ ಪುಟದಿಂದ ಮುಂದೆ ಸಾಗಿದ್ದು.)

೩. ಪ್ರಯೋಗ—ಒಂದು ಮುಕ್ಕಾಲು ಇಂಚು ವ್ಯಾಸವುಳ್ಳಂಥ ಹತ್ತು ಇಂಚು ಉದ್ದಾದ ಕಾಜಿನ ಕೊಳವೆಯನ್ನು ತಗೆದುಕೋ. ಅದರ ತಳಕ್ಕೆ ಸುತ್ತಲು ಆರು, ನಡುವೆ ಒಂದು, ಈ ಮೇರೆಗೆ ತೂತುಳ್ಳ ಒಂದು ಬೆಣೆಯನ್ನು ಕೂಡ್ರಿಸು. ನಡುವಿನ ತೂತಿನಲ್ಲಿ ಒಂದು ಮೇಣಬತ್ತಿಯನ್ನು ಇಡು. ಕೊಳವೆಯ ಬಾಯಿಗೆ ಒಂದೇ ತೂತುಳ್ಳ ಬೆಣೆಯನ್ನು ಹಾಕು. ಬಳಿಕ ಒಂದು ಕುದುರೆಯ ನಾಲಿನಂತಿರುವ ಬೊಟ್ಟು ಹಿಡಿಸುವಷ್ಟು ಪೊಕ್ಕುಳ್ಳ ಕಾಜಿನ ಕೊಳವೆಯನ್ನು ತಕ್ಕೊಂಡು ಅದರೊಳಗೆ ಕಾಸ್ಟಿಕ್ ಸೋಡಾ (ಹಪ್ಪಳಕಾರ) ಎಂಬ ಪದಾರ್ಥವನ್ನು ತುಸು ಹಾಕು. ತರುವಾಯ ಒಂದು ಮಟ್ಟಲಿಗೆಯಾಕಾರದ ಮೇಲಿನ ಕೊಳವೆಯಷ್ಟೇ ಪೊಕ್ಕುಳ್ಳ ಮತ್ತೊಂದು ಕೊಳವೆಯನ್ನು ತಕ್ಕೊಂಡು ಅದರ ಒಂದು ತುದಿಯನ್ನು ದೊಡ್ಡ ಕೊಳವೆಯ ಬಾಯ್ಬೆಣೆಗಿರುವ ತೂತಿ

ನಲ್ಲಿ ಆ ಕೊಳವೆಯು ಒಳಶೇರುವಂತೆ ಶೇರಿಸು. ಮತ್ತೊಂದು ತುದಿಯನ್ನು ಆ ನಾಲಿನಾಕಾರದ ಕೊಳವೆಯ ಒಂದು ಬಾಯಿಗೆ ರಬ್ಬರಿನ ಅಳಿಗೆಯಿಂದ ಜೋಡಿಸು. ಆ ಮೇಲೆ ಈ ಸಮಗ್ರ ಯಂತ್ರವನ್ನು ತಕ್ಕಡಿಯಲ್ಲಿಟ್ಟು ಸರಿಯಾಗಿ ತೂಗು. ತೂಕವನ್ನು ನೆನಪಿಡು, ಇಲ್ಲವೆ ಬರೆದಿಡು. ಬಳಿಕ ಸೀಸೆಯಂಥ ಧಾತುವಿನ ಪಾತ್ರೆಯನ್ನು ತೆಕ್ಕೊಂಡು ನೀರು ತುಂಬು. ಅದರ ಬಾಯಿಗೆ ಒಂದೇ ತೂತುಳ್ಳ ಬೆಣೆಯನ್ನು ಕೂಡ್ರಿಸು. ಆ ತೂತಿನಲ್ಲಿ ಮತ್ತೊಂದು ಮಟ್ಟಲಿಗೆಯಂಥ ಕಾಜಿನ ಕೊಳವೆಯ ಒಂದು ತುದಿಯನ್ನು ಶೇರಿಸಿ, ಎರಡನೇ ತುದಿಯನ್ನು ನಾಲಿನಾಕಾರದ ಕೊಳವೆಯ ಮತ್ತೊಂದು ತುದಿಗೆ ರಬ್ಬರಿನ ಕೊಳವೆಯಿಂದ ಜೋಡಿಸು. ಈ ಧಾತುವಿನ ಪಾತ್ರೆಯು ತಳಕ್ಕೆ ಬೇಕಾದಾಗ ನೀರನ್ನು ಹೊರಬಿಡಲಿಕ್ಕೂ ಬಂದು ಮಾಡಲಿಕ್ಕೂ ಬರುವಂಥ ಒಂದು ತೋಟಿಯನ್ನು ಹಚ್ಚು. ಇನ್ನು ತಳದ ತೋಟಿಯನ್ನು ತಿರುವಿ ನೀರಿಗೆ ದಾರೀ ಕೊಡು. ಈಗ ಕೊಳವೆಯ ತಳದೊಳಗಿದ್ದ ಬೆಣೆಯೊಳಗಿನ ಛಿದ್ರದಿಂದ ಹೊರಗಿನ ಹವೆಯು ಒಳಹೊಕ್ಕು ಕೊಳವೆಯ ಮಾರ್ಗವಾಗಿ ಧಾತುವಿನ ಪಾತ್ರೆಯಲ್ಲಿ ಶೇರಲಾರಂಭಿಸಿತು. ಅದರಿಂದ ನೀರಿನ ಮೇಲೆ ಹವೆಯ ಭಾರ ಬಿದ್ದು ನೀರು ತೋಟಿಯ ಮಾರ್ಗದಿಂದ ಹೊರಬೀಳಹತ್ತಿತು. ತೆರವಾದ ಸ್ಥಳವನ್ನು ಹವೆಯು ತುಂಬಹತ್ತಿತು. ಇನ್ನು ತೀವ್ರದಿಂದ ಕೊಳವೆಯ ತಳದ ಬೆಣೆಯನ್ನು ತೆಗೆದು ಅದರೊಳಗಿನ ಮೇಣಬತ್ತಿಯನ್ನು ಹಚ್ಚು. ಅರ್ಧಮುರ್ಧ ಮೇಣಬತ್ತಿಯು ಉರಿಯುವ ತನಕ ಸುಮ್ಮನೆ ಕೂಡ್ರು. ಬಳಿಕ ನೀರು ಬೀಳುವದನ್ನು ತಡೆದು ನಿಲ್ಲಿಸು. ಇಗೋ ದೀಪವು ಶಾಂತವಾಯಿತು. ಮೊದಲು ತೂಗಿದಷ್ಟು ಯಂತ್ರದ ಭಾಗವನ್ನು ಈಗ ತೂಗುವಾ; ನೋಡು, ತೂಕವು ಹೆಚ್ಚಾಯಿತು. ಅರ್ಧಮೇಣಬತ್ತಿಯು ಸುಟ್ಟುಹೋದ್ದರಿಂದ ತೂಕವು ಮೊದಲಿಗಿಂತ ವಾಸ್ತವಿಕವಾಗಿ ಕಡಿಮೆಯಾಗಬೇಕು. ಒಂದು ವೇಳೆ ನೀವು ಹಿಂದಿನ ಪ್ರಯೋಗದ ಆಧಾರದಿಂದ ಮೇಣವೂ ಬತ್ತಿಯೂ ಸುಟ್ಟು ರೂಪಾಂತರ ಹೊಂದಿ ಕೋಣೆ

ಯಲ್ಲಿಯೋ ಇರುತ್ತವೆ ಎಂದು ಅನ್ನಬಹುದು. ಹೌದು, ನಿಮ್ಮ ತಿಳುವಳಿಕೆಯು ತಪ್ಪಲ್ಲ. ಮೇಣಬತ್ತಿಯು ಉರಿಯಿಂದ ಹೊರಡುವ ಕಾರ್ಬಾನಿಕ್ ಆಸಿಡ್ ಗ್ಯಾಸವೂ ಉಗಿಯೂ ಎಂಬೆರಡು ಅದೃಶ್ಯವಾದ ವಾಯುರೂಪ ಪದಾರ್ಥಗಳು ನಮ್ಮ ಕೈಗೆ ಸಿಗದೆ ಹೋಗಬಾರದೆಂತಲೇ ನಾಲಿನಾಕಾರದ ಕೊಳವೆಯಲ್ಲಿ ಕಾಸ್ಟಿಕ್‌ಸೋಡಾ ಎಂಬ ಪದಾರ್ಥವನ್ನು ಹಾಕಿದ್ದೇವೆ. ಅದು ಇವೆರಡು ಪದಾರ್ಥಗಳನ್ನು ಮುಂದಕ್ಕೆ ಬಿಡದೆ ಹಿಡಿದಿಟ್ಟಿರುವದು ನಿಜವು. ಆದರೇನು? ಹಾಗಾದರೂ ಮೊದಲಿನಷ್ಟೇ ತೂಕವಾಗಬೇಕಲ್ಲವೇ? ಹೀಗಾಗದೆ ತೂಕ ಹೆಚ್ಚಾಗುವದೆಂದರೆ ನಿಜವಾಗಿ ಸೋಜಿಗಗೊಳಿಸುವ ಮಾತಲ್ಲವೇ? ಇದರ ಕಾರಣವೇನು? ಎಂದು ಆಲೋಚಿಸಿ ನೋಡಲಾಗಿ ಮೇಣಬತ್ತಿಯು ಸುಟ್ಟ ಭಾಗದ ಕೂಡ ಇನ್ನೊಂದು ಯಾವದೋ ಪದಾರ್ಥವು ಕೂಡಿರಬೇಕೆಂದು ನಿಮ್ಮ ಮನಸಿನಲ್ಲಿ ಬರಬಹುದು ಹೌದು, ಈ ನಿಮ್ಮ ಕಲ್ಪನೆಯು ನಿಜವಾದದ್ದು. ಈ ಬೇರೆ ಪದಾರ್ಥವು ಯಾವದೆಂದರೆ ಈ ನಮ್ಮ ವಾತಾವರಣದಲ್ಲಿರುವ ಆಕ್ಸಿಜನವು ಅಥವಾ ಪ್ರಾಣವಾಯುವು. ಇದೇ ಮೇಣಬತ್ತಿಯು ಉರಿಯುವಾಗ ಹುಟ್ಟುವ ಎರಡು ಪದಾರ್ಥಗಳೊಳಗೆ ಬೆರತುಕೊಂಡು ತೂಕವನ್ನು ಹೆಚ್ಚು ಮಾಡಿದೆ. ಇನ್ನು ಈ ಪ್ರಯೋಗಗಳಿಂದ ಮೇಣಬತ್ತಿಯು ಉರಿಯುವಾಗ ಯಾವ ಕಾರ್ಯಗಳು ನಡೆಯುತ್ತವೆಂಬುದು ಬಳಿತಾಗಿ ತಿಳಿಯಬಂತು. ಮೇಣಬತ್ತಿಯು ಉರಿಯುವಾಗ ಮೇಣದ ತತ್ವವು (ಕಾರ್ಬೊನ್ನು) ಹವೆಯೊಳಗಿನ ಆಕ್ಸಿಜನದ ಕೂಡ ರಸಾಯನ ಮಿಶ್ರಣವನ್ನು ಹೊಂದುತ್ತದೆ. ಕಾರ್ಬಾನಿಕ್ ಆಸಿಡ್ ಗ್ಯಾಸವೂ ಉಗಿಯೂ ಈ ರಸಾಯನ ಸಂಯೋಗದ ಪರಿಣಾಮವು. ಈ ವಾಯುಗಳು, ಸುಟ್ಟುಹೋದ ಮೇಣ. ಕಾಳ್ಪು, ಕಟ್ಟಿಗೆಗಳಿಗಿಂತ ಜಡವಾಗಿರುತ್ತವೆ. ಯಾಕೆಂದರೆ ಅವು ಆ ಉರುವಲಗಳೊಳಗಿನ ಕಾರ್ಬೊನ್ನಷ್ಟೇ ಇರದೆ ಅವುಗಳಲ್ಲಿ ಹವೆಯೊಳಗಿನ ಆಕ್ಸಿಜನವೂ ಕೂಡಿಕೊಂಡಿರುತ್ತದೆ. ಜ್ವಲನ ಕ್ರಿಯೆಯು ನಡೆದಿರುವಾಗ ಸುತ್ತಲಿನ ಹವೆಯನ್ನು ತೂಗುವ

ಷ್ಟು ಸಿದ್ಧತೆ ಮಾಡಬಂದರೆ ಸುಟ್ಟುಹೋದ ಪದಾರ್ಥಗಳಿಗಿಂತ ಅದರಿಂದ ಹುಟ್ಟಿದ ಕಾರ್ಬಾನಿಕ್ ಆಸಿಡ್ ಗ್ಯಾಸ ಮತ್ತು ಉಗಿ, ಇವುಗಳ ತೂಕವು ಹೆಚ್ಚಾಗಿರುವಷ್ಟು ಹೊರಗಿನ ಹವೆಯು ತೂಕವು ಕಡಿಮೆಯಾಗಿರುತ್ತದೆಂಬದು ನಿದರ್ಶನವಾಗುತ್ತಿತ್ತು.

(ಸಶೇಷ)

MANUAL OF METHOD.

ಶಿಕ್ಷಾಕ್ರಮ.

(೭೪ ನೇ ಪುಟದಿಂದ ಮುಂದೆ ಸಾಗಿದ್ದು.)

(೧) ಶಿಕ್ಷೆಯಿಂದ ಮನಸ್ತಾಪವು ಹುಟ್ಟುತ್ತದೆ. ಆದ್ದರಿಂದ ತರುಣ ಶಿಕ್ಷಕರು ಆದಷ್ಟು ಮಟ್ಟಿಗೆ ಇದರ ಗೋಜಿಗೆ ಹೋಗದೆ ಇರುವದೇ ಲೇಸು.

(೨) ಈ ಶಿಕ್ಷೆಯು ಬಹಳ ಜನರಿಗೆ ಸೇರುವದಿಲ್ಲ. ಶಾಲಾವ್ಯವಸ್ಥಾಪಕರೂ, ತಾಯಿತಂದೆಗಳೂ, ಅಧಿಕಾರಸ್ಥರೂ ಬೇರೆ ಜನರು ಸಹ ಇದನ್ನು ಕುರಿತು ಮೂಗು ಮುರಿಯುತ್ತಾರೆ. ಇಷ್ಟು ಜನರಿಗೆ ಪ್ರತಿಕಕ್ಷಿಯಾಗಿ ಶಿಕ್ಷೆಯನ್ನು ಮಾಡುವದು ವಿಹಿತವಲ್ಲ.

(೩) ಈ ಶಿಕ್ಷೆಯಿಂದ ಶಿಕ್ಷಕರಿಗೂ ಶಿಷ್ಯರಿಗೂ ನಡುವೆ ಅಪ್ರೀತಿಯು ಹುಟ್ಟಿ ಶಾಲೆಯ ಕೆಲಸಕ್ಕೆ ತೊಂದರೆ ಬರುತ್ತದೆ.

(೪) ಈ ಶಿಕ್ಷೆಯನ್ನು ತರುಣ ಶಿಕ್ಷಕರು ಮಾಡಲಾಗಿ ಅವರನ್ನು ಎದುರಿಸುವ ದುರ್ಬುದ್ಧಿಯು ವಿದ್ಯಾರ್ಥಿಗಳಲ್ಲಿ ಸಹಜವಾಗಿ ಹುಟ್ಟುತ್ತದೆ.

(೫) ಶಿಕ್ಷೆಯು ಬಹುತರವಾಗಿ ನಿಷೇಧಾರ್ಥಕವಿರುತ್ತದೆ. ಇದು ಚಟುವಟಿಕೆಯನ್ನು ಕುಗ್ಗಿಸಿ ಕೆಲಸ ಮಾಡುವ ಲವಲವಿಕೆಯನ್ನು ಕುಂದಿಸುತ್ತದೆ, ಆತುರವನ್ನು ನಷ್ಟಪಡಿಸುತ್ತದೆ.

ಇನಾಮುಗಳು:—(೧) ಉದ್ದೇಶವು- ಹುಡುಗರು ತಮ್ಮ ಕೆಲಸವನ್ನು ಹೊತ್ತಿಗೆ ಸರಿಯಾಗಿ ಮಾಡುವದು ಒಳ್ಳೇ ರೀತಿ

ಯಿಂದ ನಡಕೊಳ್ಳುವದು ಮುಂತಾದ ಕೆಲಸಗಳನ್ನು ಹೊರಗಿನ ಪ್ರೇರಣೆಯಿಲ್ಲದೆ ಸ್ವಾಭಾವಿಕವಾಗಿ ಮಾಡುವದು ವಿಹಿತವು. ಆದರೆ ಇಷ್ಟು ಸ್ವಭಾವಸ್ಥೈರ್ಯವು ಅವರಲ್ಲಿ ಇರುವದಿಲ್ಲ. ಅದನ್ನು ಪ್ರಯತ್ನದಿಂದ ನೆಲೆಗೊಳಿಸಬೇಕಾಗಿರುತ್ತದೆ. ಅವರು ತಮ್ಮ ಕರ್ತವ್ಯವನ್ನು ಉಚಿತವಾಗಿ ಮಾಡಬೇಕಾದರೆ ಅವರಲ್ಲಿ ಕರ್ತವ್ಯಬುದ್ಧಿಯು ಅವಶ್ಯವು. ಈ ಬುದ್ಧಿಯು ಸದಸದ್ವಿಚಾರ ಸಾಮರ್ಥ್ಯದ ಮೇರೆಗೆ ಅವರಲ್ಲಿ ಜಾಗೃತವಾಗಿರುವದು. ಈ ಸಾಮರ್ಥ್ಯವನ್ನೂ ಬೆಳಿಸಲಿಕ್ಕೆ ಬೇಕು. ಈ ಸಾಮರ್ಥ್ಯವನ್ನು ಬೆಳಿಸುವದೇ ನೀತಿಶಿಕ್ಷಣದ ಮುಖ್ಯ ಉದ್ದೇಶವು. ಕೆಲವು ವರ್ಷಗಳ ಸತತ-ಉದ್ಯೋಗದಿಂದ ಮಾತ್ರ ಇದು ಸಾಧ್ಯವಾಗುತ್ತದೆ. ಈ ಮೇರೆಗೆ ಮೇಲಾದ ನಡಾವಳಿಯನ್ನು ಹುಡುಗರಲ್ಲಿ ನೆಲೆಗೊಳಿಸುವ ವಿಚಾರಗಳು ದುರ್ಬಲವಾಗಿರುವದರಿಂದ ಅವುಗಳನ್ನು ಬೆಳಿಸುವಂಥ ಬಾಹ್ಯ ಉಪಾಯಗಳನ್ನು ಕೈಕೊಳ್ಳುವದು ಅವಶ್ಯವು. ಈ ಬಾಹ್ಯೋಪಾಯಗಳೇ ಇನಾಮುಗಳು. ನಿರೋಗಿಯಾದ ಹುಡುಗರು ಸ್ವಾಭಾವಿಕವಾಗಿ ಆಟಕ್ಕೆ ಮೆಚ್ಚುತ್ತಾರೆ. ಎಲ್ಲ ಕೆಲಸಗಳನ್ನು ಆಟದ ರೂಪದಿಂದ ಅವರ ಮುಂದೆ ಇಡುವದು ದುಸ್ಸಾಧ್ಯವು. ಆದ್ದರಿಂದ ಅವರು ಕೆಲಸಕ್ಕೆ ಮೆಚ್ಚುವಂತೆ ಮಾಡಬೇಕಾದರೆ ಇನಾಮುಗಳು ಅವಶ್ಯವಾಗಿ ಬೇಕು.

ಇನಾಮುಗಳನ್ನು ಕೈಗೆ ಬಂದಂತೆ ಕೊಡುವದರಿಂದ ಲಾಭಕ್ಕೆ ಬದಲಾಗಿ ಹಾನಿಯಾಗುವದು. ಆದ್ದರಿಂದ ಅವುಗಳನ್ನು ಎಚ್ಚರದಿಂದಲೂ ನ್ಯಾಯದಿಂದಲೂ ಕೊಡುವದು ಉಚಿತವು. ಇನಾಮುಗಳನ್ನು ಕೊಡುವ ಕಾಲ, ಕಾರಣ, ಪರಿಮಾಣ ಇವುಗಳನ್ನು ಚನ್ನಾಗಿ ವಿಚಾರಿಸಲಿಕ್ಕೆ ಬೇಕು. ಇವು ಬಹಳ ಮಹತ್ವದ ಸಂಗತಿಗಳಾಗಿವೆ. ಇವುಗಳಲ್ಲಿ ತಪ್ಪಿದರೆ ವಿಪರೀತ ಪರಿಣಾಮವಾಗುವ ಸಂಭವವುಂಟು. ಆದ್ದರಿಂದ ಇವುಗಳನ್ನು ಕುರಿತು ಆದರಪೂರ್ವಕವಾಗಿ ವಿಚಾರಿಸಿ ಸುಪರಿಣಾಮವಾಗುವಂತೆ ಇನಾಮುಗಳನ್ನು ಕೊಡುವದು ಶ್ರೇಯಸ್ಕರವಾದದ್ದು. ಇನಾಮುಗಳನ್ನು ಉದ್ಯೋಗದ

ದೆಶೆಯಿಂದಲೂ ತತ್ಪರತೆಯ ದೆಶೆಯಿಂದಲೂ ಕೊಡತಕ್ಕದ್ದೇ ಹೊರತು ಬುದ್ಧಿಯ ತೀವ್ರತೆಗಾಗಿ ಕೊಡತಕ್ಕದ್ದಲ್ಲ. ಅದೇ ಮೇರೆಗೆ ಮಾನಸಿಕ ಗುಣಕ್ಕಿಂತ ನೀತಿಸುಧಾರಣೆಗಾಗಿ ಇನಾಮುಗಳನ್ನು ಕೊಡತಕ್ಕದ್ದು.

ಚಿಕ್ಕವರಿಗೆ ಇನಾಮುಗಳನ್ನು ಅಷ್ಟಿಷ್ಟು ಮಾತಿಗೆ ಕೊಡುವದು ಸರಿಯಲ್ಲ. ಸಾಮಾಜಿಕ ಗುಣಗಳನ್ನು ಬೆಳಸಲಿಕ್ಕೆ ಆ ವಯಸ್ಸು ಅನುಕೂಲವಾದ ಸಮಯವು. ಅಂಥ ಸಮಯಕ್ಕೆ ಸಾಮಾಜಿಕ ಗುಣಗಳನ್ನು ಕೆಡಿಸುವಂಥ ಮೇಲಾಟವನ್ನು ಇನಾಮುಗಳ ದ್ವಾರದಿಂದ ಪ್ರೋತ್ಸಾಹಗೊಳಿಸುವದು ಸರಿಯಲ್ಲ.

ಇನಾಮುಗಳ ಕಾರ್ಯೋತ್ತೇಜಕತ್ವವು—(೧) ಇನಾಮುಗಳಿಂದ ಕೆಲಸ ಮಾಡುವ ಹವ್ಯಾಸವು ಬೆಳೆಯುತ್ತದೆ. ಇವುಗಳಿಂದ ಲಾಭದ ಇಚ್ಛೆ, ಪ್ರಶಂಸೇಚ್ಛೆ, ಅಧಿಕಾರಪ್ರೀತಿ ಮುಂತಾದ ಪ್ರವೃತ್ತಿಗಳಿಗೆ ಚಾಲನೆ ದೊರೆದು ಕೆಲಸದ ಆತುರವು ನೆಲೆಗೊಳ್ಳುತ್ತದೆ. ಆದರೆ ಈ ಪ್ರಸಕ್ತಿಯಲ್ಲಿ ಈ ಸಾಧನಗಳೇ ಸಾಧ್ಯಗಳಾಗುವ ಸಂಭವ ಉಂಟು. ಅದನ್ನು ಕುರಿತು ಎಚ್ಚರಪಟ್ಟರೆ ಏನೂ ತಪ್ಪಿಲ್ಲ. ಇನಾಮುಗಳಿಗಾಗಿಯೇ ದುಡಿಯುವ ಇಚ್ಛೆಯು ಸರ್ವಥಾ ಅಸಮ್ಮತವಾದದ್ದು. ಇನಾಮುಗಳು ದುಡಿಯುವ ಇಚ್ಛೆಯನ್ನು ಪ್ರಬಲಗೊಳಿಸುವ ಸಾಧನಗಳು ಮಾತ್ರ ಆಗಿರುತ್ತವೆಂಬದನ್ನು ಮರೆಮಾಡಕೂಡದು.

(೨) ವಿದ್ಯಾರ್ಥಿಗಳ ಅಭ್ಯಾಸದಲ್ಲಿ ಅವರ ತಾಯಿತಂದೆಗಳ ಲಕ್ಷವನ್ನು ತೊಡಗಿಸಲಿಕ್ಕೆ ಇನಾಮುಗಳು ಅನುಕೂಲಿಸುವವು.

(೩) ಇನಾಮುಗಳು ವಿಧೇಯತ್ವವನ್ನು ಬೆಳಸಲಿಕ್ಕೆ ತಕ್ಕಮಟ್ಟಿಗೆ ಅನುಕೂಲಿಸುತ್ತವೆ. ಅದೇ ಮೇರೆಗೆ ಅವು ಮೇಲಾದ ನಡತೆಯನ್ನು ಹಚ್ಚಲಿಕ್ಕೆ ಪ್ರಯೋಜನಕರವಾಗುತ್ತವೆ.

(೪) ಇನಾಮು ಪಡೆದವನ ಸ್ವಾಭಿಮಾನವು ಬೆಳೆಯುತ್ತ

ದೆ. ಮರ್ಯಾದೆಯು ಹೆಚ್ಚಾಗುತ್ತದೆ. ಸ್ವಾಭಿಮಾನವು ಅಭಿನಂದನೀಯವಾದ ಗುಣವು. ಇದನ್ನು ಹುಟ್ಟಿಸಲಿಕ್ಕೆ ಶಿಕ್ಷಕರು ಯತ್ನಿಸಲೇಬೇಕು.

(೫) ಇನಾಮುಗಳು ಉದ್ಯೋಗಕ್ಕೂ ಉದ್ಯೋಗದ ಫಲವಾದ ಉಚಿತಕ್ಕೂ ಆನಂದಕರವಾದಂಥ, ಪ್ರಯೋಜನಕರವಾದಂಥ ಸಾಹಚರ್ಯಸಂಬಂಧವನ್ನು ಹುಟ್ಟಿಸಿ ನೆಲೆಗೊಳಿಸುತ್ತವೆ.

(೬) ಇನಾಮುಗಳು ಪರರಿಗಿಂತ ಮೇಲಾಗಬೇಕೆಂಬ ಹವಣಿಕೆಯನ್ನು ಬಲಗೊಳಿಸುತ್ತವೆ. ಮರ್ಯಾದೇಚ್ಛೆಯೂ, ಮೇಲಾಗಬೇಕೆಂಬ ಆತುರವೂ, ಕೀರ್ತಿಯ ಹವ್ಯಾಸವೂ ಬುದ್ಧಿಯ ಬೆಳವಣಿಗೆಗೆ ಮೇಲಾದ ಸಾಧನಗಳಾಗಿರುತ್ತವೆ. ಇವು ತಕ್ಕ ಉಪಾಯಗಳಿಂದ ಬೆಳಿಸಿದಷ್ಟು ಶ್ರೇಯಸ್ಕರವೇ ಸರಿ.

(೭) ಇನಾಮುಗಳಿಂದ ಸುಖವಾಗುತ್ತದೆ. ಸುಖಾಪೇಕ್ಷೆಯು ಮೇಲಾದ ಕಾರ್ಯಪ್ರವರ್ತಕ ಸಂಗತಿಯಾಗಿರುತ್ತದೆ.

(೮) ಸುಸ್ಥಿತಿಗೂ ಕಾರ್ಯಪ್ರೀತಿಗೂ ಇನಾಮುಗಳು ಪ್ರತ್ಯಕ್ಷ ಸಾಧನಗಳಾಗಿರುತ್ತವೆ. ಶಿಕ್ಷೆಗಳು ಅಪ್ರತ್ಯಕ್ಷಸಾಧನಗಳಾಗಿರುತ್ತವೆ. ಆದ್ದರಿಂದ ಶಿಕ್ಷೆಗಳಿಗಿಂತ ಇನಾಮುಗಳೇ ಗ್ರಾಹ್ಯವಾದ ಸಾಧನಗಳು.

SELECTIONS FROM THE KARNATIK GAZETTEER.

ಕನ್ನಡ ಗಝೇಟಿಯರದಿಂದ ಅವತರಣಗಳು.

(೮೬ ನೇ ಪುಟದಿಂದ ಮುಂದೆ ಸಾಗಿದ್ದು.)

ಗೋಕರ್ಣವು ಇಂದ್ರಾದಿ ದೇವತೆಗಳು, ಮುಖ್ಯವಾಗಿ ಬ್ರಹ್ಮ, ವಿಷ್ಣು, ಮಹೇಶ್ವರ, ಅಗಸ್ತ್ಯ, ರಾಮ, ರಾವಣ ಮುಂತಾದವರು ತಪಶ್ಚರ್ಯ ಮಾಡಿದ ಸ್ಥಳವೆಂದು ಹೇಳಲ್ಪಡುತ್ತದೆ. ಇಲ್ಲಿ ಮಹಾಬಳೇಶ್ವರನ ಗುಡಿಯು ಹೊರ್ತು ಬೇರೆ ಸಣ್ಣ ಗುಡಿಗಳೂ, ಮೂವತ್ತು ಲಿಂಗಗಳೂ ಮೂವ

ತ್ತು ತೀರ್ಥಗಳೂ ಇರುತ್ತವೆ. ಇವುಗಳಲ್ಲಿ ಮುಖ್ಯವಾದವುಗಳನ್ನು ಕೆಳಗೆ ವಿವರಿಸುತ್ತೇವೆ. ಮಹಾಬಳೇಶ್ವರನ ಸಭಾಮಂಟಪಕ್ಕೂ ಚಂದ್ರಶಾಲೆಗೂ ನಡುವೆ ಶಾಸ್ತ್ರೇಶ್ವರ, ಆದಿಗೋಕರ್ಣ ಎಂಬ ಲಿಂಗಗಳಿರುತ್ತವೆ. ಇವು ಒಂದು ಮೊಳ ಎತ್ತರವಾಗಿಯೂ ಎರಡು ಫೂಟು ಸುತ್ತಳತೆಯುಳ್ಳವಾಗಿಯೂ ಇರುತ್ತವೆ. ಮಹಾಬಲೇಶ್ವರನ ಹಿಂದೆ ೪೦ ಹೆಜ್ಜೆಯ ಮೇಲೆ ಗಣಪತಿಯ ಗುಡಿಯುಂಟು. ಈ ಗಣಪತಿಯನ್ನು ಕರೆ ಕಲ್ಲಿನಿಂದ ಮಾಡಿದ್ದಾರೆ. ಗಣಪತಿಯ ತಲೆಗೆ ಪೆಟ್ಟು ತಾಗಿ ಬಿದ್ದಂತೆ ಒಂದು ನೆಗ್ಗು ಬಿದ್ದದೆ. ಈ ಗಣಪತಿಯ ಕಥೆಯನ್ನು ಜನರು ಹೇಳುವದು ಹ್ಯಾಗಂದರೆ—ರಾವಣನ ತಾಯಿಯಾದ ಕೈಕಸಿಗೆ ಕೋಟಿ ಲಿಂಗಗಳ ಪೂಜೆ ಮಾಡುವ ಅಪೇಕ್ಷೆಯಾಯಿತು. ಆದರೆ ಲಂಕೆಯಲ್ಲಿ ಅಷ್ಟು ಲಿಂಗಗಳಿದ್ದಿಲ್ಲ. ಶಿವನ ಆತ್ಮಲಿಂಗಕ್ಕೆ ನಿತ್ಯದಲ್ಲಿ ಬೆಲಪತ್ರಿಯನ್ನು ಏರಿಸಿದರೆ ಕೋಟಿ ಲಿಂಗಗಳ ಪೂಜೆ ಮಾಡಿದ ಫಲ ಬರುತ್ತದೆಂದು ಋಷಿಗಳು ಹೇಳಿದ್ದರಿಂದ ರಾವಣನು ಆ ಲಿಂಗವನ್ನು ಸಂಪಾದಿಸುವದಕ್ಕೋಸ್ಕರ ತಪಶ್ಚರ್ಯ ಮಾಡಿದನು. ಶಿವನು ಪ್ರಸನ್ನನಾಗಿ ಏನು ಬೇಕೆಂದು ಕೇಳಲು, ರಾವಣನು ನಿನ್ನ ಆತ್ಮಲಿಂಗವನ್ನು ಕೊಡೆಂದು ಬೇಡಿದನು. ಶಿವನು ಹಾಗೇ ಆಗಲೆಂದು ಹೇಳಿ ರಾವಣನಿಗೆ ಆತ್ಮಲಿಂಗವನ್ನು ಕೊಟ್ಟು, ಲಂಕೆಯ ವರೆಗೆ ಮಾರ್ಗದಲ್ಲಿ ಇದನ್ನು ಎಲ್ಲಿಯೂ ಇಡಬೇಡೆಂದು ಅಪ್ಪಣೇ ಮಾಡಿದನು. ಈ ಲಿಂಗವನ್ನು ಮೂರು ವರ್ಷ ಪೂಜಿಸಿದವರು ಮಹಾದೇವನಿಗೆ ಸರಿಯಾಗತಕ್ಕವರೆಂದು ನಿಯಮವಿತ್ತು. ಆದ್ದರಿಂದ ದೇವತೆಗಳು ಹೆದರಿ ವಿಷ್ಣುವಿನ ಬಳಿಗೆ ಹೋಗಿ ಈ ಸಂಗತಿಯನ್ನು ತಿಳಿಸಿದರು. ವಿಷ್ಣುವು ಗಣಪತಿಯನ್ನು ಕರೆದು, ನೀನು ಬ್ರಾಹ್ಮಣ ಬಾಲಕನಾಗಿ ಗೋಕರ್ಣಕ್ಕೆ ಹೋಗಿ ಅಲ್ಲಿ ರಾವಣನಿಗೆ ಎದುರಾಗೆಂದು ಹೇಳಿ ಕಳುಹಿಸಿದನು. ಆ ಪ್ರಕಾರ ಗಣಪತಿಯು ಹೋಗಲು, ದೇವತೆಗಳು ಗೋಕರ್ಣದ ಬಳಿಯಲ್ಲಿ ಗುಡ್ಡದ ಹಿಂದೆ ಬಂದು ಅಡಗಿ ನಿಂತರು. ರಾವಣನು ಗೋಕರ್ಣಕ್ಕೆ ಬಂದ ಕೂಡಲೆ ವಿಷ್ಣುವು ತನ

ಚಕ್ರವನ್ನು ಸೂರ್ಯನಿಗೆ ಅಡ್ಡ ಹಿಡಿಯಲಾಗಿ ರಾವಣನಿಗೆ ಸಂಜೆಯಾದಂತೆ ಕಂಡಿತು. ಆದರಿಂದಲವನು ಸಮುದ್ರಕ್ಕೆ ಸಂಧ್ಯಾವಂದನಕ್ಕೆ ಹೋಗುವದಕ್ಕೋಸ್ಕರ ಲಿಂಗವನ್ನು ಯಾರ ಕೈಯಲ್ಲಿ ಕೊಡಬೇಕೆಂದು ಅತ್ತಿತ್ತ ನೋಡುವಷ್ಟರಲ್ಲಿ ಬ್ರಾಹ್ಮಣ ಬಾಲಕನಾದ ಗಣಪತಿಯು ಬಂದನು. ರಾವಣನು ಲಿಂಗವನ್ನು ಅವನ ಕೈಯಲ್ಲಿ ಕೊಟ್ಟು, 'ನಾನು ಸಂಧ್ಯಾವಂದನ ಮಾಡಿ ಬರುವ ವರೆಗೆ ಇದನ್ನು ಕೈಯಲ್ಲಿ ಹಿಡಿದಿರು, ನೆಲದಮೇಲೆ ಇಡಬೇಡ' ಎಂದು ಹೇಳಿದನು. ಗಣಪತಿಯು ಲಿಂಗವನ್ನು ತಕ್ಕೊಂಡನು; ಆದರೆ ನಾನು ಮೂರು ಸಾರಿ ನಿನ್ನನ್ನು ಒದರುವದರೊಳಗೆ ನೀನು ಬರದಿದ್ದರೆ ಲಿಂಗವನ್ನು ಇಲ್ಲಿ ಇಟ್ಟು ಹೊರಟು ಹೋಗುವೆನೆಂದು ಗಣಪತಿಯು ಶರತು ಮಾಡಿದನು. ರಾವಣನು ಅದಕ್ಕೆ ಒಪ್ಪಿಕೊಂಡು, ಸಂಧ್ಯಾವಂದನಕ್ಕೆ ಹೋದ ಕೂಡಲೆ ಗಣಪತಿಯು ಬಂದೇಸವನಾಗಿ ಮೂರು ಸಾರಿ ಅವನನ್ನು ಒದರಿ, ಲಿಂಗವನ್ನು ನೆಲದಮೇಲೆ ಇಟ್ಟು, ೪೦ ಹೆಜ್ಜೆ ಹಿಂದಕ್ಕೆ ಓಡಿ ಹೋಗಿ ಅಡಗಿಕೊಂಡನು. ರಾವಣನು ಬಂದು ತನ್ನ ಮೈಯೊಳಗಿನ ಯಾವತ್ತು ಕಸುವು ಹಾಕಿ ಲಿಂಗವನ್ನು ಎತ್ತಲಿಕ್ಕೆ ಪ್ರಯತ್ನ ಮಾಡಿದಾಗ್ಯೂ ಲಿಂಗವು ಏಳಲಿಲ್ಲ; ಅದರ ಬೇರು ಪಾತಾಳಕ್ಕಿಳಿದಿದ್ದವು. ಆದ್ದರಿಂದ ರಾವಣನು ಸಂತಾಪದಿಂದ ಮೂರ್ಛೆಹೊಂದಿ ಕೆಲ ವೇಳೆ ಬಿದ್ದುಕೊಂಡು ಎಚ್ಚತ್ತ ಬಳಿಕ ಗಣಪತಿಯನ್ನು ಹುಡಿಕಿ ಅವನ ತಲೆಯ ಮೇಲೆ ಗುದ್ದಿದನು. ಆದ್ದರಿಂದ ಅವನ ತಲೆಗೆ ನೆಗ್ಗು ಬಿತ್ತು. ತರುವಾಯ ರಾವಣನು ಲಿಂಗದ ಆವರಣವನ್ನು ಬೀಸಾಡಿ ಚೆಲ್ಲಿದ್ದರಿಂದ ಅದರಲ್ಲಿ ನಾಲ್ಕು ತುಂಡುಗಳಾಗಿ, ಅವು ಮುರುಡೇಶ್ವರ, ಗುಣವಂತಿ, ಧಾರೇಶ್ವರ, ಶೇಜವಾಡ ಎಂಬಲ್ಲಿ ಹೋಗಿ ಬಿದ್ದು, ಸ್ವಯಂಭು ಲಿಂಗಗಳಾದವು. ಗಣಪತಿಯು ಈ ಮಹತ್ಕಾರ್ಯವನ್ನು ಸಾಧಿಸಿದ್ದರಿಂದ, ಶಿವನು ತನ್ನ ಪೂಜೆಯನ್ನು ಮಾಡುವ ಪೂರ್ವದಲ್ಲಿ ಯಾತ್ರಿಕರು ನಿನ್ನ ಪೂಜೆಯನ್ನು ಮಾಡದಿದ್ದರೆ ಅವರ ಯಾತ್ರೆಯು ಸಫಲವಾಗಲಿಕ್ಕಿಲ್ಲೆಂದು ಗಣಪತಿಗೆ ವರ

ಕೊಟ್ಟನು. ಆ ಪ್ರಕಾರ ಈಗ್ಯೂ ಯಾತ್ರಿಕರು ಮೊದಲು ಗಣಪತಿಯ ಪೂಜೆಯನ್ನು ಮಾಡುತ್ತಾರೆ.

ಮಹಾಬಲೇಶ್ವರನ ಆಗ್ನೇಯಕ್ಕೆ ಕೋಟಿತೀರ್ಥವೆಂಬದೊಂದು ಕೊಳಚೆ ನೀರಿನ ದೊಡ್ಡ ಹೊಂಡವಿರುತ್ತದೆ. ಇದು ಆರಂಭದಲ್ಲಿ ಅಂದವಾಗಿ ಕಟ್ಟಿದ್ದಿರುತ್ತದೆ. ಆದರೆ ಈಗ ಪಾವಟಿಗೆಗಳು ಒಡೆದು ನೀರು ಕಶ್ಮಲವಾಗಿದೆ. ಈ ಹೊಂಡದ ಮಧ್ಯಭಾಗದಲ್ಲಿ ಒಂದು ಛತ್ರಿಯೊಳಗೆ ಸಪ್ತಕೋಟೀಶ್ವರವೆಂಬ ಲಿಂಗವೂ ಅದರ ಮುಂದೆ ನಂದಿಯೂ ಉಂಟು. ಹೊಂಡದ ದಂಡೆಯಲ್ಲಿ ಕಾಳಭೈರವ, ಗರುಡ, ಅನಿರುದ್ಧ, ಅಗಸ್ತ್ಯೇಶ್ವರ, ಕದಂಬೇಶ್ವರ, ವಸಿಷ್ಠೇಶ್ವರ, ಮುಂತಾದ ಸಣ್ಣ ಸಣ್ಣ ದೇವಸ್ಥಾನಗಳುಂಟು. ಈ ಹೊಂಡದಲ್ಲಿ ಸ್ನಾನ ಮಾಡಿದವರಿಗೆ ಕೋಟಿ ತೀರ್ಥಗಳಲ್ಲಿ ಸ್ನಾನ ಮಾಡಿದ ಫಲ ಬರುತ್ತದೆಂದು ತಿಳಿದು ಯಾತ್ರೆಗೆ ಬಂದವರೆಲ್ಲರು ಇದರಲ್ಲಿ ಸ್ನಾನ ಮಾಡುವರು. ಆದ್ದರಿಂದ ನೀರು ಕೆಟ್ಟು ಹೊಲಸು ನಾರುತ್ತದೆ. ಗರುಡನು ದುರ್ಮುಖಿಯೆಂಬ ಸರ್ಪನನ್ನು ಹಿಡುಕೊಂಡು ಬ್ರಹ್ಮನ ವಾಸಸ್ಥಾನವಾದ ಶತಶೃಂಗವೆಂಬ ಪರ್ವತದ ಮೇಲೆ ಹಾರುತ್ತಿರಲಾಗಿ ಸರ್ಪವು ಕೊಸರಿಕೊಂಡು ಆ ಪರ್ವತದ ಮೇಲೆ ಬಿದ್ದು ಒಂದು ಬಿಲದೊಳಗೆ ಶೇರಿತು. ಆದ್ದರಿಂದ ಗರುಡನು ಕೋಪಿಸಿ ಆ ಪರ್ವತವನ್ನೇ ಎತ್ತಿ ಸಮುದ್ರದೊಳಗೆ ಚಲ್ಲಲಿಕ್ಕೆ ತರುವಷ್ಟರಲ್ಲಿ ಬ್ರಹ್ಮನು ಶಿಟ್ಟಾಗಿ ಪರ್ವತದ ಮೇಲೆ ಮೂರು ಲೋಕಗಳ ಭಾರವನ್ನು ಹಾಕಿದನು. ಆಗ ಗರುಡನು ಭಾರಾಕ್ರಾಂತನಾಗಲು, ಅಗಸ್ತ್ಯಮುನಿಯು ದಯದಿಂದ ಆ ಪರ್ವತವನ್ನು ತನ್ನ ಅಂಗೈಯಲ್ಲಿ ತಕ್ಕೊಂಡು ಗೋಕರ್ಣದ ಬಳಿಯಲ್ಲಿ ಇಟ್ಟನು. ಬ್ರಹ್ಮನು ಹಾಕಿದ ಭಾರದಿಂದ ಪರ್ವತದೊಳಗಿನ ಕೋಟಿ ತೀರ್ಥಗಳು ಹೊರಟಲ್ಲಿ ಈ ಕೋಟಿತೀರ್ಥವೆಂಬ ಕುಂಡವಾಯಿತು.

ಕೋಟಿತೀರ್ಥದ ಪೂರ್ವಕ್ಕಿರುವ ಶಂಕರನಾರಾಯಣನ ಗುಡಿಯೊಳಗಿನ ಮೂರ್ತಿಯು ಅರ್ಧಶಿವನ ಆಕಾರವಾಗಿ

ಯೂ ಅರ್ಧ ನಾರಾಯಣನ ಆಕಾರವಾಗಿಯೂ ಇರುತ್ತದೆ. ಶಿವನು ಭಸ್ಮಾಸುರನಿಗೆ, ನೀನು ಯಾರ ತಲೆಯ ಮೇಲೆ ಕೈ ಇಡುವಿಯೋ ಅವರು ಬೂದಿಯಾಗುವರೆಂದು ವರ ಕೊಟ್ಟ ಬಳಿಕ ಭಸ್ಮಾಸುರನು ಶಿವನ ತಲೆಯ ಮೇಲೆಯೇ ಕೈ ಇಡಲಿಕ್ಕೆ ಹವಣಿಸಲು, ಶಿವನು ವೈಕುಂಠಕ್ಕೆ ಓಡಿ ಹೋದನು. ನಾರಾಯಣನು ತನ್ನ ದೇಹದಿಂದ ಮೋಹಿನಿ ಎಂಬ ಸುಂದರಿಯನ್ನು ಹುಟ್ಟಿಸಿ ಭಸ್ಮಾಸುರನನ್ನು ಕೊಲ್ಲೆಂದು ಹೇಳಿ ಕಳುಹಿ ಶಿವನೂ ತಾನೂ ಕೂಡಿ ಒಂದೇ ದೇಹವನ್ನು ಧರಿಸಿಕೊಂಡು ಪಾತಾಳಕ್ಕೆ ಹೋದರು. ಮೋಹಿನಿಯು ಭಸ್ಮಾಸುರನನ್ನು ಮೋಹಗೊಳಿಸಿ, ನಾನಾಪ್ರಕಾರದ ಹಾವಭಾವಗಳಿಂದ ತಾನು ಕುಣಿದು ಅವನನ್ನು ಹಾಗೇ ಕುಣಿಯಹಚ್ಚಿದಳು. ಕಡೆಯಲ್ಲಿ ಮೋಹಿನಿಯು ತನ್ನ ಕೈಯನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡದ್ದು ನೋಡಿ ಬೆರಗಾದ ಭಸ್ಮಾಸುರನು ಅರುವುಗೆಟ್ಟು ತನ್ನ ಕೈಯನ್ನು ತನ್ನ ತಲೆಯ ಮೇಲೆ ಇಟ್ಟುಕೊಂಡ ಕೂಡಲೆ ಸುಟ್ಟು ಭಸ್ಮವಾದನು. ತರುವಾಯ ಮೇಲೆ ಹೇಳಿದ ಹರಿಹರ ಸಂಯುಕ್ತ ರೂಪವು ಶಂಕರನಾರಾಯಣನೆಂಬ ಹೆಸರಿನಿಂದ ಈ ಗುಡಿಯಲ್ಲಿ ಬಂದು ನಿಂತಿತು. ಈ ಗುಡಿಯ ಬಳಿಯಲ್ಲಿ ಇರುವ ಉನ್ಮಜ್ಜನಿ ಎಂಬ ತೀರ್ಥದೊಳಗಿಂದ ಶಂಕರನಾರಾಯಣನು ಪಾತಾಳದಿಂದ ಮೇಲಕ್ಕೆ ಬಂದನೆಂದು ಹೇಳುತ್ತಾರೆ. ಉನ್ಮಜ್ಜನಿಯ ಬಳಿಯಲ್ಲಿ ವೈತರಣಿ ಎಂಬ ತೀರ್ಥವಿರುತ್ತದೆ.

(ಸಶೇಷ,)

DEPARTMENTAL NOTICE.

ನೋಟೀಸು.

ನಂಬರ ೧೦.

ಮ. ಕ್ಯುರೇಟರ ಗವ್ಹರ್ನಮೆಂಟ ಸೆಂಟ್ರಲ್ ಬುಕ್ ಡಿಪೋ ಮುಂಬಯಿ ಇವರಿಂದ ತಿಳಿಸಲ್ಪಡುವದೇನಂದರೆ:—

ಸನ್ ೧೮೯೯ ನೇ ಇಸವಿಯ ಮಾರ್ಚ ತಿಂಗಳ ಅಖೈರ

ಸಿದ್ಧನಾಥ ವಾಚನ ಮಂದಿರ.
ಧಾರವಾಡ.

ಕ್ಕೆ ಕೆಳಗೆ ಬರೆದ ಪುಸ್ತಕಗಳು ಹೊಸದಾಗಿ ಛಾಪಿಸಿ ಮಾರಾಟಕ್ಕೆ ಸಿದ್ಧವಾಗಿರುತ್ತವೆ.

ಸಂಸ್ಕೃತ ಪುಸ್ತಕಗಳು.	ಬೆಲೆ.
ಬಾಂಬೆ ಸಂಸ್ಕೃತ ಸಿರೀಜ ನಂಬರ ೫೮ ಸೇಕಂಡ ಸೆಕ್ಶನ ಆಫ ಹಿಮ್ಸ ಫ್ರಾಮ ಋಗ್ವೇದ	೪-೦-೦
ನಕಾಶೆ.	
ಏಶಿಯಾ ಖಂಡದ ನಕಾಶೆ	೫-೧೨-೦

ಮುಂಬಯಿ
ತಾ. ೧೩-೪-೯೯.

J. C. Dubash,
ಕ್ಯೂರೇಟರ ಗವರ್ನಮೆಂಟ ಸೆಂಟ್ರಲ
ಬುಕಡಿಪೋ ಮುಂಬಯಿ.

CORRESPONDENCE.

ಪತ್ರವ್ಯವಹಾರ.

ಮಹಾರಾಜಪೂಜಿತ ರಾಜಮಾನ್ಯರಾಜಶ್ರೀ ಕನ್ನಡ ಶಾಲಾಪತ್ರಿಕದ ಎಡಿಟರ ಮಹಾರಾಯರ ಚರಣಸನ್ನಿಧಾನಕ್ಕೆ—

ಸಾ. ನ. ವಿ ವಿ. ನಾನು ನನ್ನ ಅಲ್ಪಮತಿಯಿಂದ ಚಿಕ್ಕ ಬಾಲಕರ ಸಲುವಾಗಿ ನೀತಿಪರವಾದ ಸುಲಭಕಥೆ, ವಸ್ತುಜ್ಞಾನಾದರ್ಶ (ಬಡವೆಪಾಠ) ಹಾಡುಗಳಿಂದ ಕೂಡಿದ ಒಂದು ಚಿಕ್ಕ ಪುಸ್ತಕವನ್ನು ಬರೆದು ಕನ್ನಡ ವಿದ್ವನ್ಮಣಿಗಳ ಉದಾರಾಶ್ರಯವನ್ನು ಹೊಂದುವ ಅಭಿಲಾಷೆಯಿಂದ ಆ ಪುಸ್ತಕದೊಳಗಿನ ೫ ಕಥೆಗಳನ್ನೂ, ೧ ಬಡವೆಪಾಠವನ್ನೂ, ೨ ಹಾಡುಗಳನ್ನೂ ತಮ್ಮ ಕರಕಮಲದಿಂದುದ್ಭವಿಸುವ ಅಂದವಾದ ಮತಪತ್ರಿಕೆಯಲ್ಲಿ ಪ್ರಸಿದ್ಧಿಸುವ ಬಗ್ಗೆ ರವಾನಿಸಿದ್ದೇನೆ. ಉದಾರರೂ, ಹಿತಚಿಂತಕರೂ ಆದ ತಾವು ನನ್ನ ಈ ಪ್ರಥಮ ಪ್ರಯತ್ನಕ್ಕೆ ಪೂರ್ಣ ಸಹಾಯ ಮಾಡುವಿರೆಂದು ಆಶಿಸುತ್ತೇನೆ.

೧ ನೇ ಕಥೆ.

ಕಟ್ಟಿಗೆ ಕಡಿಯುವ ಮನುಷ್ಯನೂ ಅವನ ಕೊಡಲಿಯೂ.

ಒಬ್ಬ ಮನುಷ್ಯನು ಕೆರೆಯಮೇಲಿರುವ ಒಂದು ಮರವ

ನ್ನು ಕಡಿಯುತ್ತಿದ್ದನು. ಆಗ ಅವನ ಕೊಡಲಿಯು ಕಳಚಿ ಕೆರೆಯಲ್ಲಿ ಬಿತ್ತು. ಕೆರೆಯಲ್ಲಿ ಬಹಳ ನೀರು ಇದ್ದದ್ದರಿಂದ ಅವನು ಮುಳುಗಿ ಕೊಡಲಿಯನ್ನು ತೆಕ್ಕೊಳ್ಳಲಾರದೆ ಕೆರೇ ದಂಡೆಯಮೇಲೆ ಕೂತು ಅಳಲಾರಂಭಿಸಿದನು. ಅಷ್ಟರಲ್ಲಿ ಒಬ್ಬ ದೇವದೂತನು ಅಲ್ಲಿಗೆ ಬಂದನು. ಅವನು ನಡದ ಸಂಗತಿಯನ್ನು ಕೇಳಿಕೊಂಡು ಕೆರೆಯಲ್ಲಿ ಹಾರಿ ಒಂದು ಭಂಗಾರದ ಕೊಡಲಿಯನ್ನು ತೆಗೆದು ಇದು ನಿನ್ನದೋ ? ಎಂದು ಕೇಳಿದನು. ಅವನು ಅಲ್ಲವೆಂದನು ದೇವದೂತನು ಪುನಃ ಹಾರಿ ಒಂದು ಬೆಳ್ಳಿಯ ಕೊಡಲಿಯನ್ನು ತೆಗೆದು ಇದು ನಿನ್ನದೋ ? ಎಂದು ಕೇಳಿದನು; ಅದಾದರೂ ತನ್ನದೆಂದು ಒಪ್ಪಿಕೊಳ್ಳಲಿಲ್ಲ. ಮೂರನೇಸಾರಿ ಹಾರಿ ಅವನ ಕಬ್ಬಿಣದ ಕೊಡಲಿಯನ್ನು ಮೇಲಕ್ಕೆ ತೆಗೆದು ಇದು ನಿನ್ನದಲ್ಲವಲ್ಲ ? ಎಂದು ಕೇಳಿದನು. ಆಗ ಅವನು ಇದು ತನ್ನದೇ ಎಂದನು. ಈ ಪ್ರಕಾರ ಅವನ ಸತ್ಯತನವನ್ನು ಕಂಡು, ದೇವದೂತನು ಆನಂದಪಟ್ಟು ಆ ಮೂರೂ ಕೊಡಲಿಗಳನ್ನು ಅವನಿಗೆ ಇನಾಮು ಕೊಟ್ಟನು.

ಸಾರಾಂಶ :—ಹುಡುಗರು ಯಾವಾಗಲೂ ನಿಜವನ್ನೇ ಆಡಬೇಕು. ಚೇಷ್ಟೆಯಲ್ಲಿ ಸಹ ಸುಳ್ಳು ಮಾತಾಡಬಾರದು ಒಮ್ಮೊಮ್ಮೆ ನಿಜವಾಡಿದರೆ ಬಹಳ ಹಾನಿಯೂ ಸುಳ್ಳಾಡಿದರೆ ಬಹಳ ಲಾಭವೂ ಆದಂತೆ ಕಾಣುತ್ತದೆ ಆದರೂ ನಿಜವಾಗಿ ಸುಳ್ಳಾಡಿದವರಿಗೆ ಕೇಡಾಗದೆ ಇರದು. ಆದದರಿಂದ ಹುಡುಗರು ಯಾವಾಗಲೂ ಸತ್ಯವನ್ನೇ ಮಾತಾಡಬೇಕು.

ಪ್ರಶ್ನೆ—ಕಬ್ಬಿಣದ ಬಣ್ಣ ಎಂಥಾದ್ದು ? ಬೆಳ್ಳಿಯ ಬಣ್ಣ ಎಂಥಾದ್ದು ? ಬೆಳ್ಳಿಯ ಬಣ್ಣಕ್ಕೂ ಭಂಗಾರದ ಬಣ್ಣಕ್ಕೂ ಹೆಚ್ಚು ಕಡಿಮೆ ಏನು ? ಈ ಮೂರರಲ್ಲಿ ಹೆಚ್ಚಿಗೆ ಬೆಲೆ ಬಾಳುವ ಒಡವೆ ಯಾವದು ? ಭಂಗಾರದ ಕೊಡಲಿಯಿಂದ ಕಟ್ಟಿಗೆಯನ್ನು ಕಡಿಯಬಹುದೋ ? ಯಾತರಿಂದ ಕಡಿಯಬಹುದು ? ಕಟ್ಟಿಗೆ ಕಡಿಯಹೋದ ಮನುಷ್ಯನು ಕೆರೆಯಲ್ಲಿ ಹಾರಿ ತನ್ನ ಕೊಡಲಿಯನ್ನು ಯಾಕೆ ಮೇಲಕ್ಕೆ ತೆಗೆಯಲಿಲ್ಲ ? ಕೊಡಲಿಯ ಕಾವು ಮಾತ್ರ ಕೆರೆಯಲ್ಲಿ ಬಿದ್ದರೆ ಅದು ಮುಳುಗುವದೋ ? ಯಾಕೆ ? ಕೆರೆಯ ನೀರಿಗೂ ಸಮುದ್ರದ ನೀರಿಗೂ

ಹೆಚ್ಚು ಕಡಿಮೆ ಏನು? ಅವನಿಗೆ ಮೂರೂ ಕೊಡಲಿಗಳು ಹ್ಯಾಗೆ ಸಿಕ್ಕವು? ಇದರಿಂದ ಸತ್ಯದ ಮಹತ್ವವೆಷ್ಟಾಯಿತು?

೨ನೆಯ ಕಥೆ.

ಹಂಸವೂ ಕಾಗೆಯೂ.

ದಂಡಕಾರಣ್ಯದಲ್ಲಿ ಒಂದು ವೃಕ್ಷದ ಮೇಲೆ ಕೆಲವು ಕಾಗೆಗಳು ಕೂತಿದ್ದವು. ಅವುಗಳ ಸಂಗಡ ಒಂದು ಹಂಸಪಕ್ಷಿಯು ಹಾರಿಬಂದು ಕೂತುಕೊಂಡಿತು. ಒಬ್ಬ ಬೇಡನು ಬೇಟೆಯಾಡಿ ದಣಿದು ಆ ಮರದ ಕೆಳಗೆ ಮಲಗಿ ನಿದ್ರೆ ಮಾಡುತ್ತಿದ್ದನು. ಮರದ ನೆರಳು ಇವನ ಮೇಲೆ ಸರಿಯಾಗಿ ಬೀಳದೆ ಬಿಸಿಲು ಬಹಳ ಕಾಯುತ್ತಿತ್ತು. ಅದನ್ನು ಕಂಡು ಹಂಸಪಕ್ಷಿಯು ಕನಿಕರದಿಂದ ತನ್ನ ರೆಕ್ಕೆಯನ್ನು ಪಸರಿಸಿ ಅವನ ಮುಖಕ್ಕೆ ನೆರಳಾಗುವಂತೆ ಮಾಡಿತು. ಆ ಸಮಯದಲ್ಲಿ ಅಲ್ಲಿದ್ದ ಒಂದೆರಡು ಕಾಗೆಗಳು ಅವನ ಮುಖದಮೇಲೆ ವಿಷ್ಟೆಯನ್ನು ಹಾಕಿ ಹಾರಿಹೋದವು. ಬೇಡನು ಎಚ್ಚತ್ತು ಮೇಲೆ ನೋಡಲು ರೆಕ್ಕೆಯನ್ನು ಪಸರಿಸಿಕೊಂಡಿದ್ದ ಈ ಹಂಸವೇ ವಿಷ್ಟೆಯನ್ನು ಹಾಕಿರಬಹುದೆಂದು ನೆನಿಸಿ ಅದನ್ನು ಕೊಂದನು. ನಿರಪರಾಧಿಯೂ ಪರೋಪಕಾರಿಯೂ ಆದ ಆ ಹಂಸಕ್ಕೆ ಕಾಗೆಗಳ ದುಷ್ಟ ಸಹವಾಸದಿಂದ ಮರಣ ಬಂತು

ಸಾರಾಂಶ:—ಮಕ್ಕಳಿರಾ ನೀವು ಕೆಟ್ಟವರ ಸಹವಾಸವನ್ನು ಮಾಡದೆ ಯಾವಾಗಲೂ ಸಜ್ಜನರ ಸಹವಾಸವನ್ನೇ ಮಾಡಬೇಕು. ನೀವು ಕೆಟ್ಟವರ ಸಮೀಪದಲ್ಲಿದ್ದರೂ ನಿಮಗೆ ಹಾನಿ ತಪ್ಪದು.

ಪ್ರಶ್ನೆ:—ಕಾಗೆಗೆ ಕಾಲುಗಳೆಷ್ಟು? ಹಂಸಕ್ಕೆಷ್ಟು? ನಿನಗೆಷ್ಟು? ಕಾಗೆಗೂ ಹಂಸಕ್ಕೂ ಭೇದವೇನು? ಇವೆರಡರಲ್ಲಿ ಯಾವ ಪಕ್ಷಿಗೆ ಜನರು ಹೆಚ್ಚು ಮಾನ ಮಾಡುವರು? ಹಂಸಪಕ್ಷಿಗೆ ಹ್ಯಾಗೆ ಮರಣ ಬಂತು? ದುಷ್ಟರ ಸಹವಾಸ ಮಾಡಿದವನಿಗೆ ಏನು ಫಲ ಸಿಗುವದು?

೩ನೆಯ ಕಥೆ.

ರಾಮಚಂದ್ರನೆಂಬ ತುಂಟ ಹುಡುಗನು.

ಒಬ್ಬ ಬಡ ಬ್ರಾಹ್ಮಣನು ಒಂದು ಬೀದಿಯಲ್ಲಿ ಹೋಗುತ್ತಿರುವಾಗ ಅಲ್ಲಿ ನಿಂತಿದ್ದ ರಾಮಚಂದ್ರನೆಂಬ ಒಬ್ಬ ಹುಡುಗನು ಅವನನ್ನು ಬಾಯಿಗೆ ಬಂದಂತೆ ಬೈದನು. ಇದನ್ನು ಕೇಳಿ ಆ ಬ್ರಾಹ್ಮಣನು ಅಲ್ಲಿಯೇ ನಿಂತು, "ಶಾಬಾಸ ಹುಡುಗಾ, ನಿನ್ನ ಧೈರ್ಯಕ್ಕೆ ಮೆಚ್ಚಿದೆನು; ನಿನಗೆ ಇನ್ನೂ ಉಮೇದು ಬರುವಂತೆ ಇನಾಮು ಕೊಡಬೇಕೆಂದು ಮನಸ್ಸದೆ; ಆದರೆ ನಾನು ಬಡವನು, ಏನು ಕೊಟ್ಟೇನು? ಇಗೋ ತಕ್ಕೋ ನನ್ನ ಹತ್ತರ ಇರುವದೇ ಇಷ್ಟು" ಎಂದು ಅವನಿಗೆ ಒಂದು ದುಡ್ಡು ಕೊಟ್ಟು, ಮತ್ತೂ ಅಂದದ್ದು—"ನೋಡು, ಅಲ್ಲಿ ಒಬ್ಬ ಸಾವುಕಾರನು ಬರುತ್ತಾನೆ ನನಗೆ ಬೈದಂತೆ ನೀನು ಅವನಿಗೂ ಬೈದರೆ ಅವನು ನಿನಗೆ ಯೋಗ್ಯವಾದದ್ದು ಕೊಡುವನು." ಆ ಹುಡುಗನು ಇದು ಒಳ್ಳೇ ಉಪಾಯವೆಂದು ನೆನಸಿ ಆ ಸಾವುಕಾರನು ಬರುವವರೆಗೆ ಕಾದು ಅವನನ್ನು ಹಾಗೆಯೇ ಬೈದನು. ಕೂಡಲೆ ಆ ಐಶ್ವರ್ಯವಂತನು ತನ್ನ ಚಾಕರನನ್ನು ಕರೆದು ಆ ಹುಡುಗನನ್ನು ಹಿಡಿತರಿಸಿ ಬಂದೀಖಾನೆಗೆ ಕಳುಹಿಸಿದನು. ಅಲ್ಲಿಯ ಕಾಮದಾರರು ಅವನ ಬೆನ್ನಮೇಲೆ ನೆತ್ತರ ಹರಿಯುವವರೆಗೂ ಕೋರಡೆ ಹೊಡೆದರು.

ಸಾರಾಂಶ:—ಬೈದಾಡುವದೂ ಜಗಳಾಡುವದೂ ಬಹಳ ಕೆಟ್ಟದ್ದು, ಇದರಿಂದ ತನ್ನ ಮಾನ ತಾನೇ ಕಳಕೊಂಡಂತೆ ಆಗುವದಲ್ಲದೆ ಶಿಕ್ಷೆ ಹೊಂದಬೇಕಾಗುವದು.

ಪ್ರಶ್ನೆ—ರಾಮಚಂದ್ರನು ಬ್ರಾಹ್ಮಣನಿಗೆ ಯಾಕೆ ಬೈದನು? ಅದರಿಂದ ಬ್ರಾಹ್ಮಣನು ಏನು ಮಾಡಿದನು? ಸಾವುಕಾರನು ರಾಮಚಂದ್ರನನ್ನು ಬಂದೀಖಾನೆಗೆ ಯಾಕೆ ಕಳುಹಿಸಿದನು? ಹೆರವರಿಗೆ ಬೈದರೆ ಏನಾಗುವದು?

(ಸಕೀಷ.)

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ॥
ಬಯಸುತ್ತಂ ಪ್ರತಿಮಾಸದಾದಿಗೊಳವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೀದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ಪುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥೧॥

ಪುಸ್ತಕ ೩೩.] ಜೂನ ೧೮೯೯. [ಸಂಚಿಕೆ ೬.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಅಮೇರಿಕದ ನ್ಯೂಯಾರ್ಕ ಪಟ್ಟಣದಲ್ಲಿ ಶಾಲೆ ತಪ್ಪಿಸಿ ಓಡಿ ಹೋಗುವ ಹುಡುಗರಿಗಾಗಿ ಬೇರೆ ಒಂದು ವ್ಯವಸ್ಥೆಯು ಮಾಡಲ್ಪಟ್ಟದೆ. ಅದೇನಂದರೆ-ವಿದ್ಯಾರ್ಥಿಯು ಶಾಲೆಗೆ ಸರಿಯಾಗಿ ಬರುವದಿಲ್ಲೆಂದು ಆ ಸಾಲೆಯ ಮುಖ್ಯ ಶಿಕ್ಷಕನು ತಿಳಿಸಿದ ಕೂಡಲೆ, ಇಂಥ ವಿದ್ಯಾರ್ಥಿಗಳ ವ್ಯವಸ್ಥೆಯ ಬಗ್ಗೆ ಬೇರೆಯಾಗಿ ನೇಮಿಸಲ್ಪಟ್ಟ ೬೪ ಜನರಲ್ಲಿ ಒಬ್ಬನು ಆ ವಿದ್ಯಾರ್ಥಿಯ ಹಲನಚಲನಗಳನ್ನು ಗೊತ್ತು ಹಚ್ಚಿ ಅವನ ತಂದೆತಾಯಿಗಳಿಗೆ ಭೇಟಿಯಾಗಿ ಆ ಹುಡುಗನ ಕಡೆಗೆ ವಿಶೇಷ ಲಕ್ಷಕೊಡುವ ಬಗ್ಗೆ ತಿಳಿಸುತ್ತಾನೆ. ಇಷ್ಟಾಗಿಯೂ ಅವನು ಹಾದಿಗೆ ಬರದೇ ಹೋದರೆ ಅವನನ್ನು ಓಡಿಹೋಗುವ ಹುಡುಗರಿಗಾಗಿಯೇ ಸ್ಥಾಪಿಸಲ್ಪಟ್ಟ ಸಾಲೆಯಲ್ಲಿ ಒಯ್ದು ಹಾಕುತ್ತಾನೆ. ಅಲ್ಲಿ ಅವನು ೧೬ ತಿಂಗಳುಗಳವರೆಗೆ ಇರಬೇಕಾಗುವದು. ಅಲ್ಲಿಂದ ಅವನನ್ನು ಹೊರಗೆ ಬಿಡುವದಿಲ್ಲ. ಅಲ್ಲಿ ಅವನು ಅಡಿಗೆಯವರಿಗೆ ಸಹಾಯ ಮಾಡಬೇಕಾಗುತ್ತದೆ. ತನ್ನ ಅರಿವೆ ಅಂಚಡಿಗಳನ್ನು ತಾನೇ ಒಗಿದುಕೊಳ್ಳ

ಬೇಕಾಗುತ್ತದೆ. ತನ್ನ ಹಾಸಿಕೆಯನ್ನು ತಾನೇ ಹಾಸಿಕೊಳ್ಳಬೇಕಾಗುತ್ತದೆ. ಈ ರೀತಿಯ ವ್ಯವಸ್ಥೆಯಿಂದ ಹುಡುಗರು ತೀವ್ರ ಹಾದಿಗೆ ಬರುತ್ತಾರೆ.

ಮುಂದಿನ ವರ್ಷ ಪಾರೀಸ ಪಟ್ಟಣದಲ್ಲಿ ಹಿಂದೆ ಎಂದೂ ಆಗದಂಥ ಅನನ್ಯಸದೃಶವಾದಂಥ ಪ್ರದರ್ಶನವಾಗತಕ್ಕದ್ದದೆ. ಈ ಪ್ರದರ್ಶನಕ್ಕೆ ಹಿಂದುಸ್ಥಾನದಿಂದ ಹೋಗುವ ಸಾಮಾನುಗಳನ್ನು ಬೇರೆಯಾಗಿ ಮಂಡಿಸುವಂತೆ ವ್ಯವಸ್ಥೆ ಮಾಡಿರುವರು. ಮತ್ತು ಏತದ್ದೇಶಿಯ ಸಂಸ್ಥಾನಗಳಿಂದ ಈ ಪ್ರದರ್ಶನಕ್ಕೆ ಕಳಿಸಲ್ಪಟ್ಟ ಸಾಮಾನುಗಳನ್ನು ತಿರುಗಿ ತರುವಾಗ ಅವುಗಳ ಮೇಲೆ ಜಕಾತೀ ಬೀಳಬಾರದೆಂದು ಗೊತ್ತುಪಡಿಸಿರುವರು. ಈ ಪ್ರದರ್ಶನಕ್ಕಾಗಿ ಒಂದು ದೊಡ್ಡ ಕೃತ್ರಿಮ ಜ್ವಾಲಾಮುಖಿ ಪರ್ವತವು ತಯಾರಾಗುತ್ತಲಿದೆ. ಈ ಪರ್ವತದ ಸುತ್ತುಮುತ್ತು ಬೇರೆ ಬೇರೆ ತರದ ಹೂದೋಟಗಳನ್ನು ಮಾಡಿ ಅವುಗಳ ನಡುವಿನಿಂದ ಹೊಗೆಯ ದೊಡ್ಡ ದೊಡ್ಡ ತೆರೆಗಳು ಮೇಲಕ್ಕೆ ಹೋಗುವಂತೆ ವ್ಯವಸ್ಥೆ ಮಾಡುವವರಿದ್ದಾರೆ.

ವಿಜಾಪುರ ತಾಲೂಕ ಬಿಜ್ಜರಗಿಯ ಸ್ಕೂಲ ಕಮಿಟಿಯವರು ತಮ್ಮ ೩।೪ ವರ್ಷಗಳಿಂದ ತೀರ ಕೀಳುಸ್ಥಿತಿಯಲ್ಲಿದ್ದ ಸಾಲೆಯನ್ನು ಈಗಿನ ಮಾಸ್ತರರಾದ ರಾ. ನಾರಾಯಣ ರಂಗೋ ಮನಗೋಳಿ ಇವರು ಬಂದ ಬಳಿಕ ಒಳ್ಳೇ ಮೇಹನತ್ತು ಮಾಡಿ ಉತ್ತಮ ಸ್ಥಿತಿಗೆ ತಂದಿರುತ್ತಾರೆಂತಲೂ ವಾರ್ಷಿಕ ಪರೀಕ್ಷೆಗೆ ಇಯತ್ತೆಯಲ್ಲಿ ನಿಂತ ೨೧ ವಿದ್ಯಾರ್ಥಿಗಳಲ್ಲಿ ೨೦ ಜನರು ಪಾಸಾಗಿದ್ದು, ಪರೀಕ್ಷಕರು ಉತ್ತಮ ಶರಾ ಬರೆದಿರುತ್ತಾರೆಂತಲೂ ತಿಳಿಸುತ್ತಾರೆ, ಇದು ಆ ಸಾಲೆಯ ಮಾಸ್ತರರಿಗೆ ಭೂಷಣಾಸ್ಪದವಾದ ಮಾತು. ಇವರಂತೆಯೇ ಎಲ್ಲ ಸಾಲೆಗಳ ಮಾಸ್ತರರು ಶ್ರಮಪಟ್ಟು ಕೆಲಸ

ಮಾಡಿ ಊರ ಪ್ರೀತಿ ಸಂಪಾದಿಸಿ, ಲೋಕಹಿತವನ್ನೂ ಸ್ವಂತ ಹಿತವನ್ನೂ ಸಾಧಿಸುವರೆಂದು ನಾವು ಆಶಿಸುತ್ತೇವೆ.

ನಮ್ಮ ಭಾಗದ ಮಾಜಿ ಲೋಕಪ್ರಿಯ ಕಲೇಕ್ಟರರಾದ ಮಿ. ಮ್ಯೂರ ಸಾಹೇಬ ಬಹಾದ್ದೂರ ಮತ್ತು ದಕ್ಷಿಣ ಭಾಗದ ಎಜ್ಯುಕೇಶನಲ್ ಇನ್ಸಪೇಕ್ಟರರಾದ ರಾವಬಹಾದ್ದೂರ ಪಟವರ್ಧನ ಮತ್ತು ಸಹಸ್ರಬುದ್ಧೆ ಇವರ ಪರಿಶ್ರಮದಿಂದಲೂ ಪ್ರೋತ್ಸಾಹನದಿಂದಲೂ ಧಾರವಾಡದಲ್ಲಿ ಕನ್ನಡ ಸ್ತ್ರೀಶಿಕ್ಷಕಶಿಕ್ಷಣವಿದ್ಯಾಲಯವು ಸ್ಥಾಪಿತವಾದ ಸಂಗತಿಯನ್ನು ನಾವು ಈ ಪೂರ್ವದಲ್ಲಿ ತಿಳಿಸಿರುತ್ತೇವಷ್ಟೇ. ಈ ಸಂಸ್ಥೆಯು ಸನ್ ೧೮೯೪ ನೇ ಇಸ್ವಿಯ ಫೇಬ್ರುಅರಿ ೧ ನೇ ತಾರೀಖಿಗೆ ಸ್ಥಾಪಿತವಾಯಿತು. ಅಂದಿನಿಂದ ಈವರೆಗೆ ಮೂರು ಪ್ರವೇಶ ಪರೀಕ್ಷೆಗಳೂ ಎರಡು ಕೊನೆಯ ಪರೀಕ್ಷೆಗಳೂ ತೆಗೆದು ಕೊಳ್ಳಲ್ಪಟ್ಟವು. ಎಲ್ಲಕ್ಕೂ ಮೊದಲು ಅಂದರೆ ಸನ್ ೧೮೯೪ ನೇ ಇಸವಿಯ ಜಾನ್ಯೂಅರಿ ತಿಂಗಳಲ್ಲಿ ತೆಗೆದುಕೊಂಡ ಪ್ರವೇಶ ಪರೀಕ್ಷೆಗೆ ಬೇರೆ ಬೇರೆ ಸ್ಥಳಗಳಿಂದ ೧೦ ಜನ ವಿದ್ಯಾರ್ಥಿನಿಯರು ಬಂದಿದ್ದರು. ಅವರಲ್ಲಿ ಇಬ್ಬರು ನಾಪಾಸಾದರು. ಉಳಿದ ೮ ಮಂದಿಯನ್ನು ವರ್ಗದಲ್ಲಿ ಸೇರಿಸಿಕೊಂಡಿತು. ಆದರೆ ಇವರಲ್ಲಿ ಒಬ್ಬಳು ಗೃಹಕೃತ್ಯದ ಅಡಚಣಿಯ ಮೂಲಕವಾಗಿ ನಡುವೇ ಬಿಟ್ಟು ಹೋದ್ದರಿಂದ ೭ ಜನರು ಮಾತ್ರ ಕಡೆಯವರೆಗೆ ವರ್ಗದಲ್ಲಿ ಉಳಿದು ಅಭ್ಯಾಸ ಮಾಡಿದರು. ಈ ವಿದ್ಯಾರ್ಥಿನಿಯರ ಕೊನೆಯ ಪರೀಕ್ಷೆಯನ್ನು ಮಿ. ಎಜ್ಯುಕೇಶನಲ್ ಇನ್ಸಪೇಕ್ಟರರವರೂ ರಾವಸಾಹೇಬ ಪ್ರಿನ್ಸಿಪಾಲರೂ ನಾಲ್ಕು ಜಿಲ್ಲೆಗಳ ಡೆಪ್ರುಟಿ ಇನ್ಸಪೇಕ್ಟರರೂ ಕೂಡಿ ೧೮೯೬ ನೇ ಇಸ್ವಿಯ ಅಕ್ಟೋಬರ ತಿಂಗಳಲ್ಲಿ ತೆಗೆದುಕೊಂಡರು. ಕೊನೆಯ ಪರೀಕ್ಷೆಯಲ್ಲದೆ ನಡುವೆ ಆರು ತಿಂಗಳಿಗೊಮ್ಮೆ ಈ ವಿದ್ಯಾರ್ಥಿನಿಯರ ಷಾಣ್ಮಾಸಿಕ ಪರೀಕ್ಷೆ ತೆಗೆದು ಕೊಳ್ಳಲ್ಪಟ್ಟಿತು.

ಕೊನೆಯ ಪರೀಕ್ಷೆಯಲ್ಲಿ ಪರೀಕ್ಷೆಗೆ ಕೂತ ಎಲ್ಲ ವಿದ್ಯಾರ್ಥಿನಿಯರು ಎಲ್ಲ ವಿಷಯಗಳಲ್ಲಿ ಚನ್ನಾಗಿ ಪಾಸಾದರು.

ಅವರೆಲ್ಲರಿಗೆ ಕೂಡಿದಮಟ್ಟಿಗೆ ಅವರ ಗೃಹಕೃತ್ಯದ ಅನುಕೂಲತೆಗಳು ಇದ್ದಂತೆ ಸ್ಥಳಗಳು ಕೊಡಲ್ಪಟ್ಟಿರುವವು. ಅವರು ಚೆನ್ನಾಗಿ ಕೆಲಸ ಮಾಡುತ್ತಿರುವರೆಂದು ತಿಳಿಸಲಿಕ್ಕೆ ನಾವು ಸಂತೋಷ ಪಡುತ್ತೇವೆ.

೨ನೇ ಪ್ರವೇಶ ಪರೀಕ್ಷೆಯು ಸನ್ ೧೮೯೬ನೇ ಇಸವಿಯು ಡಿಶಂಬರ ತಿಂಗಳಲ್ಲಿ ಆಯಿತು. ಇದಕ್ಕಾದರೂ ೧೦ ಜನ ವಿದ್ಯಾರ್ಥಿನಿಯರು ಬಂದಿದ್ದರು. ಅವರಲ್ಲಿ ಇಬ್ಬರು ತೀರ ಚಿಕ್ಕವರಿದ್ದ ಕಾರಣ ತಕ್ಕೊಳ್ಳಲ್ಪಡಲಿಲ್ಲ. ಒಬ್ಬಳು ನಾಪಾಸು ಆದಳು. ಉಳಿದ ಏಳು ಮಂದಿಯಲ್ಲಿ ಒಬ್ಬಳು ಸನ್ ೧೮೯೭ನೇ ಇಸವಿಯು ಜಾನ್ಯುಅರಿ ತಿಂಗಳಲ್ಲಿ ಮಾರಿಕಾದಿಂದ ಮೃತಪಟ್ಟಳು. ಉಳಿದ ಆರು ಜನರು ವರ್ಗದಲ್ಲಿ ನಿಂತು ಕಡೆಯವರೆಗೆ ಅಭ್ಯಾಸ ಮಾಡಿದರು. ಇವರ ಕೊನೆ ಪರೀಕ್ಷೆಯು ಸನ್ ೧೮೯೯ನೇ ಇಸವಿಯು ಮಾರ್ಚ ತಿಂಗಳಲ್ಲಿ ಮ. ಎ ಇನ್‌ಸ್ಪೆಕ್ಟರ ರಾ. ಸಾ. ಪ್ರಿನ್ಸಿಪಾಲ್, ರಾ. ಸಾ. ರೊದ್ದ, ರಾ. ಸಾ. ಸವಣೂರ, ರಾ. ಸಾ. ಕೆರೂರ, ಇವರಿಂದ ತೆಗೆದುಕೊಳ್ಳಲ್ಪಟ್ಟಿತು ಪರಿಕ್ಷೆಯು ಪರಿಣಾಮವು ಸಮಾಧಾನಕರವಾಗಿರುವದು.

ಕಾಲೇಜದಲ್ಲಿ ಇದ್ದು ಅಭ್ಯಾಸ ಮಾಡಿದ ಆರು ಜನ ವಿದ್ಯಾರ್ಥಿನಿಯರಲ್ಲಿ ೬ನೇ ನಂಬರದ ಗಂಗವ್ವಾ ಇವಳು ಗಣಿತದಲ್ಲಿಯೂ ಶಿಕ್ಷಣದಲ್ಲಿಯೂ ನಾಪಾಸಾದಳು. ಮೊದಲನೇ ನಂಬರದ ವಿದ್ಯಾರ್ಥಿನಿಯಾದ ರಮಾಬಾಯಿ ಇವಳಿಗೆ ಇಂಡಿಯನ್ ನ್ಯಾಶನಲ್, ಅಸೋಶಿಏಶನದ ೭೫ ರೂಪಾಯಿಗಳ ಇನಾಮು ದೊರತಿರುವದು. ಇದಲ್ಲದೆ ಮೊ|| ಮ್ಯೂರ ಸಾಹೇಬ ಬಹಾದ್ದೂರವರು ಈ ವರ್ಗದ ವಿದ್ಯಾರ್ಥಿನಿಯರಲ್ಲಿ ಪರೀಕ್ಷೆ ಕಾಲಕ್ಕೆ ಮೊದಲನೇ ನಂಬರ ಪಡಿದಾಕೆಗೆ ಇಲ್ಲವೆ ಸರಿಯಾದ ಗುಣಗಳು ಬಿದ್ದ ಪಕ್ಷಕ್ಕೆ ಶಿಕ್ಷಣದಲ್ಲಿ ಮೇಲ್‌ನಂಬರ ಪಡಿದಾಕಿಗೆ ಇನಾಮು ಕೊಡುವ ಬಗ್ಗೆ ೧೦೦೦ ರೂಪಾಯಿಗಳನ್ನು ಕೊಟ್ಟಿರುವರು. ಅದರ ೪½ ಬಡ್ಡಿಯಂತೆ ಬರುವ ೪೫ ರೂಪಾಯಿ ಬಡ್ಡಿಯಿಂದ ೬ ತಿಂಗ

ಳಿಗೊಮ್ಮೆ ೧೭೫ ರೂ. ಗಳ ಇನಾಮು ಕೊಡುವದು ಗೊತ್ತಾಗಿದೆ; ಅವನ್ನು ಇನ್ನುವರಿಗೂ ಕೊಟ್ಟಿಲ್ಲಾ ಕೊಡುವ ವಿಚಾರ ನಡೆದದೆ. ಹೊರಗಿನಿಂದ ಒಬ್ಬ ಹೆಣ್ಣುಮಗಳು ಪರೀಕ್ಷೆಗೆ ಬಂದಿದ್ದಳು. ಅವಳು ಪಾಸಾಗಲಿಲ್ಲ.

೩ ನೇ ಪ್ರವೇಶ ಪರೀಕ್ಷೆಯು ಕಳೆದ ಮಾರ್ಚ ತಿಂಗಳ ೨೩ ನೇ ತಾರೀಖಿಗೆ ತೆಗೆದುಕೊಳ್ಳಲ್ಪಟ್ಟಿತು. ಈ ಪರೀಕ್ಷೆಗೆ ೭ ಜನ ವಿದಾರ್ಥಿನಿಯರು ಬಂದಿದ್ದರು. ಅವರಲ್ಲಿ ಇಬ್ಬರು ನಾಪಾಸ ಆದರು ಉಳಿದ ೫ ಜನರನ್ನು ವರ್ಗದಲ್ಲಿ ಶೇರಿಸಿಕೊಂಡಿರುತ್ತಾರೆ.

ಈ ವರ್ಗದ ವ್ಯವಸ್ಥೆ ನೋಡುವದಕ್ಕಾಗಿ ಕೆಳಗೆ ಬರೆದ ಸಭ್ಯಗೃಹಸ್ಥರದೊಂದು ಕಮಿಟಿಯು ನೇಮಿಸಲ್ಪಟ್ಟಿದೆ. ಆ ಕಮಿಟಿಯ ಜನರು ಯಾರಂದರೆ —

೧. ಮೋ. ಎ. ಇನಸ್ಪೆಕ್ಟರ.
೨. ರಾ. ಸಾ. ಪ್ರಿನ್ಸಿಪಾಲರು.
೩. ರಾ. ಸಾ. ಡೆಪ್ಯುಟಿ ಇನ್ಸಪೆಕ್ಟರ.
೪. ರಾ. ಸಾ. ವೆಂಕಟರಂಗೋ ಕಟ್ಟಿ.
೫. ರಾ. ಸಾ. ರಾಮರಾವ ದೇಸಾಯಿ
೬. ಮ. ರಾ. ರಾಮರಾವ ಮಾಳಾಪೂರ.
೭. ಮ. ರಾ. ಅಂತಾಜಿಪಂತ ಜೋಗಳೇಕರ
೮. ಮ. ರಾ. ಗದಗಯ್ಯಾ ವಿಭೂತಿ.
೯. ಮೋ॥ ಹಸನಸಾಹೇಬ ಖತೀಬ.

ಒಟ್ಟಿಗೆ ಈ ಸಂಸ್ಥೆಯು ನೆಟ್ಟಗೆ ನಡೆದದೆ ಅನ್ನಲಿಕ್ಕೆ ಅಡ್ಡಿ ಇಲ್ಲ. ಕಳೆದ ವರ್ಷ ಪಿಡುಗೂ, ದುರ್ಭಿಕ್ಷವೂ ಎಲ್ಲ ಕಡೆಯಲ್ಲಿ ಹಬ್ಬಿಕೊಂಡದ್ದರಿಂದ ತಕ್ಕಷ್ಟು ವಿದ್ಯಾರ್ಥಿನಿಯರು ಪ್ರವೇಶಪರಿಕ್ಷೆಗೆ ಬರಲಿಲ್ಲಾ. ಈ ಸಂಸ್ಥೆಯು ದಿನದಿನಕ್ಕೆ ಊರ್ಜಿತಾವಸ್ಥೆಯನ್ನೈದಿ ಚಿರಾಯುವಾಗಲೆಂದು ನಾವು ಬಯಸುತ್ತೇವೆ.

ಭಂಗಾರವು— ಈ ಧಾತುವು ಇತ್ತಲಾಗಿ ವಿಪುಲವಾಗಿ ಶಿಗಹತ್ತಿರುತ್ತದೆ. ಇದು ಶಿಕ್ಕ ಪ್ರಮಾಣವು ಹ್ಯಾಗಂದರೆ—

ಸನ್ ೧೮೫೦ ರಲ್ಲಿ ೧೧೬೦೦೦೦೦೧೦ ರೂ. ಕಿಮ್ಮತ್ತಿನದು.
„ ೧೮೫೧ „ ೧೭೨೦೦೦೦೦೦ „

,, ೧೮೫೨ ,, ೩೬೫೫೦೦೦೦೦ ,,
,, ೧೮೬೦ ,, ೨೩೮೫೦೦೦೦೦ ,,
,, ೧೮೭೦ ,, ೨೧೩೭೦೦೦೦೦ ,,
,, ೧೮೮೦ ,, ೨೨೧೩೦೦೦೦೦ ,,
,, ೧೮೯೦ ,, ೨೪೨೬೦೦೦೦೦ ,,
,, ೧೮೯೫ ,, ೪೧೦೦೦೦೦೦೦ ,,
,, ೧೮೯೬ ,, ೪೧೭೧೩೦೦೦೦ ,,
,, ೧೮೯೭ ,, ೪೮೭೮೦೦೦೦೦ ,,

,, ೧೮೯೮ ,, ೫೯೮೫೭೦೦೦೦ ರೂಪಾಯದ್ದು ಭಂಗಾರದ ಉತ್ಪನ್ನವು ಮುಖ್ಯವಾಗಿ ಆಫ್ರಿಕಾ, ಆಸ್ತ್ರೇಲಿಯಾ ಸ್ವತಂತ್ರ ಸಂಸ್ಥಾನಗಳಲ್ಲಿ ಬಹಳವಾಗಿರುವದು. ಕಳೆದ ವರ್ಷ ಆಫ್ರಿಕಾದಲ್ಲಿ ೪೦ ಲಕ್ಷ ಔಂಸ, ನ್ಯೂಝೀಲಂದ ಸಹಿತ ಆಸ್ತ್ರೇಲಿಯಾದಲ್ಲಿ ೩೨॥ ಲಕ್ಷ ಔಂಸ, ಸ್ವತಂತ್ರ ಸಂಸ್ಥಾನಗಳಲ್ಲಿ ೩೧೮೨೦೦೦೦ ಔಂಸ ಭಂಗಾರವು ಶಿಕ್ಕಿರುವದು. ಉಳಿದ ಉತ್ಪನ್ನವು ಕಾನಡಾ, ರಸಿಯಾ, ಮೇಕ್ಸಿಕೋ ಹಿಂದುಸ್ಥಾನಗಳಿಂದ ಆಗಿರುವದು.

ಅಲಂಕಾರಗಳು.

(೬೧ ನೇ ಪುಟದಿಂದ ಮುಂದೆ ಸಾಗಿದ್ದು.)

ನಿದರ್ಶನಾಲಂಕಾರಕ್ಕೂ ರೂಪಕಕ್ಕೂ ಭೇದ— ರೂಪಕದಲ್ಲಿ ಬಿಂಬ ಪ್ರತಿಬಿಂಬಭಾವವಿಲ್ಲದ ಪದಗಳಲ್ಲಿ ಐಕ್ಯಾರೋಪವಿರುತ್ತದೆ ನಿದರ್ಶನೆಯಲ್ಲಿ ಹಾಗಲ್ಲ. ಉ.

ಆರ್ಯಾ—ಬಲಿನಿಗ್ರಹಕಾಲದೆಬಾನ್ ।
ದಳದೊಳ್ ಚಾಚಿದ ಮುರಾರಿಪದ್ದಂಡಂ ॥
ಫಲಮಂ ಕುಡುಗೆಮಗನಿಶಂ ।
ಜಲಜಾಸನ ಪದ್ಮನಾಲದಂಡವದ್ಯೈ ॥

ಅರ್ಥ—ಬ್ರಹ್ಮನ ಆಸನವಾದ ಕಮಲನಾಲದಂಡವಾದ ಹರಿಯ ಪಾದದಂಡವು ನಮಗೆ ಫಲವನ್ನು ಕೊಡಲಿ ಇಲ್ಲಿ

ಪದ್ಮನಾಲದಂಡಕ್ಕೂ ಹರಿಯ ಪಾದದಂಡಕ್ಕೂ ಬಿಂಬ ಪ್ರತಿಬಿಂಬಭಾವವಿಲ್ಲ.

ಇದೇ ಅಲಂಕಾರದಲ್ಲಿ ಕ್ರಿಯೆಯಿಂದ ಸದಸದರ್ಥಗಳ ಜ್ಞಾನವನ್ನು ಹುಟ್ಟಿಸುವದರ ಸಂಬಂಧವಾಗಿ ೨ ಪ್ರಕಾರಗಳುಂಟು ಅವೆಂತೆಂದರೆ ಸದರ್ಥನಿದರ್ಶನಾ ಅಸದರ್ಥನಿದರ್ಶನಾ ಸದರ್ಥನಿದರ್ಶನಾ ಹ್ಯಾಗಂದರೆ:—

ಕಂದ—ಜನರಿಗೆ ಮಿತ್ರರನುಗ್ರಹ ।
ಘನಸಂಪತ್ ಹೇತುವೆಂದು ಪೇಳ್ವ ತೆರದಿಂ ॥
ದಿನಮಣಿಯು ಪುಟ್ಟಿಶೋಭೆಯ ।
ನನವರತದಿ ಕಮಲಗಳ್ಗೆ ನೀಡುವನಾಗಳ್ ॥

ಅರ್ಥ— ಸೂರ್ಯನು ಹುಟ್ಟಿ ಕಮಲಗಳಿಗೆ ಸೌಂದರ್ಯವನ್ನು ಕೊಡುತ್ತ ಮಿತ್ರರನುಗ್ರಹವು ಸಮೃದ್ಧಿಗಳ ಫಲವೆಂದು ಶ್ರೇಯಸ್ಕರವಾದ ಅರ್ಥ ಬೋಧಿಸುವನಾದದರಿಂದ ಸದರ್ಥನಿದರ್ಶನಾಲಂಕಾರವಾಯಿತು.

ಅಸದರ್ಥನಿದರ್ಶನಾ-ಒಬ್ಬನು ತನ್ನ ಕ್ರಿಯೆಯಿಂದ ಅನ್ಯರಿಗೆ ಅಸದರ್ಥವನ್ನು ಬೋಧಿಸಿದರೆ ಈ ಅಲಂಕಾರವಾಗುವದು.

ಆಯಾ—ರಾಜವಿರೋಧಿಯು ಕೆಡುವನು ।
ಮೂಜಗದೆಂದ್ಯದೆ ಬೋಧಿಪವನ ತೆರದಿಂ ॥
ರಾಜನು ಪುಟ್ಟಲ್ಕೆತಮಂ ।
ತೇಜವ ಕಳಕೊಂಡು ಪೋಪುದೈ ತ್ವರಿತಂ ॥

ಅರ್ಥ— ಮೂರೂ ಲೋಕಗಳಲ್ಲಿ ಅರಸನ ಕೂಡ ವಿರೋಧ ಬಳಿಸುವವನು ನಾಶವಾಗಿ ಹೋಗುವನು ಎಂದು ಚನ್ನಾಗಿ ಬೋಧಿಸುವವನಂತೆ ಕತ್ತಲೆಯು ರಾಜನು (ಚಂದ್ರನು) ಹುಟ್ಟಿದ ಕೂಡಲೆ ತನ್ನ ತೇಜವನ್ನು ಕಳಕೊಂಡು ಹೋಗುವದು. ಇಲ್ಲಿ ಕತ್ತಲೆಯು ರಾಜನು ಹುಟ್ಟಿದಕೂಡಲೆ ಹ್ಯಾಗೆ ನಾಶವಾಗುವದೋ, ಹಾಗೆ ಲೋಕದಲ್ಲಿ ರಾಜವಿರೋಧಿಗಳು ಕೆಡುವರೆಂಬ ಅಸದರ್ಥವನ್ನು ಬೋಧಿಸುವನಾದ್ದರಿಂದ ಅಸದರ್ಥನಿದರ್ಶನಾಲಂಕಾರವಾಯಿತು. ಇದಕ್ಕೆ ಇನ್ನೊಂದುದಾಹರಣೆ.

ಆರ್ಯ—ಮತಿಯಿಲ್ಲದ ಮನುಜನಿವಂ ।
ಪತನವ ಪಡೆವಂ ಮಹಾಪದಂ ಪೊಂದಿ ॥
ಧುತವಾಗಿ ವಾಯುವಿಂಗಿರಿ ।
ಗತಜಲಕಣ ಬೀಳ್ಪುದೈ ಧರಾತಲದೆ ॥

ಅರ್ಥ—ಬುದ್ಧಿಯಿಲ್ಲದವನು ದೊಡ್ಡ ಪದವನ್ನು ಹೊಂದಿದರೆ ಕೆಳಗೆ ಬೀಳುವನು. ಪರ್ವತತುದಿಯಲ್ಲಿದ್ದ ನೀರಿನ ಕಣವು ಗಾಳಿಯಿಂದ ಖಂಡಿತವಾಗಿ ಕೆಳಗೆ ಬೀಳುವದು. ಇಲ್ಲಿ ಸಣ್ಣ ವಸ್ತುವಿಗೆ ದೊಡ್ಡ ಪದಪ್ರಾಪ್ತಿಯು ಪತನಹೇತುವೆಂದು ಅಸದರ್ಥವನ್ನು ಬೋಧಿಸಿದ ಕಾರಣ ಅಸದರ್ಥನಿದರ್ಶನಾಲಂಕಾರವಾಯಿತು. ಸದರ್ಥನಿದರ್ಶನಕ್ಕೆ ಇನ್ನೊಂದುದಾಹರಣೆ.

ಆರ್ಯ—ಶಿರದೊಳ್ ಧರಿಪುದು ಪೂರ್ವದ ।
ಗಿರಿರವಿಯಂ ಮಾನವಂ ಮಹಾತ್ಮರ್ಗ ॥
ಚರಿಪುದು ಗೃಹಮೇಧಿಗಳೊಳ ।
ಗರುಪುವವೊಲ್ ನಿತ್ಯವಾಗಿ ತಾನೆಂದುಂ ॥

ಅರ್ಥ--ಪೂರ್ವಾಚಲವು, ದೊಡ್ಡವರಿಗೆ ಆದರೋಪಚಾರವನ್ನು ಮಾಡಬೇಕೆಂದು ಎಲ್ಲ ಗೃಹಸ್ಥರಿಗೆ ತಿಳಿಸುತ್ತದೇನೋ ಎಂಬಂತೆ ದಿನಾಲು ಪ್ರಾತಃಕಾಲದಲ್ಲಿ ಸೂರ್ಯನನ್ನು ಮಸ್ತಕದಲ್ಲಿ ಧರಿಸುವದು, ಇಲ್ಲಿ ಗೃಹಸ್ಥರು ಮನೆಗೆ ಬಂದ ಅತಿಥಿಗಳಿಗೆ ಆತಿಥ್ಯ ಮಾಡಬೇಕೆಂದು ಸದರ್ಥ ಹೇಳಿದ್ದರಿಂದ ಸದರ್ಥನಿದರ್ಶನಾಲಂಕಾರವಾಯಿತು.

MANUAL OF METHOD.

ಶಿಕ್ಷಾಕ್ರಮ.

(೧೧೨ ನೇ ಪುಟದಿಂದ ಮುಂದೆ ಸಾಗಿದ್ದು.)

ಶಾಲೆಗಳಲ್ಲಿ ಕೊಡಬಹುದಾದ ಇನಾಮುಗಳು.

೧. ನಂಬರು ಮೇಲೆ ಕೊಡುವದು—ವರ್ಗದಲ್ಲಿ ಮೇಲಿನ ಹುಡುಗರು ಉತ್ತರ ಕೊಡಲಿಕ್ಕೆ ತಪ್ಪಿದರೆ ಸರಿಯಾದ ಉತ್ತರವನ್ನು ಕೊಟ್ಟಂಥ ಕೆಳಗಿನ ವಿದ್ಯಾರ್ಥಿಗೆ ಅವನ ಸ್ಥಲದಲ್ಲಿ

ಕೂಡ್ರಲಿಕ್ಕೆ ಹೇಳುವದರಿಂದ ಮೇಲಾಟವು ಬೆಳೆಯುತ್ತದೆ. ತಪ್ಪಿದವನ ಅಜ್ಞಾನವು ಬೈಲಿಗೆ ಬಿದ್ದು ತಿದ್ದಲ್ಪಡುತ್ತದೆ. ಕೆಳಗಿನವನ ಉತ್ಸಾಹವು ಬೆಳೆದು ಹೆಚ್ಚಿನ ಪ್ರಯತ್ನದ ಹವಣಿಕೆಯು ನೆಲೆಗೊಳ್ಳುತ್ತದೆ.

೨. ಸೊಬಗಿನ ಒಡಿವೆಗಳು—ಚಲೋ ರೀತಿಯಿಂದ ಕೆಲಸ ಮಾಡಿದವನಿಗೆ ವನಪಿನ ಒಡವೆಗಳನ್ನು ಕೊಡಬಹುದು ಆದರೆ ಇವು ಸಾದಾ ಇರಬೇಕು. ಡಂಭಾಚಾರ ಬೆಳೆಯುವಂಥವಿರಬಾರದು.

೩. ಅಧಿಕಾರಗಳು—ವರ್ಗದ ಸೆಕ್ರೆಟರಿಯ ಕೆಲಸವನ್ನಾಗಲಿ ಕ್ಯಾಪ್ಟನ್ನನ ಕೆಲಸವನ್ನಾಗಲಿ ಮಾಡಹೇಳುವದು, ಕೆಲವು ಮಾನಮರ್ಯಾದೆಗಳನ್ನು ಗೊತ್ತುಪಡಿಸಿ ಅವುಗಳನ್ನವರಿಗೆ ಮಾಡುವದು, ಸಾಲೆಯ ಸಂಬಂಧದ ಕೆಲವು ಕೆಲಸಗಳನ್ನು ಮಾಡಹೇಳುವದು, ಈ ಪ್ರಕಾರ ಅವರಿಗೆ ಕೆಲವು ಅಧಿಕಾರಗಳನ್ನು ಕೊಡುವದರಿಂದ ಅವರ ಸ್ವಾಭಿಮಾನವು ಜಾಗೃತವಾಗಿ ಹೆಚ್ಚಿನ ಯೋಗ್ಯತೆಯನ್ನು ಪಡೆಯುವ ಲವಲವಿಕೆಯು ನೆಲೆಗೊಳ್ಳುತ್ತದೆ.

೪. ಇನಾಮುಗಳು—ಇವುಗಳನ್ನು ಪುಸ್ತಕರೂಪದಿಂದಾಗಲಿ, ಸರ್ಟಿಫಿಕೇಟುಗಳ ರೂಪದಿಂದಾಗಲಿ, ಪದಕಗಳ ರೂಪದಿಂದಾಗಲಿ, ಸ್ಕಾಲರಶಿಪ್ಪಗಳ ರೂಪದಿಂದಾಗಲಿ ಕೊಡುವ ಸಾಂಪ್ರದಾಯವುಂಟು. ಈ ಇನಾಮುಗಳ ಫಲಗಳು ಪರಸ್ಪರ ಭಿನ್ನವಾಗಿರುವವು. ಇವುಗಳಿಂದ ಒಮ್ಮೆಮ್ಮೆ ಅಹಮಹಮಿಕಾ ಭಾವವು ಬೆಳೆದು ಕೂಡಿ ನಡೆಯುವ ವೃತ್ತಿಯು ಕುಂದುತ್ತದೆ. ಒಮ್ಮೊಮ್ಮೆ ಇವುಗಳಿಂದ ತದ್ವಿಪರೀತವಾಗಿ ಪರಸ್ಪರಸ್ನೇಹ ಬೆಳೆಯುವ ಗುಣಗಳು ದೃಢವಾಗುತ್ತವೆ. ತಾಯಿತಂದೆಗಳ ಬಗ್ಗೆ ಪ್ರೀತಿಯೂ, ಶಿಕ್ಷಕನ ಬಗ್ಗೆ ಆದರವೂ ನೆಲೆಗೊಂಡು ತಮಗೆ ಪೂಜ್ಯರಾದಂಥ, ಪ್ರಿತ್ಯಾಸ್ಪದರಾದಂಥ, ಗುರುಹಿರಿಯರನ್ನು ಸಂತೋಷ ಪಡಿಸುವ ಇಚ್ಛೆಯು ನೆಲೆಗೊಳ್ಳುತ್ತದೆ. ಈ ಇಚ್ಛಾನುರೋಧದಿಂದ ಇನಾಮು ಗಳಿಸುವ ಹವಣಿಕೆಯು ದೃಢವಾಗುತ್ತದೆ. ಒಮ್ಮೊಮ್ಮೆ ಇನಾಮು ಪಡೆಯುವವರ ಮನಸ್ಸಿನಲ್ಲಿ ಕಡುಖೇದಕರವಾದ ನಿರಾಶೆಯು

ಜನಿಸಿ ಅಸಾಸ್ಥ್ಯ ಪ್ರಯತ್ನಾಭಾವಗಳಲ್ಲಿ ಪರಿಣಮಿಸುವದು ಅಥವಾ ಅಸೂಯಾ, ಹೊಟ್ಟೇಕಿಚ್ಚು, ವಿರೋಧ ಮುಂತಾದ ಪ್ರವೃತ್ತಿಗಳು ಬಲಗೊಳ್ಳುವವು. ಸೋಲುವಿಕೆಯನ್ನು ತಕ್ಕ ರೀತಿಯಿಂದ ಕೈಕೊಂಡು ಅದಕ್ಕೆ ಸರಳವಾದ ವಳಣವನ್ನು ಹಚ್ಚಿದರೆ ಪುನಶ್ಶ್ರಮಪಟ್ಟು ಯಶಪಡಿಯಬೇಕೆಂಬ ಲವಲವಿಕೆಯು ದೃಢವಾಗುವದು.

೫. ಮರ್ಯಾದಾ ಪ್ರಶಂಸೆಗಳು—ಇವು ಮನಸ್ಸನ್ನು ಉಲ್ಲಾಸಗೊಳಿಸುವ ಬಲವಾದ ಸಾಧನಗಳಾಗಿವೆ. ಆದರೆ ಇವುಗಳಿಂದ ಇಷ್ಟಪರಿಣಾಮವಾಗಬೇಕಾದರೆ ಇವುಗಳನ್ನು ಉಪಯೋಗಿಸುವಲ್ಲಿ ಸಾಕಷ್ಟು ಎಚ್ಚರ ಪಡಲಿಕ್ಕೆ ಬೇಕು ಸರಿಯಾದ ನಡತೆಯನ್ನು ಹೊಗಳಲಾಗಿ ಅಂಥ ನಡತೆ-ಹೊಗಳಿಕೆಗಳ ಆನಂದಕರವಾದ ಸಾಹಚರ್ಯವು ಹುಟ್ಟಿ ಕಡೆಗೆ ಸರಿಯಾದ ನಡತೆಯು ರೂಢಿ ಆಗುತ್ತದೆ. ಈ ರೂಢಿಯು ಬೆಳಬೆಳದಂತೆ ವಿದ್ಯಾರ್ಥಿಯು ಪ್ರಶಂಸಾನಿರಪೇಕ್ಷನಾಗಿ ಒಳ್ಳೇ ಕೆಲಸ ಮಾಡಹತ್ತುತ್ತಾನೆ.

ಒಳ್ಳೇ ನಡತೆಗಳು—ಒಳ್ಳೇ ನಡತೆಗೆ ಪರಿಪಾಠವೇ ಮೂಲ ಸಾಧನವು; ಆದ್ದರಿಂದ ಒಳ್ಳೇ ನಡತೆಯನ್ನು ಹುಟ್ಟಿಸುವವರು ಪರಿಪಾಠವನ್ನು ಅಂದರೆ ಮನೆಯ ಸಿಸ್ತನ್ನು ವಿಚಾರಿಸುವದೂ ತಿದ್ದುವದೂ ಅವಶ್ಯವು. ಮನೆಯ ಸಿಸ್ತು ಒಳ್ಳೇ ನಡತೆಗೆ ವಿಘಾತಕವಾಗಿದ್ದರೆ ಒಳ್ಳೇ ನಡತೆ ಹಚ್ಚುವದು ದುಸ್ಸಾಧ್ಯವು. ಆದರೆ ಕೆಲಸವು ದುಸ್ಸಾಧ್ಯವಿದ್ದ ಮೇರೆಗೆ ಸಚ್ಛಿಕ್ಷಕನ ಹಂಬಲವು ಬೆಳೆದು ಅವನು ಕಾರ್ಯಸಿದ್ಧಿಗಾಗಿ ಮನಮುಟ್ಟಿ ಧಾವತಿ ಬಡುವನು. ಒಳ್ಳೇ ನಡತೆಯನ್ನು ಹಚ್ಚಲಿಕ್ಕೆ ಅನುಕೂಲಿಸುವ ಸಂಗತಿಗಳು:—

(೧) ಅನುಕರಣ ಪ್ರೀತಿಯು—ಅನುಕರಣ ಪ್ರವೃತ್ತಿಯು ಚಿಕ್ಕ ಹುಡುಗರಲ್ಲಿ ಪ್ರಬಲವಾಗಿರುವದು. ಆದಕಾರಣ ಶಿಕ್ಷಕನು ಸ್ವತಃ ಒಳ್ಳೇ ನಡತೆಯವನಾಗಿರಬೇಕು. ವಿದ್ಯಾರ್ಥಿಗಳಿಗೆ ಹತ್ತಬೇಕಾದ ನಡತೆಗಳೆಲ್ಲ ಅವನಲ್ಲಿ ಪೂರ್ಣವಾಗಿರಲಿಕ್ಕೆ ಬೇಕು. ಅವನು ವಿದ್ಯಾರ್ಥಿಗಳೆದುರಿಗೆ ಕೆಟ್ಟ ನಡತೆಯಿಂದ ಎಂದೂ ನಡೆಯಲಾಗದು. ಅವನು ಮೇಲಾದ ನಡ

ತೆಯ ಮಾದರಿಯೇ ಆಗಿರತಕ್ಕದ್ದು. ಶಿಕ್ಷಕರು ತಮ್ಮ ವರಿಷ್ಠರ ಕೂಡಲೂ ಊರ ಜನರ ಕೂಡಲೂ ಒಳ್ಳೇ ಮರ್ಯಾದೆಯಿಂದ ನಡಕೊಳ್ಳತಕ್ಕದ್ದು. ಆದರೆ ಇಷ್ಟರಿಂದಲೆ ಕೆಲಸವಾಗಲಾರದು. ವಿದ್ಯಾರ್ಥಿಗಳು ಶಿಕ್ಷಕನ ಕೂಡಲೂ ತಮ್ಮತಮ್ಮೊಳಗೂ ಒಳ್ಳೇ ನಡತೆಯಿಂದ ನಡಕೊಳ್ಳುವಂತೆ ಅವನು ಎಚ್ಚರ ಪಡಲಿಕ್ಕೆ ಬೇಕು. ಅದೇ ಮೇರೆಗೆ ಒಳ್ಳೇ ನಡತೆಯ ಹುಡುಗರ ದೃಷ್ಟಾಂತವನ್ನು ಕೊಟ್ಟು ಉಳಿದ ಹುಡುಗರನ್ನು ಹಾದಿಗೆ ತರಲಿಕ್ಕೆ ಬೇಕು. ಸಾಲೆಯಲ್ಲಿ ಕಲಿಯುತ್ತಿರುವಂಥ ಒಳ್ಳೇ ನಡತೆಯ ಹುಡುಗರ ದೃಷ್ಟಾಂತವನ್ನು ಆಗಾಗ್ಗೆ ಕೊಡದೆ ಇಷ್ಟಕಾರ್ಯವನ್ನು ಪರ್ಯಾಯದಿಂದ ಸಿದ್ಧಿಗೆ ಒಯ್ಯುವದು ಲೇಸು.

(೨) ಒಳ್ಳೇ ನಡತೆಯ ಗೌರವ—ಶಿಕ್ಷಕನು ತಾನು ಸ್ವತಃ ಒಳ್ಳೇ ನಡತೆಯಿಂದ ನಡೆಯುವದಲ್ಲದೆ, ಒಳ್ಳೇ ನಡತೆಗೆ ತಾನು ಮೆಚ್ಚುವನೆಂಬ ನಂಬಿಗೆಯನ್ನು ಹುಟ್ಟಿಸಲಿಕ್ಕೆ ಬೇಕು. ಬುದ್ಧಿಯ ಕೌಶಲ್ಯಕ್ಕೆ ಮಾತ್ರ ಮರ್ಯಾದೆಯುಂಟೆಂದು ಕೆಲವರ ತಿಳುವಳಿಕೆಯುಂಟು. ಆದರೆ ಅದರಷ್ಟೇ ಕಿಂಬಹುನಾ ಅದಕ್ಕೂ ಹೆಚ್ಚು ಮರ್ಯಾದೆಯು ಮೇಲಾದ ನಡತೆಗೆ ಇರುತ್ತದೆ. ಈ ಮಾತು ವಿದ್ಯಾರ್ಥಿಗಳ ನಿದರ್ಶನಕ್ಕೆ ಶಿಕ್ಷಕನು ಪ್ರಯತ್ನಪೂರ್ವಕವಾಗಿ ತಂದುಕೊಟ್ಟರೆ, ಸುಧಾರಣೆಯು ನಿಸ್ಸಂಶಯವಾದದ್ದೂ ಸ್ಥಿರವಾದದ್ದೂ ಆಗುವದು.

೭ ಇನಾಮು—ಇನಾಮುಗಳನ್ನು ಕೇವಲ ಬುದ್ಧಿಯ ತೀವ್ರತೆಗಾಗಿ ಕೊಡತಕ್ಕದ್ದಲ್ಲ. ಮೇಲಾದ ನಡತೆಗಾಗಿಯೂ ಕೊಡತಕ್ಕದ್ದು; ಪ್ರಸಂಗೋಪಾತ್ತಾಗಿ ಮೇಲಾದ ನಡತೆಗಾಗಿಯೇ ಕೊಡತಕ್ಕದ್ದು. ವ್ಯವಹಾರದಲ್ಲಿ ಮೇಲಾದ ನಡತೆಯು ಬಹಳ ಪ್ರಯೋಜನಕರವಾಗಿರುತ್ತದೆ. ಆದ್ದರಿಂದ ಅದಕ್ಕೆ ಉತ್ತೇಜನ ಕೊಟ್ಟಷ್ಟು ಸ್ವಲ್ಪವೇ ಸರಿ. ಕೇವಲ ಬುದ್ಧಿವಂತರಾದ ಹುಡುಗರಿಗೆ ಇನಾಮು ಕೊಡುವದು ಸರಿಯಲ್ಲ. ಆ ಬುದ್ಧಿಯ ಪ್ರವಾಹವು ಚಲೋ ಮಾರ್ಗದಿಂದ ಹರಿದರೆ ಮಾತ್ರ ಅದಕ್ಕೆ ಇನಾಮು ಕೊಡುವದು ಸರಿಯಾ

ಗುವದು. ವ್ಯವಹಾರಕ್ಕೆ ವಿದ್ಯಾರ್ಥಿಯನ್ನು ತಕ್ಕವನನ್ನಾಗಿ ಮಾಡುವದು ಶಿಕ್ಷಣದ ಪ್ರಧಾನೋದ್ದೇಶವು. ಒಳ್ಳೇ ನಡತೆಗಳನ್ನು ಸರ್ವೋಪಾಯಗಳಿಂದ ಸ್ಥಾಪಿಸಲಾಗಿ ಈ ಮಾತು ಕೊನೆಗಾಣುವದು. ಬುದ್ಧಿಶಿಕ್ಷಣದಷ್ಟೇ ನೀತಿಶಿಕ್ಷಣಕ್ಕಾದರೂ ತಾವು ಹೊಣೆಗಾರರಾಗಿರುತ್ತಾರೆಂಬ ಸಂಗತಿಯನ್ನು ಶಿಕ್ಷಕರು ಮರೆಯಲಾಗದು.

೪. ಸತ್ಸಂಗತಿ—ಅನುಕರಣ ಪ್ರವೃತ್ತಿಯ ಮಾರ್ಗದಿಂದ ತಿದ್ದುವಿಕೆಯನ್ನು ನೆಲೆಗೊಳಿಸಬಹುದೆಂದು ೧ನೇ ಕಲಮಿನಲ್ಲಿ ಹೇಳಿರುತ್ತದೆ. ಆ ಸಾಧನದ ಇದು ಎರಡನೇ ಪರ್ಯಾಯವೆನ್ನಬಹುದು. ಸತ್ಸಂಗತಿಯಿಂದ ಒಳ್ಳೇ ವಿಚಾರಗಳೂ ಒಳ್ಳೇ ನಡತೆಗಳೂ ನೆಲೆಗೊಳ್ಳುತ್ತವೆ. ಕುವಿಚಾರಗಳೂ, ಕುಕಲ್ಪನೆಗಳೂ, ಕ್ಷುದ್ರದೃಷ್ಟಿಯೂ ಇವುಗಳ ಸೋಂಕು ಸಹ ತಗಲುವದಿಲ್ಲ. ಆದಕಾರಣ ಒಳ್ಳೇ ನಡತೆಯ ವಿದ್ಯಾರ್ಥಿಗಳ ಸಹವಾಸವು ಚಿಕ್ಕ ಹುಡುಗರಿಗೆ ಆದಷ್ಟು ಒಳ್ಳೇದು ಇದನ್ನು ಪ್ರಯತ್ನಪೂರ್ವಕವಾಗಿ ಸಾಧಿಸತಕ್ಕದ್ದು.

೫. ಸ್ವಾಭಿಮಾನ— ಸ್ವಾಭಿಮಾನವನ್ನು ಆದರದಿಂದ ಎಚ್ಚರಿಸಿ, ವೃದ್ಧಿಗೊಳಿಸತಕ್ಕದ್ದು. ವಿನಯಾತಿರೇಕದಿಂದ ಭಿಡೆಯ ಸ್ವಭಾವವಾಗಲಿ ಕಪಟದ ಸ್ವಭಾವವಾಗಲಿ ಬೆಳೆಯುವ ಅಂಜಿಕೆಯುಂಟು. ಆದರೆ ಈ ಎರಡೂ ದುರ್ಗುಣಗಳು ಹುಟ್ಟದಂತೆ ಪೂರ್ಣವಾಗಿ ಎಚ್ಚರಪಡತಕ್ಕದ್ದು. ಎರಡನೆಯವರಿಗೆ ಬುದ್ಧಿಪೂರ್ವಕವಾಗಿ ಅವಮಾನಿಸುವಂಥ ಅಥವಾ ಮನಸ್ಸು ನೋಯಿಸುವಂಥ ಅವಿನಯದ ದುರ್ಗುಣವು ಹುಟ್ಟದಂತೆ ಎಚ್ಚರಪಟ್ಟರೆ ಸಾಕು. ತನ್ನ ಸ್ವಂತ ಮಾನವನ್ನು ಕಾಯ್ದುಕೊಳ್ಳುವ ಮನುಷ್ಯನಲ್ಲಿ ಪರರ ಮಾನವನ್ನು ಕಾಯುವ ಹಂಬಲವು ತಾನೇ ತಲೆದೋರುತ್ತದೆ.

೬. ಪ್ರವೃತ್ತಿಗಳಿಗೆ ಸರಿಯಾದ ವಳಣವನ್ನು ಹಚ್ಚುವದು:–ಈ ಕೆಲಸವನ್ನು ಶಿಕ್ಷಕರು ಕಾಲಕಾಲಕ್ಕೆ ಆಗ್ರಹಪೂರ್ವಕವಾಗಿ ಮಾಡತಕ್ಕದ್ದು. ಎರಡನೆಯವರ ಮನಸ್ಸನ್ನು ನೋಯಿಸುವಂಥ ಮಾರ್ಗದಿಂದ ವಿದ್ಯಾರ್ಥಿಗಳನ್ನು ತಿರುವಿ ಸನ್ಮಾರ್ಗಕ್ಕೆ ಹಚ್ಚುವದು ಶಿಕ್ಷಕನ ಮಹತ್ವದ ಕಾರ್ಯವು.

ಇದಕ್ಕೆ ಕಾಲಸ್ಥಿತಿಗಳ ನಿರ್ಬಂಧವಿಲ್ಲ. ಭಾರಿಯ ನಿರ್ಬಂಧವೂ ಇಲ್ಲ. ವಿದ್ಯಾರ್ಥಿಗಳು ಸನ್ಮಾರ್ಗಕ್ಕೆ ಹತ್ತುವವರೆಗೆ ಎಷ್ಟು ಆವರ್ತಿ ಆದರೂ ಬೇಸರಿಯದೆ ಅದನ್ನು ಮಾಡಲಿಕ್ಕೇ ಬೇಕು. ಪರರ ಬಗ್ಗೆ ಆದರ ಹಾಗೂ ವಿನಯ ಇವುಗಳನ್ನು ಹುಟ್ಟಿಸಿದಷ್ಟಕ್ಕೆ ತೀರಲಿಲ್ಲ. ಅವನ್ನು ಯುಕ್ತಿಪ್ರಯುಕ್ತಿಯಿಂದ ನೆಲೆಗೊಳಿಸಲಿಕ್ಕೇಬೇಕು. ಈ ಮೇರೆಗೆ ಕೆಲಸವಾದಲ್ಲಿ ವಿದ್ಯಾರ್ಥಿಗಳು ಶಾಂತರೂ ಸುವಿನೀತರೂ ಆಗುವರು. ಅವರು ತಮ್ಮ ನಡೆನುಡಿಗಳಿಂದ ಪರರ ಮನಸ್ಸು ನೋಯದಂತೆ ನಡಕೊಳ್ಳುವದಕ್ಕೆ ಎಚ್ಚರಪಡುವರೆಂಬ ಬಗ್ಗೆ ಸಂದೇಹವಿಲ್ಲ

೩. ಸಾಧುವಾಙ್ಮಯ— ಒಳ್ಳೇ ಪುಸ್ತಕಗಳೇ ವಿದ್ಯಾರ್ಥಿಗಳ ಕೈಗೆ ಬರುವಂತೆ ಮಾಡಬೇಕು. ಸಾಧುಸಜ್ಜನರ ಚರಿತ್ರಗಳನ್ನೂ ಅವರ ಶ್ರೇಷ್ಠವಾದ ವಿಚಾರಗಳನ್ನೂ ಕಲ್ಪನೆಗಳನ್ನೂ ಓದುವದರಿಂದ ಸುಪರಿಣಾಮವಾಗದೆ ಎಂದಿಗೂ ಇರದು. ಈ ರೀತಿ ಸಂಸ್ಕಾರವಾದ ಮನಸ್ಸಿನಲ್ಲಿ ಕುತ್ಸಿತ ವಿಚಾರಗಳೂ ಕುಕಲ್ಪನೆಗಳೂ ಸೇರುವದು ಕಠಿಣವು. ಆದರೆ ಇದಕ್ಕೆ ಕಾಲಾವಧಿ ಬೇಕಾಗುವದು ಪರಿಣಾಮದಲ್ಲಿ ಅಹಿತಕರವಾದಂಥ ಕೆಟ್ಟ ಸಂಗತಿಯೂ ಕೆಟ್ಟ ಪುಸ್ತಕಗಳೂ ಬಲು ಮೋಹಕವಾಗಿರುತ್ತವೆ. ಅವುಗಳ ಗಂಧವಾದರೂ ವಿದ್ಯಾರ್ಥಿಗಳಿಗೆ ಹತ್ತದಂತೆ ಶಿಕ್ಷಕರು ಎಚ್ಚರಪಡತಕ್ಕದ್ದು.

ಶಿಟ್ಟು—೧ ಕಾರಣಗಳು- ದ್ರೋಹ (ನಿಜವಾದದ್ದಾಗಲಿ ಕಾಲ್ಪನಿಕವಾಗಲಿ) ಈರ್ಷೆ, ಅಸೂಯೆ, ಹೊಟ್ಟೇಕಿಚ್ಚು, ಕಿಚ್ಚು, ತಿದ್ದುವಿಕೆಯ ಅಸಹ್ಯವಾದ ನಿರ್ಬಂಧಗಳು, ಸ್ವೇಚ್ಛವಾದ ವರ್ತನವು ಮುಂತಾದ ವಿಶಿಷ್ಟಕಾರಣಗಳಿಂದ ವಿದ್ಯಾರ್ಥಿಗಳಿಗೆ ಶಿಟ್ಟು ಬರುವದು. ಈ ಯಾವತ್ತು ಕಾರಣಗಳನ್ನು ಸೂಕ್ಷ್ಮರೀತಿಯಿಂದ ವಿಚಾರಿಸಲು ತಮಗೆ ಯೋಗ್ಯನ್ಯಾಯ ದೊರೆಯಲಿಲ್ಲೆಂಬ ಭಾವನೆಯೇ ಅವುಗಳ ಮೂಲಕ್ಕೆ ಇರುವದೆಂದು ತೋರುತ್ತದೆ.

೨. ಉಪಾಯ—ಈ ರೀತಿ ನೊಂದ ವಿದ್ಯಾರ್ಥಿಯನ್ನು ಸ

ಮಾಧಾನಗೊಳಿಸುವದು ಸುಲಭವಾದ ಮಾತಲ್ಲ. ಶಿಟ್ಟಿಗೆದ್ದ ವಿದ್ಯಾರ್ಥಿಯ ಮನಸ್ಸೂ ಶರೀರವೂ ಸಗಿಯಾಗಿ ಕ್ಷುಬ್ಧವಾಗಿರುತ್ತವೆ. ಕೋಪಾತಿರೇಕದಿಂದ ಒಮ್ಮೊಮ್ಮೆ ರಕ್ತಾಶಯದ ಕಾರ್ಯವು ಪ್ರತಿಬದ್ಧವಾಗಿ ಮೋರೆಯು ಬಾಡುತ್ತದೆ. ಪಚನಾದಿವ್ಯಾಪಾರಗಳು ಕುಂದುತ್ತವೆ ಒಮ್ಮೊಮ್ಮೆ ಶರೀರದ ವ್ಯಾಪಾರಗಳು ತೀವ್ರವಾಗಿ ನಡೆದು ಮೋರೆಯು ಕೆಂಪಾಗುತ್ತದೆ, ನರಗಳು ಉಬ್ಬುತ್ತವೆ. ರಕ್ತಾಶಯದ ವ್ಯಾಪಾರವು ತೀವ್ರವಾಗಿ ಸಾಗುತ್ತದೆ. ಈ ಎರಡನೇ ತರದ ವ್ಯಾಪಾರವು ಆಗುವದು ಹೆಚ್ಚು ಮತ್ತು ಅಂಥ ಪ್ರಸಕ್ತಿಯಲ್ಲಿ ವಿದ್ಯಾರ್ಥಿಯು ಪೂರ್ಣವಾಗಿ ತನ್ನ ದೇಹಸ್ಥಿತಿಯಲ್ಲಿರುತ್ತಾನೆಂದು ಹೇಳಕೂಡದು.

ಶಿಟ್ಟಿನಿಂದ ಈ ರೀತಿ ಶರೀರಕ್ಷೋಭವಾಗುವದಲ್ಲದೆ ಮನಸ್ಸಾದರೂ ಕ್ಷುಬ್ಧವಾಗುತ್ತದೆ. ತನಗೆ ಅನ್ಯಾಯವಾಯಿತೆಂಬ ಭಾವನೆಯಿಂದ ಮನಸ್ಸು ಕಲುಷಿತವಾಗುತ್ತದೆ. ಶೇಡು ತೀರಿಸುವ ಆತುರವು ನೆಲೆಗೊಳ್ಳುತ್ತದೆ. ಅಪಕಾರಕ್ಕೆ ಮಾಡಿದ ಪ್ರತ್ಯಪಕಾರದಿಂದ ಪರದುಃಖಸುಖಿತತ್ವವೂ ನೆಲೆಗೊಳ್ಳುತ್ತದೆ

ಈ ಮಾತಿನ ಸೂಕ್ಷ್ಮವಿಚಾರ ಮಾಡಲು ಶಿಟ್ಟು ಕಳೆಯುವ ಕೆಲಸದ ಕಾಠಿಣ್ಯವು ವ್ಯಕ್ತವಾಗುತ್ತದೆ. ವಿದ್ಯಾರ್ಥಿಯು ಶಿಟ್ಟಿಗೆದ್ದಾಗ ಅವನನ್ನು ಶಿಕ್ಷಿಸುವದರಿಂದ ಆಗಲಿ ಅವನ ಕೂಡ ವಿವಾದಿಸುವದರಿಂದಾಗಲಿ ಪ್ರಯೋಜನವಿಲ್ಲ. ಇಂಥ ಸಮಯದಲ್ಲಿ ಅವನನ್ನು ಸಮಾಧಾನಗೊಳಿಸಿ ಶರೀರಮನಸ್ಸುಗಳ ಕ್ಷೋಭವನ್ನು ಕಳೆಯುವದು ಪ್ರಥಮಕಾರ್ಯವು. ಇದರ ಇಷ್ಟಸಿದ್ಧಿಯು ವಿದ್ಯಾರ್ಥಿಯ ಸ್ವಭಾವವನ್ನೂ ಶಿಟ್ಟಿನ ಕಾರಣವನ್ನೂ ಅವಲಂಬಿಸಿರುವದು. ಅಕಸ್ಮಾತ್ತಾಗಿ ಘಟಿಸಿದ ತಪ್ಪಿನಿಂದ ಉಂಟಾದ ಮನಸ್ತಾಪವನ್ನು ಕಳೆಯುವದು ಸುಲಭವು; ಆದರೆ ಬುದ್ಧಿಪೂರ್ವಕವಾಗಿ ಮಾಡಿದ ತಪ್ಪಿನ ಪರಿಮಾರ್ಜನವು ಅಷ್ಟು ಸುಸಾಧ್ಯವಲ್ಲ.

ಈ ಸಂಗತಿಗಳನ್ನು ಲಕ್ಷದಲ್ಲಿಟ್ಟು ಶಿಟ್ಟು ಇಳಿದ ಬಳಿಕ ಪುನಃ ವಿದ್ಯಾರ್ಥಿಯು ಆ ಪ್ರಕಾರದ ಮನಸ್ತಾಪಕ್ಕೆ ಒಳ

ಗಾಗದಂತೆ ಕೆಲವು ಮಾರ್ಗದಿಂದ ಪ್ರಯತ್ನಪಡಬಹುದು. ಸಿಟ್ಟು ಇಳಿದ ಕೂಡಲೆ ಪ್ರಯತ್ನ ಮಾಡುವದಾದರೆ ಕೆಳಗಿನ ಉಪಾಯಗಳನ್ನು ಕೈಕೊಳ್ಳಬಹುದು.

(ಅ) ತಪ್ಪು ಮಾಡಿದವನು ತಾನಾಗಿ ತಪ್ಪನ್ನು ಒಪ್ಪಿಕೊಂಡು ಕ್ಷಮೆ ಬೇಡುವಂತೆ ಮಾಡುವದು.

(ಆ) ತಪ್ಪು ಮಾಡಿದವನಿಗೆ ತಪ್ಪನ್ನು ಒಪ್ಪಿಕೊಳ್ಳಲಿಕ್ಕೆ ಹಚ್ಚಿ ಆಗ್ರಹಪೂರ್ವಕವಾಗಿ ಕ್ಷಮೆ ಬೇಡಿಸುವದು.

ಸಿಟ್ಟು ಕಳೆಯುವ ಹಂಚಿಕೆಗಳೂ ಸಿಟ್ಟು ಬಾರದಂತೆ ಮಾಡುವ ಉಪಾಯಗಳೂ.

(೧) ಸಿಟ್ಟು ಇಳಿದ ಬಳಿಕ ವಿದ್ಯಾರ್ಥಿಗಳಿಗೆ ಸಿಟ್ಟಿನ ಘೋರಪರಿಣಾಮಗಳನ್ನು ಶಿಕ್ಷಕರು ತಿಳಿಸತಕ್ಕದ್ದು. ಅದರಿಂದ ಆಗುವ ಸಾಮರ್ಥ್ಯವ್ಯಯವನ್ನೂ ಪರರಿಗೆ ಆಗುವ ನೋವನ್ನೂ ಜನರ ಮನಸ್ಸಿನಲ್ಲಿ ಹುಟ್ಟುವ ಅಪ್ರೀತಿಯನ್ನೂ ಅಪನಂಬಿಗೆಯನ್ನೂ ತಿಳಿಸಿ ಅದರಿಂದ ಹಗೆಗಳು ಹೆಚ್ಚಾಗುತ್ತಾರೆಂಬದನ್ನು ಮನಗಾಣಿಸತಕ್ಕದ್ದು. ಕೋಪಿಗಳನ್ನು ಯಾರೂ ಮೆಚ್ಚುವದಿಲ್ಲೆಂಬದನ್ನು ದೃಷ್ಟಾಂತಿಸುವದು.

(೨) ಇಡೀ ವರ್ಗಕ್ಕೆಲ್ಲ ಶಾಂತಿಕ್ಷಾಂತಿಗಳನ್ನೆಲ್ಲ ತಿಳಿಸಿ ಹೇಳಿ ಪರಪೀಡಾಪರಾಙ್ಮುಖತೆಯನ್ನು ನೆಲೆಗೊಳಿಸತಕ್ಕದ್ದು.

(೩) ವಿದ್ಯಾರ್ಥಿಗಳ ವಿಚಾರಸಾಮರ್ಥ್ಯವನ್ನು ಬೆಳೆಸಿ ಅದರ ಮೂಲಕ ದುರ್ವರ್ತನದಿಂದ ಪರರಿಗೆ ಆಗುವ ದುಃಖವನ್ನು ಕುರಿತು ಮನಗಾಣಿಸಿ ಪರಪೀಡೆಯ ಅಂಕುರಗಳನ್ನೇ ಕಿತ್ತುಹಾಕತಕ್ಕದ್ದು

(೪) ಸಿಟ್ಟಿಗೆದ್ದ ಮನುಷ್ಯನ ಗೋಜಿಗೆ ಹೋಗದಿರುವದೇ ಒಂದು ಮೇಲ್ತರದ ಉಪಾಯ ಉಂಟು. ಯಾಕೆಂದರೆ ಸಿಟ್ಟಿನ ಬೆನ್ನಹಿಂದೆ ಪಶ್ಚಾತ್ತಾಪದ ಶಾಸನವು ಇದ್ದೇಇರುತ್ತದೆ. ಅದರಿಂದ ಶಿಕ್ಷಕರು ಸಿಟ್ಟಿಗೆದ್ದ ವಿದ್ಯಾರ್ಥಿಯ ಗೋಜಿಗೆ ಹೋಗದೆ ಇರುವದೇ ಒಂದು ಪ್ರಶಸ್ತವಾದ ಉಪಾಯವಾಗಿರುತ್ತದೆ.

(೫) ಸಿಟ್ಟಿಗೆದ್ದ ಹುಡುಗನು ಅದರ ಮೂಲಕ ಬೇರೆಯವರಿಗೆ ಕೇಡು ಮಾಡುವ ಪ್ರಸಂಗವು ತೋರಿದರೆ ಮಾತ್ರ ನಿಷ್ಠು

ರತೆಯನ್ನು ಅವಲಂಬಿಸಿಯಾದರೂ ಅವನನ್ನು ನಿರಾಕರಿಸತಕ್ಕದ್ದು.

(೬) ಶಿಟ್ಟು ಇಳಿದ ಬಳಿಕ ವಿದ್ಯಾರ್ಥಿಗಳಿಗೆ ನಾಲ್ಕು ಬುದ್ಧಿಮಾತುಗಳನ್ನು ಹೇಳಿ ವಿಕಾರವಶವಾಗುವದಕ್ಕಿಂತ ಮನೋವಿಕಾರಗಳನ್ನು ತನ್ನ ಸ್ವಾಧೀನದಲ್ಲಿರಿಸುವದು ಶ್ರೇಯಸ್ಕರವಾದ ಸಂಗತಿಯೆಂಬದನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡತಕ್ಕದ್ದು. ಕೋಪಿಗಳನ್ನು ಯಾರೂ ಮೆಚ್ಚಲಾರರು; ಕೋಪವು ಒಂದು ತರದ ಹುಚ್ಚು ಎಂದು ಜನರು ಎಣಿಸುತ್ತಾರೆ ಎಂಬ ಸಂಗತಿಗಳನ್ನು ತಿಳಿಸಿಹೇಳಬೇಕು.

SELECTIONS FROM THE KARNATIK GAZETTEER.

ಕನ್ನಡ ಗಝೇಟಿಯರದಿಂದ ಅವತರಣಗಳು.

(೧೧೬ ನೇ ಪುಟದಿಂದ ಮುಂದೆ ಸಾಗಿದ್ದು.)

ಶಂಕರನಾರಾಯಣನ ಗುಡಿಯ ಎದುರಿಗೆ ಜ್ಞಾನಮಂಟಪ, ವೈರಾಗ್ಯಮಂಟಪ, ಮುಕ್ತಿಮಂಟಪ ಎಂಬ ಮೂರು ಮಂಟಪಗಳಿರುತ್ತವೆ. ಕೋಟಿ ತೀರ್ಥದ ಆಗ್ನೇಯ ಮೂಲೆಯ ಎದುರಿಗೆ ಮೇಲೆ ಹೇಳಿದ ಶತಶೃಂಗಿ ಎಂಬ ಗುಡ್ಡದ ಉತ್ತರದ ಇಳಕಲಿನ ಮೇಲೆ ನಾರಸಿಂಹನ ಗುಡಿಯುಂಟು. ಕೋಟಿತೀರ್ಥದ ದಕ್ಷಿಣಕ್ಕೆ ಅಗಸ್ತ್ಯನ ಗವಿ, ಸುಮಿತ್ರನ ಗವಿ, ಗಂಗಾತೀರ್ಥ ಇರುತ್ತವೆ. ಶತಶೃಂಗಿಯ ಮೇಲೆ ಗೋಗರ್ಭ ತೀರ್ಥ, ಬ್ರಹ್ಮಕಮಂಡಲು ತೀರ್ಥ, ಮಹೇಶ್ವರ ವನಗಳು ಇರುತ್ತವೆ; ಮತ್ತೂ ಆ ಗುಡ್ಡದ ಅಡಿಯಲ್ಲಿ ಮಾಲಿನಿ ಸುಮಾಲಿನಿ, ಸೂರ್ಯ, ಚಂದ್ರ, ಅನಂತ ಎಂಬ ತೀರ್ಥಗಳಿವೆ. ಗೋಕರ್ಣದಲ್ಲಿ ಅಹಲ್ಯಾಬಾಯಿಯು ಕಟ್ಟಿಸಿದ್ದೊಂದು ಗುಡಿ (ಛತ್ರ) ಉಂಟು.

ಲಿಪಿಗಳು—ಮಹಾಬಲೇಶ್ವರ, ನಾರಸಿಂಹ, ಹನುಮಂತ, ವಿಠ್ಠಲ, ತಾಮ್ರಗೌರಿ ಎಂಬ ದೇವಸ್ಥಾನಗಳಲ್ಲಿ ಒಂದೊಂದು, ಮೂವರು ಬ್ರಾಹ್ಮಣರ ಮನೆಗಳಲ್ಲಿ ಒಂದೊಂದು ಅಂ

ತು ಎಂಟು ಲಿಪಿಗಳು ಗೋಕರ್ಣದಲ್ಲಿ ಇರುತ್ತವೆ. ಕಾಮೇಶ್ವರವೆಂಬ ಮಠದಲ್ಲಿ ಇರುವ ಬಹು ಪುರಾತನ ಕಾಲದ ಲಿಪಿಯು ಕಲಿ ಕಾಲದ ೧೨೦ ನೇ ವರ್ಷ, ಅಂದರೆ ಕ್ರಿಸ್ತೀ ಶಕದ ಪೂರ್ವದಲ್ಲಿ ೨೯೮೨ ನೇ ವರ್ಷ, ಕದಂಬ ಚಕ್ರವರ್ತಿಯೆಂಬ ಅರಸು ಬರಿಸಿದ್ದಿರುತ್ತದೆ. ಇದರ ಮಿತಿಯನ್ನು ಓದುವವರಲ್ಲಿ ತಪ್ಪಾಗಿರಬಹುದು, ಅಥವಾ ಈ ಲೇಖವು ಖೊಟ್ಟಿ ಇರಬಹುದೆಂದು ತೋರುತ್ತದೆ ಆದರೆ ಈ ಕದಂಬ ಚಕ್ರವರ್ತಿಯ ಲಿಪಿಯು ಶಾಲಿವಾಹನ ಶಕದ ೯೦ ನೇ ವರ್ಷದಲ್ಲಿ ಬರಿಸಿದ್ದಿರುತ್ತದೆಂದು ಬೇರೊಬ್ಬ ಶೋಧಕನು ತಿಳಿಸುತ್ತಾನೆ. ಈ ಮಿತಿಯು ನಿಜವಾದರೆ ಬನವಾಸಿಯ ಶತ್ಕರ್ಣಿಯ ಲಿಪಿಗೆ ಈ ಕದಂಬ ಚಕ್ರವರ್ತಿಯ ಲಿಪಿಯು ಬಲ ಕೊಡುತ್ತದೆ; ಅಂದರೆ ಶಾಲಿವಾಹನ ಶಕದ ಆರಂಭದಲ್ಲಿ ಬನವಾಸಿಯಲ್ಲಿ ಕದಂಬ ಅರಸರು ಸಾಮ್ರಾಜ್ಯಪದವನ್ನು ಆಳುತ್ತಿದ್ದರೆಂದು ಸಿದ್ಧವಾಗುತ್ತದೆ. ಮಿಕ್ಕ ಲಿಪಿಗಳು ಬಹುತರ ಯಾವತ್ತು ವಿಜಯನಗರದ ಅರಸರು ಬರಿಸಿದವು, ಅಂದರೆ ೧೪ ನೇ ಶತಕದ ಈಚೆಯಲ್ಲಿ ಆದಂಥವು ಇರುತ್ತವೆ.

ಇತಿಹಾಸ—ಗೋಕರ್ಣದ ಹೆಸರು ರಾಮಾಯಣದಲ್ಲಿ ಇರುತ್ತದೆ. ಭಗೀರಥ ರಾಜನು ಗೋಕರ್ಣದಲ್ಲಿ ತಪಶ್ಚರ್ಯ ಮಾಡಿದನೆಂತಲೂ, ರಾವಣನು ಜನಸ್ಥಾನದಿಂದ ಗೋಕರ್ಣದ ಮಾರ್ಗವಾಗಿ ಒಮ್ಮೆ ಲಂಕೆಗೆ ಹೋದನೆಂತಲೂ ಬರಿದದೆ ಇದರಿಂದ ರಾವಣನು ಮಹಾಬಲೇಶ್ವರನನ್ನು ಸ್ಥಾಪಿಸಿದನೆಂಬ ಮಾತು ನಿಜವಿರಬಹುದೆಂದು ತೋರುತ್ತದೆ. ಮಹಾಭಾರತದಲ್ಲಿ ಗೋಕರ್ಣವು ಅತಿ ವಿಖ್ಯಾತವಾದ ಕ್ಷೇತ್ರವೆಂದು ಹೇಳಲ್ಪಟ್ಟದೆ. ಕ್ರಿಸ್ತೀ ಶತಕದ ೮ ನೇ ಶತಕದಲ್ಲಿ ಲೋಕಾದಿತ್ಯನೆಂಬ ಅರಸು ಗೋಕರ್ಣದ ಸೀಮೆಯನ್ನು ಆಳುತ್ತಿದ್ದನೆಂದು ತಿಳಿದದೆ. ವಿಜಯನಗರದ ಅರಸರು ಗೋಕರ್ಣದೊಳಗಿನ ಹಲವು ದೇವಸ್ಥಾನಗಳಿಗೆ ಇನಾಮುಗಳನ್ನು ಕೊಟ್ಟ ಲೇಖಗಳು ಇರುತ್ತವೆ. ಸನ್ ೧೬೭೬ ರಲ್ಲಿ ಫ್ರಾಯರನೆಂಬ ಇಂಗ್ಲಿಷ ಪ್ರವಾಸಿಯು ಅರಬರ ವೇಷ ಹಾಕಿಕೊಂಡು ಗೋಕರ್ಣದ ರಥೋತ್ಸವವನ್ನು ನೋಡಿ ವಿಸ್ತಾರ

ವಾಗಿ ವರ್ಣಿಸಿದ್ದಾನೆ. ದೇವರ ರಥದ ಮುಂದೆ ಬಹು ಜನ ಭಕ್ತರು ತಮ್ಮನ್ನು ತಾವೇ ಚೂಣ್ಣಿಗಳಿಂದ ಬಡಿದುಕೊಳ್ಳುತ್ತಲೂ ತಮ್ಮ ಮೈಗೆ ನಾನಾ ಪ್ರಕಾರದ ವ್ಯಥೆಗಳನ್ನು ಮಾಡಿಕೊಳ್ಳುತ್ತಲೂ ನಡಿಯುತ್ತಿದ್ದರೆಂತಲೂ ಇವನು ಬರಿದಿದ್ದಾನೆ. ಸ. ೧೮೦೧ರಲ್ಲಿ ಬುಕ್ಯಾನನ್ನ ಧೊರೆಯು ಗೋಕರ್ಣಕ್ಕೆ ಹೋದಾಗ ಅಲ್ಲಿ ೫೦೦ ಮನೆಗಳಿದ್ದವು; ವ್ಯಾಪಾರವು ತಕ್ಕ ಮಟ್ಟಿಗೆ ನಡಿಯುತ್ತಿತ್ತು. ಊರಿನ ಸುತ್ತು ಮುತ್ತು ಬತ್ತದ ಗದ್ದೆಗಳೂ ತೆಂಗಿನ ಬನಗಳೂ ವಿಸ್ತಾರವಾಗಿ ಹಬ್ಬಿದ್ದವು.

ಮಿರ್ಜಾನ—ಕುಮಟೆಯ ಉತ್ತರಕ್ಕೆ ೫ ಮೈಲಿನ ಮೇಲೆ ತದಡೀ ಹೊಳೆಯ ಮುಖದ ದಂಡೆಯಲ್ಲಿ, ಜ. ಸ. (೮೧) ೧೦೫೯. ಇದು ಪುರಾತನ ಕಾಲದಲ್ಲಿ ಹೆಸರಾದ ಬಂದರವು; ಆದರೆ ಈಗ ಮೂರು ಸಣ್ಣ ಸಣ್ಣ ಹಳ್ಳಿಗಳು ಕೂಡಿ ಈ ಗ್ರಾಮವಾಗಿದೆ. ಈ ಮೂರು ಹಳ್ಳಿಗಳ ನಡುವೆ ವೃಕ್ಷಗಳ ಬನದೊಳಗೆ ಕೋಟೆಯುಂಟು. ಇದನ್ನು ವಿಜಾಪುರದವರ ಸರದಾರನೊಬ್ಬನು ಕಟ್ಟಿಸಿದನೆಂದು ಹೇಳುತ್ತಾರೆ. ಸರ್ಪನ ಮಲಿಖನೆಂಬ ಮುಸಲ್ಮಾನನು ಇದನ್ನು ಕಟ್ಟಿಸಿದನೆಂದು ಕೆಲವರು ಹೇಳುತ್ತಾರೆ. ಇವನು ಚಿಕ್ಕವನಿದ್ದಾಗ ಹೆಬ್ಬಾರನೆಂಬ ಹೈಗ ಬ್ರಾಹ್ಮಣನ ದನ ಕಾಯುತ್ತಿದ್ದನಂತೆ. ಒಂದು ದಿನ ದನಗಳು ವ್ಯಾಳ್ಯಕ್ಕೆ ಮನೆಗೆ ಬಾರದ್ದರಿಂದ ಹೆಬ್ಬಾರನು ಮಲಿಖನನ್ನು ಹುಡುಕುತ್ತಿರಲಾಗಿ, ಅವನು ಒಂದು ಅರಳಿಯ ಮರದ ಕೆಳಗೆ ನಿದ್ದೆ ಹತ್ತಿ ಮಲಗಿದ್ದು, ಅವನ ತಲೆಗೆ ಒಂದು ನಾಗರಹಾವು ಸುತ್ತಿಕೊಂಡು ಹೆಡೆ ತೆಗೆದು ಆಡುತ್ತಿದ್ದದ್ದನ್ನು ಕಂಡನು. ಹೆಬ್ಬಾರನನ್ನು ನೋಡಿ ಹಾವು ಹೊರಟು ಹೋಯಿತು. ಹೆಬ್ಬಾರನು ಮಲಿಖನನ್ನೂ ದನಗಳನ್ನೂ ಕರಕೊಂಡು ಮನೆಗೆ ಹೋದನು. ಮಲಿಖನು ಬರಬರುತ್ತಾ ಪ್ರಬಲನಾಗಿ ಮೈಸೂರಿನ ಶೀಮೆಗೆ ಹೋಗಿ ಕೆಲವು ದಂಡು ತಕ್ಕೊಂಡು ಬಂದು ಮಿರ್ಜಾನದ ನೆರೆಹೊರೆಯ ಶೀಮೆಯನ್ನು ಆಕ್ರಮಿಸಿದನು. ಇವನು ಮಿರ್ಜಾನದ ಕೋಟೆಯನ್ನೂ ಅಂಕೋಲೆಯ ಕೋಟೆಯನ್ನೂ ಕಟ್ಟಿಸಿ, ಮಿರ್ಜಾನದಲ್ಲಿ ಆಳಿದನು. ಈ ಸರ್ಪನ ಮಲಿಖನು ತನ್ನ ಮೊದಲಿನ

ಒಡಿಯನಾದ ಹೆಬಾರನಿಗೆ ಅಚವೆ ಎಂಬ ಹಳ್ಳಿಯನ್ನು ಇನಾಮು ಕೊಟ್ಟನು. ಹೆಬ್ಬಾರನು ಮಲಿಖನು ಮಲಗಿದ ಅರಳೆಯ ಮರಕ್ಕೆ ಕಟ್ಟೆಯನ್ನು ಕಟ್ಟಿಸಿ, ಅಲ್ಲಿ ಪ್ರತಿವರ್ಷ ದಸರೆಯಲ್ಲಿ ಕತ್ತಿ ಮುಂತಾದ ಆಯುಧಗಳನ್ನು ಪೂಜಿಸಿ ಉತ್ಸವ ಮಾಡಹತ್ತಿದನು.

ಇತಿಹಾಸ—ಕ್ರಿಸ್ತೀ ಶಕದ ಮೊದಲಿನ ಮೂರು ಶತಕಗಳಲ್ಲಿ ಗ್ರೀಸ ದೇಶದಿಂದಲೂ ರೋಮ ಪಟ್ಟಣದಿಂದಲೂ ವರ್ತಕರು ಹಿಂದುಸ್ತಾನದ ಪಶ್ಚಿಮ ದಂಡೆಯಲ್ಲಿ ಮುಝುರಿಸ ಎಂಬ ಹೆಸರಾದ ಬಂದರಕ್ಕೆ ಬರುತ್ತಿದ್ದರೆಂದು ಹೇಳಿ, ಪ್ಲಿನೀ, ಪ್ರುಟಿಂಜರ, ತಾಲೆಮಿ, ಆರ್ಯನ್ ಎಂಬ ಪ್ರಾಚೀನ ಗ್ರಂಥಕರ್ತರು ಆ ಮುಝುರಿಸ ಬಂದರವನ್ನು ಬಹಳವಾಗಿ ವರ್ಣಿಸಿದ್ದಾರೆ. ಈ ಗ್ರಂಥಕರ್ತರು ಕ್ರಮವಾಗಿ ಕ್ರಿಸ್ತೀ ಶಕದ ೭೭ ನೇ, ೧೦೦ ನೇ, ೧೫೦ ನೇ ೨೪೭ನೇ ವರ್ಷಗಳಲ್ಲಿ ತಮ್ಮ ಗ್ರಂಥಗಳನ್ನು ಬರಿದಿದ್ದಾರೆ. ಈ ಮುಝುರಿಸ ಬಂದರವೇ ಮಿರ್ಜಾನವೆಂದು ಶೋಧಕರು ತರ್ಕಿಸುತ್ತಾರೆ. ಆದರೆ ೩ ನೇ ಶತಕದ ಈಚೆಯಲ್ಲಿ ವಿಜಯನಗರದ ಬೆಳುವಣಿಗೆಯ ಕಾಲದ ವರೆಗೆ ಮಿರ್ಜಾನದ ಬಂದರವು ಯಾವ ಬಗೆಯಿಂದಲೂ ಹೆಸರಿಗೆ ಬಂದಂತೆ ತೋರುವದಿಲ್ಲ. ವಿಜಯನಗರದವರ ಆಳಿಕೆಯಲ್ಲಿ ಹೊನ್ನಾವರದ ಸುಭೇದಾರನ ಕೈಕೆಳಗೆ ಮಿರ್ಜಾನವಿತ್ತು. ಪೋರ್ತುಗೀಸರು ಆಗಾಗ್ಗೆ ಮಿರ್ಜಾನದಲ್ಲಿ ಜಗಳವನ್ನು ಹೂಡುವರು. ಮಿರ್ಜಾನವು ವಿಜಾಪುರದ ರಾಜ್ಯಕ್ಕೂ ಕೆಲವು ದಿವಸ ಸೇರಿತ್ತೆಂದು ತೋರುತ್ತದೆ. ಸರ್ ೧೬೬೦ ರಲ್ಲಿ ಇದು ಬೇದನೂರಿನ ರಾಜ್ಯಕ್ಕೆ ಶೇರಿತ್ತು. ಬೇದನೂರು ಹಾಳಾದ ಬಳಿಕ ಇದು ಹೈದರನ ಕೈಶೇರಿತು.

ಸಾಣೀಕಟ್ಟೆ—ಕುಮಟೆಯ ಉತ್ತರಕ್ಕೆ ೧೦ ಮೈಲಿನ ಮೇಲೆ ಕಾನಡಾ ಜಿಲ್ಲೆಯಲ್ಲಿ ಈಗ ಉಪ್ಪು ಮಾಡುವ ಕಾರಖಾನೆಯು ಇದೊಂದೇ ಊರಲ್ಲಿ ಇರುತ್ತದೆ. ಇಲ್ಲಿ ೧೨೮ ಆಗರಗಳಲ್ಲಿ ಕೂಡಿ ೧೯೪೦೦ ಮೊಳೆಗಳಲ್ಲಿ ಉಪ್ಪು ಮಾಡುತ್ತಾರೆ. ಉಪ್ಪು ಮಾಡುವ ನಾಡೋರರು ಮುಂತಾದ ಜಾತಿಯವರು ತಮ್ಮ ಆಗರುಗಳು ಆಕ್ರಮಿಸಿದ ಸ್ಥಳಕ್ಕಾ

ಗಿ ಸರಕಾರಕ್ಕೆ ಎಕರೆಗೆ ಸುಮಾರು ೩ ರೂಪಾಯಿಯಂತೆ ತೆರಿಗೆಯನ್ನು ಕೊಡುತ್ತಾರೆ. ಈ ೧೨೮ ಆಗರುಗಳಲ್ಲಿ ಪ್ರತಿ ವರ್ಷ ೬೫೫೫ ಟನ್ನು ಅಂದರೆ ೨೬೨೨೦ ಖಂಡಗ ಉಪ್ಪು ಹುಟ್ಟುತ್ತದೆ.

ಯಾನ ಅಥವಾ ಭೈರವ ಕ್ಷೇತ್ರ—ಕುಮಟೆಯ ಈಶಾನ್ಯಕ್ಕೆ ೧೫ ಮೈಲಿನ ಮೇಲೆ, ದೇವಿಮನೀ ಘಟ್ಟಕ್ಕೂ ವಡ್ಡೀ ಘಟ್ಟಕ್ಕೂ ನಡುವೆ, ಹೆಸರಾದ ದೇವಸ್ಥಾನವು. ವಡ್ಡೀ ಘಟ್ಟದಿಂದ ಸುಮಾರು ೩ ಮೈಲಿನ ಮೇಲೆ ಒಂದು ಗುಡ್ಡದ ಇಳಕಲಿನಲ್ಲಿ ಸುಮಾರು ೧೨೦ ಫೂಟು ಉದ್ದ, ೧೦ ಫೂಟು ಅಗಲು, ೧೦ ಫೂಟು ಎತ್ತರ ಇರುವದೊಂದು ಗವಿಯುಂಟು. ಈ ಗವಿಯ ಮಧ್ಯಭಾಗದಲ್ಲಿ ಒಂದು ಕಣಶಿಲೆಯ ಲಿಂಗವಿರುತ್ತದೆ. ಮೇಲಿನ ಛಾವಣಿಯೊಳಗಿಂದ ಈ ಲಿಂಗದ ಮೇಲೆ ಸಣ್ಣ ನೀರಿನ ಧಾರೆಯು ಸರ್ವಕಾಲವೂ ಬೀಳುತ್ತಿರುತ್ತದೆ. ಈ ಲಿಂಗಕ್ಕೆ ಭೈರವೇಶ್ವರನೆನ್ನುವರು. ಈ ಗವಿಯಲ್ಲಿಯೇ ಹೈಗ ಜಾತಿಯ ಪೂಜಾರಿಗಳು ಕುಟುಂಬ ಸಹಿತವಾಗಿ ವಾಸಿಸುತ್ತಾರೆ. ಈ ದೇವಸ್ಥಾನಕ್ಕೆ ಸರಕಾರದಿಂದ ೬೦ ರೂಪಾಯಿಯ ನೇಮಣೂಕು ನಡೆಯುತ್ತದೆ. ಈ ಗವಿಯ ಬಳಿಯಲ್ಲಿ ಮತ್ತೊಂದು ಸಣ್ಣ ಗವಿಯೊಳಗೆ ೯ ಫೂಟು ಎತ್ತರವಾದ ಚಂಡಿಮಮ್ಮನೆಂಬ ದೇವತೆಯ ಎರಕಿನ ಮೂರ್ತಿಯುಂಟು. ಈ ಮೂರ್ತಿಗೆ ಭಕ್ತರು ಪಾರ್ವತಿಯೆನ್ನುವರು. ಮಾಘವದ್ಯ ದ್ವಾದಶಿಯಲ್ಲಿ ಈ ಭೈರವೇಶ್ವರನ ಜಾತ್ರೆಯಾಗುತ್ತದೆ. ಸುಮಾರು ೧೦೦೦ ಜನ ಕೂಡಿ ೫೦೦ ರೂಪಾಯಿಯ ವರೆಗೆ ಮಾರಾಟವಾಗುತ್ತದೆ.

ಈ ಯಾನ ಗವಿಯು ಮೊದಲು ಅತಿ ಸುಂದರವಾಗಿ ಇತ್ತೆಂತಲೂ, ಅದರಲ್ಲಿ ಚಿನ್ನವೂ ರತ್ನಗಳೂ ತುಂಬಿದ್ದವೆಂತಲೂ, ರಕ್ತಾಕ್ಷ ಕೃಷ್ಣಾಕ್ಷರೆಂಬ ಇಬ್ಬರು ಅಣ್ಣತಮ್ಮಂದಿರಾದ ದೈತ್ಯರು ಈ ಗವಿಯನ್ನು ಆಕ್ರಮಿಸಿದ್ದರಿಂದ ಶಿವನು ಯುದ್ಧ ಮಾಡಿ ಅವರನ್ನು ಓಡಿಸಿದನೆಂತಲೂ ಸಹ್ಯಾದ್ರಿ ಖಂಡದಲ್ಲಿ ಬರಿದದೆ.

ತದಡಿ—ಕುಮಟೆಯ ಉತ್ತರಕ್ಕೆ ೬ ಮೈಲಿನ ಮೇಲೆ,

ಸಣ್ಣ ಬಂದರವು, ತಪಡೀ ಹೊಳೆಯ ಮುಖದ ದಂಡೆಯಲ್ಲಿ, ಈ ಊರಲ್ಲಿ ರೋಗೋಪದ್ರವವು ವಿಶೇಷವಿರುತ್ತದೆ.

(ಸಶೇಷ.)

DHARWAR TRAINING COLLEGE CERTIFICATE EXAMINATION.–1898.

ಕಾಲೇಜಿದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

೩ ನೇ ವರ್ಷ

ಶಿಕ್ಷಣಶಾಸ್ತ್ರ.

೧. ಮಾದರಿ ತಕ್ಕೊಳ್ಳತಕ್ಕಂಥ ಶಿಕ್ಷಕನ ಗುಣಗಳು ಎರಡು ಸದರಿನಲ್ಲಿ ಶೇರಿಸಲ್ಪಡುವವು. ಆ ಸದರುಗಳು ಯಾವವು? ಈ ಗುಣಗಳಿಂದ ಶಿಕ್ಷಣದ ಮೂರು ಅಂಗಗಳ ಸರಿಯಾದ ವ್ಯವಸ್ಥೆ ಹ್ಯಾಗಾಗುವದು?

೨. ವ್ಯವಸ್ಥೆಯಿಲ್ಲದ ಸಾಲೆಯಲ್ಲಿ ಹುಡುಗರಿಗೆ ಹತ್ತುವ ಕೆಟ್ಟ ನಡತೆಗಳು ಯಾವವು? ಇಂಥ ಸಾಲಿಗೆ ನಿಮ್ಮನ್ನು ನೇಮಿಸಲಾಗಿ ನೀವು ಕೆಲಸವನ್ನು ಹ್ಯಾಗೆ ಸಾಗಿಸುವಿರಿ?

೩. ಪ್ರವೃತ್ತಿಗಳು ಎಷ್ಟು ಪ್ರಕಾರದವು? ಯಾವವು? ಫೌಲರನು ವಿವರಿಸಿದ ವಲವುಗಳನ್ನು ಯಾವ ಪ್ರಕಾರದಲ್ಲಿ ಸೇರಿಸುವಿರಿ? ಪೂಜ್ಯಬುದ್ಧಿ ಅಥವಾ ಆದರ ಎಂಬ ಪ್ರವೃತ್ತಿಯನ್ನು ಸರಿಯಾಗಿ ತಿದ್ದುವದರಿಂದಾಗುವ ಸುಪರಿಣಾಮಗಳನ್ನು ವಿವರಿಸಿರಿ?

೪. “ಉಲ್ಲಾಸವೃತ್ತಿಯನ್ನೂ ಉದ್ಯೋಗವನ್ನೂ ಆದರದಿಂದ ಶಿಕ್ಷಕರು ಬೆಳಿಸತಕ್ಕದ್ದು” ಇದನ್ನು ಕುರಿತು ನಿಮ್ಮ ಅಭಿಪ್ರಾಯವೇನು?

೫. ಬಡವೆಪಾಠಗಳಿಂದ ಪ್ರಯೋಜನವೇನು? ಆರಂಭದ ಬಡವೆಪಾಠಗಳನ್ನು ಕಲಿಸುವಾಗ ಯಾವ ಸಾಮರ್ಥ್ಯಗಳನ್ನು ಬೆಳಿಸುವಿರಿ ಯಾವ ನಿಯಮಗಳನ್ನು ಅನುಸರಿಸುವಿರಿ?

ವಿದ್ಯಾರ್ಥಿಗಳು ಏನೂ ಪಾಠಮಾಡತಕೂಡದೆಂಬ ಅಭಿಪ್ರಾಯವು ಭ್ರಾಂತಿಮೂಲಕವಾದದ್ದೆಂದು ಮಗ್ಗಿಗಳ ಉದಾಹರಣೆಯಿಂದ ಸಿದ್ಧಮಾಡಿರಿ. ಶಾಬ್ದಿಕ ಸ್ಮರಣಶಕ್ತಿಗೂ ತಾತ್ವಿಕ ಸ್ಮರಣಶಕ್ತಿಗೂ ಇರುವ ಭೇದವನ್ನು ವಿವರಿಸಿರಿ.

೭. ಪಾಠದ ಟಿಪ್ಪಣೆಗಳಿಂದ ಶಿಕ್ಷಣಕ್ಕೆ ಆಗುವ ಸಹಾಯವನ್ನು ಹೇಳಿರಿ. ನಿಮ್ಮ ಜಿಲ್ಲೆಯ ನಕಾಶವನ್ನು ಕಲಿಸುವದೆಂದು ಕಲ್ಪಿಸಿ ಪಾಠದ ಟಿಪ್ಪಣೆಗಳನ್ನು ಸಿದ್ಧಪಡಿಸಿರಿ.

೮. ತ್ರಿರಾಸಿಯನ್ನು ಕಲಿಸುವ ಎರಡು ರೀತಿಗಳು ಯಾವವು? ಯಾವದು ಚಲೋದು? ಯಾಕೆ? ಗುಣೋತ್ತರದ ರೀತಿಯನ್ನು ಕುರಿತು ಪಾಠದ ಟಿಪ್ಪಣೆಗಳನ್ನು ತಯಾರಿಸಿರಿ.

೯. ವರ್ಗೀಕರಣದ ತತ್ವಗಳನ್ನೂ ಅದರಿಂದಾಗುವ ಲಾಭಗಳನ್ನೂ ವಿವರಿಸಿರಿ. ಕವಾಯತಿನ (ಡ್ರಿಲ್ಲಿನ) ಪ್ರಯೋಜನಗಳನ್ನೂ ಹೇಳಿರಿ.

೧೦. ಮಾಸ್ತರರ ಕೈಗೆ ಬರತಕ್ಕ ಹಣಾ ಎಷ್ಟು ಪ್ರಕಾರದ್ದು? ಅದರ ವ್ಯವಸ್ಥೆಯನ್ನು ಕುರಿತು ನಿಯಮಗಳು ಯಾವವು?

೨ನೇ ವರ್ಷ.

ಶಿಕ್ಷಣಶಾಸ್ತ್ರ.

೧. ಶಿಕ್ಷಣದ ವ್ಯಾಪಕಾರ್ಥವೇನು? ಯಾವದೊಂದು ಹೋರೆಯಲ್ಲಿ ಯಶಪಡಿಯಬೇಕಾದರೆ ಅವಶ್ಯವಾದ ಗುಣಗಳು ಯಾವವು? ಶಿಕ್ಷಕನಿಗೆ ಯಾವ ಗುಣಗಳು ವಿಶೇಷವಾಗಿ ಬೇಕು?

೨. ಬಲವುಗಳು ಎಷ್ಟು? ಬಲವುಗಳ ಜ್ಞಾನದಿಂದ ಅಧ್ಯಾಪನಕ್ಕೆ ಸಹಾಯವು ಹ್ಯಾಗಾಗುತ್ತದೆ ಉದಾಹರಣೆ ಕೊಟ್ಟು ವಿವರಿಸಿರಿ.

೩. ಅಧ್ಯಾಪನ ಸಂಬಂಧದಿಂದ ಶಿಕ್ಷಕನು ಮಾಡತಕ್ಕ ಕೆಲಸಗಳು ಯಾವವು? ಲಕ್ಷದ ಚಟವನ್ನು ಹ್ಯಾಗೆ ಬೆಳಿಸಬಹುದು?

೪. ಶಾಲೆಯಲ್ಲಿ ನಡೆಯತಕ್ಕ ವಾಡಿಕೆಯ ಅಭ್ಯಾಸಗಳು ಯಾವವು? ಬುದ್ಧಿಸಾಮರ್ಥ್ಯಗಳನ್ನನುಲಕ್ಷಿಸಿ ಈ ಅಭ್ಯಾಸಗಳನ್ನು ಯಾವ ಕ್ರಮದಿಂದ ನಡೆಸುವಿರಿ?

೫. ಸ್ಮರಣಸಾಮರ್ಥ್ಯವನ್ನು ಕುರಿತು ನಿಯಮಗಳು ಯಾವವು?

೬. ಕವಿತೆಗಳನ್ನು ಪಾಠಮಾಡಿಸುವ ಪೂರ್ವದಲ್ಲಿ ಯಾವ ಕೆಲಸಗಳನ್ನು ಮಾಡುವಿರಿ. ಯಾಕೆ? ಉಕ್ತ ಲೇಖನದ ಪ್ರಯೋಜನಗಳು ಯಾವವು, ಯಾವಾಗಲೂ ಪಾಟಿಯ ಮೇಲೆಯೇ ಬರಿಸುವದರಿಂದ ಆಗುವ ನಷ್ಟಗಳು ಯಾವವು?

೭. (ಅ) ತೋಳ (ಬ) ತಾಮ್ರ (ಕ) ಕಬ್ಬು (ಡ) ಸೂಜಿ (ಇ) ವ್ಯವಹಾರಿ ಅಪೂರ್ಣಾಂಕ (ಫ) ಅಕಬರ (ಗ) ಕೃಷ್ಣಾ ನದಿ ಇವುಗಳಲ್ಲಿ ಒಂದು ವಿಷಯವನ್ನು ಕುರಿತು ಪಾಠದ ಟಿಪ್ಪಣಿಗಳನ್ನು ಬರೆಯಿರಿ.

೮. "ವಿದ್ಯಾರ್ಥಿಗಳು ಸಾಲಿಗೆ ಮೆಚ್ಚುವಂತೆ ಮಾಡಿರಿ" ಎಂದು ಬಲ್ಲವರು ಹೇಳುತ್ತಾರೆ. ಇದನ್ನು ಹ್ಯಾಗೆ ಮಾಡತಕ್ಕದ್ದು ಅದರಿಂದ ಪ್ರಯೋಜನವೇನು ವಿವರಿಸಿರಿ.

೯. ಹಿರೆಮಣಿ ಪದ್ಧತಿಯ ಗುಣದೋಷಗಳನ್ನು ವಿವರಿಸಿರಿ. ಸದ್ಯಕ್ಕೆ ನಡಿಯುವ ಪದ್ಧತಿ ಯಾವದು? ಮುಖ್ಯ ಶಿಕ್ಷಕರ ಕೆಲಸಕ್ಕೆ ಎಂಥವರು ನೇಮಿಸಲ್ಪಡುವರು?

೧೦. ಕೆಳಗಿನ ಸಂಗತಿಗಳ ಆಧಾರದಿಂದ ನಿಮ್ಮ ಸಾಲಿಯ ತಿಂಗಳ ಪತ್ರಿಕೆಯನ್ನು ಬರೆಯಿರಿ.

(अ) ೧೫೦ ಹುಡುಗರು ತಿಂಗಳ ಅಖೇರ ಶಿಲಕು. ೨೫ ಬಂದವರು, ೨೩ ಬಿಟ್ಟು ಹೋದವರು.

(ब) ಫೀ ದರ ಬಿ. ೧ ಇಯತ್ತೆ ϭ೧, ೨ನೇ ೩ನೇ ϭ೨, ೪ನೇ ೫ನೇ ೨ϭ೬. ೬ನೇ ಇಯತ್ತೆ ϭ೩ ಇಮ್ಮಡಿ ಸೆಸ ಕೊಡದವರಿಗೆ ಎಂಟ್ರನ್ಸ ϭ೪, ಹೋದ ತಿಂಗಳ ಫೀ ಶಿಲಕು ೨ϭ೩ϭ೬.

(क) ಪಗಾರ ಮುಟ್ಟಿದ ತಾ। ೧೫ ರಿಸೀರಿ ಹಣಾ ೧೫ ರೂ. ಪೈಕಿ ಖರ್ಚು ನಡಿದ ತಿಂಗಳಲ್ಲಿ ೯ϭ೩ϭ೬.

೧ನೇ ವರ್ಷ.

ಶಿಕ್ಷಣಶಾಸ್ತ್ರ.

೧. ಮಾಸ್ತರನು ತನ್ನ ಕೆಲಸವನ್ನು ಕೈಕೊಳ್ಳುವಾಗ ಯಾವ ಸಂಗತಿಗಳನ್ನು ಲಕ್ಷದಲ್ಲಿಡತಕ್ಕದ್ದು? ಯಾಕೆ?

೨. ಗೊತ್ತುಹಿಡಿ, ಹಿಂಬಾಲಿಸು, ಮುಂದಕ್ಕೆ ಒಯ್ಯು ಈ ಶಬ್ದಗಳಿಂದ ಸೂಚಿತವಾದ ತತ್ವವು ಯಾವದು? ಅದರ ಪ್ರಯೋಜನವೇನು?

೩. ಶಿಕ್ಷೆ, ಇನಾಮುಗಳ ಉದ್ದೇಶವೇನು? ಇವುಗಳಿಂದ ಶಾಲಾವ್ಯವಸ್ಥೆಗೆ ಎಷ್ಟು ಮಟ್ಟಿಗೆ ಸಹಾಯವಾಗುವದು? ಇವುಗಳನ್ನೇ ನಂಬಿ ನಡೆಯುವ ಮಾಸ್ತರನ ಬಗ್ಗೆ ನಿಮ್ಮ ಅಭಿಪ್ರಾಯವೇನು?

೪. ಸದ್ಗುಣದ ವರ್ಚಸ್ಸು ಅಂದರೇನು? ಯಾವ ಗುಣಗಳು ಮಾಸ್ತರನಲ್ಲಿ ಇರಲಿಕ್ಕೆ ಬೇಕು? ಯಾಕೆ?

೫. "ಸ್ವಂತ ಶ್ರಮವೇ ಜ್ಞಾನಸಂಪಾದನದ ಸಾಧನವು" ಇದನ್ನು ಕುರಿತು ನಿಮ್ಮ ಅಭಿಪ್ರಾಯವೇನು? ಪ್ರಶ್ನಪದ್ಧತಿಯಲ್ಲಿ ಇದರ ಪ್ರಯೋಜನವು ಹ್ಯಾಗಾಗುವದು ಬರೆಯಿರಿ.

೬. ಗೃಹಪಾಠವೆಂದರೇನು? ಅವುಗಳ ಪ್ರಯೋಜನ ಪ್ರಕಾರಗಳನ್ನು ವಿವರಿಸಿರಿ.

೭. ಸ್ವಂತ ಜಾಣತನವೆಂದರೇನು? ಯಾವ ಗುಣಗಳಿರತಕ್ಕದ್ದು? ಆ ಸಂಬಂಧದಿಂದ ಭ್ರಾಂತಿಗಳು ಯಾವವು?

೮. ಅಧ್ಯಾಪನಚಾತುರ್ಯವೆಂದರೇನು? "ಶಿಕ್ಷಣವು ಮುಖ್ಯವಾಗಿ ಪ್ರಶ್ನಗಳ ಸಹಾಯದಿಂದ ಸಾಗತಕ್ಕದ್ದು" ಈ ನೇಮದಿಂದ ಚಾತುರ್ಯಕ್ಕೆ ಪ್ರಯೋಜನವೇನು ವಿವರಿಸಿರಿ.

೯. ದಕ್ಷತನವೆಂದರೇನು? ಕರೇಹಲಿಗೆಯ ಉಪಯೋಗವನ್ನು ಕುರಿತು ನಿಮ್ಮ ಅಭಿಪ್ರಾಯವೇನು ವಿಸ್ತರಿಸಿ ಹೇಳಿರಿ.

೧೦. ಇತರ ವ್ಯವಸ್ಥೆಯ ಮುಖ್ಯಾಂಗಗಳು ಯಾವವು? ಶಾಲಾಗೃಹವು ಹ್ಯಾಗಿರಬೇಕು ಮತ್ತು ವೇಳಾಪತ್ರಕವನ್ನು ಹ್ಯಾಗೆ ರಚಿಸಬೇಕು?

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಸೋತ್ಕರ್ಷಮಂ |
ಬಯಸುತ್ತಂ ಪ್ರತಿಮಾಸಮಾವಿಗೊಲವಿಂದೀಪತ್ರಮಂ ಮುದ್ರಿಸಿ ||
ನಯದಿಂದಿತ್ತಪೆವೋದುವರ್ಗೆಸುಗುಣಂ ತೋರಲ್ಕೆ ಕೈಕೊಂಬುದೈ |
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ||೧

ಪುಸ್ತಕ ೩೩.] ಜುಲೈ ೧೮೯೯. [ಸಂಖ್ಯೆ ೭.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಇಷ್ಟು ದಿವಸಗಳವರೆಗೆ ಮಾಸ್ತರ ಜನರಿಗೆ ಬೇಕಾದಷ್ಟು ಪಗಾರ ಮಾಡಿ ಬೇಕಾದ ಸ್ಥಳದ ಮೇಲೆ ನೇಮಿಸುವ ಪರಿಪಾಠವಿತ್ತು. ಅದರಿಂದ ಎಷ್ಟೋ ಜನ ಮಾಸ್ತರರಿಗೆ ಕಾಲೇಜದ ಸರ್ಟೀಫಿಕೇಟಿಗನುಸರಿಸಿ ಪಗಾರ ದೊರಿಯದೆ ಅವರು ಮೇಲಿಂದ ಮೇಲೆ ಗುಣುಗುಣು ಮಾಡುತ್ತಿದ್ದರು. ಇದನ್ನೂ ಮಾಸ್ತರ ಜನರಿಗೆ ಕಾಲಾವಧಿಯಿಂದ ಕೊಡುತ್ತಿದ್ದ ೧।೨ ರೂಪಾಯಿಗಳ ಬಡತಿಯಿಂದ ಅವರ ಚರಿತಾರ್ಥಕ್ಕೆ ತಕ್ಕಷ್ಟು ಸಹಾಯವಾಗಿ ಅವರಿಗೆ ಕೆಲಸ ಮಾಡಲಿಕ್ಕೆ ಹೆಚ್ಚಿಗೆ ಉತ್ಸಾಹ ಹುಟ್ಟುವದಿಲ್ಲೆಂಬದನ್ನೂ ಲಕ್ಷಕ್ಕೆ ತಂದು ವಿದ್ಯಾಖಾತೆಯ ಅಧಿಕಾರಿಗಳು ತಮ್ಮಲ್ಲಿಯ ವ್ಯವಸ್ಥೆಯಲ್ಲಿ ಕೆಲವು ಸುಧಾರಣೆ ಮಾಡಿರುವರು. ಇದರಿಂದ ಇನ್ನು ಮುಂದೆ ಶಿಕ್ಷಕರಿಗೆ ಅವರವರ ಯೋಗ್ಯತೆ ಹಾಗು ನೌಕರಿಯ ಮುದ್ದತುಗಳಿದ್ದಂತೆ ೧೦, ೧೧, ೧೨, ೧೫, ೧೮, ೨೦ ಮುಂದೆ ಐದು ರೂಪಾಯಿಗಳಂತೆ ಬಡತಿಯು ಸಿಗುತ್ತ ಹೋಗುವದು ಇದಕ್ಕಾಗಿ ಪ್ರತಿಯೊಂದು ಜಿಲ್ಲೆಯಲ್ಲಿ ಇಂತಿಷ್ಟು ರೂಪಾಯಿ

ಗಳ ಇಂತಿಷ್ಟು ಸ್ಥಳಗಳು ಇರಬೇಕೆಂದು ಗೊತ್ತುಪಡಿಸಿ ಸಾಲೆಗಳಿದ್ದ ಊರ ಮಾನದಿಂದಲೂ ಸಾಲೆಯಲ್ಲಿಯ ಸಂಖ್ಯೆ ಅಲ್ಲಿ ನಡಿಯುತ್ತಿರುವ ಅಭ್ಯಾಸ ಇವುಗಳ ಮಾನದಿಂದಲೂ ಪಗಾರದ ಸ್ಥಳಗಳು ಗೊತ್ತು ಮಾಡಲ್ಪಟ್ಟವೆ. ಇನ್ನು ಮುಂದೆ ಯಾವದೊಂದು ಸ್ಥಳವು ತೆರವಾದರೆ ಅದನ್ನು ನಂಬರಿನಂತೆ ಕೆಳಗಿನ ಜನರಿಗೆ ಕೊಡುತ್ತ ಹೋಗುವರು. ಈ ವ್ಯವಸ್ಥೆಗೆ ಅನೇಕ ತೊಂದರೆಗಳುಂಟು. ಆದರೆ ಅವುಗಳ ಬಗ್ಗೆ ವಿಚಾರ ನಡಿದದೆ. ಈ ಹೊಸ ಪದ್ಧತಿಗನುಸರಿಸಿ ಸದ್ಯಕ್ಕೆ ಕೆಲವು ವರ್ಗಾವರ್ಗಿಗಳು ಮಾಡಲ್ಪಟ್ಟವೆ. ಅವು ಎಲ್ಲ ಶಿಕ್ಷಕರಿಗೂ ಗೊತ್ತಾಗುವದು ಅವಶ್ಯವೆಂದು ತೋರಿದ್ದರಿಂದ ಅವುಗಳನ್ನು ಮೆ. ಎಜ್ಯುಕೇಶನಲ್ ಇನ್ಸಪೇಕ್ಟರರ ಅಪ್ಪಣೆಯ ಮೇರೆಗೆ ಇದೇ ಸಂಚಿಕೆಯಲ್ಲಿ ಕೊಟ್ಟಿರುವೆವು. ಅವಶ್ಯಕರು ನೋಡಿ ಕೊಳ್ಳತಕ್ಕದ್ದು.

ಸ್ ೧೮೯೮|೯೯ನೇ ಸಾಲಿನ ಹಿಂದುಸ್ಥಾನದ ರೇಲ್ವೆಯ ಅಡ್‌ಮಿನಸ್ಟ್ರೇಶನ ರಿಪೋರ್ಟು ಛಾಪಿಸಿ ಪ್ರಸಿದ್ಧವಾಗಿರುತ್ತದೆ. ಅದರಿಂದ ತಿಳಿದುಬರುವ ಮುಖ್ಯಾಂಶಗಳ್ಯಾವವೆಂದರೆ:-ಸ್ ೧೮೯೯ನೇ ಇಸ್ವಿಯ ೧ನೇ ಮಾರ್ಚಕ್ಕೆ ಸದ್ಯಕ್ಕೆ ಚಾಲೂ ಇರುವ ಮತ್ತು ಚಾಲೂ ಮಾಡುವದಕ್ಕಾಗಿ ಮಂಜೂರ ಮಾಡಲ್ಪಟ್ಟ ಒಟ್ಟು ರೇಲ್ವೆಯು ೨೬,೦೪೯ ಮೈಲು ಇರುವದು. ಅಂದರೆ ಕಳೆದ ವರ್ಷಕ್ಕಿಂತ ೮೦೪ ಮೈಲು ಹೆಚ್ಚಿಗೆ ಆಗಿರುವದು. ಈ ತಾರೀಖಿಗೆ ವ್ಯಾಪಾರಕ್ಕಾಗಿ ಚಾಲೂ ಇರುವ ರೇಲ್ವೆಯು ೨೨,೪೯೧ ಮೈಲು ಇರುವದು. ಇದರಲ್ಲಿ ಸಹ ಹೋದ ವರ್ಷಕ್ಕಿಂತ ೧೩೩೪ ಮೈಲಿನ ವೃದ್ಧಿಯುಂಟು. ಸ್ ೧೮೯೮ನೇ ಇಸವಿಯ ಡಿಶಂಬರ ೩೧ನೇ ತಾರೀಖಿಗೆ ಒಟ್ಟು ರೇಲ್ವೆಯ ಭಂಡವಲವು ೨೬೮·೦೯ ಕೋಟಿ ರೂಪಾಯಿ ಇತ್ತು. ಇದು ಹಿಂದಿನ ವರ್ಷಕ್ಕಿಂತ ೮·೫೨ ಕೋಟಿಯಿಂದ ಹೆಚ್ಚಾಗಿದೆ. ರೇಲ್ವೆಯ ಎಲ್ಲ ಉತ್ಪನ್ನ ಕೂಡಿ ೨೩,೪೬,೪೨,೩೪೯ ರೂಪಾಯಿ ಆಗಿರುವದು. ಇದರಲ್ಲಿ ಹೋದ ವರ್ಷಕ್ಕಿಂತ ೧,೮೬,೯೦,೬೭೫

ರೂಪಾಯಿಯ ವೃದ್ಧಿಯು ತೋರಿಬರುವದು, ಒಟ್ಟು ಉತ್ಪನ್ನದಲ್ಲಿ ನೂರಕ್ಕೆ ೪೭. ೫೭ ರಂತೆ ಖರ್ಚಾಗಿರುವದು, ಸನ್ ೧೮೯೭ನೇ ವರ್ಷ ಶೇಕಡಾ ೪೮.೮೮ ರಂತೆ ಖರ್ಚು ಬಿದ್ದಿತ್ತು. "ಗ್ಯಾರಂಟೇಡ" ರೇಲ್ವೆ ಸಂಬಂಧದಿಂದ ಸರಕಾರಕ್ಕೆ ಬಹಳ ಖರ್ಚು ಬರುತ್ತದೆ. ಯಾಕಂದರೆ, ಸರಕಾರದವರು ಒಪ್ಪಿಕೊಂಡ ವ್ಯಾಜಿನ ದರವು ಬಹಳ ದುಬಾರಿ ಉಂಟು. ಇಂಗ್ಲಂಡದಲ್ಲಿ ಮುದ್ದಲದ ಮೇಲೆ ಕೊಡಬೇಕಾಗುವ ಬಡ್ಡಿಯ ಬಗ್ಗೆ ಕೊಡಬೇಕಾದ ಎಕ್ಸಚೇಂಜಕ್ಕಾಗಿ ಬಹಳ ಖರ್ಚು ಹತ್ತುತ್ತದೆ. ಮತ್ತು ಲಾಭದ ಭಾವವು ಪ್ರತಿ ರೂಪಾಯಕ್ಕೆ ೧ ಶಿಲಿಂಗು ೧೦ ಪೇನಸಿನಂತೆ ಗೊತ್ತು ಮಾಡಲ್ಪಟ್ಟದ್ದರಿಂದ ಹೆಚ್ಚು ಹಣ ಕೊಡಬೇಕಾಗುವದು. ಗ್ಯಾರಂಟಿಯು ಮುದ್ದತ ತೀರುವವರೆಗೆ ಸರಕಾರದವರು ಗೊತ್ತು ಮಾಡಿದ ಬಡ್ಡಿ ಕೊಡುವ ಅವಶ್ಯಕತೆಯುಂಟು. ಸರಕಾರಕ್ಕೆ ಈಗ ೨ತ್ತಿ ದರದಿಂದ ಸಿಗುವ ಹಣಕ್ಕಾಗಿ ಅವರು ಗ್ಯಾರಂಟೇಡ ರೇಲ್ವೆಯವರು ಹಾಕಿದ ಭಂಡವಲದ ಮೇಲೆ ೪ತ್ತಿ ದರದಂತೆ ವ್ಯಾಜ ಕೊಡಬೇಕಾಗುವದು. ಮತ್ತು ಎಕ್ಸಚೇಂಜದ ಬಗ್ಗೆ ತಗಲುವ ಹಣ ಕೂಡಿಸಿದರೆ ಈ ಭಾವವು ೬ತ್ತಿಯಂತೆ ಬೀಳುವದು.

* * *

ಸನ್ ೧೮೯೯–೧೯೦೦ನೇ ಇಸವಿಯ ೨ನೇ ೩ನೇ ಗ್ರೇಡ ಮುಲ್ಕೀ ಸರ್ಟಿಫಿಕೇಟುಗಳ ಪರೀಕ್ಷೆಗಳು ಸಪ್ಟಂಬರ ತಿಂಗಳ ೧೧ನೇ ತಾರೀಖು ಸೋಮವಾರ ಮತ್ತು ತದುತ್ತರ ದಿವಸಗಳಲ್ಲಿ ಆಗುವವು. ಈ ಬಗ್ಗೆ ಅವಶ್ಯಕರು ಇದೇ ಸಂಚಿಕೆಯಲ್ಲಿ ಕೊಟ್ಟ ನೋಟೀಸನ್ನು ನೋಡತಕ್ಕದ್ದು. ಹಾಯಸ್ಕೂಲ ಮಿಡಲ್‌ಸ್ಕೂಲ ಸ್ಕಾಲರಶಿಪ್ ಪರೀಕ್ಷೆಗಳು ಅನುಕ್ರಮವಾಗಿ ಸಪ್ಟಂಬರ ತಿಂಗಳ ೪ನೇ ಮತ್ತು ೬ನೇ ತಾರೀಖಿಗೆ ಪ್ರಾರಂಭವಾಗುವವು.

* * *

ಭೂಗತ ಶಹರವು—ಅಮೇರಿಕದಲ್ಲಿಯ ಯುನೈಟೆಡ್ ಸಂಸ್ಥಾನದಲ್ಲಿಯ ಅರ್ಕನ್ಸಾಸವೆಂಬಲ್ಲಿ ಮೋಜರ ಕೌಂಟಿನ್

ಎಂಬವನೊಬ್ಬ ಶೋಧಕನು ಭೂಮಿಯಲ್ಲಿ ಹುಗಿದಂಥ ಒಂದು ದೊಡ್ಡ ಶಹರವನ್ನು ಗೊತ್ತುಹಚ್ಚಿ ಅಗಿಸಿ ತೆಗಿದಿದ್ದಾನೆ. ಈ ಶಹರದ ರಚನೆಯು ಚೀನದೇಶದ ಪಟ್ಟಣಗಳ ಮಾದರಿಯಾದಿರುವದಾಗಿ ತಿಳಿದದೆ. ಇದರ ಪರಿಮಿತಿಯು ೩೬೯ ಮೈಲು ಉಂಟು. ಇಲ್ಲಿಯ ಲೋಕವಸ್ತಿಯು ಸುಮಾರು ೧೧ ಲಕ್ಷ ಇರಬಹುದಾಗಿ ಅಂದಾಜು ಮಾಡಿರುವರು. ಇಲ್ಲಿದ್ದ ಎಲ್ಲ ವಸ್ತುಗಳು ಉತ್ತಮ ತರದವಿರುವದರಿಂದ ಈ ಶಹರವು ಕಟ್ಟಲ್ಪಟ್ಟಾಗ್ಗೆ ಸುಧಾರಣೆಯು ಒಳಿತಾಗಿ ಆಗಿತ್ತೆಂದು ಅನ್ನಲಿಕ್ಕೆ ಅಡ್ಡಿ ಇಲ್ಲ. ಇಲ್ಲಿ ಶಿಕ್ಕಿರುವ ಕೆಲವು ಲೇಖಗಳಿಂದ ಈ ಶಹರವು ಕಟ್ಟಲ್ಪಟ್ಟ ಕಾಲನಿರ್ಣಯದ ಕೆಲಸವು ನಡಿದದೆ.

ಹಿಂದುಸ್ಥಾನದ ವಿದ್ಯಾರ್ಥಿಗಳು ಉದ್ಯೋಗಶಿಕ್ಷಣವನ್ನು ಹೊಂದುವದಕ್ಕಾಗಿ ಜಪಾನ ದೇಶಕ್ಕೆ ಹೋಗಲಪೇಕ್ಷಿಸಿದರೆ ಜಪಾನದ ಜನರು ಅವರಿಗೆ ಸಹಾಯ ಮಾಡಲಿಕ್ಕೆ ಸಿದ್ಧರಿರುವರೆಂದು ಮುಂಬೈಯಲ್ಲಿರುವ ಜಪಾನದ ವಕೀಲರು ಪ್ರಸಿದ್ಧಪಡಿಸಿರುವರು. ಅಲ್ಲಿ ಊಟ ಹಾಗು ಸ್ಥಳದ ಬಾಡಿಗೆಗಾಗಿ ಪ್ರತಿ ತಿಂಗಳಿಗೆ ಸುಮಾರು ೨೦ ರೂಪಾಯಿ ಖರ್ಚು ತಗಲುವದು. ಕಾಲೇಜದ ಫೀ ಎರಡು ರೂಪಾಯಿ ಮಾತ್ರ ಉಂಟು. ಇಲ್ಲಿಂದ ಹೋಗುವವರಿಗೆ ಉಗೆ ಹಡಗದ ಸೋಯಿಯಾದರೂ ಚೆನ್ನಾಗಿಯೇ ಉಂಟು. ೨ ನೇ ವರ್ಗದ ಉಗೆ ಹಡಗದ ಹಾಸಲು ೨೪೦ ಮತ್ತು ೩ ನೇ ವರ್ಗದ ಹಾಸಲು ೧೨೦ ರೂಪಾಯಿ ಉಂಟು. ಅದನ್ನು ಹಿಂದುಸ್ಥಾನದ ವಿದ್ಯಾರ್ಥಿಗಳ ಸೋಯಿಗಾಗಿ ಅನುಕ್ರಮವಾಗಿ ೧೯೨ ಮತ್ತು ೯೬ ರೂಪಾಯಿ ಮಾಡಿರುವರು. ಇದರಲ್ಲಿಯೇ ಊಟದ ಖರ್ಚಿನ ಸಮಾವೇಶವಾಗಿರುವದು. ಊಟಕ್ಕಾಗಿ ಬೇರೆ ಹಣ ಕೊಡುವ ಅವಶ್ಯವಿಲ್ಲ. ಇಂಥ ಸಂಧಿಯನ್ನು ಕಳಕೊಳ್ಳದೆ ನಮ್ಮಲ್ಲಿಯ ಜನರು ಆ ದೇಶಕ್ಕೆ ಹೋಗಿ ಔದ್ಯೋಗಿಕ ಶಿಕ್ಷಣವನ್ನು ಹೊಂದಿ ಬಂದರೆ ನಿಶ್ಚಯವಾಗಿ ಬಹಳ ಲಾಭವಾಗದೆ ಇರದು.

ಇಂಗ್ಲಂಡದ (ಇಂಗ್ಲಿಷರ) ರಾಜ್ಯವು ಫ್ರಾನ್ಸದೇಶಕ್ಕಿಂತಲೂ ೫೩ ಪಟ್ಟು ದೊಡ್ಡದಿರುವದು. ಅದು ಜರ್ಮನಿಯ ೫೨ ಪಟ್ಟು, ಅಮೇರಿಕದ ೩॥ ಪಟ್ಟು ಹಾಗು ಯಾವತ್ತು ಯುರೋಪ ಖಂಡದ ೩ ಪಟ್ಟು ದೊಡ್ಡದಿರುವದು, ಇಲ್ಲಿಯ (ಈ ರಾಜ್ಯದ) ಲೋಕವಸ್ತಿಯು ರಶಿಯಾದ ಜನಸಂಖ್ಯೆಯ ಮೂರು ಪಟ್ಟಿನಷ್ಟಿರುವದು. ಹಾಗೂ ಇಂಗ್ಲಿಷ ರಾಜ್ಯದ ಕ್ಷೇತ್ರಫಲವು ೧,೧೦,೦೦,೦೦೦ ಚೌರಸ ಮೈಲು ಉಂಟು. ಅಂದರೆ ಈ ರಾಜ್ಯವು ಇಡೀ ಪೃಥ್ವಿಯ ಸುಮಾರು ೧/೪ ಭಾಗವನ್ನು ವ್ಯಾಪಿಸಿರುವದು. ಅದರಂತೆ ಈ ರಾಜ್ಯದಲ್ಲಿಯ ಜನಸಂಖ್ಯೆಯು ಸಹ ಇಡೀ ಪೃಥ್ವಿಯಲ್ಲಿಯ ಜನಸಂಖ್ಯೆಯ ೧/೪ ದಷ್ಟು ಅಂದರೆ ೩೫,೦೦,೦೦,೦೦೦ ಉಂಟು. ಈ ರಾಜ್ಯದ ವಶದಲ್ಲಿ ೧೦,೦೦೦ ನಡುಗಡ್ಡೆಗಳುಂಟು ಮತ್ತು ಎಲ್ಲ ಕಡೆಯಲ್ಲಿ ಕೂಡಿ ಇಂಗ್ಲಿಷ ನಿಶಾನೆಯನ್ನು ಧರಿಸುವ ಉಗೆ ಹಡಗಗಳು ೧,೦೪,೫೨,೦೦೦ ಇರುವವು.

ರಸಾಯನಶಾಸ್ತ್ರ.

(೧೦೯ ನೇ ಪುಟದಿಂದ ಮುಂದೆ ಸಾಗಿದ್ದು.)

೫ ಮೇಲಿನ ಪ್ರಯೋಗದಿಂದ ಗೊತ್ತಾದ ಸಂಗತಿಗಳು.

ಮೇಣಬತ್ತಿಯ ಪ್ರಯೋಗದಿಂದ ನಮಗೆ ಎರಡು ಗೌರವದ ಸಂಗತಿಗಳು ಗೊತ್ತಾದವು. (೧) ಯಾವ ಪದಾರ್ಥವೂ ನಷ್ಟವಾಗುವದಿಲ್ಲ, ಅಂದರೆ ಇಲ್ಲದಂತಾಗುವದಿಲ್ಲ. (೨) ಮೇಣಬತ್ತಿಯು ಉರಿಯಹುವಾಗ ಅದರ ಘಟಕದ್ರವ್ಯಗಳು ರಸಾಯನ ಸಂಯೋಗದಿಂದ ಆಕ್ಸಿಜನ್ ವಾಯುವಿನೊಡನೆ ಬೆರತುಕೊಳ್ಳುತ್ತವೆ.

ಹಿಂದೆ ಹೇಳಿದ ಮೂರು ಸಾಮಾನ್ಯ ಪ್ರಯೋಗಗಳಿಂದ ಬೆಂಕಿಯ ಸಂಬಂಧವಾಗಿ ನಮಗೆ ಹಳೆ ಪಂಡಿತರಿಗಿಂತ ಹೆಚ್ಚು ಜ್ಞಾನವಾಯಿತೆಂಬುವದಕ್ಕೆ ಏನೂ ಸಂದೇಹವಿಲ್ಲ, ಇದು ಪ್ರಯೋಗ, ಪರೀಕ್ಷಣಗಳ ಪ್ರತಿಫಲವು. ನೀವು ಸ್ವಲ್ಪ ಪದಾರ್ಥವಿಜ್ಞಾನಶಾಸ್ತ್ರವನ್ನು ಓದಿದರೆ, ಉಷ್ಣತೆಯ ಸ್ವರೂಪ

ಪ ವಿಶೇಷಜ್ಞಾನವು ನಿಮಗಾಗುವದು. ನೀವು ಈ ಪುಸ್ತಕದಲ್ಲಿ ಹೇಳಿರುವ ಅಥವಾ ಅನ್ಯ ಪ್ರಯೋಗಗಳನ್ನು ಮಾಡಿನೋಡಿದರೆ ಈ ಜಗದೊಳಗಿನ ಯಾವ ಒಡಿವೆಯೂ ನಾಶವಾಗುವದಿಲ್ಲೆಂಬದು ನಿಮ್ಮ ಮನವರಿಕೆಯಾದೀತು. ನಾವು ಸರಜೀವಿಗಳು; ಯಾವದೊಂದು ಪದಾರ್ಥವನ್ನು ಹೊಸದಾಗಿ ಹುಟ್ಟಿಸಲಾರೆವು; ಇಲ್ಲದಂತೆಯೂ ಮಾಡಲಾರೆವು. ಈ ಮೇಣಬತ್ತಿಯ ಪ್ರಯೋಗದಿಂದ ಇನ್ನೊಂದು ಸಂಗತಿಯು ಪ್ರಕಟವಾಗುತ್ತದೆ ಅದೇನಂದರೆ—ರಸಾಯನ ಸಂಯೋಗವು ನಡೆದಿರುವಾಗ ಹೊಸ ಶಕೆಯು ಹುಟ್ಟುತ್ತಿರುತ್ತದೆ. ಈ ಸಂಯೋಗವು ಮಂದವಾಗಿ ಸಾಗಿದರೆ ಸಾಧಾರಣ ಮಾನದ ಶಕೆಯು ಹುಟ್ಟುತ್ತದೆ. ಆದರೆ ಭರದಿಂದ ಸಾಗಿದಾಗ ಜ್ವಾಲೆಯೂ, ಒಮ್ಮೊಮ್ಮೆ ಬೆಂಕಿಯೂ ಹುಟ್ಟುವದು,

೬. ರಸಾಯನ ಸಂಯೋಗವು ನಡೆದಿರುವಾಗ ಶಕೆಯು (ಉಷ್ಣತೆಯು) ಹುಟ್ಟುತ್ತಿರುತ್ತದೆ· ಈ ಮಾತಿನ ಅನುಭವಕ್ಕಾಗಿ ಕೆಳಗಿನವೆರಡು ಪ್ರಯೋಗಗಳನ್ನು ಮಾಡಿ ನೋಡುವ.

೪. ಪ್ರಯೋಗ—ಇಗೋ, ಇದೊಂದು ಸುಟ್ಟ ಸುಣ್ಣದ ಹರಳುಂಟು. ಇದನ್ನು ಈ ಪರಾತದಲ್ಲಿ ಇಡುತ್ತೇನೆ. ಮೇಲೆ ತುಸು ತಣ್ಣೀರನ್ನು ಸುರುವುತ್ತೇನೆ. ನೋಡು, ಸೊಂಯ್ ಅನ್ನಹತ್ತಿತು. ಸುಣ್ಣ ನೀರುಗಳೆರಡೂ ಬೆಚ್ಚಗಾದವು. ಈಗಂತೂ ಸುಣ್ಣದೊಳಗಿನ ನೀರು ಕುದಿಯಹತ್ತಿ ಉಗಿಯಾಗಿ ಹೊರಬೀಳಹತ್ತಿದೆ ಪರಾತದಲ್ಲಿ ಮಿದುವೂ ಬೆಳ್ಳಗೂ ಆದ ಸುಣ್ಣದ ಮುದ್ದಿ ಮಾತ್ರ ಉಳಿಯಿತು. ಈ ಸಂಗತಿಯನ್ನು ಗಚ್ಚು ಕುಟ್ಟುವವರು ದಿನಾಲು ಕಣ್ಣುಮುಟ್ಟಿ ನೋಡುತ್ತಿರುತ್ತಾರೆ. ಸುಣ್ಣವು ಅರಳುವಾಗ ಅದರೊಳಗಿಂದ ಶಕೆಯೂ ಉಗಿಯೂ ಯಾಕೆ ಹೊರಬೀಳಬೇಕು? ಸುಣ್ಣದ ಹರಳು ನೀರಿನೊಡನೆ ರಸಾಯನ ಸಂಯೋಗವನ್ನು ಹೊಂದುವಾಗ ಉಷ್ಣತೆಯು ಉತ್ಪನ್ನವಾಗಿ ನೀರು ಉಗಿಯ ರೂಪವನ್ನು ಹೊಂದಿ ಹೊರಬೀಳುತ್ತದೆ. ಇದೇ ಮೇಲಿನ ಆಕ್ಷೇಪಕ್ಕೆ ಸರಿಯಾದ ಸಮಾಧಾನವು. ಈ ಸಂಯೋಗದಿಂದಲೇ ನಮಗೆ ಅರಳಿದ ಸುಣ್ಣವು ದೊರೆಯುತ್ತದೆ.

೪. ಪ್ರಯೋಗ—ಒಂದು ಗದ್ದುಗೆ ಕಳಚಿದ ಹೂಜೆಯ ಆಕಾರದ ಕಾಜಿನ ಕುಪ್ಪಿಯನ್ನು ತಕ್ಕೊಂಡು ಮೊದಲು ಅದರೊಳಗೆ ಗಂಧಕದ ಪುಡಿಯನ್ನು ಹಾಕು. ಬಳಿಕ ಅದನ್ನು ತೆಳ್ಳಗೆ ಹರವಿ ಅದರ ಮೇಲೆ ತಾಮ್ರದ ಚಿನುಗಾದ ಚೂರುಗಳನ್ನು ಹರವು. ಅಲ್ಲಿಂದ ಈ ಕುಪ್ಪಿಯನ್ನು ಒಂದು ಕಬ್ಬಿಣದ ಅಡ್ಡಣಿಗೆಯ ಮೇಲೆ ಇಡು. ಬುಡದಲ್ಲಿ ಮದ್ಯಾರ್ಕದ ಅಥವಾ ಹೊಗೆಯ ದೀಪವನ್ನು ಹಚ್ಚಿಡು. ದೀಪದ ಶಕೆಯಿಂದ ಕಾಜಿನ ಕುಪ್ಪಿಯು ಒಡೆದು ಗಂಧಕವು ನೆಲದಮೇಲೆ ಬಿದ್ದುಹೋಗಬಾರದೆಂದು ಒಲೆದೀವಿಗೆಗಳನ್ನು ಒಂದು ಪರಾತದಲ್ಲಿ ಇಡು. ಇನ್ನೇನು ಆಗುತ್ತದೋ ನೋಡು. ಅಗೋ, ಗಂಧಕವು ಕರಗಹತ್ತಿತು. ಅದು ಮೆಲ್ಲಮೆಲ್ಲಗೆ ತನ್ನ ಮೊದಲಿನ ಹಳದೀ ಬಣ್ಣವನ್ನು ಬಿಟ್ಟು ಅಂದಗೆಟ್ಟು ಕಪ್ಪಾಗುತ್ತ ನಡೆದಿರುವದು. ಈಗಂತೂ ಕುದಿಯಲಾರಂಭಿಸಿತು. ಇನ್ನು ದೀಪವನ್ನು ತೆಗೆದು ಓರೆಗೆ ಇಡು. ತಾಮ್ರದ ಚೂರುಗಳು ಕಾಯ್ದು ಹ್ಯಾಗೆ ಕೆಂಪಗೆ ಹೊಳೆಯುತ್ತವೆ ನೋಡಿರಿ. ಬರಬರುತ್ತ ಆ ಚೂರುಗಳು ಕರಗಿ ಕುಪ್ಪಿಯ ತಳಕ್ಕೆ ಕೂತವು. ಕುಪ್ಪಿಯು ಆರಿದ ಬಳಿಕ ಅದನ್ನು ಕೆಳಗಿಳಿಸಿ ನೋಡು, ಅದರೊಳಗೆ ಅಚ್ಚ ಗಂಧಕವೂ ಶುದ್ಧ ತಾಮ್ರವೂ ಇಲ್ಲೇ ಇಲ್ಲ. ಒಂದು ಬಗೆಯ ಕಪ್ಪು ಪದಾರ್ಥವು ಮಾತ್ರ ತಳಕ್ಕೆ ಹಿರಕೊಂಡಂತೆ ಕಾಣುವದು. ಅದೇನಾಗಿರಬಹುದು? ಅದು ತಾಮ್ರ ಗಂಧಕಗಳೆಂಬ ಎರಡು ಭಿನ್ನ ಪದಾರ್ಥಗಳ ರಸಾಯನ ಸಂಯೋಗದಿಂದ ಹುಟ್ಟಿದ ಮೂರನೇ ಒಡವೆಯು. ರಸಾಯನ ಸಂಯೋಗವು ನಡೆವಾಗ ದೀಪವನ್ನು ದೂರ ಸರಿಸಿದ್ದರೂ ಸಂಯೋಗ ಸಮಯದಲ್ಲಿ ಉಂಟಾದ ಶಕೆಯಿಂದ ತಾಮ್ರದ ಚೂರುಗಳು ಕಾಯ್ದು ಕರಗಿ ಗಂಧಕದೊಡನೆ ಮಿಶ್ರವಾದವೆಂಬದನ್ನು ಮರೆಯಲಾಗದು.

೫. ಈ ಎರಡು ಪ್ರಯೋಗಗಳಿಂದ ನಮಗೇನು ತಿಳಿಯಿತು? ರಸಾಯನ ಸಂಯೋಗವು ನಡೆದಾಗ ಶಕೆಯು ತಪ್ಪದೆ ಹುಟ್ಟುತ್ತಿರುತ್ತದೆ. ಮೇಣಬತ್ತಿಯು ಉರಿಯುತ್ತಿರಲಿ,

ಕಟ್ಟಿಗೆಯು ಸುಡುತ್ತಿರಲಿ ಮನೆಗಾಗಲಿ, ಬಣವೆಗಾಗಲಿ ಬೆಂಕಿಯು ಹತ್ತಿರಲಿ ಅಲ್ಲೆಲ್ಲಾ ಕಡೆಯಲ್ಲಿಯೂ ಪದಾರ್ಥಗಳ ಪ್ರಕೃತ್ಯಂಶಗಳು ಹವೆಯೊಳಗಿನ ಆಕ್ಸಿಜನ್‌ದೊಡನೆ ರಸಾಯನ ಸಂಯೋಗವನ್ನು ನಿಶ್ಚಯವಾಗಿ ಹೊಂದುತ್ತಿರುವವೆಂಬುದನ್ನು ತಿಳಕೊಳ್ಳತಕ್ಕದ್ದು. ಇನ್ನು ನಾವು ಹವೆಯನ್ನು ಕುರಿತು ವಿಚಾರಿಸುವ.

(ಸಶೇಷ.)

MANUAL OF METHOD.

ಶಿಕ್ಷಾಕ್ರಮ.

(೧೪೬ ನೇ ಪುಟದಿಂದ ಮುಂದೆ ಸಾಗಿದ್ದು.)

೮. ವಿದ್ಯಾರ್ಥಿಯ ಸ್ವಭಾವದಲ್ಲಿ ಉಚ್ಚ ನೀಚವೆಂಬ ಎರಡು ಸಹಜವಾದ ಭಾಗಗಳುಂಟು. ಅವುಗಳಲ್ಲಿ ಉಚ್ಚವಾದ ಭಾಗವನ್ನು ಕೈಕೊಂಡು ಪ್ರೋತ್ಸಾಹಗೊಳಿಸಿ ಆದರ ಮುಖಾಂತರ ಸಾಮಾಜಿಕ ಪ್ರವೃತ್ತಿಗಳನ್ನು ಬೆಳಿಸುವದೇ ಶಿಟ್ಟು ಕಳೆಯುವ ಮೇಲ್ತರದ ಉಪಾಯವು.

೯. ಹಟ ಅಥವಾ ಹಟಮಾರಿತನ:— ಈ ದುರ್ಗುಣವು ಸಾಮಾನ್ಯವೂ ದುಸ್ಸಾಧ್ಯವೂ ಆಗಿರುವದು. ಈ ದುರ್ಗುಣಕ್ಕೆ ಹಲವು ಕಾರಣಗಳುಂಟು. ಆದ್ದರಿಂದ ಇದನ್ನು ಹೋಗಲಾಡಿಸುವ ಉಪಾಯಗಳಾದರೂ ಬೇರೆ ಬೇರೆಯಾಗಿರುವವು.

ಈ ದುರ್ಗುಣವನ್ನು ತಿಳುಕೊಳ್ಳುವದು ತುಸು ಬಿಗಿಯಾಗಿದೆ. ಬೇರೆ ಕಾರಣದಿಂದ ಹುಡುಗನು ಕೆಲಸ ಮಾಡದಿದ್ದರೆ ಆವನು ಹಟಮಾರಿ ಎಂದು ಭಾವಿಸುವ ಸಂಭವವಿರುತ್ತದೆ. ಈ ತಪ್ಪಿನಿಂದ ಎಷ್ಟೋ ಕೇಡುಗಳು ಒದಗುತ್ತವೆ. ಇದನ್ನು ಕುರಿತು ಮೊದಲು ವಿಚಾರಿಸುವ,—

೧. ಮಡ್ಡತನ— ಅನುಭವವಿಲ್ಲದ ಹೊಸ ಶಿಕ್ಷಕರೂ ತಮ್ಮ ಕೆಲಸವನ್ನು ಲಕ್ಷಪೂರ್ವಕವಾಗಿ ಮಾಡದ ಶಿಕ್ಷಕರೂ ಬುದ್ಧಿವಂತರನ್ನೂ ದಡ್ಡರನ್ನೂ ವಿಂಗಡಿಸಲಿಕ್ಕೆ ಅಸಮರ್ಥರಾಗಿ ಮಡ್ಡರು ಹಟಮಾರಿಗಳೆಂದು ತಿಳಿಯುತ್ತಾರೆ. ಈ

ಮಡ್ಡ ಹುಡುಗರು ಪ್ರಶ್ನ ಕೇಳಿದಕೂಡಲೇ ತಮಗೆ ಉತ್ತರವು ಬಗೆಹರಿಯದಕ್ಕಾಗಿ ಸುಮ್ಮನಿರುವರು. ಬುದ್ಧಿ ಸಾಲದಕ್ಕಾಗಿ ಮಾಸ್ತರನು ತಿಳಿಸಿದ್ದನ್ನು ತಿಳಿಕೊಳ್ಳದೆ ಕೈ ಹೊತ್ತುಕೊಂಡು ಕೂಡ್ರುವರು. ಅದೇ ಮೇರೆಗೆ ತಮಗೇನೂ ಬಗೆಹರಿಯುವದಿಲ್ಲೆಂದು ಬಗೆಯುವವರಾದ್ದರಿಂದ ಅವರು ಯಾವ ಗೋಜಿಗೂ ಹೋಗುವದಿಲ್ಲ. ಈ ಬಗೆಯಾಗಿ ಅವರು ಸುಮ್ಮನೆ ಕೂತುಕೊಳ್ಳಲಾಗಿ ಹಟ ಮಾಡುತ್ತಾರೆಂದು ಶಿಕ್ಷಕರು ತಿಳಕೊಳ್ಳುವರು. ಅದು ಸರಿಯಲ್ಲ.

೨. ಅಶಕ್ತತನ:— ಸಾಮರ್ಥ್ಯವಾಗಲಿ ಉತ್ಸಾಹವಾಗಲಿ ಸಾಲದ್ದಕ್ಕೆ ಹುಡುಗನು ತನ್ನ ಕೆಲಸವನ್ನು ಮಾಡಲಾರನು. ಇಂಥ ಪ್ರಸಕ್ತಿಯಲ್ಲಿ ಅವನು ಶಾಸನದ ಭೀತಿಯಿಂದ ಮುಂದಾಗನು. ಅಂದರೆ ಅವನಿಗೆ ಯಾವದೊಂದು ಕೆಲಸಕ್ಕೆ ಮುಂದಾಗಲಿಕ್ಕೆ ಧೈರ್ಯ ಸಾಲುವದಿಲ್ಲ. ಇದನ್ನು ಕೆಲಮಾಸ್ತರರು ಹಟವೆಂದು ತಿಳಿದುಕೊಳ್ಳುವರು; ಆದರೆ ಇದು ಹಟ ಅಥವಾ ಸ್ವಭಾವದೋಷವಲ್ಲ, ಇದು ಪ್ರಕೃತಿದೋಷವು.

೩. ಅಂಜಿಕೆ:—ಇದರ ಮೂಲಕವಾಗಿ ವಿದ್ಯಾರ್ಥಿಯು ಕಂಗೆಟ್ಟು ಗಪ್ಪಾಗುವನು. ಅವನ ಉತ್ಸಾಹವೆಲ್ಲ ಅಳಿದು ಹೋಗಿ ಅಂಜಿಕೆಗೆ ಸಂಬಂಧಿಸಿದ ಯಾವತ್ತು ಸಂಗತಿಗಳನ್ನು ಕುರಿತು ಅವನ ಮನಸ್ಸಿನಲ್ಲಿ ವಿಪರೀತ ಕಲ್ಪನೆಗಳು ಹುಟ್ಟಿ ಅವರಿಂದ ಅವನು ಪರಿಪರಿಯಿಂದ ಭಂಗಬಡುವನು. ಅಪೇಕ್ಷಿಸಿದ ಕೆಲಸವು ಕೈಗೆ ನಿಲುಕದಿದ್ದರೆ ಆಗುವ ಮನಸ್ತಾಪವು ಭೀತಿಯಿಂದ ಇಮ್ಮಡಿಯಾಗುತ್ತದೆ. ಸೋತ ಸಂಬಂಧದ ನೋವು ಒಂದು; ಅನಿಸಿಕೊಳ್ಳುವ ಅಂಜಿಕೆಯೂ ಅದರ ಅನಿಶ್ಚಿತತ್ವವೂ ಇವುಗಳ ಸಂಬಂಧದ ಮನಸ್ತಾಪವು ಮತ್ತೊಂದು. ಅಂಜಿಕೆಯು ಬಹಳ ನಷ್ಟಕರವಾದ ವಿಕಾರವು. ಇದರಿಂದ ವಿದ್ಯಾರ್ಥಿಯ ಉತ್ಸಾಹವು ಹಾಳಾಗುವದಲ್ಲದೆ ಅವನ ವಿಚಾರಗಳೆಲ್ಲ ಚೆದರಿಸಲ್ಪಟ್ಟು ಪ್ರಗತಿಯು ಕಟ್ಟಾಗುತ್ತದೆ. ಭೀತಿಯಿಂದ ಹುಟ್ಟಿದ ಪ್ರಯತ್ನ ಪರಾಙ್ಮು

ಖಿತಯು ಹಟಮಾರಿತನದಂತೆ ತೋರುವದು; ಆದರೆ ಅದು ಹಟಮಾರಿತನವಲ್ಲ.

ಉಪಾಯ:—ಮೇಲೆ ವಿವರಿಸಿದ ಮೂರು ಪ್ರಸಕ್ತಿಗಳಲ್ಲಿ ಪ್ರಕೃತಿದೋಷವಿರುವದೇ ಹೊರತು ಸ್ವಭಾವದೋಷವಿರುವದಿಲ್ಲ. ಕೆಲಸವನ್ನು ಮಾಡಬಾರದೆಂಬ ಬುದ್ಧಿಯಿಂದ ವಿದ್ಯಾರ್ಥಿಯು ಕೆಲಸವನ್ನು ತಪ್ಪಿಸುವದಿಲ್ಲ. ಆದರೆ ಅವನಿಂದ ಆಗದ್ದಕ್ಕೆ ತಪ್ಪಿಸುತ್ತಾನೆ. ಇದಕ್ಕಾಗಿ ಅವನನ್ನು ಶಿಕ್ಷಿಸುವದು ನ್ಯಾಯವಲ್ಲ. ಶ್ರೇಯಸ್ಕರವೂ ಅಲ್ಲ. ಈ ಪ್ರಸಂಗವಲ್ಲಿ ವಿದ್ಯಾರ್ಥಿಗೆ ನೆರವಾಗುವದೇ ಯುಕ್ತವು. ಶಿಕ್ಷಿಸುವದು ಎಷ್ಟು ಮಾತ್ರವೂ ಯುಕ್ತವಲ್ಲ. ಅವನನ್ನು ಪ್ರೋತ್ಸಾಹಗೊಳಿಸಿ ಹಾದಿಗೆ ತರುವದು ವಿಹಿತವು. ನಿಷ್ಠುರತನದಿಂದ ನಡಿಸಿಕೊಂಡು ಯಾವ ಕೆಲಸಕ್ಕೆ ಬಾರದಂತೆ ಮಾಡಿಬಿಡುವದು ವಿಹಿತವಲ್ಲ.

ನಿಜವಾದ ಹಟಮಾರಿತನವು:—ಈ ದುರ್ಗುಣವು ಅನೇಕ ಕಾರಣಗಳಿಂದ ಹುಟ್ಟುತ್ತದೆ.

೧. ಶಿಕ್ಷಕನ ಕಾರಣದಿಂದ— (अ) ಶಿಕ್ಷಕನು ಕಠೋರ ನಡೆನುಡಿಗಳುಳ್ಳವನಾಗಿ ವಿದ್ಯಾರ್ಥಿಗಳನ್ನು ನಿಷ್ಠುರರೀತಿಯಿಂದ ನಡಿಸಿಕೊಂಡರೆ,

(ब) ಶಿಕ್ಷಕನು ವಿಚಿಕಿತ್ಸಕನಾಗಿ ಯಾವಾಗಲೂ ದೋಷವನ್ನು ಹುಡುಕುವ ಸ್ವಭಾವದವನಿದ್ದರೆ,

(क) ಶಿಕ್ಷಕನು ವಿದ್ಯಾರ್ಥಿಗಳನ್ನು ಹಳಿದು ಮಾತನಾಡುವ ಸ್ವಭಾವದವನಿದ್ದರೆ ಅಥವಾ ಮನಸಿಗೆ ಹತ್ತುವಂಥ ಮಾತುಗಳನ್ನು ಆಡುವ ಸ್ವಭಾವದವನಿದ್ದರೆ,

(ड) ಆಗಲಾರದ ಕೆಲಸಗಳನ್ನು ವಿದ್ಯಾರ್ಥಿಗಳು ಮಾಡಬೇಕೆಂದು ಬಯಸಿ, ತಪ್ಪಿದವರಿಗೆ ಶಿಕ್ಷಿಸಲಿಕ್ಕೆ ಹವಣಿಸುವಂಥ ಸ್ವಭಾವದವನಿದ್ದರೆ ಅವನ ಕೈಕೆಳಗಿನ ವಿದ್ಯಾರ್ಥಿಗಳು ಕಾಲಾಂತರದಿಂದ ಹಟಮಾರಿಗಳಾಗುತ್ತಾರೆ.

೨. ಅನಿಶ್ಚಿತವಾದ ಹಟಮಾರಿತನ:—ಕೆಲವು ಪ್ರಸಂಗವಲ್ಲಿ ವಿದ್ಯಾರ್ಥಿಯು ಹಟ ಮಾಡುತ್ತಾನೆ, ಕೆಲವು ಪ್ರಸಂಗವಲ್ಲಿ

ಮಾಡುವದಿಲ್ಲ. ಅಂದರೆ ನಿಶ್ಚಯದಿಂದ ಹಟ ಮಾಡುವನೆಂದು ಹೇಳಲಿಕ್ಕೆ ಬರುವದಿಲ್ಲ. ಇದಕ್ಕಾದರೂ ಮೇಲೆ ವಿವರಿಸಿದ ಶಿಕ್ಷಕನ ನಡತೆಯೇ ಕಾರಣವು. ಆದರೆ ಅನಿಶ್ಚಿತತ್ವವು ಇದರ ಭೇದಕಲಕ್ಷಣವು. ದುರಭಿಮಾನಿಗಳ ಬಾಡೌಲಿಗೆ ಕೂಡು ಬಂದರೆ ಅವರಲ್ಲಿ ಈ ದುರ್ಗುಣವು ಅಂಕುರಿಸುತ್ತದೆ.

೩. ದುಷ್ಟವಾದ **ಹಟಮಾರಿತನ ಅಥವಾ ಚಂಡಿತನ:—** ಇದು ಗರ್ಹಣೀಯವಾದ ಸ್ವಭಾವದೋಷವು. ಇದರಿಂದ ನೀತಿಯ ಅಭಾವವೂ ಮನಸ್ಸಿನ ಸಂಕುಚಿತತ್ವವೂ ಸ್ವಾರ್ಥಪರತ್ವವೂ ವ್ಯಕ್ತವಾಗುತ್ತವೆ. ಈ ದುರ್ಗುಣವುಳ್ಳ ವಿದ್ಯಾರ್ಥಿಯು ವರಿಷ್ಠರಿಗೆ ಎದುರಾಗಲಿಕ್ಕೆ ಹೆದರುವದಿಲ್ಲ. ಇವನು ತನ್ನ ಎಟ್ಟಿತನದ ಮೂಲಕವಾಗಿ ಜನರಿಗೆ ಬೇಡಾಗುತ್ತಾನೆ. ಯಾವದೊಂದು ಮಾತಿನಲ್ಲಿ ವಿರುದ್ಧ ಹೂಡುವದರಿಂದ ಬಹು ಜನರಿಗೆ ಗೊತ್ತಾಗುತ್ತಾನೆ.

ಉಪಾಯ:—(೧) ಶಿಕ್ಷಕನ ಆಚಾರದೋಷದಿಂದ ಹುಟ್ಟುವ ದುರ್ಗುಣಕ್ಕೆ ಆಚಾರದ ತಿದ್ದುಪಾಟೇ ಮೇಲಾದ ಉಪಾಯವು. ಶಿಕ್ಷಕರು ಈ ಮಾತನ್ನು ಮನಗಂಡು ಎಚ್ಚರದಿಂದ ನಡೆದರೆ ಈ ದುರ್ಗುಣವು ಹುಟ್ಟಲರಿಯದು.

(೨) ಈ ಪ್ರಸಕ್ತಿಯಲ್ಲಿ ಆ ದುರಭಿಮಾನಿಯು ಯಾರಿಗೂ ಸೇರದಂತೆ ಮಾಡುವದೇ ತಕ್ಕ ಉಪಾಯವು. ಅವನ ನಡತೆಗೆ ಎಲ್ಲರೂ ಹೆಸರಿಡಹತ್ತಿದರೆ, ತನ್ನಿಂದತಾನೇ ಅವನು ಹಾದಿಗೆ ಬರುವನು. ಇದಕ್ಕೂ ಮೀರಿದರೆ ಅವನನ್ನು ಸಾಲೆಯಿಂದ ತೆಗೆದುಹಾಕುವದು ವಿಹಿತವು.

(೩) ಚಂಡಿತನವನ್ನು ಹೋಗಲಾಡಿಸುವ ಉಪಾಯಗಳ ಸಂಬಂಧದಿಂದ ಸ್ವಲ್ಪ ಮತಭೇದ ಉಂಟು. ಆದಾಗ್ಯೂ ಸರ್ವಸಮ್ಮತವಾದ ಉಪಾಯಗಳು ಯಾವವೆಂದರೆ:—

(ಅ) ನೀವು ಅವನನ್ನು ನಂಬುವದಿಲ್ಲವೆಂದು ವಿದ್ಯಾರ್ಥಿಯು ನೆನಿಸಲೂ ಕೂಡದು. ಅವನಿಗೆ ತಿಳಿಯಲೂ ಕೂಡದು.

(ಆ) ಶಿಕ್ಷಕನು ಸ್ಥಿರತ್ವವುಳ್ಳವನೂ ಮನಸ್ಸಿನ ಸಮತೆಯನ್ನು ಕಳಕೊಳ್ಳದವನೂ ಸೂಕ್ತಾಸೂಕ್ತವನ್ನು ನೋಡಿ

ಯೋಗ್ಯವಾದದ್ದನ್ನೇ ಕೈಕೊಳ್ಳುವವನೂ ಆಗಿರಬೇಕು. ಸ್ವಾರ್ಥಪರತ್ವಕ್ಕೆ ಅವನು ಎಷ್ಟು ಮಾತ್ರವೂ ಇಂಬುಗೊಡಕೂಡದು.

(ಈ) ಶಿಕ್ಷಕನು ವಿದ್ಯಾರ್ಥಿಯು ಕೂಡ ಕೂಡಿದಷ್ಟು ಮಟ್ಟಿಗೆ ವಾಗ್ವಾದವನ್ನು ಎಂದೂ ನಡಿಸಬಾರದು. ಅಪ್ಪಿತಪ್ಪಿ ನಡಿಸಿದರೆ ತನ್ನ ಪಕ್ಷ ಬೀಳದಂತೆ ಎಚ್ಚರಪಡಬೇಕು.

(ಉ) ಹಟದಿಂದ ಎದುರಾಗುವ ಹುಡುಗನಿಗೆ ಯಾರೂ ಮೆಚ್ಚದಂತೆಯೂ ಎಲ್ಲರೂ ಅವನಿಗೆ ಛೀ ಹಾಕುವಂತೆಯೂ ಮಾಡಬೇಕು.

(ಊ) ದೇಹದಂಡನವೇ ಚಂಡಿತನಕ್ಕೆ ಮೇಲಾದ ಉಪಾಯವೆಂದು ಬಹು ಜನ ಬಲ್ಲವರು ಹೇಳುತ್ತಾರೆ. ಆದರೆ ಇದನ್ನು ಎಲ್ಲ ಪ್ರಸಂಗಗಳಲ್ಲಿ ಉಪಯೋಗಿಸದೆ ವಿಶೇಷ ಪ್ರಸಂಗದಲ್ಲಿ ಮಾತ್ರ ಉಪಯೋಗಿಸತಕ್ಕದ್ದು. ಇಂಥ ವಿದ್ಯಾರ್ಥಿಯನ್ನೊಬ್ಬನನ್ನೇ ಬೇರೆಯಾಗಿ ಕರೆದು ತಪ್ಪು ತಿಳಿಸುವದರಿಂದ ಶಿಕ್ಷೆಯ ಪ್ರಸಂಗವು ಬಹುತರ ತಪ್ಪುವದು.

(ಋ) ಸ್ವಪಕ್ಷಮಂಡನವನ್ನೂ ವಿದ್ಯಾರ್ಥಿಯ ಪಕ್ಷಖಂಡನವನ್ನೂ ಮಾಡಿದ ಶಿಕ್ಷಕನು, ಹುಡುಗಾಟಿಕೆ ಮಾಡಕೂಡದು. ಅವನು ಗಂಭೀರನೂ ದೊಡ್ಡ ಮನಸ್ಸಿನವನೂ ಆಗಿ ನಡಿಯತಕ್ಕದ್ದು.

ಯಾವತ್ತೂ ಉಪಾಯಗಳನ್ನು ಮೀರಿದ ವಿದ್ಯಾರ್ಥಿಗಳನ್ನು ಸಾಲೆಯಿಂದ ಹೊರಗೆ ಹಾಕಬಹುದು.

ಅಳುವದು—ಇದರಲ್ಲಿ ಎರಡು ಪ್ರಕಾರಗಳುಂಟು. (೧) ತನ್ನ ಮನದಪೇಕ್ಷೆಯು ಕೊನೆಗಾಣುವವರೆಗೆ ಮೊಂಡತನದಿಂದ ಅಳುವದು. (೨) ದುಃಖದಿಂದ ಅಳುವದು.

೧. **ಮೊಂಡತನದಿಂದ ಅಳುವದು**-ತನ್ನ ಹಟ ಸಾಧಿಸಿ ಪ್ರಾಮುಖ್ಯವನ್ನು ಪಡೆಯುವದೇ ಅಳುವವರ ಮುಖ್ಯ ಉದ್ದೇಶವು. ವಿದ್ಯಾರ್ಥಿಗಳು ತಮ್ಮ ಹಟವನ್ನೇ ಯಾವಾಗಲೂ ಸಾಧಿಸಲಿಕ್ಕೆ ಹವಣಿಸುತ್ತಾರೆ. ಯಾವದೊಂದು ಕೆಲಸವು ಅವರ ಮನಸ್ಸಿನಂತೆ ಆಗದಿದ್ದರೆ ಅಭೀಷ್ಟ ಸಾಧಿಸುವ ಬೇರೆ ಮಾರ್ಗವು ತೋರದೆ, ಧನಿ ತೆಗೆದು, ಬಿಕ್ಕಿಬಿಕ್ಕಿ ಅಳುವರು. ಇ

ದಕ್ಕೆ ನೀವು ಮನಸ್ಸು ಸೋತು ಅವರ ಮನಸ್ಸಿನಂತೆ ಮಾಡಿದರೆ, ಅಥವಾ ಬರೇ ಅಳಗೊಟ್ಟರೆ ಅವರಿಗೆ ಅಡ್ಡಮಾರ್ಗದಿಂದ ಹೋಗಲಿಕ್ಕೆ ನೀವೇ ಕಲಿಸಿದಂತೆ ಆಗುವದು.

ಅಳುವ ಹುಡುಗರ ಸ್ವಭಾವವನ್ನೂ ಅಳುವ ಕಾರಣವನ್ನೂ ಪರಿಸ್ಥಿತಿಯನ್ನೂ ಲಕ್ಷಕ್ಕೆ ತಂದು ಮನಸು ಒಲಿಸಿಯಾಗಲಿ, ರಮಿಸಿಯಾಗಲಿ, ವಿನೋದ ಮಾಡಿಯಾಗಲಿ ಅವರನ್ನು ಹಾದಿಗೆ ತರುವ ಪ್ರಯತ್ನ ಮಾಡಬೇಕು. ಇದು ಸಫಲವಾಗದಿದ್ದರೆ ಸ್ವಲ್ಪ ಬಿಸಿ ಮಾಡುವದು ಯುಕ್ತವು. ಕಣ್ಣಂಜಿಕೆ, ಮೂಗಂಜಿಕೆಗೆ ವಿಕಾರಿಪ ಸಂಗತಿಯು ಹಟವೆನಿಸುವದು. ಅದಕ್ಕೆ ದೇಹದಂಡನವೇ ತಕ್ಕ ಮದ್ದು. ತನ್ನ ಹಟವನ್ನೇ ಸಾಧಿಸುವ ಅಭಿಲಾಷೆಯು ಇಚ್ಛೆಯ ಎಟ್ಟಿತನವನ್ನು ವ್ಯಕ್ತಪಡಿಸುತ್ತದೆ. ಅದನ್ನು ಮುರಿಸಿ ತಿದ್ದಲಿಕ್ಕೇಬೇಕು. ಈ ಪ್ರಸಕ್ತಿಯಲ್ಲಿ ಎಷ್ಟು ಲತ್ತಿ ಹಾಕಿದರೂ ಒಮ್ಮೊಮ್ಮೆ ಹುಡುಗನು ಅಳುವದನ್ನು ಬಿಡುವದಿಲ್ಲ; ಆದರೆ ತಾನೇ ಬೇಸತ್ತು ಬಿಡುವದು ಎಷ್ಟು ಮಾತ್ರವೂ ಸರಿಯಲ್ಲ. ಈ ಮೇರೆಗೆ ಲತ್ತಿಗೂ ಮಣಿಯದೆ ತನ್ನ ಮಾತು ಸಾಧಿಸಿದ ಹುಡುಗನು ಹಾದಿಗೆ ಬರುವದು ಅಪರೂಪ. ಆದ್ದರಿಂದ ಲತ್ತೀ ಹಾಕಿದರೆ ಹುಡುಗನು ಹಟ ಬಿಡುವ ತನಕ ಅನನ್ನು ಬಿಡಕೂಡದು. ಒಟ್ಟಿಗೆ ಸ್ವೇಚ್ಛೆತನವನ್ನು ಸಾಗಗೊಡಬಾರದು.

೨ ದುಃಖದಿಂದಳುವದು—ವಿದ್ಯಾರ್ಥಿಯು ದುಃಖದಿಂದಳುತ್ತಾನೋ ಮಂಡತನದಿಂದಳುತ್ತಾನೋ ಎಂಬದನ್ನು ತಿಳಿಕೊಳ್ಳುವದು ದುಸ್ತರವಲ್ಲ. ಸಣ್ಣ ಹುಡುಗರಿಗೆ ತಮಗಾದ ನೋವನ್ನೂ ತಮಗೆ ಬೇಕಾದದ್ದನ್ನೂ ತಿಳಿಸಲಿಕ್ಕೆ ಅಳುವದು ಸ್ವಾಭಾವಿಕವಾದ ಮಾರ್ಗವಾಗಿರುವದು. ಚಿಕ್ಕ ಹುಡುಗರ ಸಂಬಂಧದಿಂದಂತೂ ಈ ಮಾತನ್ನು ಶಿಕ್ಷಕರು ಮರೆಯಕೂಡದು. ಆದರೆ ಈ ಚಟವನ್ನು ಬೆಳೆಯಗೊಡುವದು ಸರಿಯಲ್ಲ. ಸೌಮ್ಯೋಪಾಯಗಳಿಂದ ಇದನ್ನು ಬಿಡಿಸತಕ್ಕದ್ದು. ತಮಗಾದ ನೋವನ್ನೂ ಆಶಾಭಂಗವನ್ನೂ ಅಳದೆ ಸುಮ್ಮನೇ ಸಹಿಸುವ ಗುಣವನ್ನು ಅವರಲ್ಲಿ ಹುಟ್ಟಿಸತಕ್ಕದ್ದು. ಓಡ್ಯಾಡುವಾಗ ಎಚ್ಚರಪಡದ್ದರಿಂದ ಬಿದ್ದು ಪೆಟ್ಟಿನ

ಪೆಟ್ಟುಗಳನ್ನು ಅವರು ಸುಮ್ಮನೇ ಸಹಿಸಲಿಕ್ಕೆಬೇಕು. ಅವರು ಅಳಹತ್ತಿದರೆ ಅವರಿಗೆ ಮುಂದೆ ಎಚ್ಚರಪಡಬೇಕೆಂದು ಹೇಳಿ ರಮ್ಮಿಸುವದೇ ವಿಹಿತವು. ಇಂಥ ಪ್ರಸಕ್ತಿಯಲ್ಲಿ ಪುನಃ ಓಡಿ ಪುನಃ ಬೀಳಲಿಕ್ಕೆ ಹೇಳುವದೇ ತಕ್ಕದ್ದೆಂದು ಲಾಕನು ಪ್ರತಿಪಾದಿಸುತ್ತಾನೆ. ಹುಡುಗರು ಮೆತ್ತಗಾಗುವದಕ್ಕೆ ಬದಲಾಗಿ ಘಟ್ಟಿಯಾಗುವದೇ ಅವಶ್ಯವೆಂತಲೂ ಸ್ವಭಾವದ ಕೋಮಲತ್ವವನ್ನೂ ಸ್ವಾಭಿಮಾನವನ್ನೂ ಬೆಳೆಸುವದೇ ವಿಹಿತವೆಂತಲೂ ಅವನು ತಿಳಿಸುತ್ತಾನೆ,

DEPARTMENTAL NOTICE.

ನೋಟೀಸು.

ಈ ನೋಟೀಸಿನಿಂದ ಪ್ರಸಿದ್ಧಿಸಲ್ಪಡುವದೇನಂದರೆ—ಸನ್ ೧೮೯೫ ನೇ ಇಸವಿಯ ಜಾನ್ಯುಆರಿ ೧೬ ನೇ ತಾರೀಖಿಗೆ ಮತ್ತು ಸನ್ ೧೮೯೮ನೇ ಇಸವಿಯ ಜುಲೈ ೧೪ ನೇ ತಾರೀಖಿಗೆ ಛಾಪಿಸಲ್ಪಟ್ಟ ಮುಂಬಯಿ ಗವ್ಹರ್ನಮೆಂಟ ಗ್ಯಾಝಿಟಿನ ೧ ನೇ ಭಾಗದಲ್ಲಿ ಪ್ರಸಿದ್ಧಿಸಲ್ಪಟ್ಟ ಹೊಸ ನಿಯಮಗಳ ೨ ನೇ ಪರಿಶಿಷ್ಟದ ಅ, ಬ ಶೆಡ್ಯುಲಗಳಿಗೆ ಸರಿಯಾಗಿ ಸನ್ ೧೮೯೯-೧೯೦೦ ನೇ ಇಸವಿಯ ಪಬ್ಲಿಕ ಸವ್ಹೀಸ ಸರ್ಟಿಫಿಕೇಟು ಪರೀಕ್ಷೆಗಳು ಸಪ್ಟಂಬರ ೧೧ ನೇ ತಾರೀಖು ಸೋಮವಾರ ಮತ್ತು ತದುತ್ತರ ದಿವಸಗಳಲ್ಲಿ ಧಾರವಾಡದಲ್ಲಿ ತೆಗಿದುಕೊಳ್ಳಲ್ಪಡುವವು.

೨. ಮರಾಠಿ ಭಾಷೆಯಲ್ಲಿ ಪರೀಕ್ಷಿಸಲಪೇಕ್ಷಿಸುವ ಉಮೇದವಾರರು ಬೆಳಗಾವಿ ಶೆಂಟರಿನಲ್ಲಿ ಆಗುವ ಪರೀಕ್ಷೆಗೆ ಕೂಡ್ರಬಹುದು.

೩. ಪರೀಕ್ಷೆಗೆ ಕೂಡ್ರತಕ್ಕವರು ತಮ್ಮ ಅರ್ಜಿಗಳನ್ನು ತಾ॥ ೧ ನೇ ಅಗಸ್ಟ ೧೮೯೯ ನೇ ಇಸವಿಯ ದಿವಸ ಇಲ್ಲವೆ ತತ್ಪೂರ್ವದಲ್ಲಿ ತಲಪುವಂತೆ ಪರೀಕ್ಷಾಕಮಿಟಿಯ ಪ್ರೆಸಿಡೆಂಟರಾದ ಧಾರವಾಡ ಹಾಯಸ್ಕೂಲ ಹೆಡ್ಡ ಮಾಸ್ತರರ ಕಡೆಗೆ ಕಳಿಸಬೇಕು. ಪ್ರತಿಯೊಂದು ಅರ್ಜಿಯಲ್ಲಿ ವಿದ್ಯಾರ್ಥಿಯ ಪೂರ್ಣ ಹೆಸರೂ ಅವನು ಯಾವದೊಂದು ಶಾಲೆಯಲ್ಲಿ ಕಲಿ

ತ್ತಿದ್ದರೆ ಆ ಶಾಲೆಯ ಹೆಸರೂ ಇರತಕ್ಕದ್ದು. ಮತ್ತು ವಿದ್ಯಾರ್ಥಿಯು ತಾನು ಕೂಡ್ರಲಿಚ್ಛಿಸುವ ಪರೀಕ್ಷೆಯ ವರ್ಗವನ್ನಾವರೂ ಅದರಲ್ಲಿ ತೋರಿಸಬೇಕು.

೪. ಪ್ರತಿಯೊಬ್ಬ ವಿದ್ಯಾರ್ಥಿಯು ತಾನು ಇರುವ ಜಿಲ್ಲೆಯಲ್ಲಿ ಆಗುವ ಪರೀಕ್ಷೆಗೆ ಕೂಡ್ರಬೇಕು; ಮತ್ತು ತಾನು ಕಳೆದ ಆರು ತಿಂಗಳದಿಂದ ಆ ಜಿಲ್ಲೆಯಲ್ಲಿದ್ದೇನೆಂಬ ಬಗ್ಗೆ ತಾನು ಇರುವ ಊರ ಪಾಟೀಲನದಾಗಲಿ, ಸಾಲೀಯ ಮಾಸ್ತರನದಾಗಲಿ ಸರಟಿಫಿಕೇಟನ್ನು ಹಾಜರಪಡಿಸಬೇಕು.

೫. ವಿದ್ಯಾರ್ಥಿಗಳ ವಯಸ್ಸು, ಪರೀಕ್ಷೆಯ ಫೀ, ಪರೀಕ್ಷೆಯ ವಿಷಯ ಮುಂತಾದ ಮಾಹಿತಿಯು ಸನ್ ೧೮೯೫ನೇ ಇಸವಿಯ ಜಾನ್ಯುಆರಿ ೧೭ನೇ ತಾರೀಖಿಗೆ ಮತ್ತು ೧೮೯೮ನೇ ಇಸವಿಯ ಜುಲೈ ೧೪ನೇ ತಾರೀಖಿಗೆ ಛಾಪಿಸಲ್ಪಟ್ಟ ಮುಂಬೈ ಗವ್ಹರ್ನಮೆಂಟ ಗ್ಯಾಝೀಟಿನ ೧ನೇ ಭಾಗದಲ್ಲಿ ಛಾಪಿಸಲ್ಪಟ್ಟಿದೆ. ಅವಶ್ಯಕರು ನೋಡಬಹುದು.

೬. ಈ ವರ್ಷ ಆಗುವ ಪರೀಕ್ಷೆಗಳಿಗಾಗಿ ನೇಮಿಸಿದ ಪ್ರಸ್ತಕಗಳು ಸನ್ ೧೮೯೮ನೇ ಇಸವಿಯ ನೊವೆಂಬರ ೩ನೇ ತಾರೀಖಿನ ಮುಂಬೈ ಗವ್ಹರ್ನಮೆಂಟ ಗ್ಯಾಝಿಟಿನ ೨ನೇ ಭಾಗದಲ್ಲಿ ೧೬೫೬ನೇ ಪುಟದಲ್ಲಿ ಪ್ರಸಿದ್ಧಿಸಲ್ಪಟ್ಟವೆ.

ಧಾರವಾಡ,
ತಾ॥ ೧೩ನೇ ಮೇ ೧೮೯೯.

J. McNEILL,
ಕಲೇಕ್ಟರ ಧಾರವಾಡ.

ಟೀಪು—ಇದೇ ಮೇರಿಗೆ ವಿಜಾಪೂರ, ಬೆಳಗಾವ, ಕಾರವಾರ ಜಿಲ್ಲೆಗಳ ಕಲೇಕ್ಟರರಾದರೂ ನೋಟೀಸುಗಳನ್ನು ಪ್ರಸಿದ್ಧಿಸಿರುವರು. ಎಲ್ಲ ಕಡಿಯಲ್ಲಿಯೂ ಆಗುವ ಪರೀಕ್ಷೆಗಳ ತಾರೀಖು ಒಂದೇ ಇರುವದು ಎಲ್ಲರಿಗೂ ಗೊತ್ತುಂಟು. ವಿಜಾಪುರ ಜಿಲ್ಲೆಯಲ್ಲಿ ವಾಸಿಸುವವರು ಮರಾಠಿಯಲ್ಲಿ ಪರೀಕ್ಷೆಗೆ ಕೂಡ್ರಲಪೇಕ್ಷಿಸಿದರೆ ಮೆ. ಎಜ್ಯುಕೇಶನಲ್ ಇನ್ಸಪೇಕ್ಟರರ ಪರವಾನಗಿ ಪಡಕೊಂಡು ಬೆಳಗಾವಿ ಇಲ್ಲವೆ ಸೊಲ್ಲಾಪೂರ ಸೆಂಟರುಗಳಲ್ಲಿ ಆಗುವ ಪರೀಕ್ಷೆಗೆ ಕೂಡ್ರಬಹುದು.

CORRESPONDENCE.

ಪತ್ರವ್ಯವಹಾರ.

(೧೨೮ ನೇ ಪುಟದಿಂದ ಮುಂದೆ ಸಾಗಿದ್ದು.)

೪ ನೆಯ ಕಥೆ.

ಆಮೆಯೂ ಹುಡುಗರೂ.

ಮಾನಸ ಸರೋವರದಲ್ಲಿ ಒಂದು ಆಮೆಯು ಬಹಳ ದಿವಸದಿಂದ ವಾಸವಾಗಿತ್ತು. ಅಲ್ಲಿಗೆ ನೀರು ಕುಡಿಯುವದಕ್ಕಾಗಿ ಎರಡು ಹಂಸಗಳು ನಿತ್ಯದಲ್ಲಿಯೂ ಬರುತ್ತಿದ್ದವು. ಕೆಲವು ದಿವಸಗಳ ಮೇಲೆ ಈ ಆಮೆಗೂ ಆ ಹಂಸಗಳಿಗೂ ಬಹಳ ಮಿತ್ರತ್ವ ಉಂಟಾಯಿತು. ಅವು ಬಂದವೆಂದರೆ ಈ ಆಮೆಯು ಆನಂದದಿಂದ ಮೇಲೆ ಬಂದು ಮಾತು ಕಥೆಗಳನ್ನಾಡಿ ಕಾಲ ಕಳಿಯುವದು. ಹಂಸಗಳಿಗಾದರೂ ಆಮೆಯಮೇಲೆ ಬಹಳೇ ಪ್ರೀತಿಯುಂಟಾಯಿತು. ಒಂದು ದಿನ ಆಮೆಯು ಹಂಸಗಳಿಗೆ ಅನ್ನುತ್ತದೆ:—ಗೆಳೆಯರೇ, ನಿತ್ಯದಲ್ಲಿಯೂ ನೀವು ನನ್ನೊಬ್ಬನನ್ನು ಇಲ್ಲಿ ಬಿಟ್ಟು ಸ್ವರ್ಗವನ್ನೆಲ್ಲಾ ತಿರುಗಾಡುವಿರಿ. ಇಂದು ನನ್ನನ್ನೂ ಕರಕೊಂಡು ಹೋಗಬೇಕು. ಅದಕ್ಕೆ ಹಂಸಗಳು— ಪ್ರಿಯನೇ, ನಾವು ಪಕ್ಷಿಗಳು, ನಾವು ಹಾರ್ಯಾಡುವಂತೆ ನಿನ್ನಿಂದ ಆಗದು. ನಮ್ಮ ಸಂಗಡ ನೀನು ಬಂದರೆ ಒಂದಿಲ್ಲ ಒಂದು ತರದಿಂದ ದುಃಖಪಡಬೇಕಾಗುವದು. ಕಾರಣ ನೀನು ಇಲ್ಲಿಯೇ ಸುಖದಿಂದ ಇರೆಂದು ಹೇಳಿದವು. ಆಮೆಗೆ ಆ ಮಾತು ಸೇರದೆ ಬರುವೆನೆಂಬ ಹಟ ಹಿಡಿದು ಅನ್ನುತ್ತದೆ:—ನಿಮ್ಮ ಮನಸಿನಲ್ಲಿ ನನ್ನನ್ನು ಒಯ್ಯಬಾರದೆಂದು ಇರಲಿಕ್ಕೆ ಸಾಕು; ಇಲ್ಲವಾದರೆ ನೀವಿಬ್ಬರೂ ಒಂದು ಕೋಲನ್ನು ಎರಡೂ ತುದಿಯಲ್ಲಿ ಕಚ್ಚಿಕೊಂಡಿರೆಂದರೆ ಮಧ್ಯದಲ್ಲಿ ನಾನು ಹಿಡಿಯುವೆನು. ನೀವು ಆಗ ಹಾರಲಾರಂಭಿಸಿದರೆ ನಾನೂ ನಿಮ್ಮ ಸಂಗಡಲೇ ಬರುವೆನು. ತಾವು ಅನೇಕ ಪ್ರಕಾರವಾಗಿ ಹೇಳಿದರೂ ಕೇಳದೆ ಹಟ ಹಿಡಿದ ಆಮೆಯು ಹೇಳಿದಂತೆಯೇ ಕೋಲಿನ ಎರಡೂ ತುದಿಗಳನ್ನು

ತಮ್ಮ ಬಾಯಲ್ಲಿ ಹಿಡಕೊಂಡವು. ಹಾರಿಹೋಗುವಾಗ ಹಿಡಿದ ಬಾಯನ್ನಾದರೂ ಬಿಡಬಾರದಾಗಿ ಹಂಸಗಳು ಪುನಃ ಪುನಃ ಹೇಳಿ ಅಲ್ಲಿಂದ ಹೊರಟವು. ಆವೆಯು ಮಧ್ಯದಲ್ಲಿ ಹಿಡಿಯಿತು. ಈ ಪ್ರಕಾರ ಅವು ಅಂತರಿಕ್ಷದಲ್ಲಿ ಹಾರಿಹೋಗುವಾಗ ಅಡವಿಯಲ್ಲಿ ದನ ಕಾಯುತ್ತಿದ್ದ ಹುಡುಗರು ಕಂಡು ಬೆರಗಾಗಿ ಆವೆಯು ತಮಗೆ ಶಿಗಬೇಕೆಂಬ ಆಶೆಯಿಂದ ಕಲ್ಲನ್ನು ಒಗೆಯಲಾರಂಭಿಸಿದರು. ಕೆಳಗೆ ಬಿದ್ದರೆ ಅದನ್ನು ಸುಟ್ಟು ತಿನ್ನುವೆನೆಂದು ಒಬ್ಬನು ಅಂದನು. ಮತ್ತೊಬ್ಬನು ತನಗೆ ಸಿಕ್ಕರೆ ತಾನು ಅದನ್ನು ಮನೆಗೆ ಕೊಂಡುಹೋಗಿ ಮಾಂಸಮಾಡಿ ತಿನ್ನುವೆನೆಂದನು. ಇನ್ನೊಬ್ಬನು ತನಗೆ ಸಿಕ್ಕರೆ ತಾನು ಒಣಸಲ್ಯಾ ಮಾಡಿ ದಿನಾ ರೊಟ್ಟಿಯ ಕೂಡ ತುಸು ತುಸು ತಿನ್ನುವೆನೆಂದನು. ಆದರೆ ಅದು ಬೀಳದ್ದನ್ನು ಕಂಡು ಎಲ್ಲರೂ ಕೂಡಿ ಕೆಡವಿ ಪಾಲು ಹಂಚಿಕೊಳ್ಳಬೇಕೆಂದು ಗೊತ್ತು ಮಾಡಿಕೊಂಡರು. ಈ ಎಲ್ಲಾ ಮಾತನ್ನು ಕೇಳಿ ಆವೆಯು ಶಿಟ್ಟಿಗೆದ್ದು ಮನಸಿನಲ್ಲಿ ಸಹಿಸಲಾರದೆ ಬಾಯ ತೆರೆದು “ ರಂಡೇಮಕ್ಕಳಿರಾ ನೀವೆಲ್ಲರೂ ಬೂದೀ ತಿನ್ನಿರಿ ” ಅನ್ನುವಷ್ಟರಲ್ಲಿಯೇ ನೆಲದಮೇಲೆ ಬಿದ್ದು ಸತ್ತಿತು. ಆಗ ಎಲ್ಲರೂ ಕೂಡಿ ಅದನ್ನು ಸುಟ್ಟು ತಿಂದರು,

ಸಾರಾಂಶ— ತನಗಿಂತ ಹಿರಿಯರೂ, ಹಿತಚಿಂತಕಮಿತರೂ, ಜಾಣರೂ ಹೇಳಿದ ಮಾತನ್ನು ಕೇಳಿ ಅದರಂತೆ ನಡೆಯಬೇಕು. ಹಾಗಲ್ಲದೆ ತಮ್ಮ ಮನಸಿಗೆ ಬಂದಂತೆ ನಡೆವವರಿಗೆ ಈ ಆವೆಯ ಹಾಡಾಗುವದು.

ಪ್ರಶ್ನೆ—ನೀನು ಆವೆಯನ್ನು ನೋಡಿರುವಿಯಾ? ಎಲ್ಲಿ? ಬಾವಿಯಲ್ಲಿ ಅದನ್ನು ಯಾಕೆ ಇಡುತ್ತಾರೆ? ಅದಕ್ಕೆ ಕಾಲು ಎಷ್ಟು? ಕುತ್ತಿಗೆ ಹ್ಯಾಗಿರುತ್ತದೆ? ಅದರ ಬೆನ್ನು ಹ್ಯಾಗಿರುತ್ತದೆ? ಅದರ ಉಪಯೋಗವನ್ನು ಬಲ್ಲಿಯಾ? ಹಂಸಗಳ ಸಂಗಡ ಇದ್ದಾಗ್ಯೂ ಯಾಕೆ ಹಾರಬರಲಿಲ್ಲಾ? ಹಾರ್ಯಾಡುವ ಪ್ರಾಣಿಗಳು ಯಾವವು? ಆವೆಯು ಯಾಕೆ ನೆಲಕ್ಕೆ ಬಿತ್ತು?

[illegible]ನೆಯ ಕಥೆ.

ಬೆಕ್ಕು.

ರಾಮಾ ನೀನು ಬೆಕ್ಕನ್ನು ನೋಡಿದ್ದಿಯಾ? ಹೌದು, ಸ್ವಾಮಿ, ನೋಡಿದ್ದೇನೆ. ಎಲ್ಲಿ ನೋಡಿರುವಿ? ನಮ್ಮ ಮನೆಯಲ್ಲಿ. ಅದು ಏನು ತಿನ್ನುತ್ತದೆ? ನಾವು ಊಟ ಮಾಡುವಾಗ ಅದಕ್ಕೆ ಅನ್ನ ಹಾಕುತ್ತೇವೆ; ಅದನ್ನು ಅದು ತಿನ್ನುತ್ತದೆ. ಮತ್ತೇನು ತಿನ್ನುತ್ತದೆ? ಇಲಿಗಳನ್ನು ಹಿಡಿದು ತಿನ್ನುತ್ತದೆ. ಮತ್ತೂ ಏನು ತಿನ್ನುತ್ತದೆ? ಹಾಲನ್ನು ಕದ್ದು ಕುಡಿಯುತ್ತದೆ? ಆಗ ಅದಕ್ಕೆ ನೀನು ಏನು ಮಾಡುತ್ತೀ? ಕೋಲಿನಿಂದ ಹೊಡೆಯುತ್ತೇನೆ. ಯಾಕೆ? ಕಳವು ಮಾಡುತ್ತದೆಂತಾ. ಹಾಗಾದರೆ ಮನುಷ್ಯರು ಕಳವು ಮಾಡಿದರೆ ಅವರಿಗೂ ಶಿಕ್ಷೆ ಮಾಡಬೇಕಲ್ಲವೇ? ಹೌದು.

ಸಾರಾಂಶ— ಕಳವು ಮಾಡುವವನು ಒಮ್ಮಿಲ್ಲ ಒಮ್ಮೆ ಸಿಕ್ಕು ಅವನ ಹಾನಿಯಾಗುವದು.

ಪ್ರಶ್ನೆ—ಬೆಕ್ಕಿಗೆ ಕಾಲೆಷ್ಟು? ಅದರ ಬಾಲದ ಉಪಯೋಗವೇನು? ಅದರ ಕಣ್ಣಿಗೂ ನಮ್ಮ ಕಣ್ಣಿಗೂ ಹೆಚ್ಚು ಕಡಿಮೆ ಏನು? ಅದರ ಮೈ ಹ್ಯಾಗಿರುತ್ತದೆ? ಜನರು ಅದನ್ನು ಯಾಕೆ ಹೊಡೆದೋಡಿಸುವರು? ಇದರಿಂದ ಕಳವು ಮಾಡುವವರ ಪರಿಣಾಮವೇನಾಗುವದು? ಬೆಕ್ಕಿನ ಹಾಗೆಯೇ ಇರುವ ಎರಡನೇ ಪ್ರಾಣಿ ಯಾವದು?

೭೮ನೆ ಪಾಠ.

ತೆಂಗಿನ ಮರ.

ಮೂಲಸ್ಥಾನ—ಹಿಂದುಸ್ಥಾನ, ಸಿಂಹಳದ್ವೀಪ ಮುಂತಾದ ಎಲ್ಲಾ ಉಷ್ಣಪ್ರದೇಶಗಳಲ್ಲಿ ಬೆಳೆಯುವವು.

ವರ್ಣನೆ—ತೆಂಗಿನ ಮರವು ಐವತ್ತು ಅರವತ್ತು ಮೊಳ ಎತ್ತರ ಇರುವದು. ಬುಡದಿಂದ ತುದಿಯುವರೆಗೆ ಟೊಂಗೆಗಳಿರದೆ ಉದ್ದ ಕಂಬದಂತೆ ಇರುವದು. ತುದಿಯಲ್ಲಿ ಮಾತ್ರ ಬಾಳೆ ಗಿಡದಂತೆ ಹೆಡೆಗಳಿರುವವು. ಆ ಹೆಡೆಗಳು ಅಡ್ಡ ಸೀ

ಕರವವು. ತಿಂಗಳಿಗೊಂದು ಗೊನೆ ಬಿಟ್ಟು ಹೂವುಗಳಾಗಿ ಇಪ್ಪತ್ತು ಇಪ್ಪತ್ತೈದು ಕಾಯಿಗಳಾಗುವವು.

ಸಾಗುವಳಿ-ತೆಂಗಿನ ಕಾಯಿಗಳಿಗೆ ಮೊಳಕೆಗಳು ಬರುವವು. ಅವುಗಳನ್ನು ನಡುವರು. ಮುಂದೆ ಆರೇಳು ವರುಷಗಳಲ್ಲಿ ಕಾಯಿಗಳಾಗುವವು. ಎಳೆ ಕಾಯಿಗೆ ಸೀಯಾಳ ಅನ್ನುವರು. ತೆಂಗಿನ ಮರಗಳು ನೂರು ವರ್ಷಗಳವರೆಗೆ ಬದುಕುತ್ತವೆ.

ಉಪಯೋಗ—ಕಟ್ಟಿಗೆಯು ಮನೆ ಕಟ್ಟಲಿಕ್ಕೂ, ಕೊಬ್ಬರಿಯೊಳಗಿನ ನೀರು ಕುಡಿಯಲಿಕ್ಕೂ, ಕೊಬ್ಬರಿ ತಿನ್ನಲಿಕ್ಕೂ, ಎಣ್ಣೆಗೂ, ಹಿಂಡಿಗೂ ಉಪಯೋಗವುಳ್ಳದ್ದದೆ. ನಾರಿನಿಂದ ಕಾತಿಯೂ, ಕಾತಿಯಿಂದ ಹಗ್ಗವೂ ಆಗುವದು. ಕಡ್ಡಿಗಳಿಂದ ಕಸಬರಿಗೆಗಳನ್ನು ಮಾಡುವರು. ಚಿಪ್ಪು ಮುಂತಾದವುಗಳು ಉರವಲಕ್ಕೆ ಉಪಯೋಗವಾದವುಗಳು.

ಹಾಡು.

ಪ್ರಾಣವೇ ಹೋಗುಣವಾನ ॥ ಎಂಬ ಪದದಂತೆ.

ಗಳಿಸಿ ವಿದ್ಯಾಧನವಾ । ವಿದ್ಯಾರ್ಥಿಯರೇ ॥ ಗಳಿಸಿ ॥ ಪಲ್ಲ ಬಾಗಿನಿಂಗುರುಗಳ । ಚರಣಕೆ ವಿನಯದಿ । ಬೇಗ ಬಯಸಿರಿ ಹಿತವಾ ॥ ವಿದ್ಯಾ ॥ ೧ ॥ ನರರಿಗೆ ವಿದ್ಯೆಯು । ಪರಮಾಮೃತವಿದು । ದೊರೆವುದಿಷ್ಠಿತ ಪದವಾ ॥ ವಿ ॥ ೨ ॥ ಭಾರವಲ್ಲದು ತಾ । ಚೋರರು ಕದಿಯರು ॥ ಸಾರಶಾಶ್ವತಧನವಾ ॥ ವಿ ॥ ೩ ॥ ಗುರುದತ್ತಪ್ರಿಯಕಿಂ । ಕರ ರಾಮಕೃಷ್ಣನು ॥ ಒರೆದಬೋಧಪರವಾ ॥ ೪ ॥ ವಿದ್ಯಾರ್ಥಿಯರೇ ॥

ರಾಗ ॥ ಕಾಮದಾವೃತ್ತ ॥

ಚಲುವ ಬಾಲರೇ । ಒಲಿದು ವಿನಯದಿಂ ॥ ಫಳಿಲನೆದ್ದು ನೀಂ । ಉದಯ ಕಾಲದಿ ॥ ೧ ॥ ನಳಿನನಾಭನ । ಚರಣಸ್ಮರಿಸಿರಿ ॥ ಬಳಿಕ ಹಿರಿಯರ । ಪದಕೆ ಮಣಿಯಿರಿ ॥ ೨ ॥ ಚರಣಕರಗಳ । ಮುಖವ ತೊಳಿದು ನೀಂ ॥ ಧರಿಸಿ ಮಡಿಯನು । ಮಠಕೆ ಪೋಗಿ ನೀಂ ॥ ೩ ॥ ಲಲಿತ ಗುರುವಿನ ।

ಚರಣಕೆರಗಿರಿ ॥ ಕಲಿತ ಪಾಠವ । ಸಾಂಗೆಪಡಿಸಿರಿ ॥ ೪ ॥
ನೇಮದಿಂದಲೀ । ಪಾಠ ಕಲಿಯಿರೀ ॥ ಕಾಮಿಸಿಹಫಲ । ಪಡೆದು ಬಾಳಿರೀ ॥ ೫ ॥

ಎಡಿಟರ ಮಹಾರಾಯರೇ, ತಮಗೆ ಇದರಲ್ಲೇನಾದರೂ ತಿದ್ದುಪಾಟುಗಳನ್ನು ಮಾಡುವದು ಯೋಗ್ಯಕಂಡರೆ ಅವುಗಳನ್ನು ಸೇವಕನಿಗೆ ತಿಳುಹಿ, ತಾವೂ ತಮ್ಮ ಮಿತ್ರವರ್ಗದವರೂ ಸ್ವಹಸ್ತ ಪರಹಸ್ತಗಳಿಂದ ನನಗೆ ಪ್ರೋತ್ಸಾಹಪಡಿಸಬೇಕೆಂದು ಶರಗೊಡ್ಡಿ ಬೇಡಿಕೊಳ್ಳುತ್ತೇನೆ.

ಪತ್ರವಿಸ್ತಾರಕ್ಕೆ ಕ್ಷಮೆಯೂ, ಸೇವಕನ ಮೇಲೆ ಪೂರ್ಣಲೋಭವೂ ಇರಲಿ.

ಇಂತಿ ವಿನಯಾನ್ವಿತ ವಿಜ್ಞಾಪನಾಪೂರ್ವಕ ಶಿರಸಾಷ್ಟಾಂಗ ನಮಸ್ಕಾರಗಳು.

ಹೊನ್ನಾವರ
ತಾ ೧೫-೪-೯೯.

Ramakrishna M. Gokarn,
ಅ. ಮಾಸ್ತರ ೧ನೇ ನಂಬರ ಶಾಲಾ
ಹೊನ್ನಾವರ ಜಿಲ್ಲಾ ಉತ್ತರಕಾನಡಾ.

ಸನ್ ೧೮೯೯ನೇ ಇಸವಿಯ ಜೂನ ತಿಂಗಳಲ್ಲಿ ಧಾರವಾಡ ಜಿಲ್ಲೆಯಲ್ಲಿ ಆದ ಮಾಸ್ತರ ಜನರ ವರ್ಗಾವರ್ಗಿಗಳು—

ನಂಬರು.	ಹೆಸರು.	ಈಗ ವರ್ಗಾದ ಸ್ಥಳ.	ಪಗಾರ
೧	ವಿರುಪಾಕ್ಷ ಚಿನ್ನಪ್ಪಾ ಹೂಲಿ	ಹೆ. ಮಾ. ಅಣ್ಣಿಗೇರಿ	೫೦
೨	ಗದಿಗೆಪ್ಪಾ ಚಿನ್ನಪ್ಪಾ ಶಿರಕೋಳ	,, ಮೊರಬ	೩೫
೩	ತಿಪ್ಪಣ್ಣಶಾಸ್ತ್ರೀ ಬಾಳಶಾಸ್ತ್ರೀ	,, ಕೌಜಗೇರಿ	೧೫
೪	ಕೇಶವ ಗೋಪಾಳ ಅಣ್ಣಿಗೇರಿ	,, ತಡಕೋಡ	೨೦
೫	ನರಸೋ ಗಣೇಶ ಜಕಾತಿ	,, ಚಿಕ್ಕೇರೂರ	೩೦
೬	ಶ್ರೀನಿವಾಸ ಮ. ನಾಡಗೀರ	,, ಶಿಗ್ಗಾವ	೩೫
೭	ಖಂಡೊ ಲಿಂಗೊ ಕುರ್ತಕೋಟಿ	,, ಗರಗ	೩೦
೮	ವಿಷ್ಣು ಶಂಕರ ಬೋಠೆ	,, ನವಲೂರ	೩೦
೯	ಕೃಷ್ಣಾಜಿ ಶ್ರೀನಿವಾಸ ನಾಡಕರ್ಣಿ	,, ತಡಸ	೨೦
೧೦	ಕೇಶವ ರಾ. ಗಂಗಸಮುದ್ರ	,, ಕಲಘಟಗಿ	೨೦

೧೧	ರಾಘವೇಂದ್ರ ಕೃ. ಉಕ್ಕಡಗಾತ್ರಿ	,, ರಾಣಿಬೆನ್ನೂರ	೨೭
೧೨	ಪ್ರಭೂ ಫಕೀರಪ್ಪಾ ಲಾಳಶಿಂಗಿ.	,, ಬ್ಯಾಹಟ್ಟಿ	೨೫
೧೩	ಶಿದ್ದಪ್ಪಾ ಸಂಗಪ್ಪಾ ಸಾಣಿಕೊಪ್ಪ	,, ಮುಲ್ಲಾಪುರ	೧೮
೧೪	ಭೀಮಾಜಿ ಶ್ರೀನಿವಾಸ ಗಂಭೀರ	,, ಆಲೂರ (ಗದಗ)	೧೫
೧೫	ಸುಬ್ಬಾಜಿ ಶೇಷೋ ಪಾಯಸ	,, ನರೇಗಲ್ಲ (ಹಾನಗಲ್ಲ)	೧೮
೧೬	ಅಪ್ಪಾಜಿ ಭಿಕಾಜಿ ಜೋಸಿ	,, ಆದರಗುಂಚಿ	೨೦
೧೭	ತಮ್ಮಾಜಿ ನಾ. ಅವಿನಾಸಭಾವಿ.	ಅ. ಮಾ. ಬೆಟಗೇರಿ	೧೫
೧೮	ಫಕೀರಯ್ಯಾ ಒ. ತಲವಾಯಿ	ಹೆ. ಮಾ. ಕುರ್ತಕೋಟಿ	೨೫
೧೯	ಶಂಕರಪ್ಪಾ ಫ. ಸಾಲಿ	,, ತುಮ್ಮಿನಕಟ್ಟಿ	೨೫
೨೦	ಭೀಮಾಜಿ ಶಿವಾಜಿ ಚಿಲಕವಾಡ	,, ಸವದಿ	೨೫
೨೧	ಕೃಷ್ಣಾಜಿ ಬಾ. ಕುರಂಡವಾಡ	,, ಹತ್ತಿಮತ್ತೂರ	೧೫
೨೨	ಶ್ರೀನಿವಾಸ ಭೀಮಾಜಿ ಕಬ್ಬೂರ	ಅ. ಮಾ ಬಂಕಾಪೂರ	೧೫
೨೩	ಶ್ರೀನಿವಾಸ ಭೀಮಾಜಿ ಮುತ್ಸದ್ದಿ	,, ಶಿಗ್ಗಾವಿ	೧೫
೨೪	ಗುಡ್ಡೋ ಶಾಮಾಜಿ	ಹೆ. ಮಾ. ಅಲದಗೇರಿ	೨೦
೨೫	ಮಹಾದೇವ ಗ. ಜೋಗಳೇಕರ	,, ತಿಳವಳ್ಳಿ	೨೫
೨೬	ಅಡಿವೆಪ್ಪಾ ಬಸಲಿಂಗಪ್ಪಾ ಹೂಲಿ	,, ನರೇಂದ್ರ	೨೫
೨೭	ಜಯರಾಮ ರಾ. ಅಲವಾನಿ	,, ಅರಳೀಕಟ್ಟಿ	೨೦
೨೮	ವೆಂಕಟೇಶ ತಿರಕೋ ಕುಲಕರಣಿ	,, ಬಂಕಾಪುರ	೨೫
೨೯	ಲಿಂಗೋ ಚಿದಂಬರ ಜೋಸಿ	,, ಮುಂಡರಗಿ	೨೫
೩೦	ಗೂಳಪ್ಪಾ ಸಂಗಪ್ಪಾ ಉಣಚಗೇರಿ	,, ಹುಲಕೋಟಿ	೨೫
೩೧	ಭೀಮಾಜಿ ನಾರಾಯಣ ಯಾರ್ದಿ	,, ಕೊಟುಮಚಗಿ	೨೫
೩೨	ಅಣ್ಣಾಜಿ ವಿನಾ. ಜೋಗಳೇಕರ	,, ಕೊರ್ಲಹಳ್ಳಿ	೧೮
೩೩	ಲಿಂಗೋ ಮಲ್ಹಾರ ಮುಳಗುಂದ	,, ಚಿನ್ನಮುಳಗುಂದ	೧೫
೩೪	ಸಾಂಬಾಜಿ ಮಹಾದೇವ	೨ನೇ ಅ. ಮಾ. ಕಲಘಟಗಿ	೧೨
೩೫	ಫಕೀರಪ್ಪಾ ಲಿಂಗಪ್ಪಾ	ಹೆ. ಮಾ. ಚಿಲಕವಾಡ	೧೦
೩೬	ಮಧ್ವ ಅನಂತ ಗಡ	,, ಬೆಳವಣಕಿ	೨೦
೩೭	ಕೃಷ್ಣಾಜಿ ಶಂಕರ ತಳೇಗಾವ	,, ಇಂಗಳಹಳ್ಳಿ	೧೫
೩೮	ಕೃಷ್ಣಾಜಿ ಕೂಸೋ ಕುಲಕರ್ಣಿ	,, ಆಲದಕಟ್ಟಿ	೧೮
೩೯	ವೆಂಕಾಜಿ ಕೃಷ್ಣ ಬಾಗಲಕೋಟ	,, ಕಿರೇಸೂರ	೧೫
೪೦	ಬಾಳಾಜಿ ಗುರಾಚಾರ್ಯ	,, ಇಂಗಳಗಿ	೨೦
೪೧	ಅನಂತ ಶ್ರೀ. ಬಾಳೇಹೊಸೂರ	,, ಭದ್ರಾಪೂರ	೧೨
೪೨	ಬಸಪ್ಪಾ ತಿರಕಪ್ಪಾ	,, ಲಿಂಗಧಾಳ	೧೮
೪೩	ದುಂಡಪ್ಪಾ ಗುರಸಿದ್ದಪ್ಪಾ	,, ನಿಗದಿ	೧೩
೪೪	ರಾಘವೇಂದ್ರ ರಂಗೋ ಮಹಿಪತಿ	,, ಕಲ್ಲೂರ	೧೫
೪೫	ವೆಂಕಾಜಿ ಮಹಾದೇವ	,, ಕಲ್ಲೇದೇವರ	೧೫
೪೬	ಅಪ್ಪಾಜಿ ಸಖಾರಾಮ	,, ಕಬ್ಬೂರ	೧೫

DHARWAR TRAINING COLLEGE CERTIFICATE EXAMINATION.–1898.

ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

೩ ನೇ ವರ್ಷ

ಭಾಷಾವಿಷಯ—ಕನ್ನಡ ಗದ್ಯಪದ್ಯ.

೧. ಕಬ್ಬಿಗರಕಾವ, ಬಸವಪುರಾಣ, ಶಬರಶಂಕರವಿಲಾಸ, ಈ ಗ್ರಂಥಗಳ ಕರ್ತರು ಯಾರು? ಅವರು ಇದ್ದ ದೇಶ, ಕಾಲ, ಅವರ ಜಾತಿ, ಅವರು ಬರೆದ ಇತರ ಗ್ರಂಥಗಳು, ಇವೇ ಮೊದಲಾದ ಸಂಗತಿಗಳನ್ನು ಗೊತ್ತಾಗಿದ್ದ ಮಟ್ಟಿಗೆ ಬರೆಯಿರಿ.

೨. ಕೆಳಗೆ ಬರೆದ ಶಬ್ದಗಳ ಅರ್ಥವನ್ನು ಬರೆಯಿರಿ:—ಕೂರ್ಮೆ, ಸನ್ನಿದ, ಕಾಣ್ಕೆ, ತೆಂದೆಲರ್, ಗೆಡೆ, ಕಿಳ್ಬರಿ, ಸೊದೆ, ಸೋಬಸ್ಕರ, ಪಗುದಿ, ಬನ್ನಣೆ.

೩ ಮುದ್ರಾಮಂಜೂಷದಲ್ಲಿ ಬಣ್ಣಿಸಿದ ಸಂಗತಿಗಳಿಂದ ಅದರ ಮೂಲ ಸಂಸ್ಕೃತ ಗ್ರಂಥವನ್ನು ರಚಿಸಿದ ಕಾಲದ ಜನರ ರೀತಿ ಆಚಾರಗಳ ವಿಷಯದಲ್ಲಿ ಯಾವ ಮಾತುಗಳನ್ನು ಊಹಿಸಬಹುದು? ಈ ನಾಟಕದಲ್ಲಿ ಪ್ರಧಾನರಸವು ಯಾವದು? ಯಾಕೆ? ಇದರಲ್ಲಿ ನಾಯಕನು ಯಾರು? ಯಾವ ಗುಣವುಳ್ಳವನು?

೪. ಚಂದ್ರಗುಪ್ತ ಚಾಣಕ್ಯರು ಪರ್ವತರಾಯನ ಮನಸ್ಸನ್ನು ನಂದರ ರಾಜ್ಯದ ಮೇಲೆ ದಂಡೆತ್ತಿ ಹೋಗುವದಕ್ಕೆ ಒಲಿಸಿದ ಬಗೆ ಹ್ಯಾಗೆ?

೫. ಖಾಸ ಕೌಲೂತ, ಶಕ, ಗಾಂಧಾರ, ಹೂಣ, ಪಾರಸೀಕ, ಕುಸುಮಪುರ, ದಶಾರ್ಣ ಇವುಗಳ ವಿಷಯದಲ್ಲಿ ನಿಮಗೆ ಗೊತ್ತಿದ್ದ ಸಂಗತಿಗಳನ್ನು ಬರೆಯಿರಿ.

೬. ಕೆಳಗೆ ಬರೆದ ಮಾತುಗಳನ್ನು ಯಾರು ಯಾವ ಸಂಪ

ರ್ಥದಲ್ಲಿ ಹೇಳಿದ್ದಾರೆ? ಅವುಗಳಲ್ಲಿ ಅನುಸಂಧಿತವಾದ ಕಥೆಗಳನ್ನು ಸ್ವಲ್ಪದರಲ್ಲಿ ಬರೆಯಿರಿ:—

(ಅ) ಅಯ್ಯಾ ಮಹಾತ್ಮನಾದ ಶೆಟ್ಟಿಯೇ ನಿನಗೆ ಶಿಬಿಚಕ್ರವರ್ತಿಯಂತೆ ಆಚಂದ್ರಾರ್ಕವಾಗಿ ಶಾಶ್ವತವಾದ ಕೀರ್ತಿಯುಂಟಾಯಿತು.

(ಬ) ಸ್ವಾಮೀ ಅಮಾತ್ಯರೇ, ಇನ್ನು ಮರೆಮಾಜಿ ಫಲವೇನು? ತಮ್ಮ ಸಂಗಡ ಬಂದಿರುವವರು ಚಾಂಡಾಳ ವೇಷಧಾರಿಗಳು.

(ಕ) ಆಡಿದ ಮಾತು ಕೂಡಿಬಂದರೆ ಮನುಷ್ಯನು ಎಂದಿನಂತೆ ಇದ್ದಾನೇ?

(ಡ) ಎಲೈ ವೃಷಳನೇ ಅಕಾರಣವಾದ ಇಂತಹ ಪೋಲುವೆಚ್ಚವಂ ಮಾಡಕೂಡದು.

೩. ಕೆಳಗೆ ಬರೆದ ಪದ್ಯಗಳ ಅರ್ಥವನ್ನು ಪದ ಲೋಪ ಮಾಡದೆ ಸುಲಭವಾದ ಗದ್ಯದಿಂದ ಬರೆಯಿರಿ:—

ಕನರ್ಗೊನರಂ ತರ್ದುಂಕಿ ದನಿದೋರುವ ಕೋಗಿಲೆ
ಮೇಳದಾಳ್ಗಳಿಂ। ದೆನೆಗಿಳಿವಿಂಡು ಬಂದೆರೆಯೆ ಬರ್ಪವ
ಶಿಂದೆನೆ ಪೊಣ್ಮುತಿರ್ಪವೊ ॥ ವಿನಪೊಸಗಂಪು ಕತ್ತುರಿ
ಯ ತಂಪೆನೆ ಪಾಡುವತುಂಬಿಗಾಣರೆಂ। ದೆನೆ ನನೆಯಿಂ
ಬನೋಲಗದಸಾಲೆವೊಲಿರ್ದುವುಬಂದ ಮಾವುಗಳ್ ॥

ಅಡರ್ದೆಲೆವಳ್ಳಿಗಳೆಲೆಯುಂ।
ಪಿಡಿದಿರ್ಪೆಳಕಾಂಗಿನಲ್ಲಿ ತರತರದಿಂ ನೇ ॥
ಪಡೆ ಷಮೆದೆಲೆವಸರದ ವೊ।
ಲ್ಕಡು ಚೆಲ್ವಂಪಡೆದು ತೋರ್ಪುವೀ ಬನದೆಡೆಗಳ್ ॥
ಅತುಳಿತಮಹಾದಾನಿ ಪಶುಪತಿ।
ಯತಿಜನಾನಂದಕರನಭವಂ।
ಕ್ಷಿತಿಧರೇಂದ್ರಸುತಾಸ್ಯ ಶತದಳಮಧುವತನು ॥
ಸತಿಪತಿಗಳಿಬ್ಬರನನಾರತ।

ನತಿದಯಾಲೋಕನದಿ ನೀಕ್ಷಿಸಿ ।
ವಿತತಮೋಕ್ಷಾನುಭವ ಸೌಖ್ಯಮನಿತ್ತು ಸಲಹಿದನು ॥

ಶತದಳಾಂಬಕ ಶತದಳಾಸನ ।
ಶತಮುಖಾಮರನತ ಚರಣ ದಳ ।
ಶತದಳಂ ದಶಶತದಳಾಹಿತಯುತ ಜಟಾಜೂಟ ॥
ಶತಶರಾಸನ ಸತುಳ ತೇಜೋ ।
ಜಿತದ ಶಶಕದ್ಯುತಿ ವಿತತಿ ಸ ।
ಸ್ಮಿತವದನ ದಶಶತದಳಂ ಪ್ರತ್ಯಕ್ಷನಾಗಿರ್ದಂ ॥

ಜಯ ಜಯ ಕಾಲ ಕಾಲ ಫಣಿಭೂಷಣಭೀಷಣ ಸೋಮಕೋಮಲಾ । ಜಯಯಮಿನುತನಿತ್ಯ ಸಿತಿಕಂಧರ ಸಿಂಧುರ ಕೃತ್ತಿವಸ್ತ್ರದು । ಜಯಭವ ಭಂಜನಾಂಜನ ವಿವರ್ಜಿತ ನಿರ್ಜಿತ ಘೋರಮಾರ ನಿ । ಜಯಭುವನೇಶ ಪಾಪಹರ ಕಿಂಕರ ಶಂಕರಪುಷ್ಟಿವರ್ಧನಾ ॥ ಜಯಭಕ್ತಿಸ್ಪೃಹೆವೆತ್ತು ನೋಳ್ಪನಯನಂ ರೋಷಾರುಣಾವೀತ । ದುರ್ನಯಕಿಂಬಾಯ್ತುಪದಾಬ್ಜಪೂಜನಕೆ ಪಕ್ಕಾಗಿರ್ದ ಕೈಕೈದುವಂ ರಯದಿಂ ತಾಳ್ದಿದಿರಾಂತುದೀಶ್ವರ ಮಹಾಮಂತ್ರಕ್ಕೆ ಬೀಡಾದ ಜಿಂ । ಹೆಯಿಮಾರುತ್ತರಮಾಂತುದಕ್ಕಟ ಮಹಾವ್ಯಾಮೋಹ ಮೆಂಗೆಯ್ವುದೋ ॥

೮. ಮೇಲಿನ ಪ್ರಶ್ನೆಯಲ್ಲಿ ಕೊಟ್ಟಿರುವ ಪದ್ಯಗಳ ವೃತ್ತಗಳನ್ನೂ ಅವುಗಳಲ್ಲಿ ಕಾಣಬರುವ ಅಲಂಕಾರಗಳನ್ನೂ ಲಕ್ಷಣ ಸಹಿತವಾಗಿ ವಿವರಿಸಿರಿ.

ವರ್ಗಣಿ ವಸೂಲು

ಧಾರವಾಡ ಜಿಲ್ಲೆ.

ರಾ. ಸಾ. ಡೆ. ಇ. ರಿಂದ ಮೋ॰ ಬಗ್ಗೆ	೨೫೮೧೩೮೯

ವಿಜಾಪೂರ ಜಿಲ್ಲೆ.

ರಾ. ಸಾ. ಡೆ. ಇ. ರಿಂದ ಮೋ॰ ಬಗ್ಗೆ	೧೩೮೧೮

ಕಾರವಾರ ಜಿಲ್ಲೆ.

ರಾ. ಸಾ. ಡೆ. ಇ. ರಿಂದ ಮೋ॰ ಬಗ್ಗೆ	೧೦೮೨೮೬

ಕಿರುಕುಳ.

ಮೈ. ಎ. ಇ. ದಕ್ಷಿಣಭಾಗ ಇವರಿಂದ ೯೯ರ ಬಗ್ಗೆ	೮೧೫
೧ನೇ ಅ. ಡಿ. ಧಾರವಾಡ ಇವರಿಂದ ೯೯ರ ಬಗ್ಗೆ	೮೧೫
೨ನೇ ಅ. ಡಿ. ಧಾರವಾಡ ಇವರಿಂದ ೯೯ರ ಬಗ್ಗೆ	೮೧೫
ಮೈ. ೩ನೇ ಅಸಿ ಡಿ. ಧಾರವಾಡ ಇವರಿಂದ ೯೯ರ ಬಗ್ಗೆ	೮೧೫
ಮಿ. ಗೋ. ವೆ. ದೇಶಪಾಂಡೆ ಇವರಿಂದ ೯೯ರ ಬಗ್ಗೆ	೮೧೫
ಹೈ. ಸ್ಕೂ. ಬೋ. ಧಾರವಾಡ ಇವರಿಂದ ೯೯ರ ಬಗ್ಗೆ	೮೧೫
ಜಮಖಂಡಿ ಮಾಸ್ತರರಿಂದ ೯೯ರ ಬಗ್ಗೆ	೮೧೫
ಕ್ಯುರೇಟರರಿಂದ ನೋಟೀಸಿನ ಬಾಬತು	೨೮೧೧೮೦

* ಇದರೊಳಗೆ ಏನಾದರೂ ತಪ್ಪು ಇದ್ದರೆ ಅದನ್ನು ದಯಮಾಡಿ ತಿಳಿಸಬೇಕು.

REGISTERED NO. 4

ಪ್ರಕಟನೆಯು.

ನಮ್ಮ ಡಿಪೋದಲ್ಲಿ ಯಾವತ್ತೂ ಸರಕಾರಿ, ಖಾಸಗಿ ಮತ್ತು ಕಾಯದೆಯ ಕನ್ನಡ ಪುಸ್ತಕಗಳು ಮಾರಲಿಕ್ಕೆ ದೊರೆಯುತ್ತವೆ. ಲಘು ನಿಬಂಧ ಸಂಗ್ರಹ ಮತ್ತು ನಿಬಂಧರತ್ನಾಕರ ಎಂಬ ಪುಸ್ತಕಗಳು ನಮ್ಮಲ್ಲಿ ದೊರೆಯುವವು. ನಾವು ಸ್ವತಃ ಪುಸ್ತಕಗಳನ್ನು ಛಾಪಿಸುತ್ತಿರುವದರಿಂದ, ನಮ್ಮಲ್ಲಿ ಕೊಂಡು ಮಾರುವವರಿಗಿಂತ ಹೆಚ್ಚು ಕಮಿಶನವನ್ನು, ನಮ್ಮ ಗಿರಾಕಿಗಳಿಗೆ ಕೊಡಲಿಕ್ಕೆ ಬರುತ್ತದೆ. ಕಮಿಶನ ಭರಪೂರ ಕೊಡುವೆವು. ವಿಶೇಷ ಮಾಹಿತಿಯು ಸಮಕ್ಷಮ ಇಲ್ಲವೆ ಪತ್ರದ್ವಾರದಿಂದ ತಿಳಿಸಲಾದೀತು.

ಟೀಪು—ಕುರುಮುರಿ ಕೃಷ್ಣ ಶಬ್ದಮಂಜರಿ ಕೋಶದ ಬೆಲೆಯು ನಾಲ್ಕು ರೂ. ಇದ್ದು ಆಗಷ್ಟ ಸೊಳೆಗಾಗಿ ಕೊಳ್ಳುವವರಿಗೆ ಅರ್ಧಾ ಬೆಲೆಗೆ ಕೊಡುವೆವು ಅಂಚೆ ವೆಚ್ಚ ೫ ಆಣೆ ಬೇರೆ ಬೀಳುವದು.

ಕರ್ನಾಟಕ ಬುಕ್ ಡಿಪೋ
ಪ್ರೆಸ, ಧಾರವಾಡ.
ಪೋ. ಮೋ ಗರ್ಲ್ಸ ಇಸವಿ.

ಶಿವರಾಮ ಮಹಾದೇವ ಖಾನೋ
ಳಕರ ಮತ್ತು ಕಂಪನಿ.

ಲಯನ್ನು ಚುಚ್ಚಿಸಿಕೊಳ್ಳಲಿಕ್ಕೆಬೇಕು. ಇದಕ್ಕೆ ಒಪ್ಪಿಗೆ ಇಲ್ಲದ ಉಮೇದ
ನ್ನ ಕಾಲೇಜಕ್ಕೆ ಸೇರಿಸಿಕೊಳ್ಳಲಿಕ್ಕಿಲ್ಲ. ಇಂಥ ಉಮೇದವಾರರು ಕಾಲೇ
ಶ ಪರೀಕ್ಷೆಗೆ ಬರಬಾರದು.

ಉಮೇದವಾರರು ವ್ಯಂಗವುಳ್ಳವರು ಇರಕೂಡದು. ೫ ಫೂಟಿಗಿಂತ
ತ್ತರವಿದ್ದವರು, ತೊದಲುವವರು, ಕಿವುಡರು, ಮೆಳ್ಳರು, ಕುಂಟರು ಇಂ
ಪರೀಕ್ಷೆಗೆ ಕೂಡ್ರಗೊಡಲಿಕ್ಕಿಲ್ಲ.

ಉಮೇದವಾರರು ತಾವು ಕಾಯಂವಾಗಿ ಇರುವ ಜಿಲ್ಹೆಗೇ ಹೆಸರು
ತಕ್ಕದ್ದು. ಸಂಸ್ಥಾನದ ಹದ್ದಿನೊಳಗಿನ ಉಮೇದವಾರರು ತಮ್ಮ ಸಂಸ್ಥಾ
ಎ. ಇನಸ್ಪೆಕ್ಟರರವರ ಪರವಾನಗಿಯನ್ನು ತಂದ ಹೊರತು, ಅವರ ಹೆ
ಚ್ಚಿಕೊಳ್ಳಲಿಕ್ಕಿಲ್ಲ.

ಪ್ರತಿಯೊಬ್ಬ ಉಮೇದವಾರನು ತನ್ನ ಸಂಗಡ ತಕ್ಕಷ್ಟು ಅರಿವೆ ಅಂಚ
ನ್ನು ಹಾಸಿಗೆ ಮುಪ್ಪಡಿಗಳನ್ನೂ ತರಲಿಕ್ಕೆಬೇಕು. ಪ್ರತಿ ಒಬ್ಬನಿಗೆ ಮೇಲಿನ
ು ಅಂದರೆ ಕೋಟುಗಳು ೩, ಒಳಗಿನ ಪೈರಣಗಳು, ಅಥವಾ ಬಗಲಬಂದಿ
, ೧ ಹಚ್ಚಡ, ೧ ಕಂಬಳಿ ಇಷ್ಟು ಇರಲಿಕ್ಕೇಬೇಕು.

ಪ್ರತಿ ಒಬ್ಬ ಉಮೇದವಾರನ ಬಳಿಯಲ್ಲಿ ಒನ್ ಇಯತ್ತೆಯಿಂದ ೭ ನೇ
ಯ ವರೆಗೆ ಬೇಕಾಗುವ ಎಲ್ಲ ಹೊಸ ಕ್ರಮಿಕ ಪುಸ್ತಕಗಳೂ, ೭ನೇ ಇಯ
ಇತರ ಎಲ್ಲ ಪುಸ್ತಕಗಳೂ ಇರಲಿಕ್ಕೇಬೇಕು.

ಮೇಲೆ ಬರೆದ ಪುಸ್ತಕಗಳಲ್ಲದೆ ಬೇರೆ ಆವಶ್ಯಕ ಪುಸ್ತಕಗಳನ್ನೂ ಚಿತ್ರ
ಂತಾದವುಗಳ ಸಾಮಾನುಗಳನ್ನೂ ಕೊಂಡುಕೊಳ್ಳಲಿಕ್ಕೆ ೧೦ ರೂಪಾಯಿ
ಕಾಗುವವು. ಮತ್ತು ಬೋರ್ಡಿಂಗಿನ ಅಡ್ವಾನ್ಸದ ಸಂಬಂಧದಿಂದ ೧೦
ಯಿಗಳು ಬೇಕಾಗುವವು. ಆದ ಕಾರಣ ಪ್ರತಿ ಒಬ್ಬ ಉಮೇದವಾರನು ೨೦
ಯಿಗಳನ್ನು ಸಂಗಡ ತರಲಿಕ್ಕೆ ಬೇಕು.

ವೇಶ ಪರೀಕ್ಷೆಯ ಉಮೇದವಾರರು ಸಂಗಡ ತುಂಬಿ ತರತಕ್ಕ ಜಾಮೀನ ಪತ್ರದ ನಮೂನೆಯು.

... .
... ...
ದ ಮೂಲಕವಾಗಿ ... ...
ಗೆ ಜಾಮೀನ ಆಗಿ, ...
ನದೇನಂದರೆ:- ಸದರೀ ....

ಇವನು ಧಾರವಾಡ ಟ್ರೇನಿಂಗ ಕಾಲೇಜದ ಕೋಡಿನ
ದ ಪ್ರಕಾರ ನಡೆಯುವದಕ್ಕೆ ಒಪ್ಪಿಕೊಂಡಂತೆ ನಡೆಯುವನು. ಅವನು

REGISTERED NO. B.

ಪ್ರಕಟಣೆಯು.

ನಮ್ಮ ಡಿಪೋದಲ್ಲಿ ರಾಜಪತ್ರ, ಸರಕಾರಿ, ಖಾಸಗಿ ಮತ್ತು ಶಾಲೆಯ ಕನ್ನಡ ಪುಸ್ತಕಗಳು ಮಾರಲಿಕ್ಕೆ ದೊರೆಯುತ್ತವೆ. ಲಘು ನಿಬಂಧ ಸಂಗ್ರಹ ಮತ್ತು ನಿಬಂಧರತ್ನಾಕರ ಎಂಬ ಪುಸ್ತಕಗಳು ನಮ್ಮಲ್ಲಿ ದೊರೆಯುವವು. ನಾವು ಸ್ವತಃ ಪುಸ್ತಕಗಳನ್ನು ಛಾಪಿಸುತ್ತಿರುವದರಿಂದ, ನಮ್ಮಲ್ಲಿ ಕೊಂಡು ಮಾರುವವರಿಗಿಂತ ಹೆಚ್ಚು ಕಮೀಶನವನ್ನು, ನಮ್ಮ ಗಿರಾಕಿಗಳಿಗೆ ಕೊಡಲಿಕ್ಕೆ ಬರುತ್ತದೆ. ಕಮೀಶನ ಧರಪ್ರಕಾರ ಕೊಡುವೆವು. ವಿಶೇಷ ಮಾಹಿತಿಯು ಸಮಕ್ಷಮ ಇಲ್ಲವೆ ಪತ್ರದ್ವಾರದಿಂದ ತಿಳಿಸಲಾದೀತು.

ಶೀಘ್ರವು—ತುರುಮುರಿ ಕೃತ ಶಬ್ದಮಂಜರಿ ಕೋಶದ ಬೆಲೆಯು ನಾಲ್ಕು ರೂ. ಇದ್ದು ಆಗಷ್ಟದೊಳಗಾಗಿ ಕೊಳ್ಳುವವರಿಗೆ ಅರ್ಧ ಬೆಲೆಗೆ ಕೊಡುವೆವು. ಅಂಚೆ ವೆಚ್ಚ ೫ ಆಣೆ ಬೇರೆ ಬೀಳುವದು.

ಕರ್ನಾಟಕ ಬುಕ್ ಡಿಪೋ
ಪ್ರೆಸ, ಧಾರವಾಡ.
ಮು|| ಪೋ| [illegible]

ಶಿವರಾಮ ಮಹಾದೇವ ಖಾನೋಲಕರ
ಮತ್ತು ಕಂಪನಿ.

ಲಿಯನ್ನು ಜುಟ್ಟಿಸಿಕೊಳ್ಳಲಿಕ್ಕೆಬೇಕು. ಇದಕ್ಕೆ ಒಪ್ಪಿಗೆ ಇಲ್ಲದ ಉಮೇದ ನ್ನ ಕಾಲೇಜಕ್ಕೆ ಸೇರಿಸಿಕೊಳ್ಳಲಿಕ್ಕಿಲ್ಲ. ಇಂಥ ಉಮೇದವಾರರು ಕಾಲೇ ಶ ಪರೀಕ್ಷೆಗೆ ಬರಬಾರದು.

ಉಮೇದವಾರರು ವ್ಯಂಗವುಳ್ಳವರು ಇರಕೂಡದು. ೫ ಫೂಟಗಿಂತ ಎತ್ತರವಿದ್ದವರು, ತೊದಲುವವರು, ಕಿವುಡರು, ಮೆಳ್ಳರು, ಕುಂಟರು ಇಂ ಪರೀಕ್ಷೆಗೆ ಕೂಡ್ರಗೊಡಲಿಕ್ಕಿಲ್ಲ.

ಉಮೇದವಾರರು ತಾವು ಕಾಯಂವಾಗಿ ಇರುವ ಜಿಲ್ಲೆಗೇ ಹೆಸರು ಕ್ಕದ್ದು. ಸಂಸ್ಥಾನದ ಹದ್ದಿನೊಳಗಿನ ಉಮೇದವಾರರು ತಮ್ಮ ಸಂಸ್ಥಾ ಎ. ಇನಸ್ಪೆಕ್ಟರರವರ ಪರವಾನಗಿಯನ್ನು ತಂದ ಹೊರ್ತು, ಅವರ ಹೆ ಚ್ಚಿಕೊಳ್ಳಲಿಕ್ಕಿಲ್ಲ.

ಪ್ರತಿಯೊಬ್ಬ ಉಮೇದವಾರನು ತನ್ನ ಸಂಗಡ ತಕ್ಕಷ್ಟು ಅರಿವೆ ಅಂಚ ಹಾಸಿಗೆ ದುಪ್ಪಡಿಗಳನ್ನೂ ತರಲಿಕ್ಕೆಬೇಕು. ಪ್ರತಿ ಒಬ್ಬನಿಗೆ ಮೇಲಿನ ಅಂದರೆ ಕೋಟುಗಳು ೩, ಒಳಗಿನ ಪೈರಣಗಳು, ಅಥವಾ ಬಗಲಬಂದಿ ೧ ಹಚ್ಚಡ, ೧ ಕಂಬಳಿ ಇಷ್ಟು ಇರಲಿಕ್ಕೇಬೇಕು.

ಪ್ರತಿ ಒಬ್ಬ ಉಮೇದವಾರನ ಬಳಿಯಲ್ಲಿ ಒನ್ ಇಯತ್ತೆಯಿಂದ ೭ ನೇ ಮು ವರೆಗೆ ಬೇಕಾಗುವ ಎಲ್ಲ ಹೊಸ ಕ್ರಮಿಕ ಪುಸ್ತಕಗಳೂ, ೭ನೇ ಇಯ ತರ ಎಲ್ಲ ಪುಸ್ತಕಗಳೂ ಇರಲಿಕ್ಕೇಬೇಕು.

ಮೇಲಿ ಬರೆದ ಪುಸ್ತಕಗಳಲ್ಲದೆ ಬೇರೆ ಅವಶ್ಯಕ ಪುಸ್ತಕಗಳನ್ನೂ ಚಿತ್ರ ಂತಾದವುಗಳ ಸಾಮಾನುಗಳನ್ನೂ ಕೊಂಡುಕೊಳ್ಳಲಿಕ್ಕೆ ೧೦ ರೂಪಾಯಿ ಕಾಗುವವು. ಮತ್ತು ಬೋರ್ಡಿಂಗಿನ ಅಡ್ವಾನ್ಸದ ಸಂಬಂಧದಿಂದ ೧೦ ಯಿಗಳು ಬೇಕಾಗುವವು. ಆದ ಕಾರಣ ಪ್ರತಿ ಒಬ್ಬ ಉಮೇದವಾರನು ೨೦ ಯಿಗಳನ್ನು ಸಂಗಡ ತರಲಿಕ್ಕೆ ಬೇಕು.

ವೇಶ ಪರೀಕ್ಷೆಯ ಉಮೇದವಾರರು ಸಂಗಡ ತುಂಬಿ ತರತಕ್ಕ ಜಾಮೀನ ಪತ್ರದ ನಮೂನೆಯು.

... .
... ...
ದದ ಮೂಲಕವಾಗಿ ... ...
ಗೆ ಜಾಮೀನ ಆಗಿ, ...
ವದೇನಂದರೆ:- ಸದರೀ ....

ಇವನು ಧಾರವಾಡ ಟ್ರೇನಿಂಗ ಕಾಲೇಜದ ಕೋಡಿನ ಗಳ ಪ್ರಕಾರ ನಡೆಯುವದಕ್ಕೆ ಒಪ್ಪಿಕೊಂಡಂತೆ ನಡೆಯುವನು. ಅವನು

ARS. 15. APP. 90

ಸಂಪುಟ 1896, 1897, 1898

ಬಹಳ ಜಿಥ್ಥಿಕಯಲ್ಪದ ಕಾರಣ

ಸೂಕ್ಷ್ಮ ಚಿತ್ರೀಕರಿಸಲು ಸಾಧ್ಯವಾಗಿಲ್ಲ

ARS. 15. APP. 90

ಸಂಪುಟ 1896, 1897, 1898

ಬಹಳ ಶಿಥಿಲವಾಗಿದ್ದ ಕಾರಣ

ಮೈಕ್ರೋ ಚಿತ್ರೀಕರಿಸಲು ಸಾಧ್ಯವಾಗಿಲ್ಲ

[illegible]

1900

[illegible] ಪತ್ರಿಕೆಯು

ಶತಮಾನೋತ್ಸವದ [illegible]

[illegible]

[illegible]

ಮೇ 1900

ಶಿವಳ್ಳಿ ಶಾಲಾ ಪತ್ರಿಕೆ

[illegible] ಸಂಚಿಕೆ

ಸರಕಾರಿ [illegible] ವಿದ್ಯಾಲಯ

[illegible]

366

1900

ಸಿದ್ಧನಾಥ ವಾಚನ ಮಂದಿರ.
ಹುಂಬಳ. ಜಿ. ಧಾರವಾಡ.

೧. [illegible]
೨. ತ್ರಿಕೋಣಾಕೃತಿ ಲೋ
ರಿಸಬಹುದು.
೩. ಬಟ್ಟೆಗಳು.

ಕಾಶಕಿರಣಗಳನ್ನ

ಪ್ರಕಾರದಿಂದ [illegible]
ಪಠ್ಯ ಪುಸ್ತ
೧. ಚಂದಾವರ್ಕರಕೃತ ಸ
೨. ಭೂಗೋಲವಿದ್ಯೆ ಒನೇ
೩. ಮುಂಬೈ ಇಲಾಖೆಯ ಭ
೪. ಲಘುವ್ಯಾಕರಣ, ೯ನೇ
೫. ನುಡಿಗಟ್ಟು ಎಂಬ ಸಂಗ್ರ
ಇವಲ್ಲದೆ ಎಲ್ಲ ತರದ ಕ
ಲಿಕ್ಕೆ ಸಿಗುವವು. ಒಮ್ಮೆಗೆ
ಕೊಡಲ್ಪಡುವವು.
ಎನೇ ಇಯತ್ತೆಯವರ
ಕುಮಾರರಾಗಿ ಒಂದಿದೆ. ಬೇ
ದೇಶವು.

೨೩

ನಮ್ಮಿಂದ ಪ್ರಸಿ
ರೆದಂತೆ ಇವೆ.
ಭೂಮಿತಿ ಭಾಗ ೧
ವೃತ್ತಿ ...
ಆವೃತ್ತಿ ...
...
ಕರಣ ...
ಪುಸ್ತಕಗಳು ನವ
ನವರಿಗೆ ಯೋಗ್ಯ

ಭೂಮಿತಿಯು ಪಠಿಸ್ತ
ಣಿತಶಿಕ್ಷೆಯು ಕಳು

ಭಂಡಿವಾಡ
ಸಂಗಕನಾಜೀ

ನಮ್ಮಲ್ಲಿ ಎಲ್ಲ ತರದ
೬. ಕಾಪೇಂಕಸನವರ ಕೃತ
ಗಣಿತ ಶಿಕ್ಷಕ — ಎನೆ
ಬಗ್ಗೆ.
ವ್ಯವಹಾರಿ ಮಿತ್ರ, - ೨
ಮಿತ್ರ - ಭೀಮಾಜೀ
ಪೈಕಿ.

ರಕು.
ಸ್ತಕಗಳೂ, ಕೆಳಗೆ
ವಾಚಲಿಕ್ಕೆ ಸಿಗುತ್ತ
ಬಿಟಿಕೆಅ, ಪಿನ್ನಿ

ಪತ್ರಿ, ಅರಳಿ, ಕಿವಾ
ಕೊಂಡಲ, ಬುಕ್ಕ,

ಕನ್ನಡ ಶಾಲಾಪತ್ರ

KANARESE SCHOOL PAPER

ಪುಸ್ತಕ ೩೬.] ಫೆಬ್ರು. ೧೯೦೦. ಅಂಕ ೨.

ಅನುಕ್ರಮಣಿಕೆ

೧. ವಿದ್ಯಾಖಾತೆಯ ಸಂಬಂಧ ಟಿಪ್ಪಣಿಗಳು ... ೨೫-೩೧
೨. ಉಲ್ಕೆಗಳು ೩೧-೩೩
೩. ರಸಾಯನಶಾಸ್ತ್ರ ೩೪-೩೬
೪. ಅಲಂಕಾರಗಳು ೩೬-೩೭
೫. ಶಿಕ್ಷಣಶಾಸ್ತ್ರ ೩೮-೪೩
೬. ನೋಟೀಸು ೪೩
೭. ಪತ್ರವ್ಯವಹಾರ ೪೪-೪೭
೮. ವರ್ಥಪ್ರಾಯಿಜ ಪರೀಕ್ಷೆಯ ಪತ್ರಿಕೆಗಳು ... ೪೭-೪೮

CONTENTS.

1. Educational Intelligence and Useful Notes 25-31
2. Falling Stars 31-33
3. Chemistry 34-36
4. Alankaras 36-37
5. The Philosophy of Education... 38-43
6. Departmental Notices 43
7. Correspondence ... 44-47
8. Question Paper Wurth Prize Examination 47-48

DHARWAR:
PRINTED AT THE KARNATIC BOOK DEPOT PRESS
1900

೧. ಜನಾವಾ-ಪಾಸಹಿಕ-
೨. ತ್ರಿಕೋಣಾಕೃತಿ ಲೋ
ರಿಸಬಹುದು.
೩. ಬಟ್ಟೆಗಳು.

ಕಾಶಕಿರಣಗಳನ್ನ

ಪ್ರಕಾರದವರಿಂದ ಮುಂಜು
ಲ್ಯಕ್ತ ಪುಸ್ತ
೧. ಚಂದ್ರಾವಳೀಕರಕೃತ ಪು
೨. ಭೂಗೋಲವಿದ್ಯೆ ೩ನೇ
೩. ಮುಂಬ್ಬೆ ಇಲಾಖೆಯು ಛ
೪. ಲಘುವ್ಯಾಕರಣ, ೯ನೇ
೫. ಸುಡಿಗಟ್ಟು ಎಂಬ ಸಂಕ್ರಿ
ಇವಲ್ಲದೆ ಎಲ್ಲ ತರದ ಪ
ಲಕ್ಕೆ ಸಿಗುವವು. ಒಮ್ಮೆಗೇ
ಕೊಡಲ್ಪಡುವುದು.
೭ನೇ ಇಯತ್ತೆಯವರ
ತಯಾರಾಗಿ ಒಂದಿದೆ. ಬೇ
ಬೇಕು.

೨೩

ವ ಸಮ್ಮಿಂದ ಪ್ರಸಿದ್ಧ
ರೆದಂತೆ ಇವೆ.
ನೂಮಿಕ ಭಾಗ ೧ ೦
ಕೃತಿ ... ೦
ಆವೃತ್ತಿ ... ೦
... ೦
ರಣ ... ೦
ಈ ಪುಸ್ತಕಗಳು ನಮ್ಮ
ವವರಿಗೆ ಯೋಗ್ಯ

ಭಾಮಿತಿಯ ಪರಿಶಿಷ್ಟ
ಕ್ಷೆ ತಿಕೀಟು ಕೊಟ್ಟು ತರಿ

ಷ್ಠಿ. ಛಂದಿವಾದ.
ಮಂಗಳವಾರಪೇಟೆ ಧಾ

ಸೆ

ನಮ್ಮಲ್ಲಿ ಎಲ್ಲ ತರದ
ಪು ಕಾರ್ಡ್‌ನಸವರ ಕೃತ
ಗಣಿತ ಶಿಕ್ಷಕ— ೩ನೆ

ಬಗ್ಗೆ.
ವ್ಯವಹಾರ ಮಿಶ್ರ,
ಪತ್ರ - ಭೀಮಾಜಿ

ಸ್ತಕಗಳೂ, ಶಿಶಗೆ ಬೇ
ಮಾರಲಿಕ್ಕೆ ಸಿಗುತ್ತವೆ.
ಶಶಿಕಲ, ೩ನೇ ಇ

ಪುಸ್ತಿ, ಲಲಿತ, ಶಿವಾಜಿ
ಮೊಂದೂಡ, ಉಚ್ಚ

[illegible]

೧. [illegible] ... [illegible]
೨. ಉಲ್ಕೆಗಳು ... ... [illegible]
೩. ರಸಾಯನಶಾಸ್ತ್ರ ... ... [illegible]
೪. ಅಲಂಕಾರಗಳು ... ... [illegible]
೫. ಶಿಕ್ಷಣಶಾಸ್ತ್ರ ... ... [illegible]
೬. ನೋಟೀಸು ೪೩
೭. ಪತ್ರವ್ಯವಹಾರ ... ... [illegible]
೮. ವರ್ಥ ಪ್ರಾಯಿಜ ಪರೀಕ್ಷೆಯ ಪತ್ರಿಕೆಗಳು ... [illegible]

CONTENTS.

1. Educational Intelligence and Useful Notes [illegible]–31
2. Falling Stars ... ... [illegible]–33
3 Chemistry 34–36
4 Alankaras 36–37
5. The Philosophy of Education... [illegible]
6. Departmental Notices ... [illegible]
7 Correspondence ... [illegible]–17
8. Question Paper Worth Prize Examination 47–48

DHARWAR:
PRINTED AT THE KARNATAK BOOK DEPOT PRESS
190[illegible]

ಕನ್ನಡ ಶಾಲಾಪತ್ರಕದ ವರ್ಗಣಿ ವರ್ಷಕ್ಕೆ ಮುಂಗಡ ೧॥
ಒಂದು ಸಂಚಿಕೆಗೆ ... ... ೨ ಆ

ಪ್ರಕಟನೆಗಳನ್ನು ಛಾಪಿಸುವ ದರಗಳು.

ಒಮ್ಮೆ ಇಟ್ಟರೆ	೪ ಪಂಕ್ತಿಗಳವರೆಗೆ	೧ ರೂ.
ಮೂರುಸಾರೆ ಇಟ್ಟರೆ	೬ ,,	೧ ರೂ.
ಆರುಸಾರೆ ಇಟ್ಟರೆ	,,	೧ ರೂ.

ಸೂಚನೆಗಳು.

೧. ಶಾಲಾಪತ್ರಕಕ್ಕೆ ಒಪ್ಪುವಂಥ ಪ್ರಕಟನೆಗಳನ್ನೇ ಛಾಪಿಸುವೆವು.
೨. ಶಿರೋಲೇಖಕ್ಕೂ, ಅಪೂರ್ಣ ಪಂಕ್ತಿಗೂ ಪೂರಾ ಪಂಕ್ತಿಯ ಹಾಸಲು ಬೀಳುವದು.
೩. ಭಾಷಾಂತರ ಮಾಡಿ ಛಾಪಿಸುವದಾದರೆ ಮೇಲಿನ ದರದ ಇಮ್ಮಡಿ ಫೀ ಬೀಳುವದು.
೪. ಪ್ರಕಟನೆಯ ಕೂಡ ಹಣ ಕಳುಹಲಿಕ್ಕೆ ಬೇಕು.
೫. ಟಿಕೀಟು ಇಟ್ಟ ಹೊರ್ತು ಉತ್ತರ ಸಿಗಲಾರದು.

Raoji B Karandikar
ಮ್ಯಾನೇಜರ ಕ. ಶಾಲಾಪತ್ರಕ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಸೋತ್ಕರ್ಷಮಂ
ಯುಸನೌತ್ಯಂ ಪ್ರತಿಪಾದನಾದಿಗಳಿನಿಂದೀಪತ್ರಮಂ ಮುದ್ರಿಸಿ ॥
ಯುದಿಂದಿತ್ತುವೆರ್ಮೋದವರ್ಗಂಗಳಂ ತೋರಲ್ಕೆ ಕೈಕೊಂಬುದೈ !
ಯೆಂಬೆಂಬೋಕ್ಷಪತಿದ್ರ್ಯ ನೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥

ಪುಸ್ತಕ ೧೨.] ಫೆಬ್ರುವರಿ ೧೯೦೦. [ಸಂಚಿಕೆ ೨

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಂಬೈ ಇಲಾಖೆಯ ಹೋದ ವರ್ಷದ (೧೮೯೮—೮೯೯) ವಿದ್ಯಾಖಾತೆಯ ರಿಪೋರ್ಟಿನಿಂದ ತಿಳಿಯುವ ಮು ್ಯ ಮುಖ್ಯ ಸಂಗತಿಗಳು ಯಾವವೆಂದರೆ :—

ನಮ್ಮ ಇಲಾಖೆಯೊಳಗಿನ ಸರಕಾರದ ಮೇಲ್ವಿಚಾರಣೆ ಒಳಪಟ್ಟ ಶಾಲೆಗಳಲ್ಲಿ ಅಭ್ಯಾಸ ಮಾಡುವ ಗಂಡು ಹುಡು ರ ಸಂಖ್ಯೆಯು ಹೋದ ವರ್ಷ ೫೦೬,೪೬೭ ಇತ್ತು, ಈ ರ್ಷ ೪೮೮,೮೨೪ ಆಗಿರುತ್ತದೆ; ಹೆಣ್ಣುಮಕ್ಕಳ ಸಂಖ್ಯೆ ು ಹಿಂದಿನ ವರ್ಷ ೭೪,೭೯೨ ಇತ್ತು; ಈ ವರ್ಷ ೦,೦೪೬ ಆಗಿರುತ್ತದೆ. ಈ ಇಲಾಖೆಯಲ್ಲಿ ಯಾವತ್ತೂ ಪ್ರಕಾರದ ಸರಕಾರೀ ಖಾಸಗೀ ಶಾಲೆಗಳು ಕೂಡಿ ಹಿಂದಿನ ವರ್ಷ ೧೨೬೭೯ ಇದ್ದವು; ಈ ವರ್ಷ ೧೨೬೩೯ ಆಗಿರುತ್ತವೆ. ಸರಕಾರೀ ಶಾಲೆಗಳು ಹಿಂದಿನ ವರ್ಷ ೯೯೧೭ ಖಾಸಗೀ ಶಾಲೆಗಳು ೨೭೬೨ ಇದ್ದವು. ಈ ವರ್ಷ ಸರಕಾರೀ ಶಾಲೆಗಳು ೯೭೬೮ ಖಾಸಗೀ ಶಾಲೆಗಳು ೨೮೭೧ ಆಗಿರುತ್ತವೆ. ಹಿಂದಿನ ವರ್ಷ ಕನಿಷ್ಠಪ್ರತಿಯ ದೇಶಭಾ ಯ ಸರಕಾರೀ ಶಾಲೆಗಳು ೯,೭೯೦ ವಿದ್ಯಾರ್ಥಿಗಳು ೭೭೫೭೭ ಇದ್ದರು. ಈ ವರ್ಷ ಅನುಕ್ರಮವಾಗಿ ,೨೭೭ ಮತ್ತು ೫೦೮ ೭೪೭ ಇದ್ದಾರೆ.

ಈ ಇಲಾಖೆಯ ದಕ್ಷಿಣ ಭಾಗದಲ್ಲಿ ಜನಸಂಖ್ಯೆಯು ೬,೯೨೦,೫೧೭ ಇರುತ್ತದೆ. ಮತ್ತು ಯಾವತ್ತು ಪ್ರಕಾರದ ಶಾಲೆಗಳು ೨,೫೪೮ ವಿದ್ಯಾರ್ಥಿಗಳು ೧೧೫,೨೯೬ ಇರುವರು. ಕನಿಷ್ಠ ಪ್ರತಿಯ ಗಂಡುಹುಡುಗರ ಶಾಲೆಗಳು ೨೩೨೬ ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಕೂಡಿ ೧೦೨,೫೫೨ ಇದ್ದಾರೆ. ಹೆಣ್ಣುಮಕ್ಕಳ ಶಾಲೆಗಳು ೧೫೨ ವಿದ್ಯಾರ್ಥಿನಿಯರು ೫೯೨೦ ಇರುವರು. ಗಂಡು ಹುಡುಗರ ಶಾಲೆಗೆ ಹೋಗುವ ಹೆಣ್ಣು ಹುಡುಗರು ೬೫೮೭ ಇರುವದು.

ಈ ವರ್ಷ ನಮ್ಮ ದಕ್ಷಿಣಭಾಗದಲ್ಲಿ ಪ್ಲೇಗು ಬೆಳಗಾವ, ಧಾರವಾಡ ಜಿಲ್ಲೆಗಳಲ್ಲಿ ವಿಶೇಷವಾಗಿಯೂ ಉಳಿದ ಜಿಲ್ಲೆಗಳಲ್ಲಿ ಕೆಲಕೆಲವು ಕಡೆಯಲ್ಲಿ ಸಾಧಾರಣವಾಗಿಯೂ ಹಬ್ಬಗೊಂಡದ್ದರಿಂದ ಪ್ರಾಣನಾಶವು ಬಹಳವಾಯಿತು. ಜನರು ಊರು ಬಿಟ್ಟು ಹೊರಗೆಹೋಗಿ ನಿಲ್ಲಬೇಕಾದ್ದರಿಂದ ಎಷ್ಟೋ ಶಾಲೆಗಳು ಬಂದಾದವು. ಒಟ್ಟಿಗೆ ೬೧ ಜನ ಮಾಸ್ತರರೂ ೨೦೦೦ ಹುಡುಗರೂ ಈ ದುಷ್ಟ ರೋಗಕ್ಕೆ ಆಹುತಿಯಾದರು. ಈ ಘೋರ ಪಿಡುಗಿನ ಮೂಲಕವಾಗಿ ೧ ಶಾಲೆಯೂ ೨೮೬೪೨ ವಿದ್ಯಾರ್ಥಿಗಳೂ ಕಡಿಮೆಯಾಗಿರುವರು. ೬ ಹೆಣ್ಣು ಹುಡುಗರ ಶಾಲೆಗಳೂ ೨೧೩೭ ವಿದ್ಯಾರ್ಥಿನಿಯರೂ ಕಡಿಮೆಯಾಗಿರುವರು.

ಮುಂಬೈ ಇಲಾಖೆಯೊಳಗಿನ ವಿದ್ಯಾಖಾತೆಯ ಒಟ್ಟು ಖರ್ಚು ೭೩೨೦೨೩೬* ರೂಪಾಯಿ ಆಗಿರುತ್ತದೆ. ಈ

---

* ಸರಕಾರದ ಖರ್ಚಿನಿಂದಲೇ ನಡೆಯುವ ಶಾಲೆಗಳ ಬಗ್ಗೆ ೯೦೨೩.೨೦ ರೂಪಾಯಿ, ಲೋಕಲ್‌ಬೋರ್ಡ ಶಾಲೆಗಳ ಬಗ್ಗೆ ೧೫೪೪೫೧೮ ರೂಪಾಯಿ, ಮ್ಯುನಿಸಿಪಲ್ ಶಾಲೆಗಳ ಬಗ್ಗೆ ೭೩೪೫೬೯ ರೂಪಾಯಿ, ಸಂಸ್ಥಾನದೊಳಗಿನ ಶಾಲೆಗಳ ಬಗ್ಗೆ ೧೪೨೩.೭.೮೫ ರೂಪಾಯಿ, ಗ್ರಾಂಟ ಇನ್ ಏಡ್ ಶಾಲೆಗಳ ಬಗ್ಗೆ ೧೮೫೬೭೬೦ ರೂಪಾಯಿ, ಅನ್ ಏಡೆಡ್ ಶಾಲೆಗಳ ಬಗ್ಗೆ ೨೪೮೫೫೦ ರೂಪಾಯಿ ಮತ್ತು ಇತರ ೬೦೯೭೩೪ ರೂಪಾಯಿ ಅಂತೂ ೭೩೨೦೨೩೬ ರೂಪಾಯಿ.

ಕಮಿನೊಳಗಿಂದ ಫೀ ಹಣ ೧೪,೦೨,೩೨೬ ಮತ್ತು ವರ್ಗಣಿ ಮುಂತಾದ ಬಾಬುಗಳಿಂದ ಆದ ಉತ್ಪನ್ನ ೩೫೭೪೪೪೨ ರೂಪಾಯಿ ವಜಾ ಹೋಗಲಾಗಿ ಉಳಿದ ಖರ್ಚಿನಲ್ಲಿ ಸರಕಾರಕ್ಕೆ ೩೦೩೭೪೦೬ ರೂಪಾಯಿ ಲೋಕಲಫಂಡಿಗೆ ೯೯೫೧೩೧ ರೂಪಾಯಿ ಮ್ಯುನಿಸಿಪಾಲಿಟಿಗಳಿಗೆ ೮೦೪೨೨೬ ರೂಪಾಯಿ ಬಿತ್ತು. ಕನಿಷ್ಟ ಪ್ರತಿಯ ಶಿಕ್ಷಣಕ್ಕಾಗಿ ಒಟ್ಟು ೫೫೭೦೫೯೪ ರೂಪಾಯಿ ಖರ್ಚು ಆಯಿತು. ಇದರೊಳಗೆ ಫೀ ಉತ್ಪನ್ನ ೫೬೧೦೩೮ ರೂಪಾಯಿ ಮತ್ತು ಇತರ ಬಾಬುಗಳಿಂದ ಆದ ಉತ್ಪನ್ನ ೧೦೬೦೬೪೦ ರೂಪಾಯಿ ವಜಾ ಹೋಗಲಾಗಿ ಉಳಿದದ್ದರಲ್ಲಿ ಸರಕಾರಕ್ಕೆ ೭೩೮೧೬೩ ರೂಪಾಯಿ ಲೋಕಲಫಂಡಿಗೆ ೭೦೬೮೬೦ ರೂಪಾಯಿ ಮ್ಯುನಿಸಿಪಾಲಿಟಿಗಳಿಗೆ ೫೩೭೩೯೯ ರೂಪಾಯಿ ಖರ್ಚು ಬಿತ್ತು.

ಕಳೆದ ವರ್ಷ ಮುಂಬೈ ಇಲಾಖೆಯಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯು ೪೭೦೭೪೪ ಇತ್ತು; ಈ ವರ್ಷ ೪೪೭,೭೨೦ ಆಗಿರುತ್ತದೆ. ಇದರಲ್ಲಿ ಯುರೋಪಿಯನ್ ಮತ್ತು ಯುರೋಶಿಯನ್ ಜಾತಿಯ ವಿದ್ಯಾರ್ಥಿಗಳು ೮೩೧೨ ಪೋರ್ತುಗೀಜ ಮತ್ತು ನೇಟಿವ್ಹ ಕ್ರಿಶ್ಚಿಯನ್ನರು ೧೦೨೩೪, ಯಹುದಿ ೬೯೩, ಪಾರಸಿ ೧೮೩೯೫, ಮುಸಲ್ಮಾನರು ೯೪.೬೬೬, ಹಿಂದು ಜನರು ೮೩೫.೫೪೯ ಗುಡ್ಡಗಾಡ ಜಾತಿಯ ಜನರು ೭,೭೫೭, ಇತರ ಜಾತಿಯ ವಿದ್ಯಾರ್ಥಿಗಳು ೭೨ ಇರುವರು.

ಮೇಲೆ ಕೊಟ್ಟ ಅಂಕೆಗಳನ್ನು ನೋಡಲಾಗಿ ಪೋರ್ತುಗೀಜ ಮತ್ತು ನೇಟಿವ್ಹ ಕ್ರಿಶ್ಚಿಯನ್ನರ, ಪಾರಸೀ ಜನರ ಹಾಗು ಗುಡ್ಡಗಾಡ ಜನರ ಸಂಖ್ಯೆಯು ಕಳೆದ ವರ್ಷಕ್ಕಿಂತ ಹೆಚ್ಚಾದದ್ದೂ ಉಳಿದ ಜಾತಿಯ ಜನರ ಸಂಖ್ಯೆಯು ಕಡಿಮೆಯಾದದ್ದೂ ಕಂಡುಬರುವದು. ಹಿಂದೂ ಹಾಗೂ ಮುಸಲ್ಮಾನರ ಸಂಖ್ಯೆಯು ಬಹಳ ಕಡಿಮೆಯಾಗಿರುತ್ತದೆ. ಈ ಸಂಖ್ಯೆಯು ಕಡಿಮೆಯಾಗಲಿಕ್ಕೆ ಪ್ಲೇಗರಾಜನೇ ಮುಖ್ಯ ಕಾರಣನಾಗಿರುವನು.

ಮುಂಬೈ ಇಲಾಖೆಯಲ್ಲಿ ೪ ಭಾಗಗಳಿರುತ್ತವೆ; ಆಯಾ ಭಾಗಗಳಿಗೆ ಸೇರಿದಂಥ ಸಾಲೆಗಳ ಹಾಗು ವಿದ್ಯಾರ್ಥಿಗಳ ಪಟ್ಟಿಯನ್ನು ಕೆಳಗೆ ಕೊಟ್ಟಿರುತ್ತೇವೆ. ಅದರಿಂದ ಆಯಾ ಭಾಗದೊಳಗೆ ವಿದ್ಯಾಪ್ರಸಾರವು ಹ್ಯಾಗಾಗುತ್ತದೆಂಬದು ಸ್ಪಷ್ಟವಾಗಿ ತಿಳಿಯುವದು.

	ಭಾಗ.	ಕ್ಷೇತ್ರಫಲ ಮೈಲು.	†ಜನಸಂಖ್ಯೆ.	ಸರಕಾರೀ ಮತ್ತು ಏಡೇಡ್ ಶಾಲೆಗಳು.	ವಿದ್ಯಾರ್ಥಿಗಳು.	ಅನ್‌ರೇಕಗ್ನೈಜ್ಡ ಶಾಲೆಗಳು.	ವಿದ್ಯಾರ್ಥಿಗಳು.	ಶಾಲೆಗೆ ಹೋಗತಕ್ಕವರಾದ † ಹು. ಜ. ಸಂ. ಶೇ. ೧೫ ರಂತೆ.	ಶಾ. ಹೋಗತಕ್ಕ ಹುಗೂ ಹೋಗುತ್ತಿರುವ ಹು. ಶೇ. ಪ್ರ
ಉತ್ತರ ಭಾಗ.	ಮುಂಬಯಿ.	೨೨	೮೨೧೭೬೪	೨೬೨	೨೪೧೬೦	೧೮೨	೭೮೬೬	೧೨೩೨೬೪	೨೬
	ಇತರಜಿಲ್ಲೆಗಳು (೬)	೩೮೩.೯೦	೬೨೩೭೬೬೬	೨೦೯೪	೧೨೬೦೩೨	೩೬೪	೮೪೩೩	೯೩೫೬೪೯	೧೪.
	ಸಂಸ್ಥಾನಗಳು* (೫)	೩೮೫೩	೪೦೮೨೯೦	೧೩೧	೫೩೧೨	೧೪	೨೩೩	೬೧೨೪೩	೯.೦
ಮಧ್ಯ ಭಾಗ.	ಜಿಲ್ಲೆಗಳು (೬)	೧೩೫೦೮	೩೯೪೪೦೫೯	೧೫೫೫	೧೧೩೬೨೩	೩೧೮	೧೦೦೬೬	೫೯೧೬೦೮	೨೦.೯
	ಸಂಸ್ಥಾನಗಳು (೮)	೩೦೪೯೦	೨೮೪೨೭೭೬	೬೦೧	೩೪೬೨೪	೨೪೫	೮೪೧೦	೪೨೬೪೧೬	೧೦.೯
	[illegible]	೨೦೫೫೯	೨೭೫೯೦೬೪	೧೦೬೪	೭೬೮೧೨	೬೬೨	೧೧೬೮೫	೪೧೩೮೬೦	೨೧.೪
[illegible] ಭಾಗ.	ಜಿಲ್ಲೆಗಳು (೬)	೨೫೦೬೧	೪೯೯೬೬೨೬	೧೮೨೩	೬೮೬೨೩	೫೩೨	೯೫೯೨	೭೪೯೪೯೩	೧೦.
	ಸಂಸ್ಥಾನಗಳು (೬)	೮೦೩೫	೧೯೨೩೮೯೧	೨೧೫	೩೬೬೨೨	೨೬೯	೫೪೯೦	೨೮೮೫೮೩	೧೪.೯
ಸಿಂಧಪ್ರಾಂತ	ಜಿಲ್ಲೆಗಳು (೫)	೪೬೭೩೮	೨೮೭೧೭೭೪	೩೯೯	೫೮೯೦೮	೬೮೦	೯೧೩೫	೪೩೦೭೬೬	೧೫.೭
	ಸಂಸ್ಥಾನಗಳು	೬೧೯೦	೧೨೯೧೫೩	೧೦೨	೩೬೨೯	೦	೦	೧೯೩೭೨	೧೮.೬
	ಏಡನ್	೬೫	೩೫೦೫೫	೪೧	೧೯೨೩	೦	೦	೫೨೫೮	೩೬.೫
	ಒಟ್ಟು:	೧೯೩೧೪೯	೨೬೯೬೬೪೨೩	೯೨೬೮	೫೫೮೮೩೦	೩೮೩೧	೭೦೮೪೪	೪೦೪೪೯೩೦	೧೫.೫೫

---

* ಡೀಸಾ, ಅಬೂ, ಬದೋಡಾ ಕ್ಯಾಂಪ ಸಹಿತ.   † ಜನಸಂಖ್ಯೆಯು ಶೇಕಡಾ ೧೫ ರಂತೆ ಶಾಲೆಗೆ ಹೋಗುವ ವಯಸ್ಸಿನ ಹುಡುಗರಿರುತ್ತಾರೆಂದು ಬಲ್ಲವರ ಅಭಿಪ್ರಾಯವುಂಟು

ಮುಂಬೈ ಇಲಾಖೆಯೊಗಿನ ಆಯಾ ಭಾಗದಲ್ಲಿ ಪ್ರಾಥಮಿಕ ಶಾಲೆಗಳ ಸ್ಥಿತಿಯು ಹ್ಯಾಗಿರುತ್ತದೆಂಬದನ್ನು ತಿಳಿಸುವ ಬಗ್ಗೆ ಕೆಳಗಿನ ಪಟ್ಟಿಯನ್ನು ಕೊಟ್ಟಿರುತ್ತೇವೆ.

ಭಾಗ	ಶಾಲೆಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ	೫ನೇ ೬ನೇ ಇಯತ್ತೆ ಕಲಿಯುವವರು.			೩ನೇ ೪ನೇ ಇಯತ್ತೆ ಕಲಿಯುವವರು.			೨ನೇ ಇಯತ್ತೆಯ ವರೆಗೆ ಕಲಿಯುವವರು.			ಅಂತೂ		
			ಗಂಡು	ಹೆಣ್ಣು	ಅಂತೂ	ಗಂಡು	ಹೆಣ್ಣು	ಅಂತೂ.	ಗಂಡು	ಹೆಣ್ಣು.	ಅಂತೂ.	ಗಂಡು.	ಹೆಣ್ಣು.	ಅಂತೂ
ಮ. ಭಾಗ	೨೨೮೬	೧೩೪೦೧೬	೩೭೪೪೦	೨೪೮೬	೩೯೯೨೬	೪೩೬೬೯	೪೮೪೧	೪೮೫೧೦	೩೬೮೨೧	೮೭೫೯	೪೫೫೮೦	೧೧೭೯೩೦	೧೬೦೮೬	೧೩೪೦
ಉ. ಭಾಗ	೨೦೫೧	೧೩೭೧೦೩	೪೦೦೦೦	೩೨೦೮	೪೩೨೦೮	೪೨೪೭೮	೬೦೦೦	೪೮೪೭೮	೩೫೧೬೪	೧೦೨೫೩	೪೫೪೧೭	೧೧೭೬೪೨	೧೯೪೬೧	೧೩೭೧೦
ಕಾಠೆವಾಡ	೧೦೦೫	೬೯೯೯೪	೨೪೦೭೯	೧೮೧೦	೨೫೮೮೯	೨೫೮೮೩	೩೩೮೧	೨೯೨೬೪	೧೧೬೮೨	೩೧೫೯	೧೪೮೪೧	೬೧೬೪೪	೮೩೫೦	೬೯೯೯
ದ. ಭಾಗ.	೨೪೭೮	೧೦೮೪೭೨	೩೬೫೨೧	೧೩೮೭	೩೭೯೦೮	೩೭೫೧೨	೩೯೯೫	೪೧೫೦೭	೨೨೫೧೪	೬೫೪೩	೨೯೦೫೭	೯೬೫೪೭	೧೧೯೨೫	೧೦೮೪೭
ಸಿಂಧ.	೧೩೮೨	೫೭೪೧೩	೧೦೭೮೫	೮೦೧	೧೧೫೮೬	೨೫೦೬೫	೫೨೬೬	೩೦೩೩೧	೧೨೪೩೨	೩೦೬೩	೧೫೫೦೦	೪೮೨೮೩	೯೧೩೦	೫೭೪೧
ಏಡನ್.	೩೫	೧೭೪೫	೪೪	೦	೪೪	೧೧೧೦	೬೮	೧೧೭೮	೪೫೨	೭೧	೫೨೩	೧೬೦೬	೧೩೯	೧೭೪೫

(೬ ನೇ ಪುಟದಿಂದ ಮುಂದೆ ಸಾಗಿದ್ದು.)

೫ ಹೊಡೆದ ಕೂಡಲೆ ನೋಟೀಸಿನಲ್ಲಿ ಬರೆದಂತೆ ತನ್ನ ಅಂಗಡಿಯ ಬಾಗಿಲವನ್ನು ಮುಚ್ಚಿ ಒಳಗೆ ಕೂತು ತನ್ನ ಲೆಕ್ಕವನ್ನೆಲ್ಲ ಹೊಂದಿಸಿ ಊಟ ಮಾಡಿ ತನ್ನ ಅಭ್ಯಾಸವನ್ನು ಮಾಡಹತ್ತಿದನು. ಏಳು ಬಡಿದ ಕೂಡಲೆ ಮತ್ತೆ ಅಂಗಡಿಯನ್ನು ತೆರೆಯಲಾಗಿ ಕಾಲೇಜದ ಎಲ್ಲ ವಿದ್ಯಾರ್ಥಿಗಳು ಅಲ್ಲಿ ಮುತ್ತಿ ಬಿದ್ದು ತಮಗೆ ಬೇಕು ಬೇಕಾದದ್ದನ್ನು ಕೊಂಡುಕೊಂಡರು.

ಹತ್ತಕ್ಕೆ ತನ್ನ ಅಂಗಡಿಯನ್ನು ಬಂದು ಮಾಡಿ ತನ್ನ ಪ್ರಥಮ ದಿವಸದ ವ್ಯಾಪಾರವು ಹ್ಯಾಗೆ ಸಾಗಿತೆಂದು ನೋಡುವಷ್ಟರಲ್ಲಿ ಸಟ್ಟಗೆ ಲಾಭವಾದದ್ದನ್ನು ಕಂಡು ಸಮಾಧಾನವಾಯಿತು. ಏಳು ಜನರ ಕಷ್ಟ ಮಾಡಿದ್ದರಿಂದ ಅವನಿಗೆ ೨ ರೂಪಾಯಿ ೪ ಆಣೆ ೧೫ ಬೂಟು ಜೋಡುಗಳಿಗೆ ಕಪ್ಪು ಬಣ್ಣ ಹಚ್ಚಿದ್ದಕ್ಕೆ ೨ ರೂಪಾಯಿ ೫॥ ಆಣೆ ೧೭ ರೂಪಾಯಿಯ ಕಾಗದ, ಮಸಿ, ಲೆಕ್ಕಣಿಕೆಗಳನ್ನು ಮಾರಿದ್ದರಲ್ಲಿ ಬಂದ ಲಾಭವು ೪ ರೂಪಾಯಿ ೧೨ ಆಣೆ, ಸೆಲಿಗಡ್ಲೆ ಮಾರಿದ್ದರಿಂದ ಬಂದ ಲಾಭ ೬ ರೂಪಾಯಿ, ಒಟ್ಟಿಗೆ ಅವನಿಗೆ ಖರ್ಚ ವೆಚ್ಚ ಹೋಗಿ ಒಂದು ದಿವಸದಲ್ಲಿ ೧೫ ರೂಪಾಯಿ ಲಾಭ ಬಂತು. ಈ ವಿದ್ಯಾರ್ಥಿಯ ವ್ಯಾಪಾರವು ಭರದಿಂದ ಸಾಗಿ ಅವನಿಗೆ ಕಾಲೇಜದ ಖರ್ಚಿಗೆ ಬೇಕಾದಕ್ಕಿಂತ ಹೆಚ್ಚು ಹಣ ಪ್ರಾಪ್ತವಾಗಿ ಅವನ ವ್ಯಾಪಾರವೂ ಅಭ್ಯಾಸವೂ ನಿರಾಯಾಸದಿಂದ ಸಾಗಿದವು

ಜೂನ ತಿಂಗಳಲ್ಲಿ ಒಂದು ದಿವಸ ಈ ವಿದ್ಯಾರ್ಥಿಗಳು ಶಾಲೆಯ ಹೊರಗೆ ಗಿಡದ ನೆರಳಿಗೆ ಕುಳಿತು, ತಮ್ಮ ಶಿಕ್ಷಕನ ಎದುರಿಗೆ ಒಂದು ವಿಷಯವನ್ನು ಕುರಿತು ಚರ್ಚಿಸುತ್ತಿರುವಾಗ ಶಿಕ್ಷಕನು ನಿಮ್ಮ ವರ್ಗದ ಒಬ್ಬ ವಿದ್ಯಾರ್ಥಿಯು ತೋರಿಸಿದ ಧೈರ್ಯಕ್ಕೆ ನಾನು ಮೆಚ್ಚಿದೆನು, ಎಂದು ಸಂತೋಷದಿಂದ ಹೇಳಿದನು. ಈ ಪೂರ್ವದಲ್ಲಿ ಯಾರೂ ಈ ರೀತಿಯಿಂದ ಶ್ರಮಬಟ್ಟು ತಮ್ಮ ಖರ್ಚನ್ನು ತಾವೇ ಸಾಗಿಸಲಿಲ್ಲೆಂತಲೂ ದುರಭಿಮಾನಕ್ಕೆ ಒಳಗಾಗದೆ ಪ್ರಾಮಾಣಿಕತನದಿಂದ ದುಡಿಯಲಿಕ್ಕೆ ಹಿಂಜರಿಯುವ ಮನುಷ್ಯನು ತನಗೆ

ಬಹಳ ಮಾನ್ಯನೆಂತಲೂ ಅರುಹಿ, ಇಂಥವನನ್ನು ನೀವೆಲ್ಲರೂ ಅಭಿನಂದಿಸತಕ್ಕದ್ದೆಂದು ತಿಳಿಸಿದನು. ಆ ವರ್ಗದ ವಿದ್ಯಾರ್ಥಿಗಳಾದರೂ ಅವನನ್ನು ಹಾಡಿ ಹರಿಸಿದರು. ಆಗ ಆ ವಿದ್ಯಾರ್ಥಿಯು ಸದ್ಗದಕಂಠನಾಗಿ ಹೇಳಿದ್ದೇನಂದರೆ:—ನಾನು ತೀರ ಬಡವನು. ಆದರೆ ನನಗೆ ಸಲ್ಲದಂಥ ಕೆಲಸಗಳಿಗೆ ಬೆಚ್ಚಿದವನಲ್ಲ. ಆದ್ದರಿಂದ ವಿದ್ಯಾಲಯದಲ್ಲಿ ಸುಮ್ಮನೆ ಬಿಕ್ಕೆ ಬೇಡಿ ಅತ್ತು ಕರೆದು ಎರಡನೆಯವರನ್ನು ತ್ರಾಸಗೊಳಿಸುವದಕ್ಕೆ ಬದಲಾಗಿ ಕೈಲಾದಮಟ್ಟಿಗೆ ನನಗೆ ನೀಗುವಂಥ ಹೋರೆಯನ್ನು ಕೈಕೊಂಡು, ಎಚ್ಚರದಿಂದಲೂ ಜಾಗ್ರತೆಯಿಂದಲೂ ಅದನ್ನು ಸಾಗಿಸಿ ಹೊಟ್ಟೆ ಹೊರಕೊಂಡು ನನ್ನ ಅಭ್ಯಾಸವನ್ನು ಮಾಡಬೇಕೆಂದು ನಿಶ್ಚೈಸಿದೆನು. ದೇವರ ದಯದಿಂದಲೂ, ನಿಮ್ಮೆಲ್ಲರ ಸಹಾಯದಿಂದಲೂ, ಗುರುಗಳ ಅನುಗ್ರಹದಿಂದಲೂ ನನಗೆ ಯಶವು ಬಂತು. ಇದಕ್ಕಾಗಿ ನಿಮ್ಮೆಲ್ಲರ ಆಭಾರವನ್ನು ಎಣಿಸುತ್ತೇನೆ.

ಮೇಲೆ ವರ್ಣಿಸಿದ ಮಾತು ನಿಜವಾಗಿ ವರ್ತಿಸಿದ ಸಂಗತಿಯು. ವಿದ್ಯಾರ್ಥಿಯ ಹೆಸರನ್ನು ಮಾತ್ರ ನಾವು ಕೊಟ್ಟಿರುವದಿಲ್ಲ. ನಮ್ಮ ವಾಚಕರೊಳಗೆ ಇಂಥ ಸ್ಥಿತಿಯಲ್ಲಿ ಅನೇಕ ಜನರುಂಟು. ಅವರು ಈ ಕಥೆಯನ್ನು ಓದಿ ಧೈರ್ಯದಿಂದ ಟೊಂಕ ಕಟ್ಟಿ ತಮಗೆ ನೀಗುವಂಥ ಹೋರೆಗಳನ್ನು ಕೈಕೊಂಡು ಪ್ರಾಮಾಣಿಕತನದಿಂದ ಸಾಗಿಸಿಕೊಂಡು ಸ್ವಾರ್ಥವನ್ನೂ ಕೀರ್ತಿಯನ್ನೂ ಪಡೆಯಬೇಕೆಂಬ ಉದ್ದೇಶದಿಂದ ಇದನ್ನು ಬರೆದಿರುತ್ತೇವೆ.

THE FALLING STARS.

ಉಲ್ಕೆಗಳು.

(೧೩ ನೇ ಪು. ದಿಂದ ಮುಂದೆ ಸಾಗಿದ್ದು.)

ಉಲ್ಕಾಪುಂಜಗಳಿಗೂ ಧೂಮಕೇತುಗಳಿಗೂ ಅತಿ ನಿಕಟ ಸಂಬಂಧವಿರುತ್ತದೆಂಬುದು ೧೮೬೬ನೇ ಇಸವಿಯಲ್ಲಿ ಮೊದಲಿಗೆ ಗೊತ್ತಾಯಿತು. ಆ ವರ್ಷ ಟೆಂಪಲನೆಂಬ ಧೂಮಕೇತುವು ಕಾಣುತ್ತಿತ್ತು. ಅದರ ಪ್ರದಕ್ಷಿಣೆಯ ಕಾಲವು ಸುಮಾರು ೩೩¼ ವರ್ಷವು. ಪಂಡಿತರು ಶೋಧವನ್ನು ತೆಗೆದು

ಕೊಂಡು ಅದರ ಕಕ್ಷೆಯನ್ನು ಗೊತ್ತು ಹಚ್ಚಿದರು. ಸಿಂಹೋಲ್ಕಾಪುಂಜದ ಕಕ್ಷೆಯೂ ಈ ಧೂಮಕೇತುವಿನ ಕಕ್ಷೆಯೂ ಒಂದೇ ಎಂದು ಗೊತ್ತಾಯಿತು. ಈ ಸಂಬಂಧದಿಂದ ಬೀಲ ಸಾಹೇಬರ ಧೂಮಕೇತುವಿನ ಇತಿಹಾಸವು ಬಳ್ಳೇ ಸೋಜಿಗವಾಗಿರುತ್ತದೆ. ಈ ಕೇತುವಿನ ಪ್ರದಕ್ಷಿಣಾಕಾಲವು ಸುಮಾರು ೭ ವರ್ಷವಿತ್ತು. ೧೮೪೬ ರಲ್ಲಿ ಈ ಕೇತುವಿಗೆ ಬದಲಾಗಿ ಎರಡು ಕೇತುಗಳು ಕಾಣಿಸಿದವು. ೧೮೫೨ ನೇ ವರ್ಷವಾದರೂ ಎರಡೇ ಕಾಣಿಸಿದವು. ಆದರೆ ೧೮೫೯–೬೬ ನೇ ವರ್ಷ ಈ ಕೇತುಗಳು ಅಥವಾ ಅವುಗಳ ವಿಭಾಗಗಳು ದೃಷ್ಟಿಗೆ ಬೀಳದೆ ೧೮೭೨ ರಲ್ಲಿ ಉಲ್ಕಾವೃಷ್ಟಿ ಮಾತ್ರವಾಯಿತು. ಮುಂದೆ ಈ ಉಲ್ಕಾಪುಂಜ ಧೂಮಕೇತುಗಳ ಕಕ್ಷೆಗಳು ಒಂದೇ ಎಂದು ಸಿದ್ಧವಾದ ಬಳಿಕ ಮೊದಲಲಿದ್ದ ಕೇತುವು ಆರಂಭದಲ್ಲಿ ದ್ವಿಭಾಗವಾಗಿ ಬಳಿಕ ಕಡೆಯಲ್ಲಿ ಅನಂತ ವಿಭಾಗಗಳಾಗಿ ಉಲ್ಕಾರೂಪದಿಂದ ಕಾಣಿಸಿರಬಹುದೆಂದು ಜೋತಿಷಿಗಳು ನಂಬುತ್ತಾರೆ.

ನಿಯಮಿತ ಕಾಲದಲ್ಲಾಗುವ ಉಲ್ಕಾಪತನಗಳಲ್ಲಿ ಒಂದಾದರೂ ಉಲ್ಕೆಯು ಭೂಮಿಗೆ ಬಂದು ಮುಟ್ಟುವದಿಲ್ಲ. ಅಂತರಿಕ್ಷದಲ್ಲಿಯೇ ಅವು ಭಸ್ಮವಾಗುತ್ತವೆ. ಭೂಮಿಯ ಮೇಲೆ ಅಲ್ಲಲ್ಲಿಗೆ ಈ ಪ್ರಕಾರವಾಗಿ ಬಿದ್ದ ಬೂದಿಯನ್ನು ಶೋಧಕರು ಗೊತ್ತುಹಚ್ಚಿದ್ದಾರೆ. ಆ ಬೂದಿಯಲ್ಲಿ ಕಬ್ಬಿಣದ ಅಂಶವು ತೋರಿ ಬಂದದ್ದರಿಂದ ಅದು ಉಲ್ಕೆಯ ಬೂದಿಯೆಂದು ಸಿದ್ಧವಾಗುತ್ತದೆ. ಈ ಮೇರೆಗೆ ಬಿದ್ದ ಬೂದಿಯಿಂದ ಪೃಥ್ವಿಯ ಆಕಾರಮಾನವು ಹೆಚ್ಚಾಗಿರಬಹುದು.

ಅನೇಕ ದೇಶಗಳ ಇತಿಹಾಸಗಳಲ್ಲಿ ಈ ಅಶನಿಪಾತದ ವರ್ಣನೆಯುಂಟು. ೧೬೨೦ ರಲ್ಲಿ ಪಂಜಾಬ ಪ್ರಾಂತದಲ್ಲಿ ಬಿದ್ದ ಉಲ್ಕಾಪಾಷಾಣದ ವೃತ್ತಾಂತವನ್ನು ಜಹಾನ್‌ಗೀರ ಬಾದಶಹನು ಬರೆದಿಟ್ಟದ್ದೇನೆಂದರೆ :—

“ಬಿದ್ದ ಕಲ್ಲಿನ ತೂಕವು ೧೬೦ ತೊಲಿ ಇತ್ತು. ಅದರೊಳಗಿಂದ ಹೊರಟ ಕಬ್ಬಿಣದಲ್ಲಿ ಘನವರ್ಧನಿಯತ್ವದ ಧರ್ಮವಿದ್ದಿಲ್ಲ. ಅದರಿಂದ ಬೇರೆ ಕಬ್ಬಿಣವನ್ನು ಅದರಲ್ಲಿ ಕೂಡಿಸಿ

ಎರಡು ಪತ್ರಿಗಳನ್ನೂ ಒಂದು ಜೋಡಿಯನ್ನೂ ಮಾಡಿಸಿದೆವು.”

ಅಶನಿಪಾತವಾಗುವ ಕಾಲಕ್ಕೆ ಆಕಾಶವು ನಿರಭ್ರವಾಗಿದ್ದರೂ ಮೋಡಗಳು ಬಂದು ಅವುಗಳೊಳಗಿಂದ ವೃಷ್ಟಿಯಾಗುತ್ತಲೆ ಆಗ ಮೇಘಗರ್ಜನೆಯಂತೆ ಧ್ವನಿಯಹುದರೂ ಆಗುವದು ಒಮ್ಮೊಮ್ಮೆ ಮೋಡಗಳ ಬದಲು ಬೆಂಕಿಯ ಪಿಂಡಗಳು ಭೂಮಿಯ ಮೇಲೆ ಇಳಿಯುವಂತೆ ತೋರುತ್ತದೆ. ಜಗತ್ತಿನ ಬೇರೆ ಬೇರೆ ಭಾಗಗಳಲ್ಲಿ ಸಿಕ್ಕ ಈ ಪ್ರಕಾರದ ಕಲ್ಲುಗಳನ್ನು ಒತ್ತಟ್ಟಿಗೆ ಕೂಡಿಸಿ ಇಂಗ್ಲಂಡದಲ್ಲಿಯ ಬ್ರಿಟಿಶ ಮ್ಯುಝಿಯಂ ಹಾಗು ನ್ಯಾಚರಲ್ ಹಿಸ್ಟರಿ ಮ್ಯುಝಿಯಂ ಎಂಬ ಹೆಸರಿನ ಪದಾರ್ಥಸಂಗ್ರಹಾಲಯದಲ್ಲಿ ಇಡಲ್ಪಟ್ಟಿರುತ್ತವೆ. ಅವುಗಳಲ್ಲಿ ಒಂದರ ತೂಕವು ೩½ ಟನ್ನ ಇರುತ್ತದೆ. ರಸಾಯನ ರೀತಿಯಿಂದ ಈ ಕಲ್ಲಿನ ಪೃಥಕ್ಕರಣ ಮಾಡಿದರೆ ಇದರಲ್ಲಿ ಪೃಥ್ವಿಯ ಘಟಕಗಳ ಹೊರತು ಬೇರೆ ಘಟಕಗಳು ಇಲ್ಲೆಂದು ಗೊತ್ತಾಗಿರುತ್ತದೆ.

ಚಂದ್ರನ ಮೇಲಿರುವ ಜ್ವಾಲಾಮುಖಿಯಿಂದ ಈ ಅಶನಿಗಳು ಹೊರಬಿದ್ದಿರಬಹುದೆಂದು ವಿದ್ವಾಂಸರ ಮತವಿರುತ್ತದೆ. ಕೆಲವರು ಈ ಉಲ್ಕಾಪಾಷಾಣಗಳು ಸಣ್ಣ ಗ್ರಹಗಳ ಮೇಲಿರುವ ಅಥವಾ ದೊಡ್ಡ ಗ್ರಹಗಳ ಮೇಲಿರುವ ಜ್ವಾಲಾಮುಖಿಯ ಪರ್ವತಗಳಿಂದ ಹೊರಟಿರಬಹುದೆಂದು ಅನ್ನುತ್ತಾರೆ. ಬೇರೆ ಕೆಲವರು ಈ ಉಲ್ಕಾಪಾಷಾಣಗಳು ಪೃಥ್ವಿಯ ಹೊಟ್ಟೆಯೊಳಗಿನ ಜ್ವಾಲಾಮುಖಿ ಪರ್ವತದ ಮುಖದಿಂದ ಪೃಥ್ವಿಯ ಆಕರ್ಷಣ ಶಕ್ತಿಯನ್ನು ಮೀರಿ ಹೋಗುವಷ್ಟು ವೇಗದಿಂದ ಹೊರಬಿದ್ದು ಸ್ವತಂತ್ರತೆಯಿಂದ ತಿರುಗುತ್ತಿರಬಹುದೆಂತಲೂ ಸೂರ್ಯನು ಅವುಗಳನ್ನು ತನ್ನ ಅಧಿಕಾರದಲ್ಲಿ ಎಳಕೊಂಡು ತನ್ನ ಸುತ್ತು ತಿರುಗಲಿಕ್ಕೆ ಹಚ್ಚಿರಬಹುದೆಂತಲೂ ಈ ಪ್ರಕಾರ ಸೂರ್ಯನ ಸುತ್ತು ತಿರುಗುತ್ತ ತಿರುಗುತ್ತ ಪೃಥ್ವಿಯ ಹತ್ತರ ಹಾದು ಹೋಗುವಾಗ ಪೃಥ್ವಿಯ ಅಧಿಕಾರದಲ್ಲಿ ಸಿಕ್ಕು ಪುನಃ ಪೃಥ್ವಿಯ ಮೇಲೆ ಬೀಳುತ್ತಿರಬಹುದೆಂತಲೂ ಹೇಳುತ್ತಾರೆ.

CHEMISTRY.

ರಸಾಯನಶಾಸ್ತ್ರ.

(೧೮ನೇ ಪುಟದಿಂದ ಮುಂದೆ ಸಾಗಿದ್ದು.)

ಈ ಮೇರೆಗೆ ಯಂತ್ರರಚನೆಯು ಸಿದ್ಧವಾದ ಬಳಿಕ **ಕ** ಪಾತ್ರೆಯಲ್ಲಿ **ಗ** ಕೊಳವೆಯ ಮಾರ್ಗವಾಗಿ ತುಸು ಗಂಧಕಾಮ್ಲವನ್ನು ಸುರವು. ಇದರಿಂದ ಯಾವತ್ತು ಯಂತ್ರದೊಳಗಿಂದ ಹೈಡ್ರೋಜನ್ನ ವಾಯುವಿನ ಗುಳ್ಳೆಗಳು ಸಂಚರಿಸಹತ್ತುತ್ತವೆ. ನಳಿಗೆಯ ತೆರೆದ ಬಾಯಿಮೇಲೆ ಒಂದು ಪರೀಕ್ಷಾ ನಳಿಕೆಯನ್ನು ಇಡು. ಅದೇ ಹಾದಿಯಿಂದ ಅದರಲ್ಲಿ ಹೈಡ್ರೋಜನ್ ವಾಯುವು ಸಂಚಯವಾಗುತ್ತದೆ. ಬಳಿಕ ಈ ವಾಯುವು ಶುದ್ಧವಾಗಿರುವದೋ ಇಲ್ಲವೋ ಎಂಬದನ್ನು ಪರೀಕ್ಷಿಸು. ಅಂದರೆ ಈ ಕೊಳವೆಯ ಬಾಯಿಯನ್ನು ದೀಪದ ಜ್ಯೋತಿಯ ಹತ್ತರ ಒಯ್ಯೆ ಅದು ಸಾವಕಾಶವಾಗಿ ಉರಿಯದೆ ಒಮ್ಮಿಂದೊಮ್ಮೆ ದೊಡ್ಡ ಸಪ್ಪಳವಾದರೆ ಇನ್ನೂ ಶುದ್ಧವಾದ ಹೈಡ್ರೋಜನ್ನವು ಬಂದಿಲ್ಲವೆಂದು ತಿಳಿಯತಕ್ಕದ್ದು. ಮಂದವಾಗಿ ಉರಿಯತೊಡಗಿದರೆ ಶುದ್ಧವಾದ ಹೈಡ್ರೋಜನ್ನವು ಬಂದಿರುತ್ತದೆಂದರಿತು **ಘ** ಕೊಳವೆಯೊಳಗಿನ ಗೋಲದ ಬುಡದಲ್ಲಿ ಮದ್ಯಾರ್ಕದ ದೀಪವನ್ನಿಡು. **ಘ** ಕೊಳವೆಯು ಕಾಯುವವರೆಗೆ ಏನೂ ಹೇಳ್ತು ಕಣಿಮೆಯು ತೋರುವದಿಲ್ಲ. ಅದು ಒಳಿತಾಗಿಕಾದಬಳಿಕ ನೋಡಲು. ಮೊದಲು ಅದರಲ್ಲಿದ್ದ ಕಪ್ಪುಬಣ್ಣದ ತಾಮ್ರದ ಜಂಗು ಕೆಂಪಗೆ ಕಾಣುವದು. ಮತ್ತು ಸಣ್ಣ ಸಣ್ಣ ನೀರಿನ ಹನಿಗಳು **ಘ** ಕೊಳವೆಯ ಒಳಮಗ್ಗಲಲ್ಲಿ ದೃಷ್ಟಿಗೋಚರವಾಗುವವು. **ಘ** ಕೊಳವೆಯು ಅತಿ ತಪ್ತವಾದ ಬಳಿಕ ಆ ನೀರಹನಿಗಳು **ಙ** ಲಳಿಗೆಯೊಳಗೆ ಬರುತ್ತವೆ. ಅಲ್ಲಿರುವ ಆರ್ದ್ರತಾಶೋಷಕ ಪದಾರ್ಥವಾದ ಕ್ಯಾಲ್ಸಿಯಮ್ ಕ್ಲೋರಾಯಿಡ್ ಎಂಬ ಒಡವೆಯು ಆ ಎಲ್ಲ ಹಸಿಯನ್ನು ಹೀರಿಕೊಳ್ಳುತ್ತದೆ. ಈ ಕ್ರಮವನ್ನು **ಙ** ಲಳಿಗೆಯೊಳಗಿನ ತಾಮ್ರದ ಜಂಗಿನ ಕಪ್ಪು ಬಣ್ಣವು ಇಲ್ಲದಂತಾಗುವವರೆಗೂ ನಡೆಯಗೊಡು. ಅಂದರೆ ಹೈಡ್ರೋಜನ್ನ ವಾಯುವಿನ ಪ್ರವಾಹವು ಸಮಗ್ರ ಯಂತ್ರದಲ್ಲಿ ಅಲ್ಲಿಯ ವರೆ

ಗೆ ಹರಿಯುತ್ತಿರಲಿ. ತಾಮ್ರದ ಜಂಗು ತನ್ನಲ್ಲಿರುವ ದೋಷವನ್ನು ಕಳೆದು ಥಳಥಳ ಹೊಳೆಯುವ ತಾಮ್ರದ ಸ್ವರೂಪವನ್ನು ಹೊಂದಿದ ಬಳಿಕ, ಅದರ ಬುಡದಲ್ಲಿದ್ದ ದೀಪವನ್ನು ಒರೆಗಿಡು. ಈ ಕೊಳವೆಯು ತಣ್ಣಗಾಗುವದರೊಳಗೇ ನಮ್ಮ ಈ ಪ್ರಯೋಗದಿಂದ ಏನು ಪರಿಣಾಮವಾಯಿತೆಂಬುದನ್ನು ನೋಡುವ. ತಾಮ್ರದ ಜಂಗಿನಲ್ಲಿ ಆಕ್ಸಿಜನ್ ವಾಯುವಿರುತ್ತದೆ. ಅದು ಯಂತ್ರದಲ್ಲಿ ಹರಿದಾಡುತ್ತಿದ್ದ ಹೈಡ್ರೋಜನ್ ವಾಯುವಿನೊಡನೆ ಸಂಯುಕ್ತವಾಗಿ ನೀರನ್ನುಂಟು ಮಾಡಿತು. ಆ ನೀರು ಪ್ರವಾಹರೂಪದಿಂದಲೂ ಉಗಿಯ ರೂಪದಿಂದಲೂ ೩ ನಳಿಗೆಯಲ್ಲಿ ಸೇರಿ ನಿಂತುಕೊಂಡಿತು. ಮುಂದೆ ಹೊರಬಿದ್ದು ಹೋಗಲಿಲ್ಲ. ಯಾಕೆಂದರೆ ಆ ಕೊಳವೆಯಲ್ಲಿರುವ ಕ್ಯಾಲ್ಸಿಯಮ್ ಆಫ್ ಕ್ಲೋರಾಯಿಡ್ ಎಂಬ ಪದಾರ್ಥದಲ್ಲಿ ಹಸಿಯನ್ನು ಹೀರಿಕೊಳ್ಳುವ ಧರ್ಮವಿರುತ್ತದೆ. ಈ ಕೊಳವೆಯಲ್ಲಿ ಬರೇ ಕೆಂಪು ಪುಡಿಯು ಉಳಿದಿರುತ್ತದೆ. ಅದು ತಾಮ್ರದ ಜಂಗಿನೊಳಗಿದ್ದ ಶುದ್ಧ ತಾಮ್ರದ ಭಾಗವು. ಇನ್ನು ೪, ೩ ನಳಿಗೆಗಳನ್ನು ಮತ್ತೊಮ್ಮೆ ತೂಗಿ ನೋಡುವ. ನೋಡು ೪ ನಳಿಗೆಯ ತೂಕವು ಮೊದಲಿಗಿಂತ ಕಡಿಮೆಯಾಗಿಯೂ ೩ ನಳಿಗೆಯ ತೂಕವು ಮೊದಲಿಗಿಂತ ಹೆಚ್ಚಾಗಿಯೂ ಇದ್ದಂತೆ ಲೆಕ್ಕದಿಂದ ಹೊರಟಿತು. ಹೀಗಾದದು ವಾಸ್ತವಿಕವಿದೆ. ೪ ನಳಿಗೆಯೊಳಗಿನ ತಾಮ್ರದ ಜಂಗಿನೊಳಗಿನ ಆಕ್ಸಿಜನ್ನವು ಹೊರಬಿದ್ದು ಹೋಗಿರುವದರಿಂದ ಅದರ ತೂಕವು ಕಡಿಮೆಯಾಗಿದೆ. ೩ ನಳಿಗೆಯೊಳಗಿನ ಕ್ಯಾಲ್ಸಿಯಮ್ ಕ್ಲೋರಾಯಿಡ್ ಎಂಬ ಪದಾರ್ಥದಲ್ಲಿ ನೀರು ಹೊಸದಾಗಿ ಬಂದು ಸೇರಿಕೊಂಡಿರುವದರಿಂದ ಅದರ ತೂಕವು ಹೆಚ್ಚಾಗಿದೆ. ಈ ಎರಡೂ ಕೊಳವೆಗಳ ಮೊದಲಿನ ತೂಕವನ್ನು ಅಂತರವನ್ನೂ ಈಗಿನ ತೂಕವನ್ನೂ ಕಂಡುಬರುವ ಅಂತರವನ್ನೂ ಇದರ ಕೆಳಗೆ ಬರೆದಿರುತ್ತೇವೆ.

	ಗ್ರೇನು.
೧ ಹೈಡ್ರೋಜನ್ನವು ಹುಟ್ಟುವದಕ್ಕಿಂತ ಮೊದಲಿದ್ದ ೪ ನಳಿಗೆಯ ತೂಕವು	೧೦೪೩

೨ ಪ್ರಯೋಗ ಮುಗಿದ ಬಳಿಕ ಅ ನಳಿಗೆಯ
ತೂಕವು ೧೦೧೬
ಆಕ್ಸಿಜನ್ನವು ಹೊರಟುಹೋದ್ದರಿಂದ ತೂಕದಲ್ಲಿ
ಉಂಟಾದ ಅಭ್ಯಂತರವು ೪೦
೩ ಪ್ರಯೋಗಪೂರ್ವದಲ್ಲಿದ್ದ ಇ ನಳಿಗೆಯ ತೂಕವು ೮೦೩
೪ ಪ್ರಯೋಗ ಮುಗಿದ ಬಳಿಕ ಇ ನಳಿಗೆಯ ತೂಕವು ೮೪೮
ಇ ನಳಿಗೆಯಲ್ಲಿ ನೀರು ಕೂಡಿದ್ದರಿಂದ ಅದರ
ತೂಕದಲ್ಲಿ ಉಂಟಾದ ಅಭ್ಯಂತರವು ೪೫

ಈ ಮಹತ್ವದ ಪ್ರಯೋಗವನ್ನಂತೂ ನಾವು ಮಾಡಿದೆವಷ್ಟೇ ? ಇದರಿಂದ ನಮಗೇನು ತಿಳಿಯಿತು ? ೪೦ ಗ್ರೇನು ಆಕ್ಸಿಜನವಿದ್ದರೆ ೪೫ ಗ್ರೇನು ನೀರು ಸಿದ್ಧವಾಗುತ್ತದೆ. ನೀರೊಳಗಂತೂ ಆಕ್ಸಿಜನ್ ಹೈಡ್ರೋಜನ್‌ಗಳ ಹೊರ್ತು ಮತ್ತೊಂದಿಲ್ಲ; ಆದ್ದರಿಂದ ಇ ನಳಿಗೆಯೊಳಗೆ ೫ ಗ್ರೇನು ಹೈಡ್ರೋಜನ್ ವಿತ್ತೆಂತಲೂ ಅದು ಈ ೪೦ ಗ್ರೇನು ಆಕ್ಸಿಜನದಲ್ಲಿ ಬೆರತುಕೊಂಡದ್ದರಿಂದ ೪೫ ಗ್ರೇನು ನೀರಾಯಿತೆಂತಲೂ ಸ್ಪಷ್ಟವಾಗುತ್ತದೆ. ಇದರಿಂದ ನೀರನ್ನುಂಟು ಮಾಡಲಿಕ್ಕೆ ಈ ಎರಡು ವಾಯುಗಳ ಪ್ರಮಾಣವು ೧೬ : ೨ ರಂತೆ ಇರಬೇಕೆಂಬದು ಗಣಿತದಿಂದ ಸಿದ್ಧವಾಯಿತು. ಈ ಪ್ರಮಾಣವನ್ನು ನೀವು ಮರೆಯಬಾರದು.

ಮೇಲಿನ ಪ್ರಯೋಗವನ್ನು ಜಾಗ್ರತೆಯಿಂದ ಮಾಡಿ ನೋಡಿದರೆ ಮೇಲಿನ ಪ್ರಮಾಣವೇ ಸರ್ವತ್ರದಲ್ಲಿ ಕಂಡುಬರುತ್ತದೆ. ರಸಾಯನ ಪ್ರಯೋಗದಲ್ಲಿ ಒಂದು ಕಡೆಯಲ್ಲಿ ಹೊರಟ ಪ್ರಮಾಣವು ಯಾವತ್ತು ಕಡೆಗೂ ಹತ್ತುತ್ತದೆ. ಆದ್ದರಿಂದ ನೀರೊಳಗಿನ ಆಕ್ಸಿಜನ್ನ ಹೈಡ್ರೋಜನ್ನಗಳ ಪ್ರಮಾಣವು ೧೬ : ೨ ಎಂಬದು ಎಲ್ಲ ಕಡೆಯಲ್ಲಿಯೂ ನಿಜವಾಗಿರುವದು. ಇದರಂತೆ ಈ ಶಾಸ್ತ್ರದಲ್ಲಿ ಶೋಧದಿಂದ ಹೊರಟ ಯಾವ ಪ್ರಮಾಣಗಳಾದರೂ ಎಲ್ಲಿಯೂ ಬದಲಾಗವು.

FIGURES OF SPEECH.
ಅಲಂಕಾರಗಳು.

(೨೦ ನೇ ಪುಟದಿಂದ ಮುಂದೆ ಸಾಗಿದ್ದು.)

ವಿನೋಕ್ತ್ಯಲಂಕಾರ—ಪ್ರಸ್ತುತ ವಸ್ತುವು "ವಿನಾ" ಎಂ

ಬರ್ಥದಿಂದ ಒಡಗೂಡಿ ರಮ್ಯವೆಂದು ಹೇಳಲ್ಪಡುತ್ತಿದ್ದರೆ, ಈ ಅಲಂಕಾರವಾಗುವದು. ಉ.

ಆರ್ಯಾ—ವಿದ್ಯೆಯು ವಿನಯವಿಹೀನವು ।
ಹೃದ್ಯವದಾದರು ಜಗಕ್ಕೆ ಬಹುಗರ್ಹ್ಯಂ ॥

ಇಲ್ಲಿ ವಿದ್ಯೆಯು ಮನೋಹರವಾಗಿದ್ದರೂ ವಿನಯವಿಲ್ಲದಿದ್ದರೆ ಅದು ಜಗಕ್ಕೆ ನಿಂದ್ಯವಾಗುವದು. ಪ್ರಸ್ತುತವು, ವಿದ್ಯೆಯು, ವಿನಯಶೂನ್ಯವಾಯಿತೆಂದು ಭಾಷಿಸಲ್ಪಡುತ್ತದೆ. ಇದಕ್ಕೆ ಇನ್ನೊಂದುದಾಹರಣೆ.

ಆರ್ಯಾ—ಯಾವನು ರಾಮನ ನೋಡನು ।
ಯಾವನ ರಾಮಂ ದಿನಂಗಳು ಕಾಣನೆಲ್ಲೈ ॥
ಈ ವಸುಧೆಯಲ್ಲಿ ನಿಂದ್ಯನು ।
ಭಾವವು ಗರ್ಹಿಪುದದಾತನಂ ನಿತ್ಯಂ ॥

ಅರ್ಥ—ರಾಮನು ಯಾವನನ್ನು ನೋಡುವದಿಲ್ಲೋ ಅವನೂ ಹಾಗೂ ಯಾವನು ರಾಮನನ್ನು ನೋಡುವದಿಲ್ಲೋ ಅವನು, ಇವರಿಬ್ಬರು ಈ ಭೂಮಿಯಲ್ಲಿ ನಿಂದ್ಯರಾಗುವರು. (ರಾಮಕರ್ಮಕ, ರಾಮಕರ್ತೃಕ ದರ್ಶನವನ್ನು) ಬಿಟ್ಟು ನಿಂದ್ಯನಾಗುವನು. ಅವನ ಮನಸ್ಸಾದರೂ ಹಳಿಯುವದು. ಇಲ್ಲಿ "ವಿನಾ" ಎಂಬ ಶಬ್ದಗ್ರಹಣವಲ್ಲ. ಅರ್ಥಗ್ರಹಣವು ೨ ನೇ ಪ್ರಕಾರದ ವಿನೋಕ್ತಿಯ ಲಕ್ಷಣವು. ಪ್ರಸ್ತುತವು "ವಿನಾ" ಎಂಬ ಅರ್ಥದಿಂದ ಮನೋಹರವೆಂದು ಹೇಳಲ್ಪಡುತ್ತಿದ್ದರೆ ವಿನೋಕ್ತಿಯಾಗುವದು. ಉ.

ಆರ್ಯಾ—ರಾಜನೆ ನಿನ್ನೀಸಭೆಯು ವಿ ।
ರಾಜಿಪುದೀ ದುಷ್ಟರಿಲ್ಲದದು ನಿತ್ಯಂ ॥

ಅರ್ಥ—ಎಲೈ ಅರಸನೆ, ನಿನ್ನ ಸಭೆಯು ದುಷ್ಟ ಜನರ ಹೊರತಾಗಿ ವಿರಾಜಿಸುವದು. ಇಲ್ಲಿ ಪ್ರಸ್ತುತವು ಸಭೆಯು "ವಿನಾ" ಎಂಬರ್ಥದಿಂದ ಒಡಗೂಡಿ ರಮ್ಯವೆಂದು ಹೇಳಲ್ಪಡುತ್ತದೆ. ಇದರಂತೆ ಎಲ್ಲ ಕಡೆಯಲ್ಲಿ ತಿಳಿಯಬೇಕು.

ನೀರಿರ್ದ ಕಾಸಾರಕರವಿಂದವಿಲ್ಲದೊಡೆ ।
ತಾರಕೆಗಳಿರ್ದ ಗಗನಕೆ ಚಂದ್ರನಿಲ್ಲದೊಡೆ ।
ಚಾರುಯೌವನಕೊಪ್ಪುವಾ ವಿದ್ಯೆಯಿಲ್ಲದೊಡೆ ಸನ್ನುತ
ಪ್ರಜೆಗಳಿರ್ದಾ ॥

ಈ ಪದ್ಯವಾದರೂ ವಿನೋಕ್ತಿಯೇ ಆಗುವದು.

೨ ಪ್ರಯೋಗ ಮುಗಿದ ಬಳಿಕ ಆ ಲಳಿಗೆಯ ತೂಕವು	೧೦೧೩
ಆಕ್ಸಿಜನ್ನವು ಹೊರಟುಹೋದ್ದರಿಂದ ತೂಕದಲ್ಲಿ ಉಂಟಾದ ಅಭ್ಯಂತರವು	೪೦
೩ ಪ್ರಯೋಗಪೂರ್ವದಲ್ಲಿದ್ದ ಇ ಲಳಿಗೆಯ ತೂಕವು	೮೦೩
೪ ಪ್ರಯೋಗ ಮುಗಿದ ಬಳಿಕ ಇ ಲಳಿಗೆಯ ತೂಕವು	೮೪೮
ಇ ಲಳಿಗೆಯಲ್ಲಿ ನೀರು ಶೇರಿದ್ದರಿಂದ ಅದರ ತೂಕದಲ್ಲಿ ಉಂಟಾದ ಅಭ್ಯಂತರವು	೪೫

ಈ ಮಹತ್ವದ ಪ್ರಯೋಗವನ್ನಂತೂ ನಾವು ಮಾಡಿದೆವಷ್ಟೇ? ಇದರಿಂದ ನಮಗೇನು ತಿಳಿಯಿತು? ೪೦ ಗ್ರೇನು ಆಕ್ಸಿಜನವಿದ್ದರೆ ೪೫ ಗ್ರೇನು ನೀರು ಸಿದ್ಧವಾಗುತ್ತದೆ. ನೀರೊಳಗಂತೂ ಆಕ್ಸಿಜನ್ ಹೈಡ್ರೋಜನ್‌ಗಳ ಹೊರ್ತು ಮತ್ತೊಂದಿಲ್ಲ; ಆದ್ದರಿಂದ ಇ ಲಳಿಗೆಯೊಳಗೆ ೫ ಗ್ರೇನು ಹೈಡ್ರೋಜನ್ ಇತ್ತೆಂತಲೂ ಅದು ಈ ೪೦ ಗ್ರೇನು ಆಕ್ಸಿಜನದಲ್ಲಿ ಬೆರತು ಕೊಂಡದ್ದರಿಂದ ೪೫ ಗ್ರೇನು ನೀರಾಯಿತೆಂತಲೂ ಸ್ಪಷ್ಟವಾಗುತ್ತದೆ. ಇದರಿಂದ ನೀರನ್ನುಂಟು ಮಾಡಲಿಕ್ಕೆ ಈ ಎರಡು ವಾಯುಗಳ ಪ್ರಮಾಣವು ೧೬:೨ ರಂತೆ ಇರಬೇಕೆಂದು ಗಣಿತದಿಂದ ಸಿದ್ಧವಾಯಿತು. ಈ ಪ್ರಮಾಣವನ್ನು ನೀವು ಮರೆಯಬಾರದು.

ಮೇಲಿನ ಪ್ರಯೋಗವನ್ನು ಜಾಗ್ರತೆಯಿಂದ ಮಾಡಿ ನೋಡಿದರೆ ಮೇಲಿನ ಪ್ರಮಾಣವೇ ಸರ್ವತ್ರದಲ್ಲಿ ಕಂಡುಬರುತ್ತದೆ. ರಸಾಯನ ಪ್ರಯೋಗದಲ್ಲಿ ಒಂದು ಕಡೆಯಲ್ಲಿ ಹೊರಟ ಪ್ರಮಾಣವು ಯಾವತ್ತು ಕಡೆಗೂ ಹತ್ತುತ್ತದೆ. ಆದ್ದರಿಂದ ನೀರೊಳಗಿನ ಆಕ್ಸಿಜನ್ನ ಹೈಡ್ರೋಜನ್ನಗಳ ಪ್ರಮಾಣವು ೧೬:೨ ಎಂಬದು ಎಲ್ಲ ಕಡೆಯಲ್ಲಿಯೂ ನಿಜವಾಗಿರುವದು. ಇದರಂತೆ ಈ ಶಾಸ್ತ್ರದಲ್ಲಿ ಶೋಧದಿಂದ ಹೊರಟ ಯಾವ ಪ್ರಮಾಣಗಳಾದರೂ ಎಲ್ಲಿಯೂ ಬದಲಾಗವು.

FIGURES OF SPEECH.

ಅಲಂಕಾರಗಳು.

(೨೦ ನೇ ಪುಟದಿಂದ ಮುಂದೆ ಸಾಗಿದ್ದು.)

ವಿನೋಕ್ತ್ಯಲಂಕಾರ—ಪ್ರಸ್ತುತ ವಸ್ತುವು “ವಿನಾ” ಎಂ

ಬರ್ಥದಿಂದ ಒಡಗೂಡಿ ದುಷ್ಟವೆಂದು ಹೇಳಲ್ಪಡುತ್ತಿದ್ದರೆ, ಈ ಅಲಂಕಾರವಾಗುವದು. ಉ.

ಆರ್ಯಾ—ವಿದ್ಯೆಯು ವಿನಯವಿಹೀನವು ।
ಸ್ಯದ್ಯವದಾದರು ಜಗಕ್ಕೆ **ಬಹುಗರ್ಹ್ಯಂ** ॥

ಇಲ್ಲಿ ವಿದ್ಯೆಯು ಮನೋಹರವಾಗಿದ್ದರೂ ವಿನಯವಿಲ್ಲದಿದ್ದರೆ ಅದು ಜಗಕ್ಕೆ ನಿಂದ್ಯವಾಗುವದು. ಪ್ರಸ್ತುತವು, ವಿದ್ಯೆಯು, ವಿನಯಶೂನ್ಯವಾಯಿತೆಂದು ದೂಷಿಸಲ್ಪಡುತ್ತದೆ. ಇದಕ್ಕೆ ಇನ್ನೊಂದುದಾಹರಣೆ.

ಆರ್ಯಾ—ಯಾವನು ರಾಮನ ನೋಡನು ।
ಯಾವನ ರಾಮಂ ದಿನೊಳು ಕಾಣನೆಲೈ ॥
ಈ ವಸುಧೆಯಲ್ಲಿ ನಿಂದ್ಯನು ।
ಭಾವವು ಗರ್ಹಿಪುದದಾತನಂ ನಿತ್ಯಂ ॥

ಅರ್ಥ—ರಾಮನು ಯಾವನನ್ನು ನೋಡುವದಿಲ್ಲೋ ಅವನೂ ಹಾಗೂ ಯಾವನು ರಾಮನನ್ನು ನೋಡುವದಿಲ್ಲೋ ಅವನು, ಇವರಿಬ್ಬರು ಈ ಭೂಮಿಯಲ್ಲಿ ನಿಂದ್ಯರಾಗುವರು. (ರಾಮಕರ್ಮಕ, ರಾಮಕರ್ತೃಕ ದರ್ಶನವನ್ನು) ಬಿಟ್ಟು ನಿಂದ್ಯನಾಗುವನು. ಅವನ ಮನಸ್ಸಾದರೂ ಹಳಿಯುವದು. ಇಲ್ಲಿ “ವಿನಾ” ಎಂಬ ಶಬ್ದಗ್ರಹಣವಲ್ಲ. ಅರ್ಥಗ್ರಹಣವು ೨ ನೇ ಪ್ರಕಾರದ ವಿನೋಕ್ತಿಯ ಲಕ್ಷಣವು. ಪ್ರಸ್ತುತವು “ವಿನಾ” ಎಂಬ ಅರ್ಥದಿಂದ ಮನೋಹರವೆಂದು ಹೇಳಲ್ಪಡುತ್ತಿದ್ದರೆ ವಿನೋಕ್ತಿಯಾಗುವದು. ಉ.

ಆರ್ಯಾ—ರಾಜನೆ ನಿನ್ನೀಸಭೆಯು ವಿ ।
ರಾಜಿಪುದೀ ದುಷ್ಟರಿಲ್ಲದುನಿತ್ಯಂ ॥

ಅರ್ಥ—ಎಲೈ ಅರಸನೆ, ನಿನ್ನ ಸಭೆಯು ದುಷ್ಟ ಜನರ ಹೊರತಾಗಿ ವಿರಾಜಿಸುವದು. ಇಲ್ಲಿ ಪ್ರಸ್ತುತವು ಸಭೆಯು “ವಿನಾ” ಎಂಬರ್ಥದಿಂದ ಒಡಗೂಡಿ ರಮ್ಯವೆಂದು ಹೇಳಲ್ಪಡುತ್ತದೆ. ಇದರಂತೆ ಎಲ್ಲ ಕಡೆಯಲ್ಲಿ ತಿಳಿಯಬೇಕು.

ನೀರಿರ್ದ ಕಾಸಾರಕರವಿಂದವಿಲ್ಲದೊಡೆ ।
ತಾರಕೆಗಳಿರ್ದ ಗಗನಕೆ ಚಂದ್ರನಿಲ್ಲದೊಡೆ ।
ಚಾರುಯೌವನಕೊಪ್ಪವಾ ವಿದ್ಯೆಯಿಲ್ಲದೊಡೆ ಸನ್ನುತ
ಪ್ರಜೆಗಳರ್ದಾ ॥

ಈ ಪದ್ಯವಾದರೂ ವಿನೋಕ್ತಿಯೇ ಆಗುವದು.

THE PHILOSOPHY OF EDUCATION.

ಶಿಕ್ಷಣಶಾಸ್ತ್ರ.

ಉಪೋದ್ಘಾತ—ಜೀವಸೃಷ್ಟಿಯಲ್ಲಿ ಮನುಷ್ಯನ ಹೊರ್ತು ಉಳಿದ ಪ್ರಾಣಿಗಳು ತಮ್ಮ ಜೀವನಕ್ರಮವನ್ನು ಮುಖ್ಯವಾಗಿ ತಮ್ಮ ಶರೀರ ಬಲದಿಂದ ಸಾಗಿಸುತ್ತವೆ. ಅವಕ್ಕೆ ಬುದ್ಧಿ, ನೀತಿ, ಸಾಮರ್ಥ್ಯಗಳು ವಿಶೇಷವಾಗಿ ಇಲ್ಲದ್ದರಿಂದ ಮನುಷ್ಯನಿಗಿರುವ ಹೆಚ್ಚಿನ ಸೌಖ್ಯವು ಅವುಗಳಿಗಿಲ್ಲ. ಆದರೆ ಮನುಷ್ಯನ ಸ್ಥಿತಿಯು ತೀರ ಭಿನ್ನವಾಗಿರುತ್ತದೆ. ಮನುಷ್ಯನು ಕೇವಲ ದೇಹಧಾರಿಯಲ್ಲ, ಶರೀರಬಲದಿಂದಲೇ ತನ್ನ ಕರ್ತವ್ಯಗಳನ್ನು ಜರಗಿಸುವವನಲ್ಲ. ಅವನಿಗೆ ವಿಚಾರಶಕ್ತಿ ಎಂಬ ಬಹು ಬೆಲೆಯುಳ್ಳ ಸಾಮರ್ಥ್ಯವನ್ನು ದೇವರು ದಯಪಾಲಿಸಿದ್ದರಿಂದ ತನ್ನ ಕರ್ತವ್ಯಗಳನ್ನೆಲ್ಲ ತಿಳಿದು, ತನ್ನ ವ್ಯವಹಾರವನ್ನು ಸರಿಯಾಗಿ ಸಾಗಿಸಿ ಸ್ವಾರ್ಥವನ್ನೂ ಪರಾರ್ಥವನ್ನೂ ಸಾಧಿಸುವನು. ಈ ಸ್ವಾರ್ಥ ಪರಾರ್ಥ ಸಾಧನಕ್ಕೆ ಶಾರೀರಶಿಕ್ಷಣ, ನೀತಿಶಿಕ್ಷಣ, ಬುದ್ಧಿಶಿಕ್ಷಣಗಳು ಬೇಕು ಅವುಗಳಲ್ಲಿ ಕಡೆಯ ಎರಡು ಶಿಕ್ಷಣಗಳನ್ನೂ ಅವುಗಳ ದ್ವಾರದಿಂದ ಸೌಖ್ಯಾಭಿವೃದ್ಧಿಯನ್ನು ದೊರಕಿಸುವ ತಕ್ಕ ಮಾರ್ಗಗಳನ್ನೂ ವಿಚಾರಿಸುವದು ನಮ್ಮ ಪ್ರಸ್ತುತ ಉದ್ದೇಶವು.

ಶಾಲಾಶಿಕ್ಷಣವು:—ಪುಸ್ತಕಗಳೂ ಸಭೆಗಳಲ್ಲಿ ನಡೆಯುವ ವಿಷಯೋಪನ್ಯಾಸಗಳೂ, ವಾದವಿವಾದಗಳೂ, ಶಾಸ್ತ್ರೀಯ ಪ್ರಯೋಗಗಳ ಕೈಗಾರಿಕೆಯ ಬಿಡಿವೆಗಳ ಪ್ರದರ್ಶನಗಳೂ ಇವೇ ಶಿಕ್ಷಣದ ಮೂಲ ಸಾಧನಗಳಾಗಿವೆ ಆದರೆ ಇವೆಲ್ಲ ಪ್ರಾಥಮಿಕ ಶಿಕ್ಷಣವನ್ನು ಪೂರ್ಣವಾಗಿ ಅವಲಂಬಿಸಿರುತ್ತವೆ. ಸಾಲೆಯ ಮೋರೆಯನ್ನು ಸಹ ಕಾಣದವನಿಗೆ ವಾಙ್ಮಯದ ಹಾಗೂ ಶಾಸ್ತ್ರೀಯ ಶೋಧದ ಮೇಲಾದ ಭಾಂಡಾರಗಳಿಂದ ಯಾವ ತರದ ಆನಂದವು ಲೇಶಮಾತ್ರವೂ ಆಗಲಾರದೆಂಬುದಕ್ಕೆ ಸಂದೇಹವಿಲ್ಲ. ಆದಕಾರಣ ಪ್ರಾಥಮಿಕ ಶಿಕ್ಷಣವನ್ನು ಕುರಿತು ವಿಚಾರ ಮಾಡುವದೇ ಪ್ರಥಮ ಕಾರ್ಯವು.

ಪ್ರಾಥಮಿಕ ಶಿಕ್ಷಣವು ಇಷ್ಟು ದಿವಸ ಬಹುಶಃ ಅಧಮ ಜನರ ಕೈಸೇರಿತ್ತು. ಆ ಜನರು ಶಿಕ್ಷಣದ ಶಾಸ್ತ್ರೀಯ ವಿಚಾರವನ್ನು ಬದಿಗೊತ್ತಿ ತಮ್ಮ ಮನಬಂದಂತೆ ಕೆಲವು ನಿಯಮ

ಗಳನ್ನು ಕಲ್ಪಿಸಿ ಹುಡುಗರ ತಾಯಿತಂದೆಗಳು ಸಮಾಧಾನಗೊಳ್ಳುವಂತೆ ವಿದ್ಯಾರ್ಥಿಗಳಿಗೆ ಏನಾದರೂ ಹ್ಯಾಗಾದರೂ ಕಲಿಸುತ್ತಿದ್ದರು. ಧೂರ್ತತನವಿಲ್ಲದ ವರ್ತಕನು ಕೈಯೊಳಗಿನ ಹಣ ಕಳಕೊಂಡು ಉಪಾಯಗಾಣದೆ ಸುಮ್ಮನೆ ಕೂಡುವ ಪ್ರಸಂಗದಲ್ಲಿ ಶಾಲೆಯನ್ನು ಹಾಕುವನು. ಅಶಕ್ತನೂ ದುರ್ಬಲನೂ ಆದ ಬ್ರಾಹ್ಮಣನಾಗಲಿ, ಕೈಸಾಗದ ಅಯ್ಯನಾಗಲಿ ನಾಲ್ಕು ಹುಡುಗರನ್ನು ಕೂಡಿಸಿಕೊಂಡು ಪಾಠ ಹೇಳತೊಡಗುವನು. ಎಷ್ಟೋ ಮೋಟರೂ ಕುಂಟರೂ ಕುರುಡರೂ ಜೀವನಕ್ಕೆ ಉಪಾಯಾಂತರವನ್ನು ಕಾಣದೆ ಊರೊಳಗಿನ ನಾಲ್ಕು ಗೃಹಸ್ಥರನ್ನು ಮೊರೆ ಹೊಕ್ಕು ಅವರ ಮಕ್ಕಳನ್ನು ತಮ್ಮ ಪಟ್ಟಿಯಲ್ಲಿ ಸೇರಿಸಿಕೊಂಡು ಕಾಯಿಪತ್ತಿ ಪಂತರಿನಿಸುವರು. ಈ ಮಾದರಿಯ ಶಿಕ್ಷಕರ ಕೈಯಲ್ಲಿ ಶಾಲೆಗಳು ಸೇರಿದ್ದರಿಂದ ಶಿಕ್ಷಣಕ್ಕೆ ನೀಚಸ್ಥಿತಿಯು ಬರುವದು ಆಶ್ಚರ್ಯವೇ? ಈ ಮೇರೆಗೆ ಶಿಕ್ಷಣದ ಕೆಲಸಕ್ಕೆ ತಟ್ಟಿದ ಹೀನ ಸ್ಥಿತಿಯು ಕಾರಣದಿಂದಲೂ ಶಿಕ್ಷಕರ ವೇತನದ ಅಲ್ಪತ್ವದ ದೆಸೆಯಿಂದಲೂ ಬುದ್ಧಿವಂತರು ಈ ಕೆಲಸಕ್ಕೆ ಒಪ್ಪುತ್ತಿದ್ದಿಲ್ಲ. ಆದರೆ ಇತ್ತಲಾಗಿ ಈ ಸ್ಥಿತಿಯು ಬದಲಿಸುತ್ತ ನಡೆದದೆ. ಸಾಮಾನ್ಯ ಜನರಿಗೆ ಪಾಯೋಪಬದ್ಧವಾದ ಶಿಕ್ಷಣದ ಬೆಲೆಯು ಗೋಚರವಾಗಹತ್ತಿದೆ. ಶಿಕ್ಷಕರ ಕೆಲಸದ ಗೌರವವೂ ಅವರಿಗೆ ಒದಗುವ ನಾನಾತರದ ತೊಂದರೆಗಳೂ ನಿದರ್ಶನಕ್ಕೆ ಬಂದಿರುತ್ತವೆ. ಈ ಸ್ಥಿತ್ಯಂತರಕ್ಕೆ ಸರಕಾರದವರು ಕಾಲಕಾಲಕ್ಕೆ ಮಾಡುತ್ತಿರುವ ನಿರ್ಬಂಧಗಳೇ ಕಾರಣವಾಗಿರುತ್ತವೆಂದು ಖಂಡಿತವಾಗಿ ಹೇಳಬಹುದು. ಈ ಸರಕಾರದ ಉದ್ಯೋಗದಿಂದಲೂ ಜನರ ಭ್ರಮನಿರಾಸದಿಂದಲೂ ಶಿಕ್ಷಣದ ಕೆಲಸಕ್ಕೆ ಸರಿಯಾದ ಮರ್ಯಾದೆಯೂ ಬಹುಮಾನವೂ ಶೀಘ್ರವಾಗಿ ಸಿಗುವವೆಂದು ಊಹಿಸಬಹುದು.

ಪ್ರಾಥಮಿಕ ಶಿಕ್ಷಣದ ಉದ್ದೇಶಗಳು ಎರಡು. ಬುದ್ಧಿಸಾಮರ್ಥ್ಯಗಳನ್ನೂ ನೀತಿಸಾಮರ್ಥ್ಯಗಳನ್ನೂ ಬೆಳಿಸುವದು ಒಂದು. ಆಯಾ ವಿದ್ಯಾರ್ಥಿಗೆ ಅವಶ್ಯವಾದ ಜೀವನೋಪಾಯದ ಆಯಾ ಮೇರೆಯಲ್ಲಿ ಅನುಕೂಲಿಸುವಂಥ ಜ್ಞಾನವನ್ನು ಮಾಡಿಕೊಡುವದು ಮತ್ತೊಂದು. ಈ ಉದ್ದೇಶಗಳಿಗೆ ಸರಿ

ರವಾಗಿ ಶಿಕ್ಷಣಗಳನ್ನು ಸಾಗಿಸುವದು ಅವಶ್ಯವಿದೆ. ಆದ್ದರಿಂದ ಶಿಕ್ಷಿತರ ಗುಣ-ಧರ್ಮಪ್ರಕೃತಿಗಳಿಗನುಗುಣವಾಗಿ ಶಿಕ್ಷಣವನ್ನು ಸಾಗಿಸುವದು ಶಾಸ್ತ್ರಸಿದ್ಧವಾದದ್ದು. ಶಿಕ್ಷಕರು ಅವಲೋಕನದಿಂದಲೂ, ಮಾನಸ ಶಾಸ್ತ್ರವಿಚಾರದಿಂದಲೂ, ನೀತಿ ಬುದ್ಧಿಸಾಮರ್ಥ್ಯಗಳ ಬೆಳವಣಿಗೆಯನ್ನು ಗೊತ್ತುಹಚ್ಚಿ ಅದಕ್ಕೆ ಅನುಗುಣವಾಗಿ ತಮ್ಮ ಶಿಕ್ಷಣವನ್ನು ಸಾಗಿಸುವದು ಶಾಸ್ತ್ರಸಮ್ಮತವಾದ ಸಂಗತಿಯು. ಇದಕ್ಕೆ ವಿಪರೀತವಾದ ಕ್ರಮದಿಂದ ನಡೆಯುವದು ಶಾಸ್ತ್ರಬಾಹ್ಯವಾದದ್ದೂ ನಿಷ್ಪ್ರಯೋಜನವಾದದ್ದೂ ಎಂಬದಕ್ಕೆ ಸಂಶಯವಿಲ್ಲ.

ಶಿಕ್ಷಣಶಾಸ್ತ್ರವನ್ನು ಅರಿತ ಶಿಕ್ಷಕನು ವಿದ್ಯಾರ್ಥಿಗಳ ಬುದ್ಧಿ ನೈತಿಕ ಸಾಮರ್ಥ್ಯಗಳನ್ನೂ ಆಯಾ ಸಾಮರ್ಥ್ಯಗಳ ಸ್ಥಿತಿಯನ್ನೂ ಕಂಡು ಹಿಡಿದು ಅವು ಬಲ ಹೊಂದುವಂತೆ ಬೆಳೆಸುವನೇ ಹೊರತು ತಾನು ನಿಷ್ಪ್ರಯೋಜನವಾಗಿ ದುಡಿದು ಆ ಸಾಮರ್ಥ್ಯಗಳನ್ನು ಹಾಳು ಮಾಡನು. ಅವನು ಶಿಕ್ಷಣದ ಕೆಲಸವನ್ನು ಕೈಕೊಂಡ ಕೂಡಲೆ ತನ್ನ ವಿದ್ಯಾರ್ಥಿಗಳ ಸ್ವಭಾವಗಳನ್ನೂ ನಡತೆಗಳನ್ನೂ ಅವರ ಬುದ್ಧಿ ನೈತಿಕ ಸಾಮರ್ಥ್ಯಗಳ ಸ್ಥಿತಿಯನ್ನೂ ಬೆಳವಣಿಗೆಯನ್ನೂ ತೀವ್ರತ್ವವನ್ನೂ ತಿಳಕೊಂಡು, ಮುಖ್ಯವಾಗಿ ತಾನು ಅವರಿಗೆ ಕಲಿಸತಕ್ಕಂಥ ವಿಷಯವನ್ನೂ ಅದನ್ನು ಕಲಿಸುವ ಮಾರ್ಗವನ್ನೂ ಕುರಿತು ವಿಚಾರಿಸುವನು. ಈ ವಿಚಾರದಲ್ಲಿ ವಿದ್ಯಾರ್ಥಿಗಳ ಸಂಬಂಧದಿಂದ ಅವನಿಗಿರುವ ಜ್ಞಾನವೂ ಜ್ಞಾನಸಂಕ್ರಮಣದ ಬೇರೆ ಬೇರೆ ಪದ್ಧತಿಗಳ ಅಭಿಜ್ಞತೆಯೂ ಅವನಿಗೆ ಕೆಲಸಕ್ಕೆ ಬರುವವು.

ಶಾಸ್ತ್ರಕ್ಕೆ ಅಸಮ್ಮತವಾದಂಥ ಕೃತ್ರಿಮವಾದಂಥ ಜ್ಞಾನಸಂಕ್ರಮಣದ ಉಪಾಯಗಳು ಬುದ್ಧಿನೈತಿಕ ಸಾಮರ್ಥ್ಯಗಳನ್ನು ಹಾಳು ಮಾಡುತ್ತವೆ. ವಿದ್ಯಾರ್ಥಿಗಳ ನೈಸರ್ಗಿಕ ಸ್ಥಿತಿಯನ್ನೂ ಮನಸ್ಸಿನ ನಿಯಮಗಳನ್ನೂ ಬದಿಗೊತ್ತಿ ಮನಃಕಲ್ಪಿತ ನಿಯಮಗಳಿಂದ ಸಾಗಿಸಲ್ಪಟ್ಟ ಶಾಲೆಯಲ್ಲಿ ಸುವ್ಯವಸ್ಥೆಯನ್ನು ಕಾಣುವದು ಅಪರೂಪ. ಇಂಥ ಶಾಲೆಗಳಲ್ಲಿ ಶಿಕ್ಷಕರು ತಮ್ಮ ತಪ್ಪಿಗಾಗಿ ವಿದ್ಯಾರ್ಥಿಗಳನ್ನು ಹಳಿಯುವ ಪ್ರಸಂಗವು ಆಗಾಗ್ಗೆ ಬರುವದು. ಕಟ್ಟಿಗೆ ಕಬ್ಬಿಣಗಳ ಗುಣಧರ್ಮಾದಿ

ಗಳನ್ನು ಅರಿಯದ ಎಂಜಿನಿಯರನು ಸೇತುವೆಯನ್ನು ಕಟ್ಟುವ ಹವ್ಯಾಸಕ್ಕೆ ಬಿದ್ದು ಆ ಸೇತುವೆಯನ್ನು ಕಟ್ಟಿ ಮುಗಿಸಿದಾಗಲೇ ಭಾರದಿಂದ ಸಿಡಿದ ತೊಲೆಗಳನ್ನೂ ಉಷ್ಣತೆಯಿಂದ ಹಿಗ್ಗಿ ಪ್ರಸರಣಕ್ಕೆ ಅವಕಾಶ ಸಿಗದೆ, ಅಡ್ಡತಿಡ್ಡಾದ ಕಬ್ಬಿಣದ ಸಲಾಕಿಗಳನ್ನೂ ಕಾಣುವದು ಅಪರೂಪವೇ? ಆದರೆ ಜಾಣನಾದ ಎಂಜಿನಿಯರನು ಯಾವದೊಂದು ಕೆಲಸವನ್ನು ಕೈಕೊಳ್ಳುವ ಪೂರ್ವದಲ್ಲಿ ತಾನು ಉಪಯೋಗಿಸುವ ಪದಾರ್ಥಗಳ ಗುಣಧರ್ಮಾದಿಗಳನ್ನರಿತು, ಅವುಗಳನ್ನು ಸರಿಯಾಗಿ ಉಪಯೋಗಿಸಿ ತನ್ನ ಕೆಲಸವನ್ನು ಕೌಶಲ್ಯದಿಂದಲೂ ಚಾತುರ್ಯದಿಂದಲೂ ಮುಗಿಸಿ ಶ್ರೇಯಸ್ಸು ಪಡೆಯುವಂತೆ ಮೇಲಾದ ಶಿಕ್ಷಕನು ತನ್ನ ವಿದ್ಯಾರ್ಥಿಗಳ ಪ್ರಕೃತಿ ಸ್ವಭಾವಗಳನ್ನರಿತು ಆಯಾ ವಿದ್ಯಾರ್ಥಿಗಳ ಸಾಮರ್ಥ್ಯಗಳು ಬಲಪಡುವಂತೆಯೂ ವಿದ್ಯಾರ್ಥಿಗಳಿಗೆ ತಟ್ಟುವ ತೊಂದರೆಗಳನ್ನು ಮುಂಗಂಡವನಾಗಿ ಅವುಗಳನ್ನು ವಿದ್ಯಾರ್ಥಿಗಳು ತಾವೇ ದೂರ ಮಾಡುವಂತೆ ತನ್ನ ಶಿಕ್ಷಣಕ್ರಮವನ್ನು ಹೊಂದಿಸಿ, ಸ್ವೇಚ್ಛಾಚಾರ ಹುಡುಗಾಟಿಕೆ, ಖಂಡಿತನ ಮುಂತಾದ ವಿಕಾರಗಳು ಅಂಕುರಿಸದಂತೆ ಮಾಡಿ ತನ್ನ ಶಿಕ್ಷಣದ ಕೆಲಸವನ್ನು ಸಾಗಿಸುವನು

ಶಾಬ್ದಿಕ ಸ್ಮರಣಶಕ್ತಿಯನ್ನು ಬೆಳೆಸಲಿಕ್ಕೆ ಶಿಕ್ಷಕರು ಶ್ರಮಪಡಬೇಕಾಗುವದಿಲ್ಲ. ಆದರೆ ಶಿಕ್ಷಣಶಾಸ್ತ್ರದ ಅರಿವು ಇಲ್ಲದ ಶಿಕ್ಷಕರು ಚಿಕ್ಕಂದಿನಲ್ಲಿ ಶಾಬ್ದಿಕ ಸ್ಮರಣಶಕ್ತಿಯನ್ನು ಬೆಳೆಸುವದೇ ತಮ್ಮ ಕರ್ತವ್ಯವೆಂದು ತಿಳಿಯುವರು. ಈ ಭ್ರಾಂತಿಗೆ ಒಳಗಾದವರು, ವಿದ್ಯಾರ್ಥಿಗಳಿಗೆ ಉದ್ದುದ್ದ ಕೋಷ್ಟಕಗಳನ್ನೂ ಭೂಗೋಲವನ್ನೂ ವ್ಯಾಕರಣವನ್ನೂ ಪಾಠ ಮಾಡಲಿಕ್ಕೆ ಹಚ್ಚುವರು. ಮತ್ತು ಈ ರೀತಿ ಪಾಠ ಮಾಡದವರಿಗೆ ದಂಡಿಸಿ ನೀಗದ ಕೆಲಸವನ್ನು ಮಾಡಿಸುವ ಹವ್ಯಾಸಕ್ಕೆ ಬಿದ್ದು ತಾವೂ ವಿದ್ಯಾರ್ಥಿಗಳೂ ಕೂಡೇ ಗೋಳಾಡುವರು. ಈ ಪದ್ಧತಿಯಿಂದ ನಡೆಸಿದ ಕಾರ್ಯಗಳಲ್ಲಿ ವಿಚಾರಶಕ್ತಿಗೆ ಚಾಲನೆ ಎಷ್ಟು ಮಾತ್ರವೂ ಸಿಗಲಾರದು. ಈ ಪದ್ಧತಿಗೊಳಪಟ್ಟ ಶಾಲೆಗಳಲ್ಲಿ ಪ್ರತ್ಯಕ್ಷ ವಿಚಾರಶಾಸ್ತ್ರವನ್ನು ಅವಲಂಬಿಸಿದಂಥ ಗಣಿತ ಪ್ರಶ್ನಗಳು ಸ್ಮರಣದಲ್ಲಿಟ್ಟ ನಿಯಮಗಳಿಂದ

ಬಿಡಿಸಲ್ಪಡುವವೇ ಹೊರ್ತು ಯುಕ್ತಿ ಚಾತುರ್ಯಗಳು ಎಷ್ಟುಮಾತ್ರವೂ ಬೆಳೆಸಲ್ಪಡಲಾರವು. ಈ ಶಾಲೆಗಳಲ್ಲಿ ತಿದ್ದುವಿಕೆಯನ್ನು ಕಾಯ್ದುಕೊಳ್ಳುವಂಥ ಸುಲಭಸಾಧ್ಯವಾದ ಕೆಲಸವು ಬಹಳ ಬಿಗಿಯಾಗುವದು ಅರಿದಲ್ಲ. ಜ್ಞಾನಸಂಪಾದನದ ಆತುರವೇ ಲಕ್ಷದ ಮೂಲಾಧಾರವು. ಅದನ್ನೇ ಕಡಿದು, ಆನಂದವನ್ನು ನಿರ್ಮೂಲ ಮಾಡಿ, ಲಕ್ಷವನ್ನು ಎಳಕೊಳ್ಳುವ ಯತ್ನಕ್ಕೆ ಹುಡುಗರನ್ನು ಅಂಜಿಸುವದಕ್ಕೆ ಬದಲಾಗಿ ಎರಡನೇ ಉಪಾಯವೇನು? ಹುಡುಗರ ಅಂಜಿಕೆ ಇಲ್ಲವೆ ವೃಥಾಭಿಮಾನ ಇವುಗಳನ್ನೇ ಅವಲಂಬಿಸಿದ ಶಾಲಾವ್ಯವಸ್ಥೆಯು ಗೌರವವೇನು? ಸಾರಾಂಶ, ಶಿಕ್ಷಕನಿಗೆ ಪ್ರಾಥಮಿಕ ಶಿಕ್ಷಣದ ಬೇರೆ ಬೇರೆ ಅಂಗಗಳೂ ಶಿಕ್ಷಣದ ಮುಖ್ಯದ ತತ್ವಗಳೂ ಗೊತ್ತಿರಬೇಕಲ್ಲದೆ, ವಿದ್ಯಾರ್ಥಿಗಳನ್ನು ಕ್ರಮಗೊಳಿಸಿ ಕೈಕೆಳಗೆ ನಡಿಸಿಕೊಳ್ಳುವ ಜಾಣತನವೂ ಚಾತುರ್ಯವೂ ತಕ್ಕ ದೃಷ್ಟಾಂತಗಳನ್ನು ಕೊಡುವ ಕೌಶಲ್ಯವೂ ವಾಕ್ಚಾಪಲ್ಯವೂ ವಾಕ್ಪಟುತ್ವವೂ ಕೈಗೆ ಬಂದ ಆಗಂತುಕ ಸಂಗತಿಗಳನ್ನು ಕೈಕೊಂಡು ವಿಷಯ ವಿವರಿಸುವ ಸಾಮರ್ಥ್ಯವೂ ಬೇಕು. ಇಷ್ಟು ಗುಣಗಳುಳ್ಳವನಾದ ಶಿಕ್ಷಕನು ತನ್ನ ವಿದ್ಯಾರ್ಥಿಗಳನ್ನೆಲ್ಲ ವ್ಯವಹಾರಕ್ಕೆ ತಕ್ಕವರನ್ನಾಗಿ ಮಾಡುವದಲ್ಲದೆ ಚಿರವಾದ ಕೀರ್ತಿಯನ್ನು ಪಡೆಯುವನು.

ಸೂಕ್ಷ್ಮರೀತಿಯಿಂದ ವಿಚಾರಿಸಲು ಶಿಕ್ಷಣದ ಎರಡು ಸ್ವರೂಪಗಳು ತಲೆದೋರುತ್ತವೆ. ಅವು ಯಾವವೆಂದರೆ:— ೧ ಕಲಾಸ್ವರೂಪ. ೨ ಶಾಸ್ತ್ರಸ್ವರೂಪ. ಶಾಸ್ತ್ರಸ್ವರೂಪದಿಂದ ಹೊರ್ತಾದ ಶಿಕ್ಷಣವು ಚೈತನ್ಯವಿಲ್ಲದ ಮನುಷ್ಯ ಶರೀರಕ್ಕೆ ಹೋಲುತ್ತದೆ. ಆದ್ದರಿಂದ ಸತ್‌ಶಿಕ್ಷಕರು ಇವೆರಡುಗಳನ್ನು ಒಟ್ಟುಗೂಡಿಸಿ ತಮ್ಮ ಕೆಲಸವನ್ನು ಸಾಗಿಸುವದು ವಿಹಿತವು.

ಶಿಕ್ಷಣದ ಮರ್ಮದ ಮಾತುಗಳ ಜ್ಞಾನವೇ ಶಾಸ್ತ್ರಸ್ವರೂಪಜ್ಞಾನವೆನಿಸುವದು ಆ ಮರ್ಮಗಳಿಂದ ಹೊರಟಂಥ ನಿಯಮಗಳ ಅಭ್ಯಾಸವೇ ಕಲಾಸ್ವರೂಪಜ್ಞಾನವೆನಿಸುವದು. ಬರೇ ನಿಯಮಗಳ ರೂಢಿಯಿಂದ ನಿಯಮಗಳು ದೃಢವಾಗಿ ಕೈಕೂಡುವದಷ್ಟೇ; ಆದರೆ ಮರ್ಮಜ್ಞಾನದ ಹೊರ್ತು ಅದು ಪ್ರಸಂಗದಲ್ಲಿ ಕೆಲಸಕ್ಕೆ ಬರಲಾರದು, “ಕಲಿಸಿದ ಮಾತು

ಕಟ್ಟಿದ ಬುತ್ತಿ" ಎಂಬ ಗಾದೆಯು ಇದೇ ಅರ್ಥವನ್ನು ಸೂಚಿಸುತ್ತದೆ. ಅದೇಮೇರೆಗೆ ನಿಯಮಗಳಿಂದಲೂ ರೂಢಿಯಿಂದಲೂ ವ್ಯತಿರಿಕ್ತವಾದಂಥ ಮರ್ಮಜ್ಞಾನವು ಡಬ್ಬುಗೊಡದ ಮೇಲೆ ಎರಚಿದ ನೀರಿನಂತೆ ನಿಷ್ಪ್ರಯೋಜನವಾಗುವದು. ಆದ್ದರಿಂದ ಶಿಕ್ಷಕರು ಶಿಕ್ಷಣದ ಮರ್ಮಗಳನ್ನು ತಿಳಕೊಳ್ಳುತ್ತ ಆ ಮರ್ಮಗಳಿಂದ ಗೊತ್ತಾದ ನಿಯಮಗಳನ್ನು ಮೇಲಿಂದ ಮೇಲೆ ಪ್ರತ್ಯಕ್ಷವಾಗಿ ಉಪಯೋಗಿಸುತ್ತ ಗ್ರಾಹ್ಯಾಂಶವನ್ನು ಸ್ಥಿರಗೊಳಿಸುತ್ತ ಅಂದರೆ ಒಟ್ಟಿನಲ್ಲಿ ಶಾಸ್ತ್ರಕಲಾ ಸ್ವರೂಪಗಳನ್ನು ಬೆರಸಿ, ಕೆಲಸವನ್ನು ಸಾಗಿಸುತ್ತ ಹೋದರೆ ಶಿಕ್ಷಕ ಶಿಕ್ಷಿತರ ಕಲ್ಯಾಣವಾಗುವದು.

ಶಾಸ್ತ್ರಸ್ವರೂಪದ ಅಂಗಗಳು ೫ ಇರುತ್ತವೆ. ಯಾವವೆಂದರೆ:—

(೧) ಪದ್ಧತಿ. (೨) ಬುದ್ಧಿಸಾಮರ್ಥ್ಯಗಳ ಹಾಗೂ ನೈತಿಕ ಪ್ರವೃತ್ತಿಗಳ ಬೆಳವಣಿಗೆ. (೩) ಬೇರೆ ಬೇರೆ ಪದ್ಧತಿಗಳ ತಾರತಮ್ಯಜ್ಞಾನ. (೪) ಪ್ರಾಥಮಿಕ ಶಿಕ್ಷಣದ ಬೇರೆ ಬೇರೆ ಅಂಗಗಳಲ್ಲಿ ಬೇರೆ ಬೇರೆ ಪದ್ಧತಿಗಳಿಂದ ಆಗುವ ಪ್ರಯೋಜನಗಳ ತಾರತಮ್ಯ. (೫) ಶಾಲಾವ್ಯವಸ್ಥೆ ಮತ್ತು ತಿದ್ದುವಿಕೆ,

(ಸಶೇಷ)

DEPARTMENTAL NOTICE.

ನೋಟೀಸು.

ಈ ನೋಟೀಸಿನಿಂದ ತಿಳಿಯಪಡಿಸುವದೇನಂದರೆ:— ಇಷ್ಟು ದಿವಸಗಳ ವರೆಗೆ ಮುಲ್ಕೀ ಪರೀಕ್ಷೆಯಲ್ಲಿ ಇತಿಹಾಸ ಭೂಗೋಲಗಳೊಳಗ ಪ್ರತ್ಯೇಕವಾಗಿ **೧/೪** ಗುಣಗಳೂ ಒಟ್ಟಿನಲ್ಲಿ ೧/೩ ಗುಣಗಳೂ ಬಿದ್ದರೆ ಪರೀಕ್ಷೆ ಪಾಸಾಗುತ್ತಿತ್ತು. ಆದರೆ ಇನ್ನುಮುಂದೆ ಈ ವಿಷಯಗಳಲ್ಲಿ ಪ್ರತ್ಯೇಕವಾಗಿ ೧/೩ ಗುಣಗಳು ಬೀಳಲಿಕ್ಕೇಬೇಕೆಂದು ಗೊತ್ತಾಗಿದೆ. ಈ ಮೇರೆಗೆ ಗುಣಗಳನ್ನು ಪಡೆದ ಹೊರತು ಮುಲ್ಕೀ ಪರೀಕ್ಷೆಯ ಸರ್ಟಿಫಿಕೀಟ ಸಿಗಲಾರದು.

ಧಾರವಾಡ
ತಾ॥ ೧೩-೧-೧೯೦೦.

B R. Sahasrabudhe,
ಎ. ಇನಸ್ಪೆಕ್ಟರ ದಕ್ಷಿಣಭಾಗ.

CORRESPONDENCE.

ಪತ್ರವ್ಯವಹಾರ.

ಮಹಾರಾಜಶ್ರೀ ಯಾಪಿರಾಜಿತರಾದ ಘನವನ್ನು ಹೊಂದಿದ ಕನ್ನಡ ಶಾಲಾಪತ್ರಕದ ಎಡಿಟರವರ ಸನ್ನಿಧಾನಕ್ಕೆ—

ಮಹಾಸ್ವಾಮಿ,— ಈ ನವಂಬರ ೨೪ನೇ ತಾರೀಖು ಶುಕ್ರವಾರ ಪ್ರಾತಃಕಾಲದಲ್ಲಿ ದೊಡ್ಡಬಳ್ಳಾಪುರದ ಟವನಿನಲ್ಲಿರುವ ಎಲ್ಲಾ ಸ್ಕೂಲುಗಳ ವಿದ್ಯಾರ್ಥಿಗಳಿಗೂ ಬಹುಮಾನ ಕೊಡಲು ಹಳೇ ಕಚೇರಿ ಕಟ್ಟಡದಲ್ಲಿ ಅಲಂಕರಿಸಲ್ಪಟ್ಟಿದ್ದ ಪಾರಿತೋಷಕ ಸಭೆಯಲ್ಲಿ ಘನವನ್ನು ಹೊಂದಿದ ಪೂರ್ವ ಸರ್ಕನಲ್ ಕೌನ್ಸಿಲರವರಾದ ಮಹಾರಾಜಶ್ರೀ ವಿ. ಪಿ. ಮಾಧವರಾಯ್ ಸಿ. ಆಯ್. ಇ. ಯವರು ಅಗ್ರಾಸನವನ್ನು ಅಲಂಕರಿಸಿದರು.

ಬೆಂಗಳೂರು ಡಿ. ಡೆ ಕಮಿಶನರ್ ಮಹಾರಾಜಶ್ರೀ ಕೆ. ಪಿ. ಪುಟ್ಟಣ್ಣಶೆಟ್ಟರವರೂ, ಡೆ. ಇನ್ಸ್ಪೆಕ್ಟರ ಮಹಾರಾಜಶ್ರೀ ಬಿ. ವೆಂಕಟಪತಿ ಅಯ್ಯಂಗಾರ್ರವರೂ, ಪೋಲೀಸ ಸುಪ್ರಿಂಟೆಂಡೆಂಟ ಮಹಾರಾಜಶ್ರೀ ಎಲ್. ಕೃಷ್ಣರಾಯರವರೂ, ಡಿಸ್ಟ್ರಿಕ್ಟ ಪ್ಲೇಗ ಆಫೀಸರ್ ಮಿಸ್ಟರ್ ಬೌರಿಂಗ್ ಸಾಹೇಬರವರೂ, ಅಮಲ್ದಾರರು ಮಹಾರಾಜಶ್ರೀ ಎನ್. ಗೋಪಾಲಯ್ಯಂಗಾರ್ರವರೂ, ಮ್ಯುನಿಸಿಪಲ್ ಮೆಂಬರುಗಳೂ, ಪ್ರಮುಖರಾದ ದೊಡ್ಡ ಮನುಷ್ಯರೂ ದಯಮಾಡಿಸಿದ್ದರು.

ಡೆ. ಇನಸ್ಪೆಕ್ಟರ ಮಹಾರಾಜಶ್ರೀ ಬಿ. ವೆಂಕಟಪತಿ ಅಯ್ಯಂಗಾರ್ರವರು ಮೊದಲೇ ಏರ್ಪಾಡು ಮಾಡಿ ಅಪ್ಪಣೆ ಕೊಡಿಸಿದ್ದ ಪ್ರೋಗ್ರಾಂ ಮೇರಿಗೆ,

ಗಾ॥ ಗೆರ್ಲಸ್ಕೂಲಿನ ಬಾಲಿಯರು ಶಾರದಾಸ್ತುತಿಯನ್ನೂ ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆಯನ್ನೂ ಮಾಡಿದರು.

ಗಾ॥ ಆ. ವ್ಹ. ಸ್ಕೂಲ ಹೆಡ್ ಮಾಸ್ತರ ಡಿ. ಕೊಂಗಾಡಿಯಪ್ಪನವರು ದೊಡ್ಡಬಳ್ಳಾಪುರದ ಟೌನಿನಲ್ಲಿರುವ ಆ. ವ್ಹ. ಸ್ಕೂಲ, ಹಿಂದುಸ್ತಾನಿ ಸ್ಕೂಲ, ಮಾದಿಗರ ಹೊಲೆಯರ ಸ್ಕೂಲುಗಳು ನೈಟಸ್ಕೂಲ, ಕನ್ನಡ ಗೆರ್ಲಸ್ಕೂಲ, ಹಿಂದು

ಸ್ತಾನಿ ಗರ್ಲ್‌ಸ್ಕೂಲುಗಳ ಬಾಬತು ಸನ್ ೧೮೯೮—೯೯ ಸಾಲಿನ ರಿಪೋರ್ಟನ್ನು ಓದಿದರು.

ರಿಪೋರ್ಟಿನ ಸಾರಾಂಶವು.

“ ಈ ಪಟ್ಟಣದಲ್ಲಿ ಇರುವ ಶಾಲೆಗಳೂ ವಿದ್ಯಾರ್ಥಿಗಳೂ ಕೆಳಗೆ ವಿವರಿಸಿದಂತೆ.

ನಂಬರು.	ಸಾಲೆಗಳ ಹೆಸರು.	ಒಟ್ಟು ವಿದ್ಯಾರ್ಥಿಗಳು
೧	ಗ. ಅ. ವ್ಹ. ಸ್ಕೂಲ. ...	೩೦
೨	ಗ. ಹಿಂದೀ ಹು. ಸಾಲೆ. ...	೫೮
೩	ಗ. ಮಾದಿಗರ ಸಾಲೆ. ...	೩೦
೪	ರಾತ್ರಿಯ ಸಾಲೆ. ...	೩೦
೫	ಹೊಲೆಯರ ಸಾಲೆ. ...	೩೦
೬	ಕನ್ನಡ ಗರ್ಲ್‌ಸ್ಕೂಲ. ...	೧೦೨
೭	ಹಿಂದೀ ಗರ್ಲ್‌ಸ್ಕೂಲ ...	೪೬

ಅಂಗ್ಲೋವ್ಹರ್ನ್ಯಾಕ್ಯುಲರ ಸ್ಕೂಲದಲ್ಲಿ ಹೋದವರ್ಷ ನವಂಬರ ತಿಂಗಳಲ್ಲಿ ೩೦೦ ವಿದ್ಯಾರ್ಥಿಗಳು ರಜಿಸ್ಟರಕ್ಕೆ ದಾಖಲಿದ್ದು ಪ್ರತಿದಿವಸ ೨೦೦।೨೫ ವಿದ್ಯಾರ್ಥಿಗಳು ಮಾತ್ರ ಬರುತ್ತಿದ್ದರು. ಆಗ ಇಲ್ಲಿ ಪ್ಲೇಗ ರೋಗವು ಪ್ರಾರಂಭವಾಗಿ ಜನರೆಲ್ಲ ಗ್ರಾಮವನ್ನು ಬಿಟ್ಟು ಊರಹೊರಗೆ ಗುಡಿಸಲುಗಳನ್ನು ಕಟ್ಟಿಕೊಂಡು ಇರುತ್ತಿದ್ದರು. ಅದರಿಂದ ೫ ತಿಂಗಳುಗಳವರೆಗೆ ಸಾಲೆಯನ್ನು ಬಂದ ಮಾಡಬೇಕಾಯಿತು. ಈಗ ಜನರು ಊರೊಳಗೆ ಬರಹತ್ತಿದ್ದರಿಂದ ಸಾಲೆಯು ತುಂಬಹತ್ತಿರುತ್ತದೆ. ಆದರೂ ಹುಡುಗರ ಸಂಖ್ಯೆಯು ಪೂರ್ಣಸ್ಥಿತಿಗೆ ಬಂದಿಲ್ಲ.

ಈ ಸಾಲೆಯಲ್ಲಿ ಪರಸ್ಥಳದ ೪೦ ವಿದ್ಯಾರ್ಥಿಗಳಿರುತ್ತಾರೆ ಅವರಲ್ಲಿ ಬಡವರಾದವರಿಗೆ ಈ ಪಟ್ಟಣದಲ್ಲಿ ಪ್ರಮುಖರಾದ ದೊಡ್ಡ ಮನುಷ್ಯರು ಅನ್ನೋದಕಗಳ ಅನುಕೂಲತೆಯನು ಮಾಡಿಕೊಟ್ಟಿದ್ದಾರೆ,

ಮೇನ್‌ಸ್ಕೂಲ ಮತ್ತು ಹಳೇ ತಾಲೂಕಕಚೇರಿ ಈ

ಕಟ್ಟಡಗಳು ವಿದ್ಯಾರ್ಥಿಗಳಿಂದ ತುಂಬಿಹೋಗಿವೆ. ಹೆಚ್ಚು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲಿಕ್ಕೆ ಅವಕಾಶವಿಲ್ಲ. ಬ್ರಾಹ್ಮಣರ ಬೀದಿಯು ಶಾಲೆಗೆ ದೂರವಾಗುವದರಿಂದ ಆ ಬೀದಿಯ ಚಿಕ್ಕ ಮಕ್ಕಳ ಸಲುವಾಗಿ ಒಂದು ಮನೆಯನ್ನು ಬಾಡಿಗೆ ತೆಗೆದುಕೊಂಡು ಕಳೆದ ಜುಲೈ ತಿಂಗಳಿನಿಂದ ಒಂದು ಇನ್‌ಫಂಟ್‌ಕ್ಲಾಸನ್ನು ಇಡಲ್ಪಟ್ಟಿರುತ್ತದೆ.

ಮತ್ತು ಕನ್ನಡ ಗರ್ಲ್ಸ್‌ಸ್ಕೂಲಿನಿಂದ ಬ್ರಾಹ್ಮಣರ ಬೀದಿಯು ಬಹಳ ದೂರವಿರುವ ಕಾರಣ ಅಲ್ಲಿಯ ಹುಡಿಗೆಯರಿಗೆ ಬರಲಿಕ್ಕೆ ಬಹಳ ಅಡಚಣೆಯಾಗುತ್ತಿತ್ತು. ಈ ಅಡಚಣೆಯು ಬ್ರಾಹ್ಮಣರ [illegible] ‘ಯಲ್ಲಿ ಈ ಶಾಲೆಯು ಒಂದು ಶಾಖೆಯನ್ನು ಸ್ಥಾಪಿಸಿದ್ದರಿಂದ ದೂರವಾಗಿರುತ್ತದೆ.''

ಆಗ್ರಾಸನಾಧಿಪತಿಗಳು ತಮ್ಮ ದಿವ್ಯಹಸ್ತದಿಂದ ಕಳೆದ ವರ್ಷದ ಲೋವರ ಸೆಕಂಡರಿ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಹುಜೂರಿನಿಂದ ಅಪ್ಪಣೆಯಾಗಿದ್ದ ಸರ್ಟಿಫಿಕೇಟುಗಳನ್ನೂ, ಪ್ರತಿಒಂದು ಸ್ಕೂಲಿನಲ್ಲಿಯೂ ಬಹುಮಾನಾರ್ಹರಾದ ವಿದ್ಯಾರ್ಥಿಗಳ ಯೋಗ್ಯತೆಯನ್ನು ವಿಚಾರಿಸುತ್ತಾ ಬಹುಮಾನ ಪುಸ್ತಕಗಳನ್ನು ಅಪ್ಪಣೆ ಕೊಡಿಸಿದರು.

ಹಜರತ್ ಖಾಸಾಸಾಹೇಬ ಬಹದ್ದೂರರವರು ಮಾಡಿರುವ ಹೊಸ ಅಭ್ಯಾಸ ಕ್ರಮದ ಮೇರೆಗೆ ಪ್ರತಿಸ್ಕೂಲಿನ ಒಂದೊಂದು ಕ್ಲಾಸಿನಲ್ಲಿಯೂ, ವಿದ್ಯಾರ್ಥಿಗಳು ಹೊಂದಿರುವ ವಿದ್ಯಾಭಿವೃದ್ಧಿಯನ್ನು ನೋಡಿ ಬಹಳ ಸಂತೋಷಪಟ್ಟು ೧೦ ರೂಪಾಯಿಗಳ ಬಹುಮಾನವನ್ನು ಕೊಟ್ಟರು.

ಅಗ್ರಾಸನಾಧಿಪತಿಗಳು ಸ್ಕೂಲುಗಳ ವಿಷಯದಲ್ಲಿ ಹೊಂದಿರುವ ಅಭಿಪ್ರಾಯವನ್ನು ವಿಜಿಟರ್ಸ್ ಬುಕ್ಕಿನಲ್ಲಿ ಬರಿಸಿರುವಂತೆ ಅಪ್ಪಣೆ ಕೊಡಿಸಿದರು. ಅನಂತರ ಮಂಗಳವು ಹೇಳಲ್ಪಟ್ಟಿತು. ಅಗ್ರಾಸನಾಧಿಪತಿಗಳನ್ನು ಮ|| ರಾ|| ಸರಾಫ್ ಪುಟ್ಟಣ್ಣಶೆಟ್ಟಿಯವರು ವಂದಿಸಿದರು.

ತಾ ೪. ೧೧ ೯೯.
ದೊಡ್ಡಬಳ್ಳಾಪುರ.

ತಮ್ಮ ವಿಧೇಯ
D. K.

ಮ. ರಾ. ರಾ. ವ್ಹಿ. ಪಿ. ಮಾಧವರಾವ ಕೌನ್ಸಿಲರ ಇವರು ಬರೆದ ಶರಾದ ಭಾಷಾಂತರವು.

ನಾವು ಈ ಹೊತ್ತಿನ ಸಭೆಯ ಅಗ್ರಾಸನವನ್ನು ಡಿ. ಎ. ಇನ್ಸ್ಪೆಕ್ಟರ ವಿನಂತಿಯ ಮೇರೆಗೆ ಬಹು ಸಂತೋಷದಿಂದ ಸ್ವೀಕರಿಸಿದೆವು.

ಪ್ಲೇಗಮೂಲಕ ಊರ ಜನರೆಲ್ಲ ಊರಹೊರಗೆ ಇದ್ದಾಗ್ಯೂ ಗಂಡು ಹೆಣ್ಣುಮಕ್ಕಳ ಸಂಖ್ಯೆಯು ಸಾಲೆಗಳಲ್ಲಿ ಹೆಚ್ಚಿದ್ದದ್ದನ್ನು ನೋಡಿ ನಮಗೆ ಬಹಳ ಸಮಾಧಾನವಾಗುತ್ತದೆ.

ಈ ಸುಸ್ಥಿತಿಯ ಶ್ರೇಯಸ್ಸು ಕನ್ನಡ ಮಾಸ್ತರರಿಗೂ ಹಿಂದು ಸ್ಕೂಲ ಮಾಸ್ತರರಿಗುಂಟೆಂದು ತಿಳಿಸಲು ಆನಂದಪಡುತ್ತೇವೆ.

ಗರ್ಲಸ್ಕೂಲವಾದರೂ ಒಳಿತಾಗಿ ನಡಿಸಲ್ಪಟ್ಟಿದೆ. ಸಾಲಿ ಹುಡುಗರ ಕಸರತ್ತು ಸರಸಾಗಿದೆ.

ವರ್ಧನ್ಯಾಯಿಜ ಪರೀಕ್ಷೆಯ ಪ್ರಶ್ನೆಗಳು.

೧ ನೇ ಕಾಗದ.

(೧) अ ಗೃಹಸಂಮಾರ್ಜನೆ, ब ರುಗ್ಣಾಪಸಯನ, क ಕ್ಷಾಮ, ड ಪರೀಕ್ಷೆ. इ ವಿವಾಹ, फ ಸರೋವರ, ग ಶರಜ್ಜೋತ್ಸ್ನ, ಇವುಗಳಲ್ಲಿ ಒಂದನ್ನು ಪದ್ಯರೂಪದಿಂದ ವರ್ಣಿಸಿರಿ.

(೨) अ ತಾಳ್ಮೆ, ब ಶಾಸ್ತ್ರೀಯವಿಷಯಾಧ್ಯಯನ, क ರಾಜಾಕಾಲಸ್ಯಕಾರಣಂ, ड ಕನ್ನಡಭಾಷೆಯ ಸಾಂಪ್ರತಸ್ಥಿತಿಯೂ ಅದನ್ನು ಸುಧಾರಿಸುವ ಉಪಾಯಗಳೂ, इ ಶಿಕ್ಷಕರ ಕರ್ತವ್ಯ ಅದರಲ್ಲಿಯ ಕೊರತೆಗಳು ಮತ್ತು ಅವುಗಳನ್ನು ದೂರಮಾಡುವ ಉಪಾಯಗಳು, ಇವುಗಳಲ್ಲಿ ಒಂದನ್ನು ಕುರಿತು ನಿಬಂಧವನ್ನು ಬರೆಯಿರಿ.

(೩) अ ದೃಷ್ಟಾಂತ, ब ಸಮಾಸೋಕ್ತಿ, क ಕಾವ್ಯಲಿಂಗ ಈ ಅಲಂಕಾರಗಳ ಲಕ್ಷಣ ಉದಾಹರಣೆಗಳನ್ನು ಬರೆಯಿರಿ.

(೪) ಕೆಳಗೆ ಕೊಟ್ಟ ಕವಿತೆಗಳ ಅಲಂಕಾರಗಳನ್ನೂ ಅವುಗಳಲ್ಲಿ ವರ್ಣಿಸಲ್ಪಟ್ಟ ರಸಗಳನ್ನೂ ಹೇಳಿರಿ.

ಮಿರುಗುವ ತಳಿರ್ದೋರಣಂಗಳಂ ಕಟ್ಟಿಸುತ ।
ಮರಿಗೋಗಿಲೆಗಳ ಬಾಯ್ಗಳಬಲಿದ ಬಿಘನದ ।
ನೆರೆಗಳಂ ಬಿಡಿಸುತ್ತ ತುಂಬಿಗಳ ಬಳಗಕ್ಕೆ ಕಮಲಗಳ
ಸೂರೆವಿಡುತಾ ॥
ಕಿರುವೆಲರೊಳತ್ತಲುಂ ಸಾರಿಸುತ ಮಲ್ಲಿಗೆಯ ।
ನೆರಗಿಸುತ ಜ್ಯೋತ್ಸ್ನೆಯಂ ಶೋಭಿಸಿ ವಸಂತನೃಪಂ ।

ಕಟ್ಟಡಗಳು ವಿದ್ಯಾರ್ಥಿಗಳಿಂದ ತುಂಬಿಹೋಗಿವೆ. ಹೆಚ್ಚು ವಿದ್ಯಾರ್ಥಿಗಳನ್ನು ತೆಗೆದುಕೊಳ್ಳಲಿಕ್ಕೆ ಅವಕಾಶವಿಲ್ಲ. ಬ್ರಾಹ್ಮಣರ ಓಣಿಯು ಸಾಲೆಗೆ ದೂರವಾಗುವದರಿಂದ ಆ ಓಣಿಯ ಚಿಕ್ಕ ಮಕ್ಕಳ ಸಲುವಾಗಿ ಒಂದು ಮನೆಯನ್ನು ಬಾಡಿಗೆ ತೆಗೆದುಕೊಂಡು ಕಳೆದ ಜುಲೈ ತಿಂಗಳಿನಿಂದ ಒಂದು ಇನ್‌ಫಂಟ್‌ಕ್ಲಾಸವು ಇಡಲ್ಪಟ್ಟಿರುತ್ತದೆ.

ಮತ್ತು ಕನ್ನಡ ಗರ್ಲ್‌ಸ್ಕೂಲಿನಿಂದ ಬ್ರಾಹ್ಮಣರ ಓಣಿಯು ಬಹಳ ದೂರವಿರುವ ಕಾರಣ ಅಲ್ಲಿಯ ಹುಡಿಗೆಯರಿಗೆ ಬರಲಿಕ್ಕೆ ಬಹಳ ಅಡಚಣೆಯಾಗುತ್ತಿತ್ತು. ಈ ಅಡಚಣೆಯು ಬ್ರಾಹ್ಮಣರ ಓಣಿಯಲ್ಲಿ ಈ ಶಾಲೆಯ ಒಂದು ಶಾಖೆಯನ್ನು ಸ್ಥಾಪಿಸಿದ್ದರಿಂದ ದೂರಾಗಿರುತ್ತದೆ.''

ಅಗ್ರಾಸನಾಧಿಪತಿಗಳು ತಮ್ಮ ದಿವ್ಯಹಸ್ತದಿಂದ ಕಳೆದ ವರ್ಷದ ಲೋವರ ಸೆಕಂಡರಿ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಹುಜೂರಿನಿಂದ ಅಪ್ಪಣೆಯಾಗಿದ್ದ ಸರ್ಟಿಫಿಕೇಟುಗಳನ್ನೂ, ಪ್ರತಿಒಂದು ಸ್ಕೂಲಿನಲ್ಲಿಯೂ ಬಹುಮಾನಾರ್ಹರಾದ ವಿದ್ಯಾರ್ಥಿಗಳ ಯೋಗ್ಯತೆಯನ್ನು ವಿಚಾರಿಸುತ್ತಾ ಬಹುಮಾನ ಪುಸ್ತಕಗಳನ್ನು ಅಪ್ಪಣೆ ಕೊಡಿಸಿದರು.

ಹಜರತ್ ಭಾಭಾಸಾಹೇಬ ಬಹದ್ದುರವರು ಮಾಡಿರುವ ಹೊಸ ಅಭ್ಯಾಸ ಕ್ರಮದ ಮೇರೆಗೆ ಪ್ರತಿಸ್ಕೂಲಿನ ಒಂದೊಂದು ಕ್ಲಾಸಿನಲ್ಲಿಯೂ, ವಿದ್ಯಾರ್ಥಿಗಳು ಹೊಂದಿರುವ ವಿದ್ಯಾಭಿವೃದ್ಧಿಯನ್ನು ನೋಡಿ ಬಹಳ ಸಂತೋಷಪಟ್ಟು ೧೦ ರೂಪಾಯಿಗಳ ಬಹುಮಾನವನ್ನು ಕೊಟ್ಟರು.

ಅಗ್ರಾಸನಾಧಿಪತಿಗಳು ಸ್ಕೂಲುಗಳ ವಿಷಯದಲ್ಲಿ ಹೊಂದಿರುವ ಅಭಿಪ್ರಾಯವನ್ನು ವಿಜಿಟರ್ಸ್ ಬುಕ್ಕಿನಲ್ಲಿ ಬರಿಸಿರುವಂತೆ ಅಪ್ಪಣೆ ಕೊಡಿಸಿದರು. ಅನಂತರ ಮಂಗಳವು ಹೇಳಲ್ಪಟ್ಟಿತು ಅಗ್ರಾಸನಾಧಿಪತಿಗಳನ್ನು ಮ|| ರಾ|| ಸರಾಫ್ ಪುಟ್ಟಣ್ಣಶೆಟ್ಟಿಯವರು ವಂದಿಸಿದರು.

ತಾ ೪-೧೧ ೯೯. | ತಮ್ಮ ವಿಧೇಯ
ದೊಡ್ಡಬಳ್ಳಾಪೂರ. | D. K.

ಮ. ರಾ. ರಾ. ವ್ಹಿ. ಪಿ. ಮಾಧವರಾವ ಕೌನ್ಸಿಲರ ಇವರು ಬರೆದ ಶರಾದ ಭಾಷಾಂತರವು.

ನಾವು ಈ ಹೊತ್ತಿನ ಸಭೆಯ ಅಗ್ರಾಸನವನ್ನು ಡೆ. ಎ. ಇನ್‌ಸ್ಪೆಕ್ಟರ ವಿನಂತಿಯ ಮೇರೆಗೆ ಬಹು ಸಂತೋಷದಿಂದ ಸ್ವೀಕರಿಸಿದೆವು.

ಪ್ಲೇಗಮೂಲಕ ಊರ ಜನರೆಲ್ಲ ಊರಹೊರಗೆ ಇದ್ದಾಗ್ಯೂ ಗಂಡು ಹೆಣ್ಣುಮಕ್ಕಳ ಸಂಖ್ಯೆಯು ಸಾಲೆಗಳಲ್ಲಿ ಹೆಚ್ಚಿದ್ದದ್ದನ್ನು ನೋಡಿ ನಮಗೆ ಬಹಳ ಸಮಾಧಾನವಾಗುತ್ತದೆ.

ಈ ಸುಸ್ಥಿತಿಯ ಶ್ರೇಯಸ್ಸು ಕನ್ನಡ ಮಾಸ್ತರರಿಗೂ ಹಿಂದು ಸ್ಕೂಲ ಮಾಸ್ತರರಿಗುಂಟೆಂದು ತಿಳಿಸಲು ಆನಂದಪಡುತ್ತೇವೆ.

ಗರ್ಲ್ಸಸ್ಕೂಲವಾದರೂ ಒಳಿತಾಗಿ ನಡಿಸಲ್ಪಟ್ಟದೆ. ಸಾಲಿ ಹುಡುಗರ ಕಸರತ್ತು ಸರಸಾಗಿದೆ,

---

ವರ್ಧಾಪ್ರಾಯಿಜ ಪರೀಕ್ಷೆಯ ಪ್ರಶ್ನೆಗಳು.

೧ ನೇ ಭಾಗದ.

(೧) ಅ ಗೃಹಸಂಮಾರ್ಜನೆ, ಆ ರುಗ್ಣಾಪನಯನ, ಇ ಕ್ಷಾಮ, ಈ ಪರೀಕ್ಷೆ, ಉ ವಿವಾಹ, ಊ ಸರೋವರ, ಋ ಶರತ್‌ಜ್ಯೋತ್ಸ್ನ ಇವುಗಳಲ್ಲಿ ಒಂದನ್ನು ಪದ್ಯರೂಪದಿಂದ ವರ್ಣಿಸಿರಿ.

(೨) ಅ ಶಾಕ್ತಿ, ಆ ಶಾಸ್ತ್ರೀಯವಿಷಯಾಧ್ಯಯನ, ಇ ರಾಜಾಕಾಲಸ್ಯಕಾರಣಂ, ಈ ಕನ್ನಡಭಾಷೆಯ ಸಾಂಪ್ರತಸ್ಥಿತಿಯೂ ಅದನ್ನು ಸುಧಾರಿಸುವ ಉಪಾಯಗಳೂ, ಉ ಶಿಕ್ಷಕರ ಕರ್ತವ್ಯ ಅವರಲ್ಲಿಯ ಕೊರತೆಗಳು ಮತ್ತು ಅವುಗಳನ್ನು ಪೂರಮಾಡುವ ಉಪಾಯಗಳು, ಇವುಗಳಲ್ಲಿ ಒಂದನ್ನು ಕುರಿತು ನಿಬಂಧವನ್ನು ಬರೆಯಿರಿ.

(೩) ಅ ದೃಷ್ಟಾಂತ, ಆ ಸಮಾಸೋಕ್ತಿ, ಇ ಕಾವ್ಯಲಿಂಗ ಈ ಅಲಂಕಾರಗಳ ಲಕ್ಷಣ ಉದಾಹರಣೆಗಳನ್ನು ಬರೆಯಿರಿ.

(೪) ಕೆಳಗೆ ಕೊಟ್ಟ ಕವಿತೆಗಳ ಅಲಂಕಾರಗಳನ್ನೂ ಅವುಗಳಲ್ಲಿ ವರ್ಣಿಸಲ್ಪಟ್ಟ ರಸಗಳನ್ನೂ ಹೇಳಿರಿ.

ಮಿರುಗುವ ತಳಿರ್ದೋರಣಂಗಳಂ ಕಟ್ಟಿಸುತ ।
ಮರಿಗೋಗಿಲೆಗಳ ಬಾಯ್ಗಳಬಲಿದ ಬಂಧನದ !
ಸೆರೆಗಳಂ ಬಿಡಿಸುತ್ತ ತುಂಬಿಗಳ ಬಳಗಕ್ಕೆ ಕಮಲಗಳ
ಸೂರೆವಿಡುತಾ ॥

ಕಿರುವೆಲರೊಳ್ತ್ತಲುಂ ಸಾರಿಸುತ ಮಲ್ಲಿಗೆಯ ।
ನೆರಗಿಸುತ ಜೋತ್ಸ್ನೆಯಂ ಶೋಭಿಸಿ ವಸಂತನೃಪಂ ।

ಪೊರಮಟ್ಟು ಪೋಗಿಯುನ್ನಡುಗಿಸಿ ಸಮಸ್ತ ವಸರಾ
ಷ್ಟ್ರಮಂ ಕೈಕೊಂಡನು ॥ ೧ ॥
ಅರುಣೋದಯದರುಣದ್ಯುತಿ ।
ಗಿರಿಕಟಕದ ಪಳುಕಿನಲ್ಲಿ ಬಿಂಬಿಸೆ ಕಾಣು ॥
ತ್ತರುಣಜಲಂಗೆತ್ತಲ್ಲಿಯು ।
ಹರಿಣಾರಿಯ ಮರಿಗಳ್ಪೆದೆ ನೆಕ್ಕುತ್ತಿರ್ಕುಂ ॥ ೨ ॥
ಸಿಸಗೇಕೀತರುಣತೆಯೊಳ್ ।
ಘನ ತಪವೆಡೆಗೊಂಡುದಕಟ ನವಲತೆಯುಂ ಸೂ ॥
ರ್ಯನ ಬಿಸಿಲಿಂಕೊರಗಿಪ ದು ।
ಷ್ಟನನದುಕನಿಸಗಬಲೆಸಾಕುಮಾರ್ಯಾವರನೋ ॥ ೩ ॥

(೫) ಕೆಳಗೆ ಕೊಟ್ಟಿದ್ದನ್ನು ಹಳಗನ್ನಡದಿಂದ ಬರೆಯಿರಿ:— ವನಸ್ಪತಿಗಳಾದರೂ ಹೊಸ ಮಣ್ಣು ಹುಟ್ಟಿಸಲಿಕ್ಕೆ ಕಾರಣವಾಗಿರುತ್ತವೆ. ದೊಡ್ಡ ದೊಡ್ಡ ವೃಕ್ಷಗಳ ಬೇರುಗಳು ನೆಲದೊಳಗೆ ಇಳಿದು ಅಲ್ಲಿ ಬಂಡೆಗಳಿಗೆ ಸುತ್ತಿಕೊಳ್ಳುತ್ತವೆ. ಮುಂದೆ ಆ ಬೇರುಗಳು ಬಲಿಯುತ್ತ ಹೋದಹಾಗೆ ಅವು ಸುತ್ತಿಕೊಂಡಂಥ ಬಂಡೆಗಳು ತಮ್ಮ ಮೊದಲಿನ ಸ್ಥಳ ಬಿಟ್ಟು ಹೊರಬೀಳುತ್ತವೆ; ಅಥವಾ ಅವುಗಳ ಸಂದುಗಳು ಸಡಿಲಾಗುತ್ತವೆ ಈ ವಿಧವಾಗಿ ಬೇರುಗಳು ಮಳೇ ನೀರಿನ ವ್ಯಾಪಾರಕ್ಕೆ ಸಹಾಯ ಮಾಡುತ್ತವೆ. ಮುಂದೆ ಕಾಲಾಂತರದಲ್ಲಿ ಈ ಬೇರುಗಳು ನೆಲದೊಳಗೆ ಕೊಳೆತು ಅಂಗಾರಾಮ್ಲವನ್ನು ಹುಟ್ಟಿಸುತ್ತವೆ. ಈ ಆಮ್ಲದಿಂದ ಶಿಲೆಗಳು ಬ್ಯಾಗ ಸವಿಯುತ್ತವೆಂಬದನ್ನು ನೀವು ಬಲ್ಲಿರಿ.

(೬) ಕೆಳಗೆ ಕೊಟ್ಟಿದ್ದನ್ನು ಹೊಸಗನ್ನಡದಿಂದ ಬರೆಯಿರಿ:— ಆನುಮಿಾಕುಮರಿಯನರಸಿಯ ಕೈಯೊಳಿತ್ತು ಕಜ್ಜಮಂ ಸಜ್ಜುಗೊಳಿಸಿದೆಂ ಮತ್ತಮಾಗಳೇ ಸುಭದ್ರನೆಂಬ ಮಡಿಯರಂ ಅವಂತಿ ದೇಶದರಸನಮಾತ್ಯನಾದ ಸುನಂದನೊಡವೆರೆದಾಕಡಲೆಡೆಯೊಳನಿತು ಕಟ್ಟಾಯಸಂಬಟ್ಟಲ್ಲಿಂ ಪೊರಮಟ್ಟು ಸಾಳ್ವಪುರಾಧಿಪತಿಯುಂ ಮಡಿಪಲ್ಕೆ ಪೋಗಿರ್ಪನ್ನ ಯುವರಾಜನಾದ ಪ್ರದ್ಯುಮ್ನನೊಡನೆ ಕಾದಿರ್ದನೆಂದೊಂದು ವೃತ್ತಾಂತಮಂ ಕೇಳ್ದೆಂ ಇಂತಿಸಿತುಂ ಪ್ರಯೋಜನಮುಂ ಕೈಸಾರ್ದಂತಿರೆಯುಂ ಎನ್ನ ಮನಕ್ಕೆ ಆತ್ರದೋರ್ದಪುದು. ಈ ಭೃತ್ಯಭಾವಮೆಂಬುದು ಕಷ್ಟಮಲ್ತೆ ?

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಬಯಸುತ್ತಂ ಪ್ರತಿಮಾಸದಾದಿಗೊಳವಿಂದೀಪತ್ರಮಂ ಮುದ್ರಿಸಿ ॥
ಸಮುದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಷವ ತಿದ್ದವೇಳ್ಪುದು ಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೩೬.] ಮಾರ್ಚ ೧೯೦೦. [ಸಂಚಿಕೆ ೩.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣೆಯ ಸಂಬಂಧದ ವೃತ್ತಾಂತಗಳು.

ಧ್ವನಿಯ ಸ್ವರೂಪವು ಇತ್ತಲಾಗಿ ಚನ್ನಾಗಿ ಗೊತ್ತಾಗಿರುತ್ತದೆ. ಇದು ಆಘಾತದಿಂದ ಹುಟ್ಟುತ್ತದೆ. ಆಘಾತದ ಕಾರ್ಯವು ವಾಯುವಿನಲ್ಲಿಯೂ ನೀರಿನಲ್ಲಿಯೂ ಜಡಪದಾರ್ಥದ ಕಣಗಳಲ್ಲಿಯೂ ನಡೆದು ಒಂದು ಬದಿಯಿಂದ ಎರಡನೇ ಬದಿಗೆ ನಿರೋಧವಾಗುವವರೆಗೆ ಹರಿಯುತ್ತದೆ. ಆದರೆ ಹರಿಯುವ ಪ್ರಮಾಣವು ಭಿನ್ನವಾಗಿರುತ್ತದೆ. ಹವೆಯಲ್ಲಿ ಧ್ವನಿಯ ವೇಗವು ಒಂದು ಎಂದು ತಿಳಿದರೆ ನೀರಿನಲ್ಲಿ ನಾಲ್ಕು ಘನಪದಾರ್ಥಗಳಲ್ಲಿ ೧೦ ರಿಂದ ೨೦ ರವರೆಗೆಂದು ಹೇಳಬಹುದು. ಒಂದು ತುಬಾಕಿಯನ್ನು ಹಾರಿಸಲು ಅದರ ಸಪ್ಪಳವು ನಮಗೆ ತುಸು ಹೊತ್ತಿನಲ್ಲಿ ಕೇಳಬರುತ್ತದೆ. ಇದಕ್ಕೆ ಹವೆಯೇ ಸಾಧನವು.

ಒಂದು ಕೆರೆಯ ಒಂದು ಬದಿಯಲ್ಲಿ ನಾವು ನಿಂತು ನೀರಿನಲ್ಲಿ ಕೈಯಾಡಿಸಿ ಸಪ್ಪಳ ಮಾಡಿದರೆ ನೀರಿನ ಆಚೆ ಬದಿಯಲ್ಲಿ ನೀರಿಗೆ ಕಿವಿ ಹಚ್ಚಿ ಕೇಳುವವನಿಗೆ ಅದೇ ದಂಡಿಯಲ್ಲಿ ನಿಂತು ಕೇಳುವವನಿಗಿಂತ ಆ ಸಪ್ಪಳವು ಬೇಗ ಕೇಳಬರುವದು. ಇದೇ ಕಾರಣದಿಂದ ನೀರಿನಲ್ಲಿ ಆದ ಸಪ್ಪಳವು ಜಲಚರಗಳಿಗೆ ಬೇಗ ತಿಳಿದು ಅವು ಎಚ್ಚರಗೊಳ್ಳುತ್ತವೆ.

ಒಂದು ನೀಟಾದ ತೇಗಿನ ತೊಲೆಯು ಒಂದು ತುದಿಗೆ ಕಿವಿ ಹಚ್ಚಿ ಕೂತ್ರಲಾಗಿ ಎರಡನೇ ತುದಿಯಲ್ಲಿ ಕಟ್ಟಿಗೆ ಕಲ್ಲುಗಳಿಂದ ಹೊಡೆದ ಸಪ್ಪಳವು ಎರಡು ಸಾರೆ ಕೇಳಬರುತ್ತದೆ. ಘನ ಪದಾರ್ಥದ ಮಾರ್ಗವಾಗಿ ಕೇಳಿಸುವದು ಮೊದಲನೇದು, ಹವೆಯ ಮಾರ್ಗವಾಗಿ ಕೇಳಿಸುವದು ಎರಡನೇದು. ಎರಡನೇದು ಸ್ವಲ್ಪ ತಡವಾಗಿ ಕೇಳಿಸುತ್ತದೆ. ಒಂದು ಗೋಡೆಯ ಒಂದು ತುದಿಗೆ ಕಿವಿ ಹಚ್ಚಿ ನಿಂತು ಎರಡನೇ ತುದಿಯಲ್ಲಿ ಯಾರಾದರೂ ಸುತ್ತಿಗೆಯಿಂದ ಗೋಡೆಯ ಮೇಲೆ ಹೊಡೆಯ ಹೇಳಿದರೆ, ಈ ಮಾತಿನ ಪರಿಚಿತಿಯು ಸ್ಪಷ್ಟವಾಗಿ ಬರುತ್ತದೆ.

ಧ್ವನಿಯು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹೋಗುವಾಗ ನಡುವೆ ಏನಾದರೂ ಅಡ್ಡ ಬಂದರೆ ಪರಾವೃತ್ತವಾಗಿ ಹೊರಟ ಸ್ಥಳದ ದಿಕ್ಕಿಗೆ ಹೊರಳುತ್ತದೆ. ಅತ್ತಕಡೆಗೂ ನಿರೋಧವಾದರೆ ತಿರುಗಿ ಮತ್ತೆ ವಿರುದ್ಧ ದಿಕ್ಕಿಗೆ ಸಾಗುತ್ತದೆ. ಇಂಥ ಪ್ರಸಕ್ತಿಯಲ್ಲಿ ಕೇಳುವವನ ಕಿವಿಯ ಮೇಲೆ ಆಘಾತ ಪ್ರತ್ಯಾಘಾತಗಳಾಗುತ್ತವೆ. ಈ ಪ್ರತ್ಯಾಘಾತಗಳಿಗೆ ಪ್ರತಿಧ್ವನಿಯೆಂಬ ಹೆಸರು.

ಈ ಧ್ವನಿಶಾಸ್ತ್ರದ ಅಧ್ಯಯನದಿಂದ ಎಷ್ಟೋ ಸೋಜಿಗದ ಶೋಧಗಳು ಮಾಡಲ್ಪಟ್ಟವೆ. ಧ್ವನಿಸಂಗ್ರಹದ ಯಂತ್ರಗಳು ಹುಟ್ಟಿ, ಲೋಕೋತ್ತರ ಗಾಯಕನ ಗಾಯನಗಳನ್ನೂ ವಕ್ತೃಗಳ ವಕ್ತೃತ್ವವನ್ನೂ ಕೇಳಿ ಆನಂದ ಪಡುವದು ಸುಸಾಧ್ಯವಾಗಿದೆ.

ಈ ಮೇರೆಗೆ ಸೃಷ್ಟ ಪದಾರ್ಥಶಾಸ್ತ್ರದ ಅಧ್ಯಯನದಿಂದ ಮನುಷ್ಯನ ವ್ಯವಹಾರದಲ್ಲಿ ಪರಿಪರಿಯ ಹೆಚ್ಚು ಕಡಿಮೆಗಳಾಗಿವೆ. ಸುಖವು ದಿನೇ ದಿನೇ ಹೆಚ್ಚಾಗುತ್ತಲಿದೆ. ವಸಂತಕಾಲವು ಮಾರಿ ಗ್ರೀಷ್ಮ ವರ್ಷಾಕಾಲಗಳು ಬರಲು ಗುಡುಗು ಮಿಂಚುಗಳುಳ್ಳ ಪ್ರದೇಶಗಳಲ್ಲಿರುವ ಜನರ ಎದೆಗೆ ಕಲ್ಲು ಬಡೆದಂತಾಗುತ್ತಿತ್ತು. ಮಿಂಚುಗಳಿಂದ ಮನೆಮಾರುಗಳನ್ನೂ ದನಕರುಗಳನ್ನೂ ಆಪ್ತಬಂಧುಗಳನ್ನೂ ಕಾಯುವ ಉಪಾಯವ ಕಾಣದೆ ಕೈಮುಚ್ಚಿಕೊಂಡು ದೈವವನ್ನು ನಂಬಿ

ಇರಬೇಕಾಗುತ್ತಿತ್ತು. ಆದರೆ ಈ ಚಿಂತೆಯು ಫ್ರಾಂಕಲಿನ್ನೆಂಬ ವಿದ್ವಾಂಸನ ಶೋಧದಿಂದ ನಿರ್ನಾಮವಾಗಿರುವದು. ಈ ಪ್ರಾಜ್ಞನು ತಾನು ಪ್ರಯೋಗದಲ್ಲಿ ಪ್ರಯೋಗಿಸುವ ವಿದ್ಯುತ್ತು ಆಕಾಶದಲ್ಲಿ ಹುಟ್ಟುವ ಮಿಂಚು ಒಂದೇ ಇರಬೇಕೆಂದು ಕಂಡು ಹಿಡಿದಾಗ್ಯೂ ಆ ಮಾತು ಪ್ರಮಾಣಿಸಿದ ಹೊರ್ತು ಅವನಿಗೆ ಎಷ್ಟುಮಾತ್ರವೂ ಸಮಾಧಾನವಾಗಲಿಲ್ಲ. ಆದರೆ ಅವನು ಈ ಮಾತಿನ ನಿಜತ್ವದ ಪರಿಚಿತಿಗಾಗಿ ಸಾಹಸಪಟ್ಟು ಕೊನೆಯಲ್ಲಿ ತನ್ನ ಸಿದ್ಧಾಂತವು ನಿಜವೆಂದು ಮನಗಂಡನು. ಅದು ಹ್ಯಾಗಂದರೆ:—

ಅವನು ಒಂದು ರೇಶಿಮೆಯ ಪಟವನ್ನು ಮಾಡಿ ಅದರ ನಡುವಿನ ಬಿದರಿನ ಸ್ಥಳದಲ್ಲಿ ಮೊನೆಯಾದ ತುದಿಯುಳ್ಳ ಕಬ್ಬಿಣದ ಕಡ್ಡಿಯನ್ನು ಇರಿಸಿ ಗುಡುಗು ಮಿಂಚು ಆಗುವ ಕಾಲಕ್ಕೆ ಮೇಲಕ್ಕೆ ಹಾರಿಸಿದನು. ಮೇಲೆ ಹಾರಿಸಲಿಕ್ಕೆ ವಿದ್ಯುದ್ವಾಹಕವಾದಂಥ ಸಣಬಿನ ಹುರಿಯನ್ನೇ ಉಪಯೋಗಿಸಿದನು. ಅದನ್ನು ತಾನು ಹಿಡಿಯುವಲ್ಲಿ ಮಾತ್ರ ರೇಶಿಮೆಯ ದಾರವನ್ನು ಹಚ್ಚಿದನು. ಸಣಬು ಮುಗಿದು ರೇಶಿಮೆಯ ದಾರವು ಆರಂಭವಾಗುವ ಸ್ಥಳದಲ್ಲಿ ಒಂದು ಕಬ್ಬಿಣದ ಕೀಲಿಕೈಯನ್ನು ಕಟ್ಟಿದನು. ಜನರಲ್ಲಿ ತತ್ವಶೋಧದ ಕೆಲಸಕ್ಕೆ ಮನಃಪೂರ್ವಕವಾಗಿ ಸಹಾಯ ಮಾಡುವ ಜನರಿಗಿಂತ ಕೆಲಸವು ಒಮ್ಮೆ ಸಾಧಿಸದಿದ್ದರೆ ಆ ಶೋಧಕ ಮನುಷ್ಯನನ್ನು ಹಾಸ್ಯಕ್ಕೆ ಗುರಿಮಾಡುವವರೇ ಬಹು ಜನರಿರುತ್ತಾರೆ ಅದರಿಂದ ತನ್ನ ಪ್ರಯೋಗವು ಸಾಧಿಸದಿದ್ದರೆ ಅಪಹಾಸ್ಯಕ್ಕೆ ಪಾತ್ರನಾದೇನೆಂಬ ಭೀತಿಯಿಂದ ಅವನು ತನ್ನ ಪ್ರಯೋಗದ ಗುಟ್ಟನ್ನು ತನ್ನ ಮಗನ ಹೊರ್ತು ಯಾರಿಗೂ ತಿಳಿಸಲಿಲ್ಲ. ಈ ಪ್ರಕಾರ ಪಟವನ್ನು ಮೇಲೆ ಹಾರಿಸಿದ ಕೆಲವು ಹೊತ್ತಿನವರೆಗೆ ವಿದ್ಯುತ್ತಿನ ಕಿಡಿಗಳು ಕಾಣದ್ದರಿಂದ ಅವನು ನಿರಾಶನಾದನು. ಅಷ್ಟರಲ್ಲಿ ಹುರಿಯ ಸಣ್ಣ ಸಣ್ಣ ಎಳೆಗಳು ಸೆಟೆದು ನಿಂತದ್ದನ್ನು ಕಂಡು ಕೀಲಿಕೈಗೆ ತನ್ನ ಕೈಬೊಟ್ಟು ಮಡಚಿ ತುದಿಯನ್ನು ತೋರಿಸಿದನು. ಕೂಡಲೆ "ಚಟ್" ಎಂದು ಸಪ್ಪಳಾಗಿ ವಿದ್ಯುತ್ತಿನ ಕಿಡಿ ಹಾರಿತು, ಇದರಿಂದ ಆವನಿಗೆ ಆದ ಆನಂ

ದವನ್ನು ವರ್ಣಿಸಲಳವಲ್ಲ ಈ ಪ್ರಕಾರ ತನ್ನ ಸಿದ್ಧಾಂತವು ಸಿದವಾದ ಬಳಿಕ ಅದನ್ನು ಜನರಲ್ಲಿ ಪ್ರಚುರಗೊಳಿಸಿದನು. ಈಗ ಈ ಶೋಧದ ಸಹಾಯದಿಂದ ಸಿಡಿಲಿಗೆ ಗುರಿಯಾಗುತ್ತಿದ್ದ ಎಷ್ಟೋ ದೊಡ್ಡ ದೊಡ್ಡ ಇಮಾರತುಗಳ ರಕ್ಷಣೆಯಾಗಹತ್ತಿರುತ್ತದೆ. ಒಂದು ಉದ್ದವಾದ ಕಬ್ಬಿಣದ ಸಲಾಖಿಯನ್ನು ತೆಗೆದುಕೊಂಡು ಅದರ ಒಂದು ತುದಿಯಲ್ಲಿ ಮೊನೆ ಮಾಡಿ ಆ ತುದಿಯು ಮೇಲೆ ಆಗುವಂತೆ, ಎರಡು ಮೊಳ ಹೊರಗೆ ಕಾಣಿಸುವಂತೆ, ಇಮಾರತಿಯ ಮೇಲ್ಭಾಗದಲ್ಲಿರಿಸಿ ಸಲಾಖಿಯನ್ನು ಹಾಗೇ ಭೂಮಿಯವರೆಗೆ ತಂದು ಅನುಕೂಲತೆಯ ಪ್ರಕಾರ ನೆಲದಲ್ಲಿ ಹೂಳಬೇಕು ಇದರಿಂದ ಆಕಾಶದೊಳಗಿನ ಮಿಂಚು ಆ ಸಲಾಖಿಯ ಮಾರ್ಗದಿಂದ ನೆಲದೊಳಗೆ ಶೇರುತ್ತದೆ. ಇಮಾರತಿಗೆ ಯಾವ ಬಗೆಯಿಂದಲೂ ಧಕ್ಕೆಯಾಗಲಾರದು. ಈ ಪ್ರಯೋಗದಿಂದ ಉಷ್ಣಸಮಶೀತೋಷ್ಣಕಟಿಬಂಧಗಳ ಜನರಿಗೆ ಬಹಳ ಹಿತವಾಗಿರುವದಲ್ಲದೆ ಶಾಸ್ತ್ರೀಯ ಶೋಧಗಳಿಗೂ ಸಹಾಯವಾಗಿರುತ್ತದೆ.

ನಮ್ಮ ಇಲಾಖೆಯ ಗವ್ಹರ್ನರರಾದ ಲಾರ್ಡ ಸ್ಯಾಂಢರ್ಸ್ಟ ದೊರೆಗಳು ಈ ಇಲಾಖೆಯ ರಾಜ್ಯಸೂತ್ರಗಳನ್ನು ಕಳೆದ ತಿಂಗಳ ೧೩ ನೇ ತಾರೀಖಿಗೆ ಲಾರ್ಡ ನಾರ್ಥಕೋಟ ಸಾಹೇಬರ ಕೈಯಲ್ಲಿ ಒಪ್ಪಿಸಿ ಸ್ವದೇಶಕ್ಕೆ ತೆರಳಿದರು. ಲಾರ್ಡ ಸ್ಯಾಂಢರ್ಸ್ಟ ಸಾಹೇಬರು ಬಂದ ಒಂದು ವರ್ಷದಲ್ಲಿಯೇ ಪ್ಲೇಗವೂ ಕ್ಷಾಮವೂ ಉದ್ಭವಿಸಿ, ತಮ್ಮ ಉಗ್ರಸ್ವರೂಪವನ್ನು ಪ್ರಕಟಿಸಿದವು. ಆದರಿಂದ ಈ ಇಲಾಖೆಯ ಸುಧಾರಣೆಗೆ ಬಹಳ ತೊಂದರೆಯಾಯಿತು, ಆದಾಗ್ಯೂ ನಾಮದಾರರ ಶಾಂತತೆ, ಸಮಾಧಾನ, ಸೌಜನ್ಯ, ಪ್ರಜಾವಾತ್ಸಲ್ಯ ಮುಂತಾದ ಗುಣಗಳು ಸ್ಪಷ್ಟವಾಗಿ ತೋರಿಬಂದವು. ಇವರು ಬಂದಕೂಡಲೆ ಮುಂಬಯಿ ಪಟ್ಟಣದಲ್ಲಿ ತಿರುಗಿ ಬಡ ಕೂಲಿಕಾರರಿರುವ ಸ್ಥಳಗಳನ್ನು ನೋಡಿ, ಅವರಿಗೆ ಹೆಚ್ಚು ಸುಖಕರವಾದ ಬಿಡಾರಗಳನ್ನು ದೊರಕಿಸಿಕೊಡುವದನ್ನು ನಿಶ್ಚೈಸಿ ಅದನ್ನು ಕುರಿತು ಒಳಿತಾಗಿ ಆಲೋಚನೆ

ಮಾಡಿ ತಕ್ಕ ಏರ್ಪಾಡು ಮಾಡಿದರು. ಇದಕ್ಕೆ ಹತ್ತುವ ದ್ರವ್ಯಸಹಾಯವನ್ನೂ ವರಿಷ್ಠ ಸರಕಾರದವರ ಸಹಾಯವನ್ನು ದೊರಕಿಸಿ, ತಮ್ಮ ಚಿರವಾದ ಸ್ಮಾರಕವಾದಂಥ “ಬಾಂಬೇ ಇಂಪ್ರೂವ್ಹ ಮೆಂಟಸ್ಕೀಮು” ವನ್ನು ನೆಲೆಗೊಳಿಸಿದರು. ಸದ್ಯಕ್ಕೆ ಈ ಇಲಾಖೆಯಲ್ಲಿ ಎರಡೂ ಬಾಧೆಗಳು ಒಳ್ಳೇ ಭರದಿಂದ ನಡೆದಿರುತ್ತವೆ. ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿ ರಾಜ್ಯಶಕಟವನ್ನು ಸುಸೂತ್ರವಾಗಿ ನಡಿಸಿ ಎಲ್ಲರಿಂದ ಧನ್ಯರೆಂದೆನಿಸಿಕೊಳ್ಳುವದು ಬಹು ಶ್ರಮಸಾಧ್ಯ ಕೆಲಸವಾಗಿರುವದು. ಈ ಕೆಲಸವು ಹೊಸ ಗವ್ಹರ್ನರರಾದ ಲಾರ್ಡ ನಾರ್ಥಕೋಟ ಇವರಿಂದ ಒಳಿತಾಗಿ ಆಗಲೆಂದು ನಾವು ಕೋರುತ್ತೇವೆ.

CHEMISTRY.

ರಸಾಯನಶಾಸ್ತ್ರ.

(೭೬ ನೇ ಪುಟದಿಂದ ಮುಂದೆ ಸಾಗಿದ್ದು.)

೯ ನೇ ಪಾಠವು.

ನೀರು.

೨೧. ಸಮುದ್ರದ ಉಪ್ಪು ನೀರಿಗೂ ಕೆರೆಯ ಸವಿ ನೀರಿಗೂ ಹೆಚ್ಚು ಕಡಿಮೆ ಏನು?

ಸಮುದ್ರದ ನೀರೊಳಗೆ ಉಪ್ಪು ಇರುವದರಿಂದ ಅದು ನಾಲಿಗೆಗೆ ಸೌಳು ಸೌಳಾಗಿ ಹತ್ತುತ್ತದೆ. ಈ ಮಾತು ಬಹುತರವಾಗಿ ನಿಮ್ಮೆಲ್ಲರಿಗೆ ಗೊತ್ತಿರಬಹುದು. ಉಪ್ಪನ್ನು ನೀರೊಳಗೆ ಹಾಕಿದರೂ ಅದು ಕರಗಿ, ನೀರೊಳಗೆ ಒಂದಾಗಿ ಕೂಡಿಕೊಂಡು ಆ ನೀರಿಗೆ ಕ್ಷಾರದ ರುಚಿಯನ್ನುಂಟು ಮಾಡುವದು.

ಪ್ರಯೋಗ ೨೧—ನೀರಿಗೆ ಉಗಿಯ ರೂಪವನ್ನು ಕೊಡದೆ ಅದರೊಳಗಿನ ಕ್ಷಾರತ್ವವನ್ನು ಇಲ್ಲದಂತೆ ಮಾಡಲಾಗದು. ನೀರು ಕುದಿಸಿ ಅದರ ಉಗಿಯನ್ನು ಬೇರೊಂದು ಪಾತ್ರೆಯಲ್ಲಿ ಹಿಡಿದು ತಣ್ಣಗೆ ಮಾಡಿದರೆ ಅದು ಮರಳಿ ನೀರಾಗುತ್ತದೆ.

ಆಗ ಅದರೊಳಗಿನ ಕ್ಷಾರಾಂಶವು ನಷ್ಟವಾಗುವದರಿಂದ ನೀರು ಸವಿಯಾಗುತ್ತವೆ. ಉಗಿಯು ಮರಳಿ ನೀರಾಗುವ ಪ್ರಯೋಗವನ್ನು ಸುಸಾಧ್ಯವಾಗಿ ತೋರಿಸಬಹುದು. ಒಂದು ಸೊಟ್ಟಗೋಣಿನ ಕಾಚಿನ ಪಾತ್ರೆಯನ್ನು ತಕ್ಕೊಂಡು ಅದರೊಳಗೆ ನೀರು ತುಂಬಿ ಅದರ ಬುಡದಲ್ಲಿ ಮಂದ್ರಕಾದ ದೀಪವನ್ನಿಡು. ಈ ಪಾತ್ರೆಯ ತುದಿಗೆ ಒಂದು ಹೂಜಿಯ ಆಕಾರದ ಕಾಚಿನ ಪಾತ್ರೆಯನ್ನು ಜೋಡಿಸಿ ಅದನ್ನು ಬೋಗೋಣಿಯಂಥ ಒಂದು ಕಾಚಿನ ಪಾತ್ರೆಯಲ್ಲಿಡು. ಈ ಪಾತ್ರೆಯ ಮೇಲೆ ಸತತ ಜಲಧಾರೆಯು ಬೀಳುವಂತೆ ಮಾಡು. ಹೀಗೆ ಮಾಡುವದರಿಂದ ಪಾತ್ರೆಯೊಳಗಿಂದ ಹೊರಡುವ ನೀರಿನ ಉಗಿಯು ಈ ಹೂಜಿಯ ಆಕಾರದ ಪಾತ್ರೆಯಲ್ಲಿ ಸೇರುತ್ತದೆ. ಮತ್ತು ಆ ಪಾತ್ರೆಯ ಮೇಲೆ ಬೀಳುವ ತಣ್ಣೀರಿನ ಯೋಗದಿಂದ ತಂಪಾಗಿ ಮರಳಿ ನೀರಾಗುತ್ತದೆ. ಈ ನೀರು ಶುದ್ಧವಾಗಿಯೂ ಸೀಯಾಗಿಯೂ ಇರುತ್ತವೆ. ಕ್ಷಾರಾದಿಗಳು ಘನಪದಾರ್ಥಗಳಾಗಿರುವದರಿಂದ ಸೊಟ್ಟ ಗೋಣಿನ ಪಾತ್ರೆಯ ತಳದಲ್ಲಿ ಉಳಿದು, ನೀರಷ್ಟೇ ಉಗಿಯಾಗಿ ಕೊಳವೆಯ ಮಾರ್ಗದಿಂದ ಎರಡನೇ ಪಾತ್ರೆಯೊಳಗೆ ಬರುವದು.

ಇದೇ ಮೇರೆಗೆ ಉಗಿ ಹಡಗಗಳಲ್ಲಿ ಕುಡಿಯುವ ನೀರಿನ ಸಂಗ್ರಹವು ತೀರುತ್ತಲೆ, ಸಮುದ್ರದ ಉಪ್ಪು ನೀರಿನಿಂದ ಸೀನೀರನ್ನು ಸಿದ್ಧ ಮಾಡಿಕೊಳ್ಳುತ್ತಾರೆ. ಆದರೆ ಅವರು ಉಪಯೋಗಿಸುವ ಯಂತ್ರಗಳು ಈ ಯಂತ್ರಕ್ಕಿಂತಲೂ ದೊಡ್ಡವಿರುತ್ತವೆ ಯಾಕಂದರೆ ಅಲ್ಲಿ ಪ್ರಯೋಗ ಮಾಡುವದಿರುವದಿಲ್ಲ, ಸಾವಿರಾರು ಜನರ ಪ್ರಾಣಗಳನ್ನು ರಕ್ಷಿಸುವದಿರುತ್ತದೆ. ಆದರಿಂದ ಅಲ್ಲಿ ದೊಡ್ಡ ಪ್ರಮಾಣದಿಂದಲೇ ನೀರನ್ನು ಸಿದ್ಧ ಮಾಡಬೇಕಾಗುತ್ತದೆ.

ಕೆರೆಯ ನೀರಲ್ಲಿ ಉಪ್ಪಿರುವದಿಲ್ಲೆಂತಲ್ಲ, ತೀರ ಕಡಿಮೆ ಇರುತ್ತದೆ. ಅಷ್ಟು ಅಲ್ಪ ಪ್ರಮಾಣದಿಂದ ಕೂಡಿರುವ ಉಪ್ಪನ್ನು ಗೊತ್ತು ಹಿಡಿಯುವಷ್ಟು ಶಕ್ತಿಯು ನಮ್ಮ ನಾಲಿಗೆಯಲ್ಲಿಲ್ಲ. ಆದರೆ ಶಾಸ್ತ್ರಜ್ಞರು ಅತ್ಯಲ್ಪ ಪ್ರಮಾಣದಿಂದ ಕೂಡಿರುವ ಉಪ್ಪನ್ನು ಸಹ ಗೊತ್ತು ಹಚ್ಚುವ ಯುಕ್ತಿಯನ್ನು ತೆಗೆದಿ

ದ್ದಾರೆ. ಅದರಿಂದ ನಾವು ಕೇವಲ ರಸನೇಂದ್ರಿಯವನ್ನೇ ಅವಲಂಬಿಸಿರಬೇಕಾಗಿಲ್ಲ.

೨೨. ನೀರೊಳಗೆ ಉಪ್ಪು ಉಂಟೋ ಇಲ್ಲವೋ ಎಂಬದನ್ನು ಮನಗಾಣುವ ಬಗೆ.

ಪ್ರಯೋಗ ೨೨—ಸ್ವಚ್ಛವಾದ ಹರವು ಬಾಯಿಯ ಎರಡು ಗಾಜಿನ ಪಾತ್ರೆಗಳನ್ನು ತಕ್ಕೊ. ಅವೆರಡರಲ್ಲಿಯೂ ಮಳೆ ನೀರನ್ನು ಅಥವಾ ಉಗಿಯಿಂದಾದ ನೀರನ್ನು ತುಂಬು. ಸಾಸಿವೆ ಕಾಳಿಗಿಂತ ಸಣ್ಣದಾದ ಉಪ್ಪಿನ ಹರಳನ್ನು ಒಂದರಲ್ಲಿ ಚೆಲ್ಲು. ಆ ಹರಳು ಕರಗುವವರೆಗೆ ಆ ಪಾತ್ರೆಯನ್ನು ಗಲ್ಲಿಸು. ಈಗ್ಲೋ, ಇದರೊಳಗಿನ ಒಂದು ಹನಿಯನ್ನು ನಾಲಿಗೆಯ ಮೇಲಿಟ್ಟುಕೊ. ನೀರು ಉಪ್ಪುಪ್ಪಾಗಿ ಹತ್ತುವದೋ? ಇಲ್ಲವಲ್ಲವೆ? ಉಪ್ಪು ಹಾಕಿದ್ದೆವಲ್ಲ? ಯಾಕೆ ಸೌಳು ಹತ್ತಬಾರದು? ಅದು ಬಹು ಸ್ವಲ್ಪವಿರುವದು, ನಮ್ಮ ನಾಲಿಗೆಯು ಅಷ್ಟು ತೀಕ್ಷ್ಣವಾಗಿಲ್ಲ. ಬಿಡು, ಇಗೋ ಇದು ಸಿಲ್ವರ್ ನೈಟ್ರೆಟ್ ಅಂದರೆ ಕಾಸ್ಟಿಕ್ ಎಂಬ ಪದಾರ್ಥವಿರುವದು. ಇದರ ನೀರನ್ನು ತಕ್ಕೊಂಡು ಇವೆರಡೂ ಪಾತ್ರೆಗಳಲ್ಲಿ ಮೂರು ನಾಲ್ಕು ಹನಿಗಳನ್ನು ಬಿಡು. ಅದು ನೋಡು, ಉಪ್ಪಿದ್ದ ಪಾತ್ರೆಯೊಳಗಿನ ನೀರು ಕಲಕಾಗಿ ಬುಡದಿಂದ ಬೆಳ್ಳಗಿನ ರಾಡಿ ನೀರಿನ ಪ್ರವಾಹವು ಮೇಲೆ ಹ್ಯಾಗೆ ಬರಹತ್ತಿದೆ. ಆದೀ ಎರಡನೇ ಪಾತ್ರೆಯೊಳಗಿನ ನೀರು ಇದ್ದಕ್ಕಿದ್ದಂತೆ ಅದೆ ನೋಡಿರಿ. ಸಾಮಾನ್ಯ ಜನರಿಗೆ ಅವರವರ ಇಂದ್ರಿಯದ್ವಾರದಿಂದ ತಿಳಿಯಬಾರದ ಸಂಗತಿಗಳು ಶಾಸ್ತ್ರಜ್ಞರಿಗೆ ಸುಲಭವಾಗಿ ಗೊತ್ತಾಗುತ್ತವೆ. ಪಾತ್ರೆಯೊಳಗಿನ ನೀರು ಯಾಕೆ ಕಲಕಾದವು ಎಂಬದನ್ನು ಮುಂದೆ ವಿವರಿಸುವೆವು.

೨೩. ಕರಗುವದೂ ಸ್ಫಟಿಕರೂಪವನ್ನು ಹೊಂದುವದೂ

ಉಪ್ಪಿನಂತೆ ಇನ್ನೂ ಅನೇಕ ಅಪ್ರವಾಹಿ ಪದಾರ್ಥಗಳು ನೀರಿನ ಸಂಯೋಗದಿಂದ ಕರಗುತ್ತವೆ. ಸಕ್ಕರೆ, ಹಸ್ತಕಾರ, ಫಟಕ ಇವೆಲ್ಲ ಇದೇ ವರ್ಗದವು. ಆದರೆ ಸುಣ್ಣ, ಪ್ಲಾಸ್ಟರ ಆಫ್ ಪ್ಯಾರೀಸ, ಮುಂತಾದ ಕೆಲವು ಪದಾರ್ಥಗಳು

ಆಗ ಅದರೊಳಗಿನ ಕ್ಷಾರಾಂಶವು ನಷ್ಟವಾಗುವದರಿಂದ ನೀರು ಸವಿಯಾಗುತ್ತವೆ. ಉಗಿಯು ಮರಳಿ ನೀರಾಗುವ ಪ್ರಯೋಗವನ್ನು ಸುಸಾಧ್ಯವಾಗಿ ತೋರಿಸಬಹುದು. ಒಂದು ಸೊಟ್ಟ ಗೋಣಿನ ಕಾಜಿನ ಪಾತ್ರೆಯನ್ನು ತಕ್ಕೊಂಡು ಅದರೊಳಗೆ ನೀರು ತುಂಬಿ ಅದರ ಬುಡದಲ್ಲಿ ಮದ್ಯಾರ್ಕದ ದೀಪವನ್ನಿಡು. ಈ ಪಾತ್ರೆಯ ತುದಿಗೆ ಒಂದು ಕೊಳವೆಯ ಆಕಾರದ ಕಾಜಿನ ಪಾತ್ರೆಯನ್ನು ಜೋಡಿಸಿ ಅದನ್ನು ಬೋಗೋಣಿಯಂಥ ಒಂದು ಕಾಜಿನ ಪಾತ್ರೆಯಲ್ಲಿಡು. ಈ ಪಾತ್ರೆಯ ಮೇಲೆ ಸಂತತ ಜಲಧಾರೆಯು ಬೀಳುವಂತೆ ಮಾಡು. ಹೀಗೆ ಮಾಡುವದರಿಂದ ಯಂತ್ರದೊಳಗಿಂದ ಹೊರಡುವ ನೀರಿನ ಉಗಿಯು ಈ ಕೊಳವೆಯ ಆಕಾರದ ಪಾತ್ರೆಯಲ್ಲಿ ಸೇರುತ್ತದೆ. ಮತ್ತು ಆ ಪಾತ್ರೆಯ ಮೇಲೆ ಬೀಳುವ ತಣ್ಣೀರಿನ ಯೋಗದಿಂದ ತಂಪಾಗಿ ಮರಳಿ ನೀರಾಗುತ್ತದೆ. ಈ ನೀರು ಶುದ್ಧವಾಗಿಯೂ ಸೀಯಾಗಿಯೂ ಇರುತ್ತವೆ. ಕ್ಷಾರಾದಿಗಳು ಘನಪದಾರ್ಥಗಳಾಗಿರುವದರಿಂದ ಸೊಟ್ಟ ಗೋಣಿನ ಪಾತ್ರೆಯ ತಳದಲ್ಲಿ ಉಳಿದು, ನೀರಷ್ಟೇ ಉಗಿಯಾಗಿ ಕೊಳವೆಯ ಮಾರ್ಗದಿಂದ ಎರಡನೇ ಪಾತ್ರೆಯೊಳಗೆ ಬರುವದು.

ಇದೇ ವೇಳೆಗೆ ಉಗಿ ಹಡಗಗಳಲ್ಲಿ ಕುಡಿಯುವ ನೀರಿನ ಸಂಗ್ರಹವು ತೀರುತ್ತಲೆ, ಸಮುದ್ರದ ಉಪ್ಪು ನೀರಿನಿಂದ ಸೀನೀರನ್ನು ಸಿದ್ಧ ಮಾಡಿಕೊಳ್ಳುತ್ತಾರೆ. ಆದರೆ ಅವರು ಉಪಯೋಗಿಸುವ ಯಂತ್ರಗಳು ಈ ಯಂತ್ರಕ್ಕಿಂತಲೂ ದೊಡ್ಡವಿರುತ್ತವೆ ಯಾಕಂದರೆ ಅಲ್ಲಿ ಪ್ರಯೋಗ ಮಾಡುವದಿರುವದಿಲ್ಲ, ಸಾವಿರಾರು ಜನರ ಪ್ರಾಣಗಳನ್ನು ರಕ್ಷಿಸುವದಿರುತ್ತದೆ. ಅದರಿಂದ ಅಲ್ಲಿ ದೊಡ್ಡ ಪ್ರಮಾಣದಿಂದಲೇ ನೀರನ್ನು ಸಿದ್ಧ ಮಾಡಬೇಕಾಗುತ್ತದೆ.

ಮಳೆಯ ನೀರಲ್ಲಿ ಉಪ್ಪಿರುವದಿಲ್ಲೆಂತಲ್ಲ, ತೀರ ಕಡಿಮೆ ಇರುತ್ತದೆ. ಅಷ್ಟು ಅಲ್ಪ ಪ್ರಮಾಣದಿಂದ ಕೂಡಿರುವ ಉಪ್ಪನ್ನು ಗೊತ್ತು ಹಿಡಿಯುವಷ್ಟು ಶಕ್ತಿಯು ನಮ್ಮ ನಾಲಿಗೆಯಲ್ಲಿಲ್ಲ. ಆದರೆ ಶಾಸ್ತ್ರಜ್ಞರು ಅತ್ಯಲ್ಪ ಪ್ರಮಾಣದಿಂದ ಕೂಡಿರುವ ಉಪ್ಪನ್ನು ಸಹ ಗೊತ್ತು ಹಚ್ಚುವ ಯುಕ್ತಿಯನ್ನು ತೆಗೆದಿ

ದ್ವಾರೆ. ಅದರಿಂದ ನಾವು ಕೇವಲ ರಸನೇಂದ್ರಿಯವನ್ನೇ ಅವಲಂಬಿಸಿರಬೇಕಾಗಿಲ್ಲ.

೭೭. ನೀರೊಳಗೆ ಉಪ್ಪು ಉಂಟೋ ಇಲ್ಲವೋ ಎಂಬದನ್ನು ಮನಗಾಣುವ ಬಗೆ.

ಪ್ರಯೋಗ ೨೨—ಸ್ವಚ್ಛವಾದ ಹರವು ಬಾಯಿಯ ಎರಡು ಕಾಜಿನ ಪಾತ್ರೆಗಳನ್ನು ತಕ್ಕೊ. ಅವೆರಡರಲ್ಲಿಯೂ ಮಳೆ ನೀರನ್ನು ಅಥವಾ ಉಗಿಯಿಂದಾದ ನೀರನ್ನು ತುಂಬು. ಸಾಸಿವೆ ಕಾಳಿಗಿಂತ ಸಣ್ಣದಾದ ಉಪ್ಪಿನ ಹರಳನ್ನು ಒಂದರಲ್ಲಿ ಚೆಲ್ಲು. ಆ ಹರಳು ಕರಗುವವರೆಗೆ ಆ ಪಾತ್ರೆಯನ್ನು ಗಲ್ಲಿಸು. ಇಗೋ, ಇದರೊಳಗಿನ ಒಂದು ಹನಿಯನ್ನು ನಾಲಿಗೆಯ ಮೇಲಿಟ್ಟುಕೊ ನೀರು ಉಪ್ಪುಪ್ಪಾಗಿ ಹತ್ತುವದೋ? ಇಲ್ಲವಲ್ಲವೆ? ಉಪ್ಪು ಹಾಕಿದ್ದೆವಲ್ಲ? ಯಾಕೆ ಸ್ವಾದು ಹತ್ತಬಾರದು? ಅದು ಬಹು ಸ್ವಲ್ಪವಿರುವದು, ನಮ್ಮ ನಾಲಿಗೆಯು ಅಷ್ಟು ತೀಕ್ಷ್ಣವಾಗಿಲ್ಲ. ಬಿಡು, ಇಗೋ ಇದು ಸಿಲ್ವರ್ ನೈಟ್ರೇಟ್ ಅಂದರೆ ಕಾಸ್ಟಿಕ್ ಎಂಬ ಪದಾರ್ಥವಿರುವದು. ಇದರ ನೀರನ್ನು ತಕ್ಕೊಂಡು ಇವೆರಡೂ ಪಾತ್ರೆಗಳಲ್ಲಿ ಮೂರು ನಾಲ್ಕು ಹನಿಗಳನ್ನು ಬಿಡು. ಅಗೋ ನೋಡು, ಉಪ್ಪಿನ ಪಾತ್ರೆಯೊಳಗಿನ ನೀರು ಕಲಕಾಗಿ ಬುಡದಿಂದ ಬೆಳ್ಳಗಿನ ರಾಡಿ ನೀರಿನ ಪ್ರವಾಹವು ಮೇಲೆ ಹ್ಯಾಗೆ ಬರಹತ್ತಿದೆ. ಅದೇ ಎರಡನೇ ಪಾತ್ರೆಯೊಳಗಿನ ನೀರು ಇದ್ದಕ್ಕಿದ್ದಂತೆ ಇದೆ ನೋಡಿರಿ. ಸಾಮಾನ್ಯ ಜನರಿಗೆ ಅವರವರ ಇಂದ್ರಿಯದ್ವಾರದಿಂದ ತಿಳಿಯಬಾರದ ಸಂಗತಿಗಳು ಶಾಸ್ತ್ರಜ್ಞರಿಗೆ ಸುಲಭವಾಗಿ ಗೊತ್ತಾಗುತ್ತವೆ. ಪಾತ್ರೆಯೊಳಗಿನ ನೀರು ಯಾಕೆ ಕಲಕಾದವು ಎಂಬದನ್ನು ಮುಂದೆ ವಿವರಿಸುವೆವು.

೭೮. ಕರಗುವದೂ ಸ್ಫಟಿಕರೂಪವನ್ನು ಹೊಂದುವದೂ

ಉಪ್ಪಿನಂತೆ ಇನ್ನೂ ಅನೇಕ ಅಪ್ರವಾಹಿ ಪದಾರ್ಥಗಳು ನೀರಿನ ಸಂಯೋಗದಿಂದ ಕರಗುತ್ತವೆ. ಸಕ್ಕರೆ, ಹಪ್ಪಳಖಾರ, ಫಟಕ ಇವೆಲ್ಲ ಇದೇ ವರ್ಗದವು. ಆದರೆ ಸುಣ್ಣ, ಪ್ಲಾಸ್ಟರ ಆಫ್ ಪ್ಯಾರೀಸ, ಮುಂತಾದ ಕೆಲವು ಪದಾರ್ಥಗಳು

ಅಂಶತಃ ಕರಗುತ್ತವೆ; ಉಸುಬು, ಪಿಷ್ಟ ಮುಂತಾದವುಗಳು ಕರಗುವದೇ ಇಲ್ಲ.

ಪ್ರಯೋಗ ೨೩—ಎರಡು ಔಂಸಿನಷ್ಟು ಹಪ್ಪಳಕಾರದ ಹರಳನ್ನು ತೆಕ್ಕೊಂಡು ಒಂದು ಕಾಜಿನ ಪಾತ್ರೆಯಲ್ಲಿ ಹಾಕಿ ಒಂದು ಔಂಸ ಕುದಿಯುವ ನೀರನ್ನು ಅದರೊಳಗೆ ಸುರುವು ಬಳಿಕ ಕಟ್ಟಿಗೆಯಿಂದ ಅವೆರಡೂ ಕೂಡುವಂತೆ ಬಳಿತಾಗಿ ತಿರವು. ತುಸು ಹೊತ್ತಿನಲ್ಲಿ ಅವೆಲ್ಲ ಹರಳುಗಳು ಕರಗಿ ನೀರಾಗುವವು. ಬಳಿಕ ಕೆಲಹೊತ್ತು ಬಿಡಲು, ಆ ಮಿಶ್ರಣವು ಆರುತ್ತ ನಡೆದಂತೆ ಆ ಪಾತ್ರೆಯ ಒಳಮಗ್ಗಲಿಗೆಲ್ಲ ಹಪ್ಪಳಕಾರದ ಲಕ ಲಕ ಹೊಳೆಯುವ ಕಣಗಳು ಕಾಣಹತ್ತುವವು. ಈ ಒಂದೊಂದು ಕಣಕ್ಕೆ ಸ್ಫಟಿಕವೆಂಬ ಹೆಸರು. ಆ ಎಲ್ಲ ದ್ರವವು ಘಟ್ಟಿಯಾಯಿತೆಂದರೆ ಸ್ಫಟಿಕರೂಪವನ್ನು ಹೊಂದಿತೆಂದು ಹೇಳುತ್ತಾರೆ. ಸ್ಫಟಿಕಗಳಲ್ಲಿ ಕೆಲವು ಸಣ್ಣವೂ ಕೆಲವು ದೊಡ್ಡವೂ ಇದ್ದರೂ ಬಹುತರವಾಗಿ ಅವೆಲ್ಲ ಒಂದೇ ತರದ ಆಕಾರವುಳ್ಳವಿರುತ್ತವೆ.

ಫಟಿಕದ ದ್ರವವನ್ನು ಆರಿಸಿ ಘಟ್ಟಿಯಾಗಗೊಟ್ಟರೆ ಸ್ಫಟಿಕಗಳಾಗುತ್ತವೆಂದು ಮೇಲೆ ಹೇಳಿದ್ದೇವೆ ಅದರಂತೆ ತುತ್ಥವು ಸಹ ಸ್ಫಟಿಕರೂಪ ಹೊಂದುತ್ತದೆ. ಈ ಬಗೆಯಾಗಿ ಸ್ಫಟಿಕರೂಪವನ್ನು ಹೊಂದುವ ಹಪ್ಪಳಕಾರ, ಫಟಿಕ, ತುತ್ಥಗಳಿಂದ ಉಂಟಾಗುವ ಸ್ಫಟಿಕಗಳು ಒಂದೇ ತರದ ಆಕಾರದವಿರುವದಿಲ್ಲ. ಬೇರೆ ಬೇರೆ ಆಕಾರದವಿರುತ್ತವೆ.

ಪ್ರಯೋಗ ೨೪—ಒಂದು ಔಂಸ ಫಟಿಕದ ಪುಡಿಯನ್ನು ಅಷ್ಟೇ ತುತ್ಥದ ಪುಡಿಯಲ್ಲಿ ಕೂಡಿಸಿ, ಕಲಬತ್ತಿನಲ್ಲಿ ಸಣ್ಣಾಗಿ ಅರಿ. ಬಳಿಕ ಅದರೊಳಗೆ ಒಂದು ಔಂಸ ಬಿಸಿ ನೀರನ್ನು ಹಾಕು. ಆ ದ್ರವವು ಆರುವವರೆಗೆ ಸ್ವಸ್ಥ ಕೂತುಕೊಂಡು ಇವೆರಡೂ ಕ್ಷಾರಗಳು ತಮ್ಮತಮ್ಮೊಳಗೆ ಹ್ಯಾಗೆ ಬೇರೆಯಾಗುತ್ತವೆಂಬದನ್ನು ಸೂಕ್ಷ್ಮರೀತಿಯಿಂದ ನೋಡು. ಅಗೋ ಫಟಿಕದ ವರ್ಣಹೀನವಾದ ಸ್ಫಟಿಕಗಳು ಒತ್ತಟ್ಟಿಗೆ, ತುತ್ಥದ ನೀಲವರ್ಣದ ಸ್ಫಟಿಕಗಳು ಮತ್ತೊತ್ತಟ್ಟಿಗೆ ಜಮೆಯಾಗಿ

ರುತ್ತವೆ. ಇವೆರಡೂ ಜಾತಿಯ ಸ್ಫಟಿಕಗಳು ಒಂದಕ್ಕೊಂದು ತೀರ ಹತ್ತರದಲ್ಲಿದ್ದರೂ ಒಂದರ ಕಣಗಳು ಮತ್ತೊಂದರಲ್ಲಿ ಕೂಡಿಲ್ಲ. ಸ್ಫಟಿಕರೂಪವನ್ನು ಹೊಂದುವದರಿಂದ ಭೂಗರ್ಭದೊಳಗಿನ ಬಗೆ ಬಗೆಯ ಕ್ಷಾರಗಳೂ ಭಿನ್ನ ಭಿನ್ನ ಧಾತುಗಳೂ ತಮಗೆ ತಾವೇ ಬೇರೆ ಬೇರೆಯಾಗುತ್ತವೆ. ಚಕಮುಕಿಯಕಲ್ಲು, ಗಾರಗಲ್ಲು, ಸುಣ್ಣದ ಹರಳು, ರಂಗೋಲಿಯ ಹರಳು, ಬೇರೆ ಬೇರೆ ಬಣ್ಣದ ರತ್ನಗಳು ಇವೆಲ್ಲ ಭೂಗರ್ಭದೊಳಗೆ ಸ್ಫಟಿಕರಚನಾ ಧರ್ಮದಿಂದಲೆ ಬೇರೆ ಬೇರೆಯಾಗಿರುತ್ತವೆ. ಆದರೆ ಇವುಗಳ ಘಟಕಗಳ್ಯಾವವು? ಇವು ಹ್ಯಾಗೆ ಸಿದ್ಧವಾಗುವವು? ಎಂಬದನ್ನು ತಪ್ಪದೆ ಹೇಳುವದು ಅಸಾಧ್ಯವು. ಆದರೂ ಭೂಗರ್ಭದೊಳಗಿನ ಪದಾರ್ಥಗಳನ್ನು ವಿಂಗಡಿಸಲಿಕ್ಕೆ ಬೇಕಾಗುವ ಅನೇಕ ಕಾರಣಗಳಲ್ಲಿ ಸ್ಫಟಿಕರಚನಾಧರ್ಮವು ಒಂದು ಬಲವಾದ ಕಾರಣವಿರುತ್ತದೆಂದು ನಿರ್ವಿವಾದವಾಗಿ ಹೇಳಬಹುದು.

FIGURES OF SPEECH.

ಅಲಂಕಾರಗಳು.

(೭೮ ನೇ ಪುಟದಿಂದ ಮುಂದೆ ಸಾಗಿದ್ದು.)

ಸಮಾಸೋಕ್ತಿ ಅಲಂಕಾರವು. ಲಕ್ಷಣ— ಪ್ರಸ್ತುತವು ವರ್ಣಿಸಲ್ಪಟ್ಟರೆ ಅಪ್ರಸ್ತುತ ವಸ್ತುವಿನ ಪರಿಸ್ಫೂರ್ತಿಯಾಗುತ್ತದೆ ಇದು ಸಮಾಸೋಕ್ತಿ. ಉ.

ಆರ್ಯಾರ್ಧ— ಐಂದ್ರಿಯ ಮೊಗವನು ನೋಡೈ ।
ಚಂದ್ರನು ಚುಂಬಿಪ ನಿವಂ ಕರಂ ರಕ್ತಂ ॥

ಅರ್ಥ—ಇಂದ್ರನ ಸಂಬಂಧಿಯಾದ ಪೂರ್ವದಿಕ್ಕಿನ ಮುಖವನ್ನು ಚಂದ್ರನು ಚೆನ್ನಾಗಿ ಚುಂಬಿಸುವನು ಹೀಗೆ ಚಂದ್ರೋದಯದ ವರ್ಣನೆ ಇದ್ದಾಗ ಹಲವು ಸಾಮಾನ್ಯ ವಿಶೇಷಣದ ಪದಗಳ ಸಾಮ್ಯದ ಮೂಲಕ, ಅಪ್ರಸ್ತುತವಾದ ಪರವನಿತಾಸಕ್ತ ಪುರುಷನ ವೃತ್ತಾಂತವು ಭಾಸವಾಗುತ್ತದೆ. ಹ್ಯಾಗಂದರೆ ಮುಖಶಬ್ದವು ಪೂರ್ವದಿಕ್ಕಿನ ಪ್ರಾರಂಭಕ್ಕೂ

ಜೇವನಕ್ಕೂ ಸಾಧಾರಣವಿದೆ. ರಕ್ತ ಶಬ್ದವು ಅರುಣ, ಕಾಮುಕ ಶಬ್ದಗಳಿಗೆ ಸಾಮಾನ್ಯವಿದೆ. ಚಂದ್ರಶಬ್ದದಿಂದ ಪುಂಸ್ತ್ವನಿರ್ದೇಶವಾಗುತ್ತದೆ. ಐಂದ್ರಿಯುಶಬ್ದದಿಂದ ಸ್ತ್ರೀತ್ವನಿರ್ದೇಶವಾಗುತ್ತದೆ. ಇವುಗಳ ಮೇಲಿಂದ ಅಪ್ರಸ್ತುತ ಪರವನಿತಾಸಕ್ತ ಪುರುಷವೃತ್ತಾಂತವು ಭಾಸವಾಗುತ್ತದೆ. ಇದಕ್ಕೆ ಇನ್ನೊಂದುದಾಹರಣೆ—ವಾರ್ಧಿಕಷಟ್ಪದಿ.

ಸಂಚಲಿಸುವಾ ಘೋರಕುಚಯುಗ್ಮಭಾರದಿಂ ।
ಸಂಚಲಿಪ ಪರ್ಯಸ್ತಕೇಶಗಳ ವೃಂದದಿಂ ।
ಚಂಚಲಿಪಹಾರದಿಂ ನವರತ್ನರಾಜಿತ ಸುಗಂಡಕುಂಡಲಯುಗ್ಮದಿಂ ॥
ಸಂಚಿತಪ್ರಸ್ವೇದ ಬಿಂದು ವಕ್ತ್ರಾಬ್ಜದಿಂ ।
ಮಿಂಚುವೃತ್ತಮುಕರದ ತಾಡನದಲ್ಲೈದೆವಲ ।
ಯಾಂಚಿತದ ಮೋದದಿಂ ಸೇವಿಸಲ್ಪಡುವಿನೀ ಕಂದುಕವೆ ಪುಣ್ಯಾತ್ಮನು ॥

ಅರ್ಥ—ನಾಯಿಕಾನುರಕ್ತನಾದ ಒಬ್ಬ ವಿಟನು ತನ್ನ ಪ್ರಿಯಳು ಆಡುವ ಕಂದುಕವನ್ನು ವರ್ಣಿಸುತ್ತಾನೆ. ಎಲೈ ಕಂದುಕವೇ, ಈ ಸುಂದರಿಯಿಂದ ನಾನಾವಿಧವಾಗಿ ನೀನು ಸೇವಿಸಲ್ಪಡುವಿ, ಆದ್ದರಿಂದ ನೀನೇ ಧನ್ಯನು ಹ್ಯಾಗಂದರೆ ಚಂಡಾಡುವ ಕಾಲಕ್ಕೆ ದೊಡ್ಡವಾದ ಹಾಗೂ ಕಠಿಣವಾದ ಸ್ತನಗಳು ಈ ಕಡೆಗೂ ಆ ಕಡೆಗೂ ಒಲಿದಾಡುತ್ತಿದ್ದವು. ಹೆಳಲು ಬಿಚ್ಚಿ ಕೂದಲುಗಳು ಹರಿವಿದ್ದವು. ಕೊರಳೊಳಗಿನ ಹಾರವು ಅಸ್ತವ್ಯಸ್ತವಾಗಿತ್ತು. ಕರ್ಣಕುಂಡಲುಗಳು ಅಗಳಾಡುತ್ತಿದ್ದವು. ಮೋರೆಯು ಮೇಲೆ ಬೆವರಿನ ಹನಿಗಳಿದ್ದವು. ಕಡಗದಿಂದ ಕೈಯು ಅಲಂಕೃತವಾಗಿತ್ತು.

ಇದರಿಂದ ವಿಪರೀತ ಕ್ರೀಡಾಸಕ್ತ ಪುರುಷನ ವೃತ್ತಾಂತವು ತೋರುತ್ತದೆ. ಸಾರೂಪ್ಯದಿಂದಲೂ ಈ ಅಲಂಕಾರವಾಗುತ್ತದೆ. ಉ— ಶಾ. ವಿ. ವ್ಯ.

ಎಲ್ಲಿತ್ತೋ ನದಿಯ ಪ್ರವಾಹ ಪುಲಿನಂತಾ ತೋರ್ಪುದಲ್ಲೀಗದು । ಎಲ್ಲಿತ್ತು ವೃಕ್ಷಚಯಂಗಳ್ಕೆದೆ ಘನತಾವ್ಯೆರಲ್ಯನ್ನೆ ತೋರ್ಪುದು ॥ ಅಲ್ಲೀಗ್ಗೈಚರಿಸಲ್ ವನಂ ಬಹುದಿನಂ ಪೋಗಲ್ಕೆ

ಮತ್ತೊಂದರಂ। ತೆತ್ಲೇ ಶೈಲನಿವೇಶವೈ ವನದ ಚಿನ್ಹಂದೋ
ಪುಟ್ಟಿಸೆ ಪೂರ್ವದ ॥

ಅರ್ಥ— ಉತ್ತರರಾಮಚರಿತ್ರದಲ್ಲಿ ಸೀತಾತ್ಯಾಗಾನಂತರ ಬಂದಾನೊಂದು ಕಾಲದಲ್ಲಿ ವನಕ್ಕೆ ಬಂದ ರಾಮಚಂದ್ರನು ಅಂದದ್ದು—ಪೂರ್ವದಲ್ಲಿ ನದಿಯ ಪ್ರವಾಹವು ಎಲ್ಲಿತ್ತೋ ಅಲ್ಲಿ ಈಗ ಉಸುಬು ಅದೆ. ಎಲ್ಲಿ ನಿಬಿಡವಾಗಿ ಗಿಡಗಳಿದ್ದವೋ ಅಲ್ಲಿ ಬೈಲು ಕಾಣಿಸುತ್ತದೆ. ಬೈಲು ಇದ್ದಲ್ಲಿ ಈಗ ಗಿಡಗಳು ಅವೆ. ಬಹಳ ದಿವಸಗಳಾದ್ದರಿಂದ ಈ ವನವು ಮತ್ತೊಂದರಂತೆ ತೋರುವದು; ಆದರೆ ಶೈಲಗಳ ನಿವೇಶದಿಂದ ಪೂರ್ವದಲ್ಲಿ ಕಂಡ ವನವೇ ಇದು ಮತ್ತೊಂದಲ್ಲ ಹೀಗೆ ತಿಳಿಯಬರುವದು. ಇದು ಸಾರೂಪ್ಯಸಮಾಸೋಕ್ತಿ.

THE PHILOSOPHY OF EDUCATION.

ಶಿಕ್ಷಣಶಾಸ್ತ್ರ.

(೪೩ನೇ ಪುಟದಿಂದ ಮುಂದೆ ಸಾಗಿದ್ದು.)

೮ನೇ ಪ್ರಕರಣ.

ಶಿಕ್ಷಣಪದ್ಧತಿಗಳೂ ಕ್ರಮಗಳೂ.

ವಿಷಯವನ್ನು ಕಲಿಸುವ ವಿಶಿಷ್ಟವಾದ ಮಾರ್ಗಕ್ಕೆ ಶಿಕ್ಷಣಪದ್ಧತಿಯೆಂಬ ಹೆಸರು ಶಾಲೆಯಲ್ಲಿ ಶಿಕ್ಷಣದ ಕೆಲಸ ನಡಿಸಲಿಕ್ಕೆ ಗೊತ್ತುಮಾಡಿದ ವರ್ಗೀಕರಣ, ವೇಳಾಪತ್ರಕ ಮುಂತಾದ ಯಾವತ್ತು ಸಾಹಿತ್ಯಗಳಿಂದ ಕೂಡಿಕೊಂಡಂಥ ಕಲಿಸುವ ವ್ಯವಸ್ಥೆಗೆ ಶಿಕ್ಷಣಕ್ರಮವೆಂಬ ಹೆಸರು.

ವಿವಕ್ಷಿತ ಉದ್ದೇಶದಿಂದ ಪ್ರಯೋಗಿಸಲ್ಪಡುವ ಪದ್ಧತಿಯೇ ಶಿಕ್ಷಣಕ್ರಮವೆನಿಸುವದು.

ಶಿಕ್ಷಣಪದ್ಧತಿ ಎಂದರೆ ವಿಷಯವಿವರಣ ಸ್ವರೂಪವೆಂದು ಕೆಲ ಜನರ ಅಭಿಪ್ರಾಯವು ಉಂಟು. ಈ ಅಭಿಪ್ರಾಯದ ಮೇರೆಗೆ ಪೃಥಕ್ಕರಣಪದ್ಧತಿ, ಏಕೀಕರಣಪದ್ಧತಿಗಳೆಂಬೆರಡು ಪದ್ಧತಿಗಳು ಮಾತ್ರ ಸೂಚಿತವಾಗುತ್ತವೆ. ಆದರೆ ಈ ಅಭಿಪ್ರಾಯವು ತೀರ ಆಕುಂಚಿತವಾದದ್ದು. ವಿಚಾರಿಸಿ ನೋಡಿದರೆ ಪದ್ಧತಿಯೆಂಬ ಸಂಜ್ಞೆಯಿಂದ ಕೇವಲ ವಿಷಯೋದ್ಘಾಟನ

ಟ ಮಾರ್ಗವು ಸೂಚಿತವಾಗುವದಲ್ಲದೆ ವಿಷಯ ವಿವರಣಕ್ಕೆ ಅವಶ್ಯವಾದ ಸುಲಭಭಾಷೆಯೂ ದೃಷ್ಟಾಂತಗಳೂ ಪ್ರಯೋಗಗಳೂ ಸಂಕ್ಷೇಪತಃ ಹಂಚಿಕೆಗಳೂ ಸೂಚಿತವಾಗುತ್ತವೆ. ಈ ಅರ್ಥದಿಂದ ನೋಡಿದರೆ ಸಣ್ಣ ದೊಡ್ಡ ಎಂಟು ಪದ್ಧತಿಗಳು ಫಲಿತವಾಗುತ್ತವೆ. ಅವುಗಳಲ್ಲಿ ಮೊದಲನೆಯದು (೧) ಏಕೀಕರಣಪದ್ಧತಿಯು. ಯಾವದೊಂದು ವಿಷಯದ ಭಾಗಗಳನ್ನು ಹೊಂದಿಸುತ್ತ ಇಡೀ ವಿಷಯಕ್ಕೆ ಸಾಗುವದೇ ಏಕೀಕರಣಪದ್ಧತಿಯು ಇದೇ ಇಂಡಕ್ಶನ್ (ವ್ಯಾಪ್ತಿಸಿದ್ಧ) ಪದ್ಧತಿಯು. ಇದರಲ್ಲಿ ವಿಶೇಷ ನಿಯಮಗಳಿಂದ ಸಾಮಾನ್ಯಸಿದ್ಧಾಂತವು ಸ್ಥಾಪಿಸಲ್ಪಡುವದು.

ಹೈದ್ರೋಜನದ ಜ್ವಾಲೆಯಮೇಲೆ ಒಂದು ಗ್ಲಾಸವನ್ನು ಹಿಡಿದು ಅದರಲ್ಲಿ ಜಮೆಯಾಗುವ ನೀರಿನ ಬಿಂದುಗಳಿಂದಲೂ, ವಿದ್ಯುಲ್ಲತೆಯ ಸಹಾಯದಿಂದ ಹೈದ್ರೋಜನ, ಆಕ್ಸಿಜನಗಳ ಮಿಶ್ರಣ ಮಾಡುವದರಿಂದಲೂ, ನೀರಿನ ಘಟಕಗಳನ್ನು ತೋರಿಸುವ ಪದ್ಧತಿಯೇ ಏಕೀಕರಣಪದ್ಧತಿಯು. ಅದೇ ಪ್ರಕಾರ ಅಂಕಗಣಿತದಲ್ಲಿ ಯಾವದೊಂದು ಲೆಕ್ಕವನ್ನು ಕ್ರಮಶಃ ಗೊತ್ತಿದ್ದ ನಿಯಮಗಳಿಗನುಸಾರವಾಗಿ ಮಾಡಿ ಹೊಸ ನಿಯಮಗಳನ್ನು ಸ್ಥಾಪಿಸುವದೇ ಈ ಪದ್ಧತಿಯ ಭೇದಕಲಕ್ಷಣವು. ಬುದ್ಧಿವಂತನಾದ ಶಿಕ್ಷಕನು ಈ ಪದ್ಧತಿಯನ್ನು ಕೈಕೊಂಡು ವಿಚಾರದಿಂದ ವಿಚಾರವನ್ನು ಸಂಗ್ರಹಿಸುತ್ತ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಯನ್ನು ಮಾಡುವನು. ಶಿಲ್ಪಿಗನು ಕಲ್ಲಮೇಲೆ ಕಲ್ಲು, ತೊಲೆಯಮೇಲೆ ತೊಲೆಯನ್ನು ವಿಧಾನಪೂರ್ವಕವಾಗಿ ರಚಿಸಿ ಭವ್ಯವೂ ಸುಂದರವೂ ಆದ ಇಮಾರತಿಯನ್ನು ಹ್ಯಾಗೆ ರಚಿಸುವನೋ ಅದೇ ಮೇರೆಗೆ ಈ ಪದ್ಧತಿಯಿಂದ ಶಿಕ್ಷಕನು ವಿದ್ಯಾರ್ಥಿಗಳಿಗೆ ತಕ್ಕ ಸಂಗತಿಗಳನ್ನು ಯಥಾಕಾಲದಲ್ಲಿ ತಿಳಿಸಿ ಕೇಳಿ ಅವರನ್ನು ಜ್ಞಾನಸಂಪನ್ನರನ್ನು ಮಾಡುವನು ಈ ಪದ್ಧತಿಗೆ ಪ್ರಕಲ್ಪಕಪದ್ಧತಿಯೆಂದರೂ ಸಲ್ಲುವದು. ಇದಕ್ಕೆ ಸೂಚಕಪದ್ಧತಿಯೆಂದರೂ ತಪ್ಪಾಗಲಾರದು. ಮುಖ್ಯವಾಗಿ ಗೊತ್ತಿದ್ದದರಿಂದ ಗೊತ್ತಿಲ್ಲದ್ದನ್ನು ಹೇಳುತ್ತಾ ಸುಲಭ ಸಂಗತಿಯಿಂದ ಕಠಿಣ ಸಂಗತಿಯ

ನ್ನು ತಿಳಿಯಹೇಳಕೊಡುತ್ತಾ ಸಾಗುವದು ಈ ಪದ್ಧತಿಯ ಲಕ್ಷಣವಾದ್ದರಿಂದ ಇದು ಬಹು ಪ್ರಯೋಜನಕರವಾಗಿರುವದು. ಈ ಪದ್ಧತಿಯಿಂದಲೇ ಸಾಗಿದದರಿಂದ ಅನೇಕ ಹೊಸ ಹೊಸ ಶೋಧಗಳು ಆಗಿವೆ. ಹೊಸ ಶೋಧಗಳಿಗೆ ಅನುಕೂಲಿಸುವ ಪದ್ಧತಿಯು ವಿವರಣಕ್ಕಾದರೂ ಅನುಕೂಲಿಸುವದು ಎಂಬ ಮಾತು ನಿರ್ವಿವಾದವಾದದ್ದು. ಆ ಮಾತಿಗನುಸಾರವಾಗಿ ಈ ಪದ್ಧತಿಯನ್ನು ಸಣ್ಣ ಹುಡುಗರ ಶಿಕ್ಷಣದಲ್ಲಿ ಅವಲಂಬಿಸುವದು ವಿಹಿತವು. ಪ್ರಾಥಮಿಕ ಶಿಕ್ಷಣದಲ್ಲಂತು ಇದು ಬಹಳ ಮಹತ್ವದ್ದು.

೨. ಪೃಥಕ್ಕರಣ ಪದ್ಧತಿ:—ಶಿಕ್ಷಣದಲ್ಲಿ ಅತಿ ಪ್ರಯೋಜನಪ್ರದ ಎರಡನೇ ಪದ್ಧತಿಗೆ ಪೃಥಕ್ಕರಣಪದ್ಧತಿ ಎಂಬ ಹೆಸರು. ಈ ಪದ್ಧತಿಯನ್ನು ಕೈಕೊಂಡ ಮಾಸ್ತರನು ಮುಖ್ಯ (ಇಡೀ) ವಿಷಯದಿಂದ ಅದರ ಭಾಗಪ್ರಭಾಗಗಳಿಗೆ ಸಾಗುವನು. ಈ ಪದ್ಧತಿಯು ಡಿಡಕ್‌ಶನ್‌ಪದ್ಧತಿ ಅಂದರೆ ಮುಖ್ಯ ಸಿದ್ಧಾಂತದಿಂದ ವಿಶೇಷ ನಿಯಮಗಳಿಗೆ ಸಾಗುವ ಪದ್ಧತಿಯು. ವಾಲ್ಟಾಯಿಕ್‌ಬ್ಯಾಟರಿಯ ಸಹಾಯದಿಂದ ನೀರಿನ ಪೃಥಕ್ಕರಣ ಮಾಡಿ ಒಂದು ಸೀಸೆಯಲ್ಲಿ ಹೈಡ್ರೋಜನವೂ, ಮತ್ತೊಂದು ಸೀಸೆಯಲ್ಲಿ ಆಕ್ಸಿಜನವೂ ಜಮೆಮಾಡಿ ತೋರಿಸುವದೇ ಈ ಪದ್ಧತಿಯ ಪ್ರಯೋಗವು. ಗಣಿತದಲ್ಲಿಯ ಯಾವದೊಂದು ನಿಯಮವನ್ನು ತಿಳಿಸಿಕೊಟ್ಟು ಆ ನಿಯಮಕ್ಕೆ ತಾಗಿದ ಉದಾಹರಣೆಗಳನ್ನು ಹೇಳುವದೇ ಈ ಪದ್ಧತಿಯು. ಯಾವದೊಂದು ತತ್ವವನ್ನು ದೃಷ್ಟಾಂತಿಸುವದೇ ಈ ಪದ್ಧತಿಯ ಸ್ವರೂಪವು. ಈ ಪದ್ಧತಿಯನ್ನಾದರೂ ಕೆಲಕೆಲವು ಪ್ರಸಂಗಗಳಲ್ಲಿ ಬಹಳ ಪ್ರಯೋಜನಕರವಾಗಿ ಪ್ರಾಥಮಿಕ ಶಿಕ್ಷಣದಲ್ಲಿ ಉಪಯೋಗಿಸಬಹುದು.

ಏಕೀಕರಣ ಪೃಥಕ್ಕರಣ ಪದ್ಧತಿಗಳಲ್ಲೊಂದನ್ನು ಕೈಕೊಂಡು ಶಿಕ್ಷಕನು ಕಲಿಸುವನು. ಆದರೆ ಇದರಲ್ಲಿಯಾದರೂ ಎರಡು ಒಳಭೇದಗಳುಂಟು. (೧) ಪ್ರಯೋಗದೃಷ್ಟ ಅಥವಾ ಸಪ್ರಮಾಣ ಮಾರ್ಗ. (೨) ವಿಶ್ವಾಸದೃಷ್ಟ ಅಥವಾ ನಿರ್ದೇಶಿತ ಮಾರ್ಗ.

ಮೊದಲನೇ (ಪ್ರಯೋಗದೃಷ್ಟ) ಮಾರ್ಗವನ್ನು ಕೈಕೊಂಡು ಶಿಕ್ಷಕನು ವಿದ್ಯಾದಾನದ (ಜ್ಞಾನಾಭಿವೃದ್ಧಿಯ) ಕೆಲಸವನ್ನು ಸಾಗಿಸಲಾಗಿ ವಿದ್ಯಾರ್ಥಿಗಳ ನಿರೀಕ್ಷಣಶಕ್ತಿಯನ್ನೂ ವಿಚಾರಶಕ್ತಿಯನ್ನೂ ಬೆಳಿಸುವನು. ವಿದ್ಯಾರ್ಥಿಗಳಿಗೆ ಈ ಪ್ರಸಕ್ತಿಯಲ್ಲಿ ಹೇಳಿದ ಸಂಗತಿಯನ್ನು ಕಣ್ಣಾರೆ ಕಂಡು ಅಥವಾ ಸಿದ್ಧಪಡಿಸಿ ಮನಗಾಣುವ ಅನುಕೂಲವುಂಟು. ಎರಡನೇ ಮಾರ್ಗದಿಂದ ಸಾಗಲಾಗಿ ವಿದ್ಯಾರ್ಥಿಗಳ ನಿಷ್ಠೆಯನ್ನೂ ಸ್ಮರಣಶಕ್ತಿಯನ್ನೂ ಅವಲಂಬಿಸಬೇಕಾಗುವದು. ಯಾಕೆಂದರೆ ಈ ಪ್ರಸಕ್ತಿಯಲ್ಲಿ ಮಾಸ್ತರರ ಹೇಳಿಕೆಯ ಹೊರತು ಮನಗಾಣಲಿಕ್ಕೆ ಬೇರೆ ಯಾವ ಆಧಾರವೂ ಇರುವದಿಲ್ಲ.

ಪ್ರಯೋಗದೃಷ್ಟಪದ್ಧತಿಯಲ್ಲಿ ಕಲಿಸುವ ಯಾವತ್ತು ಹಂಚಿಕೆಗಳು ಸೇರುತ್ತವೆ. ವಿಶ್ವಾಸದೃಷ್ಟಪದ್ಧತಿಯಲ್ಲಿ ಜ್ಞಾನಸಂಕ್ರಮಣದ ತತ್ವಗಳ ಹಾಗು ತತ್ವವಿವೇಚನಗಳ ಸ್ಥಳವನ್ನು ನಿಯಮಗಳೂ ಮಂತ್ರಗಳೂ ಆಕ್ರಮಿಸುತ್ತವೆ.

ಜ್ಞಾನಸಂಕ್ರಮಣದ ಅಥವಾ ಕಲಿಸುವದರ ಈ ಸಾಮಾನ್ಯಪದ್ಧತಿಗಳ ಹೊರತು ವಿಷಯವನ್ನು ಕಲಿಸುವ ಯೋಜನ ಸಂಬಂಧದ ಕೆಲವು ಪದ್ಧತಿಗಳುಂಟು ಅವು ಯಾವವೆಂದರೆ-

೧. ಪ್ರಶ್ನಪದ್ಧತಿಯು— ಪ್ರಶ್ನಗಳೂ ಉತ್ತರಗಳೂ ಈ ಪದ್ಧತಿಯ ಮುಖ್ಯಾಂಶಗಳು. ಕಲಿಸಿದ್ದನ್ನು ಒಪ್ಪಿಸಿಕೊಳ್ಳಲಿಕ್ಕೂ ಅಥವಾ ಸೂಚಕ ಪ್ರಶ್ನಗಳಿಂದ ಕಲಿಸಲಿಕ್ಕೂ ಈ ಪದ್ಧತಿಯನ್ನು ಉಪಯೋಗಿಸಬಹುದು.

೨. ಪೂರಣಪದ್ಧತಿ—ಇದು ಪ್ರಶ್ನಪದ್ಧತಿಯ ಒಂದು ಭಾಗವು. ಶಿಕ್ಷಕನು ಕಲಿಸುವಾಗ ಬುದ್ಧಿಪೂರ್ವಕವಾಗಿ ಹೇಳದೆಬಿಟ್ಟಂಥ ಕೆಲವು ಶಬ್ದಗಳನ್ನು ಪೂರೈಸುವದೇ ಈ ಪದ್ಧತಿಯ ಮರ್ಮವು. ವಿದ್ಯಾರ್ಥಿಗಳಿಗೂ ಶಿಕ್ಷಕನಿಗೂ ನಡೆಯುವ ಸಂಭಾಷಣರೂಪದ ವ್ಯವಹಾರವನ್ನೇ ಈ ಎರಡೂ ಪದ್ಧತಿಗಳು ಸೂಚಿಸುತ್ತವೆ.

೩. ಸಾಮೂಹಿಕ ಪದ್ಧತಿ— ಈ ಪದ್ಧತಿಯಲ್ಲಿ ಮಾಸ್ತರನ ಪ್ರಶ್ನಗಳಿಗೆ ಎಲ್ಲ ವಿದ್ಯಾರ್ಥಿಗಳು (ವಿದ್ಯಾರ್ಥಿಗಳಲ್ಲಿ ಬೇಕಾದವರು) ಉತ್ತರ ಕೊಡುವರು. ಪ್ರಯೋಗದೃಷ್ಟ ಪದ್ಧತಿ

ನಲ್ಲಿ ಈ ಸಾಮೂಹಿಕಪದ್ಧತಿಯನ್ನು ಉಪಯೋಗಿಸಬಹುದು.

೬. ಸದೃಷ್ಟಾಂತಪದ್ಧತಿಯು— ಶಿಕ್ಷಕನು ವಿಷಯವನ್ನು ಉದಾಹರಣೆ (ದೃಷ್ಟಾಂತ) ಗಳ ಮುಖಾಂತರವಾಗಿ ಇಂದ್ರಿಯಗಳಿಗೂ ಕಲ್ಪನಾಶಕ್ತಿಗೂ ಚಾಲನೆ ಕೊಟ್ಟು ತಿಳಿಸುವನು. ವ್ಯಾಕರಣ ಕಲಿಸುವಾಗ ಅಥವಾ ಕಾಯಿದೆಗಳನ್ನು ಕಲಿಸುವಾಗ ಈ ಪದ್ಧತಿಯು ಉಪಯೋಗವಾಗುತ್ತದೆ.

೭ ವ್ಯಾಖ್ಯಾನಪದ್ಧತಿಯು— ಇದರಲ್ಲಿ ಶಿಕ್ಷಕನು ಯಾವದೊಂದು ವಿಷಯವನ್ನು ಕುರಿತು ಆಮೂಲಾಗ್ರವಾಗಿ ತಾನೇ ಹೇಳುವನು. ವ್ಯಾಖ್ಯಾನ ಮುಗಿಯುವ ತನಕ ಪ್ರಶ್ನೆಗಳಿಗೆ ಸ್ಪದವೇ ಇರುವದಿಲ್ಲ.

೮. ಮಿಶ್ರಪದ್ಧತಿ— ಮೇಲೆ ಹೇಳಿದ ಪದ್ಧತಿಗಳಲ್ಲಿ ಕೆಲವುಗಳನ್ನು ಬೆರಸಿ ಕಲಿಸುವ ಕೆಲಸವನ್ನು ಸಾಗಿಸಿದರೆ ಅದು ಶ್ರಪದ್ಧತಿಯೆನಿಸುವದು.

ಪ್ರಾಥಮಿಕ ಶಿಕ್ಷಣದಲ್ಲಿ ಮೇಲಾದ ಶಿಕ್ಷಕರು ಪ್ರಯೋಗ ಷ್ಟವಾದಂಥ ಏಕೀಕರಣಪದ್ಧತಿಯನ್ನೇ ಅವಲಂಬಿಸುವರು. ವಿಶ್ವಾಸದೃಷ್ಟವಾದಂಥ ಪೃಥಕ್ಕರಣಪದ್ಧತಿಯನ್ನು ಹೋನಾರಿಗಳು ಕೈಕೊಳ್ಳುವರು.

ಶಿಕ್ಷಣಕ್ರಮವೆಂದರೇನೆಂಬುದನ್ನು ಈ ಪೂರ್ವದಲ್ಲಿಯೇ ವರಿಸಿದ್ದೇವೆ. ಹುಡುಗರ ಸಂಖ್ಯಾ, ಅವರ ವ್ಯವಸ್ಥೆ ಮುಂದ ಸಂಗತಿಗಳನ್ನನುಲಕ್ಷಿಸಿ ವಿಚಾರಿಸಿದರೆ ಮುಖ್ಯವಾಗಿ ರಡು ಕ್ರಮಗಳು ಕಂಗೊಳಿಸುತ್ತವೆ. (೧) ಸಾಮೂಹಿಕ ಕ್ರಮ (೨) ವ್ಯಕ್ತಿಕ್ರಮ. ಅನೇಕ ಹುಡುಗರನ್ನು ಒಂಗಡಿ ಜೊತೆಗೊಳಿಸಿ ಒತ್ತಟ್ಟಿಗೆ ಏಕಕಾಲಕ್ಕೆ ಕಲಿಸುವ ಕ್ರಮ ಂದು, ಪ್ರತಿಒಬ್ಬ ವಿದ್ಯಾರ್ಥಿಗೆ ಬೇರೆಬೇರೆಯಾಗಿ ಕಲಿಸುದು ಮತ್ತೊಂದು.

(೩) ಹಿರೇಮರಿಕ್ರಮ— ಇತ್ತಲಾಗಿ ಪ್ಯೂಪಿಲ್‌ಟೀಚರ ಎಂ ಹೊಸ ಮೂರನೇ ಕ್ರಮವು ಉಪಕ್ರಮಿಸಲ್ಪಟ್ಟಿರುವದು. ಈ ಪ್ಯೂಪಿಲ್‌ಟೀಚರ ಕ್ರಮವು ಬಹು ದಿವಸದಿಂದ ನಡೆರುತ್ತದೆ. ಆದರೆ ಆರಂಭದಲ್ಲಿ ಇದಕ್ಕೆ ಮಾನಿಟೋರಿ

ಯಲ್ (ಹಿರೇಮಣಿ) ಕ್ರಮ ಎಂದು ಹೆಸರು ಇದ್ದದ್ದಲ್ಲದೆ ಕಲಿಸುವ ಕೆಲಸವನ್ನು ಪ್ರಬುದ್ಧ ವಿದ್ಯಾರ್ಥಿಗಳೇ ಮಾಡುತ್ತಿದ್ದರು. ಆದರೆ ಪ್ಯೂಪಿಲಟೀಚರ ಕ್ರಮದಲ್ಲಿ ಪ್ಯೂಪಿಲಟೀಚರನು ತಕ್ಕಮಟ್ಟಿಗೆ ಪ್ರಬುದ್ಧನೂ, ಶಿಕ್ಷಣದ ಹೋರೆಯನ್ನು ಕೈಕೊಳ್ಳುವ ಆತುರವುಳ್ಳವನೂ, ಆ ಕೆಲಸಕ್ಕೆ ಸಾಧಾರಣ ರೀತಿಯಿಂದ ತಕ್ಕವನೂ ಇರುವನಲ್ಲದೆ ಅವನ ಕೆಲಸದ ಸಂಬಂಧದಿಂದ ಮುಖ್ಯ ಮಾಸ್ತರನು ಜವಾಬದಾರನಾಗಿರುವನು.

(೪) ಗೃಹಶಿಕ್ಷಣಕ್ರಮ— ವಿದ್ಯಾರ್ಥಿಗಳಿಗೆ ಮನೆಯಲ್ಲಿ ಸಹಾಯಕ ಪಾಠಗಳನ್ನೂ, ಪೂರಕಪಾಠಗಳನ್ನೂ, ಮಾಡಿಕೊಂಡು ಬರಲಿಕ್ಕೆ ಹೇಳುವದೇ ಈ ಕ್ರಮವು.

(೫) ತ್ರಿಭಾಗಕ್ರಮ—ಶಾಲಾಗೃಹದ ಸಂಬಂಧದಿಂದ ಅಂದರೆ ವಿದ್ಯಾರ್ಥಿಗಳನ್ನು ಕೂಡ್ರಿಸುವ ಅನುಕೂಲತೆಯನ್ನು ಸಂಬಂಧಿಸಿ ಏರ್ಪಟ್ಟ ಕ್ರಮಕ್ಕೆ ತ್ರಿಭಾಗಕ್ರಮವೆಂಬ ಹೆಸರು. ಇದನ್ನು ಕ್ಯಾನನ್‌ಮೋಸೆಲಿ ಎಂಬವನು ಉಪಕ್ರಮಿಸಿದನು. ಈ ಕ್ರಮವನ್ನು ಅನುಸರಿಸುವಲ್ಲಿ ಶಾಲಾಗೃಹದೊಳಗೆ ಮುಖ್ಯವಾಗಿ ಮೂರು ಕೋಣೆಗಳಿರುವವು.

ಒಂದರೊಳಗೆ ಮುಖ್ಯ ಶಿಕ್ಷಕನು ಕೂತು ಎಲ್ಲ ವರ್ಗಗಳಿಗೆ ಶಿಕ್ಷಣವನ್ನು ಕೊಡುವನು. ಮುಖ್ಯ ಶಿಕ್ಷಕನು ಎಲ್ಲ ವರ್ಗಗಳನ್ನು ಕ್ರಮಶಃ ಕಲಿಸುವದೂ, ನಿಷ್ಕಾರಣವಾದ ಗದ್ದಲವನ್ನು ನಿಲ್ಲಿಸುವದೂ ಇವೇ ಮೊದಲಾದವು ಈ ಕ್ರಮದ ಭೇದಕಲಕ್ಷಣಗಳು.

(೬) ಮಿಶ್ರಶಿಕ್ಷಣಕ್ರಮ— ಮೇಲಿನ ಐದು ಕ್ರಮಗಳಲ್ಲಿ ಕೆಲವನ್ನು ಸಮ್ಮಿಶ್ರವಾಗಿ ಶಾಲಾವ್ಯವಸ್ಥಾಪಕರು ಸ್ವೀಕರಿಸಬಹುದು. ಸಮ್ಮಿಶ್ರವಾದ ಕ್ರಮಕ್ಕೆ ಮಿಶ್ರಕ್ರಮವೆಂಬ ಹೆಸರು.

೨ ನೇ ಪ್ರಕರಣ ಶಿಕ್ಷಣಪದ್ಧತಿಯ ಪ್ರಯೋಜನ.

ಶಿಕ್ಷಣವು ಪಾಯಶುದ್ಧವಾಗಿರಬೇಕು. ಅದು ಪದ್ಧತಿಯುಳ್ಳದ್ದಾಗಿರಬೇಕು ವಿಷಯಗಳನ್ನು ಕಲಿತಂಥ ಬೇಕಾದ ಮನುಷ್ಯನು ಶಿಕ್ಷಣದ ಕೆಲಸವನ್ನು ಸಾಗಿಸುವನೆಂಬ ತಿಳ

ವಳಿಕೆಯು ಬಹು ಭ್ರಾಂತಿಕರವಾದದ್ದು. ಯಾವದೊಂದು ಹೋರೆಯನ್ನು ಮಾಡಬೇಕಾದರೆ ಮನುಷ್ಯನು ಅದನ್ನು ಕೆಲವುಕಾಲ ಪರಿಶ್ರಮದಿಂದ ಕಲಿಯಲೇಬೇಕೆಂಬ ಮಾತು ನಿರ್ವಿವಾದವಾದದ್ದು. ಇದರ ಸಂಬಂಧದಿಂದ ಮತಭೇದವಿಲ್ಲ. ಆದರೆ ಮನುಷ್ಯನ ಪ್ರವೃತ್ತಿಗಳನ್ನು ಸರಿಯಾಗಿ ತಿದ್ದಿ, ತಕ್ಕ ಮಾರ್ಗಕ್ಕೆ ಹಚ್ಚುವದೂ, ನೈತಿಕ ಸಾಮರ್ಥ್ಯಗಳನ್ನೂ ಬುದ್ಧಿಸಾಮರ್ಥ್ಯಗಳನ್ನೂ ಬಲಪಡಿಸುವದೂ, ಈ ಮಹತ್ಕಾರ್ಯವನ್ನು ಕಲಿಯದ ಮನುಷ್ಯನು ಸಾಗಿಸುವನೆಂಬದಕ್ಕೆ ಪ್ರಮಾಣವೇನು? ಈ ಘನಕಾರ್ಯದ ಅಡಚಣಿಯನ್ನು ತಿಳಿಯದೆ ಇದ್ದಂಥ ಮನುಷ್ಯನು ಈ ಕೆಲಸವನ್ನು ಅಂದರೆ ಸೃಷ್ಟಿಯಲ್ಲಿ ಮೇಲಾದ ವಸ್ತುವು ತನ್ನ ಕೆಲಸಕ್ಕೆ ತಕ್ಕದ್ದನ್ನಾಗಿ ಮಾಡುವದನ್ನು ಕೊನಗಾಣಿಸುವನೆಂದು ಹೇಳುವ ಬಗೆ ಏನು? ಮನುಷ್ಯನೆಂಬ ಲೋಕೋತ್ತರವಾದ ವಸ್ತುವನ್ನು ತಿದ್ದಿ ಮನುಷ್ಯತ್ವಕ್ಕೆ ತಕ್ಕದ್ದನ್ನು ಮಾಡುವ ಕೆಲಸವನ್ನು ಸಿಕ್ಕವನಿಗೆ ಒಪ್ಪಿಸಬಹುದೇ?

ಪದ್ಧತಿಯ ಅವಶ್ಯಕತೆ— ಕಲಾಕೌಶಲ್ಯಗಳ ಕೆಲಸದಲ್ಲಿಯೂ ವ್ಯವಹಾರದ ಒಳಗಿನ ಅತಿ ಸಣ್ಣ ಕೆಲಸದಲ್ಲಿಯೂ ಕೆಲವು ತತ್ವಗಳನ್ನನುಸರಿಸಿ ಕೆಲಸ ಮಾಡುವದು ಅವಶ್ಯವಿರುತ್ತದೆ. ಆಜನ್ಮವಿಚಾರ ಮಾಡಿ ಶಿದ್ಧಮಾಡಿದಂಥ ಪದ್ಧತಿಗಳನ್ನು ಕೈಕೊಂಡು ಅದರಲ್ಲಿ ಪ್ರತ್ಯಕ್ಷ ಕೆಲಸ ಮಾಡುವಾಗ ತೊಂದರೆಗಳು ಬಂದಬಂದಂತೆ ಸುಧಾರಣೆ ಮಾಡಿ ಗೊತ್ತಾದ ನಿಯಮಗಳ ಅನುಸಂಧಾನದಿಂದ ಉಪ್ಪಾರರೂ, ಬಡಿಗರೂ, ಯಂತ್ರಕಾರರೂ, ಕಾರಖಾನೆಗಳನ್ನು ನಡಿಸುವವರೂ, ಶಿಲ್ಪಗಾರರೂ, ಚಿತ್ರಗಾರರೂ ತಮ್ಮ ಕೆಲಸಗಳನ್ನು ಮಾಡುತ್ತಾರೆ.

(ಸಶೇಷ)

DEPARTMENTAL NOTICE.

ನೋಟೀಸು.

ಈ ನೋಟೀಸಿನಿಂದ ತಿಳಿಯಪಡಿಸುವದೇನಂದರೆ:—

ಮಿ. ಎಚ್ ಅಪ್ಪಣಶೆಟ್ಟಿ ಮೈಸೂರ ಇವರು ರಚಿಸಿದ ಸ್ವೈದ

ರಸಾಮೆ” ಎಂಬ ಪುಸ್ತಕವನ್ನು ಮೆ. ಡಾಯರೆಕ್ಟರ ಸಾಹೇಬ ಬಹಾದ್ದೂರರವರು ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಿದ್ದಾರೆ.

ಧಾರವಾಡ } B. R. Sahasrabudhe,
ತಾ॥ ೧೬-೧ ೧೯೦೦. } ಎ. ಇ. ದಕ್ಷಿಣಭಾಗ.

CORRESPONDENCE.

ಪತ್ರವ್ಯವಹಾರ.

ಮಹಾರಾಜ ರಾಜಪೂಜಿತ ರಾ. ರಾ. ಶಾಲಾಪತ್ರಕದ
ಎಡಿಟರ ಸಾ॥ ಚರಣಸನ್ನಿಧಿಗೆ—

ಸಾಷ್ಟಾಂಗ ನಮಸಾರ ವಿನಂತಿ ವಿಶೇಷ—ಅಯ್ಯಾ ಎಡಿಟರರೇ, ಅಜ್ಞಾನವೆಂಬ ಕತ್ತಲೆಯನ್ನು ನಾಶಪಡಿಸಲಿಕ್ಕೆ ಸೂರ್ಯನಂತಿರುವ ಮಹಾರಾಯರ ಕರಕಮಲದೊಳು ಉದ್ಭವಿಸುವ ಶಾಲಾಪತ್ರಕದಲ್ಲಿ ಕೆಳಗೆ ಬರೆದ ನಾಲ್ಕು ಪಂಕ್ತಿಗಳಿಗೆ ಸ್ಥಳ ಸಿಕ್ಕೀತೆಂದು ತುಂಬಾ ನಂಬಿದ್ದೇನೆ,

ನೀವು ಜನವರಿ ತಿಂಗಳ ಶಾಲಾಪತ್ರಕದಲ್ಲಿ ಕೊಟ್ಟ ಎರಡನೇ ಲೆಖ್ಖದ ಉತ್ತರವು ಕೆಳಗೆ ಬರೆಯಲ್ಪಟ್ಟಿದೆ.

	ಪಾತ್ರೆಗಳು.	ದರ.	ಕಿಮ್ಮತ್ತು.
ಕೊಡ	೧	೨॥	೨॥
ಭೋಗೋಣಿ	೧	೪।	೪।
ಪರಾತ	೪	೩।	೧೩
ತಾಟು	೧೦	೨।	೨೨
ತಂಬಿಗೆ	೧೨	೧।॥	೨೧
ಪಂಚಪಾತ್ರೆ	೩೨	॥	೧೬
ಸವಟು	೪೦	೦೬	೧೨
	೧೦೦		೧೦೦

ಈ ಪ್ರಕಾರ ಬಂದು ಲೆಖ್ಖವನ್ನು ಬಿಡಿಸಿ ತಮ್ಮ ಕಡೆಗೆ ಕಳಿಸಿರುತ್ತದೆ.

(೧) ನಾಲ್ಕು ಹಡಗಗಳು ಜಲಪರ್ಯಟನ ಮಾಡುವ ಕಾಲದಲ್ಲಿ ಒಂದು ಹಡಗ ಮುಣುಗಹತ್ತಿತು. ಆಗ ಅದರ ನಾವಿಕನು ಉಳಿದ ೩ ಹಡಗಗಳ ಒಡೆಯರಿಗೆ ಹೇಳಿದ್ದೇನಂದರೆ—ನಿಮ್ಮ ಹಡಗದಲ್ಲಿ ಎಷ್ಟು ಜನರಿರುವರೋ ಅಷ್ಟಷ್ಟು ಜನರನ್ನು ನನ್ನ ಹಡಗದೊಳಗಿಂದ ತಗೊಳ್ಳಬೇಕೆಂದು ಹೇಳಲಾಗಿ ಆ ಮೂವರು ಅದರಂತೆ ಮಾಡಿದರು. ಅಷ್ಟರಲ್ಲಿ ೨ನೇ ಹಡಗವು ಮುಣುಗಹತ್ತಿತು. ಆತನೂ ಮೊದಲಿನವನಂತೆ ಹೇಳಿಕೊಳ್ಳಲು, ಅವನ ಹಡಗದಿಂದಲೂ ಜನರನ್ನು ತಕ್ಕೊಳ್ಳಲಾಗಿ ೩ನೇದು ಮುಣುಗಹತ್ತಿತು. ಈ ಪ್ರಕಾರ ನಾಲ್ವರು ಮಾಡಲಾಗಿ ಹಡಗಗಳು ಧಡಕ್ಕೆ ಮುಟ್ಟಿದವು. ಆಗ್ಯೆ ಜನರನ್ನು ಎಣಿಸಲಾಗಿ ಎಲ್ಲ ಹಡಗಗಳಲ್ಲಿ ಸಮನಾಗಿ ಜನರಿದ್ದರು. ಆದರೆ ಮೊದಲು ಕೂಡುವಾಗ್ಯೆ ಯಾವ್ಯಾವ ಹಡಗದಲ್ಲಿ ಎಷ್ಟೆಷ್ಟು ಜನರಿದ್ದರು.

(೨) ತ್ರಿಭಿಃ ಪಂಚಸಾರಾ, ಪಂಚಭಿಃ ಸಪ್ತಸಾರಾ, ಸಪ್ತಭಿಃ ನವಹಂಸಾ, ನವಭಿಃ ತ್ರೀಣಿಮಯೂರಾ, ೧೦೦ ವರಹಾ ಕೊಟ್ಟು ೧೦೦ ಪಕ್ಷಿಗಳನ್ನು ತಗೋಳ್ಳಬೇಕು.

ಈ ಎರಡು ಲೆಖ್ಖಗಳು ನನ್ನ ಅಲ್ಪಮತಿಗೆ ತಿಳಿಯದ ಮೂಲಕ ವಿದ್ವಜ್ಜನರಾದ ನನ್ನ ಬಂಧುಗಳಲ್ಲಿ ಯಾರಾದರೂ ಬಿಡಿಸಿ ಕಳಿಸ್ಯಾರೆಂಬುದಾಗಿ ನಂಬಿದ್ದೇನೆ. ಆಯ್ಯಾ ಪತ್ರವಿಸ್ತಾರಕ್ಕೆ ಕ್ಷಮೆ ಇರಲಿ ಇಂತಿ ಸಾ। ನಮಸ್ಕಾರಗಳು.

राजेंद्र अ. शेट,
अ. मासर थेट्टर, ता. बादामी, जि. विजापूर,

ರಾವಸಾಹೇಬ ಕನ್ನಡ ಶಾಲಾಪತ್ರಿಕಯೆಡಿಟರ ಧಾರವಾಡ ಪ್ರಾಂತ ದಕ್ಷಿಣಭಾಗ ಇವರ ಸನ್ನಿಧಿಗೆ—

ತಮ್ಮ ವಿಧೇಯ ಶಿಷ್ಯನ ಶಿ. ಸಾ. ನ. ವಿ ವಿಜ್ಞಾಪನೆ:—

ತಮ್ಮ ಕರಕಮಲೋದ್ಭವ ಕನ್ನಡ ಶಾಲಾಪತ್ರಕವೆಂಬ ಮಾಸಿಕ ಪುಸ್ತಕವು ಕಾಮಧೇನುವಿನಂತೆ ಕನ್ನಡಿಗರ ಇಷ್ಟಾರ್ಥವನ್ನು ಪೂರೈಸುವದರಿಂದ, ನನ್ನ ಕೋರಿಕೆಯಾದ

ರನಾಮೆ” ಎಂಬ ಪುಸ್ತಕವನ್ನು ಮೆ. ಡಾಯರೆಕ್ಟರ ಸಾಹೇಬ ಬಹಾದ್ದೂರವರು ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಿದ್ದಾರೆ.

ಧಾರವಾಡ } B. R. Sahasrabudhe,
ತಾ॥ ೧೩-೧ ೧೯೦೦. } ಎ. ಇ. ದಕ್ಷಿಣಭಾಗ.

CORRESPONDENCE.

ಪತ್ರವ್ಯವಹಾರ.

ಮಹಾರಾಜ ರಾಜಪೂಜಿತ ರಾ. ರಾ. ಶಾಲಾಪತ್ರಕದ
ಎಡಿಟರ ಸಾ॥ ಚರಣಸನ್ನಿಧಿಗೆ—

ಸಾಷ್ಟಾಂಗ ನಮಸಾರ ವಿನಂತಿ ವಿಶೇಷ—ಅಯ್ಯಾ ಎಡಿಟರರೇ, ಅಜ್ಞಾನವೆಂಬ ಕತ್ತಲೆಯನ್ನು ನಾಶಪಡಿಸಲಿಕ್ಕೆ ಸೂರ್ಯನಂತಿರುವ ಮಹಾರಾಯರ ಕರಕಮಲದೊಳು ಉದ್ಭವಿಸುವ ಶಾಲಾಪತ್ರಕದಲ್ಲಿ ಕೆಳಗೆ ಬರೆದ ನಾಲ್ಕು ಪಂಕ್ತಿಗಳಿಗೆ ಸ್ಥಳ ಸಿಕ್ಕೀತೆಂದು ತುಂಬಾ ನಂಬಿದ್ದೇನೆ.

ನೀವು ಜನವರಿ ತಿಂಗಳ ಶಾಲಾಪತ್ರಕದಲ್ಲಿ ಕೊಟ್ಟ ಎರಡನೇ ಲೆಖ್ಖದ ಉತ್ತರವು ಕೆಳಗೆ ಬರೆಯಲ್ಪಟ್ಟಿದೆ.

	ಪಾತ್ರೆಗಳು.	ದರ.	ಕಿಮ್ಮತ್ತು.
ಕೊಡ	೧	೫॥	೫॥
ಬೋಗೋಣಿ	೧	೪।	೪।
ಪರಾತ	೪	೩।	೧೩
ತಾಟು	೧೦	೨।	೨೫
ತಂಬಿಗೆ	೧೨	೧॥।	೨೧
ಪಂಚಪಾತ್ರೆ	೩೨	॥	೧೬
ಸವಟು	೪೦	೦೬	೧೫
	೧೦೦		೧೦೦

ಈ ಪ್ರಕಾರ ಒಂದು ಲೆಖ್ಖವನ್ನು ಬಿಡಿಸಿ ತಮ್ಮ ಕಡೆಗೆ ಕಳಿಸಿರುತ್ತದೆ.

(೧) ನಾಲ್ಕು ಹಡಗಗಳು ಜಲಪರ್ಯಟನ ಮಾಡುವ ಕಾಲದಲ್ಲಿ ಒಂದು ಹಡಗ ಮುಣುಗಹತ್ತಿತು. ಆಗ ಅದರ ನಾವಿಕನು ಉಳಿದ ೩ ಹಡಗಗಳ ಒಡೆಯರಿಗೆ ಹೇಳಿದ್ದೇನಂದರೆ—ನಿಮ್ಮ ಹಡಗದಲ್ಲಿ ಎಷ್ಟು ಜನರಿರುವರೋ ಅಷ್ಟಷ್ಟು ಜನರನ್ನು ನನ್ನ ಹಡಗದೊಳಗಿಂದ ತಗೊಳ್ಳಬೇಕೆಂಬ ಹೇಳಲಾಗಿ ಆ ಮೂವರು ಅದರಂತೆ ಮಾಡಿದರು. ಅಷ್ಟರಲ್ಲಿ ೨ ನೇ ಹಡಗವು ಮುಣುಗಹತ್ತಿತು. ಅವನೂ ಮೊದಲಿನವನಂತೆ ಹೇಳಿಕೊಳ್ಳಲು, ಅವನ ಹಡಗದಿಂದಲೂ ಜನರನ್ನು ತಕೊಳ್ಳಲಾಗಿ ೩ ನೇದು ಮುಣುಗಹತ್ತಿತು. ಈ ಪ್ರಕಾರ ನಾಲ್ವರು ಮಾಡಲಾಗಿ ಹಡಗಗಳು ದಡಕ್ಕೆ ಮುಟ್ಟಿದವು. ಆಗ್ಗೆ ಜನರನ್ನು ಎಣಿಸಲಾಗಿ ಎಲ್ಲ ಹಡಗಗಳಲ್ಲಿ ಸಮನಾಗಿ ಜನರಿದ್ದರು. ಆದರೆ ಮೊದಲು ಕೂಡುವಾಗ್ಯೆ ಯಾವ್ಯಾವ ಹಡಗದಲ್ಲಿ ಎಷ್ಟೆಷ್ಟು ಜನರಿದ್ದರು.

(೨) ತ್ರಿಭಿಃ ಪಂಚಪಾರಾ, ಪಂಚಭಿಃ ಸಪ್ತಸಾರಾ, ಸಪ್ತಭಿಃ ನವಹಂಸಾ, ನವಭಿಃ ತ್ರೀಣಿಮಯೂರಾ, ೧೦೦ ವರಹಾ ಕೊಟ್ಟು ೧೦೦ ಪಕ್ಷಿಗಳನ್ನು ತಗೊಳ್ಳಬೇಕು.

ಈ ಎರಡು ಲೆಖ್ಖಗಳು ನನ್ನ ಅಲ್ಪಮತಿಗೆ ತಿಳಿಯದ ಮೂಲಕ ವಿದ್ವಜ್ಜನರಾದ ನನ್ನ ಬಂಧುಗಳಲ್ಲಿ ಯಾರಾದರೂ ಬಿಡಿಸಿ ಕಳಿಸ್ಯಾರೆಂಬದಾಗಿ ನಂಬಿದ್ದೇನೆ. ಈಯ್ಯಾ ಪತ್ರವಿಸ್ತಾರಕ್ಕೆ ಕ್ಷಮೆ ಇರಲಿ. ಇಂತಿ ಸಾ। ನಮಸ್ಕಾರಗಳು.

रामचंद्र अ. शेठ,
अ. मास्तर शेट्टर, ता. बा.वाडी, जि. विजापूर.

ರಾವಸಾಹೇಬ ಕನ್ನಡ ಶಾಲಾಪತ್ರಿಕಎಡಿಟರ ಧಾರವಾಡ ಪ್ರಾಂತ ದಕ್ಷಿಣಭಾಗ ಇವರ ಸನ್ನಿಧಿಗೆ—

ತಮ್ಮ ವಿಧೇಯ ಶಿಷ್ಯನ ಶಿ. ಸಾ. ನ. ವಿ ವಿಜ್ಞಾಪನೆ:—

ತಮ್ಮ ಕರಕಮಲೋದ್ಭವ ಕನ್ನಡ ಶಾಲಾಪತ್ರಕವೆಂಬ ಮಾಸಿಕ ಪುಸ್ತಕವು ಕಾಮಧೇನುವಿನಂತೆ ಕನ್ನಡಿಗರ ಇಷ್ಟಾರ್ಥವನ್ನು ಪೂರೈಸುವದರಿಂದ, ನನ್ನ ಕೋರಿಕೆಯಾದ

ರೂ ಈಡೇರುವದೆಂದು ನೆರೆನಂಬಿ, ಎನ್ನ ಮಂದಮತಿಗೆ ಹರಿಯದ ಅನುಮಾನಗಳನ್ನು ತಮ್ಮ ಕಿವಿಮೇಲಿಡುತ್ತೇನೆ. ಅವು ತಮಗೆ ಯೋಗ್ಯಕಂಡಲ್ಲಿ, ದಯಮಾಡಿ ಮುದ್ರಿಸುವಿರೆಂದು ಆಶಿಸುತ್ತೇನೆ.

ಅನುಮಾನಗಳು.

(೧) ಕೈ. ವಾ. ಗು. ಮುಳಬಾಗಲಕೃತ "ಛಂದಸ್ಸಾರ" ದಲ್ಲಿ "ಮೊದಲಿನ ಚರಣದ ಮೊದಲಕ್ಷರವು ಗುರುವಾದರೆ, ಎಲ್ಲಾ ಚರಣಗಳ ಆದ್ಯಕ್ಷರಗಳು ಗುರುಗಳಾಗಿರಬೇಕು (ಪ್ರಾಸವಿಚಾರ ನಿ. ೧" ಎಂದು ಹೇಳಲ್ಪಟ್ಟಿದೆ. ಇದರರ್ಥವು "ಪ್ರತಿಯೊಂದು ಚರಣದ ಮೊದಲಕ್ಷರವು ಸ್ವತಃ ಗುರುತ್ವವುಳ್ಳ ಗುರುವರ್ಣವಾಗಲಿ, ಅನುಸ್ವಾರ, ವಿಸರ್ಗ, ಸಂಯುಕ್ತಾಕ್ಷರಾದಿಗಳು ಪರವಾಗುವದರಿಂದ ಗುರುತ್ವವನ್ನು ಪಡೆದ ಲಘುವರ್ಣಗಳಾಗಲಿ ಇದ್ದರಾಯಿತು. ಅನುವೃತ್ತಿ ಗುರುವರ್ಣವೇ ಇರಬೇಕೆಂಬ ನಿರ್ಬಂಧವಿಲ್ಲ." ಹೀಗೆ ಆಗುತ್ತದೆ. ಆದರೆ

ಉದಾಹರಣೆಗಳು.

ಕೋಳಕೂಗದ..... । ಯೇಳು ದೇವರನು...... । ಅಳಿ
ನಾಳಯ್ಯ ಸರ್ವಜ್ಞ ॥ ೧ ॥ ಅನ್ನವನು......। ತನ್ನಂತೆ...
... । ಬಿನ್ನಣವಕ್ಕು ಸರ್ವಜ್ಞ ॥ ೨ ॥ ಬಂದವರ...... ।
ಹಂದಿಯು...... । ಯೊಂದಿಗೂ ಬೇಡ ಸರ್ವಜ್ಞ ॥ ೩ ॥

ಈ ಪ್ರಕಾರದವೇ ಎತ್ತ ನೋಡಿದತ್ತ ಕಾಣುವವು. ಆದರೂ ಇತ್ತಲಾಗಿನ ಹೊಸ ಜನರು ಈ ನಿಯಮಾಧಾರದಿಂದಲೇ ಮೇಲೆ ಬರೆದ ಅರ್ಥದಂತೆ ಕವಿತೆ ರಚಿಸಿದ್ದು ಕಂಡುಬರುತ್ತದೆ. ಮಾದರಗಾಗಿ ಒಂದು ಉದಾಹರಣೆ—

ಕಂದ॥ ಮಾತಾಪಿತೃಗಳ ಸಂಗಡ ।
ನಿತ್ಯದಿ ನೀಂ ಮಾಳ್ಪುದಲ್ಲನ್ಯೈ ತಂಡಿಕವಂ ॥
ಚಿತ್ತದಿ ಭಜಿಸಲು ದೇವರ ।
ಒತ್ತರದಿಂದಾತ ನಿಮಗೆ ಸುಖವೀವನು ಕೇಳ್ ॥೧॥

ಆದ್ದರಿಂದ ಅಂದೇಶಗೊಳ್ಳುವದೇನಂದರೆ:—ಛಂದಸ್ಸಾರದ ಈ ನಿಯಮವನ್ನು ತಿದ್ದಬಹುದೋ? ಅಥವಾ ಈ ನಿಯಮದಂತೆ ಪದ್ಯಗಳನ್ನು ರಚಿಸಬಹುದೋ? ರಚಿಸಿದರೆ ದೋಷವಿಲ್ಲವೋ? ಮತ್ತು ಈ ಆದ್ಯಕ್ಷರಾನುವೃತ್ತಿಗೆ "ವಡಿ" ಎಂಬ ಹೆಸರಿರುವದೋ!

(೨) ಸದರ ಛಂದಃಸಾರವು "ತ್ರಿಪದಿಯ ೨ ನೇ ಚರಣವು ಅನುಕ್ರಮದಿಂದ ೫, ೩, ೫, ೫ ಮಾತ್ರೆಗಳ ಗಣಗಳುಳ್ಳದ್ದಿರಬೇಕು (ವ್ಯ. ಲ. ಪ್ರಕರಣ ಭಾಗ ೧, ನಿ. ೧೪)" ಎಂದು ಸಾರುತ್ತದೆ. ಆದರೆ ಸರ್ವಜ್ಞ ವರಕವಿ ವಿರಚಿತ ತ್ರಿಪದಿ ಪದ್ಯಗಳಲ್ಲಿ ಹೀಗೆ ತೋರದೆ ಬಹುಶಃ (೧೯೯) ೫, ೩, ೫, ೪ ಮಾತ್ರೆಗಳ ಗಣ (೧೩ ಮಾತ್ರೆ) ಗಳು ಕಂಡುಬರುತ್ತವೆ. ಮತ್ತು ಬೇರೆ ಕಡೆಯಲ್ಲಿಯೂ ಹೀಗೆಯೇ ಗೋಚರವಾಗುತ್ತವೆ. ಈಗ ನೋಡಿರಿ? ಉದಾಹರಣಾರ್ಥವಾಗಿ—

ಪ್ರಾಕ್ಕಾವ್ಯಮಾಲಿಕೆ.

ಆಹರಂ ತನ್ನುಭಯ ಬಾಹುವಿಂದೊಗೆದವರ । ಸಾಹಸದ
ಹವಣಮರಿಯದೆ ಸರ್ವಜ್ಞ । ನೇ ಹೇಳಿ ನೀವು ಹುಸಿ
ಯದೇ ॥ ೧೫೪೮ ॥

(೩) ಛಂದಃಸಾರಗಳು "ಕವಿತೆಯ ಕಡೆಯ ಲಘುವಿಗೂ ಕವಿತಾರ್ಧದ ಕಡೆಯ ಲಘುವಿಗೂ ನಿತ್ಯವಾಗಿ ಗುರುತ್ವ ಬರುತ್ತದೆಂ"ದು ಕೂಗುವವು, ಆದರೆ ಸರ್ವಜ್ಞ ತ್ರಿಪದಿಗಳಲ್ಲಿ ಮಾತ್ರ ಅಂತ್ಯವರ್ಣಕ್ಕೆ ಗುರುತ್ವವಿಲ್ಲ. ಆದರೇನಾಯಿತು? ಗುರುತ್ವ ಕೊಟ್ಟು ದೀರ್ಘೋಚ್ಚಾರ ಮಾಡಬೇಕೆಂದರೆ—ಹಾಗಾದಪಕ್ಷದಲ್ಲಿ ೩ ನೇ ಚರಣಕ್ಕೆ ಬೇಕಾದ ೫, ೩, ೫ ಮಾತ್ರೆಗಳ ಗಣ (೧೩ ಮಾ.) ಗಳಿಗಿಂತ ೧ ಮಾತ್ರೆ ಹೆಚ್ಚಾಗುವದರಿಂದ ಆ ನಿಯಮಕ್ಕೆ ಭಂಗ ಬರುತ್ತದೆ.

ಸಾರಾಂಶ:—ತ್ರಿಪದಿಯ ನಿಯಮಕ್ಕೂ, ಉದಾಹರಣೆಗಳಿಗೂ ತಳಕು ಬೀಳುವದಿಲ್ಲ. ಆದ್ದರಿಂದ ತ್ರಿಪದಿಯ ನಿಯಮವು ಸತ್ಯವೋ? ಉದಾಹರಣೆಗಳು ಸತ್ಯವೋ? ತಿಳಿಯಿಸು. ಅಂದಮೇಲೆ ಸರ್ವಜ್ಞ ವರಕವಿಯು: ವ್ಯಾಕರಣ, ಛಂ

ದಸ್ಸು ಮೊದಲಾದ ಶಾಸ್ತ್ರಗಳನ್ನು ಮೀರಿ ಅಡ್ಡ ಹಾದಿ ಹಿಡಿದಿದ್ದಾನೆಂದು ಹೇಳಬಹುದೋ? ಹಾಗಾದರೆ ಆ ಪದ್ಯಗಳನ್ನು ಛಂದೋನಿಯಮಗಳ ಅಧೀನದಲ್ಲಿರಿಸಬಹುದೋ? ಅಥವಾ ಸರ್ವಜ್ಞ ಪದ್ಯಗಳಂತೆ, ತ್ರಿಪದಿಯ ಎರಡನೇ ಚರಣವು ೫, ೩, ೫, ೪ ಮಾತ್ರೆಗಳ ಗಣ (೧೭ ಮಾ.) ಗಳುಳ್ಳದ್ದು, ೩ ನೇ ಚರಣವು ೫, ೩, ೬ ಮಾತ್ರೆಗಳ ಗಣ (೧೪ ಮಾ.) ಗಳುಳ್ಳದ್ದು ಎಂದು ನಿಯಮ ಹೇಳಬಹುದೋ? ಹೇಳಿದರೆ ಬಾಧಕವೇನು?

(೩) ಛಂದಸ್ಸಾರದಂತೆ ಕವಿತಾರ್ಧದ ಕಡೆಗೆ ಗುರುವಿರತಕ್ಕದ್ದು. ಆದರೆ "ಹೇಳಿದ ಮಾತಂ ಕೇಳದೆ । ಏಳಿಗೆಯಿಂ ದೋಜಿಗೆಟ್ಟ ಮಡದೀ ಮಕ್ಕಳ" ಈ ಕಂದಾರ್ಧದ ತುದಿಯಲ್ಲಿ ಗುರುವಿಲ್ಲ. ಇದರಿಂದ ಛಂದಸ್ಸಾರದ ಗುರುಲಘು ವಿಭಾಗದ ನಿಯಮ ೧. (ಕ) ಕ್ಕೂ, ಕಂದನಿಯಮಕ್ಕೂ ಬಾಧೆ ಬರುತ್ತದೆ. ಅಂದಮೇಲೆ ಈ ನಿಯಮೋದಾಹರಣೆಗಳಲ್ಲಿ ಯಾವದು ದೋಷವು? ಯಾವದು ನಿರ್ದೋಷವು? ಈ ಪದ್ಯವು ನಿರ್ದೋಷವೆಂದರೆ ಛಂದೋ ನಿಯಮವೆಂತು ಅದಕ್ಕೆ ಆಧಾರವೇನು?

ಅಯ್ಯಾ ನನ್ನ ವ್ಯವಸಾಯಬಂಧುಗಳೇ! ವಿದ್ವಜ್ಜನರೇ!! ಮೇಘರಾಜನು ಮಳೆಸುರಿಸಿ, ಚಾತಕಪಕ್ಷಿಯನ್ನು ತೃಪ್ತಿಗೊಳಿಸುವಂತೆ, ಸಮರ್ಪಕ ಉತ್ತರಗಳ ಮಳೆಗರೆದು, ನನ್ನ ಬಯಕೆಯನ್ನು ಕೊನೆಗಾಣಿಸುವಿರೆಂದು ಬೇಡಿಕೊಳ್ಳುತ್ತೇನೆ.

ಅಯ್ಯಾ! ಪತ್ರಕರ್ತರೇ!! ಗುರುವರೇಣ್ಯರೇ!!! ಪತ್ರ ವಿಸ್ತಾರವಾಯಿತು. ಕ್ಷಾಂತಿಯಿರಲಿ. ಹೋಗಿಬರುತ್ತೇನೆ. ಲೋಭವಿರಲಿ. ಅಪ್ಪಣೆ ಕೊಡರಿ. ಇಂತೀ ಶಿ. ಸಾ. ನ.

ಕನ್ನಡ ನಂ ೪ ಶಾಲಾ
ಹುಬ್ಬಳ್ಳಿ
ತಾ. ೧೫-೩-೧೯೦೦.

ತಮ್ಮ ವಿಧೇಯ ಶಿಷ್ಯ,
ಶಿವನಗೌಡಾ ರಾ ಪಾಟೀಲ ಹೆಡ್
ಮಾಸ್ತರ.

ಪರ್ಥಸ್ರಾಯಿಜ ಪರೀಕ್ಷೆಯ ಪ್ರಶ್ನೆಗಳು.

೨ ನೇ ಭಾಗದ.

(೧) ಪ್ರಾಕ್ಕಾವ್ಯ ಮಾಲಿಕೆಯಲ್ಲಿ ಕೊಟ್ಟಬೇರೆ ಬೇರೆ ಮತಸ್ಥರ ಕವಿತೆಗಳಲ್ಲಿ ಸ್ಪಷ್ಟವಾಗಿ ತೋರಿಬರುವ ಭಾಷಾ ಸಂಬಂಧದಿಂದಲೂ ವಿಷಯ ಸಂಬಂಧದಿಂದಲೂ ಭೇದಕ ಲಕ್ಷಣಗಳು ಯಾವವು?

(೨) ಪ್ರಾಕ್ಕಾವ್ಯ ಮಾಲಿಕೆಯೊಳಗಿನ ಪದ್ಯಗಳ ಕರ್ತರು ಯಾವ ಯಾವ ಕಾಲದಲ್ಲಿ ಇದ್ದರೆಂಬದನ್ನು ಬರೆದು ಅದರ ಸಮರ್ಥನಕ್ಕಾಗಿ ಆದಷ್ಟುಮಟ್ಟಿಗೆ ಆ ಗ್ರಂಥದೊಳಗಿನ ಪ್ರಮಾಣಗಳನ್ನು ಕೊಡಿರಿ.

(೩) ದರ್ಶನಗಳನ್ನೂ ಅವುಗಳ ಭೇದಕ ಲಕ್ಷಣಗಳನ್ನೂ ಆಯಾ ದರ್ಶನಕಾರರ ಹೆಸರುಗಳನ್ನೂ ಗೊತ್ತಿದ್ದಮಟ್ಟಿಗೆ ಅವರ ಚರಿತ್ರಗಳನ್ನೂ ಬರೆಯಿರಿ.

(೪) ಕೆಳಗೆ ಬರೆದ ಪದ್ಯದಲ್ಲಿ ಕಂಡುಬರುವ ಛಂದೋದೋಷಗಳನ್ನು ವಿವರಿಸಿ ತಿದ್ದಿ ಬರೆಯಿರಿ.

(ಅ) ಮುನ್ನಮಾಡಿದಘವು ಹೊನ್ನಿಲಿ ಪೋಪುದೆ?
ಹೊನ್ನಿನ ಪುಣ್ಯ ಬೇರೆ ಪಾಪ,
ಮುನ್ನಿನಂತೆ ಇದ್ದಪುದು ಸರ್ವಜ್ಞ.

(೫) ಕೆಳಗೆ ಬರೆದ ಪದ್ಯಗಳ ಪೂರ್ವಾಪರ ಸಂಬಂಧವನ್ನೂ ಅರ್ಥವನ್ನೂ ಬರೆಯಿರಿ.

(ಅ) ಪಾಲೊಳೊಪ್ಪಿನ ವಿವರವರಿವ ಪು
ರಾಳವಂ ಕಂಡುಬ್ಬಿ ಲೋಕಂ
ಲಾಲಿಸುವವೊಲ್ಬನಕ ಮೊಗೆವಾಲಂ
ಕಡಿದು ಪೋಗೆ ॥
ಆಳಿಗೊಳುತಂ ಬಡಿವರಲ್ಲದೆ
ಲಾಲಿಸುವರೇ? ಸುಕವಿಯಿಂದರೆ
ಮೇಲಹುದು ಕೃತಿ ಕುಕವಿಯಿಂದಪಸದೇ
ನಹುದು ತನಗೆ ॥ ೬೬೫ ॥

(ಬ) ಧರೆಯೊಳೂರಡಿಯಾದ ಕೊಳಗದ
ಸರಿಯು ಸೊಲ್ಲಿಗೆ ಸಲ್ಲದಿಪ್ಪದೆ ?
ಪರಿಮಿತಾಕ್ಷರ ತಲೆಯೊಳಪರಮಿತಾರ್ಥ
ರಚನೆಯಿಂ ॥
ವಿರಚಿಸುವದದು ಕವಿಯ ಚತುರತೆ
ಗುರು ಬಸವನಂ ನೆನೆವಬಲ್ಪಿಂ
ಸರಸಮೃದು ಮಧುರೋಕ್ತಿಗಳು ಮಿಗೆ
ರಚಿಸುವೆಂ ಕೃತಿಯು ॥ ೬೬೬ ॥

(ಭ) ಪರಿದೈತಂದರ ಸಂಚೆಯಂ ಕರೆದು ಭೃಂಗೀ ನಾದದಿಂ
ದಿತ್ತುಗಂ । ಧರಜಃಪೂರ್ಣ ಮರಂದದರ್ಘ್ಯ ಮನವು
ಕರ್ಣತ್ತಂ ಬುರುಟ್ಟೀರಮುಂ । ಮರುದಾನೀತ ದಳಾಂ
ಬರಂ ಬೊದಿಸುಣಾಲ್ಕಿತ್ತಬ್ಜ ಬೀಜಂಗಳಂ । ಶರದಂ
ಭೋಜನಿ ಮಾಡಿದಳ್ ದ್ವಿಜವರಂ ಗಾತಿಥ್ಯ ಸತ್ಕಾರ
ಮಂ ॥ ೧೧೮೪ ॥

(ಮ) ಘನಸಂಧ್ಯಾರಾಗ ತೀವ್ರಾನಲನೊಳೊಲವಿನಿಂ ಕಾಸಿ
ತಿಗ್ಮಾಂಶುವೆಂದೆಂ । ಬನವೀಸ ಸ್ವರ್ಣಸತ್ಪಿಂಡ ಪುನ
ಮಳನಭ ಶ್ರೀಗಲಂಕಾರಮಂ ಮಾ । ಳ್ಪನೆ ಸುತ್ತಿಜ್ಜೈರ
ಸಿ ಪೂರ್ವೇತರ ಶರನಿಧಿಯೊಳ್ಕಾಲವೆಂಬೋಜನ್ ।
ಜ್ಜನಿಸುತ್ತುರ್ವೀಳ್ದುದೋ ? ಕಾಜೋರ್ಗೆಯಿಸೆ ದೆಸೆ
ದೀವಿತ್ತು ಘೋರಾಂಧಕಾರಂ ॥ ೧೨೩ ॥

(ಯ) ನೊಸಲೊಳೆಸೆವೂರ್ಧ್ವ ಪುಂಡ್ರದ ಸುಧೌತಾಂಬರದ ।
ಮಿಸುಪ ತುಲಸಿಯ ದಂಡೆಗಳ ಕೊರಳ ಸ್ವೀಕೃತರ ।
ದಶನಪಂಕ್ತಿಯ ನಕಿಲ್ಬಿಷಗಾತ್ರ ದೀಕ್ಷಸಾತ್ವಿಕ
ಭಾವದಿಂದ ಮೆರೆವಾ ॥
ಶಿವದಾಸನ ಸುಚರರ್ಬಂದು ಕಾಣಲ್ಕಿದೇಂ ।
ಪೊಸತಕಟ ! ನಿಮಗಿದಿಂದೇಕೆ ಸಲಿಲಸ್ನಾನ ।
ಮಸುವಿತಿದಿಹನೆ ಕುಳಿಂದಕನೆಂದು ? ಶಂಕೆಯಿಂ ಕೇ
ಳ್ದನಾದುಷ್ಟಬುದ್ಧೀ ॥ ೧೩೯ ॥

[illegible]ಂಥ ವಾಚನ ಮಂದಿರ
ಮುರಬ. ಜಿ. ಧಾರವಾಡ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ |
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ||
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ |
ದಯೆಯಿಂದೋಷವತಿದ್ದಿ ಪೇಳ್ವುದು ಬುಧರ್ಜ್ಞಾನಾಭಿವೃದ್ಧಿಪ್ರಿಯರ್ ||೧

ಪುಸ್ತಕ ೩೬.] ಮೇ ೧೯೦೦. [ಸಂಚಿಕೆ ೫.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ನಮ್ಮ ದಯಾಳು ಮಹಾರಾಣಿಯವರ ಜೇಷ್ಠ ಪುತ್ರರಾದ ಪ್ರಿನ್ಸ ಆಫ ವೆಲ್ಸರು ಪತ್ನೀ ಸಹಿತರಾಗಿ ಇಂಗ್ಲಂಡದಿಂದ ಡೇನ್ಮಾರ್ಕಕ್ಕೆ ಉಗೆಬಂಡಿಯಿಂದ ಹೋಗುತ್ತಿರುವಾಗ ಬ್ರುಸೆಲ್ಸ ಪಟ್ಟಣದ ಸ್ಟೇಶನದಲ್ಲಿ ಆ ಪಟ್ಟಣದ ಒಬ್ಬ ಹದಿನೇಳು ಹದಿನೆಂಟು ವರುಷದ ಉಡಾಳ ಹುಡುಗನು ಗಾಡಿಯ ಕಿಡಕಿಯೊಳಗಿಂದ ಅವರ ಮೇಲೆ ಬಂದೂಕನ್ನು ಎರಡು ಸಾರೆ ಹಾರಿಸಿದನು. ಆದರೆ ಈಶಕೃಪೆಯಿಂದ ಗುರಿ ತಪ್ಪಿ ಯಾರಿಗೂ ಏನೂ ಅಪಾಯ ತಟ್ಟಲಿಲ್ಲ. ಆ ಹುಡುಗನನ್ನು ಕೂಡಲೆ ಪೋಲೀಸರು ಹಿಡಿದು ಹೀಗೆ ಮಾಡಿದ ಕಾರಣವನ್ನು ಕೇಳಲು, ಟ್ರಾನ್ಸವಾಲದಲ್ಲಿ ಸಾವಿರಾರು ಬೋರ ಜನರನ್ನು ಇಂಗ್ಲಿಷರು ಕೊಂದದ್ದರಿಂದ, ಸೇಡು ತೀರಿಸುವದಕ್ಕಾಗಿ ಹೀಗೆ ಮಾಡಿದೆನೆಂದು ಅವನು ಹೇಳಿದನು. ಬ್ರುಸೆಲ್ಸದಲ್ಲಿ ಬೋರರ ಏಜಂಟರಾದ ಡಾಕ್ಟರ ಲೀಡ್ಸ ಇವರು ಇಂಗ್ಲಿಷರ ವಿರುದ್ಧ ಬಹಳ ಖಟಪಟ ನಡಿಸಿದ್ದರಿಂದ ಆ ದುಷ್ಟ ಹುಡುಗನ ತಲೆ ತಿರುಗಿ ಅವನು ಈ ಕೃತ್ಯವನ್ನು ಮಾಡಿರಬಹುದೆಂದು ತೋರುತ್ತದೆ. ಹ್ಯಾಗೇ ಇರಲಿ, ಸದ್ಯಕ್ಕೆ ಈಶರಕ್ಷಿತರಿಗೆ ಭಯವಿಲ್ಲೆಂಬ ಮಾತು ನಿದರ್ಶನಕ್ಕೆ ಬಂದದ್ದಲ್ಲದೆ, ನಮ್ಮ ಮಹಾರಾಣಿಯವರಿಗೂ ಪ್ರಜೆಗಳಿಗೂ ಶೋಕದ ಕಾರಣವು ತಪ್ಪಿತು. ಇದಕ್ಕಾಗಿ ಶ್ರೀ ದೇವರನ್ನು ನಾವೆಲ್ಲರು ಅನನ್ಯಭಾವದಿಂದ ಕೊಂಡಾಡತಕ್ಕದ್ದು.

ಸನ್ ೧೮೯೮-೯೯ನೇ ಇಸವಿಯಲ್ಲಿ ಮುಂಬೈ ಇಲಾಖೆಯೊಳಗಿನ ಪ್ರಾಥಮಿಕ ಶಾಲಿಗಳಲ್ಲಿಯ ಶಿಕ್ಷಕರ ಸಂಖ್ಯೆಯೂ ಅವರ ಯೋಗ್ಯತೆಯೂ ಕೆಳಗೆ ಬರೆದಂತೆ ಇರುವವು.

		ಟ್ರೇಂಡ ಹೆಡ್ಡ ಮಾಸ್ತರರ ಸಂಖ್ಯೆ	ಅಂಟ್ರೇಂಡ ಹೆಡ್ಡ ಮಾಸ್ತರರ ಸಂಖ್ಯೆ	ಟ್ರೇಂಡ ಅಸಿಸ್ಟಂಟ ಮಾಸ್ತರರ ಸಂಖ್ಯೆ	ಅಂಟ್ರೇಂಡ ಅಂದರೆ ಪಬ್ಲಿಕ ಸರ್ವಿಸ ಪ. ಪಾಸಾದ ಅಸಿಸ್ಟಂಟರ ಸಂಖ್ಯೆ	ಪಬ್ಲಿಕ ಸರ್ವಿಸ ಪರೀಕ್ಷೆಯಲ್ಲಿ ಪಾಸಾಗದ ಅಸಿಸ್ಟಂಟರ ಸಂಖ್ಯೆ.	ಒಟ್ಟು ಶಿಕ್ಷಕರ ಸಂಖ್ಯೆ.
ಪುರುಷಶಾಲೆ.	ಪುರುಷ ಶಿಕ್ಷಕರು.						
	ಲೋಕಲ ಬೋರ್ಡ.	೮೬೦	೫೧೦	೨೫೯	೪೮೫	೩೩೯	೨೪೫೩
	ಮುಂಬೈ ಶಹರ.	೨೫	೨೮	೪೪	೬೧	೪೨	೨೦೦
	ಬೇರೆ ಮುನಿಸಿಪಾಲಿಟಿಗಳು.	೧೩೯	೫೫	೧೬೭	೨೨೨	೨೬೩	೮೪೬
	ಸಂಸ್ಥಾನಗಳು.	೫	೧೧೨	೫	೧೮	೪೪	೧೮೪
	ಒಟ್ಟು.	೧೦೨೯	೭೦೫	೪೭೫	೭೮೬	೬೮೮	೩೬೮೩
ಸ್ತ್ರೀಶಾಲೆ.	ಲೋಕಲ ಬೋರ್ಡ.	೭೮೬	೩೩೧	೯೩	೯೪೪	೧೬೮	೨೩೨೨
	ಮುನಸಿಪಾಲಟಿಗಳು.	೧೨೨	೧೯	೧೫೧	೪೧೫	೧೫೩	೮೬೦
	ಸಂಸ್ಥಾನಗಳು.	೨೧೬	೨೯೬	೨೭	೨೧೩	೨೭೫	೧೦೨೭
	ಒಟ್ಟು.	೧೧೨೪	೬೪೬	೨೭೧	೧೫೭೨	೫೯೬	೪೨೦೯

೩.	ಕಾಠೇವಾಡ ಎಜನ್ಸಿ. ...	೫೫೪	೩೧೭	೧೧	೧	೧೪೬೨	೨೩೪೫
ದಕ್ಷಿಣಭಾಗ	ಲೋಕಲ ಬೋರ್ಡ. ...	೮೭೬	೨೪೨	೨೭೧	೫೯೬	೩೨೦	೨೩೦೫
	ಮುನಸಿಪಾಲಿಟಿಗಳು. ...	೧೦೭	೪೬	೯೩	೧೯೬	೧೪೭	೫೮೯
	ಸಂಸ್ಥಾನಗಳು. ...	೧೫೦	೪೦೮	೮೨	೨೪೮	೩೪೩	೧೨೩೧
	ಒಟ್ಟು. ...	೧೧೩೩	೬೯೬	೪೪೬	೧೦೪೦	೮೧೦	೪೧೨೫
ಸಿಂಧ.	ಲೋಕಲಬೋರ್ಡ. ...	೨೬೪	೬೧	೭೩	೧೦೮	೯೨	೫೯೮
	ಮುನಸಿಪಾಲಿಟಿಗಳು. ...	೪೩	೫	೬೫	೫೬	೩೦	೧೯೯
	ಒಟ್ಟು. ...	೩೦೭	೬೬	೧೩೮	೧೬೪	೧೨೨	೭೯೭
	ಇಲಾಖೆಯ ಒಟ್ಟು ...	೪೧೪೭	೨೪೩೦	೧೪೪೧	೩೫೬೩	೩೦೭೮	೧೪೬೫೯
	ಸ್ತ್ರೀ ಶಿಕ್ಷಕರು.						
	ಮಧ್ಯಭಾಗ. ...	೪೦	೮	೯	೨	೪೮	೧೦೭
	ಉತ್ತರಭಾಗ. ...	೭೯	೧೮	೫	೫	೭೪	೧೮೧
	ಕಾಠೇವಾಡ. ...	೪೯	೯	೧೧	೦	೯೧	೧೬೦
	ದಕ್ಷಿಣಭಾಗ. ...	೧೪	೧೬	೧೧	೨	೬೩	೧೦೬
	ಸಿಂಧ. ...	೧೫	೯	೧೧	೦	೧೧	೪೬
	ಅಂತು. ...	೧೯೭	೬೦	೪೭	೯	೨೮೭	೬೦೦
	೬. ಒಟ್ಟು ಶಿಕ್ಷಕ ಜನರು	೪೩೪೪	೨೪೯೦	೧೪೮೮	೩೫೭೨	೩೩೬೫	೧೫೨೫೯

ಮೇಲಿನ ಕೋಷ್ಟಕವನ್ನು ನೋಡಲಾಗಿ ತಿಳಿಯುವದೇನೆಂದರೆ-ಗಂಡು ಹುಡುಗರ ಪ್ರಾಥಮಿಕ ಶಾಲೆಗಳಲ್ಲಿ ೬೫೭೭ ಜನ ಹೆಡ್ಡ ಮಾಸ್ತರರಿದ್ದು ಅವರಲ್ಲಿ ೨೪೩೦ ಜನ ಅಂದರೆ ಒಟ್ಟು ಮಾಸ್ತರರ ೧/೩ ಕ್ಕಿಂತಲೂ ಹೆಚ್ಚು ಅಂಟ್ರೇಂಡ ಜನರಿರುವರು. ಸನ್ ೧೮೯೭-೯೮ ಸಾಲಿನಲ್ಲಿ ನಮ್ಮ ಇಲಾಖೆಯಲ್ಲಿ ೪೧೪೯ ಜನ ಟ್ರೇಂಡ ಹೆಡ್ಡ ಮಾಸ್ತರರೂ ೨೪೭೮ ಜನ ಅಂಟ್ರೇಂಡ ಹೆಡ್ಡ ಮಾಸ್ತರರೂ ಇದ್ದರು. ಈ ವರ್ಷ ೪೧೪೭ ಜನ ಟ್ರೇಂಡರೂ ೨೪೩೦ ಜನ ಅಂಟ್ರೇಂಡರೂ ಇರುವರು. ಹೀಗೆ ಅಂಟ್ರೇಂಡ ಜನರಲ್ಲಿ ೪೮ ಜನ ಕಡಿಮೆಯಾಗಿದ್ದು ಟ್ರೇಂಡರ ಸಂಖ್ಯೆಯು ಹೆಚ್ಚಾಗಿಲ್ಲ, ಒಟ್ಟು ಇಬ್ಬರು ಕಡಿಮೆಯೇ ಆಗಿರುತ್ತಾರೆ. ಪ್ಲೇಗದಿಂದ ಶಾಲೆಗಳು ಬಂದಾದದ್ದೇ ಇದಕ್ಕೆ ಕಾರಣವು. ಸನ್ ೧೮೯೭-೯೮ನೇ ಸಾಲಿನಲ್ಲಿ ನಮ್ಮ ಇಲಾಖೆಯ ಲೋಕಲಬೋರ್ಡ ಶಾಲೆಗಳಲ್ಲಿ ಒಟ್ಟು ೩೯೬೨ ಜನ ಹೆಡ್ಡ ಮಾಸ್ತರರಿದ್ದು, ಅವರಲ್ಲಿ ೨೮೧೬ ಜನ ಟ್ರೇಂಡರೂ, ೧೧೪೬ ಜನ ಅಂಟ್ರೇಂಡರೂ ಇರುವರು. ಈ ವರ್ಷ ಒಟ್ಟು ಹೆಡ್ಡ ಮಾಸ್ತರರ ಸಂಖ್ಯೆಯು ೩೯೩೦ ಆಗಿದ್ದು ಅವರಲ್ಲಿ ೨೭೮೬ ಜನ ಟ್ರೇಂಡರೂ ೧೧೪೪ ಜನ ಅಂಟ್ರೇಂಡರೂ ಇರುವರು. ಹೆಣ್ಣುಮಕ್ಕಳ ಶಾಲೆಗಳಲ್ಲಿರುವ ಹೆಡ್ಡ ಮಿಸ್ಟ್ರೇಸುಗಳಲ್ಲಿ ಸುಮಾರು ೧/೫ ದಷ್ಟು ಜನ ಅಂಟ್ರೇಂಡರಿರುವರು. ಸನ್ ೧೮೯೭-೯೮ ಸಾಲಿನಲ್ಲಿ ಇನ್ನೂರು ಮಂದಿ ಮಾತ್ರ ಟ್ರೇಂಡ ಮಿಸ್ಟ್ರೇಸುಗಳಿದ್ದರು. ಈ ವರ್ಷ ಈ ಸಂಖ್ಯೆಯು ಮೂರರಿಂದ ಕಡಿಮೆಯಾಗಿರುತ್ತದೆ. ಒಟ್ಟು ೮೦೮೨ ಜನ ಅಸಿ. ಮಾಸ್ತರರಲ್ಲಿ ೧೪೪೧ ಜನ ಅಂದರೆ ಸುಮಾರು ೧/೫ ಕ್ಕಿಂತ ಸ್ವಲ್ಪ ಕಡಿಮೆ ಜನರು ಟ್ರೇಂಡರಿರುವರು. ಕಳೆದ ವರ್ಷ ನಮ್ಮ ಇಲಾಖೆಯಲ್ಲಿಯು ಒಟ್ಟು ಟ್ರೇಂಡ ಮಾಸ್ತರರ ಸಂಖ್ಯೆಯು ೫೫೩೪ ಇತ್ತು ಅದು ಈ ವರ್ಷ ೫೫೮೮ ಆಗಿರುತ್ತದೆ. ಟ್ರೇಂಡ ಹೆಡ್ಡ ಮಿಸ್ಟ್ರೇಸುಗಳ ಸಂಖ್ಯೆಯು ಕಳೆದ ವರ್ಷ ೨೦೦ ಇತ್ತು. ಈ ವರ್ಷ ೧೯೭ ಆಗಿರುತ್ತದೆ. ಈ ಜನರ ಸಂಖ್ಯೆಯು ಹೆಚ್ಚಾಗಲಿಕ್ಕೆ ಸ್ವಾಭಾವಿಕವಾಗಿ ಕೆಲವು ಅಡಚಣೆಗಳಿರುತ್ತವೆ. ಪ್ಲೇಗ ದುಷ್ಕಾ

ಳಗಳಿಂದಂತೂ ಈ ಸಂಖ್ಯೆಯ ಬೆಳವಣಿಗೆಯು ಕಟ್ಟಾಗುವದು ಸಹಜವು. ಟ್ರೇಂಡ ಅಶಿಸ್ಟಂಟರ ಸಂಖ್ಯೆಯು ಕಳೆದ ವರ್ಷ ೧೫೮೯ ಇತ್ತು. ಈ ವರ್ಷ ೧೪೪೧ ಆಗಿರುತ್ತದೆ. ಆದರೆ ಟ್ರೇಂಡ ಸ್ತ್ರೀ ಶಿಕ್ಷಕರ ಸಂಖ್ಯೆಯು ಈ ವರ್ಷ ಹೋದ ವರ್ಷಕ್ಕಿಂತ ೨ ಕಡಿಮೆ ಅಂದರೆ ೪೩ ಆಗಿರುತ್ತದೆ. ಈ ವರ್ಷ ನಮ್ಮ ಇಲಾಖೆಯ ದಕ್ಷಿಣಭಾಗದ ಪ್ರಾಥಮಿಕ ಶಾಲೆಗಳಲ್ಲಿ ಸುಮಾರು ೧೩ ಜನ ಟ್ರೇಂಡ ಜನರು ಕಡಿಮೆಯಾಗಿರುವರು. ಪ್ಲೇಗರಾಕ್ಷಸನ ಪ್ರತಾಪವಿದು. ಪಬ್ಲಿಕ್ ಸರ್ವಿಸ ಪರೀಕ್ಷೆಯಲ್ಲಿ ಪಾಸಾದ ಅಂಟ್ರೇಂಡ ಅಸಿಸ್ಟಂಟರ ಸಂಖ್ಯೆಯು ಕಳೆದ ವರ್ಷ ೫೯೫೩ ಇತ್ತು. ಈ ವರ್ಷ ೫೯೬೫ ಆಗಿರುತ್ತದೆ ಮಧ್ಯಭಾಗದ ಪ್ರಾಥಮಿಕ ಗಂಡುಹುಡುಗರ ಸಾಲೆಗಳಲ್ಲಿ ೪೩೯ ಜನ ದಕ್ಷಿಣಭಾಗದ ಶಾಲೆಗಳಲ್ಲಿ ೪೪೬ ಟ್ರೇಂಡ ಅಸಿಸ್ಟಂಟರಿರುವರು. ಆದರೆ ಉತ್ತರಭಾಗದ ಪ್ರಾಥಮಿಕ ಗಂಡುಹುಡುಗರ ಶಾಲೆಗಳಲ್ಲಿ ೨೩೧ ಜನ ಮಾತ್ರ ಟ್ರೇಂಡ ಅಶಿಸ್ಟಂಟರು ಇರುವರು. ಈ ಭಾಗದಲ್ಲಿಯು ಅಂಟ್ರೇಂಡ ಅಶಿಸ್ಟಂಟರ ಸಂಖ್ಯೆಯು ಉಳಿದ ಎಲ್ಲ ಭಾಗಗಳಿಗಿಂತಲೂ ಬಹಳ ಹೆಚ್ಚಿಗಿರುವದು. ಹುಡಿಗಿಯರ ಶಾಲೆಗಳಲ್ಲಿರುವ ೫೪೫ ಅಶಿಸ್ಟಂಟರಲ್ಲಿ ೪೭ ಮಂದಿ ಮಾತ್ರ ಟ್ರೇಂಡ ಅಸಿಸ್ಟಂಟರು ಇರುವರು. ಒಟ್ಟು ೧೪೬೯ ಗಂಡು ಹುಡುಗರ ಸಾಲಿಗಳೊಳಗಿನ ಮಾಸ್ತರ ಜನರಲ್ಲಿ ೫೦೩೮ ಜನರು ಅಂದರೆ ಒಟ್ಟಿನ ¾ ದಷ್ಟು ಜನರು ಆರನೇ ಇಯತ್ತೆಯಲ್ಲಿ ಸಹ ಪಾಸಾಗದವರಿರುವರು.

* * *

ಕಳೆದ ತಿಂಗಳಲ್ಲಿ ನಮ್ಮ ಖಾತೆಯೊಳಗೆ ವಿಶೇಷ ಬದಲಾವಣಿಗಳಾದವು. ಧಾರವಾಡ ಹೈಸ್ಕೂಲ ಹೆಡ್ ಮಾಸ್ತರರಾದ ರಾ. ಸಾ. ಕೇಸಕರ ಇವರು ಪೇನಶನ್ ತೆಗೆದುಕೊಂಡು ಕಾರ್ಯನಿವೃತ್ತರಾದರು. ಅವರ ಸ್ಥಳಕ್ಕೆ ರಾ. ಸಾ. ಕರಂದೀಕರ ಇವರ ನೇಮಣೂಕು ಆದಂತೆ, ಅವರು ತಮ್ಮ ಕೆಲಸವನ್ನು ಕೈಕೊಂಡರು. ರಾ. ಸಾ. ರೊದ್ದ ಇವರು ತಮ್ಮ ಕೆಲಸದ ಚಾರ್ಜವನ್ನು ಬೆಳಗಾಂವ ಡೆಪ್ಯೂಟಿಗಳಾದ ರಾ. ಸಾ. ಸವಣೂರ ಇವರ ಕಡೆಗೆ ಒಪ್ಪಿಸಿ, ಟ್ರೇನಿಂಗಕಾಲೇಜ

ಪ್ರಿನ್ಸಿಪಾಲರ ಕೆಲಸದ ಚಾರ್ಜವನ್ನು ತೆಗೆದುಕೊಂಡರು. ವಿಜಾಪೂರ ಡೆಪ್ಯೂಟಿಗಳಾದ ರಾ. ಸಾ ಬಾಬಾಚಾರ್ಯ ಕೆರೂರ ಇವರು ಬೆಳಗಾಂವಿಗೆ, ಕಾರವಾರ ಡೆಪ್ಯೂಟಿಗಳಾದ ರಾ. ಸಾ. ಅಂಕಲೆ ಇವರು ವಿಜಾಪುರಕ್ಕೆ, ಧಾರವಾಡ ಹೈಸ್ಕೂಲ ೧ ನೇ ಅ. ಮಾಸ್ತರರಾದ ಮಿ. ಜೋಶಿ ಇವರು ಕಾರವಾರಕ್ಕೆ ಹೋಗಿ ತಮ್ಮ ತಮ್ಮ ಕೆಲಸಗಳನ್ನು ಕೈಕೊಂಡರು. ಕಾರವಾರ ಹೈಸ್ಕೂಲ ಹೆಡ್ ಮಾಸ್ತರರಾದ ಮಿ. ಘಾಟಕರವರು ಧಾರವಾಡ ಟ್ರೇನಿಂಗ ಕಾಲೇಜದ ವ್ಹಾ. ಪ್ರಿನ್ಸಿಪಾಲರಾದ ಮಿ. ದೇಶಪಾಂಡೆ ಇವರಿಗೆ ಚಾರ್ಜ ಕೊಟ್ಟು, ಠಾಣೇಗೆ ಹೋದರು. ಮಿ. ಸವದಿ ಇವರು ತಮ್ಮ ಕೆಲಸದ ಚಾರ್ಜವನ್ನು ಟ್ರೇನಿಂಗ ಕಾಲೇಜದ ೨ ನೇ ಅಸಿ. ಮಾಸ್ತರರಾದ ಮಿ. ಕುಲಕರ್ಣಿ ಇವರಿಗೆ ಕೊಟ್ಟು, ವ್ಹಾ. ಪ್ರಿನ್ಸಿಪಾಲರ ಚಾರ್ಜವನ್ನು ತೆಗೆದುಕೊಂಡರು.

ಈ ವರ್ಗಾವರ್ಗಿಗಳಿಂದ ಕಪಿಲಾಷಷ್ಠೀ ಯೋಗದಂತೆ, ಹೆಚ್ಚಿನ ನೌಕರ ಜನರಿಗೆ ಬಡತಿಯ ಯೋಗವನ್ನು ತಂದು ಕೊಟ್ಟಿದ್ದಕ್ಕಾಗಿ ರಾ. ಬ. ಸಹಸ್ರಬುದ್ಧೆ ಇವರನ್ನೂ, ಮೆ. ಡಾಯರೆಕ್ಟರ ಸಾಹೇಬರನ್ನೂ ಎಷ್ಟು ಹೊಗಳಿದರೂ ಸಾಲದು.

CHEMISTRY.

ರಸಾಯನಶಾಸ್ತ್ರ.

(೪೫ ನೇ ಪುಟದಿಂದ ಮುಂದೆ ಸಾಗಿದ್ದು.)

೧೧ ನೇ ಪಾಠವು.

ನೀರು.

೨೮—ಖಡು ಕೂಡಿ ಜಡವಾದ ನೀರು, ಕಾಸಿದರೆ ಹಗುರಾಗುತ್ತದೆ.

ಹಿಂದೆ ೩ ನೇ ಪ್ರಯೋಗದಲ್ಲಿ ಸುಣ್ಣದ ತಿಳಿಗೂ ನಮ್ಮ ಫುಪ್ಫುಸದೊಳಗಿಂದ ಹೊರಡುವ ಕಾರ್ಬಾನಿಕ ಆಸಿಡ ಎಂಬ ವಾಯುವಿಗೂ ಕೊಳವೆಯ ಮಾರ್ಗವಾಗಿ ಸಂಯೋಗ ಮಾಡಿದರೆ ಆ ತಿಳಿಯಲ್ಲಿ ಖಡುವೆಂಬ ಅವಿದ್ರಾವ್ಯ ಪದಾರ್ಥವು

ಹುಟ್ಟುತ್ತದೆಂತಲೂ, ಆ ಖಡುವಿನ ಸಂಪರ್ಕದಿಂದಲೇ ಸುಣ್ಣದ ತಿಳಿಗೆ ಹಾಲಿನ ಬಣ್ಣ ಬರುತ್ತದೆಂತಲೂ ಹೇಳಿದ್ದೇವೆ. ಕಾರ್ಬಾನಿಕ ಆಸಿಡ ಗ್ಯಾಸವೂ ಸುಣ್ಣವೂ ಸಂಯೋಗವಾಗಿ ಖಡುವಾಗುತ್ತದೆ ಈ ಬಗೆಯಾಗಿ ಖಡು ಕೂಡಿ ಜಡವಾದ ನೀರಿನ ಜಡತ್ವವನ್ನು ನಾಶಗೊಳಿಸಬಹುದೇ ?

ಪ್ರಯೋಗ—೬೪. ೩ನೇ ಪ್ರಯೋಗವನ್ನು ಇನ್ನೊಮ್ಮೆ ಮಾಡಿರಿ ಆದರೆ ಈ ಸಾರೆ ನಿಮ್ಮ ಉಚ್ಛ್ವಾಸವು ಸುಣ್ಣದ ತಿಳಿಯಲ್ಲಿ ಹೆಚ್ಚಿಗೆ ಸೇರುವಂತೆ ಯುಕ್ತಿಸಿರಿ. ಅಂದರೆ ಸುಮಾರು ೪೧ ಮಿನಿಟುಗಳ ವರೆಗೆ ಆ ತಿಳಿಯಲ್ಲಿ ಊದಿರಿ. ಆರಂಭದಲ್ಲಿ ಈ ತಿಳಿಯು ಬೆಳ್ಳಗಾಗುತ್ತ ಕಡೆಯಲ್ಲಿ ಸ್ವಚ್ಛವಾಗಿ ಕಾಣುವದು; ಸೋಸುವ ಕಾಗದದೊಳಗಿಂದ ಸೋಸಿ ತೆಗೆದರೆ ಇದಕ್ಕೂ ನಿರ್ಮಲವಾಗಿ ತೋರುವದು. ಆದರೂ ಈ ನೀರು ಜಡವಾಗಿರುವದು. ಸಬಕಾರದ ಪ್ರಯೋಗವನ್ನು ಮಾಡಿರಿ, ಅಂದರೆ ಈ ಮಾತಿನ ನಿಜತ್ವವು ಸ್ಪಷ್ಟವಾಗುವದು. ಒಳ್ಳೇದು, ಈ ಪ್ರಯೋಗದಿಂದ ನಮಗೇನು ತಿಳಿಯಿತು ! ನಮ್ಮ ಪುಪ್ಫುಸದೊಳಗಿಂದ ಹೊರಬೀಳುವ ಕಾರ್ಬಾನಿಕ ಆಸಿಡ ಗ್ಯಾಸದ ಯೋಗದಿಂದ ಖಡು ಸಹ ಕರಗಿ ನೀರು ನಿರ್ಮಲವಾಗಿ ತೋರುತ್ತದೆ. ಅಂದರೆ ಈ ವಾಯುವಿನಲ್ಲಿ ಅವಿದ್ರಾವ್ಯವಾದ ಖಡುವನ್ನು ಕರಗಿಸುವ ಸಾಮರ್ಥ್ಯ ಉಂಟೆಂದು ಸಿದ್ಧವಾಗುತ್ತದೆ. ಕಾರ್ಬಾನಿಕ ಆಸಿಡ ಗ್ಯಾಸವಂತು ವಾಯುರೂಪ ಪದಾರ್ಥವೆಂಬುದು ನಿಮಗೆ ಮೊದಲೇ ಗೊತ್ತಿರುವದು. ಆದ್ದರಿಂದ ಖಡು ಕೂಡಿ ಜಡವಾದ ನೀರನ್ನು ಕಾಸಲಾಗಿ ಈ ವಾಯುವು ಉಷ್ಣತೆಯ ಸಂಪರ್ಕದಿಂದ ಹಗುರಾಗಿ ನೀರೊಳಗಿಂದ ಹೊರಬಿದ್ದು ಹೋಗುತ್ತದೆ. ಉಳಿದ ಸುಣ್ಣದ ಭಾಗವು ಕಣಗಳ ರೂಪದಿಂದ ನೀರಿನ ತಳದಲ್ಲಿ ಉಳಿಯುತ್ತದೆ. ಇದನ್ನು ಮನಗಾಣುವದು ಪ್ರಯಾಸವಲ್ಲ. ಒಂದು ಕಾಜಿನ ಪಾತ್ರೆಯಲ್ಲಿ ಈ ತರದ ಜಡ ನೀರನ್ನು ಒಳಿತಾಗಿ ಕಾಸಿ, ಕಾಗದದೊಳಗಿಂದ ಸೋಸಿಕೊಳ್ಳಬೇಕು. ಬಳಿಕ ಸಬಕಾರದ ಪ್ರಯೋಗವನ್ನು ಮಾಡಿ ನೋಡಿನಗೆ ಇದರೊಳಗಿನ ಜಡತ್ವವು ನಷ್ಟವಾಗಿರುವದೆಂಬಷ್ಟು

ಕೊಡಲೇ ತಿಳಿಯುವದು. ಈ ನೀರನ್ನು ಹಗುರು ಮಾಡುವದಿನ್ನೊಂದು ಬಗೆಯುಂಟು. ಅದು ಹ್ಯಾಗಂದರೆ:- ಈ ಮಾದರಿಯ ಜಡನೀರಲ್ಲಿ ತುಸು ಸುಣ್ಣದ ತಿಳಿಯನ್ನು ಕೂಡಿಸು. ಅದರಿಂದ ಆ ನೀರೊಳಗಿನ ಕಾರ್ಬಾನಿಕ ಆಸಿಡ ವಾಯುವೂ, ತಿಳಿಯೊಳಗಿನ ಸುಣ್ಣವೂ ಒಂದಾಗಿ ಖಡುವಿನ ರೂಪವನ್ನು ಹೊಂದುತ್ತದೆ ಮತ್ತು ಆ ನೀರೊಳಗಿನ ಖಡುವಿನೊಡನೆ ಆ ಪಾತ್ರೆಯ ತಳದಲ್ಲಿ ಕೂತುಕೊಳ್ಳುತ್ತದೆ. ಈ ಮೇರೆಗೆ ಖಡು ಕೂಡಿ ಜಡವಾದ ನೀರನ್ನು ಸುಲಭವಾಗಿ ಹಗುರು ಮಾಡಲಿಕ್ಕೆ ಬರುವದು.

೬೯. ಬೇರೆ ಬೇರೆ ಹೊಳೆಗಳ ನೀರಲ್ಲಿ ಜಡತ್ವವು ಬೇರೆ ಬೇರೆ ಪ್ರಮಾಣದಿಂದ ಇರುವದು.

ಖಡು ಕೂಡಿ ಜಡವಾದ ನೀರಿನ ಜಡತ್ವಕ್ಕೂ, ಪ್ಲಾಸ್ಟರ ಆಫ್ ಪ್ಯಾರೀಸ್ ಎಂಬ ಪದಾರ್ಥವು ಕೂಡಿ ಜಡವಾದ ನೀರಿನ ಜಡತ್ವಕ್ಕೂ ಮಹದಂತರ ಉಂಟು. ಖಡು ಕೂಡಿ ಜಡವಾದ ನೀರನ್ನು ಕಾಸಿದರೆ ಅದರ ಜಡತ್ವವು ನಷ್ಟವಾಗುತ್ತದೆ. ಆದರೆ ಈ ಎರಡನೇ ಒಡವೆ ಕೂಡಿದ ನೀರಿನ ಜಡತ್ವವು ಕಾಸಿದರೆ ಕಡಿಮೆಯಾಗುವದಿಲ್ಲ. ಸುಣಬುರಲಿಯ ಹರಳೊಳಗಿಂದ ಹರಿದು ಬರುವ ಶಲೆ, ಹಳ್ಳ, ಹೊಳೆಗಳ ನೀರು ಬಹಳ ಜಡವಿರುತ್ತದೆ. ಮಳೆಯ ನೀರೊಳಗೆ ಹವೆಯೊಳಗಿನ ಕಾರ್ಬಾನಿಕ ಆಸಿಡ ವಾಯುವು ಕೂಡಿಕೊಂಡಿರುತ್ತದೆ. ಅದರಿಂದ ಈ ಬಿದ್ದ ಮಳೆನೀರು ಸುಣ್ಣದ ತರಗಳೊಳಗಿಂದ ಅಥವಾ ಖಡುವಿನ ತರಗಳೊಳಗಿಂದ ಹರಿದು ಹೋಗುವಾಗ ನೀರೊಳಗಿನ ವಾಯುವಿನ ಸಂಪರ್ಕದಿಂದ ಸುಣ್ಣವು ಖಡುವಾಗಿ, ಖಡುವು ಕರಿಗಿ, ನೀರೊಳಗೆ ಕೂಡಿಕೊಂಡು ಅದರಲ್ಲಿ ಜಡತ್ವವನ್ನುಂಟು ಮಾಡುತ್ತದೆ. ಭೂಮಿಯೊಳಗಿನ ಬಹುತರ ಎಲ್ಲ ಹೊಳೆಗಳ ನೀರು ಖಡು ಕೂಡಿಯೇ ಜಡವಾಗಿರುತ್ತದೆ ನಮ್ಮ ನಿಮ್ಮ ಮನೆಯಲ್ಲಿ ನೀರು ಕಾಸುವ ದೊಡ್ಡ ದೊಡ್ಡ ಪಾತ್ರೆಗಳುಂಟಷ್ಟೇ? ಅವುಗಳ ತಳದಲ್ಲಿ ಅಥವಾ ಉಗಿಯಂತ್ರಗಳಲ್ಲಿ ಉಗಿಯನ್ನು ಹುಟ್ಟಿಸುವ ಪಾತ್ರೆಯ ತಳದಲ್ಲಿ ಪ್ರತಿದಿನ ನೀರು ಕಾಸುತ್ತಿರುವದರಿಂದ

ಒಂದು ತರದ ಬಿಳೀ ಪುಡಿಯು ಕೂತದ್ದು ದೃಷ್ಟಿಗೋಚರವಾಗುವದು, ಇದು ಯಾತರದಿರಬಹುದು? ಇದು ಖಡುವಿನದು. ನೀರು ಕಾಸುವಾಗ ಖಡುವಿನ ಪೃಥಕ್ಕರಣವಾಗಿ ಅದರ ಪುಡಿಯು ತಳಕ್ಕೆ ಕೂಡುತ್ತದೆ.

ಕೃಷ್ಣೆಯು ಉಗಮದಿಂದ ಬಹು ದೂರದವರೆಗೆ ಕಲ್ಲು, ಮಳಲುಗಳೊಳಗಿಂದ ಹರಿದುಹೋಗುವದರಿಂದ ಅದರ ನೀರು ಹಗುರಿರುತ್ತದೆ. ಯಾಕಂದರೆ ಭೂಮಿಯೊಳಗಿನ ಇತರ ಪದಾರ್ಥಗಳು ಅದರೊಳಗೆ ಕೂಡುವದಿಲ್ಲ. ಗಂಗಾ ನದಿಯ ನೀರು ಜಡವುಂಟು ಯಮುನೆಯ ನೀರು ಹಗುರು. ನರ್ಮದಾ ತಾಪಿಗಳ ನೀರು ಉಗಮದ ಹತ್ತರ ಹಗುರಾಗಿದ್ದು, ಮುಂದೆ ಕ್ರಮವಾಗಿ ಜಡವಾಗುತ್ತ ಹೋಗಿವೆ. ಈ ಪ್ರಕಾರ ಎಲ್ಲ ಹೊಳೆಗಳ ನೀರು ಒಂದೇ ಪ್ರಕಾರದವಿರುವದಿಲ್ಲ.

೩೦. ವಸ್ತಿಯ ಊರೊಳಗಿನ ಜಲಾಶಯಗಳ ನೀರೊಳಗೆ ಹೊಲಸು ತೇಲುತ್ತಿರುತ್ತದೆ,

ವಸ್ತಿಯ ಊರೊಳಗಿಂದ, ಇಲ್ಲವೆ ಹೊಲಸಿನ ಹರಿಗಳ ಬದಿಯಿಂದ ಹರಿದುಹೋಗುವ ನೀರಲ್ಲಿ ಮನೆಯೊಳಗಿನ ಹೊಲಸು ಕೂಡಿ ನೀರು ಕೆಟ್ಟುಹೋಗುತ್ತದೆ. ಆ ನೀರು ಪ್ರಾಶನಕ್ಕೆ ಅಯೋಗ್ಯವೆಂದು ಹೇಳಬಹುದು. ಒಮ್ಮೊಮ್ಮೆ ಈ ನೀರಲ್ಲಿ ಅನೇಕ ವಿಷಗಳು ಕೂಡಿರುವದರಿಂದ ಇವುಗಳನ್ನು ಬಳಿಸುವವರಿಗೆ ತರತರದ ಬೇನೆಗಳು ಬರುತ್ತವೆ. ಊರೊಳಗಿನ ನೀರು ಸ್ಫಟಿಕದಂತೆ ಸ್ವಚ್ಛವಾಗಿ ಕಂಡರೂ ಅದರೊಳಗೆ ಹರಿಯ ಹೊಲಸು ಕೂಡಿರುವದು ನಿಜವು. ಈ ಕಾರಣದಿಂದಲೇ ಈಗ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಬಳಿಸಲಿಕ್ಕೆ ಬೇಕಾಗುವ ನೀರಿನ ಸಂಚಯಸ್ಥಾನವನ್ನು, ವಸತಿಸ್ಥಾನದಿಂದ ಬಹು ದೂರದಲ್ಲಿ ಗೊತ್ತು ಪಡಿಸಿರುತ್ತಾರೆ. ಅಲ್ಲಿಂದ ಆ ನೀರನ್ನು ಸೀಸದ ಇಲ್ಲವೆ ಕಬ್ಬಿಣದ ನಳಗಳೊಳಗಿಂದ ಊರೊಳಗೆ ತಂದಿರುತ್ತಾರೆ ಹೀಗೆ ಮಾಡುವದರಿಂದ ಕುಡಿಯುವ ನೀರಿಗೆ ಹರಿಯ ಹೊಲಸಿನ ಸಂಪರ್ಕವಾಗುವ ಭಯವಿಲ್ಲ. ಸಾರಾಂಶ ಊರೊಳಗಿಂದ ಹರಿಯು

ವ ನೀರು ಕುಡಿಯಲಿಕ್ಕೆ ಅಯೋಗ್ಯವೆಂದು ಹೇಳಲಿಕ್ಕೆ ಅಡ್ಡ ಇಲ್ಲ.

೩೧ ತರತರದ ವಾಯುಗಳು ಯಾಂತ್ರಿಕ ಮಿಶ್ರಣದಿಂದ ನೀರೊಳಗೆ ಬೆರತುಕೊಂಡು ನಿಂತಿರುತ್ತವೆ.

ನೀರೊಳಗೆ ಕೇವಲ ಜಡಪದಾರ್ಥಗಳೇ ಕೂಡುತ್ತವೆಂತಲ್ಲ ಹಲವು ತರದ ವಾಯುಗಳು ಸಹ ಹೆಚ್ಚುಕಡಿಮೆ ಮಾನದಿಂದ ಮಿಶ್ರವಾಗುತ್ತವೆ. ಕಾರ್ಬಾನಿಕ ಆಸಿಡ ಗ್ಯಾಸವು ಮಳೆ ನೀರಲ್ಲಿ ಕೂಡಿಕೊಳ್ಳುತ್ತದೆ. ಪಟ್ಟಣಗಳಲ್ಲಿ ಸೋಡಾವಾಟರವೆಂಬ ಒಂದು ತರದ ನೀರನ್ನು ಸೀಸೆಗಳಲ್ಲಿ ತುಂಬಿ ಬಾಜಾರದಲ್ಲಿ ಮಾರುತ್ತಿರುವದು ನಿಮಗೆ ಗೊತ್ತಿರಬಹುದು. ಆ ನೀರಲ್ಲಿ ಕಾರ್ಬಾನಿಕ ಆಸಿಡ ವಾಯುವು ಹೇರಳವಾಗಿ ಕೂಡಿಕೊಂಡಿರುತ್ತದೆ. ಸೀಸೆಯ ಬೆಣೆಯನ್ನು ಸ್ವಲ್ಪ ಸೈಲು ಮಾಡಿದ ಕೂಡಲೆ ಒಳಗಿರುವ ವಾಯುವು ಒಳ್ಳೇ ಕಸುವಿನಿಂದ ಆ ಬೆಣೆಯನ್ನು ಮೇಲಕ್ಕೆ ಹಾರಿಸಿ ತಾನೂ ಹೊರಬಿದ್ದು ಹೋಗುತ್ತದೆ. ಸಾಮಾನ್ಯ ಹವೆಯಾದರೂ ನೀರೊಳಗೆ ಕೂಡಿರುತ್ತದೆ. ಶಲೆಯ ನೀರೊಳಗೆ ಆಕ್ಸಿಜನ ವಾಯುವು ವಿಪ್ರುತವಾಗಿ ಕೂಡಿಕೊಂಡಿರುತ್ತದೆ. ಅಂಥ ನೀರನ್ನು ಕುಡಿಯುವವರ ಮನಸಿಗೆ ಸೊಗಸಾಗಿ ಉತ್ಸಾಹ ಹುಟ್ಟುತ್ತದೆ. ಆದರೆ ಅದೇ ನೀರನ್ನು ಮರಳಿಸಿ ಆರಿಸಿದರೆ ಅದರೊಳಗೆ ಕೂಡಿಕೊಂಡ ಹವೆಯು ಹೊರಟು ಹೋಗಿ ಅದು ಮಣಮಣಸಾಗಿಯೂ, ಅರುಚಿಯಾಗಿಯೂ ಹತ್ತುವದು ಸಮುದ್ರದ ನೀರಲ್ಲಿ ಆಕ್ಸಿಜನ ವಾಯುವು ಕರಗಿ ಬೆರತುಕೊಂಡು ಇರುವದರಿಂದಲೇ ಮತ್ಸ್ಯಾದಿ ಜಲಚರಗಳು ಬಾಳಿರುತ್ತವೆ. ಎಲ್ಲ ಪ್ರಾಣಿಗಳ ಶ್ವಾಸೋಚ್ಛ್ವಾಸಕ್ಕೆ ಆಕ್ಸಿಜನ್ನವು ಅವಶ್ಯವೆಂದು ನಿಮಗೆ ಗೊತ್ತುಂಟು. ನೀರು ಹೈಡ್ರೋಜನ್ ಆಕ್ಸಿಜನಗಳ ಸಂಯೋಗದ ಪ್ರತಿಫಲವಿರುವದರಿಂದ ಜಲಚರಗಳಿಗೆ ಆ ಘಟಕ ಆಕ್ಸಿಜನವೇ ಪೋಷಿಸುತ್ತಿರಬಹುದೆಂದು ನಿಮಗೆ ಭಾಸವಾದೀತು; ಆದರೆ ಈ ಭಾಸವು ನಿಜವಾದದ್ದಲ್ಲ. ನೀರುಂಟಾಗಲಿಕ್ಕೆ ಇವೆರಡು ಘಟಕಗಳು ರಸಾಯನ ಸಂಯೋಗದಿಂದ ಮಿಶ್ರ

ವಾಗಿ ತಮ್ಮ ಮೊದಲಿನ ರೂಪ ಬಿಟ್ಟು ಜಲರೂಪವನ್ನು ಧರಿಸಿರುತ್ತವೆ. ಪ್ರಾಣಿಗಳು ಪ್ರನಾಹಿಯನ್ನು ಉಸುರಾಡಿಸುವದು ಅಸಂಭವವು ಹಾಗಾದರೆ ಜಲಚರಗಳ ಶ್ವಾಸೋಚ್ಛ್ವಾಸವು ಹ್ಯಾಗೆ ಸಾಗುತ್ತಿರಬಹುದು? ಸೃಷ್ಟಿಕರ್ತನ ಚಾತುರ್ಯವನ್ನು ಎಷ್ಟೆಂದು ಬಣ್ಣಿಸಬಹುದು! ಆ ದಯಾನಿಧಿಯು, ಪ್ರಾಣವಾಯುವು ನೀರಲ್ಲಿ ಬೆರತಿರುವಂತೆ ನಿಯಮಿಸಿದ್ದಾನೆ. ಆದ್ದರಿಂದ ಜಲಚರಗಳು ನೀರು ಕುಡಿಯಲಾಗಿ ಅದರೊಳಗೆ ಬೆರತುಕೊಂಡಿದ್ದ ಆಕ್ಸಿಜನವು ಅವುಗಳ ಶರೀರದಲ್ಲಿ ಉಳಿದು ನೀರು ಹೊರಬಿದ್ದು ಹೋಗುತ್ತದೆ. ಒಂದು ಪಾತ್ರೆಯೊಳಗೆ ನೀರು ತುಂಬಿ ಆ ನೀರನ್ನು ಒಳಿತಾಗಿ ಕಾಸು. ಅದು ಆರಿದ ಬಳಿಕ ಅದರಲ್ಲಿ ಕೆಲವು ಮೀನುಗಳನ್ನು ತಂದು ಬಿಡು ಹೊರಗಿನ ಹವೆಯು ತಗಲದಂತೆ ಪಾತ್ರೆಯ ಮೇಲೆ ಮುಚ್ಚು. ಬಳಿಕ ಕೆಲ ಹೊತ್ತಿನ ಮೇಲೆ ಆ ಮುಚ್ಚಳ ತೆಗೆದು ನೋಡಿದರೆ ಒಂದೂ ಬದುಕಿದ ಮೀನವು ದೃಷ್ಟಿಗೋಚರವಾಗಲಿಕ್ಕಿಲ್ಲ ಈ ಮತ್ಸ್ಯಗಳ ಮರಣಕ್ಕೆ ಆಕ್ಸಿಜನ್ನದ ಅಭಾವವೇ ಕಾರಣವೆಂದು ಬೇರೆ ಹೇಳುವ ಪ್ರಯೋಜನವಿಲ್ಲ.

(ಸಂಕ್ಷೇಪ)

THE PHILOSOPHY OF EDUCATION.

ಶಿಕ್ಷಣಶಾಸ್ತ್ರ.

(೯೦ನೇ ಪುಟದಿಂದ ಮುಂದೆ ಸಾಗಿದ್ದು.)

ಮಠದ ಹೊರ್ತು ಬೇರೆ ಅಧ್ಯಯನ ಶಾಲೆಗಳೇ ಇದ್ದಿಲ್ಲ. ಧರ್ಮಕ್ರಾಂತಿ(೧೪೯೮)ಯ ತರುವಾಯ ಕೆಲವು ದಿವಸವಾದರೂ ಪ್ರಾಥಮಿಕ ಶಿಕ್ಷಣಕ್ಕೆ ಜನರು ತಕ್ಕಷ್ಟು ಲಕ್ಷ ಕೊಡಲಿಲ್ಲ. ಹಳೇ ಗ್ರಂಥಗಳು ಬಹುಮಾನ್ಯವಾದವುಗಳೆಂದೆಣಿಸಲ್ಪಟ್ಟದ್ದರಿಂದ ಅವುಗಳ ಅಧ್ಯಯನವೇ ಗೌರವವುಳ್ಳದ್ದೆಂದು ತಿಳಿದು ಶಾಲೆಯ ಶಿಕ್ಷಣದ ಆರಂಭವೂ ಅಂತ್ಯವೂ ಆ ಅಧ್ಯಯನದಲ್ಲಿಯೇ ಆಗುತ್ತಿತ್ತು. ಕಾವ್ಯ ತತ್ವಶಾಸ್ತ್ರಗಳಲ್ಲಿಯಾದರೂ ನಿಜವಾದ ಸುಧಾರಣೆಯನ್ನು ಮಾಡುವಂಥ ಸಾಮರ್ಥ್ಯವಿದ್ದಿಲ್ಲ. ಕೆಲವು ಅಧ್ಯಾಯಗಳನ್ನು ಬಾಯಿಪಾಠ ಮಾಡಿಸುವದು ಶಿಕ್ಷ

ಷೆ ನೀರು ಕುಡಿಯಲಿಕ್ಕೆ ಅಯೋಗ್ಯವೆಂದು ಹೇಳಲಿಕ್ಕೆ ಅಡ್ಡಿ ಇಲ್ಲ.

೪೧ ತರತರದ ವಾಯುಗಳು ಯಾಂತ್ರಿಕ ಮಿಶ್ರಣದಿಂದ ನೀರೊಳಗೆ ಬೆರತುಕೊಂಡು ನಿಂತಿರುತ್ತವೆ.

ನೀರೊಳಗೆ ಕೇವಲ ಜಡಪದಾರ್ಥಗಳೇ ಕೂಡುತ್ತವೆಂತಲ್ಲ ಹಲವು ತರದ ವಾಯುಗಳು ಸಹ ಹೆಚ್ಚುಕಡಿಮೆ ಮಾನದಿಂದ ಮಿಶ್ರವಾಗುತ್ತವೆ. ಕಾರ್ಬಾನಿಕ ಆಸಿಡ ಗ್ಯಾಸವು ಮಳೆ ನೀರಲ್ಲಿ ಕೂಡಿಕೊಳ್ಳುತ್ತದೆ. ಪಟ್ಟಣಗಳಲ್ಲಿ ಸೋಡಾವಾಟರವೆಂಬ ಒಂದು ತರದ ನೀರನ್ನು ಸೀಸೆಗಳಲ್ಲಿ ತುಂಬಿ ಬಾಜಾರದಲ್ಲಿ ಮಾರುತ್ತಿರುವದು ನಿಮಗೆ ಗೊತ್ತಿರಬಹುದು. ಆ ನೀರಲ್ಲಿ ಕಾರ್ಬಾನಿಕ ಆಸಿಡ ವಾಯುವು ಹೇರಳವಾಗಿ ಕೂಡಿಕೊಂಡಿರುತ್ತದೆ ಸೀಸೆಯ ಬೆಣೆಯನ್ನು ಸ್ವಲ್ಪ ಸೈಲು ಮಾಡಿದ ಕೂಡಲೆ ಒಳಗಿರುವ ವಾಯುವು ಒಳ್ಳೇ ಕಸುವಿನಿಂದ ಆ ಬೆಣೆಯನ್ನು ಮೇಲಕ್ಕೆ ಹಾರಿಸಿ ತಾನೂ ಹೊರಬಿದ್ದು ಹೋಗುತ್ತದೆ. ಸಾಮಾನ್ಯ ಹವೆಯಾದರೂ ನೀರೊಳಗೆ ಕೂಡಿರುತ್ತದೆ. ಶಲೆಯು ನೀರೊಳಗೆ ಆಕ್ಸಿಜನ ವಾಯುವು ವಿಪ್ರುತವಾಗಿ ಕೂಡಿಕೊಂಡಿರುತ್ತದೆ. ಅಂಥ ನೀರನ್ನು ಕುಡಿಯುವವರ ಮನಸಿಗೆ ಸೊಗಸಾಗಿ ಉತ್ಸಾಹ ಹುಟ್ಟುತ್ತದೆ. ಆದರೆ ಅದೇ ನೀರನ್ನು ಮರಳಿಸಿ ಆರಿಸಿದರೆ ಅದರೊಳಗೆ ಕೂಡಿಕೊಂಡ ಹವೆಯು ಹೊರಟು ಹೋಗಿ ಅದು ಮುಣಮುಣಕಾಗಿಯೂ, ಅರುಚಿಯಾಗಿಯೂ ಹತ್ತುವದು ಸಮುದ್ರದ ನೀರಲ್ಲಿ ಆಕ್ಸಿಜನ ವಾಯುವು ಕರಗಿ ಬೆರತುಕೊಂಡು ಇರುವದರಿಂದಲೇ ಮತ್ಸ್ಯಾದಿ ಜಲಚರಗಳು ಬಾಳಿರುತ್ತವೆ. ಎಲ್ಲ ಪ್ರಾಣಿಗಳ ಶ್ವಾಸೋಚ್ಛ್ವಾಸಕ್ಕೆ ಆಕ್ಸಿಜನ್ನವು ಅವಶ್ಯವೆಂದು ನಿಮಗೆ ಗೊತ್ತುಂಟು ನೀರು ಹೈಡ್ರೋಜನ್ ಆಕ್ಸಿಜನಗಳ ಸಂಯೋಗದ ಪ್ರತಿಫಲವಿರುವದರಿಂದ ಜಲಚರಗಳಿಗೆ ಆ ಘಟಕ ಆಕ್ಸಿಜನವೇ ಪೋಷಿಸುತ್ತಿರಬಹುದೆಂದು ನಿಮಗೆ ಭಾಸವಾದೀತು; ಆದರೆ ಈ ಭಾಸವು ನಿಜವಾದದ್ದಲ್ಲ. ನೀರುಂಟಾಗಲಿಕ್ಕೆ ಇವೆರಡು ಘಟಕಗಳು ರಸಾಯನ ಸಂಯೋಗದಿಂದ ಮಿಶ್ರ

ಕರಗಿ ತಮ್ಮ ಮೊದಲಿನ ರೂಪ ಬಿಟ್ಟು ಜಲರೂಪವನ್ನು ಧರಿಸಿರುತ್ತವೆ. ಪ್ರಾಣಿಗಳು ಪ್ರಾಣವಾಯುವನ್ನು ಉಸುರಾಡಿಸುವದು ಅಸಂಭವವು ಹಾಗಾದರೆ ಜಲಚರಗಳ ಶ್ವಾಸೋಚ್ಛ್ವಾಸವು ಹ್ಯಾಗೆ ಸಾಗುತ್ತಿರಬಹುದು? ಸೃಷ್ಟಿಕರ್ತನ ಚಾತುರ್ಯವನ್ನು ಎಷ್ಟೆಂದು ಬಣ್ಣಿಸಬಹುದು! ಆ ದಯಾನಿಧಿಯು, ಪ್ರಾಣವಾಯುವು ನೀರಲ್ಲಿ ಬೆರತಿರುವಂತೆ ನಿಯಮಿಸಿದ್ದಾನೆ, ಆದ್ದರಿಂದ ಜಲಚರಗಳು ನೀರು ಕುಡಿಯುಲಾಗಿ ಅದರೊಳಗೆ ಬೆರತುಕೊಂಡಿದ್ದ ಆಕ್ಸಿಜನವು ಅವುಗಳ ಶರೀರದಲ್ಲಿ ಉಳಿದು ನೀರು ಹೊರಬಿದ್ದು ಹೋಗುತ್ತದೆ. ಒಂದು ಪಾತ್ರೆಯೊಳಗೆ ನೀರು ತುಂಬಿ ಆ ನೀರನ್ನು ಬಳಿತಾಗಿ ಕಾಸು, ಅದು ಆರಿದ ಬಳಿಕ ಅದರಲ್ಲಿ ಕೆಲವು ಮೀನುಗಳನ್ನು ತಂದು ಬಿಡು ಹೊರಗಿನ ಹವೆಯು ತಗಲದಂತೆ ಪಾತ್ರೆಯ ಮೇಲೆ ಮುಚ್ಚು. ಬಳಿಕ ಕೆಲ ಹೊತ್ತಿನ ಮೇಲೆ ಆ ಮುಚ್ಚಳ ತೆಗೆದು ನೋಡಿದರೆ ಒಂದೂ ಬದುಕಿದ ಮೀನವು ದೃಷ್ಟಿಗೋಚರವಾಗಲಿಕ್ಕಿಲ್ಲ ಈ ಮತ್ಸ್ಯಗಳ ಮರಣಕ್ಕೆ ಆಕ್ಸಿಜನ್ನದ ಅಭಾವವೇ ಕಾರಣವೆಂದು ಬೇರೆ ಹೇಳುವ ಪ್ರಯೋಜನವಿಲ್ಲ.

(ಸಶೇಷ)

THE PHILOSOPHY OF EDUCATION.

ಶಿಕ್ಷಣಶಾಸ್ತ್ರ.

(೯೦ ನೇ ಪುಟದಿಂದ ಮುಂದೆ ಸಾಗಿದ್ದು.)

ಮಠದ ಹೊರ್ತು ಬೇರೆ ಅಧ್ಯಯನ ಶಾಲೆಗಳೇ ಇದ್ದಿಲ್ಲ. ಧರ್ಮಕ್ರಾಂತಿ(೧೫೯೭) ಯ ತರುವಾಯ ಕೆಲವು ದಿವಸವಾದರೂ ಪ್ರಾಥಮಿಕ ಶಿಕ್ಷಣಕ್ಕೆ ಜನರು ತಕ್ಕಷ್ಟು ಲಕ್ಷ ಕೊಡಲಿಲ್ಲ ಹಳೇ ಗ್ರಂಥಗಳು ಬಹುಮಾನ್ಯವಾದವುಗಳೆಂದೆಣಿಸಲ್ಪಟ್ಟದ್ದರಿಂದ ಅವುಗಳ ಅಧ್ಯಯನವೇ ಗೌರವವುಳ್ಳದ್ದೆಂದು ತಿಳಿದು ಶಾಲೆಯ ಶಿಕ್ಷಣದ ಆರಂಭವೂ ಅಂತ್ಯವೂ ಆ ಅಧ್ಯಯನದಲ್ಲಿಯೇ ಆಗುತ್ತಿತ್ತು. ಕಾವ್ಯ ತತ್ವಶಾಸ್ತ್ರಗಳಲ್ಲಿಯಾದರೂ ನಿಜವಾದ ಸುಧಾರಣೆಯನ್ನು ಮಾಡುವಂಥ ಸಾಮರ್ಥ್ಯವಿದ್ದಿಲ್ಲ. ಕೆಲವು ಅಧ್ಯಾಯಗಳನ್ನು ಬಾಯಿಪಾಠ ಮಾಡಿಸುವದು ಶಿಕ್ಷ

ಣವೆನಿಸುವದು. ಸಾರಾಂಶ, ಬುದ್ಧಿಸಾಮರ್ಥ್ಯಗಳಲ್ಲಿ ವಿಚಾರಸಾಮರ್ಥ್ಯ, ಶೋಧದೃಷ್ಟಿ ಮುಂತಾದ ಸಾಮರ್ಥ್ಯಗಳನ್ನು ಹಿಮ್ಮೆಟ್ಟಿಸಿ ಸ್ಮರಣಸಾಮರ್ಥ್ಯದ ಸಾಮ್ರಾಜ್ಯವೇ ಅಬಾಧಿತವಾಗಿತ್ತು. ಸೃಷ್ಟಿವಿರುದ್ಧವಾದಂಥ ವಿಚಾರಬಾಹ್ಯವಾದಂಥ ಪದ್ಧತಿಯ ಸಾಮ್ರಾಜ್ಯದಲ್ಲಿ ಸ್ಮರಣಸಾಮರ್ಥ್ಯವುಳ್ಳವನೇ ಪಂಡಿತನು ಎನಿಸಿಕೊಳ್ಳುತ್ತಿದ್ದನು. ಇದಕ್ಕೆ ಪದ್ಧತಿಯೆಂದು ಹೆಸರು ಕೊಡುವದಾದರೆ “ವಿಶ್ವಾಸದೃಷ್ಟ ಪೃಥಕ್ಕರಣ ಪದ್ಧತಿ” ಎಂದು ಹೇಳಬಹುದು. ಈ ಪದ್ಧತಿಯಿಂದ ಜನರಿಗೆ ಶಬ್ದಜ್ಞಾನವಾಗುತ್ತಿತ್ತೇ ಹೊರ್ತು ವಸ್ತುಜ್ಞಾನವಾಗುತ್ತಿದ್ದಿಲ್ಲ.

ಈ ಸ್ಥಿತಿಯು ಯಾವತ್ತು ಯುರೋಪಖಂಡವನ್ನು ವ್ಯಾಪಿಸುವಾಗ, ಲಾಕನೆಂಬವನು ಶಿಕ್ಷಣದ ನಿಜವಾದ ಸ್ವರೂಪವನ್ನು ತಿಳಿಸುವ ಉಪಕ್ರಮವನ್ನು ಮಾಡಿದನು ಪ್ರಾಥಮಿಕ ಶಿಕ್ಷಣವೆಂದರೆ ವಿದ್ಯಾರ್ಥಿಗಳ ಬುದ್ಧಿಸಾಮರ್ಥ್ಯಗಳಿಗೆ ಚಾಲನೆ ಕೊಡುವದೆಂದು ಪ್ರತಿಪಾದಿಸುವವರಲ್ಲಿ ಇವನೇ ಮೊದಲಿನವನು. ಇವನು ಚಿಕ್ಕ ಮಕ್ಕಳಿಗೆ ಆದ್ಯಜ್ಞಾನವು ಇಂದ್ರಿಯಗಳ ಮುಖದಿಂದ ಆಗುತ್ತಿರುವದರಿಂದ ನಿರೀಕ್ಷಣ ಶಕ್ತಿಯನ್ನು ಹೆಚ್ಚಿಸುವದೇ ಶಿಕ್ಷಕರ ಆದ್ಯ ಕರ್ತವ್ಯವೆಂತಲೂ ವಿದ್ಯಾರ್ಥಿಗಳು ಪ್ರೌಢರಾದಂತೆ ಇತರ ಸಾಮರ್ಥ್ಯಗಳನ್ನು ಬೆಳಿಸುವದು ಅವಶ್ಯವೆಂತಲೂ ಬುದ್ಧಿಸಾಮರ್ಥ್ಯಗಳಲ್ಲಿ ಶಾಬ್ದಿಕ ಸ್ಮರಣಸಾಮರ್ಥ್ಯದಹೊರ್ತು ಉಳಿದ ಸಾಮರ್ಥ್ಯಗಳೆಲ್ಲ ತಕ್ಕ ಶಿಕ್ಷಣದಿಂದ ಬೆಳಿಸಲಿಕ್ಕೆ ಬರುವವೆಂತಲೂ ಶಾಬ್ದಿಕ ಸ್ಮರಣಶಕ್ತಿಯು ಮಾತ್ರ ನಿಜವಾದ ಶಿಕ್ಷಣದಿಂದ ಬೆಳಿಯಲಾರದೆಂತಲೂ ಇವನು ವಾದಿಸುವನು ಈ ಲಾಕನ ಶಿಕ್ಷಣಪದ್ಧತಿಯು ಈಗ್ಗೆ ಬಹುಮಾನಿತವಾಗಿರುತ್ತದೆ ಇದು ಪ್ರಯೋಗದೃಷ್ಟವಾದಂಥ ಏಕೀಕರಣಪದ್ಧತಿಯು, ಸುಸಾಧ್ಯವೂ ಮನೋಹರವೂ ಆಗಿರುವದು. ಚಿಕ್ಕ ಹುಡುಗರಿಗೆ ತಿಳಿಯುವಂಥ ಅಥವಾ ಗೊತ್ತಿದ್ದಂಥ ವಸ್ತುಗಳ ಮುಖಾಂತರವಾಗಿ ಬುದ್ಧಿಸಾಮರ್ಥ್ಯಗಳನ್ನೂ ನೈತಿಕ ಸಾಮರ್ಥ್ಯಗಳನ್ನೂ (ಪ್ರವೃತ್ತಿ) ಏರ್ಪಡಿಸುವದೇ ಈ ಪದ್ಧತಿಯ ಮರ್ಮವು. ಯುರೋಪ ಅಮೇರಿಕ ಖಂಡಗಳಲ್ಲಿ ಈಪದ್ಧತಿಯು ಬಹು ಬೇಗ ಹಬ್ಬಿತು. ಫ್ರಾನ್ಸದಲ್ಲಿಯೂ ಜರ್ಮನಿಯಲ್ಲಿಯೂ ವಿದ್ವಾಂಸರು

ಈ ಪದ್ಧತಿಯನ್ನು ಕೈಕೊಂಡು ಹೊಸ ಶಿಕ್ಷಣದ ಕ್ರಮವನ್ನು ಉಪಕ್ರಮಿಸಿದರು. ಇಂಗ್ಲಂಡದಲ್ಲಿ ಮಾತ್ರ ಈ ಪದ್ಧತಿಯು ಬಹು ದಿವಸ ಹಬ್ಬಲಿಲ್ಲ. ಲಾಕನು ದೂಷಿಸಿದಂಥ ತ್ಯಾಜ್ಯವೆಂದು ಸ್ಥಾಪಿಸಿದಂಥ ಹಳೇ ಪಾಠಪದ್ಧತಿಯೇ ಕೆಲವು ದಿವಸ ಸಾಗಿತು. ಆದರೆ ಮುಂದೆ ಲಾಕನ ಅನುಯಾಯಿಯಾದ ಪೆಸ್ತಾಲೋತ್ಸಿಯು (ಜರ್ಮನಿಯವನ) ಶಾಲೆಗಳಲ್ಲಿ ಆದ ಏರ್ಪಾಡನ್ನು ಕಂಡು ಕ್ರಮೇಣ ಆ ಪದ್ಧತಿಯು ಇಂಗ್ಲಂಡದಲ್ಲಿಯೂ ನೆಲೆಗೊಂಡಿತು. ಲಾಕನಿಗೆ ಬರತಕ್ಕ ಶ್ರೇಯಸ್ಸು ಪರಕೀಯನಾದ ಪೆಸ್ತಾಲೋತ್ಸಿಗೆ ಬಂತು. ಇರಲಿ,

“ गुणाः पूजास्थानं गुणिषु न च लिंगं न च वयः ”

ಇದೇ ಸಂಧಿಯಲ್ಲಿ ಲಾಂಕಾಸ್ಟರ ಮತ್ತು ಬೆಲ್ಲ ಇವರು ಪ್ರಸ್ತುತ ಪದ್ಧತಿಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಮಾಡಿ ಹೊಸ ಪದ್ಧತಿಯನ್ನು ಉಪಕ್ರಮಿಸಿದರು. ಅದೇ ಹಿರೇಮಣಿಯ ಪದ್ಧತಿಯು. ಇವರು ಉಪಕ್ರಮಿಸಿದ ಹಿರೇಮಣಿಯ ಪದ್ಧತಿಯ ದೋಷಗಳು ಸ್ಪಷ್ಟವಾದವುಗಳಾಗಿರುತ್ತವೆ. ಈ ಪದ್ಧತಿಯಿಂದ ಖರ್ಚಿನಲ್ಲಿ ಸ್ವಲ್ಪ ಉಳತಾಯವಾಗುತ್ತದೆ. ಆದರೆ ಕೆಲಸವು ಸರಸಾಗಿ ಆಗುವದಿಲ್ಲ. ಈ ಪದ್ಧತಿಯಿಂದಲೇ ಪ್ಯೂಪಿಲ್ ಟೀಚರ ಪದ್ಧತಿಯು ಬೈಲಿಗೆ ಬಂತು. ಈ ಪ್ಯೂಪಿಲ್ ಟೀಚರಪದ್ಧತಿಯಲ್ಲಿ ಹಿರೇಮಣಿಯ ಪದ್ಧತಿಯಂತೆ ಖರ್ಚು ಕಡಿಮೆ ಹತ್ತುವದಲ್ಲದೆ ಅಶಿಕ್ಷಿತ ಶಿಕ್ಷಕರ ಕೈಯಲ್ಲಿ ಹುಡುಗರು ಬಹಳ ಹೊತ್ತು ಇರುವದು ತಪ್ಪುತ್ತದೆ. ಮೇಲಾಗಿ ಈ ಪದ್ಧತಿಯಲ್ಲಿ ಇನ್ನೊಂದು ಲಾಭ ಉಂಟು ಅದೇನಂದರೆ—ಶಿಕ್ಷಣದ ಹೋರೆಗೆ ಇತರ ಹೋರೆಗಳಂತೆ ಕೆಲವು ದಿವಸದ ಪ್ರತ್ಯಕ್ಷ ರೂಢಿಯೂ ಜ್ಞಾನಸಂಕ್ರಮಣದ ತಕ್ಕ ಮಾರ್ಗಗಳ ಮನನವೂ ಬೇಕೆಂಬ ಮಾತು ಅನುಭವದಿಂದ ಸ್ಥಿರವಾಗುವದು.

ಯಾವದಾದರೊಂದು ಹೋರೆಯಲ್ಲಿ ನಿಪುಣನಾಗಬೇಕಾದರೆ ಆ ಮನುಷ್ಯನನ್ನು ಚಿಕ್ಕಂದಿನಲ್ಲಿಯೇ ಕುಶಲ ಹೋರೆಗಾರನ ಕೈಯಲ್ಲಿಡಬೇಕಾಗುತ್ತದೆ ಅದೇಮೇರೆಗೆ ಮೇಲಾದ ಶಿಕ್ಷಕನಾಗಲಿಚ್ಛಿಸುವಂಥವನನ್ನು ಚಿಕ್ಕಂದಿನಿಂದ ಹೆಸರಾದ ಶಿಕ್ಷಕನ ಕೈಯಲ್ಲಿ ಕೊಡುವ ಅವಶ್ಯಕತೆಯು ನಿರ್ವಿವಾದವಾದದ್ದು ಮಾತಿನ ತಿಳುವಳಿಕೆಯೂ ಶಾಲಾಪರೀಕ್ಷಾಕ್ರ

ಶೊದ ನಿರ್ಮಾಣವೂ ಶಿಕ್ಷಕ ಶಿಕ್ಷಣ ವಿದ್ಯಾಲಯಗಳ ಸ್ಥಾಪನೆಯೂ ಈ ಮೂರು ಸಂಗತಿಗಳು ವಿದ್ಯಾಪ್ರಸಾರದ ಕೆಲಸದಲ್ಲಿ ಶ್ರೇಷ್ಠ ಲಕ್ಷಣಗಳೆಂದು ತಿಳಿಯಬಹುದು. ಶಿಕ್ಷಣಪದ್ಧತಿಯು ಸರಿಯಾದ ತಿಳವಳಿಕೆಯೇ ಈ ಮೂರು ಸಂಗತಿಗಳ ಮರ್ಮವು. ಸಾಮಾನ್ಯವಾದ ಸಣ್ಣ ದೊಡ್ಡ ಶಾಲೆಗಳೂ ವಿದ್ಯಾರ್ಥಿಗಳಿಗೆ ಬೇರೆ ಬೇರೆ ವಿಷಯವನ್ನು ಕಲಿಸಿ ಅವರನ್ನು ಬುದ್ಧಿವಂತರನ್ನು ಮಾಡಬಹುದು. ಆದರೆ ಆ ಶಾಲೆಗಳು ಮೇಲಾದ ಶಿಕ್ಷಕನನ್ನು ಹೊರಡಿಸಲರಿಯವು. ಶಿಕ್ಷಕ-ಶಿಕ್ಷಣ-ವಿದ್ಯಾಲಯಗಳಲ್ಲಿಯೇ ಈ ಕೆಲಸ ಅಂದರೆ ಮೇಲಾದ ಶಿಕ್ಷಕರನ್ನು ತಯಾರ ಮಾಡುವ ಕೆಲಸವು ಆಗುವದು. ಶಿಕ್ಷಕ-ಶಿಕ್ಷಣ-ವಿದ್ಯಾಲಯಗಳಲ್ಲಿ ಅಭ್ಯಾಸದ ತತ್ವಗಳೂ ಶಿಕ್ಷಣದ ಪದ್ಧತಿಗಳೂ ಪ್ರತ್ಯಕ್ಷ ಶಿಕ್ಷಣದ ಕಾರ್ಯದಲ್ಲಿ ಇವುಗಳ ಪರಸ್ಪರ ಸಂಬಂಧವೂ ತೋರಿಸಲ್ಪಡುವದರಿಂದಲೂ ಶಿಕ್ಷಕನ ಯೋಗ್ಯತೆಯನ್ನೂ ಪ್ರಯೋಜಕತ್ವವನೂ ಬೆಳಿಸುವಂಥ ನಿಯಮಗಳು ಹೇಳಲ್ಪಡುವದರಿಂದಲೂ ಶಿಕ್ಷಕನ ಹೋರೆಯನ್ನು ಕಲಿಯುವವರಿಗೆ ಬಹಳ ಅನುಕೂಲವಾಗುತ್ತದೆ. ೧೮೪೬ ನೇ ವರ್ಷ ಇಂಗ್ಲಂಡದೊಳಗೆ ನಿಯಮಿಸಲ್ಪಟ್ಟ ಕಮಿಟಿ ಆಫ ಕೌನ್ಸಿಲ್ ಆನ್ ಎಜ್ಯುಕೇಶನ (ವಿದ್ಯಾಪ್ರಸಾರಕ ಮಂಡಳಿಯ ಸಭೆ) ದ ಸಭಿಕರು-“ವಿದ್ಯಾಪ್ರಸಾರವು ವಿಶಿಷ್ಟ ಪದ್ಧತಿಯನ್ನು ಅವಲಂಬಿಸಿರುವದು. ಈ ಪದ್ಧತಿಯ ಜ್ಞಾನವಿಲ್ಲದ ಮನುಷ್ಯನು ಶಿಕ್ಷಕನೆಂಬ ಬಿರುದಿಗೆ ಬಾಧ್ಯಸ್ಥನಾಗಲಾರನು” ಎಂಬ ಮಾತನ್ನು ಒಪ್ಪಿಕೊಂಡರು.

ಸಾರಾಂಶ, ಆರಂಭದಲ್ಲಿ ಅಭ್ಯಾಸಕ್ಕೂ ಕಲಿಸುವ ಪದ್ಧತಿಗಳಿಗೂ ಸಂಬಂಧವಿಲ್ಲದೆ ಕೆಲಸ ನಡೆಯುತ್ತಿತ್ತು. ಆಗ ನಿಜವಾದ ವಿದ್ಯಾಪ್ರಸಾರವು ಎಳ್ಳಷ್ಟಾದರೂ ಆಗಲಿಲ್ಲ. ಇತ್ತೆಲಾಗಿ ಬೇಕನ್ನನೆಂಬ ತತ್ವಜ್ಞನು ಕಲಿಸುವ ಪದ್ಧತಿಗಳ ಅನುಸಂಧಾನದಿಂದ ಶಿಕ್ಷಣವನ್ನು ಸಾಗಿಸಬೇಕೆಂಬದನ್ನು ಪ್ರತಿಪಾದಿಸಿದಂದಿನಿಂದ ಸುಧಾರಣೆಯು ಕ್ರಮಶಃ ತೋರಹತ್ತಿತು. ಹಿರೇಮಣಿ ಪದ್ಧತಿಯ ಶಾಲೆಗಳೂ ಬಾಲೋದ್ಯಾನ ಶಾಲೆಗಳೂ ಅಲ್ಲಲ್ಲಿಗೆ ನೆಲೆಗೊಂಡವು. ಮುಂದೆ ಈ ಪದ್ಧತಿಯಲ್ಲಿ ತಕ್ಕ ಸುಧಾರಣೆಗಳಾಗಿ ರಾಷ್ಟ್ರೀಯ ಪದ್ಧತಿಯು ಪ್ರಚಾರ

ಟ್ಲಿ ಬಂದಿರುವದು. ಈ ಪದ್ಧತಿಯಿಂದ ಕಾರ್ಯಸಿದ್ಧಿಯು ತೀವ್ರವಾಗುವದೆಂದು ತೋರುತ್ತದೆ.

ಶಿಕ್ಷಣದ ಸದ್ಯಸ್ಥಿತಿ—ಸದ್ಯಕ್ಕೆ ಶಿಕ್ಷಣದ ಕೆಲಸವು ಭರದಿಂದ ಸಾಗುತ್ತಲಿದೆ. ಕಲಿಸುವ ಪದ್ಧತಿಗಳು ಆಗಾಗ್ಗೆ ತಿದ್ದಲ್ಪಡುತ್ತವೆ. ಆದಾಗ್ಯೂ ಇನ್ನೂ ಬಹಳ ಕೆಲಸ ಮಾಡುವದು ಉಳಿದಿರುತ್ತದೆಂಬದಕ್ಕೆ ಏನೂ ಸಂದೇಹವಿಲ್ಲ. ಎಷ್ಟೋ ಮೂಢಶ್ರದ್ಧೆಗಳನ್ನು ತೆಗೆದುಹಾಕಬೇಕಾಗಿರುತ್ತದೆ. ಅದೇಮೇರೆಗೆ ಎಷ್ಟೋ ಹೊಸ ತತ್ವಗಳನ್ನು ಅಂಗೀಕರಿಸಬೇಕಾಗಿರುವದು. ಇದು ಸುಧಾರಣೆಯು ಕಾಲವಾಗಿರುತ್ತದೆ. ನಮ್ಮ ಸುತ್ತಲೂ ಎತ್ತ ನೋಡಿದರೂ ಸುಧಾರಣೆಯು ಕ್ಷಣಶಃ ನಡೆದದೆ. ಹೊಸ ಶಾಸ್ತ್ರಗಳು ಉದಯವಾಗುತ್ತಲಿವೆ. ಹೊಸ ಕಲೆಗಳಿಂದ ಸಮಾಜದ ಸ್ಥಿತ್ಯಂತರವಾಗಹತ್ತಿದೆ. ಉಗೆ, ವಿದ್ಯುತ್ ಯಂತ್ರಗಳಿಂದ ನಮ್ಮ ಸುತ್ತುಮುತ್ತಲಿನ ಯಾವತ್ತು ಸಂಗತಿಗಳಲ್ಲಿ ಕ್ಷಣಶಃ ಬದಲಾಗುತ್ತ ನಡೆದದೆ, ಹೆಚ್ಚು ಕಡಿಮೆ ಸಮಾಜದ ಸ್ಥಿತ್ಯಂತರವೂ ಆಗಿರುತ್ತದೆ. ಶಿಕ್ಷಣದಲ್ಲ್ಯಾದರೂ ತಕ್ಕ ಸುಧಾರಣೆ ಆಗುವದು ಅವಶ್ಯವು. ಅದು ನಮಗೆ ತಿಳಿಯದಿದ್ದರೂ ಆಗುತ್ತಲಿದೆ.

ಈ ಸುಧಾರಣೆಯು ಸಂಬಂಧದಿಂದ ಶಿಕ್ಷಕರಲ್ಲಿ ಎರಡು ವರ್ಗಗಳನ್ನು ಮಾಡಬಹುದು. (೧) ಇದ್ದದ್ದನ್ನು ಕಾಯ್ದುಕೊಂಡಿರುವವರ ವರ್ಗವು. (೨) ಸುಧಾರಣಾವಾದಿಗಳ ವರ್ಗವು. ಮೊದಲನೆಯ ಪಕ್ಷದವರು ನಡೆದು ಬಂದ ಪದ್ಧತಿಗಳಲ್ಲಿ ಹೆಚ್ಚು ಕಡಿಮೆ ಮಾಡುವದು ಅವಶ್ಯವಿಲ್ಲೆಂತಲೂ ಅದರಿಂದಲೇ ಕೆಲಸವಾಗುತ್ತದೆಂತಲೂ ವಾದಿಸುವರು. ಶಿಕ್ಷಣದ ಸುಧಾರಣೆಯಿಂದ ಜನರಿಗೆ ಒಳಿತಾಗುವದೆಂದು ಒಪ್ಪಿಕೊಂಡಾಗ್ಯೂ ಅವರು ಸುಧಾರಣೆಯನ್ನು ಎಳ್ಳಷ್ಟು ಬಯಸುವದಿಲ್ಲ. ಎರಡನೇ ಪಕ್ಷದವರೆಂದರೆ (ಸುಧಾರಣಾವಾದಿಗಳು) ಪ್ರಯೋಜನ ಪ್ರಗತಿಗಳೆಂಬ ಮಂತ್ರಗಳನ್ನು ಜಪಿಸುವರು. ಅವರು ಶಿಕ್ಷಣದ ಪದ್ಧತಿಗಳನ್ನು ಸುಧಾರಿಸಬೇಕೆಂದು ವಾದಿಸುವದಲ್ಲದೆ ಶಾಲಾರ್ಜನೆಯಲ್ಲಿ ಪ್ರಯೋಜನಕ್ಕೆ ಅಗ್ರಸ್ಥಾನವನ್ನು ಕೊಡಲಿಕ್ಕೆ ಬೇಕೆಂದು ಪ್ರತಿಪಾದಿಸುವರು. ಶಾಲೆಯ

ಲ್ಲಿ ನಿಷ್ಪ್ರಯೋಜನದ ಪುರಾಣಗ್ರಂಥಗಳನ್ನೂ ಚಮತ್ಕಾರದ ಗ್ರಂಥಗಳನ್ನೂ ಅಥವಾ ಶಿಷ್ಟಜನರಿಗೆ ಸರಿ ತೋರುವ ಗ್ರಂಥಗಳನ್ನೂ ಕಲಿಸುವದಕ್ಕೆ ಅವರು ಸಮ್ಮತಿಸುವದಿಲ್ಲ. ವಿದ್ಯಾರ್ಥಿಗಳಿಗೆ ಅವರ ಆಯುಷ್ಯಕ್ರಮಗಳಲ್ಲಿ ಕೆಲಸಕ್ಕೆ ಬರುವ ಸಂಗತಿಗಳನ್ನೇ ಕಲಿಸಬೇಕೆಂದು ಅವರು ಆಗ್ರಹಪೂರ್ವಕವಾಗಿ ತಿಳಿಸುವರು. ಈ ಮೇರೆಗೆ ಎರಡು ಪಕ್ಷದ ಕಲಹವು ನಡೆದಿರುವದು. ಮೊದಲನೆಯ ಪಕ್ಷದ ಜನರು ಹೆಚ್ಚಿರುವರು. ಆದರೂ ಎರಡನೆಯ ಪಕ್ಷದ ಜನರಿಗೆ ಜಯ ಬರುವದೆಂದು ತೋರುತ್ತದೆ.

(ಸಶೇಷ)

DEPARTMENTAL NOTICE.

ನೋಟೀಸು.

ಜಾವಕ ನಂಬರು ೪೭೦.

ಮೆ. ಕ್ಯೂರೇಟರ ಗವ್ಹರ್ನಮೆಂಟ ಸೆಂಟ್ರಲ್ ಬುಕ್‌ಡಿಪೋ ಮುಂಬಯಿ ಇವರಿಂದ ತಿಳಿಸಲ್ಪಡುವದೇನಂದರೆ,—

ಸನ್ ೧೯೦೦ ನೇ ಇಸವಿಯ ಮಾರ್ಚ ತಿಂಗಳ ಕೊನೆಯವರೆಗೆ ಕೆಳಗೆ ಬರೆದ ಪುಸ್ತಕಗಳು ಅಚ್ಚು ಹಾಕಲ್ಪಟ್ಟು ಮಾರಾಟಕ್ಕೆ ಸಿದ್ಧವಾಗಿರುತ್ತವೆ.

ಪುಸ್ತಕಗಳು	ಬೆಲೆ. ರೂ,	ಆ.	ಪೈ.
ಇಂಗ್ಲಿಷ.			
ಥಾಮಸನ್ಸ ಮ್ಯಾನುಅಲ್ ಟ್ರೇನಿಂಗ ಫಾರ್ ಇಂಡಿಯನ್ ಸ್ಕೂಲ್ಸ	೧	೦	೦
ಮಹಾಭಾರತದ ಭಾಷಾಂತರ	೧೨	೦	೦
ಬಾಂಬೆ ಸಂಸ್ಕೃತ ಸಿರೀಜ ನಂಬರ ೪೯ ಪರಾಶರಸ್ಮೃತಿ	೪	೦	೦
ಕನ್ನಡ ಕವಿತೆಯ ಎರಡನೇ ಪುಸ್ತಕ	೦	೩	೦
ಶಬ್ದಮಣಿದರ್ಪಣ	೧	೮	೦

ಮುಂಬಯಿ,
ತಾ. ೩-೪-೧೯೦೦.

J. C. Dubash,
ಕ್ಯೂರೇಟರ ಗವರ್ನಮೆಂಟ ಸೆಂಟ್ರಲ್
ಬಕ್ಕಡಿಪೋ ಮುಂಬಯಿ

CORRESPONDENCE.

ಪತ್ರವ್ಯವಹಾರ.

I

ರಾವಸಾಹೇಬ ಕನ್ನಡ ಶಾಳಾಪತ್ರಕದ ಎಡಿಟರ ಧೊರೆಗಳವರ ಸನ್ನಿಧಿಗೆ—

ವಿಧೇಯ ವಿದ್ಯಾರ್ಥಿ ತಮ್ಮಾಜಿ ನಾರಾಯಣ ಅಮ್ಮಿನಭಾವಿ ಈತನ ಶಿರಸಾಷ್ಟಾಂಗ ನಮಸ್ಕಾರಗಳು ವಿನಯಾನ್ವಿತ ವಿಜ್ಞಾಪನೆಗಳು.

ಹಲವು ಉಪಯುಕ್ತ ವಿಷಯಗಳಿಂದ ಶಿಕ್ಷಕಸಮೂಹದ ಅಜ್ಞಾನತಿಮಿರವನ್ನು ಹೋಗಲಾಡಿಸುವದಕ್ಕೆ ಪ್ರತಿತಿಂಗಳಿಗೆ ತಮ್ಮ ಕರಕಮಲದಿಂದುದಯಿಸುವ ಶಾಳಾಪತ್ರಿಕೆಯಲ್ಲಿ ಕೆಳಗಿನ ವಿಷಯಕ್ಕೆ ಸ್ಥಳ ದೊರೆಯುವದೆಂದು ಕೋರುತ್ತೇನೆ.

ಅಂಕಗಣಿತೋಪಪತ್ತಿ ವಿಷಯವನ್ನು ಇದುವರೆಗೆ ಯಾರೂ ಅಚ್ಚು ಹಾಕಿಸಿದಂತೆ ಕಾಣಲಿಲ್ಲ. ಈ ವಿಷಯದ ಅವಶ್ಯಕತೆಯು ಎಷ್ಟೆಂಬದು ಪ್ರತಿಯೊಬ್ಬ ಶೋಧಕಶಿಕ್ಷಕನ ಅನುಭವಕ್ಕೆ ಬಂದಿರಬಹುದು ಆದಕಾರಣ ತತ್ಸಂಬಂಧವಾಗಿ ಗುರುವರ್ಯರು ನಮಗೆ ಹೇಳಿದಾಗ ನಾನು ಮಾಡಿಕೊಂಡ ಟಿಪ್ಪಣಿಯ ಆಧಾರದಿಂದ ನನ್ನ ಅಲ್ಪಮತಿಗೆ ಹೊಳೆದಷ್ಟು ವ್ಯವಸಾಯಬಂಧುಗಳ ಎದುರಿಗೆ ಇಟ್ಟಿರುತ್ತೇನೆ. ಎಲ್ಲಿಯಾದರೂ ದೋಷಗಳು ಕಂಡುಬಂದರೆ ತಿದ್ದಿ ತಿಳಿಸುವಿರೆಂಬ ನಂಬಿಗೆ ಇರುತ್ತದೆ.

ಯಾವ ಪರಿಮೇಯಗಳನ್ನು ಪ್ರತ್ಯಕ್ಷವಾಗಿ ಅಳಿಯಲಿಕ್ಕೆ ಬರುವದಿಲ್ಲ, ಅಥವಾ ಪ್ರತ್ಯಕ್ಷ ಅಳತೆಗೆ ಬಹು ಪ್ರಯಾಸವಾಗುವದು. ಅಂಥ ಕೆಲವು ಪರಿಮೇಯಗಳನ್ನು ಅನುಮಾನದಿಂದ ಅಳೆಯುವ ಅತಿ ಸುಲಭ ರೀತಿಗಳನ್ನು ಹುಡಿಕಿ ತೆಗೆಯೋಣ ಮತ್ತು ಅವುಗಳನ್ನು ಆ ಪರಿಮೇಯಗಳ ಅಳತೆಯ ಕೆಲಸದಲ್ಲಿ ಉಪಯೋಗ ಮಾಡಿ ತೋರಿಸೋಣ ಇವೇ ಗಣಿತಶಾಸ್ತ್ರದ ಮುಖ್ಯ ವಿಷಯಗಳಾಗಿರುತ್ತವೆ. ಉದಾಹರ

ಣಾರ್ಥವಾಗಿ ಒಂದು ಕೋಣೆಯು ಅವಕಾಶವನ್ನು ಅಳೆಯತಕ್ಕದ್ದೆಂದು ಕಲ್ಪಿಸುವ. ಆ ಅವಕಾಶದಲ್ಲಿ ೧ ಫೂಟು ಉದ್ದ ೧ ಫೂಟು ಅಗಲ ೧ ಫೂಟು ಪಿಂಡಉಳ್ಳ ಕಟ್ಟಿಗೆಯ ತುಂಡುಗಳು ಎಷ್ಟು ಹಿಡಿಸುತ್ತವೆ ಇದನ್ನು ತಿಳಕೊಳ್ಳಬೇಕಾದರೆ ಅಂಥ ತುಂಡುಗಳನ್ನು ಮಾಡಿ ಪ್ರತ್ಯಕ್ಷವಾಗಿ ತುಂಬಿ ನೋಡುವದೆಂದರೆ ಬಹು ಪ್ರಯಾಸದ ಕೆಲಸವು ಆದರೆ ಆ ಕೋಣೆಯ ಉದ್ದ, ಅಗಲ, ಎತ್ತರಗಳ ಅಳತೆಯನ್ನು ಫೂಟಿನ ಪರಿಮಾಣದಲ್ಲಿ ತಂದು ಆ ಸಂಖ್ಯೆಗಳ ಗುಣಾಕಾರ ಮಾಡಲು ಬರುವ ಉತ್ತರವೇ ತುಂಡುಗಳ ಸಂಖ್ಯೆಯನ್ನು ತೋರಿಸುವದಾಗುತ್ತದೆ.

ಈ ಗಣಿತಶಾಸ್ತ್ರದಲ್ಲಿ ಶುದ್ಧಗಣಿತವೆಂತಲೂ ಸಂಯುಕ್ತಗಣಿತವೆಂತಲೂ ಎರಡು ಭಾಗಗಳನ್ನು ಮಾಡಿರುತ್ತಾರೆ. ಶುದ್ಧಗಣಿತದಲ್ಲಿ ಸಂಖ್ಯೆ, ರೇಖಾ, ಕ್ಷೇತ್ರ, ಅವಕಾಶ ಈ ಪರಿಮೇಯಗಳ ಧರ್ಮಗಳನ್ನು ಅರಿತು ಅವುಗಳ ಸಂಬಂಧದ ಕೃತಿಗಳ ರೀತಿಯನ್ನು ಗೊತ್ತುಮಾಡುವ ಸಂಬಂಧದ ವಿಚಾರವಿರುತ್ತದೆ; ಮತ್ತು ಸಂಯುಕ್ತಗಣಿತದಲ್ಲಿ ಶುದ್ಧಗಣಿತದ ರೀತಿಗಳನ್ನು ಬೇರೆ ಬೇರೆ ಪರಿಮೇಯಗಳ ಅಳತೆಯಲ್ಲಿ ಉಪಯೋಗಿಸುವದು, ಅವುಗಳಿಂದ ವ್ಯವಹಾರಕ್ಕೆ ಅತ್ಯಂತ ಉಪಯುಕ್ತವಾದ ಪದಾರ್ಥವಿಜ್ಞಾನ ಶಾಸ್ತ್ರದ ನಿಯಮವನ್ನು ಹುಡುಕುವದು, ಇವುಗಳ ಸಂಬಂಧದ ವಿಚಾರವಿರುತ್ತದೆ ಉದಾ “ಪ್ರಮಾಣದಲ್ಲಿರುವ ನಾಲ್ಕು ಸಂಖ್ಯೆಗಳಲ್ಲಿ ಮೂರು ಸಂಖ್ಯೆಗಳನ್ನು ಕೊಟ್ಟರೆ ನಾಲ್ಕನೇದನ್ನು ತೆಗೆಯಲಿಕ್ಕೆ ಬರುತ್ತದೆ. ಈ ನಿಯಮವನ್ನು ಸಿದ್ಧಮಾಡೋಣವು ಶುದ್ಧಗಣಿತದ ವಿಷಯವಾಗಿರುತ್ತದೆ. ಮತ್ತು ಈ ರೀತಿಯನ್ನು ತೊಲಿಯ ಬೆಲೆಯಿಂದ ಗುಂಜಿಯ ಬೆಲೆ ತೆಗೆಯುವ ಲೆಕ್ಕದಲ್ಲಿ ಯೋಜಿಸಲ್ಪಡುತ್ತದೆಂದು ಗೊತ್ತುಮಾಡಿ ಆ ಬೆಲೆಯನ್ನು ತೆಗೆಯಲಿಕ್ಕೆ ಒಂದು ಸುಲಭವಾದ ವ್ಯವಹಾರೋಪಯುಕ್ತವಾದ ರೀತಿಯನ್ನು ಹುಡುಕೋಣವು ಸಂಯುಕ್ತಗಣಿತದ ವಿಷಯವಾಗಿರುತ್ತದೆ.

ಶುದ್ಧಗಣಿತವು ಸಂಖ್ಯಾಗಣಿತವೆಂತಲೂ ಮಹತ್ವಮಾಪನವೆಂತಲೂ ಎರಡು ಭಾಗಗಳಾಗಿ ವಿಭಾಗಿಸಲ್ಪಟ್ಟಿದೆ. ಸಂಖ್ಯಾಗಣಿತದಲ್ಲಿ ಸಂಖ್ಯೆಯ ಧರ್ಮಗಳು ಅವುಗಳ ಸಂಬಂಧದ ಕೃತಿಗಳನ್ನು ಮಾಡುವ ಸುಲಭ ನಿಯಮಗಳು ಹೇಳಲ್ಪಟ್ಟವೆ ಮಹತ್ವಮಾಪನದಲ್ಲಿ ರೇಖಾ, ಕ್ಷೇತ್ರ, ಅವಕಾಶ ಇವುಗಳ ಸಂಬಂಧದಿಂದ ವಿಚಾರ ಮಾಡಲ್ಪಟ್ಟಿರುತ್ತದೆ. ಸಂಖ್ಯೆಯಲ್ಲಿ ಸಾಮಾನ್ಯಸಂಖ್ಯೆಯೆಂತಲೂ ವಿಶೇಷಸಂಖ್ಯೆಯೆಂತಲೂ ಎರಡು ಪ್ರಕಾರಗಳು; ಇದರಿಂದ ಸಾಮಾನ್ಯಸಂಖ್ಯೆಯ ಸಂಖ್ಯಾಗಣಿತಕ್ಕೆ ಬೀಜಗಣಿತವೆಂತಲೂ ವಿಶೇಷಸಂಖ್ಯೆಯ ಸಂಖ್ಯಾಗಣಿತಕ್ಕೆ ಅಂಕಗಣಿತವೆಂತಲೂ ಅನ್ನುತ್ತಾರೆ

ಅಂಕಗಣಿತದಲ್ಲಿ ವಿಶೇಷಸಂಖ್ಯೆಯ ಧರ್ಮಗಳನ್ನು ಗೊತ್ತುಮಾಡುವದು ಮತ್ತು ಆ ಸಂಖ್ಯೆಯ ಸಂಬಂಧದ ಕೃತಿಗಳನ್ನು ಮಾಡುವ ನಿಯಮಗಳನ್ನು ತೆಗೆಯುವದು ಮೊದಲಾದ ವಿಚಾರವಿರುತ್ತದೆ.

ಆ ನಿಯಮಗಳ ಉಪಪತ್ತಿಯೇ ಪ್ರಸ್ತುತ ವಿಷಯವಾಗಿರುತ್ತದೆ.

ಇದೇ ಪತ್ರದಲ್ಲಿ ಮಿ ಸಿ. ರಾ ಪಾಟೀಲ ಇವರ ಮೊದಲನೇ ಅಂದೇಶಕ್ಕೆ ಉತ್ತರವನ್ನು ನನ್ನ ಅಲ್ಪಮತಿಗೆ ತಿಳಿದಷ್ಟು ಬರೆದಿದ್ದೇನೆ. ಇವುಗಳನ್ನೂ ಇದೇ ಸಂಚಿಕೆಯಲ್ಲಿ ಮುದ್ರಿಸೋಣವಾಗಬೇಕು.

ಶ್ರೀ ಮಾ. ಗುರುವರ್ಯರು ಈ ಸಂಬಂಧದಿಂದ ಬರೆದ ನಿಯಮವು ಸರಿಯಾದದ್ದಿರುತ್ತದೆ. ಅಂದರೆ ಮೊದಲನೇ ಚರಣದ ಆರಂಭದ ವರ್ಣವು ಸ್ವಾಭಾವಿಕ ಗುರುವಿದ್ದರೆ ಉಳಿದ ಚರಣಗಳ ಆರಂಭದ ವರ್ಣಗಳು ಸ್ವಾಭಾವಿಕ ಗುರುವರ್ಣಗಳೇ ಇರಬೇಕೆಂಬ ನಿಯಮವಿಲ್ಲ; ಅನುಸ್ವಾರ, ವ್ಯಂಜನ ಮೊದಲಾದವುಗಳಿಂದ ಗುರುತ್ವ ಬಂದಕ್ಷರಗಳಿದ್ದರೂ ಸಾಗುವದು. ಇದಕ್ಕೆ ಉದಾಹರಣೆಗಳು ಯಾವತ್ತು ಕನ್ನಡ ಪ್ರಾಚೀನ ಗ್ರಂಥಗಳಲ್ಲಿ ದೊರೆಯುವವು

ಶಬ್ದಮಣಿದರ್ಪಣ ಸೂತ್ರ— ೧೩೫, ೧೪೯, ೧೬೦ ಇತ್ಯಾದಿ.

ಜಗನ್ನಾಥವಿಜಯ—ಪ್ರ. ಆ. ೫೦, ದ್ವಿ. ಆ ೭, ೧೫೪ ಇ.

ಸಾವಿತ್ರೀಚರಿತ್ರ—ಪ್ರ. ಆ. ೮, ಸ ಆ ೭ ಇ.

ಪ್ರಾಕ್ಕಾವ್ಯಮಾಲಿಕೆ--೧೪೦೬, ೧೪೬೭, ೧೫೩೩, ೧೬೪೨ ಇತ್ಯಾದಿ.

ಈ ಪ್ರಕಾರ ಇನ್ನೂ ಎಷ್ಟೋ ಉದಾಹರಣೆಗಳು ದೊರೆಯುತ್ತವೆ ಇದಕ್ಕೂ ಹೆಚ್ಚು ಉದಾಹರಣೆಗಳನ್ನು ಬರೆದು ಸ್ಥಳವನ್ನು ತುಂಬುವದರಲ್ಲಿ ಅರ್ಥವಿಲ್ಲ.

ಆದರೆ ಈ ಉದಾಹರಣೆಗಳಿಂದ ಆಗುವ ಭ್ರಾಂತಿಯನ್ನು ದೂರ ಮಾಡುವದು ಅಪ್ರಸ್ತುತವಾಗಲಾರದು. ಹ್ಯಾಗಂದರೆ—

ಅಂತಃಕರ್ಕಶರೆನಿಪರ್ । ತಾಂ ತೋರ್ಪರ್ನುರ್ಗಂದಹಾಸದೊಳ್ಪುಸುಡಂ ॥ ಈ ಕವಿತಾರ್ಧದ ಚರಣಗಳ ಆದಿಯಲ್ಲಿ ಅಂ, ತಾಂ, ಈ ಎರಡು ಗುರುವರ್ಣಗಳಿರುತ್ತವೆ. ಇವುಗಳಲ್ಲಿ ಮೊದಲನೇದು ಅ ಎಂಬ ಲಘು ಅಕ್ಷರದ ಮುಂದೆ ಅನುಸ್ವಾರ ಬಂದು ಗುರುವಾಗಿರುತ್ತದೆ. ೨ನೇದಾದ ತಾ ಎಂಬ ಅಕ್ಷರವೇ ಸ್ವತಃಸಿದ್ಧ ಗುರುವರ್ಣವಿರುತ್ತದೆ. ಆದರೆ ಇಲ್ಲಿ ತಾ ಈ ವರ್ಣದ ಮುಂದೆ ಅನುಸ್ವಾರ ಬಂದದ್ದರಿಂದ ಅದಕ್ಕೆ ಗುರುತ್ವ ಬಂದಿರುವದೆಂದು ತಿಳಿಯಬಾರದು. ಯಾಕಂದರೆ ಗುರು ವರ್ಣದ ಮುಂದೆ ಅನುಸ್ವಾರ ಬಂದರೆ ಅದಕ್ಕೆ ಗುರುತ್ವ ಬರುತ್ತದೆಂಬ ಮಾತು ಎಷ್ಟು ಅಯೋಗ್ಯವಾದದ್ದೆಂಬದನ್ನು ಬೇರೆ ಬರೆಯುವದು ಅವಶ್ಯವಿಲ್ಲ ಮೇಲಿನ ಯಾವತ್ತು ಉದಾಹರಣೆಗಳು ಇದರಂತೆ ಇವೆ. ಆದದರಿಂದ ಯಾವ ಪ್ರಕಾರದ ಗುರುವರ್ಣವನ್ನಿಟ್ಟರೂ ಸಾಗುತ್ತದೆಂಬ ಮಾತು ಬಲ್ಲವರ ಪ್ರಯೋಗಗಳಿಂದ ಸಿದ್ಧವಾಯಿತು.

ಇನ್ನು ಛಂದಸ್ಸಿನಲ್ಲಿ ಗುರು ಲಘು ಈ ಸಂಜ್ಞೆಗಳು ಅಕ್ಷರಗಳನ್ನು ಉಚ್ಚರಿಸಲಿಕ್ಕೆ ಬೇಕಾಗುವ ವೇಳೆಯ ತಾರತಮ್ಯದಿಂದ ಕಲ್ಪಿಸಲ್ಪಟ್ಟಿವೆ. ಮತ್ತು ಯಾವದೊಂದು ಕವಿತೆಯು ಮೊದಲನೇ ಚರಣದ ಆದ್ಯಕ್ಷರವನ್ನು ಅನ್ನಲಿಕ್ಕೆ ಹತ್ತಿ

ದ ವೇಳೆಯಷ್ಟೇ ವೇಳೆ ಯಾವತ್ತು ಚರಣದ ಮೊದಲಕ್ಷರಗಳನ್ನು ಅನ್ನಲಿಕ್ಕೆ ಹತ್ತಬೇಕು; ಅಂದರೆ ಗುರುವರ್ಣವಿದ್ದರೆ ಗುರುವರ್ಣವೇ ಇರಬೇಕು. ಲಘು ಇದ್ದರೆ ಲಘುವೇ ಇರಬೇಕೆಂದು ಗೊತ್ತುಮಾಡಿರುತ್ತಾರೆ. ಇದಲ್ಲದೆ ಆಗಂತುಕ ಗುರುವಿಗೂ ಸ್ವಾಭಾವಿಕ ಗುರುವಿಗೂ ವೇಳೆಯು ಹೆಚ್ಚು ಕಡಿಮೆ ಹತ್ತುವದಿಲ್ಲ. ಆದದರಿಂದ ಇಡರಿಂದಲೂ ಬೇಕಾದ ಗುರುವನ್ನು ಇಟ್ಟರೂ ಸಾಗುತ್ತದೆಂಬ ಮಾತು ಸಿದ್ಧವಾಯಿತು.

ವಡಿ ಇದು ಕವಿತೆಗೆ ಆಭರಣವೆಂದು ನಾಗವರ್ಮ ಛಂದಸ್ಸಿನ ಇಂಗ್ಲಿಷ ಪ್ರಸ್ತಾವನೆಯಲ್ಲಿ ಹೇಳಿರುತ್ತದೆ. ಆದರೆ ಪ್ರಾಸವಲ್ಲ. ಮತ್ತು ಅದೇ ಪುಸ್ತಕದಲ್ಲಿ ವಡಿಗಳು ೨೮ ಇರುತ್ತವೆಂತಲೂ ಅವುಗಳಲ್ಲಿ ಸ್ವರವಡಿ, ಸರಸವಡಿ, ವಿಕ್ಕಟವಡಿ, ಸಂಯುಕ್ತಾಕ್ಷರವಡಿ, ವರ್ಗವಡಿ ಇವು ಪ್ರಚಾರದೊಳಗಿನವೆಂತಲೂ ಬರೆದದೆ. ಇದರಿಂದ ವಡಿ ಅಂದರೆ ಪ್ರಾಸದ ಒಂದು ವಿಶೇಷ ಪ್ರಕಾರವೆಂದು ನನಗೆ ತೋರುತ್ತದೆ. ಪತ್ರವಿಸ್ತಾರಕ್ಕೆ ಕ್ಷಮೆ ಇರಲಿ, ಇಂತಿ ಶಿರಸಾಷ್ಟಾಂಗ ನಮಸ್ಕಾರಗಳು.

ಧಾರವಾಡ. } ತಮ್ಮಾಜಿ ನಾರಾಯಣ ಅಮ್ಮಿನಭಾವಿ,
ತಾ॥ ೧೫-೩-೧೯೦೦. } ೪ನೇ ವರ್ಷದ ವಿದ್ಯಾರ್ಥಿ, ಟ್ರೇ. ಕಾ.
ಧಾರವಾಡ.

II

ಮ. ರಾ. ರಾ. ಕನ್ನಡ ಶಾಲಾಪತ್ರಕದ ಎಡಿಟರ ದೊರೆಗಳ ಚರಣಸನ್ನಿಧಿಗೆ—

ಶಿ ಸಾ. ನ. ವಿ. ವಿ. ೧೯೦೦ ಮಾರ್ಚ ತಿಂಗಳ ಶಾಲಾಪತ್ರಕದಲ್ಲಿ ಪ್ರಸಿದ್ಧವಾದ ಎರಡೂ ಪತ್ರಗಳ ಉತ್ತರಗಳನ್ನು ಯಥಾಮತಿ ಬರೆದು ಕಳಿಸಿದ್ದೇನೆ. ಸರಿದೋರಿದರೆ ಮುಂದಿನ ಸಂಚಿಕೆಯಲ್ಲಿ ಹುಲುಬಿಸುವಕೃಪೆಯಾಗಬೇಕು.

ಮಿ ರಾಮಚಂದ್ರ ಅ ಖೇಡ ಇವರ ಲೆಖ್ಖಗಳನ್ನು ಅವರ ಮತದಂತೆಯೇ ಕೆಳಗೆ ಬಿಡಿಸಿರುತ್ತೇನೆ. ಮೊದಲನೆಯ

ಲೆಖ್ಖಕ್ಕೆ ಇಲ್ಲಿ ಕೊಟ್ಟ ಉತ್ತರವನ್ನಾಗಲಿ, ಅಥವಾ ಅದೇ ಪ್ರಮಾಣವುಳ್ಳ ಬೇರೆ ಅದರ ಪೂರ್ಣ ಪಟ್ಟಗಳನ್ನಾಗ ಉತ್ತರವೆಂದರಿಯಬೇಕು. ಎರಡನೆಯ ಲೆಖ್ಖಕ್ಕೆ ಅಸಂಖ್ಯ ಅನಿಯಮಿತ ಉತ್ತರಗಳು ಬರುತ್ತವೆ; ಅವುಗಳಲ್ಲಿ ಎರಡು ಮಾತ್ರ ಕೊಟ್ಟಿದ್ದೇನೆ.

ಮೊದಲನೆಯ ಲೆಖ್ಖವು.

ಮೊ. ಹ. ಜ.	ಎ. ಹ. ಜ.	ಮೂ. ಹ. ಜ.	ನಾ. ಹ. ಜ.
ಉತ್ತರ ೩೩	೧೭	೯	೫
೩೧	+ ೧೭	+ ೯	+ ೫
೨	೩೪	೧೮	೧೦
+ ೨	− ೩೦	+ ೧೮	+ ೧೦
೪	೪	೩೬	೨೦
+ ೪	+ ೪	− ೨೮	+ ೨೦
೮	೮	೮	೪೦
+ ೮	+ ೮	+ ೮	− ೨೪
೧೬	೧೬	೧೬	೧೬

ಎರಡನೆಯ ಲೆಖ್ಖವು.

	ಪಕ್ಷಿ	ದರ	ಕಿ॥ ವ॥
ಪಾರಾ	೩೦	೩/೫	೧೮
ಸಾರಾ	೨೧	೫/೭	೧೫
ಹಂಸ	೩೬	೭/೯	೨೮
ಮಯೂರ	೧೩	೩	೩೯
	೧೦೦		೧೦೦

ಪಾರಾ	೨೫	೩/೫	೧೫
ಸಾರಾ	೩೫	೫/೭	೨೫
ಹಂಸ	೨೭	೭/೯	೨೧
ಮಯೂರ	೧೩	೩	೩೯
	೧೦೦		೧೦೦

ಪಿ. ಶಿ. ರಾ. ಪಾಟೀಲರ ಪತ್ರದ ಉತ್ತರವು.

೧ ನೆಯ ಆದೇಶಕ್ಕೆ—ಛಂದಃಸಾರದೊಳಗಿನ ಪ್ರಾಸವಿಚಾರದ ಮೊದಲನೆಯ ನಿಯಮವು ಯಥಾಯೋಗ್ಯ ಉಂಟು. ಎಲ್ಲ ಚರಣಗಳ ಆದ್ಯಕ್ಷರಗಳು ಲಘುವರ್ಣಗಳಾಗಲಿ, ಸ್ವಾಭಾವಿಕ ಗುರುವರ್ಣಗಳಾಗಲಿ ಇರುವದೇ ಉತ್ತಮವು. ಆದರೆ ನಮ್ಮ ಕನ್ನಡದ ಕವಿಗಳ ಕೃತಿಯ ಕಡೆಗೆ ಲಕ್ಷಗೊಟ್ಟರೆ, ಶರಭ, ಹಯ, ವೃಷಭ (ಅಂದರೆ ಪ್ರಾಸಾಕ್ಷರವು ಸಂಯುಕ್ತಾಕ್ಷರ, ದಡ್ಡಕ್ಕರ, ಅನುಸ್ವಾರ ಪೂರ್ವಾಕ್ಷರ) ಗಳಿದ್ದಲ್ಲಿ, ಆದ್ಯಕ್ಷರವನ್ನು ಹ್ರಸ್ವವಾಗಲಿ ಸ್ವಾಭಾವಿಕ ದೀರ್ಘವಾಗಲಿ ಎಷ್ಟೋ ಕಡೆಗೆ ಇಟ್ಟದ್ದು, ಕಂಡುಬರುತ್ತದೆ. ಆದದರಿಂದ ಈಗಿನವರಾದರೂ ಈ ಹಾದಿಯನ್ನು ಹಿಡಿದರೆ, ಅದರಲ್ಲೇನೂ ತಪ್ಪಿಲ್ಲ. ಆದರೆ ಸಿಂಹ, ಗಜ, ಅಜಪ್ರಾಸಗಳಿದ್ದಲ್ಲಿ ಮಾತ್ರ, ಛಂದಃಸಾರದ ನಿಯಮವನ್ನು ಅಕ್ಷರಶಃ ಪಾಲಿಸಬೇಕು. ನೀವು ಹೊಸ ಜನರದೆಂದು ಕೊಟ್ಟ ಉದಾಹರಣವು ಸರಿಯಲ್ಲ; ಹಾಗೆ ಮಾಡಬಾರದು.

೨ ನೆಯ ಅಂದೇಶಕ್ಕೆ—ಸರ್ವಜ್ಞನು ವರಕವಿಯು ವರಕವಿಗಳು ಬಹುಶಃ ನರಕವಿಗಳಂತೆ ಪ್ರತ್ಯೇಕ ಚರಣದ ಮಾತ್ರೆ ಮುಂತಾದವುಗಳನ್ನು ಎಣಿಸುತ್ತ ಕೂಡ್ರುವದಿಲ್ಲ. ಹಾಗೆ ಮಾಡಿದರೆ ಅವರ ಕವಿತನಕ್ಕೆ ಕುಂದು ಬರುವದಲ್ಲದೆ, ಅವರಿಂದ ದೊಡ್ಡ ದೊಡ್ಡ ಕಬ್ಬಗಳು ಬೇಗ ರಚಿಸಲ್ಪಡಲಾರವು. ಅವರು ಪದ್ಯದ ಧಾಟಿಗನುಸರಿಸಿ ರಚನೆಯನ್ನು ಮಾಡುತ್ತಾರೆಂದು ಹೇಳಬಹುದು. ಕವಿತ್ವ ರಚನೆಯ ರೂಢಿಯು ಬಿದ್ದುಹೋಗಿರುವದರಿಂದ, ಅವರ ಕವನಗಳು ಬಹುಶಃ ಛಂದೋನಿಯಮಬದ್ಧವಾಗಿಯೇ ಇರುತ್ತವೆ. ಆದರೂ ಸೂಕ್ಷ್ಮರೀತಿಯಿಂದ ಅವುಗಳ ನಿರೀಕ್ಷಣ ಮಾಡಿದರೆ, ಹಲವು ಸಣ್ಣ ಪುಟ್ಟ ದೋಷಗಳು ಹೊರಟೇಹೊರಡುತ್ತವೆ. ಆದಾಗ್ಯೂ ಅವು ಕ್ಷಮ್ಯವೆಂಬೂ ಆ ಕವಿಯು ಪೂಜ್ಯನೆಂದೂ ಅರಿಯಬೇಕು.

(ಸಶೇಷ)

DHARWAR TRAINING COLLEGE TERMINAL EXAMINATION-1900.

ಕಾಲೇಜದ ಷಾಣ್ಮಾಸಿಕ ಪರೀಕ್ಷೆಯ ಪ್ರಶ್ನೆಗಳು.

೩ ನೇ ವರ್ಷ

ಶಿಕ್ಷಣಶಾಸ್ತ್ರ.

೧. ಶಿಕ್ಷಣವೆಂದರೇನು? ಅದರ ಮುಖ್ಯಾಂಗಗಳು ಯಾವವು? ವಿವರಿಸಿರಿ.

೨. ನೀತಿಶಿಕ್ಷಣಕ್ಕೂ ಬುದ್ಧಿಶಿಕ್ಷಣಕ್ಕೂ ಸಂಬಂಧವೇನು? ಬರೆ ಬುದ್ಧಿಶಿಕ್ಷಣದಿಂದ ಕಾರ್ಯವಾಗದೋ?

೩ ಸದ್ಯದ ಅಭ್ಯಾಸಕ್ರಮದಲ್ಲಿ ಗೊತ್ತಾದ ವಿಷಯಗಳಿಂದ ಬುದ್ಧಿಸಾಮರ್ಥ್ಯಗಳೆಲ್ಲ ಯಾವ ರೀತಿಯಿಂದ ಬೆಳೆಸಲ್ಪಡುತ್ತವೆಂಬದನ್ನು ವಿವರಿಸಿರಿ.

೪. ನೈತಿಕ ಪ್ರವೃತ್ತಿಗಳೆಂದರೇನು? ಅವುಗಳ ವರ್ಗೀಕರಣವನ್ನು ಹ್ಯಾಗೆ ಮಾಡುವಿರಿ?

೫. ಸ್ವಾಭಿಮಾನದ ಪ್ರವೃತ್ತಿಗಳಲ್ಲಿ ಮುಖ್ಯವಾದ ಪ್ರವೃತ್ತಿಗಳು ಯಾವವು? ಅವನ್ನು ಹ್ಯಾಗೆ ಬಲಪಡಿಸುವಿರಿ?

೬. ಶಾಲೆಯಲ್ಲಿ ಬೆಳೆಸಲ್ಪಡತಕ್ಕ ನೈತಿಕ ಗುಣಗಳು ಯಾವವು? ಒಂದನ್ನು ಕುರಿತು ಪಾಠದ ಟಿಪ್ಪಣಿಗಳನ್ನು ತಯಾರಿಸಿರಿ.

೭. ಚಂದ್ರಗ್ರಹಣವನ್ನು ಕುರಿತು ಪಾಠದ ಟಿಪ್ಪಣಿಗಳನ್ನು ಸಿದ್ಧಪಡಿಸಿರಿ.

೮. ಶಾಸ್ತ್ರೀಯ ವಿಷಯಗಳ ಅಧ್ಯಯನದಿಂದಾಗುವ ಲಾಭಗಳನ್ನು ಹೇಳಿ ಆ ವಿಷಯಗಳನ್ನು ಕಲಿಸುವ ಪದ್ಧತಿಯನ್ನು ದೃಷ್ಟಾಂತ ಕೊಟ್ಟು ವಿವರಿಸಿರಿ.

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರನ್ನ ಶಿಶುಯಂ ಸಚ್ಛಿಕ್ಷಣೋತ್ಕರ್ಷದಿಂ।
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ॥
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ।
ದಯೆಯಿಂದೋಷವಿದ್ದ ಪೇಳ್ವುದು ಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೩೬.] ಜೂನ ೧೯೦೦. [ಸಂಚಿಕೆ ೬.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣೆಯ ಸಂಬಂಧದ ವೃತ್ತಾಂತಗಳೂ ಸ್ಫುಟವಿಷಯಗಳೂ.

ಬೋಅರ ಜನರ ಕೂಡ ಯುದ್ಧ ನಡೆದ ಸಂಗತಿಯನ್ನೂ ಆರಂಭಕ್ಕೆ ನಮ್ಮ ಸರಕಾರದವರಿಗೆ ಆದ ತೊಂದರೆಯನ್ನೂ ಈ ಮೊದಲು ವಿವರಿಸಿರುತ್ತೇವಷ್ಟೇ. ಆದರೆ ಇತ್ತಲಾಗಿ ನಮ್ಮ ದೇಶದ ಮಾಜಿ ಸೇನಾಪತಿಗಳಾದ ಲಾರ್ಡ ರಾಬರ್ಟ್ಸರವರು ಅಲ್ಲಿಗೆ ಮುಖ್ಯ ಸೇನಾಪತಿಗಳಾಗಿ ಹೋದಂದಿನಿಂದ ದೈವಚಕ್ರ ತಿರುಗಿತೆಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಅವರು ಕಾರ್ಯ ಕೈಕೊಂಡಂದಿನಿಂದ ಅಪಯಶದ ಸುದ್ದಿಯೇ ಇಲ್ಲವೆಂದರೂ ಸಲ್ಲುವದು. ನಡುವೆ ಬ್ಲೂಮಫಾಂಟೆನದ ಜಲಸಂಗ್ರಹದ ಹತ್ತರ ಉಪಸೈನಿಕರ ಅಜಾಗರೂಕತೆಯಿಂದ ಸ್ವಲ್ಪ ಹಾನಿ ತಟ್ಟಿತು. ಆದರೆ ಇದೊಂದರ ಹೊರ್ತು ಸರ್ವತೋಜಯವೇ ದೊರೆಯಹತ್ತಿರುವದು.

ಯುದ್ಧಕ್ಕೆ ಸನ್ನದ್ಧರಾಗಿ ನಿಂತಂಥ ಎರಡು ಪ್ರಜಾಸತ್ತಾಕ ರಾಷ್ಟ್ರಗಳಲ್ಲಿ ಒಂದಾದ ಫ್ರೀಸ್ಟೇಟವು ಕೈಸೇರಿರುತ್ತದೆ. ಬೋಅರರ ಕಡೆಯ ಹೆಸರಾದ ಸೇನಾಪತಿಗಳಲ್ಲಿ ಒಬ್ಬನು ಪರಲೋಕವನ್ನೈದಿದನು. ಎರಡನೇಯವನು ಶರೆ ಶಿಕ್ಕನು. ಬೋಅರರು ಮುತ್ತಿದ ಪಟ್ಟಣಗಳೆಲ್ಲ ಬಿಡಿಸಲ್ಪಟ್ಟವು. ಇನ್ನು ಈ ಯುದ್ಧವು ತೀವ್ರ ಮುಗಿಯುವದೆಂದು ತೋರುತ್ತದೆ.

ಸನ್ ೧೮೯೮-೯೯ನೇ ಇಸವಿಯಲ್ಲಿ ಮುಂಬೈ ಇಲಾಖೆಯ ಬೇರೆ ಬೇರೆ ಭಾಗಗಳಲ್ಲಿಯ ಪ್ರಾಥಮಿಕ ಶಾಲಿಗಳಲ್ಲಿಯ ಶಿಕ್ಷಕರ ಸರಾಸರಿ ಪಗಾರವು ಕೆಳಗೆ ಬರೆದಂತೆ ಇರುವದು.

		ಟ್ರೇಂಡ ಹೆಡ್ಡ ಮಾಸ್ತರರ ಸರಾಸರಿ ಪಗಾರವು.			ಅಂಟ್ರೇಂಡ ಹೆಡ್ಡ ಮಾಸ್ತರರ ಸರಾಸರಿ ಪಗಾರವು.			ಟ್ರೇಂಡ ಅಸಿಸ್ಟಂಟ ಮಾಸ್ತರರ ಸರಾಸರಿ ಪಗಾರವು			ಅಂಟ್ರೇಂಡ ಅಂದರೆ ಪಬ್ಲಿಕ ಸರ್ವಿಸ ಪ. ಪಾಸಾದ ಅಸಿಸಂಟರ ಸರಾಸರಿ ಪಗಾರವು.			ಪಬ್ಲಿಕ ಸರ್ವಿಸ ಪರೀಕ್ಷೆಯಲ್ಲಿ ಪಾಸಾಗದ ಅಸಿಸ್ಟಂಟರ ಸರಾಸರಿ ಪಗಾರವು.		
	ಪುರುಷ ಶಿಕ್ಷಕರು.	ರೂ.	ಆ.	ಪೈ	ರೂ	ಆ.	ಪೈ	ರೂ.	ಆ.	ಪೈ	ರೂ.	ಆ.	ಪೈ	ರೂ.	ಆ.	ಪೈ
ಮಧ್ಯಭಾಗ	ಲೋಕಲ ಬೋರ್ಡ.	೧೭	೪	೧೧	೧೦	೦	೦	೧೨	೭	೩	೭	೪	೫	೭	೭	೧೦
	ಮುಂಬೈ ಶಹರ. ...	೩೭	೮	೧೧	೨೫	೧೧	೧೧	೧೩	೯	೧೦	೧೩	೧	೩	೧೧	೦	೯
	ಬೇರೆ ಮುನಿಸಿಪಾಲಿಟಿಗಳು	೨೪	೨	೯	೧೦	೨	೮	೧೨	೯	೦	೭	೧೦	೫	೭	೦	೨
	ಸಂಸ್ಥಾನಗಳು. ...	೧೪	೧೨	೧೦	೯	೬	೭	೧೦	೬	೫	೭	೧೩	೪	೬	೫	೧೦
ಉತ್ತರ ಭಾಗ.	ಲೋಕಲ ಬೋರ್ಡ. ..	೧೯	೨	೧೧	೧೦	೬	೬	೧೧	೧೪	೫	೭	೬	೬	೭	೧	೧೧
	ಮುನಸಿಪಾಲಿಟಿಗಳು. ...	೨೦	೮	೫	೯	೮	೫	೧೩	೨	೫	೭	೩	೧೧	೬	೧೫	೬
	ಸಂಸ್ಥಾನಗಳು. ...	೧೭	೧೦	೯	೧೧	೧೫	೧೧	೧೧	೧೪	೩	೬	೬	೧೦	೫	೪	೧೧
	ಕಾಠೇವಾಡ ಏಜನ್ಸಿ ...	೧೮	೧೨	೪	೧೧	೩	೫	೧೨	೭	೩	೧೫	೦	೦	೪	೧೧	೨
ದಕ್ಷಿಣ ಭಾಗ.	ಲೋಕಲ ಬೋರ್ಡ. ...	೧೭	೫	೫	೧೦	೩	೪	೧೦	೧೧	೧೦	೭	೪	೪	೭	೫	೪
	ಮುನಸಿಪಾಲಿಟಿಗಳು. ...	೨೩	೧೫	೧	೧೧	೧೦	೧	೧೩	೧೦	೬	೭	೧೪	೭	೬	೭	೨
	ಸಂಸ್ಥಾನಗಳು. ...	೧೬	೮	೪	೧೦	೬	೨	೧೩	೯	೨	೮	೪	೪	೬	೧೨	೧

ಸಿಂಧ.	ಲೋಕಲಬೋರ್ಡ.	೨೬	೨	೬	೧೧	೧೨	೯	[illegible]	೧೪	೮	೯	೧೩	೯	೮	೫	೮
	ಮುನಸಿಪಾಲಿಟಿಗಳು	೩೩	೮	೭	೨೧	೦	೦	೧೯	೭	೫	೧೧	೭	೫	೧೧	೭	೬
ಮಧ್ಯಭಾಗ.	ಸ್ತ್ರೀ ಶಿಕ್ಷಕರು															
	ಲೋಕಲ ಬೋರ್ಡ	೨೧	೧೨	೧೦	೧೦	೦	೦	೦	೦	೦	೦	೦	೦	೬	೮	೦
	ಮುಂಬೈ ಶಹರ	೩೧	೬	೮	೩೩	೧೨	೦	೨೦	೦	೦	೦	೦	೦	೧೦	೧೫	೨
	ಬೇರೆ ಮುನಸಿಪಾಲಿಟಿಗಳು.	೧೬	೩	೯	೧೦	೦	೦	೧೬	೦	೦	೯	೦	೦	೭	೧೧	೧
	ಸಂಸ್ಥಾನಗಳು	೦	೦	೦	೧೦	೦	೦	೦	೦	೦	೦	೦	೦	೮	೦	೦
ಉತ್ತರ ಭಾಗ.	ಲೋಕಲಬೋರ್ಡ	೨೦	೧೩	೬	೧೦	೦	೦	೧೦	೦	೦	೦	೦	೦	೭	೦	೦
	ಮುನಸಿಪಾಲಿಟಿಗಳು	೨೨	೧೧	೨	೧೦	೦	೦	೧೧	೦	೦	೮	೫	೪	೫	೯	೪
	ಸಂಸ್ಥಾನಗಳು	೨೩	೫	೦	೮	೧೪	೧೧	೧೨	೦	೦	೩	೦	೦	೫	೬	೯
	ಕಾಠೇವಾಡ ಏಜನ್ಸಿ	೨೧	೧೩	೧೦	೯	೧೫	೫	೧೩	೮	೪	೦	೦	೦	೪	೭	೭
ದಕ್ಷಿಣ ಭಾಗ.	ಲೋಕಲಬೋರ್ಡ	೨೦	೮	೦	೧೦	೦	೦	೦	೦	೦	೦	೦	೦	೨	೧	೯
	ಮುನಸಿಪಾಲಿಟಿಗಳು	೧೯	೦	೦	೧೩	೮	೦	೧೩	೮	೦	೦	೦	೦	೭	೮	೬
	ಸಂಸ್ಥಾನಗಳು	೨೧	೦	೦	೧೭	೨	೧೧	೧೦	೬	೧೦	೬	೮	೦	೬	೮	೦
ಸಿಂಧ.	ಲೋಕಲಬೋರ್ಡ	೪೦	೦	೦	೧೦	೦	೦	೦	೦	೦	೦	೦	೦	೯	೦	೦
	ಮುನಸಿಪಾಲಿಟಿಗಳು	೨೩	೧೨	೭	೨೦	೯	೨	೧೬	೨	೧೧	೦	೦	೦	೧೦	೧೪	೩

ಸದ್ಯಕ್ಕೆ ವಿದ್ಯಾವೃದ್ಧಿಯು ಕೆಲಸವು ತಕ್ಕಮಟ್ಟಿಗೆ ಭರದಿಂದ ಸಾಗುತ್ತಲಿದೆ. ಇಂಗ್ಲಿಷ ಅಭ್ಯಾಸದ ಅನುಕೂಲತೆಗಳು ವಿಶಿಷ್ಟ ಸ್ಥಳಗಳಲ್ಲಿ ಮಾತ್ರ ಇರುವದರಿಂದ ಚಿಕ್ಕ ಮಕ್ಕಳಿಗೆ ಮನೆಯವರಿಂದ ದೂರ ಇರಬೇಕಾಗುತ್ತದೆ. ಅಲ್ಲಿ ಊಟ, ಉಡಿಗೆ, ಆಚಾರವಿಚಾರ ಬಿಡಾರ ಮುಂತಾದವುಗಳ ಸಂಬಂಧದಿಂದ ನೋಡುವವರು ಯಾರೂ ಇಲ್ಲದ್ದರಿಂದಲೂ ಪ್ರಸಂಗವಶಾತ್ ಕೆಟ್ಟ ಸಂಗತಿ ಗಂಟು ಬೀಳುತ್ತಿರುವದರಿಂದಲೂ ಈ ಸೋಯಿಗಳಿಂದಾಗುವ ಲಾಭಕ್ಕೆ ಬದಲಾಗಿ ಹಾನಿಯು ಸಂಭವಿಸುತ್ತದೆ ನಮ್ಮ ಭಾಗದ ಜನರು ಮಕ್ಕಳ ಮೇಲೆ ಅತಿ ವಾತ್ಸಲ್ಯವುಳ್ಳವರಾದ್ದರಿಂದಂತೂ ಅವರು ಹೇಳಿದ್ದೇ ಪ್ರಮಾಣ ಮಾಡಿಕೊಂಡು ಬೇಡಿದಷ್ಟು ದುಡ್ಡು ತಮ್ಮ ಹೊಟ್ಟೇ ಕಟ್ಟಿಯಾದರೂ ಕೊಡುವದಲ್ಲದೆ ಅವರು ಅದರಿಂದೇನು ಮಾಡುತ್ತಾರೆ, ಹಣದ ಸದ್ವ್ಯಯವಾಗುತ್ತದೋ ಅಪವ್ಯಯವಾಗುತ್ತದೋ ಇದನ್ನು ಕುರಿತು ಎಳ್ಳಷ್ಟು ಆಲೋಚಿಸುವದಿಲ್ಲ. ಈ ಮಾತನ್ನು ಲಕ್ಷಕ್ಕೆ ತಂದು ಎಜ್ಯುಕೇಶನ ಕಮಿಶನದವರು ಪ್ರತಿಒಂದು ಹೈಸ್ಕೂಲಿಗೆ ಭೋಜನಾಲಯವೂ ವಸತಿ ಸ್ಥಳವೂ ಜೋಡಿಸಲ್ಪಡಬೇಕೆಂದು ಸೂಚಿಸಿದರು ಆದರೆ ಈ ಕೆಲಸವು ಕೇವಲ ಸರಕಾರದವರಿಂದಾಗತಕ್ಕದ್ದಲ್ಲ. ಜನರೂ ಇದಕ್ಕೆ ಸಹಾಯ ಮಾಡಲಿಕ್ಕೆಬೇಕು. ಪ್ರಮುಖ ಶಿಕ್ಷಕರು ಈ ಮಾತನ್ನು ಕುರಿತು ವಿಚಾರಿಸಿ ತಾಯಿತಂದೆಗಳಿಗೆ ಉಪದೇಶಿಸಿದರೆ ತಕ್ಕ ವ್ಯವಸ್ಥೆಯು ಶೀಘ್ರವೇ ಆಗುವದೆಂದು ನಮ್ಮ ನಂಬಿಗೆಯುಂಟು.

ಇಂಗ್ಲಂಡ ದೇಶಕ್ಕೆ ಅಭ್ಯಾಸಕ್ಕಾಗಿ ಹೋಗುವ ತರುಣ ಜನರ ಸ್ಥಿತಿಯಾದರೂ ವಿಚಾರಣೀಯವಾಗಿರುತ್ತದೆ. ಅವರಿಗಾದರೂ ವಿಶೇಷ ಸ್ವಾತಂತ್ರ್ಯ ಕೊಟ್ಟು ಫಲವಿಲ್ಲ. ಮೇಲ್ವಿಚಾರಕರಿರದಿದ್ದರೆ ಫಲವಾಗುವದಕ್ಕೆ ಬದಲಾಗಿ ನಷ್ಟವೇ ಘಟಿಸುವದು. ಈ ತರದ ಉದಾಹರಣೆಗಳು ಹಲವು ಉಂಟು ಇದನ್ನಾಲೋಚಿಸಿ ಹಿಂದುಸ್ತಾನದ ಯೂರೋಪಿಯ ಹಿತಚಿಂತಕರು ಅಲ್ಲಿಗೆ ಹೋಗುವ ವಿದ್ಯಾರ್ಥಿಗಳ ಅಭ್ಯಾಸ ನಿವಾಸ ಭೋಜನಗಳ ಸಂಬಂಧದಿಂದ ಕೆಲವು ವ್ಯವಸ್ಥೆ ಮಾ

ಡಿರುತ್ತಾರೆಂಬದನ್ನು ತಿಳಿಸಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ.

TACT.

ನೆಲೆಗಂಡು ವರ್ತಿಸೋಣ ಅಥವಾ ಹತೋಟಿ.

ಈ ಪ್ರಪಂಚದಲ್ಲಿ ಎಷ್ಟೋ ಜನರು ಎಲ್ಲರಿಗೆ ಬೇಕಾಗುವಂತೆ ವರ್ತಿಸಿ, ನಾಲ್ಕು ಜನರಿಂದ ಹೌದೆನಿಸಿಕೊಂಡು, ಕೀರ್ತಿವಂತರಾಗಿ ಬಾಳುವರು. ಕೆಲವರು ಇದಕ್ಕೆ ವಿಪರೀತವಾಗಿ ಅಂದರೆ ನಾಲ್ವರಿಂದ ಕೆಡಕೆನಿಸಿಕೊಂಡು, ಅಂತೂ ಇಂತೂ ಕಾಲಹರಣ ಮಾಡುವರು. ಹೀಗಾಗುವ ಕಾರಣವೇನೆಂದು ಕೇಳಿದರೆ, ಹಲವರಿಗೆ ಸಾಕಷ್ಟು ಬುದ್ಧಿ ಇಲ್ಲೆಂತಲೂ ಕೆಲವರು ಅವರಿಗೆ ತಕ್ಕಷ್ಟು ತಾರತಮ್ಯ ಜ್ಞಾನವಿಲ್ಲೆಂತಲೂ ಇನ್ನೂ ಕೆಲವರು ಅವರಿಗೆ ಪ್ರಸಂಗಾವಧಾನವಿಲ್ಲೆಂತಲೂ ಈ ಮೇರೆಗೆ ಹಲವರು ಹಲವು ವಿಧವಾಗಿ ನುಡಿಯುತರು. ಆದರೆ ಈ ಕಾರಣಗಳೆಲ್ಲವೂ ನಮಗೆ ಸಮರ್ಪಕವಾಗಿ ತೋರುವದಿಲ್ಲ. ಈ ಪ್ರಪಂಚದಲ್ಲಿ ಹೌದೆನಿಸಿಕೊಂಡು ನಡೆದು, ಇಷ್ಟಕಾರ್ಯವನ್ನು ಸಾಧಿಸಿಕೊಳ್ಳಬೇಕಾದರೆ, ಬುದ್ಧಿಸಾಮರ್ಥ್ಯ, ತಾರತಮ್ಯಜ್ಞಾನ, ಪ್ರಸಂಗಾವಧಾನ ಇವುಗಳ ಹೊರತು ಇನ್ನೊಂದು ಅತಿ ಮಹತ್ವದ ಗುಣವು ಮನುಷ್ಯನಲ್ಲಿ ಇರಬೇಕಾಗುತ್ತದೆ. ಅದು ಯಾವದೆಂದರೆ:- **"ಜನರ ನೆಲೆ ಅರಿತು ವರ್ತಿಸುವ ಗುಣವು"** ಈ ಗುಣವು ಕೆಲವರಲ್ಲಿ ಸ್ವಾಭಾವಿಕವಾಗಿಯೇ ಇರುತ್ತದೆ. ಒಂದು ವೇಳೆ ಈ ಗುಣವಿಲ್ಲದವರು ಇದನ್ನು ಕಲಿತುಕೊಳ್ಳುವದು ದುರ್ಲಭವು ಆದರೂ ಅವರು ಈ ಗುಣವನ್ನು ಪಡೆದುಕೊಳ್ಳಲಿಕ್ಕೆ ಮನಃಪೂರ್ವಕವಾಗಿ ಪ್ರಯತ್ನಬಟ್ಟರೆ ಕೆಲವೊಟ್ಟಿಗೆ ಅದು ಅವರಿಗೆ ಸಾಧ್ಯವಾಗಬಹುದು. ಆದ್ದರಿಂದ ಈ ಗುಣವಿಲ್ಲದವರು ಅದನ್ನು ಪಡೆದುಕೊಳ್ಳುವದಕ್ಕೆ ಅನುಕೂಲವಾಗುವಂತೆ ಕೆಲವು ಸೂಚನೆಗಳನ್ನೂ ದೊಡ್ಡ ದೊಡ್ಡ ಗ್ರಂಥಕರ್ತರೂ ಪಂಡಿತರೂ ಈ ಗುಣದ ಬಗ್ಗೆ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನೂ ವಾಚಕರ ಸಲುವಾಗಿ ಕೆಳಗೆ ಬರೆಯುತ್ತೇವೆ.

ಮನುಷ್ಯನು ಏಕಾಂಗಿಯಾಗಿ ಜೀವಿಸುವ ಪ್ರಾಣಿಯಲ್ಲ. ಅವನಿಗೆ ಜನರ ನೆರವು ಬೇಕೇಬೇಕು. ಆದ್ದರಿಂದ ಅವನು ಅನ್ಯರ ಕೂಡ ವ್ಯವಹಾರ ಮಾಡುವ ಪ್ರಸಂಗಗಳು ಹೆಜ್ಜೆಜ್ಜೆಗೆ ಬರುತ್ತವೆ. ಇಂಥ ಪ್ರಸಂಗಗಳಲ್ಲಿ ಅವನು ಬಹಳ ಎಚ್ಚರದಿಂದ ನಡೆಯಬೇಕು, ಅಂದರೆ ಅವನು ಅನ್ಯರ ಅಭಿಪ್ರಾಯಗಳನ್ನು ಮುಂಗಂಡು ವರ್ತಿಸಿದಷ್ಟು ಒಳ್ಳೇದು ಅನ್ಯರ ಮನಸಿನ ಅಭಿಪ್ರಾಯಗಳನ್ನು ಮುಂಗಾಣುವದು ಸುಸಾಧ್ಯವಾದ ಸಂಗತಿಯಲ್ಲ. ಆದರೂ ತನ್ನಿಂದಾದಷ್ಟು ತ್ರಿಕರಣಪೂರ್ವಕವಾಗಿ ಅವನ್ನು ತಿಳುಕೊಳ್ಳಲಿಕ್ಕೆ ಯತ್ನ ಮಾಡತಕ್ಕದ್ದು.

ಅನ್ಯರನ್ನು ಸಂತೋಷ ಪಡಿಸುವ ಪ್ರಸಂಗವು ಒದಗಿದಾಗ್ಗೆ, ಅದನ್ನು ನಿರರ್ಥಕವಾಗಿ ಎಂದೂ ಹೋಗಗೊಡಬಾರದು. ಎಲ್ಲರ ಕೂಡ ಸಭ್ಯರೀತಿಯಿಂದ ವರ್ತಿಸಬೇಕು. ಮೊಂಟೇಗ್ ಎಂಬ ಹೆಸರಿನ ಗ್ರಂಥಕರ್ತ್ರಿಯು ಸಭ್ಯ ನಡತೆಯನ್ನು ಬಹು ಸರಸಾಗಿ ವರ್ಣಿಸಿರುವಳು. ಅದು ಹ್ಯಾಗೆಂದರೆ:—"ಸಭ್ಯ ನಡತೆಯನ್ನು ಪಡೆಯಲಿಕ್ಕೆ ಹಣದಂತೆ ಶ್ರಮ ಬೀಳುವದಿಲ್ಲ. ಆದರೂ ಅದು ಹಣದಿಂದ ದೊರಕಿಸಲಸಾಧ್ಯವಾದ ಒಡವೆಗಳನ್ನು ಸಹ ದೊರಕಿಸಿಕೊಡುತ್ತದೆ. ಆದ್ದರಿಂದ ನೀವು ನಿಮ್ಮ ಸುತ್ತುಮುತ್ತಲು ಇರುವಂಥ ಜನರನ್ನು ಒಲಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡಿರಿ." ಬರ್ಲೆ ಎಂಬವನು ಎಲಿಝಾಬೆಥ್‌ರಾಣಿಗೆ ಹೇಳಿದ್ದೇನೆಂದರೆ:—"ನೀವು ಜನರನ್ನು ಒಲಿಸಿಕೊಳ್ಳಿರಿ ಅಂದರೆ ಅವರ ಮನಸ್ಸೂ ಅವರ ಸಂಪತ್ತೂ ನಿಮ್ಮ ಕೈಸೇರುವವು."

ಬಲಾತ್ಕಾರದಿಂದ ಎಷ್ಟೋ ಕೆಲಸಗಳು ಒಳಬೀಳುತ್ತವೆ; ಆದರೆ ಬಲಾತ್ಕಾರದಿಂದ ಆಗದಂಥ ಕೆಲಸಗಳನ್ನು ಸಹ, ನೆಲೆಗಂಡು ವರ್ತಿಸುವ ಗುಣವು ಹಲವು ಸಾರೆ ನಮಗೆ ಸಾಧಿಸಿಕೊಡುತ್ತದೆ ಲಿಲ್ಲಿ ಎಂಬ ಗ್ರಂಥಕಾರನು ತನ್ನ ಪುಸ್ತಕದಲ್ಲಿ "ವಾಯು ಮತ್ತು ಸೂರ್ಯ" ಇವರದೊಂದು ಕಥೆಯನ್ನು ಬರೆದಿದ್ದಾನೆ. ಅದರ ತಾತ್ಪರ್ಯವೇನೆಂದರೆ;—ವಾಯು ಮತ್ತು ಸೂರ್ಯ ಇವರಿಬ್ಬರು ನಾಹೆಚ್ಚು

ಸೋ ಹೆಚ್ಚು ಎಂದು ವಿವಾದಿಸಿ ಕಡೆಗೆ ಒಬ್ಬ ಹಾದಿಕಾರನ ಮೈಮೇಲಿನ ಕಂಬಳಿಯನ್ನು ತೆಗೆದುಹಾಕಿದವನೇ ಶ್ರೇಷ್ಠನು ಎಂದು ತಮ್ಮ ತಮ್ಮೊಳಗೆ ಪಣಮಾಡಿಕೊಂಡರು. ಸೂರ್ಯನು ವಾಯುವಿನಂತೆ ಬಲಾತ್ಕಾರದಿಂದ ಅವನ ಕಂಬಳಿಯನ್ನು ಹಾರಿಸುವ ಪ್ರಯತ್ನ ಮಾಡದೆ ಸೌಖ್ಯರೀತಿಯಿಂದ ತನ್ನ ಪ್ರಖರವಾದ ಕಿರಣಗಳನ್ನು ಅವನ ಮೇಲೆ ಕೆಡಿವಿ ಶೆಕೆಯಾಗುವಂತೆ ಮಾಡಿ ಅವನ ಕಂಬಳಿಯನ್ನು ಅವನಿಂದಲೇ ತೆಗೆದು ಹಾಕಿಸಿ ಜೂಜು ಗೆದ್ದನು. ಇದೇ ಕಥೆಯು ಇಸೋಪನ ನೀತಿಕಥೆಗಳು ಎಂಬ ಹೆಸರಿನ ಪುಸ್ತಕದಲ್ಲಿ ಇರುತ್ತದೆ. ಇದನ್ನು ನಮ್ಮ ವಾಚಕರಲ್ಲಿ ಬಹು ಜನರು ಓದಿರಬಹುದು ಬಲಾತ್ಕಾರಕ್ಕಿಂತ ಸೌಮ್ಯನಡತೆಗೆ ಜನರು ಹೆಚ್ಚು ಸುಲಭರೀತಿಯಿಂದ ಒಳಗಾಗುತ್ತಾರೆಂಬದೇ ಈ ಕಥೆಯ ತಾತ್ಪರ್ಯವು

ನಮ್ಮ ಸುತ್ತಲಿರುವ ಜನರ ನಂಬಿಗೆಯನ್ನು ಪಡೆಯಲಿಕ್ಕೆ ನಾವು ಯತ್ನಿಸತಕ್ಕದ್ದು; ಇದಲ್ಲದೆ ಆ ನಂಬಿಗೆಗೆ ನಾವು ತಕ್ಕವರಾಗಿದ್ದೇವೆಂಬದನ್ನಾದರೂ ತೋರಿಸಲಿಕ್ಕೆ ಹವಣಿಸುತ್ತಿರಬೇಕು. ಪೃಥ್ವಿಯಲ್ಲಿ ಎಷ್ಟೋ ಜನರು ತಮ್ಮ ಸ್ವಂತ ಬುದ್ಧಿಸಾಮರ್ಥ್ಯಕ್ಕಿಂತ ತಮ್ಮ ಗುಣದಿಂದಲೇ ಹೆಚ್ಚು ಬೆಳಕಿಗೆ ಬಂದಿದ್ದಾರೆ. ಫ್ರಾನ್ಸಿಸ್ ಹಾರ್ನರನ ವಿಷಯವಾಗಿ ಸಿಡ್ನಿಸ್ಮಿಥನೆಂಬವನು ಒಂದು ವೇಳೆ ಅಂದದ್ದೇನಂದರೆ:— ಫ್ರಾನ್ಸಿಸ್ ಹಾರ್ನರನು "ಕೌನ್ಸಿಲ್ಸ್ ಆಫ್ ದಿ ನೇಶನ್ಸ್" ಎಂಬ ಸಭೆಯಲ್ಲಿ ಒಬ್ಬ ಅಧಿಕಾರಸ್ಥನಾಗಿರದಿದ್ದರೂ, ತನ್ನ ಮೇಲಾದ ಗುಣದ ಮೂಲಕವಾಗಿ, ಆ ಸಭೆಯಲ್ಲಿ ತನ್ನ ವರ್ಚಸ್ಸನ್ನು ನಿರಾಂತಕವಾಗಿ ನಡಿಸುತ್ತಿರುವನು, ಮತ್ತು ಅವನ ವಾಕ್ಯಗಳು ಕ್ರಿಸ್ತನ ಅಪ್ಪಣೆಗಳಂತೆ ಮೀರಲಶಕ್ಯವಾದವುಗಳಾಗಿರುವವು."

ಅನ್ಯರ ಇಚ್ಛೆಗಳಂತೆ ವರ್ತಿಸುವ ಪ್ರಸಂಗ ಬಂದಾಗ್ಗೆ ಅವು ನ್ಯಾಯವಾದವುಗಳಾಗಿರುವವೋ ಇಲ್ಲವೋ ಎಂಬದನ್ನು ವಿಚಾರ ಮಾಡಿ ಜಾಣತನದಿಂದಲೂ ಎಚ್ಚರದಿಂದಲೂ ವರ್ತಿಸಬೇಕು. ಆಗ ಒಲ್ಲೆನ್ನುವ ಪ್ರಸಂಗ ಬಂದರೆ, ಒಲ್ಲೆ

ನ್ನಲಿಕ್ಕೆ ಅನುಮಾನಿಸಬಾರದು. ಹೇಳಿದ್ದಕ್ಕೆ ಯಾಕಾಗವಲ್ಲದು ಎಂದು ಅನ್ನಲಿಕ್ಕೆ ಎಲ್ಲರಿಗೆ ಬರುತ್ತದೆ ಆದರೆ ಸರಿಯಾದ ಉತ್ತರವನ್ನು ತಕ್ಕರೀತಿಯಿಂದ ನುಡಿಯುವವರು ಕಡಿಮೆ. ಕೇಳಿದ್ದಕ್ಕೆ ಒಲ್ಲೆ ಎಂದು ನುಡಿಯುವದು ಬಹಳ ಬಿಗಿಯಾದದ್ದಿರುತ್ತದೆ. ಎಷ್ಟೋ ಜನರು ಒಲ್ಲೆ ಎಂಬ ನುಡಿಯನ್ನು ವೇಳೆಗೆ ಸರಿಯಾಗಿ ತಕ್ಕರೀತಿಯಿಂದ ಉಚ್ಚರಿಸದ್ದರಿಂದಲೇ ಕೇಡಿಗೆ ಒಳಗಾಗಿದ್ದಾರೆ. ಪ್ಲ್ಯುಟಾರ್ಕನೆಂಬ ಗ್ರಂಥಕರ್ತನು " ಏಸಿಯಾಮೈನರದ ನಿವಾಸಿಗಳಿಗೆ 'ಇಲ್ಲ' ಎಂಬ ಈ ಸಣ್ಣ ಶಬ್ದವನ್ನು ತಕ್ಕರೀತಿಯಿಂದ ನುಡಿಯಲಿಕ್ಕೆ ಬಾರದ್ದರಿಂದ, ಅವರು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಂಡರು." ಎಂದು ಬರೆದಿದ್ದಾನೆ. ಈ ಮೇರೆಗೆ 'ಇಲ್ಲ' ಎಂಬ ನುಡಿಯು ಇಷ್ಟು ಮಹತ್ವವುಳ್ಳದ್ದಾಗಿರುವದರಿಂದ, ಅದನ್ನು ಸಮಯೋಚಿತವಾಗಿ ನುಡಿಯಲಿಕ್ಕೆ ಕಲಿಯುವದು ಅತ್ಯವಶ್ಯವಾದದ್ದೆಂದು ಇಲ್ಲಿ ಪ್ರತ್ಯೇಕವಾಗಿ ಹೇಳುವ ಕಾರಣವಿಲ್ಲ. ನಾವು ಎರಡನೆಯವರ ಕೂಡ ವ್ಯವಹಾರ ಮಾಡುವ ಹೊತ್ತು ಬಂದಾಗ್ಗೆ ಅವರಿಗೆ ಆನಂದವಾಗುವಂತೆಯೂ ತಿರುತಿರುಗಿ ನಮ್ಮ ಹತ್ತರ ಬರುವ ಇಚ್ಛೆಯು ಅವರಲ್ಲಿ ಹುಟ್ಟುವಂತೆಯೂ ನಾವು ವರ್ತಿಸತಕ್ಕದ್ದು.

ಪ್ರತಿ ಒಬ್ಬನು, ತನ್ನ ಮೇಲೆ ಎಲ್ಲರು ಪ್ರೀತಿ ತೋರಿಸಬೇಕೆಂತಲೂ, ತನಗೆ ಆದರಸತ್ಕಾರ ಮಾಡಬೇಕೆಂತಲೂ, ತನ್ನೊಂದಿಗೆ ಮನಬಿಚ್ಚಿ ಮಾತಾಡಬೇಕೆಂತಲೂ ಬಯಸುತ್ತಿರುತ್ತಾನೆ. ಈ ಬಯಕೆಯಿಂದ ಎಷ್ಟು ಪ್ರಯೋಜನವಾಗುತ್ತದೆಂಬ ಸಂಗತಿಯು ಆಗಾಗ್ಗೆ ನಮ್ಮ ಅನುಭವಕ್ಕೆ ಬರುತ್ತದೆ. ಸಂತೆಯೊಳಗೆ ಮಾರಾಟಕ್ಕೆಂತ ತಂದ ಕುದುರೆಯನ್ನು ಕೊಂಡುಕೊಳ್ಳುವ ಅಪೇಕ್ಷೆಯು ನಮಗಿದ್ದರೆ, ಎರಡನೆಯವರು ಬೇಡುವದಕ್ಕಿಂತ ತುಸು ಹಣ ಹೆಚ್ಚು ಕೊಟ್ಟರೆ, ಅದು ನಮಗೆ ದೊರೆಯುವದು. ಆದರೆ ಸವಿಮಾತುಗಳಿಂದ ಆ ಮಾರುವವನನ್ನು ಆನಂದಗೊಳಿಸಿದರೆ ಅವನು ಒಂದು ವೇಳೆ ಮೂಲ ಕ್ರಯದಲ್ಲಿ ಕಡಿಮೆ ಮಾಡಿ ಸಹ ನಮಗೆ ಅದನ್ನು ಕೊಡಬಹುದು.

ನಾವು ಅನ್ಯರಿಗೆ ಸಂತೋಷಬಡಿಸುವ ಇಚ್ಛೆಯನ್ನು ತೋರಿಸಿದರೆ ಸಾಕು, ಅಷ್ಟರಿಂದಲೇ ಅವರು ಸಮಾಧಾನ ಪಡುವರು. ಚೆಸ್ಟರಫೀಲ್ಡನೆಂಬವನು "ಅನ್ಯರನ್ನು ಸಂತೋಷಬಡಿಸುವ ಇಚ್ಛೆಯು ಮನುಷ್ಯನಲ್ಲಿ ಹುಟ್ಟಿದಮಾತ್ರಕ್ಕೆ ಅವನು ಆನಂದಪಡಿಸುವ ಈ ಕಲೆಯನ್ನು ಅರ್ಧ ಕಲಿತುಕೊಂಡ ಹಾಗಾಯಿತು. ಈ ವಿಚಾರವೇ ಮನಸ್ಸಿನಲ್ಲಿ ಬರದಂಥವನ ಕೈಯಿಂದ ಈ ಕೆಲಸವು ಎಂದೂ ಆಗದು" ಎಂದು ವರ್ಣಿಸುತ್ತಾನೆ. ಆದ್ದರಿಂದ ನಾವು ಈ ಕಲೆಯನ್ನು ಚಿಕ್ಕಂದಿನಲ್ಲಿಯೇ ಕಲಿಯಬೇಕು ಚಿಕ್ಕಂದಿನಲ್ಲಿ ಅದನ್ನು ಕಲಿಯದಿದ್ದರೆ, ದೊಡ್ಡವರಾದ ಮೇಲೆ ಅದನ್ನು ಕಲಿಯುವದು ಬಿಗಿಯಾಗುವದು.

ಎಷ್ಟೋ ಜನರು ತಮ್ಮ ನಿಜವಾದ ಜ್ಞಾನದ ಬಲಕ್ಕಿಂತಲು ಹೊರಗಿನ ಒಳ್ಳೆ ನಡತೆಗಳಿಂದಲೇ ಹೆಚ್ಚಳವನ್ನು ಹೊಂದಿದ್ದಾರೆ. ಆದರೆ ಎಷ್ಟೋ ಜ್ಞಾನಸಂಪನ್ನರು ದೊಡ್ಡ ಮನಸ್ಸಿನವರೂ ಅಂತಃಕರಣವುಳ್ಳವರೂ ಆಗಿದ್ದರೂ, ತಮ್ಮ ಅಸಭ್ಯ ನಡತೆಗಳಿಂದ ಅನೇಕರೊಂದಿಗೆ ಹಗೆತನವನ್ನು ಕಟ್ಟಿಕೊಂಡಿದ್ದಾರೆ. ನಾವು ಪರರನ್ನು ಆನಂದಪಡಿಸಲಿಕ್ಕೆ ಶಕ್ತರಾದರೆ, ಅದು ನಮಗೆ ಒಂದು ತರದ ಆನಂದವನ್ನೇ ಕೊಡುತ್ತದೆ. ಆದ್ದರಿಂದ ನಾವು ಈ ಕಲೆಯನ್ನು ಪಡೆಯಲಿಕ್ಕೆ ಏಕಮನಸ್ಸಿನಿಂದ ಪ್ರಯತ್ನಬಟ್ಟರೆ, ಅದರಲ್ಲಿ ನಮಗೆ ಯಶಸ್ಸು ಬರದೆ ಇರಲಾರದು.

ಯಾವದಾದರೊಂದು ಪ್ರಸಂಗವನ್ನು ನಾವು ಶಾಂತಚಿತ್ತದಿಂದಲೂ ಜಾಗ್ರತೆಯಿಂದಲೂ ಕಾದುಕೊಂಡಿರಬೇಕು. ಈ ಹೊತ್ತಿಗೆ ದೊಡ್ಡ ಮನಸ್ಸು ಅವಶ್ಯವಿದ್ದಷ್ಟೇ ಶಾಂತಚಿತ್ತವಾದರೂ ಅವಶ್ಯವಿರುತ್ತದೆ. ರಾಜ್ಯಭಾರಗಳಲ್ಲಿ ನಿಧಾನಚಿತ್ತವೂ ದೃಢಮನಸ್ಸೂ ಬೇಕೇ ಬೇಕು. ಇವುಗಳ ಬೆಲೆಯು ಇಷ್ಟೇ ಇರುತ್ತದೆಂದು ಹೇಳುವದು ಅಸಾಧ್ಯವು. ಈ ಗುಣಗಳು ಗಂಡಾಂತರಗಳೊಳಗಿಂದಲೂ, ಕಷ್ಟಗಳೊಳಗಿಂದಲೂ ಒಮ್ಮೊಮ್ಮೆ ನಮ್ಮನ್ನು ಸುರಕ್ಷಿತವಾಗಿ ಪಾರುಗಾಣಿಸುವವು.

(ಸಕೀಷ.)

CHEMISTRY.

ರಸಾಯನಶಾಸ್ತ್ರ.

(೧೦೩ ನೇ ಪುಟದಿಂದ ಮುಂದೆ ಸಾಗಿದ್ದು.)

೧೨ ನೇ ಪಾಠವು.

ಭೂಮಿ.

೫೨. ಮಕ್ಕಳಿರಾ ಇಷ್ಟು ಹೊತ್ತು ನಾವು ಪ್ರಯೋಗ ಪರೀಕ್ಷಣಗಳ ದ್ವಾರದಿಂದ ಬೆಂಕಿ, ಗಾಳಿ, ನೀರು ಈ ಮೂರು ಪದಾರ್ಥಗಳ ಸಂಬಂಧದಿಂದ ಹಲವು ಹೊಸ ಸಂಗತಿಗಳನ್ನು ಅರಿತುಕೊಂಡೆವು. ಭಿನ್ನ ಭಿನ್ನ ಪದಾರ್ಥಗಳು ರಸಾಯನ-ಸಂಯೋಗದಿಂದ ಮಿಶ್ರವಾಗುವಾಗ ಉತ್ಪನ್ನವಾಗುವ ಶೆಕೆಯೇ ಬೆಂಕಿ ಎಂದು ಹೇಳಲ್ಪಡುತ್ತದೆ ಪ್ರಾಣಿಗಳ ಶ್ವಾಸೋಚ್ಛ್ವಾಸಕ್ಕೆ ಅನುಕೂಲಿಸುವಂಥ, ಭೂಗೋಲವನ್ನು ಆವರಿಸಿದಂಥ ಆಕ್ಸಿಜನ್ ನೈತ್ರೋಜನ್ ಎಂಬವೆರಡು ವಾಯುರೂಪ ಪದಾರ್ಥಗಳ ಯಾಂತ್ರಿಕ ಮಿಶ್ರಣಕ್ಕೆ ಹವೆಯನ್ನುತ್ತೇವೆ. ಆಕ್ಸಿಜನ್, ಹೈದ್ರೋಜನ್ ಎಂಬ ಎರಡು ವಾಯುರೂಪ ಪದಾರ್ಥಗಳು ರಸಾಯನ ಸಂಯೋಗದಿಂದ ಮಿಶ್ರವಾಗಿ ದೃಷ್ಟಿಗೋಚರವಾಗುವ ಪ್ರವಾಹ ರೂಪದ ಪದಾರ್ಥಕ್ಕೆ ನೀರೆನ್ನುತ್ತೇವೆ ಈ ರಸಾಯನ ಶಾಸ್ತ್ರದ ಆರಂಭದಲ್ಲಿ ವಿಚಾರಣೀಯ ಸಂಗತಿಗಳೆಂದು ಗೊತ್ತುಮಾಡಿದ ನಾಲ್ಕು ಸಂಗತಿಗಳಲ್ಲಿ ಬೆಂಕಿ, ಗಾಳಿ, ನೀರು ಈ ಮೂರರ ವ್ಯಾಖ್ಯೆಗಳನ್ನೂ, ವ್ಯಾಪಾರವನ್ನೂ, ಘಟಕಗಳನ್ನೂ, ಪ್ರಯೋಜನವನ್ನೂ ಸಾಧಾರಣವಾಗಿ ಅರಿತುಕೊಂಡೆವು. ಇದಕ್ಕೇನು ಪ್ರಯಾಸವಾಗಲಿಲ್ಲ. ಆದರೆ ಇನ್ನು ಆಲೋಚನಾಕ್ರಮದಲ್ಲಿ ನಾಲ್ಕನೇಯದಾದ ಭೂಮಿಯ ವಿಷಯಕ್ಕೆ ವಿಚಾರ ನಡಿಸುವದು ಪ್ರಸ್ತುತ ಕಾರ್ಯವಿರುವದು ಮಕ್ಕಳಿರಾ ನಾವೆಲ್ಲರೂ ಭೂಮಿಯಲ್ಲಿಯೇ ಹುಟ್ಟಿದ್ದೇವೆ, ಅಲ್ಲಿಯೇ ಇರುತ್ತೇವೆ, ಅಲ್ಲೇ ನಾಶಹೊಂದುತ್ತೇವೆ, ನಮಗೆ ದೊರೆಯುವ ಅನ್ನಪಾನಾದಿಗಳು ಇದರಿಂದಲೇ; ಬಹಳ ಮಾತಿನಿಂದೇನು! ಪ್ರಾಣಿಮಾತ್ರರಿಗೆ ಸರ್ವ

ಸೌಖ್ಯವನ್ನು ದಯಪಾಲಿಸುವಂಥಾದ್ದು ಭೂಮಿಯೇ; ಆದರೆ ಈ ಭೂಮಿಯೆಂದರೇನು! ಇದರ ಘಟಕಗಳು ಯಾವವು? ಇದರ ಮೂಲಸ್ವರೂಪವು ಎಂಥಾದು? ರೂಪಾಂತರದ ಕಾರಣವೇನು? ಮುಂತಾದ ಸಂಗತಿಗಳನ್ನು ಅರಿತುಕೊಳ್ಳುವದು ಅವಶ್ಯವೂ, ಆನಂದಕರವೂ, ಆಗಿದ್ದರೂ ಬಹು ಪ್ರಯಾಸದ ಕಾರ್ಯವಿರುವದು. ನಮಗೆಲ್ಲ ಈ ಭೂಮಿಯು ಘನ ಅಥವಾ ಅಪ್ರವಾಹಿ ಪದಾರ್ಥವೆಂದು ಪ್ರತ್ಯಕ್ಷತೋರುತ್ತದೆ. ಆದರೆ ಈ ಘನತ್ವವು ಈ ಭೂಮಿಗೆ ತನಗೆ ತಾನೇ ಬಂದಿಲ್ಲ ಹಾಲು ಪ್ರವಾಹಿ ಪದಾರ್ಥವೆಂದು ನೀವು ಬಲ್ಲಿರಿ. ಅದು ಆರಹತ್ತಿತೆಂದರೆ ಅದರ ಮೇಲ್ಭಾಗದಲ್ಲಿ ಕೆನೆಗಟ್ಟಿದ್ದನ್ನು ನೀವು ನೋಡಿರಬಹುದು. ಅದರಂತೆ ಭೂಮಿಯು ಆರಂಭದಲ್ಲಿ ಅತಿ ತಪ್ತವಾದ ರಸರೂಪದಿಂದಿದ್ದು ಅದರೊಳಗಿನ ಉಷ್ಣತೆಯು ಕಡಿಮೆಯಾಗುತ್ತ ನಡೆದಂತೆ ಅದರ ಮೇಲ್ಭಾಗವು ಕೆನೆಗಟ್ಟಿದ್ದರಿಂದ ಈ ತೋರಿಕೆಯ ಘನತ್ವವನ್ನು ಪಡೆದಿರುತ್ತದೆ. ಭೂಮಿಯ ಹೊಟ್ಟೆಯೊಳಗೆ ದೊಡ್ಡ ದೊಡ್ಡ ಬಂಡೆಗಳು ಬಿರುಸಾದ ಲೋಹಗಳು ಕರಗಿ ನಿಂತಿರುತ್ತವೆ. ಆ ರಸವು ಜ್ವಾಲಾಮುಖಿಗಳ ಮಾರ್ಗದಿಂದ ಹೊರಬಿದ್ದು ಭೂಪೃಷ್ಠದ ಮೇಲೆ ಬಂದದ್ದನ್ನು ನೀವು ನೋಡಿರಬಹುದು; ಇಲ್ಲವೆ ಕೇಳಿರಬಹುದು ಆ ಹೊರಬಿದ್ದ ರಸಕ್ಕೆ "ಲಾವಾ" ಎಂಬ ಹೆಸರು ಇತಲಿಯೊಳಗಿನ ವೆಸುವಿಯಸ್ ಎಂಬ ಪರ್ವತದ ಅಡಿಯಲ್ಲಿ ಪೂರ್ವದಲ್ಲಿ ಹರ್ಕ್ಯುಲೇನಿಯಂ ಎಂಬ ಪಟ್ಟಣವಿತ್ತು. ಆ ಪಟ್ಟಣವು ಲಾವಾರಸದೊಳಗೆ ಮುಳುಗಿ, ಅದರೊಳಗಿನ ಮನೆ, ಮಂದಿ, ದನಕರು, ಹಣಬಡವೆಗಳೆಲ್ಲ ಹಾಳಾಗಿ ಹೋದ ಕಥೆಯನ್ನು ನೀವು ಕೇಳಿರಬಹುದು. ಅಷ್ಟು ದೂರ ಯಾಕೆ? ಕಬ್ಬಿಣ ಮುಂತಾದ ಲೋಹಗಳನ್ನು ಕರಗಿಸಿ ನೀರು ಮಾಡುವದನ್ನು ನೀವು ನೋಡಿರಬಹುದು. ಯಂತ್ರಗಳು, ನಳಿಗಳು, ಕಂಭಗಳು, ಕಟಾಂಜನಗಳು, ಉಗಿಬಂಡಿಯ ನಳಿಗಳು ಮುಂತಾದವುಗಳನ್ನೆಲ್ಲ ಕಬ್ಬಿಣವನ್ನು ಕರಗಿಸಿ ಆ ರಸವನ್ನು ಪಡಿಅಚ್ಚಿನಲ್ಲಿ ಹೊಯ್ದು ಸಿದ್ಧಮಾಡುತ್ತಾರೆ. ಅದರಂತೆ ಈ ಭೂಗೋಲಕ್ಕೆ

ಸಾಕಷ್ಟು ಶಕೆಕೊಟ್ಟು ನೀರು ಮಾಡಬಹುದು ಒಳ್ಳೇದು ಈಗ ನಾವು ಭೂಮಿಯೊಳಗನ ಕೆಲವು ಬೇರೆ ಬೇರೆ ಒಡವೆಗಳನ್ನು ಆರಿಸಿಕೊಂಡು ಅವುಗಳ ಘಟನೆಯು ಹ್ಯಾಗಾಗಿರುವದೆಂಬದನ್ನು ಆಲೋಚಿಸುವಾ.

೩೩. ಏಡುವಿನೊಳಗಿರುವ ಕಾರ್ಬಾನಿಕ್ ಆಸಿಡ್ ವಾಯುವನ್ನು ಬೇರೆ ಮಾಡುವ ಬಗೆ

ಪ್ರಯೋಗ—೨೯. ಏಡು ಸುಣ್ಣಬುರಲಿಯು ಹರಳು ಸಂಗಮರವರೀ ಕಲ್ಲು ಇವೆಲ್ಲ ಒಂದೇ ಜಾತಿಯ ಒಡವೆಗಳು ಈ ಮೂರರೊಳಗೆ ಯಾವದೊಂದರ ಮೂರು ನಾಲ್ಕು ಹರಳುಗಳನ್ನು ಒಂದು ಸೀಸೆಯಲ್ಲಿ ಹಾಕು, ಬಳಿಕ ಒಂದು ಬೆಣೆಯಲ್ಲಿ ಎರಡು ತೂತುಗಳನ್ನು ಮಾಡಿ ಒಂದರಲ್ಲಿ ಡೊಂಕಾದ ಕೊಳವೆಯನ್ನು ಸೇರಿಸಿ ಆ ಸೀಸೆಯ ಬಾಯಿಗೆ ಕೂಡಿಸು. ಬಳಿಕ ಆ ಸೀಸೆಯಲ್ಲಿ ನೀರನ್ನೂ ತುಸು ಹೈದ್ರೋಕ್ಲೋರಿಕ ಆಸಿಡ್‌ವನ್ನೂ ಹಾಕು ಸೀಸೆಯೊಳಗೆ ಹರಳಿರುವ ಸ್ಥಳದಲ್ಲಿ ಗುಳ್ಳೆಗಳೇಳಲಾರಂಭಿಸಿದವು. ನೋಡು! ಸೊಟ್ಟಕೊಳವೆಯ ಮತ್ತೊಂದು ತುದಿಯನ್ನು ಒಂದು ಗ್ಲಾಸಿನಲ್ಲಿ ನೀರು ತುಂಬಿ ಅದರಲ್ಲಿ ಮುಳುಗಿಸು. ಆ ನೀರೊಳಗೆ ಗುಳ್ಳೆಗಳು ಏಳಹತ್ತಿದ ಬಳಿಕ ಆ ಸೊಟ್ಟ ಕೊಳವೆಯ ತುದಿಯನ್ನು ಗ್ಲಾಸಿನೊಳಗಿಂದ ತೆಗೆದು ಒಂದು ಬರಿದಾದ ಸೀಸೆಯಲ್ಲಿ ಸೇರಿಸು. ಅಲ್ಲಿಂದ ಕೆಲವು ನಿಮಿಷಗಳ ತರುವಾಯ ಒಂದು ಉರಿಯುವ ಮೇಣಬತ್ತಿಯನ್ನು ಆ ಬರಿ ಸೀಸೆಯಲ್ಲಿ ಹಿಡಿ. ಆಗೋ ದೀಪವು ಶಾಂತವಾಯಿತು. ಬಿಡು, ಬತ್ತಿಯನ್ನು ಹೊರಗೆ ತೆಗಿ, ಈ ಸುಣ್ಣದ ತಿಳಿಯನ್ನು ಅದರಲ್ಲಿ ಸುರವಿ ನೋಡು ಆ ತಿಳಿಯು ಹಾಲಿನಂತಾಯಿತು. ಒಳ್ಳೇದು ಈ ನೀರನ್ನು ಚೆಲ್ಲು; ಮತ್ತೊಮ್ಮೆ ಆ ಸೊಟ್ಟಕೊಳವೆಯನ್ನು ಇದರಲ್ಲಿ ಸೇರಿಸು. ತುಸು ಹೊತ್ತು ತಡೆ; ಬಳಿಕ ಬೇರೊಂದು ಬರಿ ಸೀಸೆಯಲ್ಲಿ ದೀಪವನ್ನು ಹಚ್ಚಿಟ್ಟು ಡೊಂಕ ಕೊಳವೆಯುಳ್ಳ ಸೀಸೆಯನ್ನು ಇದರ ಬಾಯಿ ಮೇಲೆ ಡಬ್ಬುಹಾಕು. ಆಗೋ ಮತ್ತೂ ದೀಪ ಶಾಂತವಾಯಿತು. ಇಗೋ ಈ ಸುಣ್ಣದ

ತಿಳಿಯುಳ್ಳ ಸೀಸೆಯ ಬಾಯಿ ಮೇಲೂ ಅದನ್ನು ತಬ್ಬು ಹಾಕು. ನೋಡು, ನೀರು ಕಲಕಾಗಿ ಬೆಳ್ಳಗಾದವು. ಇನ್ನು ಹೀಗಾದ ಕಾರಣವನ್ನು ಕಂಡುಕೊಳ್ಳುವಾ. ದೀಪ ಶಾಂತವಾಗಲಿಕ್ಕೂ ಸುಂಣದ ತಿಳಿಯು ಬೆಳ್ಳಗಾಗಲಿಕ್ಕೂ ಕಾರ್ಬಾನಿಕ್ ಆಸಿಡ್ ವಾಯುವು ಅವಶ್ಯವೆಂದು ನಿಮಗೆ ಗೊತ್ತುಂಟು. ಈ ವಾಯುವಲ್ಲದೆ ಇತರ ಯಾವತ್ತು ವಾಯುಗಳು ಹವೆಗಿಂತ ಹಗರಿರುತ್ತವೆಂಬದನ್ನೂ ನೀವು ಬಲ್ಲಿರಿ. ಆದರಿಂದ ನೀರು ಸುರುವಿದಂತೆ ಈ ವಾಯುವನ್ನು ಒಂದು ಪಾತ್ರೆಯೊಳಗಿಂದ ಮತ್ತೊಂದು ಪಾತ್ರೆಯಲ್ಲಿ ಸುರುವಲಿಕ್ಕೆ ಬರುತ್ತದೆ. ಈಗ ಹುಟ್ಟಿದ ವಾಯುವು ಕಾರ್ಬಾನಿಕ್ ಆಸಿಡಗ್ಯಾಸವೆಂತಲೂ, ಅದು ಖಡುವಿನಿಂದ ಹೊರಬಿತ್ತೆಂತಲೂ ಸಿದ್ಧವಾಗಲಿಲ್ಲವೆ? ಹೈದ್ರೋಕ್ಲೋರಿಕ್ ಆಸಿಡಿನ ಸಂಯೋಗದಿಂದ ಖಡುವಿನ ಪೃಥಕ್ಕರಣವಾಗಿ ಕಾರ್ಬಾನಿಕ್ ಆಸಿಡ್‌ವಾಯು ಉಂಟಾಯಿತೆಂಬದು ನಿಜವು. ಇದು ಹೊರ್ತಾಗಿ ಖಡುವಿನಲ್ಲಿ ಮತ್ತೇನಾದರೂ ಉಂಟೋ? ಒಂದು ಖಡುವಿನ ಅಥವಾ ಸುಣಬುರಲಿ ಹರಳಿನ ಅಥವಾ ಸಂಗಮುರಿವರಿ ಕಲ್ಲಿನ ತುಂಡನ್ನು ತಕ್ಕೊಂಡು ಕೆಂಡದಲ್ಲಿ ಇಕ್ಕಿ ಸಾವಕಾಶವಾಗಿ ಕಾಸು. ಆದರಿಂದ ಅದು ಸುಟ್ಟು ಭಿನ್ನ ರೂಪವನ್ನು ಹೊಂದುವದು. ಬಳಿಕ ಅದರ ಮೇಲೆ ಆಸಿಡ್ ಸುರವಿದರೆ ಗುಳ್ಳೆಗಳು ಹೊರಡುವದಿಲ್ಲ. ಇದರಿಂದ ಅದರೊಳಗಿನ ಕಾರ್ಬಾನಿಕ್ ಆಸಿಡ್ ವಾಯುವು ಹೊರಟು ಹೋಗಿರುತ್ತದೆಂದು ಸ್ಪಷ್ಟವಾಗುತ್ತದೆ ಬಳಿಕ ಈ ಸುಟ್ಟ ಹರಳಿನ ಮೇಲೆ ತಂಣೀರು ಹನಿಸು. ಆಗೋ ಅದು ಸೊಂಯ್ ಅನ್ನಹತ್ತಿ ನೀರು ಕುದಿಯಲಾರಂಭಿಸಿತು. ಮತ್ತು ಆ ಹರಳು ಅರಳಿ ಸುಂಣವಾಯಿತು. ಸುಣಬುರಲಿಯ ಹರಳು ತಂದು ಭಟ್ಟಿಯೊಳಗೆ ಹಾಕಿ ಸುಟ್ಟು ಸುಂಣವನ್ನು ತಯಾರಮಾಡುವದನ್ನು ನೀವೆಲ್ಲರೂ ನೋಡಿರಬಹುದು. ಆ ಸುಟ್ಟ ಹರಳಲ್ಲಿ ನೀರು ಸುರವಿ ಹಸಿ ಸುಂಣವನ್ನು ಮಾಡಿಕೊಳ್ಳುತ್ತೀರಿ. ಈ ಹಸಿ ಸುಂಣವನ್ನು ಕೆಲವು ದಿವಸ ಹವೆಯೊಳಗೆ ತೆರೆದಿಟ್ಟರೆ ಕಾರ್ಬಾನಿಕ್ ಆಸಿಡಿನ ಸಂಪರ್ಕದಿಂದ ಅದು ಪುನಃ ಖಡುವಾಗುತ್ತ

ದೆ ಖಡು ಸುಟ್ಟರೆ ಸುಣ್ಣವಾಗುತ್ತದೆಂಬದನ್ನಂತೂ ಈಗ ಕಂಣಾರೆ ನೋಡಿದಿರಿ. ಸಾರಾಂಶವೇನಂದರೆ, ಖಡುವು ಸುಂಣ ಮತ್ತು ಕಾರ್ಬಾನಿಕ್ ಆಸಿಡ್ ಗ್ಯಾಸ ಇವೆರಡು ಪದಾರ್ಥಗಳ ಮಿಶ್ರಣದಿಂದುಂಟಾಗಿರುತ್ತದೆ; ಮತ್ತು ಅದರೊಳಗಿನ ಅಂಗಾರಾಮ್ಲ ವಾಯುವನ್ನು ಬೇರೆಮಾಡಲಿಕ್ಕೆ ಬರುತ್ತದೆ.

೧೩ನೇ ಪಾಠವು.

ಭೂಮಿ.

೩೪. ಆಕ್ಸಿಜನ್ ವಾಯುವನ್ನು ಹ್ಯಾಗೆ ತೆಗಿಯಬೇಕು ?

ಪ್ರಯೋಗ—೩೦—ಇಗೋ ಇದು ಇಂಗಳೀಕವು ಇದು ಖಡುವಿನಂತೆ ಎಲ್ಲ ಕಡೆಯಲ್ಲಿಯೂ ಹೇರಳವಾಗಿಯೂ ಶಿಕ್ಕುವದಿಲ್ಲ ಆದರೆ ಇದರಿಂದ ಬಹು ಗೌರವದ ಸಂಗತಿಗಳು ಪ್ರಕಟವಾಗುತ್ತವೆ. ನಮ್ಮ ಬಳಿಯಲ್ಲಿ ಒಂದು ಸೀಸೆ ತುಂಬ ಇಂಗಳೀಕ ಉಂಟು. ಅದರೊಳಗಿಂದ ತುಸು ಇಂಗಳೀಕವನ್ನು ತಕ್ಕೊಂಡು ಒಂದೇ ಕಡೆಗೆ ಬಾಯುಳ್ಳ ಒಂದು ಗಟ್ಟಿಯಾದ ಕಾಚಿನ ಕೊಳವೆಯಲ್ಲಿ ಹಾಕು. ಅದರ ಬಾಯಿಗೆ ಬಿಗಿಯಾಗಿ ಬೆಣೆಯನ್ನು ಕೂಡ್ರಿಸಿ, ಬೆಣೆಯಲ್ಲಿ ಒಂದು ಸೊಟ್ಟ ಕಾಚಿನ ಕೊಳವೆಯನ್ನು ಸೇರಿಸು. ಬಳಿಕ ಈ ಕೊಳವೆಯನ್ನು ಒಂದು ಕಬ್ಬಿಣ ಕಂಬಕ್ಕಿರುವ ಹಿಡಿಕೆಯಿಂದ ಬಿಗಿಮಾಡಿ ನೆಲಕ್ಕೆ ಮುಟ್ಟದಂತೆ ಮಾಡು. ಬುಡದಲ್ಲಿ ಮದ್ಯಾರ್ಕದ ದೀಪವನ್ನಿಡು. ಅಗೋ ಇಂಗಳೀಕವು ಕಾಯ್ದು ವಿವರ್ಣವಾಗಿ ಕಪ್ಪಾಗಹತ್ತಿದೆ. ಕೊಳವೆಯ ಒಳಬದಿಗೆ ಬಾಯಿಹತ್ತರ ಶುಭ್ರವಾಗಿ ಥಳಥಳಿಸುವ ಸಣ್ಣ ಸಣ್ಣ ಕಣಗಳ ರಾಶಿಯು ಕೂಡಿರುತ್ತದೆ. ನೋಡು! ಡೊಂಕ ಕೊಳವೆಯ ಒಂದು ತುದಿಯನ್ನು ನೀರು ತುಂಬಿದ ಪಾತ್ರೆಯಲ್ಲಿ ಮುಳುಗಿಸು. ಅದು ನೋಡು ನೀರಿನ ಪೃಷ್ಠಭಾಗದ ಮೇಲೆ ಗುಳ್ಳೆಗಳು ಹ್ಯಾಗೆ ಕಾಣಿಸುತ್ತವೆ. ಯಾಕಂದರೆ ಇದರೊಳಗಿಂದ ಒಂದು ತರದ ವಾಯುವು ಬರುತ್ತಿರುತ್ತದೆ. ಇನ್ನು ನೀರು ತುಂಬಿದ ಸೀಸೆಯನ್ನು ಈ ಗುಳ್ಳೆಗಳ ಮೇಲೆ ಡಬು ಹಿಡಿ. ಅದರಿಂದ ಈ ಉತ್ಪನ್ನವಾದ ವಾಯುವು ಈ

ಸೀಸೆಯಲ್ಲಿ ಜಮೆಯಾಗುವವು. ಇಂಗಳೀಕದ ಪುಡಿಯು ತೀರ ಇಲ್ಲದಂತಾಗುವವರೆಗೆ ಅಥವಾ ಎಲ್ಲವು ಬಿಳೀ ಪುಡಿಯ ರೂಪವನ್ನು ಧರಿಸುವವರೆಗೆ ಈ ಸೊಟ್ಟ ಕೊಳವೆಯಿಂದ ವಾಯುವು ಹೊರಬೀಳುತ್ತಿರುತ್ತದೆ. ಆದ್ದರಿಂದ ಈ ಕೃತಿಯು ತೀರುವ ವರೆಗೂ ದೀಪವನ್ನು ಓರೆಗೆ ಸರಿಸಬೇಡ

(ಸಶೇಷ)

THE PHILOSOPHY OF EDUCATION.

ಶಿಕ್ಷಣಶಾಸ್ತ್ರ.

(೧೧೨ ನೇ ಪುಟದಿಂದ ಮುಂದೆ ಸಾಗಿದ್ದು.)

ಪ್ರಯೋಜನ ಪ್ರಗತಿಗಳೇ ಬೇಕನ್ನನೆಂಬ ಹೆಸರಾದ ತತ್ವಜ್ಞನು ಉಪದೇಶಿಸಿದ ಮಂತ್ರವು. ಈ ಮಂತ್ರದಿಂದ ನಾಲ್ಕು ಕಡೆಗೆ ಮುಸುಕಿದ ಕತ್ತಲೆಯು ಹರಿದು ಹೋಗಿ ಬೆಳಕಾಯಿತು. ಈ ಬೇಕನ್ನನು ಹುಟ್ಟುವ ಪೂರ್ವದಲ್ಲಿ ತತ್ವಶಾಸ್ತ್ರಗಳು ಹಬ್ಬುಗೊಂಡಿದ್ದವು. ಆದರೆ ಪ್ರಯೋಜನವೊಂದೇ ಅವುಗಳ ಉದ್ದೇಶವಿರುವ ಕಾರಣ ಅವುಗಳಿಂದ ಸಾಧಾರಣೆಯು ಜನರಿಗೆ ಏನೂ ಲಾಭವಾಗಲಿಲ್ಲ. ಆ ಕಾಲದ ತತ್ವಜ್ಞರು ಸುಖದುಃಖದ ಸಂಬಂಧದಿಂದ ಬೇಕಾದಷ್ಟು ಚರ್ಚೆ ನಡೆಸಿದರು. ಆದರೆ ಜನರ ಸುಖಾಭಿವೃದ್ಧಿಗೆ ಅದರಿಂದ ಏನೂ ಸಹಾಯವಾಗಲಿಲ್ಲ. ಜನರು ಶಬ್ದಜಾಲವನ್ನು ಪಸರಿಸಿದರೇ ಹೊರ್ತು ಅವರಿಗೆ ಸುಖದ ಲೇಶವು ದೊರೆಯಲಿಲ್ಲ. ಡ್ರಿಲ್'ದೊಳಗಿನ ಮಾರ್ಕ ಟೈಮಿನಂತೆ ಕೆಲಸವು ನಡೆಯಿತು. ಬೇಕನ್ನನು ಡ್ರಿಲ್ಲಿನೊಳಗಿನ ಮಾರ್ಕಟೈಮಿನ ಕೆಲಸವನ್ನು ಬಿಡಿಸಿ advance ಅಂದರೆ ಮುಂದಕ್ಕೆ ಸಾಗು ಎಂಬ ತತ್ವಶಾಸ್ತ್ರದ ನಿಜವಾದ ಅಪ್ಪಣೆಯನ್ನರುಹಿ ತದನುರೋಧದಿಂದ ಕೆಲಸವನ್ನು ನಡಿಸಿದನು. ಈ ಹುಕುಂ ಅನುಸರಿಸಲ್ಪಟ್ಟ ಕಾರಣ ನಾಲ್ಕು ಕಡೆಗೂ ಪ್ರಗತಿಯು ತೋರ ಹತ್ತಿತು. ಪ್ರಯೋಜನವೇ ಬೇಕನ್ನನ ತತ್ವಶಾಸ್ತ್ರದ ಉದ್ದೇಶವು. ಪ್ರಗತಿಯೇ ಇದರಿಂದ ನಡಿಸಲ್ಪಡುವ ಕಾರ್ಯವು.

ಪ್ರಮಾಣವಾದಿಗಳ ಶಾಲೆಗಳಲ್ಲಿ ಒಂದೇ ಕ್ರಮದಿಂದ ಕೆಲಸ ನಡೆಯುವದರಿಂದ ಬುದ್ಧಿಸಾಮರ್ಥ್ಯಗಳಿಗೆ ಚಾಲನೆ ಸಿಗದೆ ಅವು ಬಲಗುಂದಾವವು. ಪ್ರತಿದಿವಸ ಕೆಲಸ ನಡೆಯುವ ಮಾದರಿಯು ಒಂದೇ ಪ್ರಕಾರದ್ದುಂಟು ಅದರಲ್ಲಿ ಹೆಚ್ಚು ಕಡಿಮೆಯಾಗುವದೇ ಇಲ್ಲ. ಈ ಪ್ರಮಾಣಪ್ರಸಿದ್ಧವಾದಂಥ ಹೆಚ್ಚು ಕಡಿಮೆಯನ್ನು ಸೈರಿಸದಂಥ ಪದ್ಧತಿಯನ್ನು ಅನುಸರಿಸಿದರೆ ವಿದ್ಯಾರ್ಥಿಗಳಿಗೆ ಕೇಡಾಗುತ್ತದೆಂಬದಿಷ್ಟೇ ಅಲ್ಲ, ಶಿಕ್ಷಕರಿಗೂ ಕೇಡುಂಟು. ಅವರಲ್ಲಿ ಪ್ರಯೋಜಕತ್ವವು ಇಲ್ಲದಂತಾಗಿ ಅವರು ಕೇವಲ ಕಲಿಸುವ ಯಂತ್ರಗಳಾಗುವರು. ಹುಚ್ಚರ ಪ್ರತಿಮೆಗಳನ್ನೂ ಹುಚ್ಚಿನ ಕಾರಣವನ್ನೂ ತೂಗಿ ನೋಡಿದರೆ ಒಂದೇ ಪ್ರಕಾರದ ಕೆಲಸ ಮಾಡುವ ಜನರಲ್ಲಿ ಹುಚ್ಚರ ಸಂಖ್ಯೆಯು ಹೆಚ್ಚು ಎಂದು ತೋರುತ್ತದೆ. ಇದರಿಂದ ಕಾರ್ಯದ ಅನನ್ಯಮಾರ್ಗವೇ ಹುಚ್ಚಿನ ಕಾರಣವೆಂದು ಹೇಳಬಹುದು. ಈ ದೃಷ್ಟಿಯಿಂದ ನೋಡಲಾಗಿ ಹಳೇ ಪದ್ಧತಿಯಿಂದ ಕಲಿಸುವ ಶಾಲೆಗಳಲ್ಲಿ ಕಾರ್ಯಪ್ರೀತಿಯ ಅಭಾವವೂ ವಿದ್ಯಾರ್ಥಿಗಳ ಆಕುಂಚಿತ ಸ್ವಭಾವವೂ ಉಲ್ಲಾಸವೃತ್ತಿಯ ಅಭಾವವೂ ತೋರುವದರ ಕಾರಣವೂ ಬೈಲಿಗೆ ಬರುವದು.

ಈ ನಷ್ಟವನ್ನು ಹೋಗಲಾಡಿಸಿ ದೇವರು ಕೊಟ್ಟಂಥ ಸೋಜಿಗದ ಸಾಮರ್ಥ್ಯಗಳನ್ನು ತಕ್ಕ ಕೆಲಸಕ್ಕೆ ಹಚ್ಚಿ ಜನರ ಮೇಲೆ ಅಮಿತ ಉಪಕಾರವನ್ನು ಮಾಡುವಂಥ ಮಹಾತ್ಮರಲ್ಲಿ ಬೇಕನ್ನನು ಶ್ರೇಷ್ಠನು. ಇವನ ಪದ್ಧತಿಯಿಂದ ವ್ಯವಹಾರ ಶಾಸ್ತ್ರಗಳಲ್ಲಿ ತಕ್ಕ ಏರ್ಪಾಡು ಆದದ್ದಲ್ಲದೆ ಶಿಕ್ಷಣದ ಮೇಲಾದ ಪದ್ಧತಿಯು ಬೈಲಿಗೆ ತರಲ್ಪಟ್ಟಿತು. ಈ ಪದ್ಧತಿಯ ಮರ್ಮವನ್ನು ಪ್ರಯೋಜನ ಪ್ರಗತಿಗಳೆಂಬೆರಡೇ ಶಬ್ದಗಳಿಂದ ಹೇಳಬಹುದು, ಹಳೇ ಪದ್ಧತಿಯು ಪ್ರಯೋಜನವನ್ನು ಲಕ್ಷಿಸದ ಕಾರಣ ಸುಧಾರಣೆಗೆ ಪ್ರತಿಕೂಲವಾಗಿ ವಿದ್ಯಾಪ್ರದವಾಗುವದಕ್ಕೆ ಬದಲಾಗಿ ವಿದ್ಯಾವಿಘಾತಕವಾಗಿತ್ತು.

ವ್ಯವಹಾರಕ್ಕೆ ಸಂಬಂಧವಿಲ್ಲದಂಥ ಅಂದರೆ ನಿಷ್ಪ್ರಯೋಜ

ಸವಾದ ಕಲ್ಪನೆಗಳೇ ಈ ಪದ್ಧತಿಯಿಂದ ಕಲಿಸಲ್ಪಡುವಂಥ ಮುಖ್ಯ ವಿಷಯಗಳು. ಅದರಿಂದ ವ್ಯವಹಾರಕ್ಕೆ ಏನೂ ಪಯೋಜನವಾಗುತ್ತಿದ್ದಿಲ್ಲ. ಪುರಾಣವಾದಿಗಳು ಬರೆ ನಕ್ಷತ್ರವನ್ನು ಕುರಿತು ಶೋಧ ನಡಿಸಿದ್ದರಿಂದ ಅವರ ಪ್ರಯತ್ನಗಳೆಲ್ಲ ನಿಷ್ಪ್ರಯೋಜಕವಾದವು. ಸುಖದುಃಖಗಳ, ಪಾಪಪುಣ್ಯಗಳ ವಿಷಯವಾಗಿ ಪೂರ್ವಪಕ್ಷ ಉತ್ತರಪಕ್ಷವನ್ನು ಮಾಡತೊಡಗಿದ್ದರಿಂದ ಇಹಲೋಕದ ಅವರ ಜೀವನಸ್ಥಿತಿಯಲ್ಲಿ ಏನೂ ಹೆಚ್ಚು ಕಡಿಮೆಯಾಗಲಿಲ್ಲ. ಇವರು ಜನರನ್ನು ಸುಧಾರಿಸುವವರ ದೆಶೆಯಿಂದ ಅನಂತ ಶ್ರಮಬಟ್ಟರು, ಆದರೂ ಜ್ಞಾನಾಭಿವೃದ್ಧಿಯು ಆಗಲಿಲ್ಲ; ಯೋಗ್ಯತೆಯು ಬೆಳೆಯಲಿಲ್ಲ. ರೂಪಕದಿಂದ ತಿಳಿಸುವದಾದರೆ ಇವರು ಮಾಡುವ ಶ್ರಮವು ಗರಡೀಮನೆಯಲ್ಲಿ ಮಾಡಲ್ಪಡುವ ವಿಶಿಷ್ಟ ಸಾಧಕಗಳಿಗೆ ಹೋಲಿಸಬಹುದು. ಅಂದರೆ ಈ ಸಾಧಕಗಳಿಂದ ಜನರಿಗೆ ಕೆಲಸ ಮಾತ್ರ ಶಿಗುತ್ತಿತ್ತು. ಆದರೆ ಸಮಾಜಕ್ಕೆ ಏನೂ ಹಿತವಾಗುತ್ತಿದ್ದಿಲ್ಲ. ಮನಸ್ಸು ಕಲ್ಪನಾಚಕ್ರದಲ್ಲಿ ತಿರುಗುತ್ತಿತ್ತು ಅಂದರೆ ಈ ಪದ್ಧತಿಯಲ್ಲಿ ಗತಿ ಮಾತ್ರ ಇತ್ತು. ಪ್ರಗತಿ ಇದ್ದಿಲ್ಲ. ಈ ಸ್ಥಿತಿಗೆ ಡ್ರಿಲ್‌ಭಾಷೆಯಿಂದ ‘ಮಾರ್ಕ್‌ಟಾಯಿಮ್’ ಸ್ಥಿತಿ ಅನ್ನುತ್ತಾರೆ. ಈ ನಿಷ್ಪ್ರಯೋಜಕದ ಸ್ಥಿತಿಯು ಎರಡು ಸಾವಿರ ವರ್ಷ ಮಾತ್ರ ನಡೆಯಿತು. ಈ ಸ್ಥಿತಿಯನ್ನು ಬೇಕನ್ನನು ತಪ್ಪಿಸಿ ಪ್ರಗತಿ ಲಕ್ಷಣದ ಹೊಸ ಪದ್ಧತಿಯನ್ನು ನೆಲೆಗೊಳಿಸಿದನು.

ಇದರಿಂದ ಸಮಾಜದ ಸುಖಸಾಧನೆಗಳು ಸಾವಿರ ಪಟ್ಟಿನಿಂದ ಬೆಳೆದಿರುವವು. ಪ್ರಯೋಜಕತ್ವವೇ ಇದರ ಮುಖ್ಯೋದ್ದೇಶವು, ಅಸಾಧ್ಯವಾದ ಕೆಲಸದಗೊಡವೆಗೆ ಇದು ಹೋಗಲರಿಯದು. ಒಡೆದು ಕಾಣಿಸುವಂಥ ಉದ್ಯೋಗವನ್ನು ಮುಂದೆಮಾಡಿ ಅದನ್ನು ಸಾಧಿಸುವ ಯತ್ನವನ್ನು ಇದು ಮಾಡುವದು. ಮತ್ತು ಅಯತ್ನವನ್ನು ಕೈಗೂಡಿಸುವದು. ಶಾಸ್ತ್ರದ ಅಂಗಗಳನ್ನು ಸುಧಾರಿಸಿ ಅವುಗಳ ಮುಖಾಂತರವಾಗಿ ಶಾಸ್ತ್ರದ ಸುಧಾರಣೆಯನ್ನು ಬಯಸುವದು. ಸಾಮಾನ್ಯ ಹೋರೆಯುವರು ಬಹು ದಿವಸದಿಂದ ಪ್ರಯೋಗಿಸುವ ಪದ್ಧ

ತಿಯನ್ನೇ ಕೈಕೊಂಡು ಆ ಹೋರೆಯಲ್ಲಿಯೇ ತಕ್ಕ ಏರ್ಪಾಡುಗಳನ್ನು ಮಾಡುವದು, ಪ್ರಯೋಜನವೇ ಬೇಕನ್ನನ ಪದ್ಧತಿಯ ಉದ್ದೇಶವು ಪ್ರಗತಿಯೇ ಅದರ ಪರ್ಯವಸಾನವು.

ಬೇಕನ್ನನ ಪದ್ಧತಿಯು ವಸ್ತುತಃ ನಿತ್ಯವ್ಯವಹಾರದಲ್ಲಿ ನಡೆಯುವ ಅಥವಾ ಪ್ರತಿ ಒಬ್ಬ ಹೋರೆಯುವನ ಸಾಲೆಯಲ್ಲಿ ಕಂಡು ಬರುವ ಸಂಗತಿಗಳ ಫಲಿತ (ಏಕೀಕರಣ ವಾಗಿರುತ್ತದೆ. ಕೈಗಾರಿಕೆಯ ಹೋರೆಯುವರು ಬಹು ದಿವಸದಿಂದ ಈ ಪದ್ಧತಿಯಂತೆಯೇ ಕೆಲಸಮಾಡುತ್ತ ಬಂದಿರುವರು ಆದರೆ ಪಂಡಿತರೆನಿಸುವಂಥ (ಕೇವಲತತ್ವಶಾಸ್ತ್ರದಲ್ಲಿ ಮಗ್ನರಾದಂಥ) ಜನರು ಮಾತ್ರ ಈ ಪದ್ಧತಿಯನ್ನು ಅವಲಂಬಿಸುವದು ಮಾನಹಾನಿಕರವೆಂದು ಎಣಿಸುತ್ತಿದ್ದರು ಕೈಗಾರಿಕೆಯ ಹೋರೆಗಳಲ್ಲಿ ಈ ಪದ್ಧತಿಯ ಅವಲಂಬನದಿಂದ ಆದ ಲಾಭಗಳನ್ನೂ ಶಾಸ್ತ್ರಾಧ್ಯಯನಗಳಲ್ಲಿ ಈ ಪದ್ಧತಿಯನ್ನು ಸೇರಗೊಡದ್ದರಿಂದ ಆದ ನಷ್ಟಗಳನ್ನೂ ತೂಗಿನೋಡಿ ಸಾಹಸದಿಂದಲೂ ಧೈರ್ಯದಿಂದಲೂ ಈ ಪದ್ಧತಿಯನ್ನು ಕೈಕೊಂಡದ್ದರಿಂದ ಕೈಗಾರಿಕೆಯ ಹೋರೆಗಳಲ್ಲಿ ಪ್ರಯೋಜನವಾದಂತೆ ಶಾಸ್ತ್ರಾಧ್ಯಯನದಲ್ಲಿಯೂ ಪ್ರಯೋಜನವಾದೀತೆಂದು ಬೇಕನ್ನನು ಆಗ್ರಹಪೂರ್ವಕವಾಗಿ ಪ್ರತಿಪಾದಿಸಿದನು.

ಒಂದೇ ಪ್ರಕಾರದ ಅನೇಕ ಉದಾಹರಣೆಗಳಿಂದ ಸಾಮಾನ್ಯಸಿದ್ಧಾಂತವನ್ನು ಕಂಡು ಹಿಡಿಯುವ ಪದ್ಧತಿಯು ಆಧುನಿಕ (ಅರ್ವಾಚೀನ) ಶಿಕ್ಷಣದಲ್ಲಿ ಹ್ಯಾಗೆ ಪ್ರಯೋಜನಕರವಾದೀತೆಂಬ ಸಂಗತಿಯನ್ನು ಇನ್ನು ಆಲೋಚಿಸುವ

ಬೇಕನ್ನನ ಅಭಿಪ್ರಾಯದ ಮೇರೆಗೆ ಪ್ರಗತಿ ಪ್ರಯೋಜನಗಳೇ ಅರ್ವಾಚೀನ ಶಿಕ್ಷಣದ ಪ್ರಧಾನ ಲಕ್ಷಣಗಳಾಗಿರಲಿಕ್ಕೆ ಬೇಕು. ಪ್ರಗತಿಯು ಸಾಧ್ಯವಾಗಬೇಕಾದರೆ ನಾವು ಪ್ರಯೋಜನಕರವಾದಂಥ ಸಾಧ್ಯವಾದಂಥ ಸಂಗತಿಗಳನ್ನೇ ಕೈಕೊಳ್ಳತಕ್ಕದ್ದು

DEPARTMENTAL NOTICES.

ನೋಟೀಸುಗಳು.

ಜಾವಕ ನಂಬರು ೪೨೬

ಮಿ. ಡೈರೆಕ್ಟರ ಸಾಹೇಬ ಬಹಾದ್ದೂರವರ ಇಂಗ್ರೇಜಿ ಪತ್ರ ನಂಬರ ೭೬೨/೧೧-೪-೧೯೦೦. ನೇದರ ಮೇರೆಗೆ ಪ್ರಸಿದ್ಧಪಡಿಸುವದೇನಂದರೆ :—

ಮಿ. ಗುರುಬಸಪ್ಪಾ ಫಕೀರಪ್ಪಾ ಹಳಕಟ್ಟಿ ಇವರ " ಇಂಗ್ಲಂಡ ದೇಶದ ಇತಿಹಾಸ " ಎಂಬ ಪುಸ್ತಕವು ಇನಾಮಿನ ಪುಸ್ತಕವಾಗಿಯೂ ಲೈಬ್ರರಿಯ ಪುಸ್ತಕವಾಗಿಯೂ ಧಾರವಾಡ ಟ್ರೇನಿಂಗಕಾಲೇಜದ ಕ್ರಮಿಕ ಪುಸ್ತಕವಾಗಿಯೂ ಮಂಜೂರು ಮಾಡಲ್ಪಟ್ಟಿರುತ್ತದೆ.

ಧಾರವಾಡ
ತಾ॥ ೧೬-೪-೧೯೦೦.

B. R. Sahasrabudhe,
ಎ. ಇ. ದಕ್ಷಿಣಭಾಗ.

II

ಈ ನೋಟೀಸಿನಿಂದ ಯಾವತ್ತು ಜನರಿಗೆ ತಿಳಿಸುವದೇನಂದರೆ :—

ಬಾಸೆಲ್‌ಮಿಶನ್ ಬುಕ್ ಅಂಡ ಟ್ರ್ಯಾಕ್ಟ ಡಿಪಾಝುಟ ಮಂಗಳೂರ ಸುಪರಿಂಟೇಂಡಂಟರು ರಚಿಸಿದ " ಗದ್ಯಸಂಗ್ರಹ " ಎಂಬ ಪುಸ್ತಕವನ್ನೂ, ರಾಮಚಂದ್ರ ಹಣಮಂತ ದೇಶಪಾಂಡೆ ಇವರು ರಚಿಸಿದ " ಚರಿತ್ರಸಂಗ್ರಹ " ೧ ನೇ ಭಾಗ ಎಂಬ ಪುಸ್ತಕವನ್ನೂ ಮೆ. ಡಾಯರೆಕ್ಟರ ಸಾಹೇಬ ಬಹದ್ದೂರವರು ಲಾಯಬ್ರರಿಗಾಗಿಯೂ ಇನಾಮಿಗಾಗಿಯೂ ಮಂಜೂರ ಮಾಡಿದ್ದಾರೆ.।

ಧಾರವಾಡ ಟ್ರೇ. ಕಾಲೇಜ,
ತಾ. ೧೪-೫-೧೯೦೦.

S. K. Rodda,
ಪಿನ್ಸಿಪಾಲ.

CORRESPONDENCE.

ಪತ್ರವ್ಯವಹಾರ.

(೯೫ನೇ ಪುಟದಿಂದ ಸಾಗಿದ್ದು.)

ಕೆಲವರು ವಿದ್ಯಾರ್ಥಿಗಳ ಸದಾಚಾರ ದುರಾಚಾರಗಳನ್ನು ಲಕ್ಷಿಸದೆ ಮನಸೋಕ್ತ ನಡೆಯುವರು. ಇಂಥ ಅಧ್ಯಾಪಕರ ಮನಸ್ಸು ವಿಕಾರವಶವಾಗಿರವಾಗ ಅವರ ವಿದ್ಯಾರ್ಥಿಗಳು ಸುಳ್ಳು ಹೇಳಿದರೆ ನಡೆಯುವದು, ಕಳವು ಮಾಡಿದರೆ ಸಾಗುವದು, ಅವ್ಯವಸ್ಥಿತವಾಗಿ ಕುಳಿತುಕೊಂಡರೆ ಬಾಧಕವಿಲ್ಲ, ಬೇಕಾದರೆ ಗೊಂದಲವನ್ನಾದರೂ ಹಾಕಬಹುದು. ಆದರೆ ಈ ಪ್ರಸಂಗಗಳಿಂದ ಈ ಅಧ್ಯಾಪಕರ ಮಾನಹಾನಿಯಾಗುವ ಪ್ರಸಂಗ ಬಂದರೆ ಮಾತ್ರ ಅವರ ವಿದ್ಯಾರ್ಥಿಗಳ ಮೈಯ್ ಹಣ್ಣಾಯಿತೆಂದು ತಿಳಿಯತಕ್ಕದ್ದು. ಇಂಥ ಸ್ವಾರ್ಥಹಿತೈಕಬುದ್ಧಿಯುವರಾದ ಅಧ್ಯಾಪಕರು ವಾರ್ಷಿಕ ಪರೀಕ್ಷೆಯ ಕಾಲಕ್ಕೆ ಕಾಪೀ ಮಾಡಗೊಡುವಂಥ ಘಾತಕವಾದ ಅಧಮತನದ ಕೆಲಸವನ್ನು ಮಾಡಲಿಕ್ಕೆ ಹಿಂಜರಿಯುವದಿಲ್ಲ. ಈ ನೀಚ ಕೆಲಸವನ್ನು ಮಾಡುವ ಅಧ್ಯಾಪಕರು ಎಂಥ ಸಚ್ಛಿಕ್ಷಕರಿರಲಿ, ಅವರ ಯೋಗ್ಯತೆಯು ಬೇಕಾದಷ್ಟು ದೊಡ್ಡದಿರಲಿ, ಅವರು ಬೇಕಾದಷ್ಟು ಹೆಮ್ಮೆಯನ್ನೂ ಮೆರೆಯಿಸಲಿ, ಕಡೆಗೆ ಅವರು ತಮ್ಮ ವ್ಯವಸಾಯ ಬಂಧುಗಳಿಂದಲೂ, ಅಧಿಕಾರಿಗಳಿಂದಲೂ ತಿರಸ್ಕರಿಸಲ್ಪಡತಕ್ಕದ್ದು ನಿಶ್ಚಯವು. ಇಂಥವರು ವಿದ್ಯಾರ್ಥಿಗಳ ತಿದ್ದುವಿಕೆಯ ಕಡೆಗೆ ಎಷ್ಟು ಲಕ್ಷ ಕೊಡುತ್ತಿರಬಹುದೆಂಬದನ್ನು ನಮ್ಮ ಪ್ರಿಯಬಂಧುಗಳೇ ತರ್ಕಿಸಲಿ ಸಾರಾಂಶ ಇವರು ತಮ್ಮ ವಿದ್ಯಾರ್ಥಿಗಳಲ್ಲಿ ತಿದ್ದುವಿಕೆಯು ನೆಲೆಗೊಳ್ಳುವ ನಿಜವಾದ ಉದ್ದೇಶದಿಂದ ದೇಹದಂಡವನ್ನು ಮಾಡುವದಿಲ್ಲೆಂದು ತಿಳಿಯತಕ್ಕದ್ದು.

ಇನ್ನು ಇವರು ದೇಹ ದಂಡವನ್ನು ಅವಶ್ಯ ಕರ್ತವ್ಯವೆಂದು ಉಪಯೋಗಿಸುವ ಪ್ರಧಾನ ಕಾರಣವು ಇನ್ನೊಂದು ಬೇರೆ ಇರುವದು. ಆ ಕಾರಣವನ್ನು ಘಾಲರನಂಥ ಸಚ್ಛಿಕ್ಷಕ ಶಿಖಾಮಣಿಯಾಗಲಿ, ಬೇರೆ ಸಚ್ಛಿಕ್ಷಕವಾಗಲಿ ಸ್ಪೋ

ಶಿಲ್ಲ; ಅದಾವದೆಂದರೆ, ವಿಷಯವನ್ನು ತಿಳಿಸಿಕೊಡುವಾಗ್ಗೆ ಮತ್ತು ಒಪ್ಪಿಸಿಕೊಳ್ಳುವಾಗ್ಗೆ ಇವರಿಗೆ ಬರುವ ಸಿಟ್ಟು. ಇಂಥ ಅಧ್ಯಾಪಕರು ಈ ಪ್ರಸಂಗಗಳಲ್ಲಿ ಶಿಕ್ಷೆಮಾಡದಿದ್ದರೆ ಮಾತ್ರ ಆಶ್ಚರ್ಯವು ಯಾಕಂದರೆ ಇವರು ತಾವು ವಿಷಯ ತಿಳಿಸಿ ಕೊಡುವದೆಂದರೆ, ಕ್ರಮಿಕ ಪುಸ್ತಕದೊಳಗಿನ ಅಥವಾ ಖಾಸಗೀ ಪುಸ್ತಕದೊಳಗಿನ ಇಂತಿಷ್ಟು ಸಾಲು ಪಾಠ ಮಾಡಿಕೊಂಡು ಬರುವದಕ್ಕೆ ಗುರುತು ಮಾಡಿ ಕೊಡುವದೆಂತಲೂ, ವಿಷಯವನ್ನು ಒಪ್ಪಿಸಿಕೊಳ್ಳುವದೆಂದರೆ ಪುಸ್ತಕದೊಳಗಿನ ವಾಕ್ಯಗಳನ್ನು ಹುಡುಗರಿಂದ ಬಾಯಿಪಾಠ ಅನ್ನಿಸಿಕೊಳ್ಳುವದೆಂತಲೂ ತಿಳುಕೊಂಡಿರುವರು. ಇನ್ನು ಪುಸ್ತಕಗಳೇ ವಿದ್ಯಾರ್ಥಿಗಳಿಗೆ ವಿಷಯಜ್ಞಾನ ಮಾಡಿಕೊಟ್ಟರೆ ಮಾಸ್ತರನ ಪ್ರಯೋಜನವೇನು? ಆತನು ಮಾಡುವ ಕೃತಕೃತ್ಯವೇನು? ಇದು ಅವರ ಕಲ್ಪನೆಯಲ್ಲಿ ಬರುವಂತೆ ತೋರುವದಿಲ್ಲ, ಬಂದರೂ ಅದರ ಸತ್ಪರಿಣಾಮವಾಗುವದಿಲ್ಲ. ಪಾಠ ಮಾಡಲಾರದ ಅಥವಾ ಮನಸ್ಸಿಲ್ಲದ ಹುಡುಗರು ಸುಮ್ಮನೆ ನಿಂತರೆ ಇವರ ಮತದಂತೆ ಅದಕ್ಕೆ ಉಪಾಯವು ತಮ್ಮ ಮನಸ್ಸಿಗೆ ತೃಪ್ತಿಯಾಗುವವರೆಗೆ ಅಥವಾ ವಿದ್ಯಾರ್ಥಿಯ ಅವಯವಗಳಿಗೆ ಧಕ್ಕೆಯಾಗಿ ಅವರ ಮನೆಯವರು ತಮ್ಮ ಸ್ವರೂಪ ಭಂಗಮಾಡ್ಯಾರೆಂಬ ಭಯವು ಉತ್ಪನ್ನವಾಗುವವರೆಗೆ ಛಡಿಯಿಂದ, ಗುದ್ದಿನಿಂದ, ತಪರಾಕಿಯಿಂದ, ಸಿಟ್ಟು ಬಹಳ ಬಂದಿದ್ದರೆ ಕಾಲಿನಿಂದ ಇನ್ನೂ ಬೇಕಾದದ್ದರಿಂದ ತಾಡನಮಾಡುವದು. ಅಹಹಾ ಇದೆಂಥ ಪ್ರಸಂಗವು! ಮನಸ್ಸು ಶಾಂತವಿದ್ದಾಗ ವಿಷಯವನ್ನು ಗ್ರಹಿಸಲಾರದ ಮತ್ತು ಗ್ರಹಿಸಿದ್ದನ್ನು ವ್ಯಕ್ತ ಮಾಡಲಾರದ ವಿದ್ಯಾರ್ಥಿಗಳ ಬುದ್ಧಿಯು ಮನಸ್ಸು ದೇಹದಂಡದ ಯಾತನೆಯಿಂದ ಕಳವಳಗೊಂಡಾಗ ಹಾಗೆ ಮಾಡಬಹುದೋ? ಆದರೆ ಈ ಉಪದೇಶದ ಮಾತುಗಳನ್ನು ಬರೆಯುವ ನಾನಾದರೂ ಕೋಪಪರವಶನಾದಾಗ್ಗೆ ಈ ಅನ್ಯಾಯದ ಉಪಾಯವನ್ನು ಅಪರೂಪವಾಗಿ, ಯೋಜಿಸಿರುವೆನೆಂಬದನ್ನೂ, ಯೋಜಿಸಿದನಂತರ ಪರಮಾವಧಿ ವ್ಯಸನವಾಗಿ ನನ್ನ ವಿದ್ಯಾರ್ಥಿ

ಗಳ ಮುಂದೆ ನನ್ನ ನಾದಾನತನವನ್ನು ಒಡನುಡಿದು ದುಃಖ ಪ್ರದರ್ಶನ ಮಾಡಿರುವೆನೆಂಬುದನ್ನೂ ಬರೆಯಲಿಕ್ಕೆ ನಾಚುವದು ನ್ಯಾಯವಲ್ಲ. ಆದರೆ ಈ ಪ್ರಸಂಗದಲ್ಲಿ ಸಹ ನಾನು ದೇಹದಂಡದ ಮರ್ಯಾದೆಯನ್ನು ಮಾತ್ರ ಮೀರಿರುವದಿಲ್ಲೆಂದು ಮರ್ಯಾದೆಯಿಂದ ತಿಳಿಸುತ್ತೇನೆ.

ಒಟ್ಟಿನ ಮೇಲೆ ಹೇಳತಕ್ಕದ್ದೇನಂದರೆ, ಕಡಿಮೆ ತಿಳುವಳಿಕೆಯ ಅಧ್ಯಾಪಕರು ಅಥವಾ ತಿಳುವಳಿಕೆಇದ್ದು ವಿದ್ಯಾರ್ಥಿಗಳ ಹಿತವನ್ನು ಮನಮುಟ್ಟಿ ಲಕ್ಷಿಸದ ಅಧ್ಯಾಪಕರು ತಿದ್ದುವಿಕೆಯನ್ನು ನೆಲೆಗೊಳಿಸುವಾಗ್ಗೆ ಅಪರೂಪವಾಗಿ ದೇಹದಂಡ ಮಾಡುವದನ್ನು ಬಿಟ್ಟು ಕಲಿಸುವಾಗ್ಗೆ ತಮ್ಮ ದಡ್ಡತನವನ್ನು ಮುಚ್ಚಿಕೊಳ್ಳುವದಕ್ಕಾಗಲಿ, ತಮ್ಮ ಅವ್ಯವಸ್ಥೆಯ ದುಷ್ಪರಿಣಾಮದಿಂದ ತಮ್ಮ ಅಪಮಾನವಾದಾಗಾಗಲಿ, ತಮ್ಮ ಮನಸ್ಸುನೊಂದಾಗಾಗಲಿ ಮಿತಿಮೀರಿ ದೇಹದಂಡಮಾಡುವರು.

(೩) ಪೌಲರನ ಮತದಂತೆ ದೇಹದಂಡವೆಂದರೆ ಬೆತ್ತದಿಂದ ಬಡಿಯೋಣವು. ಬೆತ್ತದಿಂದಾದರೂ ಸಿಕ್ಕ ಸಿಕ್ಕಲ್ಲಿ ಬಡಿಯುವದರಿಂದ ಒಮ್ಮೊಮ್ಮೆ ವಿದ್ಯಾರ್ಥಿಗಳ ಅವಯವಗಳಿಗೆ ಅಪಾಯವಾಗುವ ಭಯವದೆ ಕಾರಣ ಬೆತ್ತದಿಂದ ಅಂಗಯ್ಯಲ್ಲಿಯೇ ಬಡಿಯಬೇಕೆಂದು ಸಾಧಾರಣ ನಿಯಮವುಂಟು. ಬೆತ್ತದ ಸ್ಥಾನದಲ್ಲಿ ಅಧ್ಯಾಪಕರು ರೂಲಕಟ್ಟಿಗೆಯನ್ನು ಉಪಯೋಗಿಸುವದರಿಂದ ಹಲವು ವಿದ್ಯಾರ್ಥಿಗಳ ಕಮ್ಗಳ ಸಂದುಗಳು ತಪ್ಪಿರಬಹುದು. ಕಣ್ಣಲ್ಲಿ ದೀಪಹಚ್ಚಿದಂತಾಗಿ ವಿದ್ಯಾರ್ಥಿಗಳು ನೆಲಕ್ಕೆ ಬಿದ್ದಿರಬಹುದು. ಇಂಥ ಪ್ರಸಂಗದಲ್ಲಿ ವಿದ್ಯಾರ್ಥಿಗಳ ತಾಯಿತಂದೆಗಳು ಮಾಸ್ತರನಿಗೆ ಉಡುಗರೆಗಳನ್ನು ಕೊಟ್ಟು ಚೆನ್ನಾಗಿ ಮನ್ನಿಸಿರಬಹುದು. ಈ ಬೆತ್ತ ರೂಲಕಟ್ಟಿಗೆಗಳ ಹೊರತು ಹುಣಸಿ ಹೊನ್ನಾವರಕಿಯ ಬರಲುಗಳು ಕೆಲ ಮಾಸ್ತರರು ಕ್ರೋಧಸಂತಪ್ತರಾದಾಗ್ಗೆ ಮುರಿದು ಹೋಗುವವು. ಇಂಥ ಕ್ರೂರಶಿಕ್ಷೆಗಳನ್ನು ದನಕಾಯುವವರು ದನಗಳಿಗೆ ಕೊಡುವದು

ಅಪರರೂಪವು. ಅಂದಬಳಿಕ ನಾನಾಗಲಿ ನನ್ನ ಬಂಧುಗಳಾಗಲಿ ಇಂಥ ಕ್ರೂರ ಶಿಕ್ಷೆಯನ್ನು ಕೊಟ್ಟರೆ ನಮ್ಮನ್ನು ಯಾವ ವರ್ಗದಲ್ಲಿ ಸೇರಿಸಬೇಕಾಗುವದು? ವಿದ್ಯಾರ್ಥಿಗಳಲ್ಲಿ ಪ್ರೇಮದ ಬಳಿಕೆಯನ್ನಿಡಬೇಕೆಂಬ ಘೌಲರನ ಮತವೆತ್ತ? ನಿಷ್ಕಾರುಣ್ಯದಿಂದ ಕೊಡುವ ಈ ಕ್ರೂರ ಶಿಕ್ಷೆಯೆತ್ತ? ಮಾಸ್ತರರನ್ನು ದನಕಾಯುವವರಿಗೆ ಹೋಲಿಸುವದು ಕಡಿಮೆ ತಿಳುವಳಿಕೆಯವರ ಪರಿಣಾಮವಿರುವದು. ಆದರೆ ವಿದ್ಯಾರ್ಥಿಗಳನ್ನು ಈ ಪ್ರಕಾರ ದನಗಳಂತೆ ನಡಿಸಿಕೊಳ್ಳುವ ಮಾಸ್ತರರು ಇರುವವರೆಗೆ ಆ ಬಿರದು ತೀರಾ ಅಯೋಗ್ಯವೆನಿಸದು ಹಿತಬುದ್ಧಿಯಿಲ್ಲದೆ ತಮ್ಮ ಮನಸ್ಸು ನೊಂದಾಗ್ಗೆ ನೆವ ಹುಡುಕಿ ಮನ ಬಂದಂತೆ ಹೊಡೆಯುವದರಿಂದ ವಿದ್ಯಾರ್ಥಿಗಳು ಮೊಂಡರೂ ತಸ್ಕರೂ ಆಗುವದು. ಅವರು ಮಾಸ್ತರನಿಗೆ ವಿಧೇಯರಾಗಿ ಅವನ ಅಪ್ಪಣೆಯನ್ನು ಪಾಲಿಸದೆ, ಹೊಡತಕ್ಕೆ ಹೆದರಿ ಅದನ್ನು ತಪ್ಪಿಸಿಕೊಳ್ಳಲಿಕ್ಕೆ ಪ್ರಯತ್ನ ಮಾಡುವರು. ಅವರು ಮಾಸ್ತರನಿಲ್ಲದಾಗ ಅವನ ವಿರುದ್ಧ ನಡೆಯಲಿಕ್ಕೆ ಹಿಂಜರಿಯುವದಿಲ್ಲ. ಆದ್ದರಿಂದ ಈ ಪ್ರಕಾರದ ದೇಹದಂಡದಿಂದ ವಿದ್ಯಾರ್ಥಿಗಳು ತಿದ್ದುವದಕ್ಕೆ ಬದಲಾಗಿ ಅವರು ದುರ್ಗುಣಿಗಳಾಗುವರು. ಇನ್ನು ಕಲಿಸುವಾಗ್ಗೆ ಬಡಿಯುವದರಿಂದ ಭಯದ ಮೂಲಕ ವಿದ್ಯಾರ್ಥಿಗಳ ವಿಚಾರ ಶಕ್ತಿಯು ಕುಗ್ಗುವದು. ಅವರು ವಿಷಯಜ್ಞಾನವನ್ನು ಮಾಡಿಕೊಳ್ಳಲಿಚ್ಛಿಸದೆ, ಮಾಸ್ತರನ ಹೊಡತವನ್ನು ತಪ್ಪಿಸಿಕೊಳ್ಳುವದರ ಕಡೆಗೂ, ಪೆಟ್ಟು ಹತ್ತದಂತೆ ತಮ್ಮ ಶರೀರವನ್ನು ಕಾಯ್ದುಕೊಳ್ಳುವದರ ಕಡೆಗೂ ತಮ್ಮ ಲಕ್ಷವನ್ನು ಪೂರೈಸುವರು. ವಿದ್ಯಾರ್ಥಿಗಳ ಈ ಯತ್ನವು ಮಾಸ್ತರನ ಕ್ಷೋಭವು ಹೆಚ್ಚುವದಕ್ಕೆ ಕಾರಣವಾಗಿ ವಿದ್ಯಾರ್ಥಿಗಳು ವಿಷಯ ಕಲಿಯುವದಕ್ಕೆ ಬದಲಾಗಿ ಮೈಯ್‌ಮುರಿ ಲತ್ತೆ ತಿಂದು ಮನೆಗೆ ಹೋಗುವರು. ಈ ಅವಿಚ್ಛಿನ್ನ ಬಡಿತದ ಮೂಲಕ ಸಾಲಿಯು ವಿಷಯವಾಗಿ ವಿದ್ಯಾರ್ಥಿಗಳು ಅಪ್ರೀತಿಯುಳ್ಳವರಾಗಲು, ಮಾಸ್ತರನು ವಿದ್ಯಾರ್ಥಿಗಳನ್ನು ಮನೆಗೆ

ಹೋಗಿ ಕರತರಬೇಕಾಗುವದು, ಕೆಲವರನ್ನು ಹೊರಿಸಿ ತರಬೇಕಾಗುವದು, ಕೆಲವರು ಸಾಲೆ ಬಿಡುವರು. ಈ ಪ್ರಕಾರ ಸಾಲಿಯು ಸಲುವಾಗಿ ಹೊಟ್ಟೆಬೇನೆ ಹಚ್ಚಿಕೊಂಡಿರುವ ವಿದ್ಯಾರ್ಥಿಗಳನ್ನು ಹಾದಿಗೆ ತರುವ ಉಪಾಯವು ಮತ್ತೆ ದೇಹದಂಡವೇ. ಇಂಥ ವಿದ್ಯಾರ್ಥಿಗಳ ಮೇಲೆ ಅವರ ಮಾಸ್ತರರ ಸಿಟ್ಟು ಹೆಚ್ಚು. ಯಾಕಂದರೆ ಇಂಥವರಿಂದ ತಮ್ಮ ಅಗಾಧವಾದ ಶಿಕ್ಷಣಕ್ಕೂ, ಕೀರ್ತಿಗೂ ಕುಂದು ಬಂದು ಮೇಲೆ ತಮ್ಮ ಅಪಮಾನವಾಯಿತೆಂದು ಅವರು ತಿಳಿಯುವರು. ಈ ಪ್ರಕಾರದ ಮಾಸ್ತರನು ವಿದ್ಯಾರ್ಥಿಗಳಿಗೆ ಯಮಸದೃಶನೇ ಸರಿ. ಅವನ ಶಾಲೆಯು ಭಯಂಕರವಾದ ಕಾರಾಗೃಹವು. ಚಿಕ್ಕವಯಸ್ಸಿನವರು ಕಡಿಮೆ ವಿಚಾರದ ಮೂಲಕ ದೇಹದಂಡವನ್ನು ಅಪಮಾನಕಾರವೆಂದು ತಿಳಿಯುವದಿಲ್ಲ. ಕಾರಣ ಅಂಥವರಿಂದ ಮಾಸ್ತರನಿಗೆ ಪ್ರತ್ಯಕ್ಷ ಹಾನಿಯೇನು ಆಗುವದಿಲ್ಲ. ಆದರೆ ದೊಡ್ಡವರನ್ನು ಆದ ರೀತಿ ಶಿಕ್ಷಿಸುವದರಿಂದ ಅವರ ಅಪಮಾನವಾಗಿ ಅವರು ಮಾಸ್ತರನ ಛಡಿಯನ್ನು ಹಿಡಿಯಬಹುದು, ಎದುರುತ್ತರ ಕೊಡಬಹುದು, ಸಾಲೀ ಬಿಟ್ಟು ಅಯೋಗ್ಯ ಕೆಲಸಗಳನ್ನು ಮಾಡಬಹುದು. ಹಿಂದಿನ ಗಾವಠೀ ಶಾಲೆಯ ಮಾಸ್ತರರಿಗೆ ಆಸನದ ಬುಡದಲ್ಲಿ ಮುಳ್ಳು ಹಾಕುವದು, ತಗ್ಗು ತೋಡುವದು ಮೊದಲಾದ ಗುರುದಕ್ಷಿಣೆಗಳನ್ನು ಅವರ ವಿದ್ಯಾರ್ಥಿಗಳು ಕೊಟ್ಟದ್ದನ್ನು ಹಲವರು ಕೇಳಿರಬಹುದು. ಆದರೆ ಮೂಲ ದಂಡಿಗೆ ಹಾಕಿ ತೂಗಾಡಿಸಿ ಹೊಡೆಯುವದು, ಗುದ್ದಿಗ್ಗಾಲು ಸರಿಸುವದು, ಮೊದಲಾದ ಕ್ರೂರ ಕ್ರಿಯೆಗಳಿಗೆ ಇದು ತಕ್ಕ ಪ್ರತಿಫಲವಲ್ಲವೇನು? ಮೇಲಿನ ಇಯತ್ತೆಗಳ ಚಲೋ ವ್ಯವಸ್ಥೆಯನ್ನು ನೋಡಿ "ದೊಡ್ಡ ಹುಡುಗರು ತಿಳುವಳಿಕೆಯವರಾದ್ದರಿಂದ ಅವರನ್ನು ತಿದ್ದುವದು ಸುಲಭವು" ಎಂದು ನುಡಿದು ತಮ್ಮ ಕ್ಲಾಸಿನ ಅವ್ಯವಸ್ಥೆಯ ಜವಾಬದಾರಿಯನ್ನು ತಪ್ಪಿಸಿಕೊಳ್ಳುವ ಸಣ್ಣ ಹುಡುಗರ ಮಾಸ್ತರರು ಇದರ ವಿಚಾರ ಮಾಡತಕ್ಕದ್ದು.

(ಸಶೇಷ)

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಕೋತ್ಕರ್ಷಮಂ।
ಬಯಸುತ್ತಂ ಪ್ರತಿಭಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ॥
ನಯದಿಂದಿತ್ತವಪ್ಪೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಡುದ್ಯ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥೧

ಪುಸ್ತಕ ೩೬.] ಜುಲೈ ೧೯೦೦. [ಸಂಚಿಕೆ ೭.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಈ ವರ್ಷ ಮುಲಕೀ ಪರೀಕ್ಷೆಯು ಸಪ್ಟಂಬರ ತಿಂಗಳ ೧೦ನೇ ತಾರೀಖಿಗೆ, ಮಿಡಲ್‌ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆ ೩ನೇ ಸಪ್ಟಂಬರಕ್ಕೆ, ಹೈಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆ ೫ನೇ ಸಪ್ಟಂಬರಕ್ಕೆ ಆಗುವದೆಂದು ಗೊತ್ತಾಗಿದೆ. ಆ ಬಗ್ಗೆ ಕೊಟ್ಟ ನೋಟೀಸುಗಳನ್ನು ಅವಶ್ಯಕರು ನೋಡಿಕೊಳ್ಳತಕ್ಕದ್ದು.

* * *

ಟಾಟಾ-ರಿಸರ್ಚ-ಇನ್‌ಸ್ಟಿಟ್ಯೂಶನ್-ಸ್ಕೀಮು ಮಂಜೂರಾಗಿ ಸ್ಥಲ ಗೊತ್ತಾಗುವದೊಂದು ಉಳಿದಿರುತ್ತದೆ. ಮುಂಬಯಿ ಪಟ್ಟಣವು ಯೋಗ್ಯ ಸ್ಥಲವಾಗಿರುತ್ತದೆಂದು ಕೆಲವರು, ಬೆಂಗಳೂರು ಅನುಕೂಲವಾದ ಸ್ಥಲವೆಂದು ಕೆಲವರು, ಪ್ರತಿಪಾದಿಸುತ್ತಾರೆ. ಮುಂಬಯಿಯ ಛಬಿಲದಾಸ ಲಲ್ಲುಭಾಯಿ ಎಂಬವರೊಬ್ಬ ಧನಿಕರಾದ ಸಭ್ಯಗೃಹಸ್ಥರು ಅವಶ್ಯವಾದ ಸ್ಥಲವನ್ನು ಕೊಡುವದಕ್ಕೆ ಒಪ್ಪಿಕೊಂಡದ್ದರಿಂದಲೂ ಮುಂಬಯಿಯಲ್ಲಿ ಅನುಕೂಲಗಳು ವಿಶೇಷವಾಗಿರುವದರಿಂದಲೂ ಆ ಸ್ಥಲವೇ ಗೊತ್ತಾಗುವದೆಂದು ತೋರುತ್ತದೆ. ದೇವರ ದಯದಿಂದ ಈ ಕೆಲಸ ತೀವ್ರವಾದಷ್ಟು ಒಳ್ಳೇದು.

* * *

ನಮ್ಮ ದೇಶದಲ್ಲಿ ಈಗ ಬಿದ್ದ ಬರಗಾಲವು ಮಳೆಯಾಗದ ತ್ರಿಪ್ಪರಿಂದ ತೀವ್ರ ಹಿಮ್ಮೆಟ್ಟುವ ಲಕ್ಷಣಗಳು ತೋರುತ್ತವೆ. ಸರಕಾರದವರು ತಮ್ಮಿಂದ ಕೂಡಿದಷ್ಟು ಕಿಂಬಹುನಾ ಮಿತಿ ಮೀರಿ ಶ್ರಮವನ್ನು ಜೀವ ಸಂರಕ್ಷಣೆಗಾಗಿ ಮಾಡುತ್ತಲೇ ಇರುವರು ಇಂಥ ಪ್ರಸಂಗದಲ್ಲಿ ಈ ನಮ್ಮ ದೇಶದ ಜನರ ಸ್ಥಿತಿಯು ಒಂದು ವರ್ಷದ ಅನಾವೃಷ್ಟಿಯಿಂದ ಇಷ್ಟು ಹೀನ ತರದ್ದು ಯಾಕಾಗಬೇಕೆಂಬುದನ್ನು ಕುರಿತು ಮುತ್ಸದ್ದಿಗಳೂ ಸುಧಾರಿಸಿದ ದೇಶೀ ಅರಸರೂ ವಿಚಾರ ಮಾಡತೊಡಗಿದ್ದಾರೆ

"ಓರಸಂಗ" ಜಲಸಂಚಯದ ಕೆಲಸವನ್ನು ಸುರು ಮಾಡುವಾಗ ಬಡೋದೆಯ ಮಹಾರಾಜರವರು ಬಹಳ ಸಃಶ್ರಾವ್ಯ ಭಾಷಣವನ್ನು ಮಾಡಿದರು ಅದರೊಳಗಿನ ಮುಖ್ಯ ಮುಖ್ಯ ಸಂಗತಿಗಳು ಯಾವವೆಂದರೆ—

(೧) ಬರಗಾಲ ಸಂಬಂಧದ ಸಹಾಯವು ಮೂರು ಬಗೆಯಾಗಿರುವದು. ಹ್ಯಾಗಂದರೆ—

(अ) ಕೇವಲ ತಾತ್ಕಾಲಿಕ ಜೀವರಕ್ಷಣದ ಸಹಾಯವು.

(ब) ಜೀವರಕ್ಷಣವನ್ನೂ ಸಾಮಾನ್ಯ ಪ್ರಯೋಜನವನ್ನೂ ನೆರವೇರಿಸುವ ಕಾಮಗಾರಿಗಳು ರಸ್ತೆ ಮುಂತಾದವುಗಳು.

(क) ಜೀವರಕ್ಷಣವನ್ನೂ ಪ್ರಯೋಜನವನ್ನೂ ಆಗಾಮಿಯಾದ ಬರಗಾಲದ ನಿವಾರಣವನ್ನೂ ಮಾಡುವಂಥ ಕೆಲಸಗಳು.

ಉದಾ:—ಕೆರಿ ಕಾಲಿವೆಗಳು.

(೨) ಒಂದೇ ವರ್ಷದ ಬರಗಾಲದಿಂದ ಈ ನಿಕೃಷ್ಟಸ್ಥಿತಿಯು ಉಂಟಾದ್ದರ ಕಾರಣಗಳು.

(अ) ಕಲಿತವರು ಸರಕಾರದ ಉದ್ಯೋಗಗಳನ್ನೇ ಬಯಸುವದು.

(ब) ಹೆಚ್ಚಿಗೆ ಅಭ್ಯಾಸ ಮಾಡದವರು ಕೇವಲ ಕೃಷಿಯನ್ನೇ ಅವಲಂಬಿಸಿರುವದು.

(क) ನಮ್ಮ ಜನರ ಸ್ವಭಾವದೋಷಗಳು ಮಿತವ್ಯಯದ ಅಜ್ಞಾನ, ಉತ್ಸಾಹರಾಹಿತ್ಯ, ಸಾಹಸಪರಾಙ್ಮುಖತೆ, ಮಹತ್ವಾಕಾಂಕ್ಷಾಭಾವ, ದೈವಾವಲಂಬನ, ವಿಷಸ್ನೋಹ, ಆಲಸ್ಯ, ಕಾರ್ಯದ ಅಪ್ರೀತಿ ಮುಂತಾದವು.

ಈ ಸಂಗತಿಗಳು ಬಹಳ ವಿಚಾರಣೀಯವಾಗಿರುತ್ತವೆ. ಎಲ್ಲರು ಈ ಮಾತುಗಳನ್ನು ಮನನ ಮಾಡುವದು ತಕ್ಕದ್ದಾಗಿದೆ.

ದಕ್ಷಿಣ ಆಫ್ರಿಕದೊಳಗಿನ ಯುದ್ಧವು ಮುಗಿಯಿತೆನ್ನಲಿಕ್ಕೆ ಅಡ್ಡಿಯಿಲ್ಲ. ಆ ಯುದ್ಧದಿಂದ ಬಹಳ ಹಣದ ವೆಚ್ಚವೂ ಜೀವನಾಶವೂ ಆದವು. ಆದರೆ ಅದಕ್ಕೆ ಉಪಾಯವಿಲ್ಲ. ಆ ಯುದ್ಧದಿಂದ ಇಂಗ್ಲೀಷ ಸೈನ್ಯದ ನ್ಯೂನಗಳೂ ಬೈಲಿಗೆ ಬಂದಂತೆ ನಮ್ಮ ಜನರ ರಾಜನಿಷ್ಠೆಯೂ ಬೈಲಿಗೆ ಬಂದಿರುವವು. ಅದರಿಂದ ನಮ್ಮಲ್ಲಿ ನಮ್ಮನ್ನಾಳುವ ಬ್ರಿಟಿಷ ಜನರ ಪ್ರೇಮವು ಬೆಳೆದು ಉಭಯ-ಸೌಖ್ಯವಾಗುವದೆಂದು ತೋರುತ್ತದೆ. ಮೇ ತಿಂಗಳ ಕಡೆಯ ಸೋಮವಾರ ದಿವಸ ಲಂಡನ ಪಟ್ಟಣದೊಳಗೆ ಒಂದು ಸಭೆಯಲ್ಲಿ ಮಾತಾಡುವಾಗ್ಗೆ ಸರ ಜಾರ್ಜ ವೈಟರೆಂಬ ನಮ್ಮ ಮಾಜಿ ಸೇನಾಪತಿಗಳು ಸೌಥ ಆಫ್ರಿಕದಲ್ಲಿ ವಾಸವಾಗಿದ್ದ ನಮ್ಮ ಜನರನ್ನು ಅವರು ತೋರಿಸಿದ ರಾಜನಿಷ್ಠೆಗಾಗಿಯೂ ಉತ್ಸಾಹಕ್ಕಾಗಿಯೂ, ಮಾಡಿದ ಸಾಹಸದ ಸಹಾಯಕ್ಕಾಗಿಯೂ ಬಹು ವಿಧವಾಗಿ ಕೊಂಡಾಡಿದ್ದಲ್ಲದೆ ಸೋಲ್ಜರ-ಸೇಲರರಿಗಾಗಿ ವರ್ಗಣಿ ವಸೂಲಾದಂತೆ ಈ ಜನರಿಗಾಗಿಯೂ ವರ್ಗಣಿಯನ್ನು ಕೂಡಿಸಿ ಅನಾಥರಾದವರಿಗೆ ಸಹಾಯ ಮಾಡುವದು ಅವಶ್ಯವಾಗಿರುತ್ತದೆಂದು ಸೂಚಿಸಿದರು.

TACT.

ನೆಲೆಗಂಡು ವರ್ತಿಸೋಣ ಅಥವಾ ಹತೋಟಿ.

(೧೨೯ ನೇ ಪುಟದಿಂದ ಮುಂದೆ ಸಾಗಿದ್ದು)

ನಮ್ಮೊಳಗಿನ ಎಷ್ಟೋ ಜನರು ತಮಗಿಂತ ಮಂದಬುದ್ಧಿ

ಯುವರನ್ನು ಕಂಡರೆ ಅವರನ್ನು ಹೀಯಾಳಿಸುವರು, ಇಲ್ಲವೆ ಅವರು ತಮಗಿಂತ ಕ್ಷುಲ್ಲಕರೆಂದು ಎಣಿಸುವರು. ಆದರೆ ಈ ಮೋರೆಗೆ ಸೊಕ್ಕಿನಿಂದ ಮಾತಾಡಲಿಕ್ಕೂ, ತಿರಸ್ಕರಿಸಲಿಕ್ಕೂ ಅವರಿಗೆ ಏನೂ ಅಧಿಕಾರವಿಲ್ಲ. ಯಾಕಂದರೆ ಒಬ್ಬ ಘನ ಶ್ರೀಮಂತನು ಸಾಧಾರಣ ಜನರನ್ನು ನೋಡಿ ತನ್ನ ಐಶ್ವರ್ಯದ ಮದದಿಂದ ಅವರನ್ನು ಹೀಯಾಳಿಸಿದರೆ, ಅದು ಅವನಿಗೆ ಎಷ್ಟು ಒಪ್ಪುತ್ತದೋ, ಅಷ್ಟೇ ತನ್ನ ವಿದ್ವತ್ವದಿಂದ ಮದವೇರಿದ ವಿದ್ವಾಂಸನಿಗೆ ಒಪ್ಪುತ್ತದೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವದು ಅವಶ್ಯ ಉಂಟು. ಅದೇನೆಂದರೆ :—ಶ್ರೀಮಂತನು ತನ್ನ ಐಶ್ವರ್ಯವನ್ನು, ವಿದ್ವಾಂಸನು ತನ್ನ ವಿದ್ವತ್ವನ್ನು ಚನ್ನಾಗಿ ಉಪಯೋಗಿಸಿದರೆ ಅವರಿಬ್ಬರೂ ಸ್ತುತಿಗೆ ಪಾತ್ರರಾಗುವರೆಂಬದನ್ನು ಮಾತ್ರ ಮರೆಯಲಾಗದು. ಎಷ್ಟೋ ಜನರು ಮೋರೆಯ ಮೇಲಿಂದ ಮಂದಬುದ್ಧಿಯುವರಂತೆ ಕಂಡರೂ ಅವರು ನಿಜವಾಗಿ ಜಾಣರಾಗಿರಬಹುದೆಂಬದನ್ನಾದರೂ ನಾವು ಲಕ್ಷ್ಯದಲ್ಲಿಡತಕ್ಕದ್ದು.

ಪುಸ್ತಕಗಳನ್ನೋದಿ ಅವುಗಳ ಯೋಗ್ಯತೆಯನ್ನು ತಿಳುಕೊಳ್ಳುವದಕ್ಕಿಂತ ಮನುಷ್ಯರ ಮೋರೆಯ ಮೇಲಿಂದ ಅವರ ಯೋಗ್ಯತೆಯನ್ನು ತಿಳುಕೊಳ್ಳುವದು ಬಹಳ ಬಿಗಿಯಾದ ಕೆಲಸವು. ಮನುಷ್ಯನ ಗುಣವನ್ನು ತಿಳುಕೊಳ್ಳಲಿಕ್ಕೆ ಅವನ ಕಣ್ಣುಗಳು ಮೇಲಾದ ಸಾಧನಗಳಾಗಿರುತ್ತವೆ. ಎಮರ್ಸನ್ನನೆಂಬ ಹೆಸರಾದ ಗ್ರಂಥಕಾರನು ಅನ್ನುವದೇನಂದರೆ :— “ಕಣ್ಣುಗಳು ಒಂದು ತರವಾಗಿ, ನಾಲಿಗೆಯು ಮತ್ತೊಂದು ತರವಾಗಿ ನುಡಿದರೆ ಮನುಷ್ಯನು ಕಣ್ಣುಗಳ ಮೇಲೆಯೇ ಹೆಚ್ಚು ನಂಬಿಗೆಯನ್ನಿಡುವನು.” ಎಷ್ಟೋ ಜನರು ತಾವು ಇಷ್ಟು ದೊಡ್ಡ ಗುಣದವರು, ಇಷ್ಟು ದೊಡ್ಡಸ್ತಿಕೆಯುಳ್ಳವರು ಎಂದು ಆಗಾಗ್ಗೆ ಮಿತಿಮೀರಿ ಆತ್ಮಸ್ತೋತ್ರದ ನುಡಿಗಳನ್ನಾಡುತ್ತಿರುತ್ತಾರೆ. ಇಂಥವರ ನುಡಿಗಳನ್ನು ನಾವು ನಂಬಲಾಗದು. ಯಾಕಂದರೆ ಗಂಡಸು ಗಂಡಸರಲ್ಲಾಗಲಿ

ಹೆಂಗಸು ಹೆಂಗಸರಲ್ಲಾಗಲಿ, ಸಕೃದ್ದರ್ಶನಕ್ಕೆ ಮಿತ್ರತ್ವವಾಗಲಿ, ಪ್ರೀತಿಯಾಗಲಿ ಹುಟ್ಟುವದಿಲ್ಲ. ಅಂದಬಳಿಕ ನಮಗೆ ಗೊತ್ತಿಲ್ಲದ ಮನುಷ್ಯನು ನಮ್ಮ ಹತ್ತರ ಬಂದು, ನಾನು ನಿಮಗಾಗಿ ಹಾಗೆ ಮಾಡುತ್ತೇನೆ. ನಾನು ಹೀಗೆ ಮಾಡುತ್ತೇನೆ ಎಂದು ಉತ್ತರಕುಮಾರನಂತೆ ಬಡಬಡಿಸಿದರೆ ಅವನ ಮಾತಿನ ಮೇಲೆ ನಾವು ಎಂದೂ ಭರವಸವಿಡತಕ್ಕದ್ದಲ್ಲ. ಒಂದು ವೇಳೆ ಅವನು ನಂಬಿಗೆಯ ಮನುಷ್ಯನಾಗಿದ್ದರೂ ಸಹ, ಅವನು ತನ್ನ ಯೋಗ್ಯತೆ ಮೀರಿ ಮಾತಾಡುತ್ತಾನೆಂದು ಇಲ್ಲವೆ ನಮ್ಮಿಂದಲೆ ತನಗೆ ಏನಾದರೂ ಸಹಾಯವಾಗಬೇಕೆಂದು ಬಯಸುತ್ತಾನೆಂದು ನಾವು ಎಣಿಸಬೇಕು. ಅದ್ದರಿಂದ ಜನರ ಬಣ್ಣದ ಮಾತುಗಳಿಗಷ್ಟೇ ಮರುಳಾಗಿ, ಅವರು ನಮ್ಮ ಗೆಳೆಯರಾಗಿರುತ್ತಾರೆಂದು ನಾವು ಎಂದು ಎಣಿಸಬಾರದು; ಮತ್ತು ಚನ್ನಾಗಿ ವಿಚಾರ ಮಾಡದೆ ಅವರು ನಮ್ಮ ಹಗೆಗಳಾಗಿರುವರೆಂದು ನೆನಿಸುವದಾದರೂ ಸರಿಯಲ್ಲ

ಈ ಪೃಥ್ವಿಯಲ್ಲಿ ವಿಚಾರ ಮಾಡುವ ಸಾಮರ್ಥ್ಯವುಳ್ಳ ಹಾಗು ಬುದ್ಧಿಯುಳ್ಳ ಪ್ರಾಣಿಗಳೆಂದರೆ ಮನುಷ್ಯರೇ ಎಂದು ನಮ್ಮಷ್ಟಕ್ಕೆ ನಾವೇ ಹೊಗಳಿಕೊಳ್ಳುತ್ತೇವೆ ಆದರೆ ನಾವು ಯಾವಾಗಲು ಒಳ್ಳೆ ವಿಚಾರದಿಂದಲೇ ಯಾವದೊಂದು ಕೆಲಸವನ್ನು ಮಾಡುತ್ತೇವೆಂದು ಗ್ರಹಿಸುವದು ದೊಡ್ಡ ತಪ್ಪೇ ಇರುತ್ತದೆ ಯಾಕಂದರೆ ಮನುಷ್ಯನು ವಿಚಿತ್ರಸ್ವಭಾವದ ತಾಳಗೆಟ್ಟ ಪ್ರಾಣಿಯಾಗಿರುತ್ತಾನೆ ಅಂದರೆ ಅವನು ಸಿಟ್ಟಿಗೆ ಇಲ್ಲವೆ ಮನೋವಿಕಾರಗಳಿಗೆ ಒಳಗಾಗಿ, ಎಷ್ಟೋ ಸಾರೆ ಅವಿಚಾರದ ಕೆಲಸಗಳನ್ನು ಮಾಡುತ್ತಾನೆ. ಇದರ ಪರಿಣಾಮವೇನಾಗುತ್ತದೆಂದರೆ ಸರಿಯಾಗಿ ವಿಚಾರ ಮಾಡಿ ಯೋಗ್ಯವೆಂದು ಕಂಡುಬಂದ ಕೃತ್ಯಗಳನ್ನು ಮಾಡುವದರ ಕಡೆಗೆ ಮನಸ್ಸು ಹೋಗದೆ ಅದಕ್ಕೆ ಸುತ್ತುವರಿದ ಮೋಹಪಾಶಗಳಿಗೂ ಬಯಲುಭ್ರಾಂತಿಗಳಿಗೂ ಒಳಗಾಗಿ ಮನುಷ್ಯನನ್ನು ನಡಿಸಹತ್ತುತ್ತದೆ. ಈ ತರದ ನಡಾವಳಿಯು ವ್ಯಕ್ತಿಗಳಿಗಿಂತ ಜನಸಮುದಾಯಕ್ಕೆ ಹೆಚ್ಚು ಹತ್ತುತ್ತದೆ.

ವಾದ ಮಾಡುವದು ಒಂದಿಷ್ಟು ಗಂಡಾಂತರದ ಕೆಲಸವೇ

ಸ್ಸೈ ಯಾಕೆಂದರೆ ಅದು ಎಷ್ಟೋ ಸಾರೆ ಸ್ನೇಹಿತರ ನಡುವಿದ್ದ ಪ್ರೀತಿಯನ್ನು ಕಡಿಮೆ ಮಾಡಿ ಅವರಲ್ಲಿ ಅನಾದರಣೆಯನ್ನೂ ತಪ್ಪು ತಿಳುವಳಿಕೆಯನ್ನೂ ಹುಟ್ಟಿಸುತ್ತದೆ. ನಾವು ಗೆಳೆಯರೊಡನೆ ವಾದಮಾಡಿ ಅವರನ್ನು ಸೋಲಿಸಲು, ಒಮ್ಮೊಮ್ಮೆ ಅವರ ಸ್ನೇಹವನ್ನೇ ಕಳಕೊಳ್ಳುವ ಹೊತ್ತು ಬರಬಹುದು ಹೀಗಾದರೆ ನಮ್ಮನಷ್ಟಕ್ಕೆ ನಾವೇ ಸಿಂತ್ರಿಸಿಕೊಂಡ ಹಾಗಾಗುವದು ಆದ್ದರಿಂದ ಗೆಳೆಯರೊಂದಿಗೆ ವಾದ ಮಾಡಬೇಕಾದರೆ, ಕೈಲಾದ ಮಟ್ಟಿಗೆ ವಾದಗ್ರಸ್ತ ವಿಷಯದ ಬಗ್ಗೆ ಇರುವ ನಮ್ಮ ಗೆಳೆಯನ ಅಭಿಪ್ರಾಯಗಳನ್ನು ಅಂಗೀಕರಿಸುವದು ಒಳ್ಳೇದು ಈ ಕಾಲಕ್ಕೆ ಇಂಥ ಇಂಥ ವಿಷಯಗಳನ್ನು ಕುರಿತು ನೀವು ಚೆನ್ನಾಗಿ ವಿಚಾರ ಮಾಡಿಲ್ಲೆಂಬ ಸಂಗತಿಯನ್ನು ಅವನಿಗೆ ತಿಳಿಸಿಕೊಡಲಿಕ್ಕೆ ಪ್ರಯತ್ನಿಸತಕ್ಕದ್ದು. ಎಷ್ಟೋ ಜನರು ಯಾವದಾದರೊಂದು ವಾದದಲ್ಲಿ ಸೋತು ತಾವು ಸೋತ ಬಗ್ಗೆ ನಾಲ್ಕು ಜನರ ಮುಂದೆ ಒಡಂಬಟ್ಟರೂ, ಅವರ ಮನಸ್ಸು ಅದಕ್ಕೆ ಒಡಂಬಡುವದಿಲ್ಲ. ಮತ್ತೂ ಏನೆಂದರೆ:— ವಾದದಲ್ಲಿ ಅವರ ಮಾತು ಕಟ್ಟಿದ ಮಾತ್ರದಿಂದಲೇ ವಾದಗ್ರಸ್ತ ವಿಷಯವು ಅವರಿಗೆ ಚೆನ್ನಾಗಿ ತಿಳಿಯಿತೆಂದು ಎಣಿಸಲಾಗದು ಒಟ್ಟಿಗೆ ಯಾವದಾದರೊಂದು ವಿಷಯದ ಬಗ್ಗೆ ಒಬ್ಬನನ್ನು ಒಡಂಬಡಿಸಲಿಕ್ಕೆ ಇಚ್ಛಿಸಿ ಬರೇ ವಾದದಿಂದ ಪ್ರತಿಪಾದಿಸಲೆತ್ನಿಸಿದರೆ, ಅದರಿಂದ ಏನೂ ಉಪಯೋಗವಾಗಲಿಕ್ಕಿಲ್ಲೆಂದು ನಿರ್ಬಾಧವಾಗಿ ಹೇಳಬಹುದು. ವಾದಗ್ರಸ್ತ ವಿಷಯದ ಬಗ್ಗೆ ಇರುವ ನಮ್ಮ ಕಾರಣಗಳನ್ನು ಆದಷ್ಟು ಸ್ಪಷ್ಟವಾಗಿಯೂ ಸಂಕ್ಷೇಪವಾಗಿಯೂ ಹೇಳಬೇಕು. ಒಂದು ವೇಳೆ ಈ ಕಾರಣಗಳನ್ನು ಕೇಳಿ ನಮ್ಮ ಗೆಳೆಯನು ವಾದಗ್ರಸ್ತ ವಿಷಯದ ತನ್ನ ಅಭಿಪ್ರಾಯವನ್ನು ತುಸು ಸಡಲಿಸಿದರೆ ಸದ್ಯಕ್ಕೆ ಇಷ್ಟೇ ಸಾಕೆಂದು ಎಣಿಸತಕ್ಕದ್ದು

ಸಂಭಾಷಣೆಯು ಒಂದು ಮಹತ್ವದ ವಿಷಯವಿರುತ್ತದೆ. ಬೇರೆ ಬೇರೆ ವಿಷಯಗಳ ಮೇಲೆ ಬಹಳ ಮಾತಾಡುವವರೆಲ್ಲರು ಅತ್ಯುತ್ತಮ ಮಾತುಗಾರರೆಂದು ತಿಳಿಯತಕ್ಕದ್ದಲ್ಲ.

ಚೆನ್ನಾಗಿ ಮಾತಾಡುವಷ್ಟೇ ಕಠಿಣವು ಮಾತಾಡುವವನನ್ನು ಲಕ್ಷಗೊಟ್ಟು ಕೇಳುವದಾದರೂ ಇರುತ್ತದೆಂದು ಹೇಳಲಿಕ್ಕೆ ಆಗದಿದ್ದರೂ ಕೇಳುತ್ತ ಕೂಡ್ರುವದು ಎಲ್ಲ ಬಗೆಗಳಿಂದ ಸುಲಭವಾದದ್ದೆಂತಲೂ, ತುಸು ಕಡಿಮೆ ಅಷ್ಟೇ ಮಹತ್ವವುಳ್ಳದ್ದೆಂತಲೂ ಹೇಳಲಿಕ್ಕೆ ಅಡ್ಡಿ ಇಲ್ಲ ಮಾತಾಡಿದ ಪ್ರತಿಯೊಂದು ವಿಷಯದ ಮೇಲೆ ನಾವು ಟೀಕಾ ಮಾಡಲಿಕ್ಕೂ, ನಮ್ಮ ಅಭಿಪ್ರಾಯವನ್ನು ಕೊಡಲಿಕ್ಕೂ ಯತ್ನಿಸದೆ, ಮಾತಾಡುವಂಥವನ ಮನಸನ್ನು ಪ್ರವೇಶಿಸಿ, ಅವನ ಮನಸಿನ ಇರವು ಹ್ಯಾಗದೆ, ಅವನು ನುಡಿಯುವ ಶಬ್ದಗಳಿಗೂ ಮನಸಿಗೂ ಏನಾದರೂ ಸಂಬಂಧವಿರುತ್ತದೋ, ಆ ಶಬ್ದಗಳಿಂದ ಅವನ ಮನಸ್ಸಿನ ಮೇಲೆ ಏನಾದರೂ ಪರಿಣಾಮವಾಗುತ್ತದೋ, ಅವನ ಬಾಯಿಂದ ಹೊರಟ ಮಾತುಗಳಿಗೂ ಮುಖಲಕ್ಷಣಕ್ಕೂ ಏನಾದರೂ ಸಂಬಂಧ ಉಂಟೋ, ಇವೇ ಮುಂತಾದ ಸಂಗತಿಗಳನ್ನು ಲಕ್ಷಗೊಟ್ಟು ನೋಡುವದಲ್ಲದೆ ಮಾತಾಡುವವನಿಂದ ಆಗಾಗ್ಗೆ ಹೊರಡುವ ಉದ್ಗಾರಗಳ ಹೊಂಬನ್ನು ಸಹ ಅರಿತುಕೊಳ್ಳುವದಕ್ಕೆ ಪ್ರಯತ್ನಿಸತಕ್ಕದ್ದು. ಜನರ ಅಭಿಪ್ರಾಯಗಳನ್ನು ಆದರದಿಂದಲೂ ನಿದಾನದಿಂದಲೂ ಲಕ್ಷಗೊಟ್ಟು ಕೇಳುತ್ತ ಹೋದರೆ, ಅವರು ನಮ್ಮ ಅಭಿಪ್ರಾಯಗಳನ್ನೂ ಉಪದೇಶಗಳನ್ನೂ ಕೇಳಲಿಕ್ಕೆ ಹತ್ತುವರು ಈ ಮೇರೆಗೆ ಬಂದ ಜನರಿಗೆ ಸಮಯಕ್ಕೆ ಸರಿಯಾಗಿ ಒಳ್ಳೇ ಮಾತುಗಳನ್ನು ಹೇಳಿ, ಅವರಿಗೆ ಸಂಭವಿಸಿದ ದುಃಖವನ್ನು ಕಡಿಮೆ ಮಾಡಿದರೆ, ತಕ್ಕ ಸಹಾಯದಿಂದ ಅವರಿಗೆ ತಟ್ಟಿದ ಕಷ್ಟಗಳನ್ನು ಪರಿಹಾರ ಮಾಡಿದರೆ ನಮಗೆ ಬಹಳೇ ಆನಂದವಾಗುವದು

CHEMISTRY.

ರಸಾಯನಶಾಸ್ತ್ರ

(೨೩೫ ನೇ ಪುಟದಿಂದ ಮುಂದೆ ಸಾಗಿದ್ದು.)

ಬಳಿಕಾವರೂ ಸೊಟ್ಟ ಕೊಳವೆಯನ್ನು ನೀರಿನಿಂದ ಕಡಿಗೆ ತೆಗಿವಬಳಿಕ ದೀಪವನ್ನು ಒರಗ ಸರಿಸು. ಮೊದಲಿಗೇ ದೀಪ

ವನ್ನು ದೂರ ಸರಿಸಿದರೆ ನೀರು, ಸೊಟ್ಟ ಲಳಿಗೆಯ ಮಾರ್ಗವಾಗಿ ಏರಿಹೋಗಿ ಎರಡೂ ಕೊಳವೆಗಳನ್ನು ಒಡಿದು ಬಿಟ್ಟೀತು. ಆದ್ದರಿಂದ ಸೊಟ್ಟ ಲಳಿಗೆಯನ್ನು ನೀರೊಳಗಿಂದ ಮೊದಲಿಗೆ ಹೊರಗೆ ತೆಗಿಯಬೇಕೆಂಬದನ್ನು ಮರೆಯಬೇಡ. ದೀವಿಗೆಯನ್ನು ದೂರಿಟ್ಟು ತುಸು ಹೊತ್ತಾದ ಬಳಿಕ ಅಂದರೆ ಆ ಕೊಳವೆಯು ತಣ್ಣಗಾದ ಮೇಲೆ ಅದನ್ನು ಕೆಳಗಿಳಿಸಿಕೊ, ಅದರ ಒಳಗಿರುವ ಬಿಳಿ ಹುಡಿಯನ್ನು ಒಟ್ಟುಗೂಡಿಸು. ಆ ವಾಯುವನ್ನು ಹಿಡಿದಿಟ್ಟ ಸೀಸೆಯನ್ನು ಮುಂದಿಟ್ಟುಕೊ; ಇನ್ನು ಇಂಗಳೀಕವನ್ನು ಕಾಸಿದ್ದರಿಂದ ಉತ್ಪನ್ನವಾದ ಇವೆರಡು ಪದಾರ್ಥಗಳು ಯಾವವೆಂಬದನ್ನು ಅರಿತುಕೊಳ್ಳುವ. ಇಗೋ ಈ ಇದ್ದಲಿಯ ಕೆಂಡವನ್ನು ಇಕ್ಕಳದಿಂದ ಹಿಡಿದು ನಿನ್ನ ಮುಂದಿರುವ ಈ ಸೀಸೆಯೊಳಗೆ ಹಿಡಿಯುತ್ತೇನೆ. ಅಗೋ, ಅದು ನೋಡು; ಎಷ್ಟು ತೇಜಃಪುಂಜವಾಗಿ ಉರಿಯುವದು ಇದರಿಂದ ಈ ವಾಯುವು ಯಾವದೆಂಬದು ನಿಮ್ಮ ಧ್ಯಾನದಲ್ಲಿ ಬಂದಿರಬಹುದು ಜ್ವಲನಕ್ಕೆ ಸಹಾಯ ಮಾಡುವ ಧರ್ಮವು ಆಕ್ಸಿಜನ್‌ದಲ್ಲಿ ಇರುತ್ತದೆ. ಅದರಿಂದ ಇದು ಆಕ್ಸಿಜನ್‌ವು ಎರಡನೇದಂತು ಪಾರಜವೆಂದು ಮೇಲೇ ತೋರುತ್ತದೆ ಇಂಗಳೀಕವು ಅಥವಾ ಪಾರಜದ ಆಮ್ಲಜ ವಿಕಾರವು ಅಥವಾ ಸಂಕ್ಷೇಪವಾಗಿ ಪಾರಜದ ಜಂಗು ಒಂದು ಭಾರವಿದ್ದರೆ. ಅದರೊಗೆ ಇಂತಿಷ್ಟು ಪಾಲು ಆಕ್ಸಿಜನ್‌ವೂ, ಇಂತಿಷ್ಟು ಪಾಲು ಪಾರಜವೂ, ಯಾವಾಗಲೂ ಇರುತ್ತದೆಂದು ಅನುಭವದಿಂದ ತಿಳಿದದೆ.

ಇಂಗಳೀಕವು ಪಾರಜದ ಜಂಗೆಂದು ಹಿಂದೆ ಹೇಳಿದ್ದೇವೆ. ಯಾಕಂದರೆ ಅದು ಪಾರಜ ಆಕ್ಸಿಜನ್‌ಗಳ ರಸಾಯನ ಸಂಯೋಗದಿಂದ ಉಂಟಾಗಿರುತ್ತದೆ 'ಆಕ್ಸಿಜನ್'ಕ್ಕೆ ಆಮ್ಲಜವೆಂದರೂ ಸಲ್ಲುವದು. ಆದ್ದರಿಂದ ಇಂಗಳೀಕವು ಪಾರಜದ ಆಮ್ಲಜವಿಕಾರವಿರುತ್ತದೆಂದರೂ ತಪ್ಪಾಗದು. ಮಕ್ಕಳಿರಾ, ಇಂಗಳೀಕದಲ್ಲಿ ಈ ಮೇರೆಗೆ ಇವೆರಡು ಪದಾರ್ಥವಿರುತ್ತವೆಂದು ಈ ಪ್ರಯೋಗದಪೂರ್ವದಲ್ಲಿ ನಿಮಗೆ ತಿಳಿದಿತ್ತೇನು? ರಸಾಯನ ಶಾಸ್ತ್ರಜ್ಞರು ೧೬ ಭಾಗ ಇಂಗಳೀಕದಲ್ಲಿ

೮೦ ಭಾಗ ನಾರಜನವೂ, ೧೭ ಭಾಗ ಆಕ್ಸಿಜನ್‌ವೂ ಇರುತ್ತದೆಂದು ಅನುಭವದಿಂದ ಗೊತ್ತುಪಡಿಸಿದ್ದಾರೆ. ಸಂಯುಕ್ತ ಪದಾರ್ಥದಲ್ಲಿರುವ ಘಟಕಗಳು ಕೆಲವೊಂದು ನಿಯಮಿತ ಮಾನದಿಂದ ಮಿಶ್ರವಾಗುತ್ತವೆ. ಅಂಥ ನಿಯಮಿತ ಮಾನಕ್ಕೆ ಸಂಯೋಜಕ ಪ್ರಮಾಣವೆಂದೆನ್ನುವರು. ಈ ಪ್ರಮಾಣವು ಎಂದೂ ಬದಲಾಗುವದಿಲ್ಲ.

೩೫. ಧಾತುಗಳು ಉತ್ತಿನೆಟ್ಟರೆ ಮುಂಚಿಗಿಂತ ಜಡವಾಗುತ್ತವೆ. ಪೃಥ್ವಿಯಲ್ಲಿರುವ ಕಲ್ಲು, ಬಂಡೆ ಮುಂತಾದ ಪದಾರ್ಥಗಳಿಗೆ ಆಕ್ಸಿಜನ್‌ವು ರಾಸಾಯಿನಿಕ ಸಂಯೋಗದಿಂದ ಕೂಡಿ ತರತರದ ಜಂಗನ್ನು ಹುಟ್ಟಿಸುತ್ತದೆ. ಇದರಂತೆ ಕಬ್ಬಿಣ, ತಾಮ್ರ, ಬೆಳ್ಳಿ, ತವರು ಸೀಸು ಮುಂತಾದ ಧಾತುಗಳೊಡನೆಯೂ ಆಕ್ಸಿಜನ್ನವು ಸಂಯುಕ್ತವಾಗಿ ಅವುಗಳ ಮೇಲೆ ಜಂಗನ್ನು ಹುಟ್ಟಿಸುತ್ತದೆ. ಈ ಮೇರೆಗೆ ಕಿಲುಬಿದ ಧಾತುಗಳು ಮೊದಲಿಗಿಂತ ಹೆಚ್ಚು ಜಡವಾಗುತ್ತವೆ. ಯಾಕಂದರೆ ಆಕ್ಸಿಜನ್‌ದಿಂದ ಹುಟ್ಟಿದ ಜಂಗು, ಪದಾರ್ಥಗಳನ್ನಂಟಿಕೊಂಡು ಅವುಗಳ ತೂಕವನ್ನು ಹೆಚ್ಚಿಸುತ್ತದೆ.

ಪ್ರಯೋಗ ೩೧—ಮೇಲಿನ ಸಂಗತಿಯ ಸತ್ಯತೆಯನ್ನು ಮನಗಾಣುವದಕ್ಕಾಗಿ ಒಂದು ನಾಲಿನಾಕಾರದ ಲೋಹಚುಂಬಕವನ್ನು ತಕ್ಕೊಂಡು ಅದರ ತುದಿಗಳನ್ನು ಕಬ್ಬಿಣದ ಸಣ್ಣ ಸಣ್ಣ ಚೂರುಗಳಲ್ಲಿ ಹೊರಳಿಸಾಡು ಅಥವಾ ಮುಳಗಿಸು. ಅದರ ತುದಿಗೆ ಬಹಳ ಚೂರುಗಳು ಅಂಟಿಕೊಂಡಿರುವದರಿಂದ ತುದಿಗಳು ಕುಂಚದಂತೆ ಹ್ಯಾಗೆ ಕಾಣುತ್ತವೆ ನೋಡು? ಇನ್ನು ಈ ನಾಲನ್ನು ತಕ್ಕಡಿಯ ದಂಡಿಗೆಯ ಒಂದು ತುದಿಯ ಒಂಕಿಗೆ ತೊಡಕಿಸು. ಮತ್ತೊಂದು ಕಡೆಯಲ್ಲಿ ಇದು ಸಮತೋಲವಾಗುವಷ್ಟು ತೂಕದ ಕಲ್ಲುಗಳನ್ನು ಹಚ್ಚು. ಲೋಹಚುಂಬಕದ ಬುಡದಲ್ಲಿ ದೀವಿಗೆಯನ್ನಿಡು. ಅಗೋ, ಆ ಕಬ್ಬಿಣದ ಚೂರುಗಳು ಕಾಯಲಾರಂಭಿಸಿದವು. ಈ ಮೇರೆಗೆ ಕಾಯುತ್ತಿರುವಾಗ ಹವೆಯೊಳಗಿನ ಆಕ್ಸಿಜನ್‌ವು ಆ ಕಬ್ಬಿಣದೊಡನೆ ರಸಾಯನ ಸಂಯೋಗವನ್ನು ಹೊಂದುತ್ತಿರುತ್ತವೆ. ಈ ಸಂಯೋಗದಿಂದ ಆಕ್ಸಾಯಿಡ್

ಆಫ್ ಆಯರ್ನ್ ಎಂದರೆ ಕಬ್ಬಿಣದ ಆಮ್ಲಜ ವಿಕಾರವು ಅಥವಾ ಕಬ್ಬಿಣದ ಜಂಗು ಉತ್ಪನ್ನವಾಗುತ್ತದೆ. ತಕ್ಕಡಿಯ ದಂಡಿಗೆಯು ಸಮತೋಲ ಮೂಲಕವಾಗಿ, ಮೊದಲು ಕ್ಷಿತಿಜಕ್ಕೆ ಸಮಾಂತರವಾಗಿ ನಿಂತಿತ್ತು. ಅದು ನೋಡು, ಈಗ ನಾಲಿನ ಕಡಿಯು ದಂಡಿಗೆಯು ಕೆಳಗೆ ಬಾಗಿರುತ್ತದೆ. ಹೀಗಾಗುವ ಕಾರಣವೇನು? ಕಬ್ಬಿಣದ ಕಣಗಳಲ್ಲಿ ಆಕ್ಸಿಜನ್‌ವು ಸೇರಿಕೊಂಡು ಜಂಗನ್ನು ಹುಟ್ಟಿಸಿ ಭಾರವನ್ನು ಹೆಚ್ಚಿಸಿ ಸಮತೋಲವನ್ನು ನಷ್ಟಮಾಡಿತು.

೩೬. ಭೂಗರ್ಭದೊಳಗಿನ ಕಲ್ಮಣ್ಣುಗಳೊಳಗೆ ಧಾತುಗಳು ಕೂಡಿಕೊಂಡಿರುತ್ತವೆ.

ಇಂಗಳೀಕದಲ್ಲಿ ಪಾರಜವಿರುತ್ತದೆ. ಕಬ್ಬಿಣದ ಕಿಟ್ಟದಲ್ಲಿ ಅಥವಾ ಮಂಡೂರದಲ್ಲಿ ಕಬ್ಬಿಣವಿರುತ್ತದೆ. ಈ ಸಂಗತಿಗಳನ್ನು ನೀವು ಪ್ರಯೋಗದಿಂದ ಮನಗಂಡಿರಿ ಆದರೆ ಇಷ್ಟರಿಂದ ಪೃಥ್ವಿಯ ಘಟಕಗಳು ತೀರಿದವೆಂದು ತಿಳಿಯಲಾಗದು. ಈ ಭೂಮಿಯ ಒಡಲಲ್ಲಿ ಇನ್ನೂ ಅನೇಕ ಧಾತುಗಳುಂಟು. ಈ ಕೆಳಗಿನ ಒಂದೆರಡು ಪ್ರಯೋಗಗಳನ್ನು ಮಾಡಿ ನೋಡಿರಿ ಅಂದರೆ ಮತ್ತೆ ಕೆಲವು ಧಾತುಗಳ ಪರಿಚಯವು ನಿಮಗಾಗುವದು

ಪ್ರಯೋಗ ೩೦—ತುತ್ಥದ ಒಂದು ಹರಳನ್ನು ತಕ್ಕೊಂಡು ಬಿಸಿ ನೀರಿನಲ್ಲಿ ಚೆಲ್ಲು. ಅದರಿಂದ ಅದು ಕೆಲ ಹೊತ್ತಿನಲ್ಲಿ ಕರಗುವದು. ಬಳಿಕ ಲಕಲಕ ಹೊಳೆಯುವ ಚೂರಿಯ ಅಲಗನ್ನು ಇಲ್ಲವೆ ಯಾವದೊಂದು ಕಬ್ಬಿಣದ ಪದಾರ್ಥವನ್ನು ಆ ನೀರಿನಲ್ಲಿ ಮುಳುಗಿಸಿ, ಸುಮಾರು ಅರ್ಧ ನಿಮಿಷದವರೆಗೆ ಇಡು. ಬಳಿಕ ಆ ಅಲಗನ್ನು ಅಥವಾ ಪದಾರ್ಥವನ್ನು ಹೊರಗೆ ತೆಗೆದು ನೋಡಿದರೆ, ಆ ಒಡವೆಗಳ ಮುಳುಗಿದ ಭಾಗವು ನಸುಗೆಂಪಾಗಿ ತೋರುವದು. ಅದು ತಾಮ್ರದ ಬಣ್ಣವೆಂದು ತಿಳಿಯಬೇಕು. ಆ ಚೂರಿಯ ಅಲಗನ್ನು ಮತ್ತೆ ಆ ನೀರಲ್ಲಿ ಮೊದಲಿಗಿಂತ ಹೆಚ್ಚು ಹೊತ್ತು ಮುಳುಗಿಸಿಟ್ಟರೆ, ಆ ತುತ್ಥದಿಂದ ನೀರಿಗೆ ಬಂದ ನೀಲವರ್ಣವು ನಷ್ಟವಾಗುವದು. ಬಳಿಕ ಆ ಚೂರಿಯ ಅಲಗನ್ನು ಹೊರಗೆ ತೆಗೆದು

ನೋಡಿದರೆ ಅಸಂಖ್ಯ ತಾಮ್ರದ ಸಣ್ಣ ಸಣ್ಣ ಕಣಗಳು ಅದಕ್ಕೆ ಮುತ್ತಿಕೊಂಡದ್ದು ದೃಷ್ಟಿಗೋಚರವಾಗುವದು. ಬಳಿಕ ಮತ್ತೊಂದು ಚೂರಿಯ ಅಲಗನ್ನು ಆ ನೀರೊಳಗೆ ಎದ್ದಿ ಮನಗಾಣಿರಿ. ಅಲಗಿಗೆ ಕೆಂಪು ಬಣ್ಣ ಬರಲಿಲ್ಲ ಇವೆರಡು ಕೃತಿಯಿಂದ ತುತ್ತದೊಳಗೆ ತಾಮ್ರವಿರುತ್ತದೆಂತಲೂ, ಅದೆಲ್ಲ ಮೊದಲಿನ ಚೂರಿಯ ಅಲಗಿಗೆ ಅಂಟಿಕೊಂಡದ್ದರಿಂದ ಎರಡನೇ ಚೂರಿಯ ಅಲಗಿಗೆ ಕೆಂಪು ಬಣ್ಣವು ಬರಲಿಲ್ಲವೆಂತಲೂ ಸ್ಪಷ್ಟವಾಗುತ್ತದೆ.

ಪ್ರಯೋಗ ೩೩— ಲೆಡ್ ಅಸಿಟೆಟ್ ಅಂದರೆ ಸೀಸದ ದುಬಿಳಿ ಕ್ಷಾರವನ್ನು ಸುಮಾರು ಅರ್ಧ ಔಂಸಿನಷ್ಟು ತಕ್ಕೊಂಡು ಒಂದು ಗ್ಲಾಸಿನಲ್ಲಿ ಹಾಕು. ಮೇಲೆ ತುಸು ನೀರು ಹಣಿಸು. ಕೆಲ ಹೊತ್ತಿನಲ್ಲಿ ಅದೆಲ್ಲ ಕರಗುವದು ಬಳಿಕ ಆ ಗ್ಲಾಸಿನ ಬಾಯಿ ಮೇಲೆ ಒಂದು ಅಡ್ಡ ಗಣಿಕೆಯನ್ನಿಡು. ಒಂದು ಸತುವಿನ ತುಂಡಿಗೆ ದಾರ ಕಟ್ಟಿ ಗ್ಲಾಸಿನ ನೀರಲ್ಲಿ ಮುಳುಗಿಸಿ ಗ್ಲಾಸಿಗೆ ಹೊಂದದಂತೆ ಆ ಗಣಿಕೆಗೆ ತೂಗಗಟ್ಟು. ಹೀಗಿಟ್ಟು ೫–೬ ತಾಸುಗಳಾದ ಬಳಿಕ ನೋಡಲು, ಸೀಸದ ಕಣಗಳು ಆ ಸತುವಿನ ತುಂಡಿಗೆ ಅಂಟಿಕೊಳ್ಳುವದರಿಂದ ಆ ತುಂಡು ಸೀಸವೃಕ್ಷದಂತೆ ಕಂಗೊಳಿಸುವದು

೧೪ ನೇ ಪಾಠವು

ಭೂಮಿ

೩೭ ಕಲ್ಲಿದ್ದಲಿಯೆಂದರೇನು?

ಮಕ್ಕಳಿರಾ, ಇನ್ನು ನಾವು ಕಲ್ಲಿದ್ದಲಿಯ ವಿಷಯವಾಗಿ ವಿಚಾರ ಮಾಡುವ. ಕಲ್ಲಿದ್ದಲಿಯಲ್ಲಿ ಮುಖ್ಯವಾಗಿ ಕಾರ್ಬೊನ್ನಿರುವದರಿಂದ ಅದು ಸ್ವತಃ ಉರಿಯುವದಲ್ಲದೆ ಉರಿಯುವಾಗ ಆಕ್ಸಿಜನ್ನದೊಡನೆ ಸಂಯೋಗವಾಗಿ ಕಾರ್ಬಾನಿಕ್ ಆಸಿಡ್‌ವೆಂಬ ವಾಯುವನ್ನು ಹುಟ್ಟಿಸುತ್ತದೆ. ಕಲ್ಲಿದ್ದಲಿಯು ಖನಿಗಳಲ್ಲಿ ಸಿಗುತ್ತದೆಂದು ಪದಾರ್ಥವಿಜ್ಞಾನಶಾಸ್ತ್ರದ ೧ನೇ ಪುಸ್ತಕವಲ್ಲಿ ಹೇಳಿದ್ದು ನಿಮಗೆ ನೆನಪಿರಬಹುದು. ಆದರೆ

ಈ ಒಡವೆಯು ಒಮ್ಮೊಮ್ಮೆ ಭೂಗರ್ಭದೊಳಗೆ ತೀರ ಮೇಲಿನ ತರಗಳಲ್ಲಿ ದೊರೆಯುತ್ತದೆಂತಲೂ ಒಮ್ಮೊಮ್ಮೆ ಬಹಳ ಕೆಳಗಿನ ತರಗಳಲ್ಲಿ ಸಿಕ್ಕುತ್ತದೆಂತಲೂ ಗೊತ್ತಾಗಿದೆ. ಕಲ್ಲಿದ್ದಲಿಯು ಹ್ಯಾಗೆ ಉಂಟಾಯಿತು? ಇದರ ಘಟಕಾವಯವಗಳು ಯಾವವು? ಪೃಥಕ್ಕರಣ ಮಾಡಲಾಗಿ ಇದರಿಂದ ಉತ್ಪನ್ನವಾಗುವ ಒಡವೆಗಳ್ಯಾವವು? ಇದರ ಉಪಯೋಗವೇನು? ಮುಂತಾದ ಸಂಗತಿಗಳನ್ನು ವಿಸ್ತಾರವಾಗಿ ಬಣ್ಣಿಸಬಹುದು.

೧. ಕಲ್ಲಿದ್ದಲಿಯು ಉಂಟಾದ ಕ್ರಮವೆಂತು?—ಪ್ರಾಚೀನ ಕಾಲದಲ್ಲಿ ತೇವಿನ ನೆಲದಲ್ಲಿ ದೊಡ್ಡ ದೊಡ್ಡ ಬನಗಳು ಬೆಳೆದವು. ಆ ವೃಕ್ಷಗಳು ಕಾಲಚಕ್ರಾನುಸಾರ ಜೀರ್ಣವಾಗಿ ಅಲ್ಲೇ ಬಿದ್ದವು. ಬಳಿಕ ಸೃಷ್ಟಿನೇಮದಂತೆ ನೀರೊಡನೆ ಹರಿದು ಬರುವ ರೇವೆಯಿಂದ ಮುಚ್ಚಲ್ಪಟ್ಟವು. ಈ ಕ್ರಮವು ಕೆಲ ಕಾಲ ಸಾಗಲಾಗಿ ಆ ಮರಗಳ ಮೇಲೆ ರೇವೆಯ ಎಷ್ಟೋ ತರಗಳು ಕೂಡ್ರುತ್ತ ನಡೆದದರಿಂದ ಅವುಗಳ ಮೇಲೆ ಬಿದ್ದ ಭಾರದಿಂದಲೂ ಭೂಗರ್ಭದೊಳಗಿನ ಶಕೆಯಿಂದಲೂ ಆ ಮರಗಳೆಲ್ಲ ಇದ್ದಲಿಯ ರೂಪವನ್ನು ಹೊಂದಿದವು. ಅದೇ ಕಲ್ಲಿದ್ದಲಿಯು ಈ ಸಂಗತಿಯು ತುಸು ಸೋಜಿಗವಾಗಿ ತೋರಿದರೂ ನಿಜವಿರುತ್ತದೆ. ಕಲ್ಲಿದ್ದಲಿಯ ಆಳವಾದ ಕಣಿಗಳಲ್ಲಿ ಇಳಿದು, ಆ ಕಣಿಯ ತಳವನ್ನೂ ಮೇಲ್ಭಾಗವನ್ನೂ ದಿಟ್ಟಿಸಿ ನೋಡಲಾಗಿ ಎಲೆ, ಟೊಂಗೆ ಮುಂತಾದ ಉದ್ಭಿಜ್ಜಗಳ ಕುರುಹುಗಳೂ, ಆಕೃತಿಗಳೂ ದೃಷ್ಟಿಗೋಚರವಾಗುವವು ಅಥವಾ ಕಲ್ಲಿದ್ದಲಿಯ ಒಂದು ಹೆಂಟೆಯನ್ನು ತಕ್ಕೊಂಡು ಅದರದೊಂದು ತೀರ ತಿಳುವಾದ ಪದರು ತೆಗೆದು ಲಕ್ಷಗೊಟ್ಟು ನೋಡಿದರೆ ಅದರೊಳಗೂ ವನಸ್ಪತಿಗಳ ಅಂಶವಿದ್ದದ್ದು ತೋರಿಬರುವದು.

೨. ಕಲ್ಲಿದ್ದಲಿಯ ಘಟಕಗಳ್ಯಾವವು? ಅಥವಾ ಕಲ್ಲಿದ್ದಲಿಯನ್ನು ಪೃಥಕ್ಕರಿಸಿದರೆ ಯಾವ ಮೂಲತತ್ವಗಳು ಉತ್ಪನ್ನವಾಗುವವು? ಕಲ್ಲಿದ್ದಲಿಯಲ್ಲಿ ಕಾರ್ಬೋನ್ನುಂಟು. ಈ ಇದ್ದಲಿಯನ್ನು ಸುಡಲಾಗಿ ಜ್ವಾಲೆಯು ಸ್ವಚ್ಛವಾಗಿದ್ದರೆ ಅದರಿಂದ

ಕಾರ್ಬಾನಿಕ್ ಆಸಿಡ್‌ವಾಯುವು ಉತ್ಪನ್ನವಾಗುತ್ತದೆಂತಲೂ ಉರಿಯು ಸ್ವಚ್ಛವಿರದೆ ಹೊಗೆಯಿಂದೊಡಗೂಡಿದ್ದರೆ ಅದರಿಂದ ಕಾರ್ಬೋನ್ನು ಅಥವಾ ಕಾಡಿಗೆಯು ಹುಟ್ಟುತ್ತದೆಂತಲೂ ತಿಳುಕೊಳ್ಳತಕ್ಕದ್ದು. ಆದರೆ ಇದರಲ್ಲಿ ಇವೆರಡೇ ಪದಾರ್ಥಗಳಲ್ಲ. ಇನ್ನೂ ಕೆಲವು ಪದಾರ್ಥಗಳುಂಟು. ಕಲ್ಲಿದ್ದಲಿಯೊಳಗೆ ಹೈದ್ರೋಜನ್ ವಾಯುವಿರುತ್ತದೆ.

(ಸಶೇಷ)

DEPARTMENTAL NOTICES.

ನೋಟೀಸುಗಳು

I

HIGH AND S. SCHOOL SCHOLARSHIP EXAMINATION.

ಹೈಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಯು

ಮೂರು ಹಾಯ್‌ಸ್ಕೂಲ ಸ್ಕಾಲರಶಿಪ್ಪುಗಳ ಸಂಬಂಧದ ಪರೀಕ್ಷೆಯು ಸೋಮವಾರ ತಾರೀಖು ೩ನೇ ಸಪ್ಟಂಬರ ಸನ್ ೧೯೦೦ ನೇ ಇಸವಿಯ ದಿವಸ ಮದ್ರಾಸ ಕಾಲಮಾನದ ೧೧ ಘಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿಯೊಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಸೆಂಟರುಗಳು ಯಾವವೆಂದರೆ–

೧ ಧಾರವಾಡ ಹೈಸ್ಕೂಲು.
೨. ಬೆಳಗಾವ ಹೈಸ್ಕೂಲು.
೩. ವಿಜಾಪೂರ ಹೈಸ್ಕೂಲು.
೪. ಕಾರವಾರ ಹೈಸ್ಕೂಲು.
೫. ಅಲಿಬಾಗ ಜಾನ್ ಎಲ್‌ಫಿನಸ್ಟನ್ ಮಿಶನ್ ಹೈಸ್ಕೂಲು

೨. ಈ ಮೂರು ಸ್ಕಾಲರಶಿಪ್ಪುಗಳಲ್ಲಿ ಒಂದು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವದು. ಒಂದು ಇಂಗ್ಲಿಷ ಅಭ್ಯಾಸದಲ್ಲಿ ಹಿಂದೆ ಉಳಿದ ಬೇನಿ ಇಸ್ರಾಯಲ್, ಕುಣಬಿ, ಕೂಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟ

ದ್ದು ಆ ವರ್ಗದಲ್ಲಿ ಉತ್ಕೃತನಾದವನಿಗೆ ದೊರೆಯುವದು. ಮೂರನೇದು ಮುಸಲ್ಮಾನ ಜಾತಿಯವರಿಗೆಂದು ಕಾದಿಟ್ಟದೆ. ಆ ಜಾತಿಯ ವಿದ್ಯಾರ್ಥಿಗಳಲ್ಲಿ ಉತ್ಕೃತನಾದವನಿಗೆ ದೊರೆಯುವದು.

೩. ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಗಳ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಧಾರವಾಡ, ವಿಜಾಪೂರ ಮತ್ತು ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯು ಮುಖಾಂತರವಾಗಿ, ಅಲಿಬಾಗ ಸೆಂಟರಿನಲ್ಲಿ ಮರಾಠಿ ಭಾಷೆಯು ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು

೪. ಪ್ರತಿ ಒಂದು ಸೆಂಟರಿನಲ್ಲಿ ಪರೀಕ್ಷೆಯು ಕಮಿಟಿಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು ಅಲಿಬಾಗ ಪರೀಕ್ಷಾ ಕಮಿಟಿಯ ಅಧ್ಯಕ್ಷರು ಅಲ್ಲಿಯ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೇಕ್ಟರರು; ಉಳಿದ ಕಡಿಯಲ್ಲೆಲ್ಲ ಅಲ್ಲಲ್ಲಿಯ ಹೈಸ್ಕೂಲಿನ ಹೆಡ್ಡ ಮಾಸ್ತರರು ಪರೀಕ್ಷಾ ಕಮಿಟಿಯ ಅಧ್ಯಕ್ಷರಿರುವರು. ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಗಿಯನ್ನು ಕುರಿತು ಮಾಡುವ ಅರ್ಜಿಗಳೆಲ್ಲ ಛಾಪೀ ನಮೂನೆಗಳ ಮೇಲೆ ಮಾಡತಕ್ಕದ್ದು. ಅರ್ಜಿಯ ನಮೂನೆಗಳು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡಿಗಾಗಲಿ, ನಮ್ಮ ಕಡಿಗಾಗಲಿ ಸಿಗುವವು ಅದಕ್ಕೆ ಕ್ರಯ ಬೀಳಲಿಕ್ಕಿಲ್ಲ ಉಮೇದವಾರರು ಅರ್ಜಿಗಳನ್ನು ೧ನೇ ಅಗಷ್ಟ ಸನ್ ೧೯೦೦ನೇ ಇಸವಿಯ ಒಳಗಾಗಿ ತಲಪುವಂತೆ ತಮ್ಮ ತಮ್ಮ ಜಿಲ್ಲೆಯ ಕಮಿಟಿ ಅಧ್ಯಕ್ಷರ ಕಡಿಗೆ ಕಳಿಸಿಕೊಡಬೇಕು ಆ ತಾರೀಖಿನ ನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

೫. ಉಮೇದವಾರರ ವಯಸ್ಸು, ಪರೀಕ್ಷಾ ವಿಷಯಗಳು, ಸ್ಕಾಲರಶಿಪ್ಪಿನ ರಕಮು ಮತ್ತು ಅವಧಿ ಪರೀಕ್ಷೆಯ ಫೀ ಮುಂತಾದ ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯು ೫ನೇ ಎಪ್ರೀಲ ಸನ್ ೧೮೮೮ನೇ ಇಸವಿಯ ಮುಂಬಯಿ ಸರಕಾರದ ಗ್ಯಾಝಿಟನ ೧ನೇ ಭಾಗದ ೩೦೪ನೇ ಪುಟದಲ್ಲಿ ಛಾಪಿಸಿದ ನೇಮಗಳಿಂದ ತಿಳಿಯುವದು. ಈ ನಿಯಮ

ಗಳು ಬಾಂಬೆ ಎಜ್ಯುಕೇಶನಲ್ ರಿಕಾರ್ಡದ ಸನ್ ೧೮೮೮ನೇ ಇಸವಿಯ ಜುಲೈ ತಿಂಗಳ ಸಂಚಿಕೆಯ ೧೬೬ನೇ ಪ್ರಟದಲ್ಲಿ ಛಾಪಿಸಿರುತ್ತವೆ ಈ ನಿಯಮಗಳ ನಕಲು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡಿಗಾಗಲಿ ನಮ್ಮ ಕಡಿಗಾಗಲಿ ಅರ್ಜಿ ಮಾಡಿದರೆ ಹಣದ ವೆಚ್ಚವಿಲ್ಲದೆ ಸಿಗುವವು.

ಧಾರವಾಡ
ತಾ|| ೧೪-೫-೧೯೦೦.

B. R. Sahasrabudhe,
ಎ. ಇ. ದಕ್ಷಿಣಭಾಗ.

II

MIDDLE SCHOOL SCHOLARSHIP EXAMINATION.

ಮಿಡಲ್ ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಯು.

ಆರು ಮಿಡಲ್ ಸ್ಕೂಲ ಸ್ಕಾಲರಶಿಪ್ಪುಗಳ ಸಂಬಂಧದ ಪರೀಕ್ಷೆಯು ಬುಧವಾರ ತಾರೀಖು ೫ನೇ ಸಪ್ಟಂಬರ ಸನ್ ೧೯೦೦ನೇ ಇಸವಿಯ ದಿವಸ ಮದ್ರಾಸ ಕಾಲಮಾನದ ೧೧ ಘಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿ ಒಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಸೆಂಟರುಗಳು ಯಾವವೆಂದರೆ—

೧. ಧಾರವಾಡ ಹೈಸ್ಕೂಲು.
೨. ಬೆಳಗಾವ ಹೈಸ್ಕೂಲು.
೩. ವಿಜಾಪೂರ ಹೈಸ್ಕೂಲು.
೪. ಕಾರವಾರ ಹೈಸ್ಕೂಲು
೫. ಅಲಿಬಾಗ ಜಾನ್ ಎಲ್‌ಫಿನ್‌ಸ್ಟನ್ ಮಿಶನ್ ಹೈಸ್ಕೂಲು

೨. ಈ ಆರು ಸ್ಕಾಲರಶಿಪ್ಪುಗಳಲ್ಲಿ ಎರಡು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಶಿಗುವವು. ಎರಡು ಇಂಗ್ಲಿಷ ಅಭ್ಯಾಸದಲ್ಲಿ ಹಿಂದುಳಿದ ಜೇನಿ ಇಸ್ರಾಯುಲ್, ಕುಣಬಿ, ಕೋಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟಂಥವು ಆ ವರ್ಗದಲ್ಲಿ ಉತ್ತೀರ್ಣರಾದವರಿಗೆ ಶಿಗುವವು. ಎರಡು ಮುಸಲ್ಮಾನ ಜಾತಿಯವರಿಗಾಗಿ ಕಾದಿಟ್ಟಂಥವು ಆ ಜಾತಿಯ ಉತ್ಕೃತನಾದ ವಿದ್ಯಾರ್ಥಿಗೆ ದೊರೆಯುವವು.

ಈ ಒಡವೆಯು ಒಮ್ಮೊಮ್ಮೆ ಭೂಗರ್ಭದೊಳಗೆ ತೀರ ಮೇಲಿನ ತೆರಗಳಲ್ಲಿ ದೊರೆಯುತ್ತದೆಂತಲೂ ಒಮ್ಮೊಮ್ಮೆ ಬಹಳ ಕೆಳಗಿನ ತರಗಳಲ್ಲಿ ಸಿಕ್ಕುತ್ತದೆಂತಲೂ ಗೊತ್ತಾಗಿದೆ. ಕಲ್ಲಿದ್ದಲಿಯು ಹ್ಯಾಗೆ ಉಂಟಾಯಿತು? ಇದರ ಘಟಕಾವಯವಗಳು ಯಾವವು? ಪೃಥಕ್ಕರಣ ಮಾಡಲಾಗಿ ಇದರಿಂದ ಉತ್ಪನ್ನವಾಗುವ ಒಡವೆಗಳ್ಯಾವವು? ಇದರ ಉಪಯೋಗವೇನು? ಮುಂತಾದ ಸಂಗತಿಗಳನ್ನು ವಿಸ್ತಾರವಾಗಿ ಬಣ್ಣಿಸಬಹುದು.

೧. ಕಲ್ಲಿದ್ದಲಿಯು ಉಂಟಾದ ಕ್ರಮವೆಂತು?-ಪ್ರಾಚೀನ ಕಾಲದಲ್ಲಿ ತೇವಿನ ನೆಲದಲ್ಲಿ ದೊಡ್ಡ ದೊಡ್ಡ ಬನಗಳು ಬೆಳದವು. ಆ ವೃಕ್ಷಗಳು ಕಾಲಚಕ್ರಾನುಸಾರ ಜೀರ್ಣವಾಗಿ ಅಲ್ಲೇ ಬಿದ್ದವು. ಬಳಿಕ ಸೃಷ್ಟಿನೇಮದಂತೆ ನೀರೊಡನೆ ಹರಿದು ಬರುವ ರೇವೆಯಿಂದ ಮುಚ್ಚಲ್ಪಟ್ಟವು ಈ ಕ್ರಮವು ಕೆಲ ಕಾಲ ಸಾಗಲಾಗಿ ಆ ಮರಗಳ ಮೇಲೆ ರೇವೆಯು ಎಷ್ಟೋ ತರಗಳು ಕೂಡ್ರುತ್ತ ನಡೆದದರಿಂದ ಅವುಗಳ ಮೇಲೆ ಬಿದ್ದ ಭಾರದಿಂದಲೂ ಭೂಗರ್ಭದೊಳಗಿನ ಶಕೆಯಿಂದಲೂ ಆ ಮರಗಳೆಲ್ಲ ಇದ್ದಲಿಯ ರೂಪವನ್ನು ಹೊಂದಿದವು. ಅದೇ ಕಲ್ಲಿದ್ದಲಿಯು ಈ ಸಂಗತಿಯು ತುಸು ಸೋಜಿಗವಾಗಿ ತೋರಿದರೂ ನಿಜವಿರುತ್ತದೆ. ಕಲ್ಲಿದ್ದಲಿಯ ಆಳವಾದ ಕಣಿಗಳಲ್ಲಿ ಇಳಿದು, ಆ ಕಣಿಯ ತಳವನ್ನೂ ಮೇಲ್ಭಾಗವನ್ನೂ ದಿಟ್ಟಿಸಿ ನೋಡಲಾಗಿ ಎಲೆ, ಟೊಂಗೆ ಮುಂತಾದ ಉದ್ಭಿಜ್ಜಗಳ ಕುರುಹುಗಳೂ, ಆಕೃತಿಗಳೂ ದೃಷ್ಟಿಗೋಚರವಾಗುವವು ಅಥವಾ ಕಲ್ಲಿದ್ದಲಿಯ ಒಂದು ಹೆಂಟೆಯನ್ನು ತಕ್ಕೊಂಡು ಅದರದೊಂದು ತೀರ ತಿಳುವಾದ ಪದರು ತೆಗೆದು ಲಕ್ಷಗೊಟ್ಟು ನೋಡಿದರೆ ಅದರೊಳಗೂ ವನಸ್ಪತಿಗಳ ಅಂಶವಿದ್ದದ್ದು ತೋರಿಬರುವದು.

೨. ಕಲ್ಲಿದ್ದಲಿಯು ಘಟಕಗಳ್ಯಾವವು? ಅಥವಾ ಕಲ್ಲಿದ್ದಲಿಯನ್ನು ಪೃಥಕ್ಕರಿಸಿದರೆ ಯಾವ ಮೂಲತತ್ವಗಳು ಉತ್ಪನ್ನವಾಗುವವು? ಕಲ್ಲಿದ್ದಲಿಯಲ್ಲಿ ಕಾರ್ಬೋನನ್ನುಂಟು. ಈ ಇದ್ದಲಿಯನ್ನು ಸುಡಲಾಗಿ ಜ್ವಾಲೆಯು ಸ್ವಚ್ಛವಾಗಿದ್ದರೆ ಅದರಿಂದ

ಕಾರ್ಬೋನಿಕ್ ಆಸಿಡ್‌ವಾಯುವು ಉತ್ಪನ್ನವಾಗುತ್ತದೆಂತಲೂ ಉರಿಯು ಸ್ವಚ್ಛವಿರದೆ ಹೊಗೆಯಿಂದೊಡಗೂಡಿದ್ದರೆ ಅದರಿಂದ ಕಾರ್ಬೋನ್ನು ಅಥವಾ ಕಾಡಿಗೆಯು ಹುಟ್ಟುತ್ತದೆಂತಲೂ ತಿಳುಕೊಳ್ಳತಕ್ಕದ್ದು. ಆದರೆ ಇದರಲ್ಲಿ ಇವೆರಡೇ ಪದಾರ್ಥಗಳಲ್ಲ. ಇನ್ನೂ ಕೆಲವು ಪದಾರ್ಥಗಳುಂಟು. ಕಲ್ಲಿದ್ದಲಿಯೊಳಗೆ ಹೈದ್ರೋಜನ್ ವಾಯುವಿರುತ್ತದೆ.

(ಸಶೇಷ)

DEPARTMENTAL NOTICES.

ನೋಟೀಸುಗಳು

I

HIGH AND S. SCHOOL SCHOLARSHIP EXAMINATION.

ಹೈಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಯು

ಮೂರು ಹಾಯ್‌ಸ್ಕೂಲ ಸ್ಕಾಲರಶಿಪ್ಪುಗಳ ಸಂಬಂಧದ ಪರೀಕ್ಷೆಯು ಸೋಮವಾರ ತಾರೀಖು ೩ ನೇ ಸಪ್ಟಂಬರ ಸನ್ ೧೯೦೦ ನೇ ಇಸವಿಯ ದಿವಸ ಮದ್ರಾಸ ಕಾಲಮಾನದ ೧೧ ಘಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿಯೊಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಸೆಂಟರುಗಳು ಯಾವವೆಂದರೆ–

೧ ಧಾರವಾಡ ಹೈಸ್ಕೂಲು.
೨. ಬೆಳಗಾವ ಹೈಸ್ಕೂಲು.
೩. ವಿಜಾಪೂರ ಹೈಸ್ಕೂಲು.
೪. ಕಾರವಾರ ಹೈಸ್ಕೂಲು.
೫. ಅಲಿಬಾಗ ಜಾನ್ ಎಲ್‌ಫಿನಸ್ಟನ್ ಮಿಶನ್ ಹೈಸ್ಕೂಲು

೨. ಈ ಮೂರು ಸ್ಕಾಲರಶಿಪ್ಪುಗಳಲ್ಲಿ ಒಂದು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಸಿಗುವದು. ಒಂದು ಇಂಗ್ಲಿಷ ಅಭ್ಯಾಸದಲ್ಲಿ ಹಿಂದೆ ಉಳಿದ ಬೇನಿ ಇಸ್ರಾಯಲ್, ಕುಣಬಿ, ಕೋಲಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟ

ದ್ದು ಆ ವರ್ಗದಲ್ಲಿ ಉತ್ಕೃತನಾದವನಿಗೆ ದೊರೆಯುವದು. ಮೂರನೇದು ಮುಸಲ್ಮಾನ ಜಾತಿಯವರಿಗೆಂದು ಕಾದಿಟ್ಟದೆ. ಆ ಜಾತಿಯ ವಿದ್ಯಾರ್ಥಿಗಳಲ್ಲಿ ಉತ್ಕೃತನಾದವನಿಗೆ ದೊರೆಯುವದು.

೩. ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಗಳ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಧಾರವಾಡ, ವಿಜಾಪೂರ ಮತ್ತು ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯ ಮುಖಾಂತರವಾಗಿ, ಅಲಿಬಾಗ ಸೆಂಟರಿನಲ್ಲಿ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು

೪. ಪ್ರತಿ ಒಂದು ಸೆಂಟರಿನಲ್ಲಿ ಪರೀಕ್ಷೆಯು ಕಮಿಟಿಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು ಅಲಿಬಾಗ ಪರೀಕ್ಷಾ ಕಮಿಟಿಯ ಅಧ್ಯಕ್ಷರು ಅಲ್ಲಿಯ ಡೆಪ್ಯುಟಿ ಎಜ್ಯುಕೇಶನಲ್ ಇನಸ್ಪೇಕ್ಟರರು; ಉಳಿದ ಕಡೆಯಲ್ಲೆಲ್ಲ ಅಲ್ಲಲ್ಲಿಯ ಹೈಸ್ಕೂಲಿನ ಹೆಡ್ಡ ಮಾಸ್ತರರು ಪರೀಕ್ಷಾ ಕಮಿಟಿಯ ಅಧ್ಯಕ್ಷರಿರುವರು. ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಗಿಯನ್ನು ಕುರಿತು ಮಾಡುವ ಅರ್ಜಿಗಳೆಲ್ಲ ಛಾಪೀ ನಮೂನೆಗಳ ಮೇಲೆ ಮಾಡತಕ್ಕದ್ದು. ಅರ್ಜಿಯ ನಮೂನೆಗಳು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡೆಗಾಗಲಿ, ನಮ್ಮ ಕಡೆಗಾಗಲಿ ಸಿಗುವವು ಅದಕ್ಕೆ ಕ್ರಯ ಬೀಳಲಿಕ್ಕಿಲ್ಲ ಉಮೇದವಾರರು ಅರ್ಜಿಗಳನ್ನು ೧ನೇ ಅಗಸ್ಟ ಸನ್ ೧೯೦೦ನೇ ಇಸವಿಯ ಒಳಗಾಗಿ ತಲುಪುವಂತೆ ತಮ್ಮ ತಮ್ಮ ಜಿಲ್ಲೆಯ ಕಮಿಟಿ ಅಧ್ಯಕ್ಷರ ಕಡೆಗೆ ಕಳಿಸಿಕೊಡಬೇಕು ಆ ತಾರೀಖಿನ ನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

೫. ಉಮೇದವಾರರ ವಯಸ್ಸು, ಪರೀಕ್ಷಾ ವಿಷಯಗಳು, ಸ್ಕಾಲರಶಿಪ್ಪಿನ ರಕಮು ಮತ್ತು ಅವಧಿ ಪರೀಕ್ಷೆಯ ಫೀ ಮುಂತಾದ ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯು ೫ನೇ ಎಪ್ರೀಲ ಸನ್ ೧೮೮೮ನೇ ಇಸವಿಯ ಮುಂಬಯಿ ಸರಕಾರದ ಗ್ಯಾಝೆಟಿನ ೧ನೇ ಭಾಗದ ೩-೪ನೇ ಪುಟದಲ್ಲಿ ಛಾಪಿಸಿದ ನೇಮಗಳಿಂದ ತಿಳಿಯುವದು. ಈ ನಿಯಮ

ಗಳು ಬಾಂಬೆ ಎಜ್ಯುಕೇಶನಲ್ ರಿಕಾರ್ಡದ ಸನ್ ೧೮೮೮ ನೇ ಇಸವಿಯ ಜುಲೈ ತಿಂಗಳ ಸಂಚಿಕೆಯ ೧೬೬ ನೇ ಪುಟದಲ್ಲಿ ಛಾಪಿಸಿರುತ್ತವೆ ಈ ನಿಯಮಗಳ ನಕಲು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡಿಗಾಗಲಿ ನಮ್ಮ ಕಡಿಗಾಗಲಿ ಅರ್ಜಿ ಮಾಡಿದರೆ ಹಣದ ವೆಚ್ಚವಿಲ್ಲದೆ ಸಿಗುವವು.

ಧಾರವಾಡ ತಾ॥ ೧೪-೫-೧೯೦೦.	B. R. Sahasrabudhe, ಎ. ಇ. ದಕ್ಷಿಣಭಾಗ.

II

MIDDLE SCHOOL SCHOLARSHIP EXAMINATION.

ಮಿಡಲ್ ಸ್ಕೂಲ ಸ್ಕಾಲರಶಿಪ್ಪ ಪರೀಕ್ಷೆಯು.

ಆರು ಮಿಡಲ್ ಸ್ಕೂಲ ಸ್ಕಾಲರಶಿಪ್ಪುಗಳ ಸಂಬಂಧದ ಪರೀಕ್ಷೆಯು ಬುಧವಾರ ತಾರೀಖು ೫ ನೇ ಸಪ್ಟಂಬರ ಸನ್ ೧೯೦೦ ನೇ ಇಸವಿಯ ದಿವಸ ಮದ್ರಾಸ ಕಾಲಮಾನದ ೧೧ ಘಂಟೆಗೆ ಸರಿಯಾಗಿ ಕೆಳಗೆ ನಮೂದಿಸಿದ ಪ್ರತಿ ಒಂದು ಸೆಂಟರಿನಲ್ಲಿ ಪ್ರಾರಂಭವಾಗುವದು. ಸೆಂಟರುಗಳು ಯಾವವೆಂದರೆ—

೧ ಧಾರವಾಡ ಹೈಸ್ಕೂಲು.
೨. ಬೆಳಗಾವ ಹೈಸ್ಕೂಲು.
೩. ವಿಜಾಪೂರ ಹೈಸ್ಕೂಲು.
೪. ಕಾರವಾರ ಹೈಸ್ಕೂಲು
೫. ಅಲಿಬಾಗ ಜಾನ್ ಎಲ್‌ಫಿನ್‌ಸ್ಟನ್ ಮಿಶನ್ ಹೈಸ್ಕೂಲು

೨. ಈ ಆರು ಸ್ಕಾಲರಶಿಪ್ಪುಗಳಲ್ಲಿ ಎರಡು ಎಲ್ಲ ಉಮೇದವಾರರಲ್ಲಿ ಮೇಲಾದವರಿಗೆ ಶಿಗುವವು. ಎರಡು ಇಂಗ್ಲಿಷ ಅಭ್ಯಾಸದಲ್ಲಿ ಹಿಂದುಳಿದ ಜೇನಿ ಇಸ್ರಾಯಲ್, ಕುಣಬಿ, ಕೋಳಿಕಾರ ಮುಂತಾದ ಜಾತಿಯವರಿಗಾಗಿ ಕಾದಿಟ್ಟಂಥವು ಆ ವರ್ಗದಲ್ಲಿ ಉತ್ತೀರ್ಣರಾದವರಿಗೆ ಶಿಗುವವು. ಎರಡು ಮುಸಲ್ಮಾನ ಜಾತಿಯವರಿಗಾಗಿ ಕಾದಿಟ್ಟಂಥವು ಆ ಜಾತಿಯ ಉತ್ಕೃತನಾದ ವಿದ್ಯಾರ್ಥಿಗೆ ದೊರೆಯುವವು.

೩. ಬೆಳಗಾವ ಸೆಂಟರಿನಲ್ಲಿ ಪರೀಕ್ಷೆಯು ಕನ್ನಡ ಹಾಗೂ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು. ಧಾರವಾಡ, ವಿಜಾಪೂರ, ಮತ್ತು ಕಾರವಾರ ಸೆಂಟರುಗಳಲ್ಲಿ ಕನ್ನಡ ಭಾಷೆಯ ಮುಖಾಂತರವಾಗಿ, ಅಲಿಬಾಗ ಸೆಂಟರಿನಲ್ಲಿ ಮರಾಠಿ ಭಾಷೆಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು.

೪. ಪ್ರತಿ ಒಂದು ಸೆಂಟರಿನಲ್ಲಿ ಪರೀಕ್ಷೆಯು ಕಮಿಟಿಯ ಮುಖಾಂತರವಾಗಿ ತೆಗೆದುಕೊಳ್ಳಲ್ಪಡುವದು ಅಲಿಬಾಗ ಪರೀಕ್ಷಾ ಕಮಿಟಿಯ ಅಧ್ಯಕ್ಷರು ಅಲ್ಲಿಯ ಡೆಪೂಟಿ ಎಜ್ಯುಕೇಶನಲ್ ಇನಸ್ಪೇಕ್ಟರರು, ಉಳಿದ ಕಡೆಯಲ್ಲೆಲ್ಲ ಅಲ್ಲಲ್ಲಿಯ ಹೈಸ್ಕೂಲಿನ ಹೆಡ್ಡ ಮಾಸ್ತರರು ಪರೀಕ್ಷಾ ಕಮಿಟಿಯ ಅಧ್ಯಕ್ಷರಿರುವರು. ಈ ಪರೀಕ್ಷೆಗೆ ಕೂಡ್ರಲಿಕ್ಕೆ ಪರವಾನಗಿಯನ್ನು ಕುರಿತು ಮಾಡುವ ಅರ್ಜಿಗಳನ್ನೆಲ್ಲ ಛಾಪಿಸಿದ ನಮೂನೆಗಳ ಮೇಲೆ ಮಾಡತಕ್ಕದ್ದು. ಅರ್ಜಿಯ ನಮೂನೆಗಳು ಪರೀಕ್ಷಾ ಕಮಿಟಿಯ ಅಧ್ಯಕ್ಷರ ಕಡಿಗಾಗಲಿ, ನಮ್ಮ ಕಡಿಗಾಗಲಿ ಸಿಗುವವು. ಅವಕ್ಕೆ ಕ್ರಯ ಬೀಳುವದಿಲ್ಲ. ಉಮೇದವಾರರು ಅರ್ಜಿಗಳನ್ನು ೧ನೇ ಅಗಸ್ಟ ಸನ್ ೧೯೦೦ನೇ ಇಸವಿಯ ಒಳಗಾಗಿ ತಮ್ಮ ತಮ್ಮ ಜಿಲ್ಹೆಯ ಅಧ್ಯಕ್ಷರಿಗೆ ತಲಪುವಂತೆ ಕಳಿಸಿಕೊಡಬೇಕು. ಆ ತಾರೀಖಿನ ನಂತರ ಬಂದ ಅರ್ಜಿಗಳು ಹಿಡಿಯಲ್ಪಡಲಿಕ್ಕಿಲ್ಲ.

೫. ಉಮೇದವಾರರ ವಯಸ್ಸು, ಪರೀಕ್ಷಾವಿಷಯಗಳು, ಸ್ಕಾಲರಶಿಪ್ಪಿನ ರಕಮು, ಅವಧಿ ಮತ್ತು ಪರೀಕ್ಷಾ ಫೀ ಮುಂತಾದ ಸಂಗತಿಗಳ ಸಂಬಂಧದ ಹೆಚ್ಚಿನ ಮಾಹಿತಿಯು ೧೩ನೇ ಮೇ ಸನ್ ೧೮೮೮ನೇ ಇಸವಿಯ ಮುಂಬಯಿ ಸರಕಾರದ ಗ್ಯಾಝಿಟಿನ ೧ನೇ ಭಾಗದ ೪೩೧ನೇ ಪುಟದಲ್ಲಿ ಛಾಪಿಸಿದ ನೇಮಗಳಿಂದ ತಿಳಿಯುವದು. ಈ ನಿಯಮಗಳು ಬಾಂಬೆ ಎಜ್ಯೂಕೇಶನಲ್ ರಿಕಾರ್ಡದ ೧೮೮೮ನೇ ಇಸವಿಯ ಜುಲೈ ತಿಂಗಳ ಸಂಚಿಕೆಯ ೧೬೯ನೇ ಪುಟದಲ್ಲಿಯೂ ಛಾಪಿಸಲ್ಪಟ್ಟಿರುತ್ತದೆ. ಈ ನಿಯಮಗಳ ನಕಲು ಪರೀಕ್ಷಾ

ಕಮೀಟಿಯ ಅಧ್ಯಕ್ಷರ ಕಡಿಗಾಗಲಿ ನಮ್ಮ ಕಡಿಗಾಗಲಿ ಅರ್ಜ ಮಾಡಿದರೆ ಹಣ ಬೀಳದೆ ಸಿಗುವವು.

ಧಾರವಾಡ. } B. R. Sahasrabudhe,
ತಾ॥ ೧೪-೫-೧೯೦೦. } ಎ. ಇ. ದಕ್ಷಿಣಭಾಗ.

III

P. S. C. EXAMINATION.

ಮುಲಕೀ ಪರೀಕ್ಷೆಯು.

ಈ ನೋಟೀಸಿನಿಂದ ಪ್ರಸಿದ್ಧಿಸಲ್ಪಡುವದೇನಂದರೆ ಸನ್ ೧೮೯೫ ನೇ ಇಸವಿಯ ಜಾನ್ಯುಆರಿ ೧೭ ನೇ ತಾರೀಖಿಗೆ ಮತ್ತು ಸನ್ ೧೮೯೮ ನೇ ಇಸವಿಯ ಜುಲೈ ೧೪ ನೇ ತಾರೀಖಿಗೆ ಛಾಪಿಸಲ್ಪಟ್ಟ ಮುಂಬಯಿ ಗವ್ಹರ್ನಮೆಂಟ ಗ್ಯಾಝೆಟಿನ ೧ ನೇ ಭಾಗದಲ್ಲಿ ಪ್ರಸಿದ್ಧಿಸಲ್ಪಟ್ಟ ಹೊಸ ನಿಯಮಗಳ ೨ ನೇ ಪರಿಶಿಷ್ಟದ ಅ, ಬ ಶೆಡ್ಯೂಲಗಳಿಗೆ ಸರಿಯಾಗಿ ಸನ್ ೧೯೦೦—೧೯೦೧ ನೇ ಇಸವಿಯ ಪಬ್ಲಿಕ ಸರ್ವ್ಹೀಸ ಸರ್ಟಿಫಿಕೇಟು ಪರೀಕ್ಷೆಗಳು ಸಪ್ಟಂಬರ ೧೦ ನೇ ತಾರೀಖು ಸೋಮವಾರ ಮತ್ತು ತದುತ್ತರ ದಿವಸಗಳಲ್ಲಿ ಧಾರವಾಡದಲ್ಲಿ ತೆಗೆದುಕೊಳ್ಳಲ್ಪಡುವವು.

೨. ಮರಾಠಿ ಭಾಷೆಯಲ್ಲಿ ಪರೀಕ್ಷಿಸಲಪೇಕ್ಷಿಸುವ ಉಮೇದವಾರರು ಬೆಳಗಾವಿ ಶೆಂಟರಿನಲ್ಲಿ ಆಗುವ ಪರೀಕ್ಷೆಗೆ ಕೂಡ್ರಬಹುದು

೩. ಪರೀಕ್ಷೆಗೆ ಕೂಡ್ರತಕ್ಕವರು ತಮ್ಮ ಅರ್ಜಿಗಳನ್ನು ತಾ॥ ೧ ನೇ ಅಗಸ್ಟ ೧೯೦೧ ನೇ ಇಸವಿಯ ದಿವಸ ಇಲ್ಲವೆ ತತ್ಪೂರ್ವದಲ್ಲಿ ತಲಪುವಂತೆ ಪರೀಕ್ಷಾ ಕಮೀಟಿಯ ಪ್ರೆಸಿಡೆಂಟರಾದ ಧಾರವಾಡ ಹಾಯಸ್ಕೂಲ ಹೆಡ್ಡ ಮಾಸ್ತರರ ಕಡೆಗೆ ಕಳಿಸಬೇಕು. ಪ್ರತಿಒಂದು ಅರ್ಜಿಯಲ್ಲಿ ವಿದ್ಯಾರ್ಥಿಯ ಪೂರ್ಣ ಹೆಸರೂ ಅವನು ಯಾವದೊಂದು ಶಾಲೆಯಲ್ಲಿ ಕಲಿತಿದ್ದರೆ ಆ ಶಾಲೆಯ ಹೆಸರೂ ಇರತಕ್ಕದ್ದು. ಮತ್ತು ವಿದ್ಯಾರ್ಥಿಯು ತಾನು ಕೂಡ್ರಲಿಚ್ಛಿಸುವ ಪರೀಕ್ಷೆಯ ತರಗತಿಯನ್ನು (ಗ್ರೇಡು) ಅದರಲ್ಲಿ ತೋರಿಸಬೇಕು.

೪. ಪ್ರತಿಯೊಬ್ಬ ವಿದ್ಯಾರ್ಥಿಯು ತಾನು ಇರುವ ಜಿಲ್ಹೆಯಲ್ಲಿ ಆಗುವ ಪರೀಕ್ಷೆಗೆ ಕೂಡ್ರಬೇಕು; ಮತ್ತು ತಾನು ಕಳೆದ ಆರು ತಿಂಗಳದಿಂದ ಆ ಜಿಲ್ಹೆಯಲ್ಲಿದ್ದನೆಂಬ ಬಗ್ಗೆ ತಾನು ಇರುವ ಊರ ಪಾಟೀಲನದಾಗಲಿ, ಶಾಲೆಯ ಮಾಸ್ತರನದಾಗಲಿ ಸರಟಿಫಿಕೇಟನ್ನು ಹಾಜರ ಪಡಿಸಬೇಕು.

೫. ವಿದ್ಯಾರ್ಥಿಗಳ ವಯಸ್ಸು, ಪರೀಕ್ಷೆಯ ಫೀ ಪರೀಕ್ಷೆಯ ವಿಷಯ ಮುಂತಾದ ಮಾಹಿತಿಯು ಸನ್ ೧೮೯೫ ನೇ ಇಸವಿಯ ಜಾನ್ಯೂಅರಿ ೧೭ ನೇ ತಾರೀಖಿಗೆ ಮತ್ತು ಸನ್ ೧೮೯೮ ನೇ ಇಸವಿಯ ಜುಲೈ ೧೪ ನೇ ತಾರೀಖಿಗೆ ಛಾಪಿಸಲ್ಪಟ್ಟ ಮುಂಬಯಿ ಗವ್ಹರ್ನಮೆಂಟ ಗ್ಯಾಝೀಟಿನ ೧ ನೇ ಭಾಗದಲ್ಲಿ ಛಾಪಿಸಲ್ಪಟ್ಟದೆ.

೬. ಈ ವರ್ಷ ಆಗುವ ಪರೀಕ್ಷೆಗಳಿಗಾಗಿ ನೇಮಿಸಿದ ಪುಸ್ತಕಗಳು ಸನ್ ೧೮೯೯ ನೇ ಇಸವಿಯ ನೊವ್ಹೆಂಬರ ೩೦ ನೇ ತಾರೀಖಿನ ಮುಂಬಯಿ ಗವ್ಹರ್ನಮೆಂಟ ಗ್ಯಾಝೀಟಿನ ೨ ನೇ ಭಾಗದಲ್ಲಿ ೨೦೪೩ ನೇ ಪುಟದಲ್ಲಿ ಪ್ರಸಿದ್ಧಿಸಲ್ಪಟ್ಟವೆ.

ಧಾರವಾಡ. | **W Doderet,**
ಕಾ॥ ೧೬-೫-೧೯೦೦. | ಕಲೆಕ್ಟರ ಧಾರವಾಡ.

ಟೀಪು—ಇದೇ ಮೇರೆಗೆ ವಿಜಾಪೂರ, ಬೆಳಗಾವ, ಕಾರವಾರ ಜಿಲ್ಲೆಗಳ ಕಲೆಕ್ಟರರಾವರೂ ನೋಟೀಸುಗಳನ್ನು ಪ್ರಸಿದ್ಧಿಸಿರುವರು. ಎಲ್ಲ ಕಡೆಯಲ್ಲಿ ಆಗುವ ಪರೀಕ್ಷೆಗಳ ತಾರೀಖು ಒಂದೇ ಎಂಬ ಎಲ್ಲರಿಗೂ ಗೊತ್ತೇ ಇರುವದು. ವಿಜಾಪುರ ಜಿಲ್ಲೆಯಲ್ಲಿ ವಾ· ವರು. ಮರಾಠಿಯಲ್ಲಿ ಪರೀಕ್ಷೆ ಕೊಡಲಿಕ್ಕೆ ಅಪೇಕ್ಷಿಸಿದರೆ ಅವ. ಮೆ. ಎಜ್ಯುಕೇಶನಲ್ ಇ ದ ಭಾಗ ಇವರ ಪರವಾನಗಿಯನ್ನು ಪಡಕೊಂಡು ಬೆಳಗಾವಿ ಇಲ್ಲವೆ ಸೊಲ್ಲಾಪುರ ಸೆಂಟರುಗಳಲ್ಲಾಗುವ ಪರೀಕ್ಷೆಗೆ ಕೂಡ್ರಬಹುದು ವ್ಯಾ. ಶಾ. ಪ.)

1V

ಈ ನೋಟೀಸಿನಿಂದ ಎಲ್ಲರಿಗೂ ತಿಳಿಸುವದೇನಂದರೆ:—ರಾಮಚಂದ್ರ ಹಣಮಂತ ದೇಶಪಾಂಡೆ ಇವರು ರಚಿಸಿದ "ಹೈದರಅಲ್ಲಿ ಟೀಪೂಸುಲ್ತಾನ," "ನಾನಾಫಡಣವೀಸ" ಮತ್ತು "ನೂರಜಹಾನ" ಎಂಬ ೩ ಪುಸ್ತಕಗಳನ್ನು ಮೆ॥ ಡಾಯರೆಕ್ಟರ ಸಾಹೇಬ ಬಹದ್ದೂರರವರು ಇನಾಮಿಗಾಗಿ ಮಂಜೂರ ಮಾಡಿದ್ದಾರೆ:

ಧಾರವಾಡ ಟ್ರೇ. ಕಾಲೇಜ, } S. K. Rodda,
ತಾ. ೧೬-೫-೧೯೦೦. } ಪಿನ್ಸಿಪಾಲ.

V

ಯಾವತ್ತು ಜನರಿಗೆ ತಿಳಿಸುವದೇನಂದರೆ:—ಕರ್ನಾಟಕ ವಿದ್ಯಾವರ್ಧಕ ಸಂಘ (ಧಾರವಾಡ).ದ ಆಶ್ರಯದ ಕೆಳಿಗೆ ಮುದ್ರಿಸಿ ತಯಾರಾದ ಹಿತೋಪದೇಶದ ೨ ನೇ ಭಾಗವನು ಮೆ॥ ಡಾಯರೆಕ್ಟರ ಸಾಹೇಬ ಬಹದ್ದೂರರವರು ಲಾಯಬ್ರರಿಗಾಗಿ ಮಂಜೂರ ಮಾಡಿದ್ದಾರೆ.

ಧಾರವಾಡ ಟ್ರೇ ಕಾಲೇಜ, } S. K Rodda,
ತಾ॥ ೨೩-೫-೧೯೦೦. } ಪ್ರಿನ್ಸಿಪಾಲ,

CORRESPONDENCE.

ಪತ್ರವ್ಯವಹಾರ

ಮೆ. ಕಾವಶಾ ಸಾಹೇಬ ಅ ಕಲೆಕ್ಟರ ಬಿಜಾಪುರ ಇವರು ಮುಸಬಿನಹಾಳ ಶಾಲೆಯನ್ನು ನೋಡಹೋಗಿದ್ದರು, ಆಗ ೬ ನೇ ಇಯತ್ತೆಯಲ್ಲಿ ಅಭ್ಯಾಸ ಮಾಡುತ್ತಿದ್ದ ಹೆಣ್ಣು ಮಕ್ಕಳನ್ನು ಕಂಡು ಸಂತಸಪಟ್ಟು ವ್ಹಿ. ಬುಕ್ಕಿನಲ್ಲಿ ಮಾಸ್ತರರನ್ನು ತಾರೀಫ ಮಾಡುವ ಲೇಖವನ್ನು ಬರೆದದ್ದಲ್ಲದೆ, ಸ್ತ್ರೀ ಶಿಕ್ಷಣಕ್ಕೆ ಉತ್ತೇಜನ ದೊರೆಯಬೇಕೆಂಬ ಉದ್ದೇಶದಿಂದ ಬಾಗೇವಾಡೀ ಮಾಮಲೇದಾರ ಸಾ. ರವರ ಮುಖಾಂತರ ಹತ್ತು ರೂ. ಗಳನ್ನು ಶೀರಿ ಕುಪ್ಪಸ ಕೊಂಡ ಕೊಡಲಿಕ್ಕೆಂದು

ಕಳಿಸಿದರು. ಅದರಂತೆ ರಾ. ಸಾ. ರವರು ಸಾಲಿಯಲ್ಲಿ ಸಭೆ ಗೂಡಿಸಿ ಊರವರಿಂದ ಬಂದ ಚಂದಾ ಹಣದಿಂದ ಮತ್ತೆ ಕೆಲವು ಖಣಗಳನ್ನು ಕೊಂಡು ವಿದ್ಯಾರ್ಥಿನಿಯರಿಗೆ ಇನಾಮು ಕೊಟ್ಟರು. ಇದು ಮುಲಖೀ ಅಮಲದಾರರಿಗೆ ಭೂಷಣಾವಹವದ್ದು.

೨

ಕೋಳಿವಾಡ ಸಾಲಿಯಲ್ಲಿ ಶ್ರೀಮಚ್ಚಕ್ರವರ್ತಿನಿಯವರ ಜನ್ಮತಿಥಿಯ ಸಮಾರಂಭವನ್ನು ಊರ ಗ್ರಾಮಸ್ತರೂ ಇತರ ಸಭ್ಯಗ್ರಹಸ್ಥರೂ, ಮಾಸ್ತರರೂ ಕೂಡಿ ಒಳ್ಳೇ ಆನಂದದಿಂದ ನೆರವೇರಿಸಿದರು. ಆ ಕಾಲಕ್ಕೆ ಶಾಲಾವಿದ್ಯಾರ್ಥಿಗಳು ಸುಸ್ವರದೊಡನೆ ಚಕ್ರವರ್ತಿನಿಯವರಿಗೆ ಜಯವಿರಲೆಂಬ ರ್ಥದ ಪದ್ಯಗಳನ್ನು ಹಾಡಿದರು. ಇದು ರಾಜನಿಷ್ಠೆಯ ಪ್ರದರ್ಶನವು, ಸ್ತುತ್ಯವಾದದ್ದು.

೩

ತೇವರಮರಳ್ಳಿಯ ಸಾಲಿಯ ಅಧ್ಯಾಪಕರು ಗರಡೀ ಮನೆಯಲ್ಲಿದ್ದ ಮಲಕಂಬವನ್ನು ಇಸುಕೊಂಡು ತಮ್ಮ ಹುಡುಗರಿಗೆ ಕಲಿಸುತ್ತಿರಲು, ಊರ ಸಭ್ಯ ಗೃಹಸ್ಥರಿಗೆ ಈ ವಿಷಯದ ರುಚಿ ಹತ್ತಿದ್ದರಿಂದ ಅವರು ಹಾರಿಝುಂಟಲ್‌ಬಾರ ಮುಂತಾದ ಕೆಲವು ತಾಲೀಮಿನ ಸಾಮಾನುಗಳನ್ನು, ಸಾಲಿಯ ಉಪಯೋಗಕ್ಕಾಗಿ ತರಿಸಿಕೊಟ್ಟರು ಇದು ಊರವರಿಗೆ ಭೂಷಣವು ಮಾಸ್ತರನ ಉದ್ಯೋಗವು ಅನುಕರಣೀಯವಾದದ್ದು.

II

(೧೧೫ನೇ ಪುಟದಿಂದ ಮುಂದೆ ಸಾಗಿದ್ದು)

ಮತ್ತು ಅಂಕಗಣಿತದಲ್ಲಿ ಬರುವ ಕೃತಿಗಳನ್ನು ಸೂಕ್ಷ್ಮ ದೃಷ್ಟಿಯಿಂದ ವಿಚಾರಿಸಲು ಮುಖ್ಯವಾಗಿ ಎರಡೇ ಕೃತಿಗಳುಂಟೆಂದು ನಮಗೆ ಗೊತ್ತಾಗುತ್ತದೆ ಅವು ಯಾವವೆಂದರೆ:—

ಕಳಿಸಿದರು. ಅದರಂತೆ ರಾ· ಸಾ ರವರು ಸಾಲಿಯಲ್ಲಿ ಸಭೆಗೂಡಿಸಿ ಊರವರಿಂದ ಬಂದ ಚಂದಾ ಹಣದಿಂದ ಮತ್ತೆ ಕೆಲವು ಖಣಗಳನ್ನು ಕೊಂಡು ವಿದ್ಯಾರ್ಥಿನಿಯರಿಗೆ ಇನಾಮು ಕೊಟ್ಟರು. ಇದು ಮುಲಕೀ ಆಮಲದಾರರಿಗೆ ಭೂಷಣಾವಹವದ್ದು.

೨

ಕೋಳಿವಾಡ ಸಾಲಿಯಲ್ಲಿ ಶ್ರೀಮಚ್ಚಕ್ರವರ್ತಿನಿಯವರ ಜನ್ಮತಿಥಿಯ ಸಮಾರಂಭವನ್ನು ಊರ ಗ್ರಾಮಸ್ತರೂ ಇತರ ಸಭ್ಯಗ್ರಹಸ್ಥರೂ, ಮಾಸ್ತರರೂ ಕೂಡಿ ಒಳ್ಳೇ ಆನಂದದಿಂದ ನೆರವೇರಿಸಿದರು. ಆ ಕಾಲಕ್ಕೆ ಶಾಲಾವಿದ್ಯಾರ್ಥಿಗಳು ಸುಸ್ವರದೊಡನೆ ಚಕ್ರವರ್ತಿನಿಯವರಿಗೆ ಜಯವಿರಲೆಂಬರ್ಥದ ಪದ್ಯಗಳನ್ನು ಹಾಡಿದರು. ಇದು ರಾಜನಿಷ್ಠೆಯ ಪ್ರದರ್ಶನವು, ಸ್ತುತ್ಯವಾದದ್ದು.

೩

ತೇವರಮರಳ್ಳಿಯ ಸಾಲಿಯ ಅಧ್ಯಾಪಕರು ಗರಡೀಮನೆಯಲ್ಲಿದ್ದ ಮಲಕಂಬವನ್ನು ಇಸುಕೊಂಡು ತಮ್ಮ ಹುಡುಗರಿಗೆ ಕಲಿಸುತ್ತಿರಲು, ಊರ ಸಭ್ಯ ಗೃಹಸ್ಥರಿಗೆ ಈ ವಿಷಯದ ರುಚಿ ಹತ್ತಿದ್ದರಿಂದ ಅವರು ಹಾರಿಝುಂಟಲ್‌ಬಾರ ಮುಂತಾದ ಕೆಲವು ತಾಲೀಮಿನ ಸಾಮಾನುಗಳನ್ನು, ಸಾಲಿಯ ಉಪಯೋಗಕ್ಕಾಗಿ ತರಿಸಿಕೊಟ್ಟರು ಇದು ಊರವರಿಗೆ ಭೂಷಣವು ಮಾಸ್ತರನ ಉದ್ಯೋಗವು ಅನುಕರಣೀಯವಾದದ್ದು.

II

(೧೧೫ನೇ ಪುಟದಿಂದ ಮುಂದೆ ಸಾಗಿದ್ದು)

ಮತ್ತು ಅಂಕಗಣಿತದಲ್ಲಿ ಬರುವ ಕೃತಿಗಳನ್ನು ಸೂಕ್ಷ್ಮದೃಷ್ಟಿಯಿಂದ ವಿಚಾರಿಸಲು ಮುಖ್ಯವಾಗಿ ಎರಡೇ ಕೃತಿಗಳುಂಟೆಂದು ನಮಗೆ ಗೊತ್ತಾಗುತ್ತದೆ ಅವು ಯಾವವೆಂದರೆ:—

(೧) ಕೊಟ್ಟ ಪರಿಮಾಣಗಳ ಬೆಲೆಯನ್ನು ಅಪರಿಮಾಣಗಳ ಸಂಬಂಧದಿಂದ ಬೆಳಿಸುವದು.

(೨) ಮತ್ತು ಕಡಿಮೆ ಮಾಡುವದು.

ಯಾವದೊಂದು ಪರಿಮಾಣದ ಬೆಲೆಯು (೧) ಅಪರಿಮಾಣದಲ್ಲಿ ಅದೇ ಜಾತಿಯ ಬೇರೆ ಪರಿಮಾಣಗಳನ್ನು ಕೂಡಿಸುವದರಿಂದ ಅಥವಾ (೨) ಅಪರಿಮಾಣದ ಹೇಳಿದ ಮಡಿ ಮಾಡುವದರಿಂದ ಇಲ್ಲವೆ (೩) ಅಪರಿಮಾಣವನ್ನು ಹಲವು ಸಾರೆ ಇಟ್ಟು ಗುಣಿಸುವದರಿಂದ, ಬೆಳೆಯುತ್ತದೆ. ಇವುಗಳಿಗೆ ಕ್ರಮದಿಂದ ಬೇರೀಜ, ಗುಣಾಕಾರ, ಘಾತಗಳೆಂಬ ಹೆಸರು; ಇದರಂತೆ ಯಾವದೊಂದು ಪರಿಮಾಣದ ಬೆಲೆಯನ್ನು ಕಡಿಮೆ ಮಾಡುವ ಕೃತಿಗಳಿಗೆ, ವಜಾಬಾಕಿ, ಭಾಗಾಕಾರ, ಮೂಲಗಳೆಂಬ ಹೆಸರುಗಳುಂಟು. ಇವೇ ಅಂಕಗಣಿತದಲ್ಲಿ ಬರುವ ಮುಖ್ಯವಾದ ಆರುಕೃತಿಗಳು.

ಇವುಗಳ ವಿವೇಚನಕ್ಕಿಂತ ಮೊದಲು ಅಂಕೆ, ಸಂಖ್ಯಾಲೇಖನ ಸಂಖ್ಯಾವಾಚನಗಳ ಸಂಬಂಧದಿಂದ ವಿಚಾರ ಮಾಡುವದು ಯೋಗ್ಯವಾದದ್ದು.

ಪರಿಮೆ :—ಯಾವತ್ತು ಪದಾರ್ಥಗಳು ಪೂರ್ಣವಾಗಿ ಅಳೆಯಲಿಕ್ಕೆ ಬರುತ್ತವೆ. ಪದಾರ್ಥಗಳ ಈ ಧರ್ಮಕ್ಕೆ ಪರಿಮೇಯತ್ವ ಅನ್ನುತ್ತಾರೆ. ಒಂದು ಕಟ್ಟಿಗೆಯ ತುಂಡು ನಾಲ್ಕು ಮೊಳ ಉದ್ದವದೆ ಎಂಬಮಾತಿನಿಂದ ಆ ಕಟ್ಟಿಗೆಯಲ್ಲಿ ಸಂಪೂರ್ಣವಾಗಿ ಅಳೆಯಿಸಿಕೊಳ್ಳುವ ಗುಣ ಉಂಟೆಂದು ವ್ಯಕ್ತವಾಗುತ್ತದೆ. ಈ ಗುಣಕ್ಕೆ ಪರಿಮೇಯತ್ವ ಅನ್ನುತ್ತಾರೆ. ಇದರಂತೆ ತೂಕವನ್ನು ತಿಳಕೊಳ್ಳಬೇಕು. ಇದರಿಂದ ಅಳೆಯಲಿಕ್ಕೆ ಬರುವ ಪದಾರ್ಥಗಳು ಪರಿಮೇಯಗಳು.

ಅಂಕೆ :—ಪರಿಮೇಯಗಳ ಅಳತೆಯನ್ನು ಬರೆದು ತೋರಿಸಲಿಕ್ಕೆ ಕಲ್ಪಿಸಿದ ಗುರ್ತುಗಳಿಗೆ ಅಂಕೆಗಳೆನ್ನುತ್ತಾರೆ.

ನಮ್ಮ ಪೂರ್ವಜರು ಹತ್ತು ಗುರ್ತುಗಳನ್ನು ಕಲ್ಪಿಸಿದರು. ಬೇಕಾದಷ್ಟು ಗುರ್ತುಗಳನ್ನು ಕಲ್ಪಿಸಿ ಪರಿಮೇಯ

ಗಳ ಅಳತೆಯನ್ನು ಬರೆದು ತೋರಿಸಬಹುದು. ಆದರೆ ಸೌಲಭ್ಯ ಪ್ರಯೋಜನಗಳು ಹೆಚ್ಚಾಗಬೇಕಾದರೆ ಎಷ್ಟು ಗುರ್ತುಗಳು ಬೇಕಾಗುವವೆಂಬುದು ಸಂಖ್ಯಾ ಲೇಖನ ಪದ್ಧತಿಯಿಂದ ತಿಳಿಯುತ್ತದೆ. ಅಲ್ಲಿ ಈ ಬಗ್ಗೆ ವಿಶೇಷ ವಿಚಾರ ಮಾಡಲ್ಪಟ್ಟಿದೆ.

ಕನ್ನಡ	ತೆಲಗು	ಸಂಸ್ಕೃತ	ಮರಾಠಿ	ಇಂಗ್ಲಿಷ	ರೋಮನ್
೧	౧	१	१	1	I
೨	౨	२	२	2	II
೩	౩	३	३	3	III
೪	౪	४	४	4	IV
೫	౫	५	५	5	V
೬	౬	६	६	6	VI
೭	౭	७	७	7	VII
೮	౮	८	८	8	VIII
೯	౯	९	९	9	IX
೦	౦	०	०	0	X

ಮೇಲಿನ ಕೋಷ್ಟಕವನ್ನು ನೋಡಲು ಬೇರೆ ಬೇರೆ ಜನಾಂಗದವರು ಅಕ್ಷರಗಳಿಗೆ ಬೇರೆಬೇರೆ ಗುರ್ತುಗಳನ್ನು ಕಲ್ಪಿಸಿದಂತೆ ಅಂಕೆಗಳಿಗಾದರೂ ಬೇರೆಬೇರೆ ಗುರ್ತುಗಳನ್ನು ಕಲ್ಪಿಸಿರುತ್ತಾರೆ. ರೋಮನ್ನರು ಕೆಲವು ಅಕ್ಷರಗಳನ್ನೇ ಅಂಕೆಗಳ ಸ್ಥಳದಲ್ಲಿ ಉಪಯೋಗಿಸುತ್ತಾರೆ. ಚೀನೀ ಜನರು ಒಂದು ಪ್ರಕಾರದ ಚಿತ್ರಗಳನ್ನೂ ಗೆರೆಗಳನ್ನೂ ಉಪಯೋಗಿಸುತ್ತಿದ್ದರು. ಸಂಸ್ಕೃತ ಗುರ್ತುಗಳನ್ನು ಮರಾಠಿ ಗುರ್ತುಗಳು ಹೋಲುತ್ತವೆ. ಅದರಂತೆ ಕನ್ನಡ ಗುರ್ತುಗಳು ತೆಲಗು ಗುರ್ತುಗಳನ್ನು ಹೋಲುತ್ತವೆ. ಕನ್ನಡ ಇಂಗ್ಲಿಷಗಳ ಕೆಲವು ಗುರ್ತುಗಳು ಸಂಸ್ಕೃತ ಗುರ್ತುಗಳನ್ನು ಹೋಲುತ್ತವೆ. ಪಾರ್ಸಿ ಚೀನೀ ಗುರ್ತುಗಳು ತೀರ ಭಿನ್ನವಾಗಿರುತ್ತವೆ.

ಸಂಖ್ಯೆ—ಪರಿಮೇಯಗಳ ಅಳತೆಗೆ ಅಥವಾ ಎಕ್ಕಂಗಳ ಗುಂಪಿಗೆ ಸಂಖ್ಯೆ ಅನ್ನುತ್ತಾರೆ. ಈ ಕಟ್ಟಗೆಯು ೪೦೦ ಫೂಟು, ೬ ಇಂಚು ಎತ್ತರವದೆ. ಇಲ್ಲಿ ೪೦೦ ಫೂಟು ೬ ಇಂಚು ಇದು ಒಂದು ಸಂಖ್ಯೆಯು.

ಎಕ್ಕಂ—ಪರಿಮೇಯಗಳನ್ನು ಅಳೆಯಲಿಕ್ಕೆ ಗೊತ್ತುಮಾಡಿದ ಮೊಟ್ಟಗೆ ಎಕ್ಕಂ ಅನ್ನುತ್ತಾರೆ.

ಶುದ್ಧಸಂಖ್ಯೆ—ಪರಿಮಾಣದ ಹೆಸರಿಲ್ಲದ ಸಂಖ್ಯೆಗೆ ಶುದ್ಧ ಸಂಖ್ಯೆ ಅನ್ನುತ್ತಾರೆ.

ವಿದ್ಧಸಂಖ್ಯೆ—ಪರಿಮಾಣದ ಹೆಸರುಳ್ಳ ಸಂಖ್ಯೆಗೆ ವಿದ್ಧ

ಉದಾ—ಶುದ್ಧಸಂಖ್ಯೆ ೫, ೭; ವಿದ್ಧಸಂಖ್ಯೆ—೫ ರು ೬ ಆ.

ಸಂಖ್ಯಾಲೇಖನಪದ್ಧತಿ—ಸ್ವಲ್ಪ ಗುರ್ತುಗಳನ್ನು ಕಲ್ಪಿಸಿ ಅವುಗಳ ಸಹಾಯದಿಂದ ಬೇಕಾದ ಸಂಖ್ಯೆಯನ್ನು ಬರೆಯಲಿಕ್ಕೆ ಗೊತ್ತುಮಾಡಿದ ರೀತಿಗೆ ಸಂಖ್ಯಾಲೇಖನ ಪದ್ಧತಿ ಅನ್ನುತ್ತಾರೆ.

ಹತ್ತು ಗುರ್ತುಗಳಲ್ಲಿ ಮೊದಲಿನ ಒಂಭತ್ತು ಗುರ್ತುಗಳಿಂದ ಒಂಭತ್ತು ಎಕ್ಕಂಗಳನ್ನು ಬರೆದುತೋರಿಸಲಿಕ್ಕೆ ಬರುತ್ತದೆ. ೧೦ ಎಕ್ಕಂಗಳನ್ನು ಬರೆಯಬೇಕಾದರೆ ೧ ರ ಚಿನ್ಹವನ್ನು ಬರೆದು ಅದರ ಮುಂದೆ ಒಂದು ಶೂನ್ಯವನ್ನು ಬರೆಯುತ್ತಾರೆ. ೧೨ ಎಕ್ಕಂಗಳನ್ನು ಬರೆಯಬೇಕಾದರೆ, ಒಂದರ ಗುರ್ತನ್ನು ಬರೆದು ಅದರ ಮುಂದೆ ಎರಡರ ಗುರ್ತನ್ನು ಬರೆಯುತ್ತಾರೆ. ಇದರಂತೆ ಆ ಹತ್ತು ಗುರ್ತುಗಳ ಸಂಯೋಗದಿಂದ ಬೇಕಾದ ಸಂಖ್ಯೆಯನ್ನು ಬರೆಯಲಿಕ್ಕೆ ಬರುತ್ತದೆ.

ಈ ರೀತಿಯಿಂದ ೯ ರ ಮುಂದಿನ ಸಂಖ್ಯೆಯನ್ನು ಬರೆಯುವಾಗ ಒಂದು ಅಂಕೆಯ ಮುಂದೆ ಒಂದು ಅಂಕೆಯನ್ನು ಬರೆದರೆ ಮೊದಲು ಬರೆದ ಅಂಕೆಯ ಬೆಲೆಯು ಅದರ ಮೂಲಬೆಲೆಯ ೧೦ ಪಟ್ಟು ತೋರಿಸುತ್ತದೆಂಬ ಮಾತು ವ್ಯಕ್ತವಾಗುತ್ತದೆ. ಅಂದರೆ ೧೦ ಇಲ್ಲಿ ಮೊದಲು ಬರೆದ ೧ ಇದರ

ಗಳ ಅಳತೆಯನ್ನು ಬರೆದು ತೋರಿಸಬಹುದು. ಆದರೆ ಸೌಲಭ್ಯ ಪ್ರಯೋಜನಗಳು ಹೆಚ್ಚಾಗಬೇಕಾದರೆ ಎಷ್ಟು ಗುರ್ತುಗಳು ಬೇಕಾಗುವವೆಂಬುದು ಸಂಖ್ಯಾ ಲೇಖನ ಪದ್ಧತಿಯಿಂದ ತಿಳಿಯುತ್ತದೆ. ಅಲ್ಲಿ ಈ ಬಗ್ಗೆ ವಿಶೇಷ ವಿಚಾರ ಮಾಡಲ್ಪಟ್ಟಿದೆ.

ಕನ್ನಡ	ತೆಲಗು	ಸಂಸ್ಕೃತ	ಮರಾಠಿ	ಇಂಗ್ಲಿಷ	ರೋಮನ್
೧	౧	१	१	1	I
೨	౨	२	२	2	II
೩	౩	३	३	3	III
೪	౪	४	४	4	IV
೫	౫	५	५	5	V
೬	౬	६	६	6	VI
೭	౭	७	७	7	VII
೮	౮	८	८	8	VIII
೯	౯	९	९	9	IX
೦	౦	०	०	0	X

ಮೇಲಿನ ಕೋಷ್ಟಕವನ್ನು ನೋಡಲು ಬೇರೆ ಬೇರೆ ಜನಾಂಗದವರು ಅಕ್ಷರಗಳಿಗೆ ಬೇರೆಬೇರೆ ಗುರ್ತುಗಳನ್ನು ಕಲ್ಪಿಸಿದಂತೆ ಅಂಕೆಗಳಿಗಾದರೂ ಬೇರೆಬೇರೆ ಗುರ್ತುಗಳನ್ನು ಕಲ್ಪಿಸಿರುತ್ತಾರೆ. ರೋಮನ್ನರು ಕೆಲವು ಅಕ್ಷರಗಳನ್ನೇ ಅಂಕೆಗಳ ಸ್ಥಳದಲ್ಲಿ ಉಪಯೋಗಿಸುತ್ತಾರೆ. ಚೀನೀ ಜನರು ಒಂದು ಪ್ರಕಾರದ ಚಿತ್ರಗಳನ್ನೂ ಗೆರೆಗಳನ್ನೂ ಉಪಯೋಗಿಸುತ್ತಿದ್ದರು. ಸಂಸ್ಕೃತ ಗುರ್ತುಗಳನ್ನು ಮರಾಠಿ ಗುರ್ತುಗಳು ಹೋಲುತ್ತವೆ. ಅದರಂತೆ ಕನ್ನಡ ಗುರ್ತುಗಳು ತೆಲಗು ಗುರ್ತುಗಳನ್ನು ಹೋಲುತ್ತವೆ. ಕನ್ನಡ ಇಂಗ್ಲಿಷಗಳ ಕೆಲವು ಗುರ್ತುಗಳು ಸಂಸ್ಕೃತ ಗುರ್ತುಗಳನ್ನು ಹೋಲುತ್ತವೆ. ಪಾರ್ಸಿ ಚೀನೀ ಗುರ್ತುಗಳು ತೀರ ಭಿನ್ನವಾಗಿರುತ್ತವೆ.

ಸಂಖ್ಯೆ—ಪರಿಮೇಯಗಳ ಅಳತೆಗೆ ಅಥವಾ ಎಕ್ಕಂಗಳ ಗುಂಪಿಗೆ ಸಂಖ್ಯೆ ಅನ್ನುತ್ತಾರೆ. ಈ ಕಟ್ಟಿಗೆಯು ೪೦೦ ಫೂಟು, ೬ ಇಂಚು ಎತ್ತರವದೆ. ಇಲ್ಲಿ ೪೦೦ ಫೂಟು ೬ ಇಂಚು ಇದು ಒಂದು ಸಂಖ್ಯೆಯು.

ಎಕ್ಕಂ—ಪರಿಮೇಯಗಳನ್ನು ಅಳೆಯಲಿಕ್ಕೆ ಗೊತ್ತುಮಾಡಿದ ಮೆಟ್ಟಿಗೆ ಎಕ್ಕಂ ಅನ್ನುತ್ತಾರೆ.

ಶುದ್ಧಸಂಖ್ಯೆ—ಪರಿಮಾಣದ ಹೆಸರಿಲ್ಲದ ಸಂಖ್ಯೆಗೆ ಶುದ್ಧ ಸಂಖ್ಯೆ ಅನ್ನುತ್ತಾರೆ.

ವಿದ್ಧಸಂಖ್ಯೆ—ಪರಿಮಾಣದ ಹೆಸರುಳ್ಳ ಸಂಖ್ಯೆಗೆ ವಿದ್ಧ

ಉದಾ—ಶುದ್ಧಸಂಖ್ಯೆ ೫, ೭; ವಿದ್ಧಸಂಖ್ಯೆ—೫ ರು ೬ ಆ.

ಸಂಖ್ಯಾಲೇಖನಪದ್ಧತಿ—ಸ್ವಲ್ಪ ಗುರ್ತುಗಳನ್ನು ಕಲ್ಪಿಸಿ ಅವುಗಳ ಸಹಾಯದಿಂದ ಬೇಕಾದ ಸಂಖ್ಯೆಯನ್ನು ಬರೆಯಲಿಕ್ಕೆ ಗೊತ್ತುಮಾಡಿದ ರೀತಿಗೆ ಸಂಖ್ಯಾಲೇಖನ ಪದ್ಧತಿ ಅನ್ನುತ್ತಾರೆ.

ಹತ್ತು ಗುರ್ತುಗಳಲ್ಲಿ ಮೊದಲಿನ ಒಂಭತ್ತು ಗುರ್ತುಗಳಿಂದ ಒಂಭತ್ತು ಎಕ್ಕಂಗಳನ್ನು ಬರೆದುತೋರಿಸಲಿಕ್ಕೆ ಬರುತ್ತದೆ. ೧೦ ಎಕ್ಕಂಗಳನ್ನು ಬರೆಯಬೇಕಾದರೆ ೧ ರ ಚಿನ್ಹವನ್ನು ಬರೆದು ಅದರ ಮುಂದೆ ಒಂದು ಶೂನ್ಯವನ್ನು ಬರೆಯುತ್ತಾರೆ. ೧೨ ಎಕ್ಕಂಗಳನ್ನು ಬರೆಯಬೇಕಾದರೆ, ಒಂದರ ಗುರ್ತನ್ನು ಬರೆದು ಅದರ ಮುಂದೆ ಎರಡರ ಗುರ್ತನ್ನು ಬರೆಯುತ್ತಾರೆ. ಇದರಂತೆ ಆ ಹತ್ತು ಗುರ್ತುಗಳ ಸಂಯೋಗದಿಂದ ಬೇಕಾದ ಸಂಖ್ಯೆಯನ್ನು ಬರೆಯಲಿಕ್ಕೆ ಬರುತ್ತದೆ.

ಈ ರೀತಿಯಿಂದ ೯ ರ ಮುಂದಿನ ಸಂಖ್ಯೆಯನ್ನು ಬರೆಯುವಾಗ ಒಂದು ಅಂಕೆಯ ಮುಂದೆ ಒಂದು ಅಂಕೆಯನ್ನು ಬರೆದರೆ ಮೊದಲು ಬರೆದ ಅಂಕೆಯ ಬೆಲೆಯು ಅದರ ಮೂಲಬೆಲೆಯ ೧೦ ಪಟ್ಟು ತೋರಿಸುತ್ತದೆಂಬ ಮಾತು ವ್ಯಕ್ತವಾಗುತ್ತದೆ. ಅಂದರೆ ೧೦ ಇಲ್ಲಿ ಮೊದಲು ಬರೆದ ೧ ಇದರ

ಬೆಲೆ ೧ ರ ಹತ್ತು ಪಟ್ಟು ೧೦ ಎಂದು ತಿಳಿಯಬೇಕು. ಇದರಂತೆ (೧೫) ಬರೆಯುವಾಗ ಒಂದರ ಮುಂದೆ ೫ ಬರೆಯುತ್ತಾರ. ಇಲ್ಲಿ ೧ ಇದು ೧೦ ರ ಪ್ರತಿಯಾಗಿ ಬರೆಯಲ್ಪಟ್ಟದೆ. ಯಾಕೆಂದರೆ—ಒಂದರ ೧೦ ಪಟ್ಟು ೧೦ ಮತ್ತು ೫ ಕೂಡಿ ೧೫ ಆಗಿರುತ್ತದೆ. ಇದರಂತೆ ಒಂದು ಅಂಕೆಯ ಮುಂದೆ ಒಂದು ಅಂಕೆಯನ್ನು ಬರೆದು ಅದರ ಮುಂದೆ ಬೇರೊಂದು ಅಂಕೆಯನ್ನು ಬರೆದರೆ ಮೊದಲು ಬರೆದ ಅಂಕೆಯು ತನ್ನ ೧೦೦ ಪಟ್ಟನ್ನು ೨ ನೇ ಅಂಕೆಯು ತನ್ನ ಹತ್ತು ಪಟ್ಟನ್ನು ೩ ನೇ ಅಂಕೆಯು ತನ್ನ ೧ ಪಟ್ಟನ್ನು ತೋರಿಸುತ್ತದೆ. ೨೩೪ ಇಲ್ಲಿ ಮೊದಲು ಬರೆದ ೨ ಇದರ ೧೦೦ ಪಟ್ಟು ೨೦೦. ೨ ನೇ ಸಾರೆ ಬರೆದ ೩ ಇದರ ೧೦ ಪಟ್ಟು ೩೦ ೩ ನೇ ಸಾರೆ ಬರೆದ ೪ ರ ೧ ಪಟ್ಟು ೪ ಕೂಡಿ ೨೩೪ ಆಗಿರುತ್ತದೆ. ಇದೇ ಪ್ರಕಾರ ಒಂದರಮುಂದೆ ಒಂದು ಅನೇಕ ಅಂಕೆಗಳನ್ನು ಬರೆದು ಬಲಗಡೆಯಿಂದ ಪ್ರತಿಯೊಂದು ಅಂಕೆಯು ಏನು ತೋರಿಸುತ್ತದೆಂಬದನ್ನು ವಿಚಾರ ಮಾಡಲು ಮೊದಲನೇದು ತನ್ನ ೧ ಪಟ್ಟು ೨ ನೇದು ತನ್ನ ೧೦ ಪಟ್ಟು ೩ ನೇದು ತನ್ನ ೧೦೦ ಪಟ್ಟು ೪ ನೇದು ತನ್ನ ೧೦೦೦ ಪಟ್ಟು ೫ ನೇದು ತನ್ನ ೧೦೦೦೦ ಪಟ್ಟು ಇರುವವೆಂದು ಗೊತ್ತಾಗುತ್ತದೆ. ಇದರಿಂದ ಯಾವದೊಂದು ಸಂಖ್ಯೆಯಲ್ಲಿ ಬಲಗಡೆಯ ೧ ನೇ ಅಂಕೆಗೆ ಎಕ್ಕಂ ಎಂತಲೂ ೨ ನೇ ಅಂಕೆಗೆ ದಹಂ ಎಂತಲೂ ೩ ನೇ ಅಂಕೆಗೆ ಶತಂ ಎಂತಲೂ ಅನ್ನುವರು ವಾಡಿಕೆಯಾಗಿ ಇವೇ ಮುಂತಾದ ಹೆಸರುಗಳು ಬಿದ್ದಿರುತ್ತವೆ.

ಈ ವಿಚಾರದಿಂದ ಪ್ರತಿಒಂದು ಅಂಕೆಗೆ ಸ್ಥಾನ ಬೆ ಮತ್ತು ಸ್ವತಂತ್ರ ಬೆಲೆ ಹೀಗೆ ಎರಡು ಪ್ರಕಾರದ ಬೆಲೆಗ ರುತ್ತವೆಂತಲೂ ಮತ್ತು ಪ್ರತಿಒಂದು ಸ್ಥಾನ ತನ್ನ ಮುಂ ನ ಸ್ಥಾನದ ೧೦ ಪಟ್ಟು ಇರುತ್ತದೆಂತಲೂ ಸಿದ್ಧವಾಯಿತು.

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ॥
ಬಯಸುತ್ತಂ ಪ್ರತಿಮಾಸದಾದಿಯೊಳವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆ ಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಪವಶಿದ್ಧವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್ ॥

ಪುಸ್ತಕ ೩೬] ಅಕ್ಟೋಬರ ೧೯೦೦. [ಸಂಚಿಕೆ ೧೦.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣೆಯ ಸಂಬಂಧದ ವೃತ್ತಾಂತಗಳು.

ಎರಡನೇ ಪಂಚವಾರ್ಷಿಕ ರಿಪೋರ್ಟಿನಲ್ಲಿ ಮಿ॥ ಕಾಟನ ಸಾಹೇಬರು ತೋರಿಸಿದ ದೋಷಗಳು ಹ್ಯಾಗಂದರೆ—

(೧) ವರಿಷ್ಠ ಶಿಕ್ಷಣಕ್ಕೆ ಪ್ರಮಾಣಕ್ಕಿಂತ ಖರ್ಚು ಹೆಚ್ಚಾಗುತ್ತದೆ.

(೨) ಕನಿಷ್ಠ ಶಿಕ್ಷಣಕ್ಕೆ ಖರ್ಚು ಕಡಿಮೆಯಾಗುತ್ತದೆ.

(೩) ತಪಾಸಣಿ ಮಾಡುವವರ ಸಂಬಂಧದಿಂದ ತಕ್ಕ ವ್ಯವಸ್ಥೆಯು ಆಗತಕ್ಕದ್ದಿರುತ್ತದೆ.

(೪) ಸ್ಕಾಲರಶಿಪ್ಪುಗಳ ಸಂಬಂಧದಿಂದಲೂ ತಕ್ಕ ವ್ಯವಸ್ಥೆಯು ಆಗತಕ್ಕದ್ದಿರುತ್ತದೆ.

ಈ ಆಕ್ಷೇಪಗಳನ್ನು ಹಿಂದುಸ್ಥಾನ ಸರಕಾರದವರು ಆಯಾ ಸ್ಥಾನಿಕ ಸರಕಾರದವರ ಕಡೆಗೆ ಕಳುಹಿಸಿದ್ದರು. ಆ ಪ್ರಕಾರ ಮುಂಬೈ ಇಲಾಖೆಯ ಡೈರೆಕ್ಟರರಾದ ಮಿ॥ ಜಾಯಿಲ್ಸ ಧೊರೆಗಳು ತಮ್ಮ ಕಡೆಗೆ ಬಂದ ಈ ಆಕ್ಷೇಪಣೆಗಳಿಗೆ ಸರಿಯಾದ ಉತ್ತರ ಕೊಟ್ಟದ್ದಲ್ಲದೆ ಮುಂಬೈ ಇಲಾಖೆಗೆ ಈ ಆಕ್ಷೇಪಣೆಗಳು ಹತ್ತಲಾರವೆಂಬದನ್ನು ಸಪ್ರಮಾಣವಾಗಿ ತೋರಿಸಿರುತ್ತಾರೆ. ಇನ್ಸಪೇಕ್ಟರರ ಸಂಬಂಧದಿಂದ

ಪೌತ್ರ ಸುಧಾರಣೆಯಾಗುವದು ಅವಶ್ಯವಿದ್ದಾಗ್ಯೂ ಹಣದ ಕೊರತೆಯ ಮೂಲಕ ಸದ್ಯಕ್ಕೆ ಅನನುಕೂಲವಾಗಿರುತ್ತದೆಂದು ಅಭಿಪ್ರಾಯವನ್ನು ಕೊಟ್ಟಿರುತ್ತಾರೆ ಸದ್ಯಕ್ಕೆ ಡೆಪ್ಯೂಟಿ ಇನ್ಸಪೇಕ್ಟರರ ಆಫೀಸಿನ ಕೆಲಸವು ಬೆಳೆದದ್ದರಿಂದಲೂ ಕಾರಕೂನ ಜನರು ತಕ್ಕಷ್ಟು ಇಲ್ಲದಿರುವದರಿಂದಲೂ ಅವರಿಗೆ ಆಫೀಸ ಕೆಲಸದಲ್ಲಿಯೇ ವಿಶೇಷ ಕಾಲಕಳೆಯಬೇಕಾದ್ದರಿಂದ ತಪಾಸಣೀ ಕೆಲಸಕ್ಕೆ ಸರಿಯಾದ ಅವಕಾಶವು ದೊರೆಯುವದಿಲ್ಲೆಂತಲೂ ಲೋಕಲ್‌ಬೋರ್ಡಿನಿಂದ ಒಬ್ಬೊಬ್ಬ ಕಾರಕೂನನನ್ನು ಕೊಟ್ಟರೆ ಈ ಅಡಚಣೆಯು ದೂರಾಗುವಂತೆ ಇರುವದೆಂತಲೂ ತಿಳಿಸಿ ಪ್ರತಿಒಂದು ಜಿಲ್ಲೆಗೆ ಒಂದರಂತೆ ಎಲ್ಲ ಜಿಲ್ಲೆಗಳಿಗೂ ೨೦ ರೂಪಾಯಿ ಪಗಾರದ ಒಂದೊಂದು ಕಾರಕೂನೀ ಸ್ಥಳವನ್ನು ಕೊಡಬೇಕೆಂದೂ ಹೆಣ್ಣುಮಕ್ಕಳ ಸಾಲೆಗಳ ತಪಾಸಣೆಗಾಗಿ ೩೦೦ ರಿಂದ ೫೦೦ ರೂಪಾಯಿ ವರೆಗೆ ಪಗಾರದ ಮೇಲೆ ಮಧ್ಯಭಾಗ ದಕ್ಷಿಣಭಾಗಗಳಿಗಾಗಿ ಒಂದು ಮತ್ತು ಉತ್ತರಭಾಗ ಸಿಂಧಪ್ರಾಂತಗಳಿಗಾಗಿ ಒಂದು ಈ ಪ್ರಕಾರ ಎರಡು ಇನ್ಸಪೆಕ್ಟ್ರೆಸ್ಸುಗಳ ಸ್ಥಳಗಳನ್ನು ಹೊಸದಾಗಿ ನೇಮಕ ಮಾಡಬೇಕೆಂದೂ ಸಿಫಾರಸು ಮಾಡಿರುವರು. ಈ ಪ್ರಕಾರ ವ್ಯವಸ್ಥೆಯಾದರೆ ತಪಾಸಣೆ ಸಂಬಂಧದಿಂದ ಮೇಲೆ ಕಾಣಿಸಿದ ಆಕ್ಷೇಪವು ದೂರಾಗುವದೆಂದು ಬರೆದಿರುವರು.

ಸನ್ ೧೯೦೧ ನೇ ಇಸವಿಯ ಮಾರ್ಚ ತಿಂಗಳಲ್ಲಿ ಇಡೀ ಹಿಂದುಸ್ಥಾನದಲ್ಲೆಲ್ಲ ಜನರಲ್ ಖಾನೆಸುಮಾರಿ ಆಗತಕ್ಕದ್ದಿದ್ದು, ಆ ಬಗ್ಗೆ ಜಾತಿ, ಒಳಭೇದ ಮುಂತಾದವುಗಳನ್ನು ಸ್ಪಷ್ಟೀಕರಿಸುವದಕ್ಕಾಗಿ ಕೆಳಗೆ ಕೊಟ್ಟ ಮಾಹಿತಿಯನ್ನು ಕುರಿತು ಜಿಲ್ಲೆಜಿಲ್ಲೆಗೆ ಕಮಿಟಿಗಳನ್ನು ನೇಮಿಸಿ ವಿಚಾರ ನಡೆದದೆ ಆ ಸಂಬಂಧದಿಂದ ಸೂಚಿಸಿದ ಪ್ರಶ್ನಗಳು ಶಿಕ್ಷಕರಿಗೆ ಉಪಯೋಗದವಿದ್ದು ವಿಚಾರಾರ್ಹವಾಗಿರುವದರಿಂದ ಅವುಗಳನ್ನು ನಮ್ಮ ಪತ್ರಿಕದಲ್ಲಿ ಸಂಗ್ರಹಿಸಿರುತ್ತೇವೆ.

ನೃವಂಶ ವರ್ಣನೆಯ ಸಂಬಂಧದ ಪ್ರಶ್ನೆಗಳು.

ಸಾಮಾನ್ಯ ಪ್ರಶ್ನಾವಳಿ.

೧. ಉದ್ದಿಷ್ಟ ಜಾತಿಯ ಹೆಸರನ್ನೂ ತದ್ವಾಚಕ ಬೇರೆ ಹೆಸರುಗಳಿದ್ದರೆ ಅವುಗಳನ್ನೂ ಇಂಗ್ಲಿಷದಲ್ಲಿಯೂ ದೇಶೀ ಭಾಷೆಯಲ್ಲಿಯೂ ಬರೆಯಿರಿ. ಇವುಗಳಲ್ಲಿ ಯಾವದಾದರೂ ಪರಕೀಯವರಿಂದಲೇ ಉಪಯೋಗಿಸಲ್ಪಡುತ್ತಿದ್ದರೆ ಅದನ್ನು ವಿಶೇಷಿಸಿರಿ.

೨. ಈ ಜಾತಿಯಲ್ಲಿ ಬಾಹ್ಯಪತ್ನಿಕ ಒಳಜಾತಿಗಳೇನಾದರೂ ಇದ್ದರೆ ಅವುಗಳ ಹೆಸರುಗಳನ್ನು ಬರೆಯಿರಿ.

ಟೀಪು—ಯಾವ ಒಳಜಾತಿಯ ಕನ್ಯೆಯರನ್ನು ಆ ಒಳಜಾತಿಯ ಗಂಡಸರು ಮದುವೆಯಾಗಲಾರರೋ ಆ ಒಳಜಾತಿಯೇ ಬಾಹ್ಯಪತ್ನಿಕ ಒಳಜಾತಿಯು. ಬಾಹ್ಯಪತ್ನಿಕ ಒಳಜಾತಿಗೆ ಗೋತ್ರವೆಂತಲೂ ಬೆಡಗೆಂತಲೂ ಅನ್ನುವರು.

೩ ಈ ಜಾತಿಯಲ್ಲಿ ಅಂತರ್ಪತ್ನಿಕ ವರ್ಗಗಳಿದ್ದರೆ ಅವುಗಳನ್ನು ಬರೆಯಿರಿ. ೨ನೇ ಪ್ರಶ್ನದಲ್ಲಿ ಹೇಳಿದ ಗೋತ್ರಗಳು ಈ ವರ್ಗದಲ್ಲಿ ಸಮಾವಿಷ್ಟವಾದರೆ ಅವುಗಳನ್ನು ಪ್ರತ್ಯೇಕವಾಗಿ ಆಯಾ ವರ್ಗದಲ್ಲಿ ಕಾಣಿಸಿರಿ. ಈ ವರ್ಗಗಳಿಗೆ ವಿಶಿಷ್ಟ ಹೆಸರುಗಳಿದ್ದರೆ ಅವುಗಳನ್ನು ಇಂಗ್ಲಿಷದಲ್ಲಿಯೂ ದೇಶೀ ಭಾಷೆಯಲ್ಲಿಯೂ ಬರೆಯಿರಿ.

ಟೀಪು - ಯಾವ ವರ್ಗದ ಹೊರಗಿನ ಕನ್ಯೆಯರನ್ನು ಆ ವರ್ಗದ ಗಂಡಸರು ಮದುವೆಯಾಗಕೂಡದೋ ಆ ವರ್ಗಕ್ಕೆ ಅಂತರ್ಪತ್ನಿಕ ವರ್ಗವೆಂಬ ಹೆಸರು.

೪, ಈ ಜಾತಿಯವರ ಹೆಣ್ಣು ತೆಗೆದುಕೊಳ್ಳುವ ಸಂಬಂಧದ ಮರ್ಯಾದೆಗಳು ಅಂದರೆ ಯಾವ ಮರ್ಯಾದೆಗಳ ಒಳಗಾಗಲಿ ಯಾವ ಮರ್ಯಾದೆಗಳ ಹೊರಗಾಗಲಿ ವಿವಾಹವು ನಿಷೇಧಸಲ್ಪಟ್ಟಿರುವದೋ ಆ ಮರ್ಯಾದೆಗಳನ್ನು ಹೇಳಿರಿ: ಉದಾಹರಣಾರ್ಥವಾಗಿ ಪ್ರತಿಒಬ್ಬನು ತನ್ನ ಜಾತಿಯಲ್ಲಿಯೇ ಮದುವೆಯಾಗತಕ್ಕದ್ದು. ಆದರೆ ತನ್ನ ಗೋತ್ರದಲ್ಲಾಗಲಿ ಮತ್ತೂ ಕೆಲವು ನಿಯಮಿತ ಗೋತ್ರಗಳಲ್ಲಾಗಲಿ ಮದು

page No. 169 to 212
is missing